Registered No. M. [illegible]

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ — ವರುಷ ಒಂದಕ್ಕೆ ರೂ 1—4—0 ಟಪ್ಪಾಲು ಹಾಸಲು ಸೇರಿ ರೂ 2—1—0

ಪುಸ್ತಕ IX ಮಂಗಳೂರು ತಾ. 3ನೇ ಸಪ್ಟಂಬರ ಶುಕ್ರವಾರ 1915. ಸಂಚಿಕೆ 36

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು

ಸೇಶಿಂತಾನ್.

(ರಿಜಿಸ್ಟರ್ಡ)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೇಶಿಂತಾನದ ಸೇವನೆಯಿಂದುಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟದೆ

1 ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯನೋವು, ತಲೆತಿರುಗುವುದು, ಮುಂತಾದ [illegible] ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು

2 ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು [illegible] ಕೂಡತಕ್ಕವರಿಗೆ ಮಹಾಪ್ರಸಾದವಾಗಿರುವುದು

3 ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತ ಒಂದಲ್ಲಿ ತಿಂದನ್ನವು ಜೀರ್ಣವಾಗುವದಲ್ಲದೆ, ಕಾಲಪ್ರವೃತ್ತಿಯು ಕ್ರಮವಾಗಿ ಆಗುತ್ತದೆ [illegible]

4 ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು

5 ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ ಎಲ್ಲ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವವು

6. ಬೇಸಿಗೆ ಮತ್ತು ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುವು

7 ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು

ಆದುಕಾರಣ ಇಂತಹ ಗುಣಕಾರಿಯಾದ ಸೇಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ

45 ಮಾತ್ರೆಗಳ ಪೊಟ್ಟ 1ಕ್ಕೆ 0—2—0 200 ಮಾತ್ರೆಗಳ ಪೊಟ್ಟ 1ಕ್ಕೆ 0—[illegible]—0 80 ಮಾತ್ರೆಗಳ ಟಿನ್ 1ಕ್ಕೆ 0—4—0 550 ಮಾತ್ರೆಗಳ ಮರದಪೆಟ್ಟಿಗೆ 1ಕ್ಕೆ 1—0—0
95 „ „ „ 0—4—0 200 „ ಟಿನ್ „ 0—9—0 100 „ ಶೀಸೆ „ 0—4—6 1200 „ „ „ 2—0—0

1 ರೂಪಾಯಿಗೆ ಕಡಿಮೆಯಾಗಿ ವಿ ಪಿ ಮೂಲಕ ಕಳುಹಿಸಲ್ಪಡುವುದಿಲ್ಲವು ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

☞ ಭರತಖಂಡ, ಬರ್ಮ, ಮತ್ತು ಸಿಲೋನ್ ಈ ಪ್ರಾಂತ್ಯಗಳ ಎಲ್ಲಾ ಭಾಗದಲ್ಲೂ ಏಜಂಟರು ಬೇಕಾಗಿದೆ

ದಕ್ಷಿಣ ಕನ್ನಡ ಜಿಲ್ಲೆಯ ಏಜಂಟರು — ದಿ ಊಲನ್‌ಮಾರ್ಟ, ಮಂಗಳೂರು

ಸೋಲ್ ಏಜಂಟ್ಸ್ — ಸೇಶಿಂತಾನ್ ಡಿಪೋ,
ಪ್ರಿನ್ಸೆಸ್ ಸ್ಟ್ರೀಟ್ ಬೊಂಬಾಯಿ ನಂ 2

FREE! FREE!!

S.T.A. Perpetual Calendar

Beautiful and Artistic
As 10 each Postage Extra
HOW TO GET IT FREE?
Apply with Postage.

Eucalyptus Oil
(PURE & BEST
As. 4 per 1 oz bottle
Packing & postage Extra.
M. S. RAO & Co.,
Bangalore City.

ಯಂ. ಯಸ್. ರಾವ್ ಕಂಪೆನಿ.,

ಬುಕ್‌ಸೆಲರ್ಸ್, ಅವಿನ್ಯೂರೋಡ್, ಬೆಂಗಳೂರು ಸಿಟಿ.

ಕನ್ನಡ ಹೊಸ ಪುಸ್ತಕಗಳು — ಕಾದಂಬರಿಗಳು

ಸಂಗೀತಸಮಯಸಾರ, ಹೊಸ ಪುಸ್ತಕ	1—4
ಪ್ರಬಂಧ ಮುಕ್ತಾವಳಿ, (ಕನ್ನಡ ವಾಕ್ಯರಚನೆಯ ವಿಧಾನವನ್ನು ಹೊಸ ಮತ್ತು ಸುಲಭವಾದ ರೀತಿಯಲ್ಲಿ ವಿವರಿಸಿದೆ)	0 12
ಅರೇಬಿಯನ್ ನೈಟ್ಸ್, ಹೊಸ ಮುದ್ರಣ	2—2
ಮುದ್ರಾಮಂಜೂಷ „	1-10
ಭಕ್ತವಿಜಯ, (ವಿಷ್ಣುಭಕ್ತರ ಕಥೆಗಳು) ಹೊಸ ಮುದ್ರಣ.	3—2
ಮೈತ್ರೇಯಿ, (ಅನೇಕ ರಹಸ್ಯಗಳು ವಿವರಿಸಲ್ಪಟ್ಟಿವೆ)	0—5
[illegible] ಹೊಸ ಮುದ್ರಣ.	[illegible]
ಸ್ತ್ರೀಧರ್ಮನೀತಿ, (ಸ್ತ್ರೀಯರಿಗೆ ಅತ್ಯಾವಶ್ಯಕವಾದದ್ದು)	0—9
ದುರ್ಗಾದಾಸ (ಬಂಗಾಳಿ ನಾವಿಲ್)	0-12
ಪ್ರಫುಲ್ಲ, „ (ಪತ್ತೆದಾರಿ ಕಥೆ)	0 12
ವಿಷವಿವಾಹ, ಹೊಸ ಮುದ್ರಣ	0—4
ಶೋಧನೆ, „	0—12
ಚಂದ್ರಪ್ರಭಾ, ಹೊಸ ಕಾದಂಬರಿ	0-12
ಚಂಪಕ	0—4
ತ್ರಿಂಶೋಕ ವಿಜಯಂ, ಗೋಲ್ಡ್‌ಸ್ಮಿತ್ ಕವಿಯ ವಿಕಾರ್ ಆಫ್ ವೇಕ್‌ಫೀಲ್ಡ್ ವೃತ್ತಾಂತ	

ಯಂ ಸುಬ್ಬರಾವ್, ಶಂಕರಪುರಂ, ಬೆಂಗಳೂರು ಸಿಟಿ—ಈ ವಿಳಾಸವನ್ನು ಮೇಲ್ಕಂಡಂತೆ ಬದಲಾಯಿಸಿದೆ

ನಮ್ಮಲ್ಲಿ ಎಲ್ಲಾ ವಿಧವಾದ ಕನ್ನಡ ಕಥೆಗಳೂ, ಬಿ ವೆಂಕಟಾಚಾರ್ಯರ ನಾವಿಲ್‌ಗಳೂ, ಗವರ್ನಮೆಂಟ್ ಸ್ಕೂಲು ಪುಸ್ತಕಗಳೂ ದೊರೆಯುತ್ತವೆ. ಪುಸ್ತಕದ ಪಟ್ಟಿ ಪ್ರಿಂಟಾಗುತ್ತಿದೆ.

ಯಂ. ಯಸ್. ರಾವ್ ಎಂಡ್ ಕೋ.
[illegible]

ನೇಟಿವ್ ಡಾಕ್ಟರ್ಸ್ ಮೂಲ್ಕಿ ಗಣಪಯ್ಯ ಎಂಡ್ ಸನ್ಸ್‌ರವರ

ಔಷಧಗಳು.

ಮಹಾಮದನ ಕಾಮೇಶ್ವರೀ ಲೇಹ್ಯ:—ಬಹಳ ಶ್ರಮಪಟ್ಟು ಕೆಲಸ ಮಾಡುವವರೂ, ಲೇಖಕರೂ, ಮತ್ತು ಇಂದ್ರಿಯ ದೌರ್ಬಲ್ಯ, ಅಜೀರ್ಣ, ಎದೆನೋವು, ಶರೀರಗಳ ಘಳಿತದಿಂದಾದ ನಿಶ್ಶಕ್ತಿ ಮೊದಲಾದ ಪ್ರಕೃತಿಯುಳ್ಳವರೂ ಇದನ್ನು ಸೇವಿಸಿದ್ದಲ್ಲಿ ಧಾತುಪುಷ್ಟಿಯಾಗಿ ಮುಖವು ಕಾಂತಿಗೊಳಿಸುವದು. ಸೇವನಾ ಕ್ರಮ—ಅಭ್ಯಾಸವುಳ್ಳವರು 1 ನಾವಟಿ ತೂಕ ಯಾ ಗೋಲಿಗಾತ್ರ ಅಭ್ಯಾಸವಿಲ್ಲದವರು 2 ಆಣೆ ತೂಕ ರಾತ್ರೆ ಊಟದ ಮೇಲೆ ಸೇವಿಸಿ ಹಾಲು ಕುಡಿಯತಕ್ಕದ್ದು

1 ಶೇರಿನ ಡಬ್ಬಿಗೆ ಕ್ರಯ 2—0—0

ಚಂದ್ರೋದಯಾವರ್ತಿ:—ಕಣ್ಣಿಗೆ ಬೀಳುವ ಪಾಚಿಪೊರೆ ಬೆಳೆದ ದುರ್ಮಾಂಸ, ತಿಮಿರ, 3 ವರ್ಷದ ಹೂವು, ಇರುಳುಗಣ್ಣು, ತಾಚದಿಂದು ಗುಣ

ಕ್ರಯ: ರೂ 0—12—0

ಮಹಾಜ್ವರಾಂಕುಶ:—ದಿವಸಕ್ಕೊಮ್ಮೆ ದ್ವಿತೀಯ, ತೃತೀಯ, ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ. ಡಜನ್ ಕ್ರಯ 0—9—0;

ಮೇಹಮುದ್ಗರವಟಿ:—20 ನಮೂನೆಯ ಪ್ರಮೇಹ, ಧಾತು ಗತಜ್ವರ ಮೂತ್ರಕೃಚ್ಛ್ರ, ಅಶ್ಮರಿ, ಕಾಮಾಲೆ, ಪಾಂಡು ಗುಣ ಡಜನ್ 1ರ ಕ್ರಯ 1—2—0

ಕೊಲೆರಾ ಯಾನೆ ವಾಂತಿಭೇದಿ ಗುಟಿಕೆ:—ಒಂದೆರಡು ಗುಟಿಕೆಯಿಂದ ವಾಂತಿಭೇದಿ ಕೂಡಲೇ ಗುಣ. ಡಜನ್ ಗುಟಿಕೆಯ ಕ್ರಯ: 0—12—0.

ಚಂದನಾಸವ:—ಮೇಹ, ಶುಕ್ಲಧಾತು ನಷ್ಟತ್ವ ಗುಣ. ಬಾಟ್ಲಿಗೆ ರೂ. 1

ನಮ್ಮ ಔಷಧಾಲಯ ದಲ್ಲಿ ಅನೇಕ ವಿಧದ ಬೇರೆ ಔಷಧಗಳು ದೊರೆಯುತ್ತವೆ ಅಪೇಕ್ಷೆಯುಳ್ಳವರು ಕೆಟಲಾಗು ತರಿಸಿಕೊಳ್ಳಬಹುದು ಮೇಲಿನ ಔಷಧಗಳು ಬಹಳವಾಗಿ ಖರ್ಚಾಗುವದರಿಂದ ಕ್ರಯವನ್ನು ಕಡಿಮೆ ಮಾಡಿರುತ್ತದೆ

ವಿಳಾಸ:— ಮೂಲ್ಕಿ ಗಣಪಯ್ಯ ಎಂಡ್ ಸನ್ಸ್,
ನೇಟಿವ್ ಡಾಕ್ಟರ್ಸ್,
ತೇರಬೀದಿ ಮನೆ ನಂಬ್ರ 209ನೇ, ಮಂಗಳೂರು

ಉತ್ತಮ ಹೊಸ ನಾವೆಲ್ (ಕಥೆ)ಗಳು.

ಆರಿಸಿ ಆರಿಸಿ ತೆಗೆದಿರುವ ಹೊಸ ಪುಸ್ತಕಗಳೇ.

		ರೂ ಆ ಪೈ			ರೂ ಆ ಪೈ
೧.	ಕಲಿಯುಗ	೦—೫—೦	೧೦	ಅದ್ಭುತ ರಾಮಾಯಣ	೦—೬—೦
೨.	ಸುಭದ್ರೆ	೦—೫—೦	೧೧.	ಚಮತ್ಕಾರ ಚಿಂತಾಮಣಿ	೦-೧೦—೦
೩.	ಚಂದ್ರಕಳಾ	೦—೬—೦	೧೨.	ನವೀನ ಭರತಖಂಡ	೦—೫—೦
೪.	ಶುಕಸಪ್ತತಿ	೧—೮—೦	೧೩.	ವಚನ ಶಿವಪುರಾಣ ..	೨—೦—೦
೫.	ಕಲಾನಾಥ	೦—೪—೦	೧೪.	ವಚನ ದೇವೀಭಾಗವತ	೨—೦—೦
೬.	ಸುಮತಿ	೦—೬—೦	೧೫	ಉತ್ತರ ರಾಮಾಯಣ ಕಥಾ	೦—೫—೦
೭.	ಶಕ್ತಿ	೦-೧೨—೦	೧೬.	ಸುಸೀಯ ಚರಿತ್ರೆ ...	೦ ೧೦—೦
೮.	ಮಾಧವೀಕಂಕಣ	೧—೮—೦	೧೭	ಯಯಾತಿ ಚರಿತ್ರೆ ..	೦—೪—೦
೯	ಬೆಕ್ಕೋಜಿ	೦—೪—೦	೧೮	ಕಾದಂಬರಿ ಕಥೆ ...	೦—೮—೦

ವಿದ್ಯಾನಂದ ಮಾಸಪತ್ರಿಕೆ ವಾರ್ಷಿಕ ಚಂದಾ ರೂ ೨—೪—೦.

ಸಂಸ್ಕೃತ, ಕನ್ನಡ ಭಾಷೆಗಳಲ್ಲಿ ಕಾದಂಬರಿ ವೇದಾಂತ ಜ್ಯೋತಿಷ ವಗೈರೆ ಗ್ರಂಥಗಳು ಯಾವಾಗಲೂ ದೊರಿಯುವುವು.

☞ ಸ್ಕೂಲ್ ಪುಸ್ತಕಗಳೂ ದೊರಿಯುತ್ತವೆ.

(ಕ್ಯಾಟಲಾಗ್‌ಮಾವರಿ ಪತ್ರಿಕೆ ಉಚಿತ.)

ಬಾಣವಾಡಿ ಆದಿನಾರಾಯಣಶಾಸ್ತ್ರಿ,
ವಿದ್ಯಾನಂದ ಆಫೀಸ್,
ಕಂಕರಪೇಟೆ, ಬೆಂಗಳೂರು ಸಿಟಿ.

ಹುಳಬಿದ್ದ ಹುಣ್ಣುಗಳು.

ಪಡುಬಿದ್ರಿ ಕಾಡಿಪಟ್ಣ ಮೊಗೇರ ಶೀನ್ರು ಹೆಂಗಸು ಬರಿಯುವದು:—ನನಗೆ ಸುಮಾರು ಆರು ವರ್ಷಗಳಿಂದ ಎರಡು ಕಾಲುಗಳಲ್ಲಿ ಬೊಕ್ಕೆಗಳು ಹುಟ್ಟಿ ಅದರಲ್ಲಿ ಕೀವು ಸುರಿಯುತ್ತ ಕೆಲವು ಸಣ್ಣ ಛಿದ್ರಗಳುಂಟಾಗಿ ಆ ಛಿದ್ರದಲ್ಲಿ ಹುಳಗಳು ತುಳುಕುತ್ತಿತ್ತಲ್ಲದೆ ಸಪರಿ ವ್ರಣಗಳು ಕರಗಿ ಅರ್ಧಾಣೆ ಗಾತ್ರವಾಗಿತ್ತು. ಇದರಿಂದ ನಡಿಯಲಾರದೆ ಕಾಲಿಗೆ ವಸ್ತ್ರ ಕಟ್ಟಿ ಮಲಗಿದ್ದಲ್ಲಿಯೇ ಇದ್ದೆನು. ದೈವವಶಾತ್ ತಮ್ಮ ಸಬ್ ಏಜಂಟರ ಭೇಟಿಯಾಗಿ ಪರೀಕ್ಷಾರ್ಥವಾಗಿ ಎರಡು ಸೀಸೆ ತಮ್ಮ ಯುಕಲಿಪ್ಟಸ್ ತೈಲವನ್ನು ಕೊಂಡುಕೊಂಡು ಹೊಟ್ಟೆಗೂ ತಕ್ಕೊಂಡು ಹುಣ್ಣಿಗೂ ಹಚ್ಚಿದೆ. ಎರಡು ಸೀಸೆ ಮುಗಿಯುವಷ್ಟರಲ್ಲಿ ನನ್ನ ಹುಣ್ಣುಗಳು ಒಣಗಿ ನಡಿಯಲು ಅನುಕೂಲವಾಗಿಯದೆ ಎಂಬದನ್ನು ತಿಳಿಸಲು ಸಂತೋಷಪಡುತ್ತೇನೆ.

ಒಂದೇ ಸಲ ಕೊಡುವದರಲ್ಲಿ ಗುಣ!

ರಾ| ವೆಂಕಟಕೃಷ್ಣ ಆಚಾರಿ, ಶಂಕರನಾರಾಯಣ:—ನಿಮ್ಮಲ್ಲಿಂದ ತರಿಸಿದ ಯುಕಲಿಪ್ಟಸ್ ತೈಲವನ್ನು ಕೆಲವು ಕಾಲದಿಂದ ಕಠಿಣ ಹೊಟ್ಟೆನೋವಿನಿಂದ ನರಳುತ್ತಿದ್ದ ನನ್ನ ತಾಯಿಗೆ ಒಂದು ಸಲ ಕೊಡುವಷ್ಟರಲ್ಲಿ ಗುಣ ಉಂಟಾದಕಾರಣ ಮನಸ್ಸಿಗೆ ಭಾರಿ ಖುಸಿಯಾಗಿದೆ. ಅರ್ಧ ಡಜನ್ ಸೀಸೆ ವಿ. ಪಿ. ಮಾಡಿ ಕಳುಹಿಸಿರಿ.

ಇದು ಸಂಜೀವಿನಿಯೇ ಸರಿ!!

ಮ| ರಾ| ತುಕ್ರಪ್ಪ, ಜಿ ಎಮಾರ್ಗಳಕಾರ, ಮುಂಬೈ:—ಕೆಲವು ಸಮಯದಿಂದ ಕೆಮ್ಮು ಉಬ್ಬಸದಿಂದ ಪೀಡಾಡುತ್ತಿದ್ದ ಹುಡುಗಿಯೊಬ್ಬಳಿಗೂ ಹಲವು ಕಾಲದಿಂದ ಹೊಟ್ಟೆನೋವಿನಿಂದ ನರಳುತ್ತಿದ್ದ ಮುದುಕಿಯೊಬ್ಬಳಿಗೂ ನಿಮ್ಮಲ್ಲಿ ದೊರೆಯುತಕ್ಕ ಯುಕಲಿಪಸ್ ತೈಲವನ್ನು ನನ್ನ ಸ್ನೇಹಿತರಾದ ಪೈ ಕೊರಗಪ್ಪನವರಿಂದ ಪಡಕೊಂಡು ಕೊಟ್ಟೆನು. ಇಬ್ಬರೂ ಗುಣಹೊಂದಿರುತ್ತಾರೆ. ಕೆಮ್ಮು, ಉಬ್ಬಸ, ಹೊಟ್ಟೆನೋವು, ಸರ್ವ ತರದ ವಾಯುರೋಗಗಳಿಗೆ ಇದು ಸಂಜೀವಿನಿಯಂತೆ ಇದೆ. ಆದುದರಿಂದ 2 ಡಜನ್ ವಿ ಪಿ ಮಾಡಿ ಕಳುಹಿಸಿರಿ. ಔನ್ಸ್ ಸೀಸೆ 1ಕ್ಕೆ 0—5—0. ಡಜನ್ ಸೀಸೆಗಳಿಗೆ ವಿ ಪಿ. ಸಹಿತ ರೂ 3—12—0. ಅನುಪಾನ ಪತ್ರಿಕೆ ಸೀಸೆಯೊಂದಿಗೆ.

☞ ನಮ್ಮಲ್ಲಿ ಹೊಮಿಯೋಪಥಿ ಮತ್ತು ಟಿಸ್ಯೂ ರಿಮಿಡಿಸ್‌ಗಳೆಂಬ ಔಷಧಿಗಳು ದೊರೆಯುತ್ತವೆ.

ವಿಳಾಸ:—
ಇಕ್ಲಿಪ್ಸ್ ಏಜನ್ಸಿ,
ಮಂಗಳೂರು.

ಏಜಂಟರು:—
ಸುಗಂಧವಿಲಾಸ,
ರಥಬೀದಿ, ಮಂಗಳೂರು.

ಅತ್ಯುಪಯುಕ್ತವಾದ ಪುಸ್ತಕಗಳು.

ವೇಂಕಟಗಿರಿ ಮಹಾತ್ಮ್ಯೆ (ಭಾಮಿನಿ ಷಟ್ಪದಿ)	ರೂ.	೧—೮—೦.
ಭೂತಾಳಪಾಂಡ್ಯರಾಯನ ಕಟ್ಟು ...	,,	೧—೪—೦.
ರೆಡಿರೆಕ್ನನರ್ ಎಂಬ ಸುಲಭ ರೀತಿಯಿಂದ ಬಡ್ಡಿ ಇತ್ಯಾದಿಗಳನ್ನು ಲೆಕ್ಕಿಸುವ ಪುಸ್ತಕ	,,	೩—೮—೦.
ಹನುಮದ್ರಾಮಾಯಣ	,,	೨—೧—೦.
ಕೃಷ್ಣಾಕುಮಾರಿ (ನಾವೆಲ್)	,,	೦-೧೦—೦
ಸತ್ಯರಾಜಾ ಪೂರ್ವದೇಶ ಯಾತ್ರೆಗಳು	,,	೦—೮—೦.
ಸದಾಹಾರ ವಿವೇಚನೆ	,,	೦—೨—೦.
ಮಹಾರಾಣಿ ಗೃಹಶೀಲೆ	,,	೦—೩—೦.
ಪೇಶ್ವೆ ನಾರಾಯಣರಾವ್	,,	೦—೩—೦.
ಬಾಲಿಕಾ ನೀತಿಮಾಲಿಕೆ	,,	೦—೨—೦.

ವಿಳಾಸ:—
ಮ್ಯಾನೇಜರ್,
ಶಾರದಾ ಛಾಪಖಾನೆ,
ಮಂಗಳೂರು.

ಸ್ವದೇಶಾಭಿಮಾನಿಯ ನೋಟೀಸು

ಚಂದಾದಾರರು ನಮಗೆ ಬರೆಯುವ ಎಲ್ಲಾ ಪತ್ರ ವ್ಯವಹಾರಗಳಲ್ಲಿ ತಮ್ಮ ತಮ್ಮ ವಿಳಾಸದೊಂದಿಗೆ ಇರುವ ರಿಜಿಸ್ಟರ ನಂಬರನ್ನು ತಪ್ಪದೆ ಬರಿಯತಕ್ಕದ್ದು. ರಿಜಿಸ್ಟರು ನಂಬರು ಇಲ್ಲದ ಪತ್ರಗಳಿಗೆ ಸಿಗಾ ಕೊಡಲಾರೆವು.

ಪತ್ರಿಕೆಗೆ ಚಂದಾದಾರರಾಗಿ ಸೇರಬೇಕೆಂಬ ಇಚ್ಛೆಯುಳ್ಳವರು ವರ್ಷ 1ರ ಚಂದಾ ಹಣ ರೂ. 2—1—0ನ್ನು ಮನಿಯಾರ್ಡರು ಮೂಲಕ ರವಾನಿಸುವದು ಇಲ್ಲವೆ ವಿ. ಪಿ. ಮೂಲಕ ಕಳುಹಿಸಬೇಕೆಂದು ಬರಿಯುವಂಥವರಿಗೆ ಪತ್ರಿಕೆಯ ಹಿಂದಿನ ಸಂಚಿಕೆಯನ್ನು ವಿ. ಪಿ. ಮಾಡಿ ಕಳುಹಿಸಲಾಗುವದು. ವಿ. ಪಿ.ಯು ಪೋಸ್ಟಾಫೀಸಿನವರಿಗೆ ತಲ್ಪಿದ ನಂತರವೇ ಪತ್ರಿಕೆಯನ್ನು ಕಳುಹಿಸಲು ಪ್ರಾರಂಭಿಸುವೆವು.

ಪತ್ರಗಳನ್ನು ಬರಿಯುವಾಗ ತಮ್ಮ ಹೆಸರು, ವಿಳಾಸ ಮತ್ತು ಪೋಸ್ಟಾಫೀಸಿನ ಹೆಸರನ್ನು ಸ್ಪಷ್ಟಾಕ್ಷರದಲ್ಲಿ ಬರಿಯತಕ್ಕದ್ದು.

ಮ್ಯಾನೇಜರ,

ಸ್ವದೇಶಾಭಿಮಾನಿ ಆಫೀಸು,

ಮಂಗಳೂರು, ದ. ಕ.

B. Narasimha Prabhu,

Bantval, (SOUTH CANARA).

~~Agent for~~

Malabar and South Canara.

ನರೆಕೂದಲನ್ನಿಟ್ಟುಕೊಂಡು ಮುದುಕರಾಗಿ ಕಾಣುವುದೇಕೆ?

ದರ್ಬಾರ್

ಕೂದಲು ರಂಗು.

ಒಂದು ಸಲ ಹಚ್ಚಿದರೆ 20 ವರ್ಷ ಪ್ರಾಯದ ಸಮರ್ಥರಂತೆ ಕಾಣುತ್ತೀರಿ. ಈ ರಂಗು ಹಚ್ಚಿಕೊಂಡರೆ ಕೂದಲು ಅಚ್ಚ ಕಪ್ಪಾಗಿ ಹೊಳೆಯುತ್ತದೆ. ಈಗ ಮಾರಿಕೆಗೆ ಬಂದಿರುವ ಅಲ್ಪತರದ ಕೂದಲಿಗೆ ಹಚ್ಚುವ ಬಣ್ಣಗಳೂ ರಂಗುಗಳೂ ತುಂಬ ಕೀಳು ಜಾತಿಯವು. ಹಚ್ಚಿದ ಮೇಲೆ ಕೂದಲು ಕೆಂಚು ತಿರುಗಿ ಅಸಹ್ಯವಾಗಿ ಕಾಣುತ್ತದೆ.

ನಮ್ಮ "ದರ್ಬಾರ್ ಕೂದಲು ರಂಗು" ಅಂಥಾದ್ದಲ್ಲ, ಒಹುವೇಳೆ ಇನ್ನೂ ಒಂದಾವರ್ತಿ ತರಿಸಿ ಪರೀಕ್ಷೆ ಮಾಡಿದರೆ ನೀವೇ ಸಂತೋಷಪಡುವಿರಿ. ಕ್ರಯ ಒಂದು ಪವೀಕ್ಷ ಬಾಟ್ಲಿ ಒಂದಕ್ಕೆ ರೂ 1, ಅಂಚೆ ಹಾಸಲು 4 ಆಣೆ

ಎಸ್. ಕೆ ಲೋಟಸ್ ಎಂಡ್ ಕೊ,

ನಂಬ್ರ ೨ ಇರಕಪ್ಪನ್ ಸ್ಟ್ರೀಟ್

ಸಾವಕಾರಪೇಟೆ, ಮದ್ರಾಸು.

ಒಂದು ತಿಂಗಳ ತನಕ ಮಾತ್ರ

ಕಡಿಮೆ ದರ!

ನಮ್ಮ ರೈಲ್ವೆ ರೆಗ್ಯುಲೇಟರ್ ವಾಚು ಸರಿಯಾದ ಸಮಯವನ್ನು ತೋರಿಸುವಂಥಾದ್ದಾಗಿಯೂ ಹನಿಯರಿಗೆ ತಕ್ಕದ್ದಾಗಿಯೂ ಇದೆ. ಈ ವಾಚಿಗೆ ೩ ವರುಷಗಳ ಗ್ಯಾರಂಟಿ ಇದೆ. ಕ್ರಯ ರೂ. 12. ಈಗ ಕ್ರಯ ರೂ 4 ಮಾತ್ರ. ಲೇಡಿಸ್ 14 ಕೆರೆಟ್ ಗೋಲ್ಡ ವಾಚು ಕ್ರಯ ರೂ. 48 ಈಗ ರೂ 16. ಲೇಡಿಸ್ ಸಿಲ್ವರ್ ವಾಚು ಕ್ರಯ ರೂ 21 ಈಗ ರೂ. 7. ಬಲಿಷ್ಟವಾಗಿಯೂ ನಂಬಿಕೆಗೆ ಯೋಗ್ಯವಾಗಿಯೂ ಇದ್ದು 8 ದಿವಸಕ್ಕೊಮ್ಮೆ ಕೀ ಕೊಡುವ ವಾಚು ನಿಕ್ಕಲ್ ಕೇಸ ಕ್ರಯ ರೂ 24 ಈಗ ರೂ 8. ಬೆಳ್ಳಿ ಕೇಸು ಓಪನ್‌ಫೇಸ್ ರೂ 33 ಈಗ ರೂ 11. ಸಿಲ್ವರ್ ಹಂಟಿಂಗ್ ಕೇಸು ರೂ 42 ಈಗ ರೂ. 14. ಉತ್ತಮವಾದ ರಿಸ್ಟ ವಾಚು ಚರ್ಮದ ಪಟ್ಟಿ ಸಹಿತ ರೂ 15 ಈಗ ರೂ 5.

ಸೂಚನೆ.—ರಿಸ್ಟ ವಾಚು ವಿನಹ ಇತರ ಪ್ರತಿ ಒಂದು ವಾಚು ಪಡಕೊಳ್ಳುವವರಿಗೆ ಒಂದು ಚೈನು, ಒಂದು ಚೂರಿ, ಒಂದು ಉಂಗುರವೂ 6 ವಾಚುಗಳನ್ನು ಒಂದೇ ಸಲ ತರಿಸಿಕೊಳ್ಳುವವರಿಗೆ ಅದೇ ನಮೂನೆಯ ಒಂದು ವಾಚು ಬಹುಮಾನವಾಗಿ ದೊರಿಯುವದು.

ವಿಳಾಸ:—

ಕಾಂಪಿಟಿಶನ್ ವಾಚ್ ಕೊ,

20 ಮದನ ಮಿತ್ರ ಲೇನ್,

ಕಲ್ಕತ್ತಾ.

Address —

Competition Watch Co.,

20 Madan Mitra Lane,

(S.) CALCUTTA

ಕನ್ನಡ ಅಕ್ಷರದ ಗ್ರಂಥಗಳು

ಕನ್ನಡ ಟೀಕಾ ತಾತ್ಪರ್ಯ ಸಂಗ್ರಹದೊಂದಿಗಿರುವ ಬೃಹಜ್ಜಾತಕವೆಂಬ ಹೋರಾ ಶಾಸ್ತ್ರ	✱	ʋ	ʋ
ಶ್ರೀಮದ್ಭಾಗವತ ಸಾದಾ ಬ್ಯಾಂಡ ದಶಮಸ್ಕಂದ	1	8	0
ದಶಪರ್ವ ಭಾರತ	2	0	0
ಅಶ್ವಮೇಧ ಪರ್ವ ಡಿ ಅವ್ವಲ್ ಪ್ರತಿ	1	8	0
ಡಿ. ಸಾದಾ	1	0	0
ಭಾರತ ಕಥಾಸಂಗ್ರಹ	0	6	0
ಜೈಮಿನಿ ಭಾರತ ಅವ್ವಲ್ ಕ್ಯಾಲಿಕೊ ಬ್ಯಾಂಡ	1	8	0
ಡಿ. ಡಿ ಸಾದಾ ಬ್ಯಾಂಡ	1	4	0
ಡಿ ಮಧ್ಯಂ ಡಿ	0	12	0
ಜೈಮಿನಿ ಭಾರತ ಕಥಾಸಂಗ್ರಹ	0	12	0
ಜೈಮಿನಿ ಭಾರತ ಸಟೀಕಾ ತಾತ್ಪರ್ಯ ಸಮೇತ ಅವ್ವಲ್	4	8	0
ತೊರವೆ ರಾಮಾಯಣ ಅವ್ವಲ್ ಕ್ಯಾಲಿಕೊ ಬ್ಯಾಂಡ	2	0	0
ಡಿ ಸಾದಾ ಬ್ಯಾಂಡ	1	4	0
ರಾಮಾಯಣ ಕಥಾಸಂಗ್ರಹ	0	12	0
ಸೀತಾ ಚರಿತ್ರ	1	2	0
ರಾಜಶೇಖರ ವಿಲಾಸ	0	8	0
ಗಯೋಪಾಖ್ಯಾನ ಕನ್ನಡಪದ್ಯ ಕಾವ್ಯ	0	8	0
ನಾಗವರ್ಮ ಛಂದಸ್ಸು	0	6	0
ಸಪ್ತಶತಿ ದೇವಿ ಮಹಾತ್ಮೆ (ನಿರ್ಣಯಸಾಗರ ಪ್ರೆಸ್)	0	10	0
ದೇವೀಮಹಾತ್ಮೆ ಕಥಾ ಸಂಗ್ರಹ	0	6	0
ಅನುಭವಾಮೃತ	0	12	0
ವಿವೇಕಚಿಂತಾಮಣಿ	0	12	0
ಹಠಯೋಗಪ್ರದೀಪಿಕಾ	1	4	0
ಪರಮಾನ ಭವಬೋಧೆ	1	0	0
ನಿಜದೀಪಿಕಾರತ್ನ	1	4	0
ಭಗವದ್ಗೀತಾ ಸಂಸ್ಕೃತ ಶ್ಲೋಕ ಮತ್ತು ಅರ್ಥ, ಚಿತ್ರಸಾಹಿ ಬ್ಯಾಂಡ	0	10	0
ಡಿ ರಾಮಕೃಷ್ಣಸೂರಿ, ಪ್ರತಿಪದ ಟೀಕಾ ತಾತ್ಪರ್ಯ ಸಹ	2	0	0
ಸತ್ಯನಾರಾಯಣವ್ರತಕಥಾ	0	4	0
ವ್ರತವಲ್ಲಿ (40 ವ್ರತಗಳ ಅಡಗಿಯುಕ್ತ)	1	0	0
ಕೃವಲ್ಯ ಪದ್ಧತಿ ಕನ್ನಡ ಟೀಕು	0	12	0
ಭಾಷಾಕುಸುಮ ಮಂಜರಿ	0	8	0
ಮಣಿಮಂಜರಿ ಕನ್ನಡ ಟೀಕು	0	14	0
ಟೀಕಾ ಗುರು ಬಾಲಪ್ರಬೋಧಿಕೆ, ಅವ್ವಲ್ ಕ್ಯಾಲಿಕೊ ಬ್ಯಾಂಡ	3	0	0
ಡಿ ತ್ರಿಕಾಂಡ ಅಮರಕೋಶ, ಅವ್ವಲ್ ಕ್ಯಾಲಿಕೊ ಬ್ಯಾಂಡ	1	12	0
ಡಿ ಡಿ. ಸಾದಾಬ್ಯಾಂಡ	0	14	0
ಮೂಲ ತ್ರಿಕಾಂಡ ಅಮರಕೋಶ	0	4	0
ಡಿ. ಪ್ರಥಮ ಕಾಂಡ ಡಿ.	0	1	0
ಕರ್ನಾಟಕ ಶಬ್ದಮಂಜರಿ	0	4	0
ಧನಂಜಯನಿಘಂಟು	0	4	0
5 ಭಾಷಾಪಕಟ್ಲೇರಿ	0	4	0

ಇವುಗಳಲ್ಲದೆ ಕನ್ನಡ, ಸಂಸ್ಕೃತ ಮರಾಠಿ ಪುಸ್ತಕಗಳೂ ಶಾಲಾ ವಿದ್ಯಾರ್ಥಿಗಳ ಉಪಯೋಗದ ಎಕ್ಸರಸೈಜ್ ಪುಸ್ತಕ, ಡ್ರೋಯಿಂಗ್ ಪುಸ್ತಕ, ಗ್ರಾಫ್ ಎಕ್ಸರಸೈಜ್ ಪುಸ್ತಕ, ಮತ್ತು ನಾನಾತರದ ಬರವಣಿಗೆ ಸಾಮಗ್ರಿಗಳೂ ಇತ್ಯಾದಿ ಸುಲಭ ಕ್ರಯಕ್ಕೆ ದೊರೆಯುತ್ತವೆ.

ಕೆ. ಎಮ್. ದಾಸಪ್ರಭು,

ರಥಬೀದಿ,

ಮಂಗಳೂರು.

ESTABLISHED JULY 1906.

THE CANARA BANK, LIMITED., MANGALORE.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು

Authorised Capital Rs	300,000—0—0
Issued Capital	225,000—0—0
Subscribed Capital	219,100—0—0
Paid up Capital	194 100—0—0
Deposits ..	397,579—5—0
Reserve Fund	33,500—0—0

Besides the uncalled capital of Rs 25,000/ 25% of the net profits are added annually to the Reserve Fund Rs 21,685/ have been invested in Government Paper of the face value of Rs 22,500/-

Dividends of not less than 6% paid during the past years and a bonus of 1% to 2% paid in addition during the last three years

Fixed Deposits of Rs 50/ and above in multiples of Rs. 5/ received for 3, 6, 12 and 24 months @ 4, 4½, 5 and 5½%. respectively at the discretion of the managing committee

Short-notice Deposits requiring one weeks notice of withdrawal after one month received @ 2½%. per annum at the discretion of the managing committee

Current Deposit Account opened free of charge

Savings Bank Account opened for any sum not less than 4 As and multiples thereof and interest paid @ 4½%.

Loans granted on proper securities and pledges

Sealed Parcels for safe custody received on a moderate charge

Canara Bank Ltd ,
Mangalore 1st August 1915

ನಿಯಮಿತ ಮೂಲ ಧನವು ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು „ . ..	225,000—0—0
ಪ್ರತಿಜ್ಞಾತ ಮೂಲ ಧನವು „ . .	219,100—0—0
ಆಗತ ಮೂಲ ಧನವು „ . .	194,100—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು . .	397,579—5—0
ರಕ್ಷಿತ ಧನವು .	33,500—0—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ 25,000 ರಕ್ಷಿತ ಧನವಾಗಿರುತ್ತದೆ ರಕ್ಷಿತ ಧನದ ಪೈಕಿ ರೂ 21,685—0—0 ಸರಕಾರದ ರೂ 22,500ರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲು ಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಆಧಿನ ಮೇಲೆ ಸಾಲಗಳು ಕೊಡೋಣಾಗುತ್ತವೆ

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು

P. Gopal Naik,
Secretary.

ಅತ್ತರು ಮತ್ತು ಸುರಭಿಗಳಲ್ಲಿ ಮಕುಟವರ್ಧನದಂತಿರುವ

ಒಟ್ಟೊ ಮೋಹಿನಿ.

(ರಿಜಿಸ್ಟರ್ಡ್.)

ಅನೇಕ ವಸ್ತುಪ್ರದರ್ಶನಗಳಲ್ಲಿ ಪ್ರದರ್ಶಿಸಲ್ಪಟ್ಟು ಕಡೆಗೆ ಅದರ ರಮ್ಯವಾದ ಅತ್ಯಂತ ಶಾಶ್ವತವಾದ ಪರಿಮಳಕ್ಕಾಗಿ ಚಿನ್ನ ಬೆಳ್ಳಿಯ ಪದಕಗಳನ್ನು ಪಡೆದಿದೆ. ಎಲವಸ್ತ್ರದಲ್ಲಿ ನಾಲ್ಕು ತಟಕುಗಳನ್ನು ತಾಗಿಸುವುದರಿಂದ ಹಿಡಿ ತುಂಬಾ ಮಲ್ಲಿಗೆ ಹೂ ಇದ್ದ ಪರಿಮಳವುಂಟಾಗುವುದು. ಈ ಹೂಗಳು ಕೃತಕವಾದವುಗಳಾದರೂ ನೈಸರ್ಗಿಕ ಹೂವಿನಂತೆ ಪ್ರತಿ ಸಾಯಂಕಾಲ ಬಾಡಿಹೋಗದು. ಆದರೆ ತನ್ನ ಪರಿಮಳವನ್ನು 4 ದಿವಸಗಳಿಗಿಂತಲೂ ಹೆಚ್ಚಿಗೆ ಕೊಡುತ್ತಿರುವದು. ಆದುದರಿಂದ ಒಟ್ಟೊ-ಮೋಹಿನಿಯು ಶಾಶ್ವತವಾದ ಸುರಭಿಯೆಂದು ಕರೆಯಲ್ಪಟ್ಟು ಈ ಕಾಲಕ್ಕೆ ತಕ್ಕುದಾದ ಬಹುಮಾನವಾಗಿ ಕೊಡತಕ್ಕ ದ್ರವ್ಯವಾಗಿದೆ. ಇದರ ಪರಿಮಳವು ಶಾಶ್ವತವಲ್ಲವೆಂದು ದೃಢಮಾಡಿಕೊಡುವವರಿಗೆ 100 ರೂಪಾಯಿಗಳ ಬಹುಮಾನ ಕೊಡಲಾಗುವದು. ಆದುದರಿಂದ ಯಾಕೆ ಈ ಬಹುಮಾನವನ್ನು ಪಡೆಯಲು ಪ್ರಯತ್ನಿಸಲಾಗದು?

ಕ್ರಯ ಅರ್ಧ ಔನ್ಸ್ ಸೀಸೆಗೆ 2—0—0 1 ಡ್ರಾಮ್ ಸೀಸೆಗೆ 0—12—0. ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0.

Proprietors:—**The Oriental Drug & Chemical Co.**
Sole Agents:—**MOHINI AGENCY,**
3 Fida Building, Jumma Musjid,
BOMBAY.

ಪ್ರೊಪ್ರೈಟರರು:—ಓರಿಯಂಟಲ್ ಡ್ರಗ್ ಎಂಡ್ ಕೆಮಿಕಲ್ ಕಂಪೆ
ಪ್ರಾಮುಖ್ಯ ಏಜಂಟರು:—ಮೋಹಿನಿ ಏಜನ್ಸಿ,
3 ಫಿಡಾ ಬಿಲ್ಡಿಂಗ್, ಜುಮ್ಮಾ ಮಸೀದ್,

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 3ನೇ ಸಪ್ಟಂಬರ 1915

ಮಂಗಳೂರಲ್ಲಿ ನಿನ್ನೆ ದಿನ ಕೂಡಿದ ಪುರಜನರ ಮಹಾಸಭೆಯು.

ಶ್ರೀಕೃಷ್ಣ ಜನ್ಮಾಷ್ಟಮಿ ವ್ರತಾಚರಣೆಯ ಮರುದಿನದ ಕಾಲಕ್ಷೇಪವನ್ನು ಈ ಮಹಾ ಸಭೆಯ ಮೂಲಕ ಇಲ್ಲಿಯವರು ಸಾರ್ಥಕವಾದ ರೀತಿಯಲ್ಲಿ ಮಾಡಿದರೆಂಬುದನ್ನು ಸೂಚಿಸಲು ಬಹಳ ಸಂತೋಷಪಡುತ್ತೇವೆ. ದ್ರೌಪದಿಯ ರೋಧನೆಯನ್ನು ಕೇಳಿ ಆಕೆಯ ಅಭಿಮಾನವನ್ನು ಕಾಪಾಡಿದ ಭಾರತ ಅಭಿಮಾನದೇವನಾದ ಶ್ರೀ ಕೃಷ್ಣನ ಜಯಂತಿ ದಿನವೇ ಈ ದೇಶದ ಅಭಿಮಾನವನ್ನು ಕಾಪಾಡಲು ಮುಖ್ಯ ಸಾಧನವಾದ ಸ್ತ್ರೀ ಶಿಕ್ಷಣದ ಏರ್ಪಾಡುಗಳನ್ನು ಕುರಿತು ಪರ್ಯಾಲೋಚಿಸಲು ಇಲ್ಲಿಯ ಸಮಸ್ತ ಜಾತಿಗಳ ಮುಖಂಡರು ಸಭೆ ಕೂಡಿದರು. ಸಭೆ ಕೂಡಿದ ಮುಹೂರ್ತವು ಶುಭಕರವೇ ಸರಿ. ಸ್ತ್ರೀ ಶಿಕ್ಷಣದ ಕೊರತೆಯಿಂದ ಮರುಗುತ್ತಿದ್ದ ಭರತ ಮಾತೆಯು ಇಷ್ಟು ದಿನಗಳ ವರೆಗೆ ಇಲ್ಲಿ ಅವ್ಯಕ್ತವಾಗಿದ್ದ ದೂರು ನಿನ್ನೆಯ ಮಹಾ ಸಭೆಯ ಮೂಲಕ ರೂಪುಗೊಂಡಿತು. ಮಹಾರಾಜಶ್ರೀಗಳಾದ ರಾವ್ ಬಹದ್ದೂರ್ ರಾಮಯ್ಯಪುಂಜ, ದಿವಾನ್ ಬಹದ್ದೂರ್ ಎ ಪಿಂಟೊ, ರಾವ್ ಬಹದ್ದೂರ್ ದಗಡೆ ರಾಮರಾವ್, ವರ್ಕಾಡಿ ರಾಮರಾವ್, ಎಮ್ ಮಹಮ್ಮದಖಾನ್, ರಾವ್ ಬಹದ್ದೂರ್ ಎನ್. ಸುಬ್ಬರಾವ್, ಅಮ್ಮೆಂಬಳ ಶ್ರೀನಿವಾಸಪೈ, ಪಾಂಗಾಳ ಸುಬ್ಬರಾವ್, ಕಲ್ಮಾಡಿ ಲಕ್ಷ್ಮೀನಾರಾಯಣರಾವ್, ಹಾಗಲವಾಡಿ ಮಹಮ್ಮದ ಪುತ್ತೂರು ಸಾಹೇಬ, ನೆಲ್ಲಿಕಾಯಿ ವೆಂಕಟರಾವ್, ಒಟ್ಟಿಗೆ ಈ ಊರಿನ ೨೧ ಜನ ಪ್ರಮುಖರು ಕೂಡಿಕೊಂಡು ಈ ಸಭೆಯನ್ನು ಆಮಂತ್ರಿಸಿದ್ದರು. ಈ ಆಮಂತ್ರಣವನ್ನು ಮನ್ನಿಸಿ ಸರಕಾರದ ಉದ್ಯೋಗಸ್ಥರೂ, ವಕೀಲರೂ, ಸಾಹುಕಾರರೂ, ವರ್ಗದಾರರೂ ಮೊದಲಾದವರೆಲ್ಲರೂ ಸಭೆಗೆ ಬಂದಿದ್ದರು. ಸಭಾ ಕಾರ್ಯಗಳೆಲ್ಲವು ಸಮರ್ಪಕವಾದ ರೀತಿಯಲ್ಲಿ ರಾಮಯ್ಯ ಪುಂಜರವರ ಅಧ್ಯಕ್ಷತೆಯಲ್ಲಿ ನೆರವೇರಿದವು. ಹುಡುಗಿಯರ ಬಗ್ಗೆ ಇಲ್ಲಿ ಒಂದು ಸೆಕೆಂಡರಿ ಶಾಲೆಯು ಅಗತ್ಯವೆಂಬುದನ್ನು ಸರ್ವರೂ ಏಕೀಭಾವದಿಂದ ಒಪ್ಪಿದರು. ಈ ಪಟ್ಟಣದಲ್ಲಿ ಕ್ರೈಸ್ತ ಮಿಶನರಿಗಳಿಂದ ಸ್ಥಾಪಿಸಲ್ಪಟ್ಟ ಸೈಂಟ್ ಎನ್ಸ್ ಹೈಸ್ಕೂಲ್ ಮೊದಲಾದ ಬಾಲಿಕಾ ಪಾಠಶಾಲೆಗಳಿದ್ದರೂ ಬಾಲಿಕೆಯರ ಮತಧರ್ಮಗಳ ಗೋಜಿಗೆ ಹೋಗದೆ ಶಿಕ್ಷಣವನ್ನು ಕೊಡುವಂಥಾ ಇಲ್ಲಿಯ ಗವರ್ನಮೆಂಟ್ ಕೊಲೇಜಿನ ಮಾದರಿಯ ಒಂದು ಸೆಕೆಂಡರಿ ಶಾಲೆಯು ಅಗತ್ಯವಾಗಿದೆ ಎಂದು ಪದೇ ಪದೇ ಸ್ವದೇಶಾಭಿಮಾನಿಯಲ್ಲಿ ಎತ್ತಿದ ವಾದವನ್ನು ಗವರ್ನಮೆಂಟ್ ಪ್ಲೀಡರರಾದ ಮಿ। ಎ. ಜಿ. ಲೋಬರವರು ಸಭೆಯ ಮುಂದೆ ಅಂದವಾಗಿ ಹೇಳಿ ಬಾಲಿಕಾ ಸೆಕೆಂಡರಿ ಶಾಲೆಯ ಅವಶ್ಯಕತೆಯನ್ನು ಸಭಿಕರಿಗೆ ಸೂಚಿಸಿದ ವಿಧಾನವು ಬಹಳ ಯುಕ್ತವಾಗಿತ್ತು. ಹುಡುಗರ ಶಿಕ್ಷಣದ ಬಗ್ಗೆ ಈ ಪಟ್ಟಣದಲ್ಲಿ ಹಲವು ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವುದರಲ್ಲಿ ಹೇರಳ ದ್ರವ್ಯ ವಿನಿಯೋಗವನ್ನು ಇಲ್ಲಿಯ ಪ್ರಜಾಜನರು ಮಾಡಿರುತ್ತಿದರಿಂದಲೂ, ಈ ಪ್ರಾಂತ್ಯಗಳಲ್ಲಿ ಬಡಪತ್ತು ಹೆಚ್ಚಾಗಿರುವುದರಿಂದಲೂ ಸರಕಾರದವರು ಇಲ್ಲಿ ಸ್ತ್ರೀಶಿಕ್ಷಣಕ್ಕೆ ಬೇಕಾಗಿರುವ ಏರ್ಪಾಡುಗಳನ್ನು ಒದಗಿಸಿಕೊಡುವುದು ಅಗತ್ಯವೆಂಬ ಭಾವನೆಯು ಸಭೆಯಲ್ಲಿ ಕೂಡಿದ ಸರ್ವರಲ್ಲಿಯೂ ಇತ್ತು. ಆದ್ದರಿಂದ ಬಾಲಿಕಾ ಸೆಕೆಂಡರಿ ಶಾಲೆಯನ್ನು ಸರಕಾರದವರು ಸ್ಥಾಪಿಸಿ ನಡೆಸಬೇಕೆಂಬ ನಿರ್ಣಯವನ್ನು ಸಭಿಕರು ಮಾಡಿ ಈ ವಿವರವೆಲ್ಲವನ್ನು ಸಭೆಯ ಅಧ್ಯಕ್ಷರ ಮೂಲಕ ಸರಕಾರದವರಿಗೆ ತಿಳಿಸಬೇಕೆಂಬುದಾಗಿ ನಿಶ್ಚಯಿಸಿರುತ್ತಾರೆ.

ಬರೇ ಒಂದು ಸೆಕಂಡರಿ ಶಾಲೆ. ಹೈಸ್ಕೂಲು ಅಲ್ಲ. ಇಂಥಾ ಶಾಲೆಯನ್ನು ಸ್ಥಾಪಿಸಲು ವಿಶೇಷವಾದ ದ್ರವ್ಯ ವಿನಿಯೋಗವು ಬೇಕಾಗಿಲ್ಲ. ಪ್ರಕೃತ ಯುದ್ಧಕಾಲವಾದರೂ ಇಲ್ಲಿಯ ಪ್ರಜಾವರ್ಗಗಳ ನ್ಯಾಯವಾದ ಈ ಅಪೇಕ್ಷೆಯನ್ನು ಸಲ್ಲಿಸಿಕೊಡಲು ಸರಕಾರದವರಿಗೆ ಅನನುಕೂಲತೆ ಇರದೆಂದು ನಾವು ಭಾವಿಸುತ್ತೇವೆ. ಸಭೆಕೂಡಿ ಬೇಕಾದ ನಿರ್ಣಯಗಳನ್ನು ಮಾಡಿದೆವೆಂತ ತೃಪ್ತಿಪಟ್ಟು ಸುಮ್ಮನಿರದೆ ಈ ಬಗ್ಗೆ ಅಗತ್ಯವಿರುವ ಮುಂದಿನ ಪ್ರಯತ್ನಗಳನ್ನು ಹಟವಿಡಿದು ಜಾಗ್ರತೆಯಿಂದ ಇಲ್ಲಿಯ ಮುಂದಾಳುಗಳು ಮಾಡುವರೆಂಬುದಾಗಿ ಕೋರುತ್ತೇವೆ.

ವಾಙ್ಮಯ ಕಲಾಶಾಸ್ತ್ರಗಳ ಅಭಿವೃದ್ಧಿಯ ಸಮಾಚಾರ.

(Progress of Literature, Science and Art)

ಒಂದೊಂದು ಬಾರಿಗೆ ಒಂದೊಂದು ಅಕ್ಷರವು ಅಚ್ಚಾಗುವ ಟೈಪ್‌ರೈಟರು [illegible]ಗೆ ಇದ್ದುವಷ್ಟೆ. ಇತ್ತಲಾಗೆ ಒಂದೇ ಬಾರಿಗೆ ಒಂದೊಂದು ಎರಡು ಮೂರು ಇಂಗ್ಲಿಷ್ ಅಕ್ಷರ (Syllable)ಗಳು ಅಚ್ಚಾಗತಕ್ಕ [illegible] ಯಂತ್ರಗಳು ಮಾರಾಟಕ್ಕೆ ಬಂದಿವೆ.

ಪಂಜಾಬು ಯೂನಿವರ್ಸಿಟಿಯ 'ಶಾಸ್ತ್ರಿ' ಪರೀಕ್ಷೆಯಲ್ಲಿ ಈ ವರ್ಷ ಶ್ರೀಮತಿ ಕೃಪಾದೇವಿ ಎಂಬಾಕೆಯವರು ಸೇರಿ ಎರಡನೆಯ ಸ್ಥಾನವನ್ನು ಪಡೆದಿರುವರು.

ಅಮೃತಸರದ ಆಶಾನಂದ ದುಗಲ್ ಎಂಬವರು ಮೃತ್ಯುಲೇಖ ಮೂಲವಾಗಿ ಸನಾತನ ಧರ್ಮೀಯರಾದ ಹಿಂದೂ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ೫೦ ಸಾವಿರ ರೂಪಾಯಿ ಕೊಟ್ಟಿರುವರು. ಇದರ ಬಡ್ಡಿಯಿಂದ ಪ್ರತಿ ವರ್ಷವೂ ವಿದ್ಯಾರ್ಥಿ ವೃತ್ತಿಗಳು ಕೊಡಲಾಗುವುವು.

ಪ್ರಸಿದ್ಧ ವಂಗ ಕವಿಪುಂಗವರೂ, ನಾಟಕಕಾರರೂ ಆಗಿ ಗತಿಸಿದ ಶ್ರೀಯುತ ಗಿರೀಶಚಂದ್ರ ಘೋಷರವರಿಗೆ ಸ್ಮಾರಕವನ್ನೇರ್ಪಡಿಸುವುದಕ್ಕಾಗಿ ಗೊತ್ತಾಗಿದ್ದ ಕಮಿಟಿಯವರು ಆ ಮಹನೀಯರ ಒಂದು ಸರ್ಮದಾಶಿಲೆಯ ಅರ್ಧ ಪ್ರತಿಮೆ (ಬಸ್ಟ್) ಮಾಡಿಸಬೇಕೆಂದು ನಿರ್ಣಯಿಸಿ ಆ ಕೆಲಸವನ್ನು ಬೊಂಬಾಯಿಯ ಕುಶಲ ಶಿಲ್ಪಕಾರರಾದ ಮಿ। ಎ ಎ ವಾಘುರವರಿಗೆ ಒಪ್ಪಿಸಿರುವರು. ಗಿರೀಶ ಬಾಬುಗಳು ಕ್ರಿ ಶ ೧೮೪೪ರಲ್ಲಿ ಕಲ್ಕತ್ತೆಯಲ್ಲಿ ಹುಟ್ಟಿದರು. ಈ ಮಹಾಶಯರು ಬಂಗಾಳೀ ನಾಟ್ಯಕಲೆಯ ಜನಕರಾಗಿದ್ದು ಕಳೆದ ನಲವತ್ತು ವರ್ಷಗಳ ಕಾಲ ಆ ಕಲೆಯೊಡನೆ ನಿಕಟವಾದ ಸಂಬಂಧವುಳ್ಳವರಾಗಿದ್ದರು. ಇವರು ಸುಮಾರು ಎಂಬತ್ತು ನಾಟಕಗಳನ್ನು ಬರೆದಿರುವರು. ಇವರ ನಾಟಕಗಳೂ, ನಾಟಕಶಾಲೆಯೂ ಮಹಾಜನರಿಗೆ ಬಹು ಪ್ರಿಯವಾಗಿದ್ದುವು. ನಾಟಕದ ವೇಷಧಾರಿಯಾಗಿ ಇವರು ಪ್ರಥಮ ಸ್ಥಾನವನ್ನು ಪಡೆದು ಬಂಗಾಳದ ಗೆರ್‍ರಿಕ್ (Garrick) ಎಂದು ಕರೆಯಲ್ಪಡುತ್ತಿದ್ದರು. ಇವರಿಗೆ ಬ್ರಹ್ಮೀಭೂತರಾದ ಶ್ರೀ ರಾಮಕೃಷ್ಣ ಪರಮಹಂಸರ ವಿಷಯದಲ್ಲಿ ಅನನ್ಯಸಾಧಾರಣವಾದ ಭಕ್ತಿ ಇದ್ದಿತು. ಈ ಕವಿಶ್ರೇಷ್ಠರು ಕಳೆದ ೧೯೧೨ರಲ್ಲಿ ಕಲ್ಕತ್ತೆಯಲ್ಲಿ ಮರಣ ಹೊಂದಿದರು.

ಮಧ್ಯ ತಿರುವಂಕೋಡಿನ ಕಾಯಂಕುಳ ಎಂಬಲ್ಲಿ ಸ್ತ್ರೀಯರ ಹಿತಾರ್ಥವಾದ ಅನೇಕ ವಿಷಯಗಳು ಅಚ್ಚಾಗತಕ್ಕ 'ಸುಮಂಗಲಾ' ಎಂಬ ಮಾಸಪತ್ರಿಕೆಯು ಕ್ಷಿಪ್ರದಲ್ಲಿಯೇ ಹೊರಡುವುದೆಂದು ತಿಳಿಯಬರುತ್ತಿದೆ.

ಕೆಲವು ತಿಂಗಳ ಹಿಂದೆ ಮಾಸಪತ್ರಿಕೆಯಾಗಿ ಹುಟ್ಟಿ ಮೂರು ತಿಂಗಳೊಳಗೆ ನಿಂತು ಹೋಗಿದ್ದ ಬಳ್ಳಾರಿಯ 'ಭಾರತೀ' ಪತ್ರಿಕೆಯು ಪುನಃ ವಾರಪತ್ರಿಕೆಯಾಗಿ ಹುಟ್ಟಿರುವ ವಿಷಯವು ಅಶೇಷ ಕರ್ನಾಟಕರಿಗೂ ಅತ್ಯಾನಂದವನ್ನುಂಟುಮಾಡಿದೆ. ಬಳ್ಳಾರಿಯು ಕನ್ನಡ ಜಿಲ್ಲೆಯೆಂಬ ವಿಷಯವು ಅಲ್ಲಿಯ ಜನರ ಮನಸ್ಸುಗಳಲ್ಲಿ ನಾಟಿಸುವ ಮತ್ತು ಕರ್ಣಾಟ ವಾಙ್ಮಯದ ವಿಷಯದಲ್ಲಿ ಅಭಿಮಾನವನ್ನು ಹುಟ್ಟಿಸುವ ಕಾರ್ಯವನ್ನು ನಮ್ಮ ಈ ಹೊಸ ಭಗಿನಿಯು ಮಾಡಬೇಕಾಗಿರುವುದು.

ಬೊಂಬಾಯಿಯ ಮರಾಟೀ ಗ್ರಂಥಸಂಗ್ರಹಾಲಯದ ೧೯ನೇ ವಾರ್ಷಿಕ ಸಭೆಯು ಕಳೆದ ಜೂನ್ ೩೦ನೆಯ ದಿನ ನಡೆದಾಗ ಅಧ್ಯಕ್ಷರಾದ ಇಂದೂರಿನ ಸರದಾರ ಮಾದವರಾವ್ ಕಿಬೇ, ಎಮ್ ಎ ಯವರು "ಅರ್ವಾಚೀನ ಮರಾಟಿ ವಾಙ್ಮಯದ ಮಾರ್ಗ"ವೆಂಬ ವಿಷಯವಾಗಿ ಮಾತನಾಡುತ್ತ ಇಂತೆಂದರು:—"ಮರಾಟಾ ರಾಜ್ಯದ ಸ್ಥಿತ್ಯಂತರಗಳು ಬಹು ತ್ವರೆಯಾಗಿಯೂ ಅಲ್ಪಾವಕಾಶದೊಳಗಾಗಿಯೂ ಆದ ರೀತಿಯಾಗಿಯೇ ವಿವಿಧವಾದ ಮರಾಟೀ ವಾಙ್ಮಯವು ಕೂಡ ಅದೇ ಪ್ರಕಾರ ಹುಟ್ಟಿ ಬೆಳೆದು ನಿರ್ನಾಮವಾಯಿತು. ಕಳೆದ ೧೦—೧೨ ವರ್ಷಗಳ ಕಾಲದಲ್ಲಿ ಮರಾಟಿಯೊಳಗೆ ಉತ್ಕೃಷ್ಟವಾದ ಗ್ರಂಥಗಳು ಹುಟ್ಟತೊಡಗಿವೆ. ಇತ್ತಿತ್ತಲಾಗೆ ನಿಯತ ಕಾಲಗಳಲ್ಲಿಯೂ, ಪುಸ್ತಕಗಳಲ್ಲಿಯೂ ಕಥೆಗಳೂ, ಕವಿತೆಗಳೂ, ಉಪನ್ಯಾಸಗಳೂ ಮುಂತಾದ ಹಲವು ತೆರನಾದ ಲೇಖನಗಳು ಬರುತ್ತಿವೆಯಾಗಿ ಸಮಸ್ತ ಜನರ ಅಭಿರುಚಿಯೂ ತೃಪ್ತಿಯಾಗುತ್ತಲಿದೆ. ಜನರಲ್ಲಿ ವಾಚನೇಚ್ಛೆಯು ಉಂಟಾಗಿ ಪ್ರಬಲವಾಗುತ್ತಿದೆ. ಇದು ಸಾಮಾನ್ಯವಾದ ಸಂಗತಿಯಲ್ಲ. ಬಗೆಬಗೆಯ ಇಂಥ ವಾಙ್ಮಯದ ಸುಪರಿಣಾಮವು ಜನಸಮಾಜದ ಮೇಲೆ ಉಂಟಾಗದಿರದು. ಈಗಳಿನ ವಾಙ್ಮಯದಲ್ಲಿ ಧರ್ಮಪರಾಯಣತೆಯು ಅಧಿಕವಾಗಿ ಕಂಡುಬರುತ್ತಿರುವುದಾದರೂ ಅರ್ವಾಚೀನ ಕಾವ್ಯಗ್ರಂಥಗಳಲ್ಲಿ ಮಾತ್ರ ಧರ್ಮದ ಹೆಸರು ಕೂಡ [illegible] ಬರುವುದಿಲ್ಲ. ಜನರ ವಾಚನ ವಿಷಯಕ ಪ್ರವೃತ್ತಿಗೆ ಒಳ್ಳೆಯ ದಿಶೆಯನ್ನು [illegible] ಕಾರ್ಯದಲ್ಲಿ ಕೆಲಕೆಲವು ಲೇಖಕರು ತೊಡಗಿರುವುದು ಸುಚಿಹ್ನವಾಗಿದೆ. ಆದರೆ ಇತ್ತಲಾಗೆ ವಾರ್ತಾಪತ್ರಿಕೆಗಳು ಮಾತ್ರ ಅವನತಿಯನ್ನು ಹೊಂದಿವೆ. ಅವನ್ನು ಮೇಲಕ್ಕೆತ್ತುವ ವಿಷಯದಲ್ಲಿ ವಿದ್ವಾಂಸರು ಪ್ರಯತ್ನಪಡುವುದು ಅ[illegible]ವಾಗಿದೆ.

ಉಡುಪಿ ಸಂಸ್ಕೃತ ಪಾಠಶಾಲೆ.

(ನಮ್ಮ ಬಾತ್ಮೀದಾರರಿಂದ)

ಈ ತಾರೀಕು ೨೬ಲ್ಲು ಈ ಪಾಠಶಾಲೆಯ ೧೨ನೇ ವರ್ಷದ ವರ್ಧಂತಿಯು ಆಚರಿಸಲ್ಪಟ್ಟಿತು. ಆ ದಿನ ಓದಿದ ಶಾಲಾ ರಿಪೋರ್ಟಿನಿಂದ ಪ್ರಕೃತ ಶಾಲೆಯಲ್ಲಿ ೧೭೦ ಮಂದಿ ವಿದ್ಯಾರ್ಥಿಯರೂ, ೧೪ ಮಂದಿ ಉಪಾಧ್ಯಾಯರೂ, ೯ ತರಗತಿಗಳೂ, ಶಿರೋಮಣಿ (ಕಾಲೇಜು) ಭಾಗದಲ್ಲಿ ಎರಡು ತರಗತಿಗಳೂ, ಒಂದು ವರ್ಷಕ್ಕೆ ಸುಮಾರು ೩,೫೦೦ ರೂಪಾಯಿ ಜಮೆಯೆಂತಲೂ ಸ್ವಲ್ಪ ಹೆಚ್ಚು ಕಡಿಮೆ ಅಷ್ಟೇ ಖರ್ಚೆಂತಲೂ, ೧೯೧೩ನೆಯ ಇಸವಿಯಲ್ಲಿ ಇದು ಕೊಲೇಜಾಗಿ ಪರಿಣಮಿಸಲ್ಪಟ್ಟಿತೆಂತಲೂ, ಒಂದು ಕಮ್ಮಿಟಿಯೂ ಏರ್ಪಟ್ಟಿರುವದೆಂತಲೂ, ಅದು ಶಾಲೆಯನ್ನು ನಡಿಸುತ್ತಿರುವದೆಂತಲೂ, ಅದಕ್ಕೆ ಮ. ರಾ. ಯು. ಸಿ. ಕೃಷ್ಣಭಟ್ಟರು ಬಿ. ಎ., ಬಿ. ಎಲ್., ಇವರು ಪ್ರೆಸಿಡೆಂಟರೆಂತಲೂ, ಡಾಕ್ಟರ್ ರಾಮಚಂದ್ರರಾಯರು ಸೆಕ್ರೆಟೆರಿಗಳೆಂತಲೂ, ಮ. ರಾ. ಕಲ್ಮಾಡಿ ಶಂಕರನಾರಾಯಣರಾಯರು ಟ್ರೆಜರರೆಂತಲೂ, ಯೋಗ್ಯರಾದ ಇತರ ೧೫ ಮಂದಿ ಮೆಂಬರರಿರುವರೆಂತಲೂ, ಉಪಾಧ್ಯಾಯರ, ವಿದ್ಯಾರ್ಥಿಗಳ ಭೋಜನ ಮೊದಲಾದ ಖರ್ಚನ್ನು ಪರ್ಯಾಯ ಮಠದವರು ನಡಿಸುತ್ತಿರುವರೆಂತಲೂ, ಇಲ್ಲಿ ವೇದಗಳು, ಸ್ತೋತ್ರಪಾಠಗಳು, ತರ್ಕ ವ್ಯಾಕರಣ, ವೇದಾಂತಗಳು ಕಲಿಸಲ್ಪಡುವದೆಂತಲೂ ವಗೈರೆ ತಿಳಿದು ಬಂತು. ಈ ದುಷ್ಕಾಲದಲ್ಲಿ ವರ್ಷಕ್ಕೆ ಕಡಿಮೆಪಕ್ಷ ೧೨ ಸಾವಿರ ರೂಪಾಯಿ (ಭೋಜನಾದಿಗಳಿಗೆ ಕೂಡ) ವೆಚ್ಚಮಾಡಿ ಇಂಥಾದ್ದೊಂದು ಪಾಠಶಾಲೆಯನ್ನು ಉಡುಪಿ ಅಷ್ಟಮಠಗಳವರು ನಡಿಸುತ್ತಿರುವರೆಂತ ತಿಳಿದು ಸರ್ವರಿಗೂ ಸಂತೋಷವಾಗದೆ ಇರಲಾರದು.

ಇಲ್ಲಿ ಒಂದು ವಿಚಾರವು ಬರುವದು. ಈ ಪಾಠಶಾಲೆಯು ಆರಂಭವಾಗಿ ೧೨ ವರ್ಷಗಳಾದವು. ಇದರಿಂದ ಯಾವ ತರದ ಫಲ ಪ್ರಾಪ್ತಿಯಾಗಿರುವದು? ಎಷ್ಟು ಮಂದಿ ಯಾವ ಯಾವದರಲ್ಲಿ ವಿದ್ವಾಂಸರಾಗಿರುವರು? ಎಷ್ಟು ಮಂದಿ ಈ ವಿದ್ಯೆಯ ಬಲದಿಂದ ಸ್ವಂತ ಜೀವನವನ್ನು ಮಾಡಿಕೊಳ್ಳುವದಕ್ಕೆ ಸಮರ್ಥರಾದರು? ಇವರು ಇತರರಿಗೆ ಯಾವ ತರದ ಉಪಕಾರವನ್ನು ಮಾಡುವದಕ್ಕೆ ಸಮರ್ಥರಾಗಿರುವರು? ಇಲ್ಲಿಯ ಮೇಲಿನ ತರಗತಿಗಳಲ್ಲಿ ವಿದ್ಯಾರ್ಥಿಗಳು ಕಡಿಮೆ ಕಡಿಮೆಯಾಗುತ್ತಾ ಬರುವದಕ್ಕೆ ಕಾರಣವೇನು? ಕೆಲವರು ಸಂಸ್ಕೃತ ವಿದ್ಯಾಭ್ಯಾಸಕ್ಕಾಗಿಯೇ ಈ ಶಾಲೆಯನ್ನು ಬಿಟ್ಟು ಮೈಸೂರು, ಅನಂತಶಯನ, (ಟ್ರಾವಂಕೂರು) ಮೊದಲಾದ ಪ್ರಾಂತ್ಯಗಳಿಗೆ ಹೋಗುವದಕ್ಕೆ ನಿಮಿತ್ತವೇನು? ಈ ೧೯೧೫ನೆ ವರ್ಷದಲ್ಲಿ ಶಿರೋಮಣಿ ಪರೀಕ್ಷೆ ಏರ್ಪಟ್ಟಿರುತ್ತಾ ಈ ಕೊಲೇಜಿನಿಂದ ವಿದ್ಯಾರ್ಥಿಗಳು ಪಿತಕ್ಕೆ ಕಳುಹಿಸಲ್ಪಡಲಿಲ್ಲ? ಬರುವ ವರ್ಷವಾದರೂ ಸಾಧ್ಯವೋ? ಅಲ್ಲವಾದರೆ ಯಾವ ಕೊರತೆಯಿಂದ ಅಸಾಧ್ಯ? ಅದರ ನಿವಾರಣೆ ಹೇಗೆ? ಬರೇ ಸಾಹಿತ್ಯ ತರ್ಕ ವೇದಾಂತಾದಿಗಳಿಂದ ಸ್ವಾವಲಂಬನವು ಸಾಧ್ಯವೋ? ಕಾಲಕ್ಷೇಪಕ್ಕೆ ಅನುಕೂಲವೂ, ಪರರಿಗೆ ಪ್ರಯೋಜನವುಳ್ಳದ್ದೂ, ವೈದಿಕ ವಿದ್ಯೆಯಲ್ಲಿಯೇ ಆಗಿರುವ ಜ್ಯೋತಿಷ, ವೈದ್ಯ, ಮಂತ್ರ, ತಂತ್ರ, ಆಗಮ, ಯಾಜ್ಞಿಕ, ಪೌರೋಹಿತ್ಯ, ಸಂಗೀತ, ಧರ್ಮಶಾಸ್ತ್ರ, ಪುರಾಣ, ಹರಿಕಥೆ ಮೊದಲಾದ ವಿದ್ಯೆಗಳನ್ನು ಕ್ರಮೇಣವಾದರೂ ಇಲ್ಲಿ ಅಭ್ಯಾಸ ಮಾಡಿಸುವ ವ್ಯವಸ್ಥೆ ಮಾಡಿಸುವದು ಅಗತ್ಯವಲ್ಲವೋ? ಒಂದುವೇಳೆ ಇದಕ್ಕೆ ಸರಕಾರದವರ ಅನುಮೋದವಿಲ್ಲದಿದ್ದರೆ ಅಂದರೆ ಅವರು ಗ್ರಾಂಟು ಕೊಡದಿದ್ದರೆ ಸ್ವಲ್ಪ ಗ್ರಾಂಟಿನ ಆಶೆಯಿಂದ ಪ್ರಯೋಜನಕರವಾದ ಪಾಠಗಳನ್ನು ಅಲಕ್ಷ್ಯಮಾಡಿ ವಿದ್ಯಾರ್ಥಿಗಳ ಜೀವನಕ್ಕೆ ತೊಡಕು ಮಾಡುವದು ಧರ್ಮವೋ? ಎಂಬಿತ್ಯಾದಿ ಅಂಶಗಳನ್ನು ಈ ಪಾಠಶಾಲೆಯ ಸ್ಥಾಪಕರೂ, ಪೋಷಕರೂ, ಹಿತಚಿಂತಕರೂ ಮನಸ್ಸಿಗೆ ತೆಗೆದುಕೊಂಡು ತಕ್ಕ ವ್ಯವಸ್ಥೆಯನ್ನು ಮಾಡುವದು ಅಗತ್ಯವಾಗಿರುತ್ತದೆ. ದಿವಸ ಹೋದ ಹಾಗೆ ಕಾಲವು ಕಠಿಣವಾಗುತ್ತಾ ಬರುತ್ತದೆ. ಜೀವನದ ಹೋರಾಟವು ಹೆಚ್ಚುತ್ತದೆ. ಕ್ರಮವಾಗಿ ತೇರ್ಗಡೆಯಾಗುವವನು ತನ್ನ ಹತ್ತನೆ ವಯಸ್ಸಿನಲ್ಲಿ ಈ ಪಾಠಶಾಲೆಗೆ ಸೇರಿ ಸುಮಾರು ೨೦ನೆಯ ವಯಸ್ಸಿನಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ಬರಬಹುದು. ಇಷ್ಟು ವರ್ಷ ಅಭ್ಯಾಸಮಾಡಿದರೂ ಎಲ್ಲಿಯಾದರೂ ಉಪಾಧ್ಯಾಯನಾಗಿ ಇರಬಹುದಲ್ಲದೆ ಬೇರೆ ಯಾವ ತರದ ಜೀವನಮಾರ್ಗವೂ ಸಾಧ್ಯವಾಗಲಾರದು. ಈ ಪ್ರಕಾರ ೧೨ ಸಾವಿರ ರೂಪಾಯಿ ಪ್ರತಿವರ್ಷ ವೆಚ್ಚಮಾಡಿ ಅಭ್ಯಾಸ ಮಾಡಿಸುವ ಪಾಠಶಾಲೆಯಲ್ಲಿ ಜೀವನೋಪಾಯದ ವಿದ್ಯೆಗೆ ಎಡೆಯಿಲ್ಲದೆ ಹೋದರೆ ಎಷ್ಟು ದುಃಖವಾಗುವದು! [illegible]ಯ ಮಠದವರಿಗೆ ಬೇರೆ ಎಷ್ಟೋ ಖರ್ಚುಗಳಿರುತ್ತಾ ಈ ಪಾಠಶಾಲೆ ಒಂದಕ್ಕೆ [illegible]ಗಳಿಗೆ ಹೆಚ್ಚು ಕಡಿಮೆ ಒಂದು ಸಾವಿರ ರೂಪಾಯಿ ಖರ್ಚುಮಾಡಬೇಕೆಂಬದು ಸಾಧಾರಣ ಭಾರವಲ್ಲ. ಕೆಲವು ಮಠಗಳಿಗೆ ಮಾತ್ರ ಇದು ಭಾರವಾಗಲಾರದಲ್ಲದೆ ಹೆಚ್ಚಿನವರಿಗೂ ಬಹಳ ಕಷ್ಟವಾಗುವದು. ಎಷ್ಟು ಕಷ್ಟವಾದರೂ ಕೊನೆಯ ಪರಿಣಾಮವೂ ಸಫಲವಾಗುವಂತಿದ್ದರೆ ಸಂತೋಷವೇ. ಹಾಗಲ್ಲದೆ ಹೋದರೆ ಮತ್ತಷ್ಟು ದುಃಖಕ್ಕೆ ಕಾರಣವಾಗುವದು.

ಈ ವಿದ್ಯಾಶಾಲೆಯು ಸ್ಥಾಪಿಸಲ್ಪಡುವದಕ್ಕಾಗಲಿ, ಈ ವರೆಗೆ ನಡೆದುಬರುವದಕ್ಕಾಗಲಿ, ಮುಖ್ಯ ಕಾರಣಭೂತರು ಶ್ರೀ ಅದಮಾರು ಶ್ರೀ ಪಾದಂಗಳವರೆಂಬದು ಸರ್ವರಿಗೂ ವಿದಿತವಾಗಿಯೇ ಇರುವದು. ಇವರ ಭೂವಿಭ್ರಮ ಮಾತ್ರದಿಂದ ಇದು ತಲೆ ಕೆಳಗಾಗುವದಕ್ಕೂ ಅಡ್ಡಿಯಿಲ್ಲ. ಕಿರುಬೆರಳಿನ ಸನ್ನೆಯಿಂದ ಅತ್ಯುನ್ನತ ಸ್ಥಾನವನ್ನು ಪಡೆಯುವದಕ್ಕೂ ಆತಂಕವಿಲ್ಲ. ಇವರ ದಾಕ್ಷಿಣ್ಯಕ್ಕಾಗಿಯೇ ಇತರ ಶ್ರೀ ಪಾದಂಗಳವರು ಮೊದಲು ಕೊಡುತ್ತಿದ್ದ ಸಹಾಯದ್ರವ್ಯದ ನಾಲ್ಕರಷ್ಟು ಈಗ ಕೊಡುತ್ತಿರುವರು. ಆದುದರಿಂದ ಇದನ್ನು ಸುವ್ಯವಸ್ಥೆಗೆ ತಂದು ಪುಣ್ಯಕೀರ್ತಿಗಳಿಗೆ ಪಾತ್ರರಾಗಬೇಕಾಗಿ ವಿನಂತಿ.

ಹಿಂದೀ ಸಾಹಿತ್ಯ ಪರಿಷತ್ತು.

ಕಳೆದ ಸಂಚಿಕೆಯಿಂದ ಮುಂದರಿಸಿದುದು.

ಹಾಗೆಯೇ ಅಧ್ಯಕ್ಷರು ತಮ್ಮ ಭಾಷಣದಲ್ಲಿ, "ಹಿಂದೀ ಸಾಹಿತ್ಯವನ್ನು ಸಮಸ್ತ ಭರತಖಂಡದ ರಾಷ್ಟ್ರೀಯ ಸಾಹಿತ್ಯವನ್ನಾಗಿ ಮಾಡತಕ್ಕ ಉದಾತ್ತವಾದ ಧ್ಯೇಯವನ್ನು ಹಿಂದೀ ಗ್ರಂಥರಚಕರು ತಮ್ಮ ಮುಂದೆ ಇಟ್ಟುಕೊಂಡಿರತಕ್ಕದೆಂದೂ, ದೇಶಭಕ್ತಿ ಪ್ರೇರಿತರಾಗಿ ವಿವಿಧ ಜಾತಿಯವರೂ ಧರ್ಮಾನುಯಾಯಿಗಳೂ ಏಕಪ್ರಕಾರವಾದ ರಾಷ್ಟ್ರಪ್ರೇಮದಿಂದ ಬದ್ಧರಾಗತಕ್ಕಂಥ ಉತ್ಕೃಷ್ಟವಾದ ಸಾಹಿತ್ಯವನ್ನು ಲೇಖಕರು ನಿರ್ಮಿಸಬೇಕೆಂದೂ, ಇದೇ ಅಭಿಪ್ರಾಯದಿಂದ ಕವಿಗಳಾದವರು ತಮ್ಮ ಪ್ರತಿಭೆಯಿಂದ ಭಾಷೆಯನ್ನು ವಿಕಾಸಗೊಳಿಸಲು ಪ್ರಯತ್ನಿಸತಕ್ಕದೆಂದೂ, ಬಹು ಗಂಭೀರವಾದ ಉಪದೇಶವನ್ನು ಮಾಡಿದರು.

ತದನಂತರ ಗತವರ್ಷದಲ್ಲಿ ಪ್ರಚುರವಾದ ಹಲವು ಗದ್ಯಪದ್ಯಗಳನ್ನು ಅಧ್ಯಕ್ಷರು ಸಂಕ್ಷಿಪ್ತವಾಗಿ ಪರಿಶೀಲಿಸಿ ಮಾತನಾಡಿದರು. ಇಂಥ ಗ್ರಂಥಗಳೊಳಗೆ "ಮಿಶ್ರಬಂಧು ವಿನೋದ"ವೆಂಬ ಗ್ರಂಥವು ಬಹು ಪ್ರಮುಖವಾಗಿದೆ. ೧೨೦೦ ಪುಟಗಳುಳ್ಳ ಈ ಗ್ರಂಥವು ಇದುವರೆಗೆ ಆಗಿಹೋದ ಹಿಂದೀ ಕವಿಗಳೊಳಗೆ ಸುಮಾರು ನಾಲ್ಕು ಸಾವಿರ ಕವಿಗಳ ಚರಿತ್ರಸಾರವನ್ನೂ, ಅವರವರ ಕವಿತೆಯ ಉದಾಹರಣೆಗಳನ್ನೂ ಒಳಕೊಂಡಿದೆ. ತೋರುವ ಮಟ್ಟಿಗೆ ನೋಡಿದವರಿಗೆ ಕೂಡ ಈ ಗ್ರಂಥದ ಮೂಲಕ ಹಿಂದೀ ಭಾಷೆಯ ಯೋಗ್ಯತೆ, ಕವಿತಾಭಾಂಡಾರ, ಅರ್ಥಕ್ಷಮತೆ ಮುಂತಾದ ಅನೇಕ ವಿಷಯಗಳು ಮನಸ್ಸಿಗೆ ಹೊಳೆಯದಿರವು.

ಕೊನೆಗೆ, "ನೂತನವಾಗಿ ಪ್ರಚುರವಾಗುವ ಗ್ರಂಥಗಳಲ್ಲಿ ಎಷ್ಟೋ ಗ್ರಂಥಗಳು ಸಮಾಜೋನ್ನತಿಗೆ ಹಾನಿಕಾರಕಗಳಾಗಿರುವುವೆಂದೂ, ಅವನ್ನು ಸಕಾಲದಲ್ಲಿಯೇ ಸಮಾಲೋಚಿಸಿ ಅವುಗಳ ನಿಜವಾದ ಮೌಲ್ಯವನ್ನು ಜನರಿಗೆ ತಿಳಿಯಗೊಡುವುದು ಪರಿಷತ್ತಿನ ಕರ್ತವ್ಯವೆಂದೂ, ಈ ಕಾರ್ಯವನ್ನು ಹಿಂದೀ ಪರಿಷತ್ಪತ್ರಿಕೆಯಲ್ಲಿ ಆಗಿಂದಾಗ ಮಾಡಲು ತೊಡಗಿರುವರೆಂದೂ, ಹಿಂದೀ ಭಾಷೆಗಾಗಿ ನಿಯಮ ಬದ್ಧವಾದ ಒಂದು ವ್ಯಾಕರಣವನ್ನು ಬರೆಯಿಸತಕ್ಕದೆಂದೂ, ಸಂಸ್ಕೃತದ ಆಶ್ರಯವನ್ನೇ ಮುಖ್ಯವಾಗಿ ಅವಲಂಬಿಸಿ ಹಿಂದೀ ಭಾಷೆಯನ್ನು ಬೆಳೆಯಿಸಬೇಕೆಂದೂ" ಸೂಚಿಸಿ ಅಧ್ಯಕ್ಷರು ತಮ್ಮ ಭಾಷಣವನ್ನು ಮುಗಿಸಿದರು.

ಸಮ್ಮೇಲನದ ಎರಡನೆಯ ಮತ್ತು ಮೂರನೆಯ ದಿನಗಳಲ್ಲಿ ಹಲವು ನಿರ್ಣಯಗಳು ಅಂಗೀಕರಿಸಲಾದವು. ಇವುಗಳೊಳಗೆ (೧) ನೋಟುಗಳ ಮತ್ತು ನಾಣ್ಯಗಳ ಮೇಲೆ ನಾಗರೀ ಲಿಪಿಯಿಂದ ಬೆಲೆಯನ್ನು ಬರೆಯಬೇಕೆಂಬ, (೨) ಪ್ರಾಥಮಿಕ ಶಿಕ್ಷಣವನ್ನು ಹಿಂದೀಯ ದ್ವಾರಾ ಕೊಡಬೇಕೆಂಬ, (೩) ಹಿಂದೀ ಟೆಕ್ಸ್ಟ ಬುಕ್ ಕಮಿಟಿಯೆಂಬ ಪಠ್ಯಪುಸ್ತಕೋಪಸಭೆಯಲ್ಲಿ ಹಿಂದೀ ಪಂಡಿತರನ್ನು ನೇಮಿಸಬೇಕೆಂಬ, (೪) ವಿಶ್ವವಿದ್ಯಾಲಯದ ಉಚ್ಚ ಪರೀಕ್ಷೆಗಳಿಗೆ ಹಿಂದೀಯನ್ನು ದ್ವಿತೀಯ ಭಾಷೆಯಾಗಿ ಓದಿಕೊಳ್ಳಲು ಅಪ್ಪಣೆ ಇರಬೇಕೆಂಬ, ಮತ್ತು (೫) ಹಿಂದೂಸ್ಥಾನದ ಯೂನಿವರ್ಸಿಟಿಗಳಲ್ಲಿ ಹಿಂದೀ ಭಾಷಾ ಮೂಲಕವಾಗಿ ಶಿಕ್ಷಣವನು ಕೊಡಬೇಕೆಂಬ ನಿರ್ಣಯಗಳು ಮುಖ್ಯವಾಗಿದ್ದುವು.

ಪತ್ರವ್ಯವಹಾರ.

ಪರಸ್ಪರ ಸಹಾಯ ಸಂಘದವರಿಗೆ ಎಚ್ಚರ.

ಅಯ್ಯಾ ಪತ್ರಕರ್ತರೇ,

ಕಳೆದ ಆಗೋಸ್ತು ೨೧ನೇ ತಾರೀಕಿಗೆ ಉಡುಪಿಯಲ್ಲಿ ನಡೆದ ಉಡುಪಿ ಪರಸ್ಪರ ಸಹಾಯ ಸಂಘದ ಮಹಾಸಭೆಯಲ್ಲಿ ಚರ್ಚೆಗೆ ಬಂದ ಇನ್ನೂ ಕೆಲವು ವಿಷಯಗಳನ್ನು ಪ್ರಕಟಿಸುವೆನೆಂದು ಕಳೆದ ನನ್ನ ಪತ್ರದಲ್ಲಿ ಸೂಚಿಸಿದೆನು. ಉಡುಪಿ ಸಂಘವು ಯಾವುದೊಂದು ರೀತಿಯಿಂದ ಅವಮಾನವಾಡುವುದಾಗಲಿ, ತುಚ್ಛ [illegible]

ತಲೆ ನನ್ನ ಮತವಲ್ಲ. ಅಲ್ಲಿ ಕಣ್ಣಿಗೆ ಹೊಳೆದ ಕುಂದುಕುಗಳನ್ನು ಅವರು ದುರುಸ್ತಿ ಮಾಡುವದಲ್ಲದೆ ಇತರ ಸಭೆಗಳಲ್ಲಿಯೂ ಅಂಥಾ ಸಂಗತಿಗಳು ಬರಬಾರದೆಂದು ನನ್ನ ಸೂಚನೆ. ಈಗ ಮೇಲಿನ ಸಭೆಯಲ್ಲಿ ಚರ್ಚೆಗೆ ಬಂದ ಇನ್ನೊಂದು ಅಂಶವು ಯಾವುದೆಂದರೆ—ಒಬ್ಬ ಮೆಂಬರನು ೧೦ ಪಾಲುಗಳನ್ನು ಪಡೆದಲ್ಲಿ ಒಂದೊಂದು ಪಾಲಿಗೆ ೧೦೦ ರೂಪಾಯಿ ಮೇರೆಗೆ ೧೦೦೦ ರೂಪಾಯಿ ಸಾಲಕೊಡಬಹುದು ಎಂಬ ಈ ಮುಂಚೆ ಮಂಜೂರಾಗಿದ್ದ ನಿರ್ಣಯವನ್ನು ಬದಲಾವಣೆ ಮಾಡಿ ಯಾವನೊಬ್ಬನು ಮೂರು ಪಾಲುಗಳಿಗಿಂತ ಹೆಚ್ಚಿಗೆ ತೆಗೆದುಕೊಳ್ಳಕೂಡದೆಂತಲೂ ಅವನಿಗೆ ೩೦೦ ರೂಪಾಯಿಗೆ ಮೀರಿ ಸಾಲ ಸಿಕ್ಕಬಾರದೆಂತಲೂ ಒಬ್ಬರು ಚರ್ಚಿಸಿದರು. ಇದಕ್ಕೆ ಅವರು ಕೊಟ್ಟ ಕಾರಣಗಳಿಂದ ಗ್ರಹಚ್ಛಿದ್ರಗಳು ಕೆಲವು ಬಯಲಾಗುತ್ತಿವೆ. ಕೆಲವು ಗೃಹಸ್ಥರು ತಮ್ಮ ಹೆಸರಿನಿಂದಲೂ ತಮ್ಮ ಅಣ್ಣ ತಮ್ಮಂದಿರ, ಸೆಂಟರಿಷ್ಟರ ಹೆಸರಿನಿಂದಲೂ ಪಾಲುಗಳನ್ನು ತೆಗೆದುಕೊಂಡಿರುವರು. ಅವರ ಮೇಲೆ ಹೀಗೆ ಒಂದೊಂದು ಸಲ ಮೂರು ಯಾ ನಾಲ್ಕು ಸಾವಿರ ರೂಪಾಯಿ ಸಾಲ ನಿಲ್ಲುವುದು ಸರಿಯಲ್ಲ. ಇದಲ್ಲದೆ ಇವರ ಅರ್ಜಿಗಳಿಂದ ಬಡಜನರಿಗೆ ಸಾಲಸಿಕ್ಕುವುದಕ್ಕೆ ಫಂಡಿನಲ್ಲಿ ಹಣ ಒದಗುವುದಿಲ್ಲ. ಮತ್ತು ಯಾವ ಸಂಸ್ಥೆಯು ಬಡಜನರನ್ನು ಸಾಲದ ಅಮುಕಾಟದಿಂದ ವಿಮೋಚನೆ ಪಡಿಸುವಂತೆ ಕಟಿಬದ್ಧವಾಗಬೇಕಿತ್ತೊ, ಅಂಥಾ ಸಂಸ್ಥೆಯು ದುರುಪಯೋಗವಾಗುತ್ತದೆ ಎಂದು ಅವರು ವಾದಿಸಿದಾಗ ಅದಕ್ಕೆ ಪ್ರತಿಕೂಲವಾದ ಉತ್ತರವು ಪಂಚಾಯತರ ಕಡೆಯಿಂದ ಸಮರ್ಪಕವಾಗಿ ಹೊರಡಲಿಲ್ಲ. "ಬಿಲದಿಂದ ಹೆಗ್ಗಣವು ಹೊಲಕ್ಕೆ ಬಿತ್ತು" ಎಂದು ನಾವು ಒಪ್ಪುವುದಾದರೆ ಇದು ನಿಂದಾಸ್ಪದವಾಗಿದೆ. ಪರಸ್ಪರ ಸಹಾಯ ಸಂಘವು ಎಂದೆಂದಿಗೂ "ಬೇಂಕು" ಅಲ್ಲ. ಬೇಂಕಿನ ಕರ್ತವ್ಯಗಳೇ ಬೇರೆ, ಪರಸ್ಪರ ಸಹಾಯ ಸಂಘದ ಉದ್ದೇಶವೇ ಬೇರೆ. ಅವುಗಳೊಳಗೆ ಅಜಗಜಾಂತರವಿದೆ. ಬೇಂಕಿನಂತೆ ಬಲು ಭದ್ರವಾದ ಜಾಮೀನು ಜವಾಬ್ದಾರಿಗಳ ಮೇಲೆ ಹಣಕೊಡುವ ಉದ್ದೇಶವು ಪರಸ್ಪರ ಸಹಾಯ ಸಂಘಕ್ಕೆ ಸಂಬಂಧಪಟ್ಟಿಲ್ಲ. ಒಂದು ಪರಸ್ಪರ ಸಹಾಯ ಸಂಘವು ನಿಜವಾಗಿಯೂ ಉಪಕಾರಿಯಾಗಿದೆ ಎಂದು ತಿಳಿಯಬೇಕಾದರೆ ಅದು ಕೊಟ್ಟಿರುವ ಸಣ್ಣ ಸಾಲಗಳ ಮೊಬಲಗು ಹೆಚ್ಚಾಗಿರುವುದೇ ನಿದರ್ಶನವಾಗಿದೆ. ಫಂಡಿನಲ್ಲಿ ಒದಗಿದ ಹಣವನ್ನು ಮೇಲೆ ತರ್ಕಿಸಿದವರು ಹೇಳುವಂತೆ ಕೆಲವರು ಮಾತ್ರ ಮೇಲೆ ಹೇಳಿದ ಸಂಶಯಾಸ್ಪದವಾದ ಉಪಾಯಗಳಿಂದ ತಮ್ಮೊಳಗೆ ಸಾಲವಾಗಿ ಹಂಚಿಕೊಂಡರೆ ಅದು ಪರಸ್ಪರ ಸಹಾಯ ಸಂಘವಾಯಿತೋ ಬೇಂಕಾಯಿತೋ ವಾಚಕರೇ ಊಹಿಸಲಿ. ಇದನ್ನು ಆಲೋಚಿಸುವಾಗ ಮ|| ರಾ|| ತಾಳಮಕ್ಕಿ ಬಿ. ಎ. ಎಲ್. ಎಲ್. ಬಿ. ಇವರು ಪರಸ್ಪರ ಸಹಾಯ ಸಂಘಗಳ ಮಂಗಳೂರಿನಲ್ಲಿ ನಡೆದ ಪರಿಷತ್ತಿನ ಪರವಾಗಿ ಬರೆದು ಕಳುಹಿಸಿದ ಪತ್ರದಲ್ಲಿ ಬರೆದ ಒಂದು ಮಾತು ನೆನಪಿಗೆ ಬರುತ್ತದೆ. ನಿಷ್ಕಾರಣವಾಗಿ ಫಕ್ಕನೆ ಪರಸ್ಪರ ಸಹಾಯ ಸಂಘದವರು ಬಡ್ಡಿಯ ದರವನ್ನು ಆಯಾಯ ಪಟ್ಟಣದಲ್ಲಿ ಅಥವಾ ಊರಿನಲ್ಲಿ ವಾಡಿಕೆಯಾಗಿರುವ ಬಡ್ಡಿಯ ದರಕ್ಕಿಂತ ಕಡಿಮೆ ಮಾಡಿದ್ದು ಸರಿಯುಲ್ಲವೆಂದು ಅವರು ಚರ್ಚಿಸುತ್ತಾರೆ. ಹೀಗೆ ತಗ್ಗಿಸಿದ ಕಾರಣದಿಂದ ಯಾವ ಪರಸ್ಪರ ಸಹಾಯ ಸಂಘದ ಮೆಂಬರರು ಸಹಕಾರ ತತ್ವಗಳನ್ನು ಅಗಿದು ಜಗಿದು ತಮ್ಮ ಆತ್ಮೀಯ ವಸ್ತುವಾಗಿ ಮಾಡಿಕೊಳ್ಳುವರೊ ಅಂಥವರಿಗೆ ಆ ತತ್ವಜ್ಞಾನದ ಫಲವಾಗಿ ಸಿಕ್ಕಬೇಕಾದ ಪ್ರತಿಫಲವನ್ನು ಅಂಥಾ ಯೋಗ್ಯತೆಯೂ ಇನ್ನೂ ಅವರಲ್ಲಿ ಹುಟ್ಟದೆ ಅವರು ಸಂಘಕ್ಕೆ ಬರೇ ಮೆಂಬರರಾದಷ್ಟಕ್ಕೆ ಅವರಿಗೆ ಸಿಕ್ಕುವುದು ಎಂದರೆ ತಕ್ಕ ಸಾಧನೆಯು ಇಲ್ಲದೆ ಮೋಕ್ಷಸಿಕ್ಕಿದಂತಾಯಿತು ಎಂದು ಅವರ ಅಭಿಪ್ರಾಯ. ಈಗ ಈ ಸಂಘದ ಹಣವು ಸಾಹುಕಾರರಲ್ಲಿ ಕೆಲವರಿಗೆ ಮಾತ್ರ ಹೆಚ್ಚಿನ ಸಂಖ್ಯೆಯಲ್ಲಿ ದೊರಕುವುದರಿಂದ ಇತರ ಬಡಜನರಿಗೆ ಫಕ್ಕನೆ ಸಿಕ್ಕುವುದಿಲ್ಲವೆಂದರೆ ತಾಳಮಕ್ಕಿಯವರು ಹೇಳಿದ ಮಾತು ಸರಿಯಾಯಿತು. ಯಾಕಂದರೆ ಈ ಸಾಹುಕಾರರು ತಮ್ಮ ಸ್ಥಿರಚರ ಸೊತ್ತುಗಳ ಜವಾಬ್ದಾರಿಯನ್ನು ಕೊಡದೆ ಬೇರೆ ಕಡೆಯಲ್ಲಿ ೧೨ರ ಸಲೆಗಿಂತ ಕಡಿಮೆ ಬಡ್ಡಿಗೆ ಹಣ ಒದಗಲಾರದು. ಅವರಿಗೆ ಈ ಸಂಘಕ್ಕೆ ಸೇರಿದ ಮಾತ್ರದಿಂದಲೇ ತಮಗೆ ಬೇಕಾದ ಗ್ರಹಸ್ಥರ ಬರೇ ದಸ್ಕತಿನ ಮೇಲೆ ಅಗತ್ಯವಿರುವ ಹಣ ಸುಲಭಬಡ್ಡಿಯಲ್ಲಿ ಸಿಕ್ಕುವಂತಾಯಿತು. ಈ ಸಾಹುಕಾರರು ಅಮಿತ ಜವಾಬ್ದಾರಿಯ ಭಾರವನ್ನು ವಹಿಸಿದ ಕಾರಣ ಬಡ ಜನರಿಗೋಸ್ಕರ ಅವರು ತಮ್ಮ ಆಸ್ತಿಪಾಸ್ತಿಗಳನ್ನು ಸಂಘದ ವಹಿವಾಟಿಗೆ ಇಡುಕೊಟ್ಟಿರುತ್ತಾರಲ್ಲವೆ ಎಂದು ಒಬ್ಬ ಗೃಹಸ್ಥರು ಆ ಸಭೆಯಲ್ಲಿ ತರ್ಕಿಸಿದರು. ಸಾಹುಕಾರರಿಗೆ ಈ ಸಂಘದಿಂದ ದ್ರವ್ಯಾನುಕೂಲ ಒದಗಬಾರದೆಂದೂ ಅವರು ಬಡವರ ಸಹಾಯಾರ್ಥವಾಗಿಯೇ ತಮ್ಮ ಆಸ್ತಿಪಾಸ್ತಿಯನ್ನು ಸಂಘಕ್ಕೆ ಈಡುಕೊಡ [illegible] ನನ್ನ ಅಭಿಪ್ರಾಯವಲ್ಲ. ಉಡುಪಿ ದೊಡ್ಡ ಶಹರು, ಅಲ್ಲಿ ವ್ಯಾಪಾರಕ್ಕೆ [illegible] ಒದಗಿದಷ್ಟಕ್ಕೆ ಬಡಜನರಿಗೇನೇ [illegible] ಅನುಕೂಲ, ಆದರೆ ಸಂಘಕ್ಕೆ ಸೇರುವವರು ಅದಕ್ಕೆ ಸಂಬಂಧವಾದ ನಿರ್ಣಯಗಳನ್ನು ಯಾವ ಉಪಾಯದಿಂದ ತಪ್ಪಿಸಿಕೊಳ್ಳಬೇಕು ಎಂದು ಆಲೋಚಿಸುವುದರಲ್ಲಿ ಮೆದುಳು ಖರ್ಚು ಮಾಡುವುದು ಸರಿಯಲ್ಲ. ಸಾಲವು ಯಾವ ಕೆಲಸಕ್ಕೋಸ್ಕರ ಪಡೆದಿರುತ್ತದೋ ಅದಕ್ಕೇನೇ ಅಲ್ಲದೆ ಇತರ ಕೆಲಸಗಳಿಗೆ ದುರ್ವಿನಿಯೋಗ ಮಾಡಬಾರದು ಎಂದು ನಿಯಮವಿದೆ. ಆಗ ಯಾರೊಬ್ಬರ ಹೆಸರಿನಲ್ಲಿಯಾದರೂ ಪಡೆದು ಇನ್ನೊಬ್ಬನು ಅದನ್ನು ಉಪಯೋಗಿಸಿದರೆ ಅದು "ರೂಲ್" ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದಂತಾಗುವುದಲ್ಲವೇ? ಇದಲ್ಲದೆ ಸಭೆಯಲ್ಲಿ ಚರ್ಚಿಸಿದವರು (ಅವರು ಹೇಳಿದ ಅಭಿಪ್ರಾಯಕ್ಕೆ ನಾನು ಜವಾಬ್ದಾರನಲ್ಲ) ಹೇಳಿದ ಮಾತು ನಿಜವಾಗಿದ್ದರೆ ಒಂದೇ ಕುಟುಂಬದವರು ೩ ಯಾ ೪ ಸಾವಿರ ರೂಪಾಯಿ ತಮ್ಮೊಳಗೆ ಹಂಚಿಕೊಂಡರೆ, ಒಬ್ಬನು ತನ್ನ ಮನೆಯಲ್ಲಿ ಆಗುವ ಒಂದು ಭೋಜನಕ್ಕೆ ತಂದೆಯನ್ನು ಬ್ರಾಹ್ಮಣನಾಗಿಯೂ ತಾಯಿಯನ್ನು ಸುವಾಸಿನಿಯಾಗಿಯೂ ಗಂಧಪುಷ್ಪಾದಿ ಪೂಜೆಮಾಡಿ ದಕ್ಷಿಣೆ ತನ್ನ ಹರಿವಾಣದಲ್ಲಿಯೇ ಹಾಕಿಕೊಂಡನೆಂಬ ನಾಣ್ನುಡಿಗೆ ಸರಿಯಾಯಿತಲ್ಲವೇ? ಇದು ಸಲ್ಲದು. ಇದು ಪರಸ್ಪರ ಸಹಾಯದ ತತ್ವವೇ ಅಲ್ಲ. ಪರಸ್ಪರ ಸಹಾಯ ಸಂಘವು ಜನರಲ್ಲಿ ಪ್ರಾಮಾಣಿಕತೆಯನ್ನೂ, ಮನೋಶುದ್ಧತೆಯನ್ನೂ, ಬಡಜನರಲ್ಲಿ ಭೂತದಯೆಯನ್ನೂ ಹುಟ್ಟಿಸದಿದ್ದರೆ ಅದು ಬರೇ ಬೇಂಕು ಆಯಿತು.

ಇದಕ್ಕಿಂತಲೂ ವಿಷಾದಕರವಾದ ಸಂಗತಿಯೂ ಪಂಚಾಯತರನ್ನು ಚುನಾಯಿಸುವ ರಠಾವಿನಲ್ಲಿ ಗೊತ್ತಾಯಿತು. ಉಡುಪಿಯ ಸಂಘಕ್ಕೆ ಸೇರಿದ ಪ್ರಾಮುಖ್ಯ ಜಾತಿಗಳಲ್ಲಿ ಒಂದೊಂದು ಜಾತಿಯಿಂದ ಒಬ್ಬೊಬ್ಬನನ್ನು ಪಂಚಾಯತನಾಗಿ ಆರಿಸಬೇಕೆಂದು ಒಬ್ಬರು ಸೂಚಿಸಿದರು. ಅದಕ್ಕೆ ಸರಿಯಾಗಿ ಮ|| ರಾ|| ಆನಂದರಾಯರು ಸಂಘಕ್ಕೆ ಆಯಾಯ ಜಾತಿಯ ಮೆಂಬರರು ಎಷ್ಟು ಎಂಬ ಪಟ್ಟಿಯನ್ನು ಓದಿದರು. ಈ ಸೂಚನೆಯು ಸಭೆಯ ಮುಂದೆ ಬಂದೊಡನೆ ಹಲವರು ಕೈಚಪ್ಪಾಳಿಯಿಕ್ಕಿದರು. ಇದಕ್ಕೆ ಸರಿಯಾಗಿ ಚೆನ್ನಾಗಿ ಉರಿಯುತ್ತಿದ್ದ 'ಕಿಟ್ಸನ್ ಲ್ಯಾಟ್' ನೊಂದಿಹೋಯಿತು. ಇದು ಅಶುಭಸೂಚಕವೆಂದು ನನ್ನಂಥಾ ಬಡ ಹಳಬನಿಗೆ ಬೋಧೆಯಾಯಿತು.

ಒಬ್ಬಿಬ್ಬರು ಈ ಸಂಘದಲ್ಲಿ ಜಾತಿವೈಷಮ್ಯದ ಬೀಜವನ್ನು ಬಿತ್ತುವುದು ಬೇಡವೆಂದು ಬಹಳ ಹೇಳಿಕೊಂಡರು. ಸಭೆಕೂಡಿದವರು ಚುನಾಯಿಸುವಾಗ ಆಯಾಯ ಮುಖ್ಯ ಜಾತಿಯ ಪ್ರತಿನಿಧಿಯೊಬ್ಬನನ್ನು ಚುನಾಯಿಸಬಹುದೆಂದು ಸೂಚನೆ ಇದ್ದರೆ ಸಾಕು, ಅದನ್ನು ರವಾಗಿ 'ಮಿನಿಟು' ಪುಸ್ತಕದಲ್ಲಿ ಸೇರಿಸುವುದು ಸರಿಯಲ್ಲವೆಂದು ಅವರು ವಾದಿಸಿದರು. ಆದರೆ ಪ್ರೊಟೆಸ್ಟಾಂಟ ಕ್ರೈಸ್ತರಲ್ಲಿ ಯಾರೂ ಪಂಚಾಯತರಲ್ಲಿ ಪ್ರತಿನಿಧಿಗಳಿಲ್ಲದ ಕಾರಣ ಪಂಚಾಯತರಿಗೆ ಗೊತ್ತಾಗದೆ ಅವರು ಸ್ವಾಭಾವಿಕ ದಯಾಭಾವದಿಂದ ಕೊಟ್ಟ ಸಾಲವು ಈಗ ಕೆಲವು ಸಂಗತಿಗಳಲ್ಲಿ ವಾಯಿದೆ ತಪ್ಪಿ ಬಾಕಿ ಉಳಿದಿದೆ ಎಂದು ಪ್ರಸ್ತಾಪ ಬಂತು. ಅದಕ್ಕೆ ಅವರ ಪೈಕಿ ಒಬ್ಬನನ್ನು ಚುನಾಯಿಸಿದರೆ ಸಾಕಲ್ಲವೆ ಎಂದು ಕೆಲವರು ಹೇಳಿದರು. ಆದರೆ ಅನೇಕರಿಗೆ ಸಮ್ಮತವಿಲ್ಲ. ಕಡೆಗೆ ಒಂದೊಂದು ಜಾತಿಯಲ್ಲಿ ೫ ಜನರ ಹೆಸರನ್ನು ಬರೆದು ಅವರ ಪೈಕಿ ಒಬ್ಬೊಬ್ಬನನ್ನು ಆಯಾಯ ಜಾತಿಯವರು ಆರಿಸಬಹುದೆಂಬದಾಗಿ ಕೊಆಪರೇಟಿವ್ ಸಂಘಗಳ ಇನ್‌ಸ್ಪೆಕ್ಟರ್ ಮ|| ರಾ|| ಕೃಷ್ಣಸ್ವಾಮಿ ಐಯ್ಯರ್‌ರವರು ಸೂಚಿಸಿದರು. ಇದು ಹಲವರಿಗೆ ಸಮ್ಮತಿಯಾಗದೆ ಅವರು ಸಭೆಯಿಂದ ಹೊರಟು ಹೋದರು. ಹಾಗಾದರೆ ಪಂಚಾಯತರಲ್ಲಿ ಒಂದೇ ಜಾತಿಯ ಹಲವು ಗೃಹಸ್ಥರು ಸೇರಿ ಬಹುಮತವು ಆ ಪಕ್ಷವಾಗಿ ನಿಂತುಬಿಡುವುದು ಎಂಬ ಯಾವ ಸಂಶಯವು ಕೆಲವರಲ್ಲಿ ಅಂಕುರಿಸಿತ್ತೋ, ಅದು ನಿದರ್ಶನಕ್ಕೆ ಬಂತಲ್ಲವೆ? ಪ್ರತಿಯೊಂದು ಸಂಸ್ಥೆಯಲ್ಲಿಯೂ ಜಾತಿಭೇದವನ್ನು ತಂದು ಬಿತ್ತುವುದು ಸರಿಯಲ್ಲವೆಂದು ನಾನು ಒಪ್ಪುತ್ತೇನೆ. ಆದರೆ ಈಗ ಇರುವ ವೈಷಮ್ಯವನ್ನು ನೆಟ್ಟಗೆ ಮಾಡಬೇಕಾದರೆ ಬೇರೆ ಬೇರೆ ಜಾತಿಯವರು ಒಂದು ಸಂಸ್ಥೆಯಲ್ಲಿ ಪರಸ್ಪರ ಅನ್ಯೋನ್ಯ ಭಾವವನ್ನು ಬೆಳಸಬೇಕು. ಅಂಥಾ ಸಭೆಗಳಲ್ಲಿ ಯಾವ ಜಾತಿಯ ಸಂಖ್ಯೆಯು ಕಡಿಮೆಯಾಗಿ ಅವರಿಗೆ ಸ್ವಲ್ಪಮಟ್ಟಿಗೆ ಅನ್ಯಾಯವಾದೀತೆಂದು ಆ ಜಾತಿಗೆ ಸಂಶಯ ಹುಟ್ಟುತ್ತದೊ ಅಂಥಾ ಜಾತಿಯವರನ್ನು ಸ್ವಲ್ಪ [illegible] ನಮ್ಮೊಡನೆ [illegible]ವುದು ಯೋಗ್ಯವೋ ಅಥವಾ ಅವರು ನಮ್ಮ [illegible]ತ್ರರಾದ ಕಾರಣ ನಮಗೂ ಅವರಿಗೂ ಪಂಕ್ತಿ ಸಲ್ಲದು, ನಾವು [illegible]ವುದಾದರೆ ಅವರು ಬಡಗು ದಿಕ್ಕಿಗೆ ನೋಡಲಿ, ನಮಗೂ ಅವರಿಗೂ [illegible] ಎಂದು ಹೇಳುವುದು ನ್ಯಾಯವೋ? ಈ ಸಂದರ್ಭದಲ್ಲಿ ಯೋಗ್ಯತಾಯೋಗ್ಯತೆ, [illegible] ಮುನಿಸಿಪಾಲಿಟಿಗಳ ಚುನಾವಣೆ ಮುಂತಾದ ದೊಡ್ಡ ಮಾತುಗಳನ್ನು ಎತ್ತಿದರು. ಆದರೆ ಯಾವ ಜಾತಿಯ ಮೆಂಬರರು [illegible] ಅವರು [illegible] ದುರ್ನಡತೆಯವರೊ ಎಂದು ಆ ಜಾತಿಯವರ [illegible]

ಗೆದು. ಆಗ ಆ ಜಾತಿಯವನೊಬ್ಬ ಮರ್ಯಾದಸ್ಥನನ್ನು ಅವರು ಚುನಾಯಿಸಿಕೊಡುವುದಾದರೆ ಇತರರು ಏತಕ್ಕೆ ಒಪ್ಪಬಾರದು? ಇದಲ್ಲದೆ ಈ ಸಂಘದಲ್ಲಿ ಹತ್ತೆಂಟು ಜಾತಿಗಳಿರುವಾಗ ಅವರೆಲ್ಲರಿಂದಲೂ ಮೆಂಬರುಗಳನ್ನು ಚುನಾಯಿಸಬೇಕಾದ್ದಿಲ್ಲ ಎಂದು ಒಣವಾದವು ಒಂತು. ಇದರಿಂದಲೂ ಮತ್ತು ಆ ಸಮಯದಲ್ಲಿ ಕೆಲವರು ಬಹಿರಂಗವಾಗಿಯೂ ಕೆಲವರು ತೆರೆಯಲ್ಲಿಯೂ ಆಡಿದ ಮಾತುಗಳಿಂದಲೂ ಈ ಜಾತಿಯ ಪ್ರತಿನಿಧಿಗಳನ್ನು ಆರಿಸುವುದು ಬಹಳ ಅಹಿತವಾಗಿ ಕಂಡುದಕ್ಕೆ ಕಾರಣ ತಿಳಿಯುವುದಿಲ್ಲ. 'ಒಳಗಿನ ಗುಟ್ಟು ಶಿವನೇ ಬಲ್ಲ' ನನ್ನಂತಹ ಪರವೂರಿನ ಒಡ ಪಾಪಿಗೆ ಅದು ಬಹಳ ಆಸತ್ಯಕರವಾಗಿ ತೋರಿತು. ಯಾವುದೊಂದು ಊರಿನಲ್ಲಿ ಯಾವ ಜಾತಿಯವರು ಪ್ರಬಲವಾಗಿರುವರೋ ಅವರು ಇತರ ಜಾತಿಗಳಿಗೆ ತಾವು ಸ್ವಲ್ಪ ಗೆಳೆತನದ ಕೈಚಾಚದೆ ಇದ್ದರೆ ಆ ಉಳಿಕೆ ಜಾತಿಗಳಿಗೆ ಒಂದು ಬಗೆಯ ಸಂದೇಹವೂ ಇವರ ಮೇಲೆ ತಾತ್ಸಾರವೂ ಉಂಟಾಗುವುದು ಆಶ್ಚರ್ಯವೇ? ಹೀಗೆ ಪ್ರಬಲರಾದವರು ಸ್ವಲ್ಪ ತಗ್ಗಿಗೆ ಬಾರದಿದ್ದರೆ ಒಹಳ ತಗ್ಗಿನಲ್ಲಿರುವವರನ್ನು ಎತ್ತುವುದು ಹೇಗೆ? ಇಂತಹ ದುರವಸ್ಥೆಯಿಂದಲೇ ಜಾತಿ ವೈಷಮ್ಯವು ಇನ್ನೂ ಪುಟವಿಟ್ಟಂತೆ ಆಗುವುದಲ್ಲದೆ ಬಹಳ ರೀತಿಯಲ್ಲಿ ಅನರ್ಥಕಾರಿಯಾಗುವುದು. ಇದು ಜನಸಾಮಾನ್ಯರಿಗೆ ತಿಳಿಯದು. ಆದರೆ ಇಂಗ್ಲಿಷು ವಿದ್ಯಾಭ್ಯಾಸದಿಂದ ಬುದ್ಧಿ ವಿಕಸಿತವಾದವರೂ ಇಂಥ ಕಾರ್ಯಕ್ಕೆ ಅನುಮೋದಿಸಿದರೆ ಹಿಂದುಸ್ಥಾನವಾಗಲಿ ಅಥವಾ ಈ ಒಡ ಜಿಲ್ಲೆಯಾಗಲಿ ವೃದ್ಧಿಪಥವನ್ನು ಹತ್ತುವುದು ಯಾವಾಗ? ಎಲ್ಲಿ ಹೋದರೂ ಜಗಳ, ಎಲ್ಲಿ ಹೋದರೂ ದುರಹಂಕಾರ, ಎಲ್ಲಿ ಹೋದರೂ ಪರಸ್ಪರ ನಿಂದೆ, ಎಲ್ಲಿ ಹೋದರೂ ಪರಸ್ಪರ ಕ್ರೋಧಗಳೇ ತಲೆದೋರುವುದಾದರೆ ಯಾವ ಸಂಸ್ಥೆಯೂ ಬೆಳೆಯಲಾರದು. ವಿದ್ಯಾವಂತರೂ ಇಂತಹ ಭೇದಬುದ್ಧಿಯನ್ನು ಕಳೆಚಿಬಿಡುವುದಕ್ಕೆ ಪ್ರಯತ್ನಿಸುವಂತೆ ದೇವರು ಅವರಿಗೆ ಬುದ್ಧಿ ಕೊಡಲಿ ಎಂದು ಬಡವನ ಪ್ರಾರ್ಥನೆ.

ಒಡ ಸಹಕಾರಿ.

ಅಯ್ಯಾ ಪತ್ರಿಕಾಕರ್ತರೇ,

ಇದೇ ಆಗೋಸ್ತು ತಾ ೧೬ನೆಯ ಸ್ವದೇಶಾಭಿಮಾನಿಯಲ್ಲಿ ಮದ್ರಾಸು ಪಿಲ್ಗ್ರಿಮ್ ಕಮ್ಮಿಟಿಯವರು ಈ ಉಡುಪಿಕ್ಷೇತ್ರಕ್ಕೆ ಬರುವ ಯಾತ್ರಿಕರ ಅನುಕೂಲತೆ ಅನಾನುಕೂಲತೆಗಳನ್ನು ತಿಳಕೊಳ್ಳುವ ಬಗ್ಗೆ ಉಡುಪಿಗೂ ಸದ್ಯ ಬರುವರಾಗಿಯೂ, ಅವರು ಬಂದಲ್ಲಿ ಉಡುಪಿ ಮುಂದಾಳುಗಳು ಮುಂದಾಗಿಯೆ ಪರ್ಯಾಲೋಚಿಸಿಕೊಂಡು ಕಮ್ಮಿಟಿಯವರು ಬಂದಾಗ ತಕ್ಕ ಅನುಭವಕೊಡಬೇಕಾಗಿಯೂ ತಾವು ದಯವಿಟ್ಟು ಸೂಚಿಸಿದ ಪ್ರಕಾರ ಇಲ್ಲಿ ಇದುವರೆವಿಗೂ ಆ ಪ್ರಸ್ತಾವ ಯಾವುದೂ ನಡದಂತೆ ತೋರಲಿಲ್ಲ. ಇನ್ನಾದರೂ ಈ ಕೆಳಗಿನ ವಿಷಯಗಳನ್ನು ವಿಮರ್ಶೆ ಮಾಡಿ ತಾವು ಸೂಚಿಸಿದಂತೆ ಉತ್ತರಕೊಡುವರೆ ಸಿದ್ಧರಾಗಿರುವರಾಗಿ ನಂಬುತ್ತೇನೆ.

ಈ ಕ್ಷೇತ್ರಕ್ಕೆ ಮದ್ರಾಸು ಸಂಸ್ಥಾನದ ಎಲ್ಲಾ ಜಿಲ್ಲೆಗಳಿಂದಲೂ ಮೈಸೂರು, ಹೈದರಾಬಾದು ಬೊಂಬೈ ಮೊದಲಾದ ಅಧಿಪತ್ಯಗಳ ಅನೇಕ ಭಾಗಗಳಿಂದಲೂ ಮಧ್ವಮತಾನುಯಾಯಿಗಳಾದ ಬ್ರಾಹ್ಮಣರು ಯಾತ್ರೆಗಾಗಿ ಬರುವರು. ಕೆಲವರು ರೈಲ್ವೆಯಿಂದ ಮಂಗಳೂರು ಮಾರ್ಗವಾಗಿಯೂ, ಕೆಲವರು ಸ್ಟೀಮರುಗಳಿಂದ ಮಲ್ಪೆ ಬಂದರದ ಮಾರ್ಗವಾಗಿಯೂ, ಅನೇಕರು ಶಿವಮೊಗ್ಗಾದಿಂದ ತೀರ್ಥಳ್ಳಿ ಆಗುಂಬೆಗಾಗಿಯೂ ಬರುವರು. ಇಲ್ಲಿ ಎರಡು ವರ್ಷಕೊಮ್ಮೆ ಇಸ್ವಿಯ ಸಮವರ್ಷಗಳಲ್ಲಿ ಪರ್ಯಾಯವೆಂಬ ಜಾತ್ರೆ ನಡೆಯುವದು. ಇದಕ್ಕೆ ಸೇರಿದಷ್ಟು ಯಾತ್ರಿಕರು ವರ್ಷದ ಬೇರೆ ಯಾವ ಉತ್ಸವಗಳಿಗೂ ಸೇರುವುದಿಲ್ಲ. ಸ್ಥಳದವರು ಪರಸ್ಥಳದವರು ಸೇರಿ ಸುಮಾರು ೧೦ ಸಾವಿರ ಜನರು ಸೇರಬಹುದು. ಮಂಗಳೂರು ಮಾರ್ಗವಾಗಿ ಬರುವ ಯಾತ್ರಸ್ಥರಿಗೆ ಮಂಗಳೂರಲ್ಲಿ ರೈಲಿನಿಂದ ಇಳಿದು ಉಳಕೊಳ್ಳುವದಕ್ಕೆ ತಕ್ಕ ಸ್ಥಳ ಇಲ್ಲದೆ ಇರುವದು ಒಂದನೆ ಅಡಚಣೆ, ಮಂಗಳೂರಿನಿಂದ ೩೬ ಮೈಲು ದೂರವಿರುವ ಈ ಉಡುಪಿಗೆ ಪ್ರಯಾಣ ಮಾಡುವ ಪ್ರಯಾಸ ಎರಡನೆಯದು. ಉಡುಪಿಯಿಂದ ಮಂಗಳೂರು ಮಾರ್ಗವಾಗಿ ತಿರಿಗಿ ಹೋಗತಕ್ಕವರಿಗೂ ಈ ಅಡಚಣೆಗಳ ಜೊತೆಗೆ ರೈಲ್ವೆ ಟಿಕೇಟು ಪಡೆಯಬೇಕಾದರೆ ಪ್ಲೇಗು ನೋಟಿಫಿಕೇಶನ್ ಪಡಕೊಳ್ಳುವ ಸಂಕಷ್ಟ ಕೂಡ ಇರುವದು. ಇದರಿಂದ ಬಂದೆರಡು ದಿವಸದ ಪ್ರಯಾಣ ನಿಂತುಹೋಗುವದೂ ಉಂಟು. ಆಗುಂಬೆ ಮಾರ್ಗವಾಗಿ ಬರತಕ್ಕವರಿಗೆ ಆಗುಂಬೆ ದಾಟಿದ ನಂತರ ಉಳಕೊಳ್ಳುವದಕ್ಕೆ ಅಲ್ಲಲ್ಲಿ ತಕ್ಕ ಸ್ಥಳವಿಲ್ಲದೆ ಇರುವದು. ಹಾಗೆಯೇ ಮಲ್ಪೆಯಲ್ಲಿಯೂ ಉಳಕೊಳ್ಳುವದಕ್ಕೆ ತಕ್ಕ ಸ್ಥಳವಿಲ್ಲದ ತೊಂದರೆ ಇರುವದು.

ಇಲ್ಲಿಯ ಜಾತ್ರೆಯು ಸುಮಾರು ಜನವರಿ ಲಕ್ಕೆ ಆರಂಭವಾಗಿ ೧೮ಕ್ಕೆ ಅಂತ್ಯವಾಗುವದು. ಜನರು ಅದಕ್ಕೆ ಸರಿಯಾಗಿ ಬಂದರೆ ಸಾಕಿತ್ತು. ಇಲ್ಲಿ ಅವರಿಗೆ ಪ್ಲೇಗಿನ ಸೋಂಕು (ಅದು ಎಂದೆಂದಿಗೂ ಇಲ್ಲದೆ ಹೋಗಲಿ) ಇಲ್ಲದೆ ಇದ್ದರೂ ಯಾತ್ರಸ್ಥರು ದಶಂಬರ ೩೧ನೇ ತಾರೀಕಿನ ಒಳಗಾಗಿಯೇ ಬಂದು ಸೇರಬೇಕೆಂಬುದಾಗಿಯೂ, ಅನಂತರ ೧೮ನೇ ತಾರೀಕಿನ ವರೆಗೆ ಬರಗೊಡಕೂಡದಾಗಿಯೂ ಇತ್ತಲಾಗೆ ಕೆಲವು ವರ್ಷಗಳಿಂದ ಸರಕಾರ ನಿರ್ಬಂಧವಿರುವುದರಿಂದ ಬಹಳ ದೂರ ದೇಶಗಳಿಂದ ಬರತಕ್ಕವರು ಅನೇಕ ತೊಂದರೆಗಳಿಗೆ ಗುರಿಯಾಗುತ್ತಾರೆ. ೮ ದಿವಸ ಇಲ್ಲಿ ಇರುವ ಬದಲಿಗೆ ೧೮-೨೦ ದಿವಸ ಇಲ್ಲಿ ಇರಬೇಕಾಗುತ್ತದೆ. ಇದು ಯಾತ್ರಿಕರಿಗೂ ಸ್ಥಳದವರಿಗೂ ಹೆಚ್ಚಿನ ತೊಂದರೆಗಳಿಗೆ ಕಾರಣವಾಗುತ್ತದೆ.

ಇಲ್ಲಿಗೆ ಬಂದ ಮೇಲೆ ಯಾತ್ರಸ್ಥರು ಕ್ಷೇತ್ರವಾಸಿಗಳ ಅನುಗ್ರಹಕ್ಕೆ ಪಾತ್ರರಾಗಿ ಅವರ ಮನೆಯಲ್ಲಿಯೇ ಉಳಕೊಳ್ಳಬೇಕಲ್ಲದೆ ಪ್ರತ್ಯೇಕ ಛತ್ರವಾಗಲಿ ಇತರ ಸ್ಥಳವಾಗಲಿ ಇಲ್ಲ. ಪ್ರಾಯಶಃ ಕ್ಷೇತ್ರವಾಸಿಗಳೆಲ್ಲ ಸಂಪನ್ನರೂ, ಗುಣವಂತರೂ, ಪರೋಪಕಾರಶೀಲರೂ ಆಗಿರುವುದರಿಂದ ಯಾತ್ರಿಕರು ಸ್ವಲ್ಪ ಹಣ ಮಾತ್ರ ವೆಚ್ಚಮಾಡಬೇಕಾಗುತ್ತದಲ್ಲದೆ ಬೇರೆ ಯಾವ ತರದ ಅಡಚಣೆಗಳಿಗೂ ಗುರಿಯಾಗುವದಿಲ್ಲ. ಇಲ್ಲಿ ಪ್ರತಿ ಮನೆಯಲ್ಲಿ ಶೀನೀರಿನ ಬಾವಿಗಳಿರುವದರಿಂದಲೂ, ಸ್ನಾನಕ್ಕೆ ದೇವಸ್ಥಾನದ ದೊಡ್ಡ ಸರೋವರವಿರುವದರಿಂದಲೂ ಸ್ನಾನಪಾನಾದಿಗಳಿಗೆ ಜಲಸೌಕರ್ಯದ ಅಡಚಣೆ ಇಲ್ಲ. ಜಾತ್ರೆಕಾಲದಲ್ಲಿ ಹಂಗಾಮಿ ಪೋಲೀಸ್ ಸ್ಟೇಶನ್ ಮಠಬೀದಿಗೆ ತರಲ್ಪಡುವುದರಿಂದ ಕಳವು ಕಸಾದಿಗಳಿಗೂ ಅವಕಾಶವಿರುವದಿಲ್ಲ. ಪೋಲೀಸಿನವರು ತಮ್ಮ ಕರ್ತವ್ಯಗಳನ್ನು ಹೆಚ್ಚೆಚ್ಚಾಗಿ ತಿಳಿಯುತ್ತಾ ಬರುತ್ತಿರುವದರಿಂದ ಇತ್ತಿತ್ತಲಾಗೆ ಯಾತ್ರಿಕರನ್ನು ಚಿಕ್ಕ ತಪ್ಪುಗಳಿಗೆ ಚಾರ್ಜುಮಾಡಿ ತೊಂದರೆಮಾಡುವುದೂ ಇಲ್ಲ.

ಇಲ್ಲಿ ಯೋಗ್ಯವಾದ ಆಸ್ಪತ್ರೆಯು ಇದ್ದರೂ, ಯಾತ್ರಿಕರು ಆಸ್ಪತ್ರೆ ಔಷಧವನ್ನು ಅಪೇಕ್ಷಿಸುವಂತೆ ತೋರಲಿಲ್ಲ. ಕೆಲವರು ಆಯುರ್ವೇದ ಔಷಧವನ್ನು ಅಪೇಕ್ಷಿಸುತ್ತಾರೆ. ಅದು ಇಲ್ಲಿ ಸುಲಭವಾಗಿ ದೊರೆಯುವುದಿಲ್ಲ. ಪ್ರಾಯಶಃ ಯಾತ್ರೆಕಾಲದಲ್ಲಿ ಈ ಕ್ಷೇತ್ರದಲ್ಲಿ ಸಂಕ್ರಾಮಿಕರೋಗ ತಗಲುವದು ಅಪರೂಪ. ಎಲ್ಲಿಯಾದರೂ ಕೆಲವು ವರ್ಷಗಳಿಗೊಮ್ಮೆ ಸಿಡುಬು ರೋಗವು ಆರಂಭವಾಗುವದುಂಟು. ಅದಕ್ಕೆ ಬೇಕಾದ ಕೆಲವು ಚಿಕಿತ್ಸೆಗಳು ಸರ್ವಸಾಧಾರಣ ಎಲ್ಲರಿಗೂ ಗೊತ್ತಿರುವುದರಿಂದ ವೈದ್ಯರ ಸಹಾಯವು ಅಗತ್ಯ ಬೀಳುವುದಿಲ್ಲ.

ಜಾತ್ರೆಕಾಲದಲ್ಲಿ ಅಲ್ಲಲ್ಲಿ ಹಂಗಾಮಿ ಪಾಯಖಾನೆಗಳನ್ನು ಆಸ್ಪತ್ರೆ ಕಡೆಯಿಂದ ಕಟ್ಟಿಸುವುದರಿಂದ ಜಲಮಲವಿಸರ್ಜನೆಗಳಿಗೆ ಅಡಚಣೆ ಇರುವುದಿಲ್ಲ.

ಉಪ್ಪಿ ಯಾತ್ರೆಗೆ ಬಂದವರು ಸಮುದ್ರಸ್ನಾನಕ್ಕಾಗಿ ಸುಮಾರು ೪ ಮೈಲು ದೂರವಿರುವ ವಡಭಾಂಡೇಶ್ವರ ಎಂಬಲ್ಲಿಗೂ, ಶ್ರೀಮಧ್ವಾಚಾರ್ಯರ ಅವತಾರ ಸ್ಥಳವಾದ ಪಾಜಕಕ್ಷೇತ್ರವೆಂಬಲ್ಲಿಗೂ ಹೋಗದೆ ಇರುವದಿಲ್ಲ. ಇವುಗಳ ಪೈಕಿ ಪಾಜಕಕ್ಷೇತ್ರವು ಇಲ್ಲಿಗೆ ಆಗ್ನೇಯದಲ್ಲಿ ೭ ಮೈಲು ದೂರ ವಿಮಾನಗಿರಿಯೆಂಬ ಕುಂಜಾರು ಬೆಟ್ಟಕ್ಕೆ ಸಮೀಪವಿರುವದು. ಇಲ್ಲಿಗೆ ದೋಣಿಯೂ ಹೋಗುವದಿಲ್ಲ. ಸುಮಾರು ೪ ಮೈಲು ಮಾತ್ರವಲ್ಲದೆ ಆ ಮೇಲೆ ಗಾಡಿಯೂ ಹೋಗುವುದಿಲ್ಲ. ಅದು ಮಾಧ್ವರಿಗೆ ಮುಖ್ಯ ಯಾತ್ರೆ ಸ್ಥಳವಾದರೂ ಯಾತ್ರಿಕ ಸೌಕರ್ಯಕ್ಕೆ ಯಾವ ತರದ ಏರ್ಪಾಡೂ ಇಲ್ಲ. ಬೆಲೆಗೆ ಕೂಡ ಒಂದು ವಸ್ತುವಾದರೂ ಸಿಕ್ಕುವಂತಿಲ್ಲ. ಅಲ್ಲಿ ಒಂದು ಹೊತ್ತು ಇದ್ದು ಬರಬೇಕಾದರೆ ಏಳು ಹನ್ನೊಂದು ಆಗುವುದು. ಇಲ್ಲಿಂದ ಸುಮಾರು ೭ ಮೈಲು ದಕ್ಷಿಣಕ್ಕೆ ದಂಡತೀರ್ಥವೆಂಬ ಕ್ಷೇತ್ರವಿರುವುದು. ಇದು ಯಾತ್ರ ಸ್ಥಳ. ಇಲ್ಲಿ ಕೃಷ್ಣಾಪುರ ಮಠದವರು ಛತ್ರವಿಟ್ಟು ಎರಡು ಹೊತ್ತು ಬಂದವರಿಗೆಲ್ಲ ಭೋಜನ ಕೊಡುವದರಿಂದ ಯಾತ್ರಸ್ಥರಿಗೆ ತುಂಬಾ ಅನುಕೂಲವಾಗುತ್ತಿದೆ.

ಇದೆಲ್ಲ ನನ್ನ ಸ್ವಲ್ಪ ಕಾಲದ ಅನುಭವವಾಗಿರುತ್ತದೆ. ಅನುಭವಶಾಲಿಗಳು ಇದನ್ನು ವಿಮರ್ಶೆಮಾಡಿ ತಮ್ಮ ಅನುಭವಗಳನ್ನು ಸೇರಿಸಿ ಪಿಲ್ಗ್ರಿಮ್ ಕಮಿಟಿಯವರಿಗೆ ಅನುಭವ ಕೊಡುವರೆ ಇನ್ನಾದರೂ ಸಿದ್ಧರಾಗಿರುವರಾಗಿ ನಂಬುತ್ತೇನೆ. ಇಲ್ಲವಾದರೆ ಸರ್ವೆ ಸಟ್ಲಮೆಂಟ್ ಕಾಲಗಳಲ್ಲಿ ಆಯಾ ಉದ್ಯೋಗಸ್ಥರಿಗೆ ತಕ್ಕ ಅನುಭವ ಕೊಡುವದಕ್ಕೆ ಉದಾಸೀನರಾಗಿ ಈಗೆ ಅನೇಕ ಸಂಕಷ್ಟಗಳಿಗೆ ಗುರಿಯಾಗಿರುವಂತೆ ಗುರಿಯಾಗಬೇಕಾಗುವದು.

ಉಡುಪಿ. [illegible]

ಯುದ್ಧ ಸಮಾಚಾರ.

ತಾ, ೨೧, ೨೨ನೇ ಆಗೋಸ್ಟ

ಫ್ರೆಂಚರ ಪ್ರಖ್ಯಾತಪಟ್ಟ 'ಗಿಲ್ಬರ್ಟ'ನೆಂಬ ಆಕಾಶವಿಮಾನಗಾರನು ಜರ್ಮನಿಯ ಮೇಲೆ ಸಿಡಿಮದ್ದಿನ ಕೋಟೆಗಳನ್ನು ಹಾಕಲು ವಾಯುವಿಮಾನದ ಮೇಲೆ ಹೋದವನು ಬರುತ್ತಾ ಸ್ವಿಜರ್‌ಲೆಂಡಿನಲ್ಲಿ ಸಿಲುಕಿಬಿದ್ದಿದ್ದನು. ಅಲ್ಲಿಯ ಸರಕಾರದವರು ಇವನನ್ನು ಬಂಧನದಲ್ಲಿರಿಸುವ ಏರ್ಪಾಡನ್ನು ಮಾಡುವಷ್ಟರಲ್ಲಿ ಸ್ವಿಜರ್‌ಲೆಂಡಿನಿಂದ ಈತನು ತಪ್ಪಿಸಿಕೊಂಡು ಬಂದಿರುತ್ತಾನೆ. ಪಶ್ಚಿಮ ರಣರಂಗದಿಂದ ವಿಶೇಷ ಸಮಾಚಾರವೇನೂ ಇರದು

ಜರ್ಮನರು ಸಂಧಾನದ ಪ್ರಸ್ತಾಪಗಳನ್ನು ಎತ್ತುತಿದ್ದಾರೆಂತ ಎಮ್ಸಟರ್‌ಡೇಮದಲ್ಲಿಯ ಟೆಲಿಗ್ರಾಫ್ ಎಂಬ ಪತ್ರದಲ್ಲಿ ಪ್ರಕಟವಾದ ವರ್ತಮಾನಗಳಿಂದ ತೋರಿಬರುತ್ತದೆ ಜರ್ಮನ ಸರಕಾರದ 'ರಿಚ್‌ಸ್ಟೇಗ್' ಸಭೆಯು ಕೂಡುವ ಮೊದಲು ಡಾಕ್ಟರ್ ಫೋನ್ ಬೆಥ್‌ಮನ್ ಹೊಲವೆಗ್ಗರವರು ಇತರ ಮಂತ್ರಿಗಳ ಮತ್ತು ರಾಜಕಾರಣಿಗಳ ಒಂದು ಗುಪ್ತ ಸಭೆಯನ್ನು ಕೂಡಿಸಿದ್ದರು. ಯುದ್ಧಕ್ಕೆ ಬೇಕಾದ ಧನವಾಳವನ್ನು ಸಂಗ್ರಹಿಸುವರೆ ಜರ್ಮನ್ ಸರಕಾರವು ಪ್ರಕೃತ ಏರ್ಪಡಿಸಿದ ಸಾಲವು ಸರಿಯಾಗಿ ಕೂಡಿಸಲ್ಪಟ್ಟೊಡನೆ ಜರ್ಮನಿಯ ಸಾಲಮೂಲಗಳೆಲ್ಲವು ಬರಿದಾಗುವವೆಂದೂ ಸರಕಾರದ ಖಜಾನೆಯು ಜಮಾಬ್ದಾರಿ ಮೇಲೆ ಪಡೆಯುವ ಸಾಲದಿಂದ ಜರ್ಮನಿಯು ಪೂರ್ಣ ದಿವಾಳಿಯಾಗುವದೆಂದೂ ಈ ಸಭೆಯಲ್ಲಿ ತರ್ಕ ನಡೆಯಿತು ಈ ಕಾರಣಗಳಿಂದ ಇನ್ನು ಶೀಘ್ರದಲ್ಲಿಯೇ ಸಂಧಾನ ಮಾಡಿಕೊಳ್ಳುವದು ಉಚಿತವೆಂತ ಜರ್ಮನ ಖಜಾನಾ ಮಂತ್ರಿಗಳವರ ಅಭಿಪ್ರಾಯವಾಗಿದೆ. ಅಮೇರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಸಹ ಜರ್ಮನರ ಅಮಾನುಷ ಕೃತ್ಯಗಳಿಂದ ಜರ್ಮನ ಮೇಲಣ ದ್ವೇಷವು ಅಧಿಕವಾಗುತ್ತಿರುವದರಿಂದ ರಿಚ್‌ಸ್ಟೇಗ್ ಸಭೆಯು ಇನ್ನು ಸಾಮೋಪಾಯಗಳಿಂದ ದೇಶವನ್ನಾಳಸಲು ಒಪ್ಪದಿದ್ದರೆ ಜರ್ಮನ ಖಜಾನಾ ಮಂತ್ರಿಗಳು ತಮ್ಮ ಪದವಿಗೆ ರಾಜಿನಾಮೆ ಕೊಡುವರೆಂತ ತಿಳಿದುಬಂದಿದೆ.

ಜರ್ಮನಿಯ ಹಲವು ಜಿಲ್ಲೆಗಳಲ್ಲಿ ವಾಂತಿಭೇದಿ ರೋಗವು ತಲೆದೋರಿರುವುದು.

ಪೂರ್ವರಣರಂಗದಲ್ಲಿ ರೀಗಾ ಪ್ರಾಂತ್ಯಗಳಲ್ಲಿಯ ಯುದ್ಧಸ್ಥಿತಿಯಲ್ಲಿ ಮಾರ್ಪಟಗಳೇನೂ ಉಂಟಾಗಲಿಲ್ಲ.

ತಾ ೨೩-೨೪ನೇ ಅಗೋಸ್ಟು.

ರೀಗಾ ಕೊಲ್ಲಿಯಲ್ಲಿ ನಡೆದ ಸಮುದ್ರ ಸಂಗ್ರಾಮದಲ್ಲಿ ಜರ್ಮನರು ಅಪಜಯ ಹೊಂದಿ ಪರ್ನೋಫ್ ಎಂಬಲ್ಲಿ ಸೇನೆಯನ್ನಿಳಿಸಲಾಗದೆ ಹೋದ್ದರಿಂದ ರೀಗಾ ಪ್ರಾಂತ್ಯಗಳಲ್ಲಿ ನಡೆಯುವ ಭೂಸಂಗ್ರಾಮಗಳ ನೆಲೆಯನ್ನು ಮಾರ್ಪಡಿಸುವ ಅಗತ್ಯವು ಜರ್ಮನರಿಗೆ ಉಂಟಾಗಿದೆ ಎಂತ ತೋರಿಬರುತ್ತದೆ.

'ಲೀವರ್‌ಪೂಲಿ'ನ 'ಶಿಲ್‌ವಿಯಾ' ಎಂಬ ವ್ಯಾಪಾರದ ಹಡಗವನ್ನು ಜರ್ಮನರ ಸಬ್ ಮೆರ್ರಾನ್‌ನಾವೆಯು ಮುಳುಗಿಸಿ ಬಿಟ್ಟಿರುವುದು.

ಸ್ಪೈನ್ ದೇಶದ "ಇಸಿತೋರ್" ಹಡಗವನ್ನು ಜರ್ಮನರು ಮುಳುಗಿಸಿದ್ದರಿಂದ ಆ ದೇಶದಲ್ಲಿ ಜರ್ಮನರ ಮೇಲೆ ವೈಮನಸ್ಯಉಂಟಾಗಿದೆ. ಈ ಹಡಗದ ನಷ್ಟದ ಬಗ್ಗೆ ಪರಿಹಾರ ದ್ರವ್ಯವನ್ನು ಜರ್ಮನರು ಕೊಡುತ್ತೇವೆಂತ ಹೇಳಿದರೂ ಸ್ಪೈನಿನಲ್ಲಿ ಇದರಿಂದ ತುಷ್ಟಿಯುಂಟಾಗಿರದೆ, ಜರ್ಮನರು ಎಲ್ಲಾ ಸಾಗರಗಳಲ್ಲಿಯೂ ಸ್ಪೈನ್ ದೇಶದ ಧ್ವಜಕ್ಕೆ ಸರಿಯಾದ ಮನ್ನಣೆಯನ್ನು ಕೊಡುವೆವೆಂತ ಜರ್ಮನರು ದೃಢವಾದ ಸರಟಿಕೆ ಕೊಡಬೇಕೆಂದು ಹೇಳುತ್ತಿರುವರು.

"ಅರಬಿಕ್" ಹಡಗವನ್ನು ಜರ್ಮನರು ಮುಳುಗಿಸಿದ ವಿಷಯದಲ್ಲಿ ಎಲ್ಲಾ ಸಂಗತಿಗಳನ್ನು ಸರಿಯಾಗಿ ತಿಳಿಯುವ ಮುಂಚೆ ಯಾವ ತೀರ್ಮಾನವನ್ನು ಮಾಡಬಾರದೆಂತ ಜರ್ಮನ ರಾಯಭಾರಿಗಳು ಅಮೇರಿಕದ ಸರಕಾರದವರನ್ನು ಬಿಜ್ಞಾಪಿಸಿಕೊಂಡಿರುವರು. ಜರ್ಮನರ [illegible] ಬಹಳ ನೀಚ ಸ್ವಭಾವದ್ದೆಂತ ಅಮೇರಿಕನರು [illegible].

ಯುದ್ಧರಂಗದಲ್ಲಿ ಬಹಳ ಪರಾಕ್ರಮದಿಂದ ಕಾದಾಡಿದ [illegible] ಸೈನಿಕರುಗಳಿಗೆ ರುಷ್ಯದ ರಾಯಭಾರರವರು [illegible] ಕೊಟ್ಟಿರುವರು. ಭಾರತೀಯ [illegible] ಪದಕಗಳನ್ನು ಪಡೆದಿರುವರು.

ಮಿತ್ರರ ಸಂಯುಕ್ತ ಸೇನೆಗಳಿಂದ ಏಳು ಆಕಾಶನಾವೆಗಳು ಶತ್ರುಗಳ ದೇಶಗಳ ಸರಹದ್ದುಗಳಲ್ಲಿ ಸಂಚರಿಸುತ್ತ ಟ್ರೈನ್ ಮತ್ತು ಟರ್ಗ್ನೀರ್ ಪ್ರಾಂತ್ಯಗಳಲ್ಲಿ ೮೦ ಸಿಡಿಮದ್ದಿನ ತೋಟೆಗಳನ್ನು ಎಸೆದಿರುವದು ಈ ತೋಟೆಗಳು ಬಿದ್ದ ಪ್ರಾಂತ್ಯಗಳಲ್ಲಿ ದೊಡ್ಡ ಬೆಂಕಿ ಎದ್ದಿರುವುದು.

ಜರ್ಮನರ ಸೇನಾ ಬಲದ ಸಂಖ್ಯೆಯು ಈ ರೀತಿ ಗೊತ್ತಾಗಿರುವುದು:— ಜುಲಾಯಿ ತಿಂಗಳ ಅಂತ್ಯದಲ್ಲಿ ಪಶ್ಚಿಮ ರಣರಂಗದಲ್ಲಿ ೧,೮೦೦,೦೦೦, ಪೂರ್ವ ರಣರಂಗದಲ್ಲಿ ೧,೪೦೦,೦೦೦, ಮತ್ತು ೧,೨೦೦,೦೦೦, ಒಸ್ಟ್ರಿಯನರು ಈ ರೀತಿ ಜುಮ್ಲಾ ಸೇನಾ ಬಲವು ೪,೨೦೦,೦೦೦ವಾಗಿತ್ತು. ಜರ್ಮನಿಯು ಈ ತನಕ ನಡದ ಯುದ್ಧದಲ್ಲಿ ೧½ ಮಿಲಿಯ ಸೇನೆಯನ್ನು ಕಳಕೊಂಡಿದೆ.

ಪೂರ್ವ ರಣರಂಗದಲ್ಲಿ ಕೊವ್ನೊ ಮತ್ತು ವಿಲ್ನಾ ಪ್ರಾಂತ್ಯಗಳಲ್ಲಿ ಶತ್ರುಗಳನ್ನು ರುಶ್ಯಯನರು ಮುಂದರಿಸಲು ಬಿಡಲಿಲ್ಲ

ಟ್ರಾನ್ಸ್‌ವಾಲದಲ್ಲಿಯ ಕಲ್ಲಿದ್ದಲಿನ ಗಣಿಗಳ ಮಾಲಿಕರು ಒಂದು ಲಕ್ಷ ಟನ್ ಕಲ್ಲಿದ್ದಲನ್ನು ಸಾಮ್ರಾಜ್ಯದ ಸರಕಾರದವರಿಗೆ ಉಚಿತವಾಗಿ ಕೊಟ್ಟಿರುತ್ತಾರೆ

ಜರ್ಮನರ ಜಲಾಂತರ್ಗಾಮಿ ನಾವೆಗಳನ್ನು ಗುರುತಿಸಿ ಹಿಡಿದು ಅವುಗಳ ಮೇಲಿಂದ ಬೊಂಬುಗಳನ್ನು ಎಸೆದು ನಾಶಪಡಿಸುವ ಸುಲಭ ಉಪಾಯವನ್ನು ಬ್ರಿಟಿಷರು ಕಂಡು ಹಿಡಿದಿರುವರೆಂತ ತೋರಿಬರುತ್ತದೆ ಒಸ್ಟೆಂಡಿನ ಹತ್ತಿರ ಈ ರೀತಿ ಜರ್ಮನರ ಒಂದು ಜಲಾಂತರ್ಗಾಮಿ ನಾವೆಯನ್ನು ನಾಶಪಡಿಸಿರುವರು ಜೀಬ್ರುಗ್ಗನ್ನು ತೋಪುಗಳಿಂದ ಹಾರಿಸಿದ್ದರಿಂದ ಅಲ್ಲಿರುವ ಜರ್ಮನರ ಜಲಾಂತರ್ಗಾಮಿ ನಾವೆಗಳೂ ಈ ನಾವೆಗಳ ಕಟ್ಟಡಗಳೂ ಪೂರ್ಣ ನಾಶಹೊಂದಿವೆ.

ಅಗೋಸ್ತು ತಿಂಗಳ ತಾ. ೨೧ಕ್ಕೆ ಅಂತ್ಯವಾಗುವ ವಾರದಲ್ಲಿ ಮುಳುಗಿ ಹೋದ ವ್ಯಾಪಾರ ಸರಕುಗಳ ಹಡಗಗಳ ಸಂಖ್ಯೆಯು ೧೯ ಆಗಿರುವುದು.

ಪಶ್ಚಿಮ ರಣರಂಗದಲ್ಲಿ ಫ್ರೆಂಚರು ಸೊಂಡರ್‌ನೆಕ್ ಮತ್ತು ಲೆಂಡರ್‌ಬೆಕ್ ಇವುಗಳ ನಡುವೆ ಇರುವ ತಮ್ಮ ನೆಲೆಗಳನ್ನು ಬಲಪಡಿಸಿರುವರು. ಇಲ್ಲಿರುವ ಜರ್ಮನರ ಕಂದಕಗಳನ್ನು ಫ್ರೆಂಚರು ಸ್ವಾಧೀನ ಪಡಿಸಿಕೊಂಡಿರುತ್ತಾರೆ.

ಪೂರ್ವ ರಣರಂಗದಲ್ಲಿ ಸ್ವೆಂಡಾದ ಮೇಲೆ ಡ್ವಿನ್ಸ್ಕನ ಹತ್ತಿರ ರುಶ್ಯಯನರು ಜರ್ಮನರನ್ನು ಹಿಮ್ಮೆಟ್ಟಿಸಿರುವರು. ಸೇನಾನಾಯಕರ ಆಜ್ಞಾನುಗುಣವಾಗಿ ರುಶ್ಯಯನರು ನೀಮನ್ ನದಿಯಿಂದ ಹಿಂದಕ್ಕೆ ಸೇರುತ್ತಿರುವರು. ರುಶ್ಯಯನರಿಗಿದ್ದ ಮದ್ದಿನ ತೋಟೆಗಳ ಅಡಚಣೆಯು ನಿವಾರಣೆಯಾಯಿತೆಂದೂ, ಈಗ ಕಳದ ಎರಡು ತಿಂಗಳುಗಳಿಂದ ಇವುಗಳ ಸರಬರಾಯಿಯನ್ನು ಯುದ್ಧರಂಗದಲ್ಲಿ ದುಬಾರಿಯಾಗಿ ಒದಗಿಸಿಕೊಡುತ್ತಿರುವರೆಂದೂ ರುಶ್ಯಯನರ ಮಂತ್ರಿಗಳ ಹೇಳಿಕೆಯಿಂದ ತಿಳಿದುಬರುತ್ತದೆ.

ಸರ್ವಿಯವನ್ನು ಅದರ ಆಗ್ನೇಯ ಪ್ರಾಂತ್ಯದಿಂದ ಮುತ್ತಿಗೆ ಹಾಕಬೇಕೆಂಬ ಉದ್ದೇಶದಿಂದ ಡೆನ್ಯುಬ ನದಿಯ ಉತ್ತರ ದಡದಲ್ಲಿ ಜರ್ಮನರ ಮತ್ತು ಒಸ್ಟ್ರಿಯನರ ಸೇನೆಗಳು ಒಟ್ಟು ಕೂಡುತ್ತಿರುವವು. ಸರ್ವಿಯವನ್ನು ಈ ರೀತಿ ಮುರಿದು ಬಲ್ಗೇರಿಯದ ಮಾರ್ಗವಾಗಿ ಮುಂದರಿಸುವ ಇರಾದೆಯಿಂದ ಈ ಹಂಚಿಕೆಯನ್ನು ಜರ್ಮನರು ಮಾಡುತ್ತಿರುವರೆಂತ ಲಂಡನ ಪಟ್ಟಣದಲ್ಲಿ ವರ್ತಮಾನವಿದೆ.

ಬಲ್ಗೇರಿಯವು ಜರ್ಮನರನ್ನು ಈ ಯುದ್ಧದಲ್ಲಿ ವಿರೋಧಿಸಿದರೆ ಬೆಲ್ಜಿಯಮಿನ ಗತಿಯನ್ನು ಇದಕ್ಕೂ ಸಹ ತೋರಿಸಿಕೊಡುವೆವೆಂತಲೂ ವಿರೋಧಿಸದೆ ಹಾದಿಯನ್ನು ಬಿಟ್ಟುಕೊಟ್ಟರೆ ೧೯೧೩ರಲ್ಲಿ ಬಲ್ಗೇರಿಯವು ಪಡದ ಅಪಜಯದಲ್ಲಿ ಹೊಂದಿದ ನಷ್ಟವನ್ನು ಭರ್ತಿಮಾಡಿ ಕೊಡುವೆವೆಂತಲೂ ಜರ್ಮನರು ಬಲ್ಗೇರಿಯಕ್ಕೆ ಹೇಳಿ ಕಳುಹಿಸಿರುವರೆಂತ ಲಂಡನ್ ಟೈಮ್ಸುಪತ್ರಿಕೆಯ ಬಾತ್ಮೀದಾರರು ಬರೆದ ವರ್ತಮಾನದಿಂದ ತೋರಿಬರುತ್ತದೆ.

ಡಾರ್ಡನಲ್ಸ್ ಪ್ರಾಂತ್ಯಗಳ ಸುವ್ಲಾ ಕೊಲ್ಲಿಯಲ್ಲಿ ಶತ್ರುಗಳ ಪ್ರದೇಶಗಳಲ್ಲಿಯೇ ಬ್ರಿಟಿಷರ ದೊಡ್ಡ ಫೌಜು ಬಂದಿಳಿದು ಅಲ್ಲಿ ತಮ್ಮನ್ನು ಎದುರಾಡಲು ಬಂದ ತುರ್ಕರ ೭೦,೦೦೦ ಸೇನೆಯನ್ನು ಸೋಲಿಸಿ ಮುಂದರಿಸಿದ ಬ್ರಿಟಿಷ ಸೇನೆಯ ಪರಾಕ್ರಮಗಳ ವೃತ್ತಾಂತವು ವಿವರವಾಗಿ ಪ್ರಕಟವಾಗುತ್ತಿರುತ್ತದೆ.

ತಾ. ೨೫ನೇ ಅಗೋಸ್ಟು.

ಜರ್ಮನರ ಆರು ಆಕಾಶನಾವೆಗಳು ಪ್ಯಾರಿಸ್ ಪಟ್ಟಣದ ಮೇಲೆ ಬೊಂಬುಗಳನ್ನು ಹಾಕಲು ಪ್ರಯತ್ನಿಸಿದವು ಆದರೆ ಪ್ಯಾರಿಸ್ ತನಕ ಹೋಗಲಿಕ್ಕೆ ಇವುಗಳಿಂದ ಆಗದೆ ಇವುಗಳಲ್ಲಿ ಒಂದು ನಾವೆಯನ್ನು ಫ್ರೆಂಚರು ನೆಲಕ್ಕೆಳಿಸಿ ಸುಟ್ಟುಬಿಟ್ಟಿರುವರು.

ಜರ್ಮನರು ಜೆಪಲಿನ್ ಆಕಾಶನಾವೆಗಳಿಂದ ಒಂದು ವರುಷ ಕಾಲದಲ್ಲಿ ಉಂಟುಮಾಡಿದ ಹಾವಳಿಯ ವೃತ್ತಾಂತವನ್ನು ಬ್ರಿಟಿಷ ನೌಕಾ ಇಲಾಖೆಯವರು ಪ್ರಕಟಿಸಿರುತ್ತಾರೆ. ಇದರಿಂದ ಮಡಿದು ಹೋದ ೭೧ ಜನ ಸ್ತ್ರೀಪುರುಷರೂ ೧೮ ಮಕ್ಕಳೂ ಗಾಯಪಟ್ಟವರು ೧೮೯ ಜನರೂ ೪೧ ಮಕ್ಕಳೂ ಎಂತ ತಿಳಿದುಬರುತ್ತದೆ

ಜರ್ಮನ ಸರಕಾರದವರು ಸೇಕಡಾ ೫ರ ದರದ ಬಡ್ಡಿಯಲ್ಲಿ ಯುದ್ಧದ ಖರ್ಚಿನ ಬಗ್ಗೆ ಸಾಲವನ್ನು ಸಂಗ್ರಹಿಸುತ್ತಿರುವರು.

ಬ್ರೆಸ್ಟ್ ಲಿಟೋವಸ್ಕ್ ಜರ್ಮನರ ಕೈಯಲ್ಲಿ ಬೀಳುವ ಮುಂಚೆಯೇ ರುಶ್ಯಯನರು ಆ ಕೋಟೆಯಲ್ಲಿದ್ದ ಯುದ್ಧ ಸಾಮಗ್ರಿಗಳ ಮತ್ತು ಇತರ ಒಡವೆಗಳ ಸಂಗ್ರಹವೆಲ್ಲವನ್ನೂ ಇಲ್ಲಿಂದ ಸಾಗಿಸಿರುವದರಿಂದ ಈ ಬರಿದಾದ ಕೋಟೆಯನ್ನು ಪಡದ್ದರಿಂದ ಶತ್ರುಗಳಿಗೆ ಯಾವ ಪ್ರಯೋಜನವೂ ಇರದೆಂದು ತಿಳಿದುಬರುತ್ತದೆ.

ಇಟೆಲಿಯನರು ಒಸ್ಟ್ರಿಯನರನ್ನು ಸೋಲಿಸುತ್ತ ಶತ್ರುಗಳ ಸರಹದ್ದುಗಳಲ್ಲಿ ಮುಂದರಿಸಿ ತಮ್ಮ ನೆಲೆಗಳನ್ನು ಬಲಪಡಿಸುತ್ತಿದ್ದಾರೆ.

ಉತ್ತರ ಹಿಂದೂಸ್ಥಾನ.

ತಿರುಚಿನಾಪಳ್ಳಿಯ ಇತ್ತಂಪಳ್ಳಿ ಎಂಬಲ್ಲಿ ಒಬ್ಬ ಮಿರಾಸಿದಾರನು ರಿವಾಜು ದರಕ್ಕಿಂತ ಕಡಿಮೆ ಕ್ರಯಕ್ಕೆ ತನಗೆ ಹಂಚು ಮಾಡಿಕೊಡಬೇಕೆಂತ ಒಬ್ಬ ಕುಂಬಾರನನ್ನು ಕೇಳಿದನು. ಕುಂಬಾರನು ಕಡಿಮೆ ದರದಲ್ಲಿ ಮಾಡಿಕೊಡಲಿಕ್ಕೆ ತಿರಸ್ಕರಿಸಿದರಿಂದ ಆತನನ್ನು ತನ್ನಲ್ಲಿಗೆ ಕರೆತರಿಸಿ ೫ ಜನರಿಂದ ಹೊಡಿಸಿದನು ಕುಂಬಾರನು ಪಿರ್ಯಾದು ಕೊಟ್ಟಲ್ಲಿ ಮೇಜಿಸ್ಟ್ರೇಟರು ಮಿರಾಸಿದಾರಗೆ ರೂ. ೫೦ ಬಾಕಿ ೫ ಅಪರಾಧಿತರಿಗೆ ಪ್ರತಿ ಒಬ್ಬಗೆ ರೂ. ೧೫ ಈ ಪ್ರಕಾರ ಜುರ್ಮಾನೆ ವಿಧಿಸಿದರು. ಆಫೀಲಿನಲ್ಲಿ ಮಿರಾಸಿದಾರನಿಗೆ ವಿಧಿಸಿದ ಶಿಕ್ಷೆಯನ್ನು ಊರ್ಜಿತಪಡಿಸಿ ಬಾಕಿ ೫ ಜನರನ್ನು ಖುಲಾಸೆಪಡಿಸಿದರು. ಮದ್ರಾಸ್ ಹ್ಯಾಕೋರ್ಟಿಗೆ ರಿವಿಜನ್ ಮಾಡಿದ್ದಲ್ಲಿ ಮಿರಾಸಿದಾರನಿಗೆ ಜುಲುಮಾನೆ ವಿಧಿಸಿದ್ದು ಕಡಿಮೆ ಆಯಿತೆಂತಲೂ, ಬಾಕಿ ೫ ಅಪರಾಧಿತರನ್ನು ಆಫೀಲು ಕೋರ್ಟಿನವರು ಬಿಟ್ಟಿದ್ದು ನ್ಯಾಯವಲ್ಲವೆಂತಲೂ ಹ್ಯಾಕೋರ್ಟಿನವರು ಅಭಿಪ್ರಾಯಪಟ್ಟು ಮಿರಾಸಿದಾರನಿಗೆ ಕೊಟ್ಟ ಶಿಕ್ಷೆಯನ್ನು ಊರ್ಜಿತಪಡಿಸಿದರು. ಬಡಜನರ ಕಡೆಗೆ ತಾಳ್ಮೆಯಿಲ್ಲದ ವರ್ಗದಾರರಿಗೆ ಹ್ಯಾಕೋರ್ಟಿನವರ ಈ ಅಭಿಪ್ರಾಯವು ಎಚ್ಚರಿಕೆ ಕೊಡುವುದು.

ಹಾಫಿಜ್‌ಖೊರ್ ಎಂಬಲ್ಲಿ ಶೂರತನ ತೋರಿಸಿದ ಬಗ್ಗೆ ರಸಲ್‌ದಾರ ಫೈಜ ಮಹಮ್ಮದಖಾನ್ ಸಾಹೇಬ್ ಮತ್ತು ದಫೆದಾರ ಮಹಮ್ಮದ ಫಾಜಿಲ್ ಎಂಬ ಇಬ್ಬರು ಮಿಲಿಟರಿ ಉದ್ಯೋಗಸ್ಥರಿಗೆ ಇಂಡಿಯನ ಓರ್ಡರ್ ಆಫ್ ಮೆರೀಟ್ ಎಂಬ ಬಿರುದು ಕೊಡೋಣಾಗಿಯದೆಂತ ಇಂಡಿಯಾ ಗವರ್ನಮೆಂಟಿನ ಗಜೇಟಿನಲ್ಲಿ ಪ್ರಕಟಿಸೋಣಾಗಿಯದೆ.

ಮಣಿಪುರ ಮಹಾರಾಜರವರು ಯುದ್ಧರಂಗದಿಂದ ಚಿಕಿತ್ಸೆಗೆ ತರುವ ಸೈನಿಕರನ್ನು ಒಯ್ಯಲು ಬೇಕಾದ ಮೋಟಾರ್ ಬಂಡಿಗಳ ಬಗ್ಗೆ ರೂ. [illegible],೦೦೦ [illegible]

ಇಂಡಿಯಾ ಸರಕಾರದವರಿಗೆ ಕೊಟ್ಟಿರುತ್ತಾರೆ ಸಾಂಗ್ಲಿ ಸಂಸ್ಥಾನದ ಅಧಿಪತಿರಾಜರವರು ೩೦,೦೦೦ ರೂಪಾಯಿಗಳನ್ನು ಮುಂಬಾಯಿ ಯುದ್ಧ-ಫಂಡಿಗೆ ಕೊಟ್ಟಿರುವರು

~~~~

ಭಾರತಸೇವಾಸಂಘದ ಅಧ್ಯಕ್ಷರಾದ ಬಹುಮಾನಪಟ್ಟ ಶ್ರೀನಿವಾಸ ಶಾಸ್ತ್ರಿಗಳವರು ನಾಗಪುರದಲ್ಲಿ ಸ್ತ್ರೀ ವಿದ್ಯಾಭ್ಯಾಸ ಮೊದಲಾದ ವಿಷಯಗಳಲ್ಲಿ ಭಾಷಣಗಳನ್ನು ಕೊಡುತ್ತಿರುವರು

~~~~

ಪೂನೆಯಲ್ಲಿ ಕಟ್ಟಲ್ಪಡುವ ಸೇವಾಸದನದ ಕಟ್ಟಡಗಳ ಫಂಡಿಗೆ ರೂ ೨೦೦೦ವನ್ನೂ ಸದನದ ಸಹಾಯಾರ್ಥವಾಗಿ ಮೂರು ವರುಷಗಳ ತನಕ ಪ್ರತಿ ವರುಷದಲ್ಲಿ ರೂ ೫೦೦ನ್ನೂ ಕೊಡುವೆವೆಂತ ಮೈಸೂರಿನ ಯುವರಾಜರವರು ವಾಗ್ದಾನಮಾಡಿರುವರಾಗಿ ತಿಳಿಯುತ್ತೇವೆ

~~

ಈ ದೇಶದ ಯುದ್ಧ ಸಂಕಷ್ಟಗಳ ನಿವಾರಣೆ ಫಂಡಿಗೆ ರೂ ೧೦,೦೦೦, ಸೆಂಟ್ ಜೋನ್ ಎಂಬುಲೆನ್ಸ್ ಸಂಘಕ್ಕೆ ರೂ ೫೦೦೦ ಹಾರ್ಡಿಂಗ್ ಪ್ರಭುಗಳ ಪತ್ನಿಯರ ಸ್ಮಾರಕ 'ಕೊಟೇಜ್ ಹೋಮ್ಸ್' ಫಂಡಿಗೆ ರೂ ೧೦೦೦ ಈ ರೀತಿ ರೂ ೧೬,೦೦೦ವನ್ನು ತಮ್ಮ ಸ್ವರ್ಗಸ್ಥ ಮಗಳ ಹೆಸರಲ್ಲಿ ವಿನಿಯೋಗಿಸಬೇಕೆಂದು ಸೂಚಿಸಿ ಬಿಕಾನೀರ್ ಮಹಾರಾಜರವರು ಆ ಮೊಬಲಗನ್ನು ವ್ಯಾಸರಾಯಿ ಪ್ರಭುಗಳಿಗೆ ಕಳುಹಿಸಿಕೊಟ್ಟಿರುವರು

~~~~

ಮುಂಬಾಯಿಯಲ್ಲಿ ಈ ವರುಷ ದಸೆಂಬರ ತಿಂಗಳಲ್ಲಿ ಕೂಡುವ ಏಕೇಶ್ವರವಾದಿಗಳ ಮಹಾಸಭೆಯ ಅಧ್ಯಕ್ಷಸ್ಥಾನವನ್ನು ಸರ್ ರವೀಂದ್ರನಾಥ ಟಾಗೋರರವರು ವಹಿಸಿಕೊಳ್ಳುವರು

~~~~

ಬರೋಡೆಯಲ್ಲಿ ನವೀನವಾಗಿ ಏರ್ಪಡಿಸಿದ ಸಂಸ್ಕೃತ ಕಾಲೇಜು ಈ ತಿಂಗಳ ತಾ ೩ರಿಂದ ಪ್ರಾರಂಭವಾಗಿದೆ

~~~

ಮೆಟ್ರಿಕ್ಯುಲೇಶನ್ ವ ಸ್ಕೂಲ್ ಫೈನಲ್ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳು ಸೇರಬಹುದಾದ ಒಂದು ಮೆಡಿಕಲ್ ಕಾಲೇಜನ್ನು ಮುಂಬಾಯಿ ಸರಕಾರದವರು ಸ್ಥಾಪಿಸಿರುತ್ತಾರೆ

~~~~

ಹಿಂದೂಸ್ಥಾನದ ನಿರಾಶ್ರಿತ ಜನ ಉದ್ಧಾರಕ ಸಂಘದ ಸೆಕ್ರೆಟರಿಗಳಾದ ರಾ। ವಿ ಆರ್ ಸಿಂಧೆಯವರು ಸಂಘದ ಕಳೆದ ವರುಷದ ವಾರ್ಷಿಕ ವೃತ್ತಾಂತದ ಒಂದು ಪ್ರತಿಯನ್ನು ವ್ಯಾಸರಾಯಿ ಪ್ರಭುಗಳಿಗೆ ಕಳುಹಿಸಿಕೊಟ್ಟಿದ್ದರು. ಪ್ರಭುಗಳವರು ಈ ಪ್ರತಿಯನ್ನು ಸ್ವೀಕರಿಸಿಕೊಂಡು ಈ ಸಂಘದ ಪರವಾಗಿ ತಮ್ಮ ಆದರಣೆಯನ್ನು ಸೂಚಿಸಿ ಒಂದು ಪತ್ರವನ್ನು ಸಿಂಧೆಯವರಿಗೆ ತಮ್ಮ ಪ್ರೈವೇಟ್ ಸೆಕ್ರೆಟರಿಗಳ ಮೂಲಕ ಬರೆದು ರೂ ೨೫೦ನ್ನು ಈ ಸಂಘಕ್ಕೆ ಸಹಾಯಾರ್ಥವಾಗಿ ಕಳುಹಿಸಿಕೊಟ್ಟಿರುತ್ತಾರೆ

~~~~

ಮುಂಬಯಿ ಗವರ್ನರರಾದ ವಿಲ್ಲಿಂಗ್‌ಡನ್ ಪ್ರಭುಗಳವರು ಪೂನೆಯಲ್ಲಿಯ ಸೇವಾಸದನವನ್ನು ಸಂದರ್ಶಿಸಿದರು. ಈ ಸದನದ ಕಾರ್ಯದರ್ಶಿಗಳಾದ ಜಿ ಕೆ ದೇವಧರರವರು ಸದನದ ವೃತ್ತಾಂತವನ್ನು ಪ್ರಭುಗಳಿಗೆ ಸೂಚಿಸಿ ಯುದ್ಧ ಫಂಡಿಗೆ ಈ ಸದನದವರು ೧೫೦ ಜೋಡು ಶಾಲುಜೋಲಿಗಳನ್ನು ಕಳುಹಿಸಿಕೊಟ್ಟಿರುವರೆಂತ ಲೂ, ಇನ್ನೂ ಇದೇ ವಿಧದ ಸಹಾಯವನ್ನು ಯುದ್ಧ ಫಂಡಿಗೆ ಮಾಡಲುದ್ದೇಶಿಸಿರುವರೆಂದೂ ಪ್ರಭುಗಳಿಗೆ ತಿಳಿಯಹೇಳಿದರು. ಸಂಘಕ್ಕೆ ಸರಕಾರದವರು ದ್ರವ್ಯಸಹಾಯವನ್ನು ಮಾಡಬೇಕೆಂತ ದೇವಧರರವರು ಗವರ್ನರ ಧೊರೆಗಳವರನ್ನು ವಿಜ್ಞಾಪಿಸಿಕೊಂಡಿದ್ದರಾಗಿ ತೋರಿಬರುತ್ತದೆ ಗವರ್ನರ ಧೊರೆಗಳವರು ಸಂಘದ ಪರವಾಗಿ ತಿನಗಳ ಸಾಹಾನುಭೂತಿಯನ್ನು ಸೂಚಿಸಿ ಮಹಾಯುದ್ಧವು ಮುಗಿದೊಡನೆ ಈ ಸಂಘದವರಿಗೆ ಸರಕಾರದವರು ದ್ರವ್ಯ ಸಹಾಯವನ್ನು ಕೊಡುವ ವಿಷಯವು ಪರ್ಯಾಲೋಚಿಸಲ್ಪಡುವುದೆಂಬುದಾಗಿ ಬರವಸೆಕೊಟ್ಟಿರುತ್ತಾರೆ

~~~

ಬಾವಲಪುರ ಸಂಸ್ಥಾನದ ದರಬಾರಿನವರು ಯುದ್ಧದ ಖರ್ಚಿನ ಬಗ್ಗೆ ರೂ ೨೫,೦೦೦ವನ್ನು ಕೊಡುವರು

~~~~

ಸಿವಿಲ್ ಅಸಿಸ್ಟಾಂಟ್ ಸರ್ಜನರಿಗೆ ಹಂಗಾಮಿಯಾಗಿ ಐ ಎಮ್ ಎಸ್ ಪದವಿಗಳನ್ನು ಕೊಡುವ ವಿಷಯ ಇಂಡಿಯಾ ಗವರ್ನಮೆಂಟಿನವರು ಸಂಸ್ಥಾನಿಕ ಸರಕಾರಗಳಿಗೆಲ್ಲಾ ಈ ರೀತಿ ಬರೆದಿರುವರು ರಣರಂಗದಲ್ಲಿಯೂ ಹಿಂದೂಸ್ಥಾನದಲ್ಲಿಯೂ ಸೇನಾ ಇಲಾಖೆಗೆ ಬೇಕಾದಷ್ಟು ಜನ ಸರ್ಜನರನ್ನು ಒದಗಿಸಿಕೊಡುವಂತೆ ಹಂಚಿಕೆಯನ್ನು ಮಾಡುವದು ಅಗತ್ಯ ಕಾಣುತ್ತದೆ ಈ ಹಂಗಾಮಿ ಪದವಿಯನ್ನು ಸ್ವೀಕರಿಸುವ ಸಿವಿಲ್ ಅಸಿಸ್ಟಾಂಟ್ ಸರ್ಜನರುಗಳವರು ಯುದ್ಧರಂಗದ ಎಲ್ಲಾ ತರದ ಕೆಲಸಗಳನ್ನು ಮಾಡಲು ಸಿದ್ಧರಾಗಿರಬೇಕು. ಹಿಂದೂಸ್ಥಾನದಲ್ಲಿ ಈ ಹಂಗಾಮಿ ಕೆಲಸವನ್ನು ಮಾಡುವಂಥವರಿಗೆ ತಿಂಗಳೊಂದಕ್ಕೆ ತಲಬಿನ ರೂ ೩೫೦ರ ಹೊರತು ಬತ್ತೆ ರೂ ೩೦೦ ಸಿಗುವುದು ಲೆಫ್ಟಿನೆಂಟರೆಂಬ ಬಿರುದು ಸಹ ಈ ಉದ್ಯೋಗವನ್ನು ನಿರ್ವಹಿಸುವ ಕಾಲದಲ್ಲಿ ಇವರಿಗಿವೆ ಸೇನೆಯೊಡನೆ ಹೋದಾಗ ಊಟ ಬಿಡಾರಗಳು ಧರ್ಮಾರ್ಥವಾಗಿ ಸಿಕ್ಕುವವಲ್ಲದೆ ದಿನ ಒಂದಕ್ಕೆ ಪವನು ಒಂದು ಸಿಲಿಂಗ್ ನಾಲ್ಕರ ಪ್ರಕಾರ ಸಂಬಳವೂ ಪವನು ೨೦ರ ಬತ್ತೆಯೂ ಮತ್ತು ಆಯಾ ಸೇನೆಯ ಕೆಲಸವು ಮುಗಿದ ಬಳಿಕ ೬೦ ಪವನಗಳಂತೆ ಉಂಬಳಿಯೂ ಕೊಡೋಣಾಗುವದು

~~~~

ಅಲ್ಲಹಾಬಾದಿನ "ಅಭ್ಯುದಯಪತ್ರದ ಛಾಪಖಾನೆಯ ಮಾಲಿಕರಾದ ಬಹುಮಾನಪಟ್ಟ ಮದನಮೋಹನ ಮಾಲವಿಯರವರು ತಮ್ಮ ಛಾಪಖಾನೆಯ ಬಗ್ಗೆ ಜವಾಬ್ದಾರಿಯ ಠೇವಣಾತಿಯನ್ನು ಕೊಡಬೇಕೆಂತ ಅಲ್ಲಿಯ ಸರಕಾರದವರು ಆಜ್ಞಾಪಿಸಿದ್ದರೆಂತ ಕಳೆದ ಪತ್ರಿಕೆಯಲ್ಲಿ ತಿಳಿಸಿದೆವು ಅಲ್ಲಿಯ ಲೆಫ್ಟಿನೆಂಟ ಗವರ್ನರರಾದ ಬಹುಮಾನಪಟ್ಟ ಸರ್ ಜೇಮ್ಸ್ ಮೆಸ್ಟನ್‌ರವರ ಈ ಆಜ್ಞೆಯನ್ನು ರದ್ದು ಪಡಿಸಿ ಇಂಥಾ ಜವಾಬ್ದಾರಿಯ ಅಗತ್ಯವಿಲ್ಲವೆಂತ ಮಾಲವಿಯರವರಿಗೆ ತಿಳಿಸಿರುತ್ತಾರೆ

~~~~

ಕಲ್ಕತ್ತಾ ಹ್ಯಾಕೋರ್ಟಿನ ಚೀಫ್ ಜಡ್ಜರಾದ ಬಹುಮಾನಪಟ್ಟ ಸರ್ ಲೋರೆನ್ಸ್ ಜೆಂಕಿನ್ಸ್‌ರವರು ಇನ್ನು ಸ್ವಲ್ಪ ಸಮಯದಲ್ಲಿ ಉದ್ಯೋಗದಿಂದ ನಿವೃತ್ತರಾಗುವರು ಕಲ್ಕತ್ತೆಯ ಹ್ಯಾಕೋರ್ಟಿನ ಚೀಫ್ ಜಡ್ಜರಾಗಿ ಇವರು ತಮ್ಮ ಸ್ವತಂತ್ರಬುದ್ಧಿಬಲದಿಂದಲೂ ನ್ಯಾಯಶೀಲತೆಯಿಂದಲೂ, ನಯನುಡಿಗಳಿಂದಲೂ ಜನರಲ್ಲಿ ಭಕ್ತಿವಿಶ್ವಾಸಗಳು ಕೆಡದಂತೆ ವರ್ತಿಸಿದ್ದರಿಂದ ಬಂಗಾಳದಲ್ಲಿಯೂ ಹಿಂದೂಸ್ಥಾನದ ಇತರ ಪ್ರಾಂತ್ಯಗಳಲ್ಲಿಯೂ ಇವರು ಜನಪ್ರಿಯರಾಗಿರುವರು. ಇಂಥವರ ಉಪಕಾರಸ್ಮರಣೆಯನ್ನು ಮಾಡಲು ಸರ್ ರಾಸಬಿಹಾರಿಘೋಷ್, ಸರ್ ಎಸ್. ಪಿ. ಸಿಂಹ, ಬಹುಮಾನಪಟ್ಟ ಸುರೇಂದ್ರನಾಥಬೆನರ್ಜಿ ಸರ್ ಗುರುದಾಸಬೆನರ್ಜಿ, ಮತ್ತು ಸರ್. ಆರ್. ಎನ್. ಬೆನರ್ಜಿ ಮೊದಲಾದ ಬಂಗಾಳದ ಮಹನೀಯರನೇಕರು ಸಭೆಕೂಡಿದ್ದರು. ಈ ಸಭೆಯಲ್ಲಿ ಸರ್ ಜೆಂಕಿನ್ಸ್‌ರವರ ಉಪಕಾರಸ್ಮರಣೆಯನ್ನು ಮಾಡಿ ಇವರ ಗುಣಾತಿಶಯಗಳನ್ನು ಹೊಗಳಿ ಒಂದು ನಿರ್ಣಯವನ್ನು ಮಾಡಿರುವರು. ಜೆಂಕಿನ್ಸ್‌ರವರ ಶಿರಃ ಪ್ರತಿಮೆಯೊಂದನ್ನು ಇವರ ಸ್ಮಾರಕವಾಗಿ ಪ್ರತಿಷ್ಠಿಸಬೇಕೆಂತ ಸಹ ನಿರ್ಣಯಿಸಿರುತ್ತಾರೆ.

~~~~

ಬಂಗಾಳದ ಗವರ್ನರ ದೊರೆಗಳವರು ಚೈತನ್ಯ ಸ್ವಾಮಿಗಳವರ ಜನ್ಮಭೂಮಿಯೂ ಬಂಗಾಳದ ವಿದ್ವತ್ ಕ್ಷೇತ್ರವೂ ಆದ ನವದ್ವೀಪಗಳನ್ನು ಸಂದರ್ಶಿಸಿದರು. ಇಲ್ಲಿಯ ಪಂಡಿತರು ಕಾರ್ಮೈಕೆಲ್ ದೊರೆಗಳವರಿಗೆ ಈ ಸಂದರ್ಭದಲ್ಲಿ ಕೊಟ್ಟ "ನೀತಿರಂಜನ" ಎಂಬ ಬಿರುದನ್ನು ಸಂತೋಷದಿಂದ ಸ್ವೀಕರಿಸಿರುತ್ತಾರೆ

~~

ಸಂಯುಕ್ತ ಪ್ರಾಂತ್ಯದ ಲೆಫ್ಟಿನೆಂಟ ಗವರ್ನರರಾದ ಸರ್ ಜೇಮ್ಸ್ ಮೆಸ್ಟನರವರು ಸಣ್ಣ ಮಕ್ಕಳಿಗೆ ಆಭರಣಗಳನ್ನು ಹಾಕುವುದರಿಂದ ಸಂಭವಿಸುವ ಆಪತ್ತುಗಳನ್ನು ಪ್ರಜಾಜನರ ಲಕ್ಷ್ಯಕ್ಕೆ ತಂದು ಈ ದುಷ್ಟ ಪದ್ಧತಿಯನ್ನು ನಿಲ್ಲಿಸಿಬಿಡಬೇಕೆಂತ ವಿಜ್ಞಾಪಿಸಿಕೊಂಡಿರುವರು. ಆ ಪ್ರಾಂತ್ಯಗಳಲ್ಲಿ ಮಕ್ಕಳಿಗೆ ಆಭರಣಗಳನ್ನು ಹಾಕುವ ರೂಢಿಯು ವಿಶೇಷವಾಗಿರುವದರಿಂದ ಮಕ್ಕಳ ಕೊಲೆಗಳು ಬಹಳ ಅಧಿಕವಾಗಿವೆ ೧೦-೧೨ ರೂಪಾಯಿಗಳ ಆಶೆಗಾಗಿ ಮೀರತ್ ಪಟ್ಟಣದಲ್ಲಿ ಒಬ್ಬ ಕ್ರೂರನು ೯ ವರುಷದ ಒಬ್ಬ ಬಾಲಕನ ಕುತ್ತಿಗೆಯನ್ನು ಕತ್ತರಿಸಿದಂಥಾ ವೃತ್ತಾಂತಗಳನ್ನು ಸರ್ ಜೇಮ್ಸರವರು ಪ್ರಜೆಗಳ ಲಕ್ಷ್ಯಕ್ಕೆ ತಂದಿರುವರು ಸರ್ ಜೇಮ್ಸರವರ ಈ ವಿಜ್ಞಾಪನೆಯನ್ನು ನಮ್ಮಾ ಪ್ರಾಂತ್ಯದವರು ಸಹ ಗಮನಕೊಡುವದು ಅಗತ್ಯವಾಗಿದೆ

~~~~

ಕೊಲ್ಹಾಪುರದ ಮಹಾರಾಜರವರು ತಮ್ಮ ಸಂಸ್ಥಾನದಲ್ಲಿ ಸರದಾರರೂ ಇನಾಮದಾರರು ಮತ್ತು ರೈತರುಗಳಿಂದ ಎಂಬುಲೆನ್ಸ್ ಮೋಟಾರ್‌ಗಾಡಿಗಳ ಬಗ್ಗೆ ಕೂಡಿಸಿದ ರೂ ೩೮,೭೫೦ನ್ನು ವ್ಯಾಸರಾಯಿ ಪ್ರಭುಗಳು ಕೃತಜ್ಞತೆಯಿಂದ ಸ್ವೀಕರಿಸಿರುವರು.

~~~~

ಯುನೈಟೆಡ್ ಇಂಡಿಯಾ ವರ್ತಮಾನಪತ್ರಕ್ಕೆ ಉತ್ತರ ಅಮೇರಿಕದ ಕೆನಡಾ ಎಂಬಲ್ಲಿ ಪ್ರಯಾಣ ಮಾಡಿದ ರಾಮಚಂದ್ರರೆಂಬ ಬಾತ್ಮಿದಾರರು ಬರೆದ ಲೇಖನದಿಂದ ತೋರಿಬರುವುದೇನಂದರೆ.—

"ಶಾಂತಸಾಗರದಲ್ಲಿ ಪ್ರಯಾಣವು ಸ್ವಲ್ಪ ಉದ್ವಿಗ್ನವಾಯಿತು ನನ್ನ ಹೆಂಡತಿಗೆ ಸಮುದ್ರ ಪ್ರಯಾಣದ ವಾಕರಿಕೆ [illegible] ವಾಂತಿಯಾಗಿ ಹೇಗೂ ಬಂದರ ಸೇರಬೇಕೆಂತ ಆಶೆಯಾಯಿತು ಬಂದರ ಸಮೀಪಿಸುತ್ತಲೇ ಸಂತೋಷವಾಯಿತು. ಎಲ್ಲ ಪ್ರಯಾಣಸ್ತರು ಹಡಗದಿಂದ ಇಳಿದು ಬಂದರಕ್ಕೆ ಹೋದರು ನಾನು ಇಂಡಿಯಾದವನಾದುದರಿಂದ [illegible] ಗಕೂಡದೆಂತ ಹೇಳಿದರು. ಹಡಗದ [illegible] ರು ನನ್ನ ಮತ್ತು ನನ್ನ ಹೆಂಡತಿಯ [illegible] ಕೊಡಬೇಕಾಗಿ ಅಧಿಕಾರಿಗೆ ಬರೆದರು [illegible]

[illegible] ಕ್ಯಾಪ್ಟನ್‌ರವರ ಅಸಿಸ್ಟಂಟರು ನಮ್ಮ ಕಡೆ ಯಿಂದ ಪಕ್ಷವಾಗಿ ಹೇಳಿಕೊಂಡರು, ಆದಾಗ್ಯೂ ಫಲ ದೊರೆಯಲಿಲ್ಲ. "ನಾವು ಹಡಗದಲ್ಲಿ ಫಸ್ಟ್‌ಕ್ಲಾಸ್ ಪ್ರಯಾಣಸ್ಥರಾಗಿದ್ದೆವೆಂತಲೂ, ನಮ್ಮ ನಡತೆಯಿಂದ ಯಾವ ಬಾಧಕವೂ ಬಾರದಂತೆ ತಾನು ಜಾಮೀನು ಇದ್ದೇನೆಂತಲೂ" ಕ್ಯಾಪ್ಟನ್‌ರವರು ಹೇಳಿದರೂ ಪರಿಣಾಮ ಕೊಡಲಿಲ್ಲ. ಅಂತೇ ಇಮ್ಮಿಗ್ರೇಶನ್ ಆಫೀಸರರು ಒಂದು – "ಇಂಡಿಯಾದವರು ಯಾರೂ ನಮ್ಮ ದೇಶದ ಮಣ್ಣಿನ ಮೇಲೆ ಕಾಲು ಇಡಕೂಡದು" ಎಂತ ಅಪ್ಪಣೆ ಕೊಟ್ಟರು. ಹಡಗದ ಮೇಲೆ ನನ್ನ ನೌಕರನಾಗಿದ್ದ ಹುಡುಗನು ಸಹ ಬಂದರಕ್ಕೆ ಹೋದನು. ಹಗಲು ರಾತ್ರಿ ೧೪ ದಿವಸಗಳ ವರೆಗೆ ಸಮುದ್ರದಲ್ಲೇ ಪ್ರಯಾಣ ಮಾಡಿದರಿಂದ ಒಂದ ರಕ್ಕೆ ಹೋಗಿ ವಿಶ್ರಾಂತಿ ತೆಗೆದುಕೊಳ್ಳಬೇಕೆಂಬ ಆಶೆ ನಮಗೆ ಬಹಳವಿತ್ತು. ನಾನೂ ನನ್ನ ಹೆಂಡತಿ ಇಬ್ಬರೇ ಉಳಿದೆವು. ನನ್ನ ಹೆಂಡತಿ ಬಹಳ ಬೇಸರಪಟ್ಟಳು.

ಬಟ್ಲಾರೆ, ಜಪಾನಿಯರೂ, ಚೀನಿ ದೇಶದವರೂ ನೀಗ್ರೋಗಳೂ, (ಕಾಡುಜನರು) ಫಿಲಿಪ್ಪಿನವರೂ, ಇವರೆಲ್ಲರಿಗೂ ಸುಸ್ವಾಗತ ಸಿಕ್ಕಿತು ಇಂಡಿಯಾದವರಿಗೆ ಮಾತ್ರ ತಿರಸ್ಕಾರವೇ ಸಿಕ್ಕಿತು!

ಅಹಾ! ಇದು ಯಾರ ತಪ್ಪು—ಕೆನಡಾ ರಾಜ್ಯದ ಜನರ ತಪ್ಪೋ? ಸರ್ವಥ ಅಲ್ಲ ಅವರ ತಪ್ಪು ಅಲ್ಲವೆಂತ ನಾವು ಸಹಸ್ರಾವರ್ತಿ ಹೇಳಬೇಕು. ತಪ್ಪು ನಮ್ಮದೇ ಮತಭೇದಗಳ ಸಂಬಂಧ ಮತ್ತು ಜಾತಿಭೇದಗಳ ಸಂಬಂದ ನಾವು ನಮ್ಮ ದೇಶದಲ್ಲಿ ನಮ್ಮನಮ್ಮೊಳಗನೇ ಜಗಳ ಮಾಡುತ್ತ ಕೂತರೆ, ನಮ್ಮೊಳಗೆ ಏಕಮತ್ಯವುಂಟಾಗಿ ನಾವು ಎಂದು ಒಂದು ಜನಾಂಗವಾಗುವೆವು? ವಿಲಾಯತಿ ಜನರಂತೆ ಮತ್ತು ಜಪಾನಿಯವರಂತೆ ನಾವು ಒಂದು ಜನಾಂಗವಾಗುವ ವರೆಗೆ ನಮ್ಮ ಅವಸ್ಥೆಯು ಇದೇ, ಸರ್ವತ್ರ ಅಪಮಾನವು ಅಥವ ತಿರಸ್ಕಾರವು."

ಜಲಂಧರ (ಕನ್ಯಾ) ಮಹಾ ವಿದ್ಯಾಲಯದ ಪ್ರಿನ್ಸಿಪಾಲರಾದ ಶ್ರೀಮತಿ ಲಾಜವತಿಬಾಯಿಯವರು ಬಡೋದೆಯಲ್ಲಿ ಆಗೋಸ್ತು ೨೬ನೇ ತಾರೀಕಿನ ದಿನ "ಹೆಂಗಸರು ಮತ್ತು ಸಧಾರಣೆಯು" ಎಂಬ ವಿಷಯದಲ್ಲಿ ಭಾಷಣಮಾಡಿದರು. ಬಡೋದೆ ಮಹಾರಾಜರವರು ಸಭಾಧ್ಯಕ್ಷರಾಗಿದ್ದರು. ಹೆಂಗಸರಿಗೆ ವಿದ್ಯೆ ಕೊಡಬೇಕೆಂತಲೂ, ಸಾಧುಗಳು ಅಥವ ಭೈರಾಗಿಗಳೆಂಬ ಹೆಸರಿನಿಂದ ವೈಗಳ್ಳರಾಗಿ ಜೀವನ ಮಾಡುವ ಜನರನ್ನು ಜೀವನೋಪಾಯವಾದ ವೃತ್ತಿಗಳನ್ನು ಆಚರಿಸುವಂತೆ ಮಾಡಬೇಕೆಂತಲೂ, ಮುಟ್ಟಕೂಡದೆಂಬ ಜನರನ್ನು ಉದ್ಧರಿಸಬೇಕೆಂತಲೂ, ಲೋಕದಲ್ಲಿ ಬಹು ಜನರ ಮಧ್ಯವಿರುವ ಅಜ್ಞಾನವನ್ನು ನಿವಾರಿಸುವುದಕ್ಕೆ ವಿದ್ಯಾಪ್ರಸರಣೆ ಮಾಡುವದು ಅಗತ್ಯವೆಂತಲೂ ಭಾಷಣದ ಮುಖ್ಯ ಸಾರಾಂಶವಾಗಿತ್ತು.

ಮ॥ ರಾ॥ ಡಾಕ್ಟರ್ ಪ್ರಭಾಕರ್ ಫೆಲೊ ಆಯರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎಸ್. ವೈ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಏ ಎಸ್ ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್ ಕನ್‌ಸಲ್ಟಿಂಗ್ ಕೆಮಿಸ್ಟ್ ಎಗಿಯರಿವೇಸ್ ಸ- 2 ಬೊಂಬೈ ಇವರು ಬರೆದಿರುವುದು ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿ ದುದರಲ್ಲಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ ಮಲಬದ್ಧತೆ ಪಕ್ಕೆಯ ನೋವು ಹೊಟ್ಟೆನೋವು, ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರು ತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ, ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ

ಮ॥ ರಾ॥ ಪಿ ಎಸ್ ಅಚ್ಯುತರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್ ಇವರು ಬರೆದಿರುವುದು ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ಬಹಳ ಆನಂದಭರಿತನಾಗಿದ್ದೇನೆ ವೈದ್ಯಶಾಲೆಯಲ್ಲಿ ಅನೇಕ ತರದ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರು ಮಾಡುತ್ತಿರುತ್ತಾರೆ

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯು ತ್ತವೆ. ಕ್ಯಾಟಲಾಗು ಉಚಿತ

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಅಶಕ್ತರಾದ ಸ್ತ್ರೀಯರಿರಾ!!!

ಗರ್ಭಾವಸ್ಥೆಯಲ್ಲಿಯ, ವ ಅನಂತರ ತೋರಿಬರುವ ಸರ್ವ ಬಗೆಯ ವಿಕಾರಗಳಿಗೆ ನಿಮಗೆ ಒಂದು ಉಪಾಯವು ಅಗತ್ಯವಿರುವುದು ಆ ಉಪಾಯವಾದರೋ

"ಗುಡೆರಿನ್"

ಎಂಬ ಹಸರಿನ ಈ ಔಷಧವನ್ನು ಸೇವಿಸುವುದೇ! ಸೂರ್ಯನಕಿರಣಗಳು ಇಬ್ಬನಿಯ ಮೇಲೆ ಎರಗುತ್ತಲೇ ಇಬ್ಬನಿಯೆಲ್ಲವೂ ಹೇಗೆ ಆರಿಹೋಗುವುದೋ, ಅದೇ ಮರ್ಯಾದೆಯಲ್ಲಿ ಅಶಕ್ತರಾದ ಸ್ತ್ರೀಯರು ಈ "ಗುಡೆರಿನ್" ಎಂಬ ಔಷಧವನ್ನು ಸೇವಿಸುತ್ತಲೇ, ಅವರ ಶಾರೀರಕ ದುಃಖಗಳೆಲ್ಲವೂ ಉತ್ತರಕ್ಷಣದಲ್ಲಿಯೇ ಹುಟ್ಟಡಗಿ, ಹೋಗುವವು · ಅನಿಯಮಿತವಾದ ಋತುಸ್ರಾವ ಅಶಕ್ತತೆ, ಇವೆಲ್ಲರೋಗಗಳಿಗೆ ಇದು ರಾಮಬಾಣವೇ ಸರಿ

ಹದಿನಾರು ಸಾವಿರ (16,000)

ಸ್ತ್ರೀಯ ಹಲವು ಡಾಕ್ಟರರು ಬಹಳ ಸೂಕ್ಷ್ಮತೆಯಿಂದ ಈ "ಗುಡೆರಿನನ್ನು" ಶೋಧಿಸಿ, ಮೇಲೆ ಹೇಳಿದ ರೋಗಗಳಿಗೆ ಇದೇ ಸಿದ್ಧೌಷಧವೆಂದು ನಿರ್ಧಾರಗೈದಿರುವದರಿಂದ, ಈ ಔಷಧವು ಅಸಂಖ್ಯವಾದ ಔಷ ಧಾಲಯಗಳಲ್ಲಿ ಉಪಯೋಗಿಸಲ್ಪಡುತ್ತದೆ ಇದು "ಹಿಸ್ಟಿರಿಯಾ" ಮೊದಲಾದ ಸ್ತ್ರೀಯರ ಋತು ಸ್ರಾವ ಸಂಬಂಧವಾದ ಸರ್ವರೋಗಗಳಿಗೂ ಮಹೋಪಕಾರಿಯು. ಪ್ರಕೃತ ಪ್ರಸೂತವಾದೊಡನೆ ಅನವಶ್ಯಕವಾಗಿ ಉಪಯೋಗಿಸುವ ಬದಲಿಗೆ, ಇದನ್ನು ಉಪಯೋಗಿಸಿ ನೋಡಿದ್ದಲ್ಲಿ ಇದರ ಗುಣ ಅದ್ಭುತವಾಗಿ ತೋರುವುದು.

ಡಿ. ಬಾಲಾಜಿ ರಾವ್ ಎಂಡ್ ಕಂ. ಬೆಂಗಳೂರು.

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡದಿರುವ ಯಗ್ಜಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರತಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ

ಊದಬತ್ತಿಗಳು 4 ರೂ ತೂಕದ ಶೇರು 1ಕ್ಕೆ ರೂ, 12—0—0 5—0—0, 3—0—0. 2—8—0, 1—4—0, 1—0—0.

ಅರಗಜ ಮತ್ತ ಬಿಲ್ಲೆಗಳು ತೂಲಾ 1ಕ್ಕೆ 2—0—0, 1—0—0 0—12—0, 0—6—0

ಸುಗಂಧಿ ಕಾರ್ಪುರ 1ಕ್ಕೆ 0—1—0 **ಬಾಲಗ್ರಹ** ಧೂಪ ಟಿನ್ 1ಕ್ಕೆ 0—8—0 **ಸುವಾಸನೆ ಸುಣ್ಣ** ಶೀಸೆ 1ಕ್ಕೆ 0—2—0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು** ಗಳು, ಯಸೆನ್ಸುಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರಿ, ಮೈಸೂರು.

ಬಹು ಮನೋಹರ! ಅದ್ಭುತ!

ವಸಂತ ಕೋಕಿಲೆ

ಎಂಬ

ನೂತನವಾದ ಹೊಸ ಕಾದಂಬರೀ ಕಥೆ.

ರಸಿಕ ಶಿರೋಮಣಿಗಳೇ,

"ವಸಂತ ಕೋಕಿಲೆ" ಎಂಬ ಇಂದ್ರಜಾಲ ಮಹೇಂದ್ರಜಾಲಗಳನ್ನು ಸ್ಪಷ್ಟವಾಗಿ ತೋರಿಸುವ ಅತ್ಯದ್ಭುತ ಚಮತ್ಕಾರವಾದ ಹೊಸ ಕಾದಂಬರೀ ಕಥೆಯು ಅಚ್ಚಾಗಿ ಈಗ ತಾನೇ ವಿಕರಿಗ ಸಿದ್ಧವಾಗಿದೆ ಈ ಗ್ರಂಥದಲ್ಲಿ ಶೃಂಗಾರಾದಿ ನವರಸಗಳು ತುಂಬಿ ತುಳುಕುತ್ತಿವೆ ಈವರೆಗೆ ಪ್ರಚುರವಾಗಿರುವ ಎಲ್ಲಾ ಕಥೆಗಳಿಗಿಂತಲೂ ಮಿಾರದಷ್ಟು ರಸ್ಯವುಳ್ಳದ್ದಾಗಿದೆ ವರ್ಣನಾಭಾಗಗಳು ಎಲ್ಲರಿಗೂ ತಿಳಿಯುವ ಹಾಗೆಯೂ ಸ್ವಾಭಾವವಾಗಿಯೂ ಇವೆ ಭಾಷಾಶೈಲಿಯು ಅತ್ಯುತ್ತಮವಾಗಿದೆ. ಓದುವದಕ್ಕಾರಂಭಿಸಿದ ವಾಚಕರ ಮನಸ್ಸನ್ನು ಸಂಪೂರ್ಣವಾಗಿ ಆಕರ್ಷಿಸಿ ಮುಗಿಯುವವರಿಗೂ ಆವೇಶವನ್ನುಂಟುಮಾಡಿ ಉಲ್ಲಾಸಗೊಳಿಸುವ ಹಾಗಿದೆ ತಮ್ಮ ಜ್ಞಾನ, ಭಕ್ತಿ, ವೈರಾಗ್ಯ ಮೊದಲಾದ ವೇದಾಂತ ವಿಷಯಗಳನ್ನೂ ಚೆನ್ನಾಗಿ ತಿಳಿಸುತ್ತದೆ ಕಥಾ ಸಂವಿಧಾನವು ಹೊಸ ಮಾದರಿಯಾಗಿ ಆಶ್ಚರ್ಯಕರವಾಗಿದೆ. ಪ್ರಕಟವಾಗಿ ಶೃಂಗಾರ ರಸವನ್ನು ವರ್ಣಿಸದೆ ಇರುವುದರಿಂದ ಎಲ್ಲಾ ಸ್ತ್ರೀಜನರಿಗೆ ಓದುವುದಕ್ಕೆ ಅರ್ಹವಾಗಿದೆ. ಇದರಲ್ಲಿ ೯ ಪ್ರಕರಣಗಳೂ ೨೩೩ ಪುಟಗಳೂ ಇವೆ ಉತ್ತಮವಾದ ಕಾಗದ, ಸುಂದರವಾದ ಅಕ್ಷರ, ತಪ್ಪಿಲ್ಲದೆ ಸುಂದರವಾಗಿ ಮುದ್ರಿಸಿದೆ. ಬೇಕಾದವರೆಲ್ಲರೂ ಕೆಳಗಣ ವಿಳಾಸಕ್ಕೆ ಬರದು ತರಿಸಿಕೊಳ್ಳಬಹುದು. ಕ್ರಯ ರೂ. ೧—೦—೦ ಮಾತ್ರ.

ವಿಳಾಸ:— ಟಿ. ಎ. ಮೂಣಿಕ್ಯಂ ಶೆಟ್ಟಿ, ಮಾಣಿಕ್ಯ ಮಂದಿರ ...

ಪ್ರೊಫೆಸರ್ ಜೇಮ್ಸ್‌ರವರ ಎಲೆಕ್ಟ್ರೊ ಟಾನಿಕ್ ಪರ್ಲ್ಸ್ ಎಂಬುವ

ವಿದ್ಯುತ್‌ಶಕ್ತಿಯ ವಾಜೀಕರಣ ಮಾತ್ರೆಗಳು

ಇದು ಮುಖ್ಯವಾಗಿ, ಹೆಚ್ಚಾಗಿ ವ್ಯಾಯಾಮವನ್ನು ತೆಗೆದುಕೊಳ್ಳಲಶಕ್ತರಾದ ಮನುಷ್ಯರಿಗೂ, ಮದುಳಿನಲ್ಲಿಯೇ ಕೆಲಸ ಮಾಡುವಂತಹ ವಿದ್ಯಾವಂತರಿಗೂ, ಬೋಧಕರಿಗೂ, ಗುಮಾಸ್ತೆಯರಿಗೂ, ವಿದ್ಯಾರ್ಥಿಗಳಿಗೂ ಮತ್ತು ವ್ಯಾಪಾರಿಗಳಿಗೂ ಅತ್ಯುತ್ತಮವಾದ ಮುಕ್ತಿನೋಪಾದಿಯ ಔಷಧ.

ಈ ಮಾತ್ರೆಗಳು ಕೆಳಗಿನ ವ್ಯಾಧಿಗಳನ್ನು ನಿರ್ಮೂಲ ಮಾಡುತ್ತದೆಂಬುದು ಎಲ್ಲರ ಅನುಭವಸಿದ್ಧಾಂತವು. ಕ್ಷಯರೋಗ, ಎಳವು (ಹಿಸ್ಟೀರಿಯಾ) ವೀರ್ಯದೌರ್ಬಲ್ಯವು, ಮಂದಾಗ್ನಿ, ಕೆಟ್ಟರಕ್ತ, ತಲೆತಿರುಗುವಿಕೆ, ಶಕ್ತಿಹೀನತೆ, ಧಾತುಕ್ಷೀಣತೆ, ಧಾತು ಸಂಬಂಧವಾದ ವಿಕಾರಗಳು, ಸ್ತ್ರೀಗರ್ಭ ವಿಕಾರಗಳು, ಅಕಾಲದ ಮುಟ್ಟು, ಸೊಂಟದಲ್ಲಿಯು ನೋವು, ಮೂಪಿನಲ್ಲಿಯ ಬಿಳುಪು, ಮಂದವಾದ ದೃಷ್ಟಿ, ಕೀಲುಗಳ ನೋವು, ಈ ಮೇಲೆ ಹೇಳಿರುವ ಎಲ್ಲಾ ವ್ಯಾಧಿಗಳಲ್ಲಿ ನಿಮಗೆ ಯಾವುದಾದರೂ ಉಂಟಾದರೆ, ಆ ವ್ಯಾಧಿಯು ಆರಂಭಿಸುತ್ತಲೇ, ಬೇರೆ ಚಿಕಿತ್ಸೆಗಳನ್ನು ಮಾಡಿ, ಉಪಯೋಗವಿಲ್ಲದ ಕಷ್ಟಗಳನ್ನು ತಂದುಕೊಳ್ಳದೆ, ತಕ್ಷಣವೇ ಮೇಲೆ ಹೇಳಿರುವ ಪ್ರೊಫೆಸರ್ ಜೇಮ್ಸ್‌ರವರ ವಿದ್ಯುತ್‌ಶಕ್ತಿಯ ವಾಜೀಕರಣ ಮಾತ್ರೆಗಳನ್ನು ತರಿಸಿ ಉಪಯೋಗಿಸಿಕೊಳ್ಳಿರಿ. ಈ ಮಾತ್ರೆಗಳನ್ನು ಉಪಯೋಗಿಸುವುದರಿಂದ ಮೇಲೆ ಹೇಳಿರುವ ವ್ಯಾಧಿಗಳೆಲ್ಲವೂ ನಿರ್ಮೂಲವಾಗಿ ವಾಸಿಯಾಗುವುದು. ಅಲ್ಲದೆ, ನಿಮ್ಮ ಶರೀರಗಳನ್ನು ದೃಢವಾಗಿಯೂ, ಅಂದವಾಗಿಯೂ, ಕಷ್ಟಪಟ್ಟು ಕೆಲಸಗಳನ್ನು ಮಾಡಲು ಶಕ್ತರನ್ನಾಗಿಯೂ ಈ ಮಾತ್ರೆಗಳು ನಿಮಗೆ ಮನೋಲ್ಲಾಸವನ್ನೂ ಕೊಡುತ್ತವೆ. ನೀವು ಈ ಮಾತ್ರೆಗಳನ್ನು ಇದುವರೆಗೂ ಉಪಯೋಗಿಸದಿದ್ದರೆ, ಈಗಲಾದರೂ ಒಂದು ಬುದ್ದಿ ತರಿಸಿಕೊಂಡು ಉಪಯೋಗಿಸಿ ನೋಡಿದರೆ, ನಿಮಗೆನೇ ನಂಬಿಕೆಯುಂಟಾಗುವುದು.

25 ಮಾತ್ರೆಗಳುಳ್ಳ ಸೀಸೆ 1ಕ್ಕೆ ರೂ. 1—4—0. 40 ಮಾತ್ರೆಗಳುಳ್ಳ ಸೀಸೆ 1ಕ್ಕೆ ರೂ. 2—0—0. ಟಪ್ಪಾಲು ಖರ್ಚು ಅಲಾಯಿದ.

ಅಂದವಾಗಿ ಥಳಥಳಿಸುವ ಕೂದಲನ್ನು ಕೊಡುವ

ಕಾಮಿನಿಯಾ ಆಯಿಲ್ (ರಿಜಿಸ್ಟರ್ಡ್).



ಈ ಎಣ್ಣೆಯು ಸುಪ್ರಸಿದ್ಧವಾದ ವನಸ್ಪತಿಗಳ ಮತ್ತು ಸುಗಂಧ ದ್ರವ್ಯಗಳ ಮಿಶ್ರಣದಿಂದ ತಯಾರು ಮಾಡಲ್ಪಟ್ಟಿರುವುದು. ಈ ಎಣ್ಣೆಯನ್ನು ಪ್ರತಿ ದಿನವೂ ಉಪಯೋಗಿಸುವುದರಿಂದ ಇದು ಮೆದುಳನ್ನು ತಣ್ಣಗೆ ಗೈದು ಜ್ಞಾಪಕಶಕ್ತಿಯನ್ನು ಅಭಿವೃದ್ಧಿ ಮಾಡುತ್ತದೆ. ಇದರ ಘನತೆಯಿಂದ ಅನೇಕ ದೊಡ್ಡ ಮನುಷ್ಯರೂ, ಹೆಂಗಸರೂ, ಯೌವನಸ್ಥರೂ ಯಾವಾಗಲೂ ಉಪಯೋಗಿಸುತ್ತಿರುತ್ತಾರೆ. ಕಾಮಿನಿಯಾ ಎಣ್ಣೆಯನ್ನು ಉಪಯೋಗಿಸುವುದರಿಂದ ತಲೆಕೂದಲು ನುಣುಪಾಗಿಯೂ ಒಲವುಳ್ಳದ್ದಾಗಿಯೂ, ನೋಡಲು ರೇಶ್ಮೆಯಂತೆ ಹೊಳಪುಳ್ಳದ್ದಾಗಿಯೂ ಆಗುವುದರಿಂದ ಈಗ ಅಂಗಡಿಗಳಲ್ಲಿ ದೊರಕುವ ಅನೇಕ ಕೀಳು ತರದ ಎಣ್ಣೆಗಳನ್ನು ಕಮ್ಮಿ ಬೆಲೆಗೆ ತೆಗೆದುಕೊಂಡು ಅನ್ಯಾಯವಾಗಿ ತಲೆಯ ಕೂದಲನ್ನು ಹಾಳುಮಾಡಿಕೊಳ್ಳಬೇಡಿರಿ.

ಕ್ರಯ ಸೀಸೆ 1ಕ್ಕೆ ರೂ. 1—0—0.

,, ,, 3ಕ್ಕೆ ,, 2-10—0.

ವಿ. ಪಿ. ಚಾರ್ಜು ಅಲಾಯಿದ.

N. B. — ಕಾಮಿನಿಯಾ ಎಣ್ಣೆಯನ್ನು ತೆಗೆದುಕೊಳ್ಳುವಾಗ ಕಾಮಿನಿಯಾ (ರಿಜಿಸ್ಟರ್ಡ್) ಎನ್ನುವದನ್ನೇ ತೆಗೆದುಕೊಳ್ಳಿರಿ.

ಯಾವಾಗಲೂ ಕುಟುಂಬದಲ್ಲಿ ಅವಶ್ಯವಾಗಿರತಕ್ಕ ಔಷಧವು.

ಆಡ್‌ಮನ್ಸ್ ಸ್ಪೈಸ್ ಸಾಲ್ವ್.

ವಾಯುವಿನಿಂದ ಶರೀರದ ಯಾವ ಭಾಗಕ್ಕೆ ಉಂಟಾಗುವ ನೋವು, ನಾವು ಶ್ವಾಸ ಬಿಡುವಾಗಲೂ ಮತ್ತು ತೆಗೆದುಕೊಳ್ಳುವಾಗಲೂ ಉಂಟಾಗುವ ಎದೆನೋವು ವಾಯುವಿನಿಂದ ಕೀಲುಗಳಲ್ಲಿ ಉಂಟಾಗುವ ನಡುವಿನ ನೋವು, ತಲೆಶೂಲೆ ಮತ್ತು ಕೈಕಾಲು ನೋವು, ಇವುಗಳೆಲ್ಲವೂ ಈ ಮುಲಾಮನ್ನು ಹಚ್ಚುವುದರಿಂದ ಶುದ್ಧಾಂಗವಾಗಿ ನಿವೃತ್ತಿಯಾಗುತ್ತದೆ. ಒಂದು ಸಲ ಉಪಯೋಗಿಸಿ ನೋಡಿರಿ. ಇತರ ಮುಲಾಮುಗಳನ್ನು ಉಪಯೋಗಿಸದೆ ಇದನ್ನೆ ಉಪಯೋಗಿಸುವುದರಿಂದ ನಿಮಗೆ ಹೆಚ್ಚಾದ ಲಾಭ ಉಂಟು. ಕ್ರಯ ಬಾಟ್ಲಿ ಒಂದರ ರೂ. 1—0—0. ಟಪ್ಪಾಲು ಖರ್ಚು 4 ಆಣೆ.

ವಸಂತ, ಗ್ರೀಷ್ಮ, ವರ್ಷ, ಶರತ್ ಈ ನಾಲ್ಕು ಋತುಗಳಲ್ಲಿಯೂ ಯಾವಾಗಲೂ ನಿಮ್ಮ ಅಂತಃಕರಣಕ್ಕೆ ಆನಂದವನ್ನು ಕೊಟ್ಟು ಸುಪ್ರಸಿದ್ಧವಾದ ಸುವಾಸನೆಯಿಂದೊಡಗೂಡಿದ ಅನೇಕ ಪುಷ್ಪಗಳಿರುವ ತೋಟದಿಂದ ಈಗಲೇ ಹೊಸದಾಗಿ ತಂದ ಪುಷ್ಪಗಳ ಆನಂದವನ್ನು ಕೊಡುವ

ಆಟೋ ದಿಲ್ಬಹಾರ್

ಇದು ಲೋಕದಲ್ಲಿ ಅದ್ವಿತೀಯವಾದ ಸುಗಂಧಗಳಲ್ಲಿ ಮೇಲಾದ ಸ್ಥಾನವನ್ನು ಹೊಂದಿರುತ್ತದೆ ಎಂದು ಎಲ್ಲರೂ ಉಪಯೋಗಿಸಿ ನೋಡಿ ಶ್ಲಾಘನೆ ಮಾಡಿರುತ್ತಾರೆ. ಇದನ್ನು ಉಡುಪುಗಳ ಮೇಲೆ ಚಿಮುಕಿಸಿಕೊಂಡರೆ ಯಾವ ವಿಧವಾದ ಚುಕ್ಕೆಯು ಕಾಣದೆ, ಸದಾ ಇರತಕ್ಕ ಪರಿಮಳ ಸುಗಂಧವನ್ನು ಕೊಡುತ್ತದೆ. ಒಂದು ಸಾರಿ ಉಪಯೋಗಿಸುವುದರಿಂದ ಇದರಲ್ಲಿ ನಂಬಿಕೆ ಹುಟ್ಟುತ್ತದೆ. ಇದನ್ನು ಕೊಂಡುಕೊಳ್ಳುವಾಗ ರಿಜಿಸ್ಟರಾಗಿರುವ "ಆಟೋ ದಿಲ್ಬಹಾರ್" ಡಬ್ಬಿಯನ್ನು ಪೇಕಿಂಗ್ ಒಡೆಯದಿರುವುದನ್ನೇ ನೋಡಿ ತೆಗೆದುಕೊಳ್ಳಿರಿ.

ಕ್ರಯ ಸಣ್ಣ ಸೀಸೆ 1ಕ್ಕೆ 0—8—0.

,, ಮಿಡಿಯಂ ,, ,, 0-12—0.

,, ½ ಔನ್ಸಿನ ,, ,, 2—0—0.

ಆಟೋ ದಿಲ್ಬಹಾರ್ ಕಾರ್ಡು 1ರ ಬೆಲೆ 0—1—0.

ಪೋಸ್ಟೇಜು ಅಲಾಯಿದ.

ಆಡ್‌ಮನ್ಸ್ ಮಲೇರಿಯಸ್ ಪಿಲ್ಸ್.

ಶೀತಜ್ವರ, ಚಳಿಜ್ವರ, ಮೊರೆಜ್ವರ ಮತ್ತು ಸಾಧಾರಣ ಜ್ವರ ಇವುಗಳಲ್ಲಿ ಆಡ್‌ಮನ್ಸ್ ಮಲೇರಿಯಸ್ ಮಾತ್ರೆಗಳು ಬಹು ಆಶ್ಚರ್ಯಕರವಾದ ಗುಣಗಳನ್ನು ಕೊಡುತ್ತವೆ. 30 ಮಾತ್ರೆಗಳ ಡಬ್ಬಿ 1ರ ಬೆಲೆ ರೂ. 1—0—0. ಟ. ಖ. ಅಲಾಯಿದ.

THE ANGLO INDIAN DRUG & CHEMICAL COMPANY, 16 MARKET BOMBAY 2.

ಪ್ರಧಾನ ಏಜಂಟರು: **ದಿ ಊಲನ್ ಮಾರ್ಟ್, ಮಂಗಳೂರು ದ. ಕನ್ನಡ**

Printed & Published by V. S. Kamath at the Mangalore Trading Association's Sharada Press, Mangalore.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ — ವರುಷ ಒಂದಕ್ಕೆ ರೂ 1—4—0. ಟಪ್ಪಾಲು ಹಾಸಲು ಸೇರಿ ರೂ 2—1—0

ಪುಸ್ತಕ IX | ಮಂಗಳೂರು ತಾ. 10ನೇ ಸಪ್ಟಂಬರ ಶುಕ್ರವಾರ 1915. | ಸಂಚಿಕೆ 37

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು

ಸೆಶಿಂತಾನ್.

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು ಈ ಸೆಶಿಂತಾನದ ಸೇವನೆಯಿಂದುಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

1 ಇದು ಶಕ್ತಿಯನ್ನು ವೃದ್ಧಿ ಪಡಿಸ ಪುದಲ್ಲದೆ [illegible] ಶೀಘ್ರದಲ್ಲಿ ಪರಿಹರಿಸುವುದು

2 ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತು ಮಿದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು

3 ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸ ವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತ ಬಂದಲ್ಲಿ ತಿಂದನ್ನವು ಜೀರ್ಣವಾಗುವದಲ್ಲದೆ, ಕಾಲಪ್ರವೃತ್ತಿಯು ಕ್ರಮವಾಗಿ ಆಗುತ್ತದೆ ಅನಾರೋಗ್ಯಕ್ಕೂ ಅಸ್ಪದವುಂಟಾಗುವುದಿಲ್ಲವು

4 ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು

5. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ ಎಲ್ಲ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವವು

6. ಬೇಸಿಗೆ ಮತ್ತು ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ಒಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು

7. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು

ಅದುಕಾರಣ ಇಂತಹ ಗುಣಕಾರಿಯಾದ ಸೆಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ

45 ಮಾತ್ರೆಗಳ ಪೊಟ್ಟ 1ಕ್ಕೆ	0—2—0	200 ಮಾತ್ರೆಗಳ ಪೊಟ್ಟ 1ಕ್ಕೆ	0—[illegible]—0	80 ಮಾತ್ರೆಗಳ ಟಿನ್ 1ಕ್ಕೆ	0—4—0	550 ಮಾತ್ರೆಗಳ ಮರದಪೆಟ್ಟಿಗೆ 1ಕ್ಕೆ	1—0—0
95 ,, ,, ,,	0—4—0	200 ,, ಟಿನ್ ,,	0—9—0	100 ,, ತಿಂಗೆ ,,	0—4—6	1200 ,, ,, ,,	2—0—0

1 ರೂಪಾಯಿಗೆ ಕಡಿಮೆಯಾಗಿ ವಿ. ಪಿ ಮೂಲಕ ಕಳುಹಿಸಲ್ಪಡುವುದಿಲ್ಲವು ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು

☞ ಭರತಖಂಡ, ಬರ್ಮ, ಮತ್ತು ಸಿಲೋನ್ ಈ ಪ್ರಾಂತ್ಯಗಳ ಎಲ್ಲಾ ಭಾಗದಲ್ಲೂ ಏಜಂಟರು ಬೇಕಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಏಜಂಟರು — ದಿ. ಊಲನ್ ಮಾರ್ಟ್, ಮಂಗಳೂರು

ಸೋಲ್ ಏಜಂಟ್ಸ್:—ಸೆಶಿಂತಾನ್ ಡಿಪೋ,
ಪ್ರಿನ್ಸೆಸ್ ಸ್ಟ್ರೀಟ್ ಬೊಂಬಾಯಿ ನಂ. 2.

FREE! FREE!!
S.T.A. Perpetual Calendar
Beautiful and Artistic
As, 10 each Postage Extra.
HOW TO GET IT FREE?
Apply with Postage

Eucalyptus Oil.
PURE & BEST
As. 4 per 1 oz. bottle.
Packing & postage Extra.
M. S. RAO & Co.,
Bangalore City.

ಯಂ. ಯಸ್. ರಾವ್ ಕಂಪೆನಿ.,

ಬುಕ್ ಸೆಲರ್ಸ್, ಅವಿನ್ಯೂರೋಡ್, ಬೆಂಗಳೂರು ಸಿಟಿ.

ಕನ್ನಡ ಹೊಸ ಪುಸ್ತಕಗಳು — ಕಾದಂಬರಿಗಳು

ಸಂಗೀತಸಮಯಸಾರ, ಹೊಸ ಪುಸ್ತಕ 1—4
ಪ್ರಬಂಧ ಮುಕ್ತಾವಳಿ, ಕನ್ನಡ ವಾಕ್ಯರಚನೆಯ ವಿಧಾನವನ್ನು ಹೊಸ ಮತ್ತು ಸುಲಭವಾದ ರೀತಿಯಲ್ಲಿ ವಿವರಿಸಿದೆ) 0 12
ಅರೇಬಿಯನ್ ನೈಟ್ಸ್, ಹೊಸ ಮುದ್ರಣ 2—2
ಮುದ್ರಾಮಂಜೂಷ ಡಿ. 1-10
ಭಕ್ತವಿಜಯ, (ವಿಷ್ಣು ಭಕ್ತರ ಕಥೆಗಳು) ಹೊಸ ಮುದ್ರಣ . . . 3—2
ವ್ಯಕ್ತೇಯು, (ಅನೇಕ ರಹಸ್ಯಗಳು ವಿವರಿಸಲ್ಪಟ್ಟಿವೆ) 0—[illegible]
[illegible], ಹೊಸ ಮುದ್ರಣ [illegible]
ಸ್ತ್ರೀಧರ್ಮನೀತಿ, (ಸ್ತ್ರೀಯರಿಗೆ ಅತ್ಯಾವಶ್ಯಕವಾದದ್ದು) . 0—9
ದುರ್ಗಾದಾಸ (ಬಂಗಾಳೀ ನಾವಿಲ್) 0-12
ಪ್ರಫುಲ್ಲ, ಡಿ (ಪತ್ತೆದಾರಿ ಕಥೆ) . . 0 12
ವಿಷವಿವಾಹ, ಹೊಸ ಮುದ್ರಣ 0—4
ಶೋಭನೆ, ಡಿ 0-12
ಚಂದ್ರಪ್ರಭಾ, ಹೊಸ ಕಾದಂಬರಿ 0-12
ಚಂಪಕ . . . 0—4
ಪ್ರಿಂಟರ್ಸ್ ವಿಜಯಂ, ಸೋಲ್ಜರ್ [illegible]

ಯಂ. ಸುಬ್ಬರಾವ್, ಶಂಕರಪುರಂ, ಬೆಂಗಳೂರು ಸಿಟಿ—ಈ ವಿಳಾಸವನ್ನು ಮೇಲ್ಕಂಡಂತೆ ಬದಲಾಯಿಸಿದೆ.

ನಮ್ಮಲ್ಲಿ ಎಲ್ಲಾ ವಿಧವಾದ ಕನ್ನಡ ಕಥೆಗಳೂ, ಬಿ. ವೆಂಕಟಾಚಾರ್ಯರ ನಾವಿಲ್‌ಗಳೂ, ಗವರ್ನಮೆಂಟ್ ಸ್ಕೂಲು ಪುಸ್ತಕಗಳೂ ದೊರೆಯುತ್ತವೆ. ಪುಸ್ತಕದ ಪಟ್ಟಿ ಪ್ರಿಂಟಾಗುತ್ತಿದೆ.

ಯಂ. ಯಸ್. ರಾವ್ ಎಂಡ್ ಕೊ.,
ಬೆಂಗಳೂರು ಸಿಟಿ.

ನೇಟಿವ್ ಡಾಕ್ಟರ್ಸ ಮೂಲ್ಕಿ ಗಣಪಯ್ಯ ಎಂಡ್ ಸನ್ಸ್‌ರವರ

ಔಷಧಗಳು.

ಮಹಾಮದನ ಕಾಮೇಶ್ವರೀ ಲೇಹ್ಯ:—ಬಹಳ ಶ್ರಮಪಟ್ಟು ಕೆಲಸ ಮಾಡುವವರೂ, ಲೇಖಕರೂ, ಮತ್ತು ಇಂದ್ರಿಯ ದೌರ್ಬಲ್ಯ, ಅಜೀರ್ಣ, ಎದೆನೋವು, ಶರೀರಗಳ ಘಾತದಿಂದಾದ ನಿಶ್ಶಕ್ತಿ ಮೊದಲಾದ ಪ್ರಕೃತಿಯುಳ್ಳವರೂ ಇದನ್ನು ಸೇವಿಸಿದ್ದಲ್ಲಿ ಧಾತುಪುಷ್ಟಿಯಾಗಿ ಮುಖವು ಕಾಂತಿಗೊಳಿಸುವದು. ಸೇವನಾ ಕ್ರಮ— ಅಭ್ಯಾಸವುಳ್ಳವರು 1 ಪಾವಲಿ ತೂಕ ಯಾ ಗೋಲಗಾತ್ರ ಅಭ್ಯಾಸಿಸುವವರು 2 ಆಣೆ ತೂಕ ರಾತ್ರೆ ಊಟದ ಮೇಲೆ ಸೇವಿಸಿ ಹಾಲು ಕುಡಿಯತಕ್ಕದ್ದು

1 ಶೇರಿನ ಡಬ್ಬಿಗೆ ಕ್ರಯ 2—0—0

ಚಂದ್ರೋದಯಾವರ್ತಿ:—ಕಣ್ಣಿಗೆ ಅಂಜನ ಮಾಡಿದ್ದಲ್ಲಿ ಬೆಳೆದ ದುರ್ಮಾಂಸ, ತಿಮಿರ, 3 ವರ್ಷದ ಹೂವು, ಇರಳುಕಣ್ಣು, ತಾಚವಿಂದು ಗುಣ

ಕ್ರಯ ರೂ 0—12—0

ಮಹಾಜ್ವರಾಂಕುಶ:—ದಿವಸಕ್ಕೊಮ್ಮೆ ದ್ವಿತೀಯ, ತೃತೀಯ, ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ. ಡಜನ್ ಕ್ರಯ 0—೪—0,

ಮೋಹನಮುದ್ಗರವಟಿ:—20 ನಮೂನೆಯ ಪ್ರಮೇಹ, ಧಾತು ಗತಜ್ವರ ಮೂತ್ರಕೃಚ್ಛ್ರ, ಅಶ್ಮರಿ, ಕಾಮಾಲೆ, ಪಾಂಡು ಗುಣ ಡಜನ್ 1ರ ಕ್ರಯ 1—2—0

ಕೋಲಿರಾ ಯಾನೆ ವಾಂತಿಭೇದಿ ಗುಟಿಕೆ:—ಒಂದೆರಡು ಗುಟಿಕೆಯಿಂದ ವಾಂತಿಭೇದಿ ಕೂಡಲೇ ಗುಣ ಡಜನ್ ಗುಟಿಕೆಯ ಕ್ರಯ 0—12—0

ಚಂದನಾಸವ:—ಮೇಹ, ಶುಕ್ಲಧಾತು ನಷ್ಟತ್ವ ಗುಣ ಬಾಟ್ಲಿಗೆ ರೂ 1

ನಮ್ಮ ಔಷಧಾಲಯದಲ್ಲಿ ಅನೇಕ ವಿಧದ ಬೇರೆ ಔಷಧಗಳು ದೊರೆಯುತ್ತವೆ ಅಪೇಕ್ಷೆಯುಳ್ಳವರು ಕೆಟಲಾಗು ತರಿಸಿಕೊಳ್ಳಬಹುದು ಮೇಲಿನ ಔಷಧಗಳು ಬಹಳವಾಗಿ ಖರ್ಚಾಗುವದರಿಂದ ಕ್ರಯವನ್ನು ಕಡಿಮೆ ಮಾಡಿರುತ್ತದೆ

ವಿಳಾಸ — ಮೂಲ್ಕಿ ಗಣಪಯ್ಯ ಎಂಡ್ ಸನ್ಸ್,

ನೇಟಿವ್ ಡಾಕ್ಟರ್ಸ್,

ತೇರಬೀದಿ ಮನೆ ನಂ 2೬೪ನೇ, ಮಂಗಳೂರು

ಹುಳಬಿದ್ದ ಹುಣ್ಣುಗಳು

ಪಡುಬಿದ್ರಿ ಕಾಡಿಪಟ್ಣ ಮೊಗೇರ ಶೀನು ಹೆಂಗಸು ಬರಿಯುವದು —ನನಗೆ ಸುಮಾರು ಆರು ವರ್ಷಗಳಿಂದ ಎರಡು ಕಾಲುಗಳಲ್ಲಿ ಬೊಕ್ಕೆಗಳು ಹುಟ್ಟಿ ಅದರಲ್ಲಿ ಕೀವು ಸುರಿಯುತ್ತ ಕೆಲವು ಸಣ್ಣ ಛಿದ್ರಗಳುಂಟಾಗಿ ಆ ಛಿದ್ರದಲ್ಲಿ ಹುಳಗಳು ತುಳುಕುತ್ತಿತ್ತಲ್ಲದೆ ಸದರಿ ವ್ರಣಗಳು ಕರಗಿ ಅರ್ಧಾಣೆ ಗಾತ್ರವಾಗಿತ್ತು. ಇದರಿಂದ ನಡಿಯಲಾರದೆ ಕಾಲಿಗೆ ವಸ್ತ್ರ ಕಟ್ಟಿ ಮಲಗಿದ್ದಲ್ಲಿಯೇ ಇದ್ದೆನು. ದೈವವಶಾತ್ ತಮ್ಮ ಸಬ್ ಏಜಂಟರ ಭೇಟಿಯಾಗ್ಯಿ ಪರೀಕ್ಷಾರ್ಥವಾಗಿ ಎರಡು ಸೀಸೆ ತಮ್ಮ ಯುಕಲಿಪ್ಟಸ್ ತೈಲವನ್ನು ಕೊಂಡುಕೊಂಡು ಹೊಟ್ಟೆಗೂ ತಕ್ಕೊಂಡು ಹುಣ್ಣಿಗೂ ಹಚ್ಚಿದೆ. ಎರಡು ಸೀಸೆ ಮುಗಿಯುವಷ್ಟರಲ್ಲಿ ನನ್ನ ಹುಣ್ಣುಗಳು ಒಣಗಿ ನಡಿಯಲು ಅನುಕೂಲವಾಗಿಯದೆ ಎಂಬಿದನ್ನು ತಿಳಿಸಲು ಸಂತೋಷಪಡುತ್ತೇನೆ

ಒಂದೇ ಸಲ ಕೊಡುವದರಲ್ಲಿ ಗುಣ!'

ರಾ| ವೆಂಕಟಕೃಷ್ಣ ಆಚಾರಿ, ಶಂಕರನಾರಾಯಣ:—ನಿಮ್ಮಲ್ಲಿಂದ ತರಿಸಿದ ಯುಕಲಿಪ್ಟಸ್ ತೈಲವನ್ನು ಕೆಲವು ಕಾಲದಿಂದ ಕಠಿಣ ಹೊಟ್ಟೆನೋವಿನಿಂದ ನರಳುತ್ತಿದ್ದ ನನ್ನ ತಾಯಿಗೆ ಒಂದು ಸಲ ಕೊಡುವಷ್ಟರಲ್ಲಿ ಗುಣ ಉಂಟಾದಕಾರಣ ಮನಸ್ಸಿಗೆ ಭಾರಿ ಖುಸಿಯಾಗಿದೆ ಅರ್ಧ ಡಜನ್ ಸೀಸೆ ವಿ ಪಿ. ಮಾಡಿ ಕಳುಹಿಸಿರಿ.

ಇದು ಸಂಜೀವಿನಿಯೇ ಸರಿ!!

ಮ| ರಾ ತುಕ್ರಪ್ಪ, ಟಿ ಏಮಾರ್ಳಕಾರ, ಮುಂಬೈ—ಕೆಲವು ಸಮಯದಿಂದ ಕೆಮ್ಮು ಉಬ್ಬಸದಿಂದ ಪೀಡಿತನಾಗಿದ್ದ ಹುಡುಗಿಯೊಬ್ಬಳಿಗೂ ಹಲವು ಕಾಲದಿಂದ ಹೊಟ್ಟೆನೋವಿನಿಂದ ನರಳುತ್ತಿದ್ದ ಮುದುಕಿಯೊಬ್ಬಳಿಗೂ ನಿಮ್ಮಲ್ಲಿ ದೊರೆಯತಕ್ಕ ಯುಕಲಿಪ್ಟಸ್ ತೈಲವನ್ನು ನನ್ನ ಸ್ನೇಹಿತರಾದ ವೈ ಕೊರಗಪ್ಪನವರಿಂದ ಪಡಕೊಂಡು ಕೊಟ್ಟಲ್ಲಿ ಇಬ್ಬರೂ ಗುಣಹೊಂದಿರುತ್ತಾರೆ ಕೆಮ್ಮು, ಉಬ್ಬಸ, ಹೊಟ್ಟೆನೋವು, ಸರ್ವ ತರದ ವಾಯು ರೋಗಗಳಿಗೆ ಇದು ಸಂಜೀವಿನಿಯಂತೆ ಇದೆ. ಆದುಹರಿಂದ 2 ಡಜನ್ ವಿ ಪಿ ಮಾಡಿ ಕಳುಹಿಸಿರಿ ಔನ್ಸ್ ಸೀಸೆ 1ಕ್ಕೆ 0—5—0. ಡಜನ್ ಸೀಸೆಗಳಿಗೆ ವಿ ಪಿ ಸಹಿತ ರೂ 3—12—0 ಅನುಪಾನ ಪತ್ರಿಕೆ ಸೀಸೆಯೊಂದಿಗೆ.

☞ ನಮ್ಮಲ್ಲಿ ಹೋಮಿಯೋಪಥಿ ಮತ್ತು ಟಿಸ್ಯೂ ರೆಮಿಡಿಸ್‌ಗಳೆಂಬ ಔಷಧಿಗಳು ದೊರೆಯುತ್ತವೆ.

ವಿಳಾಸ.— ಏಜಂಟರು —

ಇಕ್ಲಿಪ್ಸ್ ಏಜನ್ಸಿ, ಮಂಗಳೂರು.

ಸುಗಂಧವಿಲಾಸ, ರಥಬೀದಿ, ಮಂಗಳೂರು.

ಉತ್ತಮ ಹೊಸ ನಾವೆಲ್ (ಕಥೆ)ಗಳು.

ಆರಿಸಿ ಆರಿಸಿ ತೆಗೆದಿರುವ ಹೊಸ ಪುಸ್ತಕಗಳೇ.

		ರೂ ಆ ಪೈ			ರೂ ಆ ಪೈ
೧	ಕಲಿಯುಗ	೦—೫—೦	೧೦	ಅದ್ಭುತ ರಾಮಾಯಣ	೦—೬—೦
೨	ಸುಭದ್ರೆ	೦—೪—೦	೧೧	ಚಮತ್ಕಾರ ಚಿಂತಾಮಣಿ	೦—೧೦—೦
೩	ಚಂದ್ರಕಳಾ	೦—೬—೦	೧೨	ನವೀನ ಬೇತಾಳ	೦—೫—೦
೪	ಶುಕಸಪ್ತತಿ	೧—೭—೦	೧೩	ವಚನ ವಿಷ್ಣುಪುರಾಣ	೨—೦—೦
೫.	ಕಲಾನಾಥ	೦—೪—೦	೧೪	ವಚನ ದೇವೀಭಾಗವತ	೨—೦—೦
೬.	ಸುಮತಿ	೦—೬—೦	೧೫	ಉತ್ತರ ರಾಮಾಯಣ ಕಥಾ	೦—೫—೦
೭	ಶಕ್ತಿ	೦—೧೨—೦	೧೬	ಸಿಂಹ ಚರಿತ್ರೆ ..	೦—೧೦—೦
೮	ಮಾಧವೀಕಂಕಣ	೧—೮—೦	೧೭	ಯಯಾತಿ ಚರಿತ್ರೆ	೦—೪—೦
೯	ಬೆಕ್ಕೋಜಿ	೦—೪—೦	೧೮	ಕಾದಂಬರಿ ಕಥೆ ...	೦—೮—೦

ವಿದ್ಯಾನಂದ ಮಾಸಪತ್ರಿಕೆ ವಾರ್ಷಿಕ ಚಂದಾ ರೂ ೨—೪—೦

ಸಂಸ್ಕೃತ, ಕನ್ನಡ ಭಾಷೆಗಳಲ್ಲಿ ಕಾದಂಬರಿ ವೇದಾಂತ ಜ್ಯೋತಿಷ ವಗೈರೆ ಗ್ರಂಥಗಳು ಯಾವಾಗಲೂ ದೊರಿಯುವುವು

☞ ಸ್ಕೂಲ್ ಪುಸ್ತಕಗಳೂ ದೊರೆಯುತ್ತವೆ.

(ಕ್ಯಾಟಲಾಗ್‌ಮಾದರಿ ಪತ್ರಿಕೆ ಉಚಿತ)

ಬಾಣವಾಡಿ ಆದಿನಾರಾಯಣಶಾಸ್ತ್ರಿ,

ವಿದ್ಯಾನಂದ ಆಫೀಸ್,

ಶಂಕರಪುರ, ಬೆಂಗಳೂರು ಸಿಟಿ

ವಿನಾಮೂಲ್ಯ' ವಿನಾಮೂಲ್ಯ'' ವಿನಾಮೂಲ್ಯ!!!

ಆರ್ಯಚಿಕಿತ್ಸಾರಹಸ್ಯ.

ಆರ್ಯವೈದ್ಯದ ರಹಸ್ಯವೇನೆಂಬದನ್ನು ತಿಳಕೊಳ್ಳಬೇಕೆಂಬ ಇಚ್ಛೆಯುಳ್ಳವರಿಗೆ ಆರ್ಯಚಿಕಿತ್ಸಾರಹಸ್ಯವು ಪರಮ ಸಾಧನವಾಗಿದೆ ನಮ್ಮ ದೇಶೀಯ ವೈದ್ಯವಿದ್ಯೆಯಲ್ಲಿ ಪೂರ್ಣ ಗೌರವ ಮತ್ತು ಅಭಿಮಾನವನ್ನು ಇಟ್ಟು ಆರ್ಯಚಿಕಿತ್ಸೆಯನ್ನು ನಮ್ಮ ಜನರೊಳಗೆ ರೂಢಿಗೆ ಹ್ಯಾಗೆ ತರಬೇಕೆಂಬುವದು ಈ ಪುಸ್ತಕವನ್ನು ಮನಸ್ಸಿಟ್ಟು ಓದಿದರೆ ಸಮ ವ್ಯಕ್ತವಾಗುವದು ಕನ್ನಡನುಡಿಯ ಒಡನಾಟವಿರುವವರಿಗೆ ಎಲ್ಲರಿಗೂ ತಿಳಿಯುವಂತೆ ಈ ಗ್ರಂಥವು ಕನ್ನಡದಲ್ಲಿ ಬರಿಯಲ್ಪಟ್ಟಿದೆ. ವಾಚಕ ಮಹಾಶಯರೇ' ದೇಶಾಭಿಮಾನದಿಂದ ತಮ್ಮ ಆಯುಃಪ್ರಮಾಣದಲ್ಲಿ ಕಾಲುಘಂಟೆ ಸಮಯವನ್ನು ಈ ಪುಸ್ತಕಕ್ಕೋಸ್ಕರ ಕಳೆಯಿರಿ ಈ ಪುಸ್ತಕ ಬೇಕೆಂದಿರುವವರು ತಮ್ಮ ಎಡ್ರೆಸನ್ನೂ ಅರ್ಧಾಣೆ ಸ್ಟಾಂಪನ್ನೂ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿಕೊಟ್ಟರೆ ಪುಸ್ತಕವು ದೊರಿಯುವದು.

ಎಂ. ವಿ ಶಾಸ್ತ್ರೀ,

ಆಯುರ್ವೇದ ಭೂಷಣ,

ಮಂಗಳೂರು

ಕನ್ನಡ ಮಾಸಪತ್ರಿಕೆ.

ವಿಕಟ ವಿನೋದಿನಿ

ಹಾಸ್ಯರಸ ಪ್ರಧಾನವಾದ ಮತ್ತು ನೀತಿಪರವಾದ ಹಾಸ್ಯೋಲ್ಲೇಖನಗಳಿಂದ ಕೂಡಿರುವ ಸಚಿತ್ರವೂ ವಿಚಿತ್ರವೂ ಆದ ಮಾಸಪತ್ರಿಕೆಗೆ ಒಂದು ವರುಷದ ಚಂದಾ ಅಂಚೆ ಹಾಸಲು ಸೇರಿ ರೂ. 1 ಮಾತ್ರ.

ನಮ್ಮ ವಿಳಾಸ:— "ವಿಕಟ ವಿನೋದಿನಿ" ಆಫೀಸು,

ಅರಳೆಪೇಟೆ, ಬೆಂಗಳೂರು ಸಿಟಿ.

ಅಮೃತಾಂಜನ

ಜಗತ್ಪ್ರಸಿದ್ಧವಾದ ಬೇನೆಹಾರಿ ಮುಲಾಮು.

ಇದರ ಉಪಯೋಗದಿಂದ:—ವಾತ, ಸಂಧಿವಾತ, ತಲೆಸೋವು, ಶಿರೋಭಾರ, ಅರ್ಧಾಂಗ ವಾಯು, ಉಳುಕು, ಎದೆ ಸೋವು, ಸೊಂಟದ ಸೋವು, ಶೀತ, ಕೆಮ್ಮು, ದಂತಶೂಲೆ, ಮೂಲವ್ಯಾಧಿ, ಚೇಳು ಕಡಿತ, ಆನೆಗಾಲು, ಸುಟ್ಟ ಗಾಯ, ಮೊದಲಾದ ಎಲ್ಲಾ ತರದ ಸೋವುಗಳ ಮೇಲೆ ದಿವ್ಯ ಔಷಧವಾಗಿ ರುತ್ತದೆ. ಸಾವಿರಾರು ಡಾಕ್ಟರರೂ, ಇದಕ್ಕೆ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ಪ್ರತಿ ತಿಂಗಳಲ್ಲೂ 25,000 ಬಾಟ್ಲಿಗಳು ಮಾರಲ್ಪಡುತ್ತವೆ. ಬಾಟ್ಲಿ ಒಂದರ ಕಿಮ್ಮತು ಆಣೆ 8. ಡಜನ್ 1ಕ್ಕೆ ರೂ. 5—4—0. ವಿ. ಪಿ. ಖರ್ಚು ಪ್ರತ್ಯೇಕ.

ಎಚ್ಚರಿಕೆ:—ಅಮೃತಾಂಜನವನ್ನು ಪಡಕೊಳ್ಳುವಾಗ ಸುಂದರವಾದ ಮತ್ತು ಹಲವು ಭಾಷೆಗಳುಳ್ಳ ಕರಡಿಗೆ ಸಮೇತ ಪಡಕೊಳ್ಳಿರಿ.

ಗಜಕರ್ಣದ ಮುಲಾಮು.

ಮೂರು ಸರ್ತಿ ಹಾಗಿಸುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು. ಇದರಿಂದ ಉರಿಯು ಬರುವದಿಲ್ಲ. ಚರ್ಮವು ಕಪ್ಪಾಗುವದಿಲ್ಲ. ಇದುವರೆಗೆ ಒಂದು ಮಿಲಿಯ ಡಬ್ಬಿಗಳು ಮಾರಲ್ಪಟ್ಟವು. ರಾಜಾರಾಣಿ ಟ್ರೇಡ್ ಮಾರ್ಕ್ 0—6—0. 12 ಡಬ್ಬಿಗಳಿಗೆ 3—8—0. ವಿ. ಪಿ. ಪ್ರತ್ಯೇಕ.

ದಂತಮಂಜನ.

ರಾಜಾರಾಣಿ ಟ್ರೇಡ್ ಮಾರ್ಕ್.

ಈ ಮಂಜನದಿಂದ ಹಲ್ಲುಗಳನ್ನು ದಿನಾಗಲೂ ತಿಕ್ಕುವದರಿಂದ ಹಲ್ಲುನೋವು, ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ವಾಸನೆ, ಮುಂತಾದವುಗಳೆಲ್ಲಾ ನಿಲ್ಲುತ್ತವೆ. ಇದರಲ್ಲಿ ಹಲವು ನಮೂನೆಯು ಔಷಧಗಳಿವೆ. ಬರೀ ಚೋಕಿನ ಹುಡಿ ಅಲ್ಲ. ಡಬ್ಬಿ 1ಕ್ಕೆ 0—2—0. ವಿ. ಪಿ. ಪ್ರತ್ಯೇಕ.

ಮೋಹಿನಿ ತೈಲ.

ಈಗ ಹಲವು ನಮೂನೆಯ ತೈಲಗಳು ಉಪಯೋಗಿಸಿದವರು ಈ ನಮ್ಮ ಸುಗಂಧಮಯವಾದ ಮೋಹಿನಿ ತೈಲವನ್ನು ಒಂದು ಸಾರಿ ಉಪಯೋಗಿಸಿ ನೋಡಿರಿ. ಇದರಲ್ಲಿ "ಕ್ರೂಡ್ ಒಯಿಲ್ ಇಲ್ಲಾ: ಇದು ಗಿಡಮೂಲಿಕೆಗಳಿಂದಲೂ ಬದಾಮಿನ ಎಣ್ಣೆಯಿಂದಲೂ ತಯಾರಿಸಲ್ಪಟ್ಟಿದೆ. ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ ಬೆಳಿಯುವವು.

ಬಾಟ್ಲಿ ಒಂದರ ಕಿಮ್ಮತು ಆಣೆ 0—12—0.

ಸುಂದರಿ ಮುಲಾಮು.

ಮುದ್ದಣಗಳನ್ನು ನಾಶಪಡಿಸಿ ಮುಖವನ್ನು ಸುಂದರಗೊಳಿಸುವದು. ಡಬ್ಬಿ 1ಕ್ಕೆ ರೂ. 0—8—0.

ವಜ್ರಗುಟಿಕ.

ಧಾತುಪುಷ್ಟಿ, ಧಾತುವೃದ್ಧಿ, ಶಕ್ತಿವರ್ಧಕ. 20 ಗುಳಿಗೆಗಳ ಡಬ್ಬಿ ಒಂದರ ರೂ. 1—0—0.

ಕೆ. ನಟರಾಜನ್ ಎಡಿಟರ್, ಇಂಡಿಯನ್ ಸೋಷಿಯಲ್ ರಿಫ್ರೋರ್ಮರ್:—ಅಮೃತಾಂಜನ ಎಲ್ಲಾ ಔಷಧಗಳಿಗಿಂತಲೂ ಬಹಳ ಉತ್ತಮವಾದ ಔಷಧ.

ಡಬ್ಲ್ಯು ಮೆಕ್ಸವೆಲ್, ಮೈಸೂರು:—ಅಮೃತಾಂಜನದಿಂದ ಎಂಥಾ ಕಠಿಣವಾದ ವಾತ ನೋವಾದರೂ ನಿಲ್ಲುತ್ತದೆ.

ಆರ್. ಆರ್. ಗಂಗೋಲಿ:—ಅಮೃತಾಂಜನ ವಾತ, ತಲೆಸೋವುಗಳ ಮೇಲೆ ದಿವ್ಯ ಔಷಧ.

ಡಾಕ್ಟರ್ ಡಾಂಡೆಕರ್, ಎಲ್. ಎಮ್. ಎಂಡ್ ಎಸ್:—ಅಮೃತಾಂಜನ ಎಲ್ಲಾ ಸೋವುಗಳ ಮೇಲೆ ದಿವ್ಯ ಔಷಧ.

ನಮ್ಮ ಔಷಧಗಳನ್ನು ಪಡಕೊಳ್ಳುವಾಗ ಅಮೃತಾಂಜನ ಡಿಪೋ, ಮುಂಬಯಿ ಎಂಬ ಹೆಸರನ್ನು ಓದಿನೋಡಿ ಪಡಕೊಳ್ಳಿರಿ.

ಅಮೃತಾಂಜನ ರಖಮಾಗಿಯೂ, ಚಿಲ್ಲರೆಯಾಗಿಯೂ ಬೇಕಾದವರು ನಮ್ಮ ಮುಂಬಯಿ ಆಫೀಸಿಗೇನೇ ಬರಿಯಬೇಕು. ಮದ್ರಾಸು ಆಫೀಸಿನವರು ರಖಮಾಗಿ ಅಮೃತಾಂಜನ ರವಾನಿಸಿ ಕೊಡುವ ಏರ್ಪಾಡು ಮಾಡಲಿಲ್ಲ.

ಮಂಗಳೂರಲ್ಲಿ—ಎಲ್ಲಾ ಔಷಧಗಳು ಈ ಕೆಳಗಿನ ಕಂಪೆನಿಗಳಲ್ಲಿ ಸಿಕ್ಕುವವು.

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್, ಪರ್ಲ್ ಎಂಡ್ ಸನ್ಸ್, ದಿ ಊಲನ್ ಮಾರ್ಟ್, ಕೊಟ್ಟಿಕಾರ ಬ್ರದರ್ಸ್ ಉಡ್ಪಿ

ಅಮೃತಾಂಜನ ಡಿಪೋ,

6-7 ತಂಬುಚೆಟ್ಟಿ ಸ್ಟ್ರೀಟ್,	**109 ಫ್ರೇಯರ್ ರೋಡ,**
ಜೋರ್ಜ್ ಟೌನ್, ಮದ್ರಾಸು.	**ಮುಂಬಯಿ,**

ESTABLISHED JULY 1906.

THE CANARA BANK, LIMITED., MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs	300,000—0—0	ನಿಯಮಿತ ಮೂಲ ಧನವು ರೂಪಾಯಿ	300,000—0—0
Issued Capital	225,000—0—0	ಹುಟ್ಟಿಬಂದ ಮೂಲ ಧನವು ,,	225,000—0—0
Subscribed Capital	219,100—0—0	ಪ್ರತಿಜ್ಞಾತ ಮೂಲ ಧನವು ,,	219,100—0—0
Paid up Capital	194,100—0—0	ಆಗತ ಮೂಲ ಧನವು ,,	194,100—0—0
Deposits	397,579—5—0	ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು	397,579—5—0
Reserve Fund	33,500—0—0	ರಕ್ಷಿತ ಧನವು	33,500—0—0

Besides the uncalled capital of Rs 25,000/ 25% of the net profits are added annually to the Reserve Fund. Rs 21,685/ have been invested in Government Paper of the face value of Rs 22,500/-

Dividends of not less than 6% paid during the past years and a bonus of 1% to 2% paid in addition during the last three years

Fixed Deposits of Rs 50/ and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee

Short-notice Deposits requiring one weeks notice of withdrawal after one month received @ 2½% per annum at the discretion of the managing committee

Current Deposit Account opened free of charge

Savings Bank Account opened for any sum not less than 4 As and multiples thereof and interest paid @ 4½%.

Loans granted on proper securities and pledges

Sealed Parcels for safe custody received on a moderate charge

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ 25,000 ರಕ್ಷಿತ ಧನವಾಗಿರುತ್ತದೆ ರಕ್ಷಿತ ಧನದ ಪೈಕಿ ರೂ 21,685—0—0 ಸರಕಾರದ ರೂ 22,500ರ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು

"ಕರೆಂಟ್ ಎಕೌಂಟ್" ಎಂಬ ಚಲ್ತಿ ಠೇವಣಾತಿಗಳು ಠೇವಣಿದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು.

ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಆಧಿನ ಮೇಲೆ ಸಾಲಗಳು ಕೊಡೋಣಾಗುತ್ತವೆ

ಮೊಹರು ಹಾಕಲ್ಪಟ್ಟ ತಪ್ಪಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು

Canara Bank Ltd,
Mangalore 1st August 1915.

P. Gopal Naik,
Secretary.

ಅತ್ತರು ಮತ್ತು ಸುರಭಿಗಳಲ್ಲಿ ಮಕುಟವರ್ಧನದಂತಿರುವ

ಒಟ್ಟೋ ಮೋಹಿನಿ

(ರಿಜಿಸ್ಟರ್ಡ್.)

ಅನೇಕ ವಸ್ತುಪ್ರದರ್ಶನಗಳಲ್ಲಿ ಪ್ರದರ್ಶಿಸಲ್ಪಟ್ಟು ಕಡೆಗೆ ಅದರ ರಮ್ಯವಾದ ಅತ್ಯಂತ ಶಾಶ್ವತವಾದ ಪರಿಮಳಕ್ಕಾಗಿ ಚಿನ್ನ ಬೆಳ್ಳಿಯ ಪದಕಗಳನ್ನು ಪಡೆದಿದೆ. ಎಲವಸ್ತ್ರದಲ್ಲಿ ನಾಲ್ಕು ತಟಕುಗಳನ್ನು ತಾಗಿಸುವುದರಿಂದ ಹಿಡಿ ತುಂಬಾ ಮಲ್ಲಿಗೆ ಹೂ ಇದ್ದ ಪರಿಮಳವುಂಟಾಗುವುದು. ಈ ಹೂಗಳು ಕೃತಕವಾದವುಗಳಾದರೂ ನೈಸರ್ಗಿಕ ಹೂವಿನಂತೆ ಪ್ರತಿ ಸಾಯಂಕಾಲ ಬಾಡಿಹೋಗದು. ಆದರೆ ತನ್ನ ಪರಿಮಳವನ್ನು 4 ದಿವಸಗಳಿಗಿಂತಲೂ ಹೆಚ್ಚಿಗೆ ಕೊಡುತ್ತಿರುವದು. ಆದುದರಿಂದ ಒಟ್ಟೋ-ಮೋಹಿನಿಯು ಶಾಶ್ವತವಾದ ಸುರಭಿಯೆಂದು ಕರೆಯಲ್ಪಟ್ಟು ಈ ಕಾಲಕ್ಕೆ ತಕ್ಕುದಾದ ಬಹುಮಾನವಾಗಿ ಕೊಡತಕ್ಕ ದ್ರವ್ಯವಾಗಿದ್ದು ಇದರ ಪರಿಮಳವು ಶಾಶ್ವತವಲ್ಲವೆಂದು ದೃಢಮಾಡಿಕೊಡುವವರಿಗೆ 100 ರೂಪಾಯಿಗಳ ಬಹುಮಾನ ಕೊಡಲಾಗುವದು. ಆದುದರಿಂದ ಯಾಕೆ ಈ ಬಹುಮಾನವನ್ನು ಪಡೆಯಲು ಪ್ರಯತ್ನಿಸಲಾಗದು?

ಕ್ರಯ ಅರ್ಧ ಔನ್ಸ್ ಸೀಸೆಗೆ 2—0—0 1 ಡ್ರಾಮ್ ಸೀಸೆಗೆ 0—12—0. ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0

***Proprietors:*—The Oriental Drug & Chemical Co.**
***Sole Agents:*—MOHINI AGENCY,**
3 Fida Building, Jumma Musjid,
BOMBAY.

ಪ್ರೊಪ್ರೈಟರರು:—ಓರಿಯಂಟಲ್ ಡ್ರೆಗ್ ಎಂಡ್ ಕೆಮಿಕಲ್ ಕೋ.
ಪ್ರಾಮುಖ್ಯ ಏಜಂಟರು:—ಮೋಹಿನಿ ಏಜನ್ಸಿ,
3 ಫಿಡಾ ಬಿಲ್ಡಿಂಗ್, ಜುಮ್ಮಾ ಮಸೀದ್,

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಕು 10ನೇ ಸಪ್ಟಂಬರ 1915

ದಾದಾಭಾಯಿ ನವರೋಜಿಯವರು.

ಹಿಂದೂಸ್ಥಾನದ ಮಾನ್ಯ ಪಿತಾವ ಹನೆಂದು ಹೆಸರುಗೊಂಡ ಈ ಮಹಾಪುರುಷನ ೯೧ನೇ ಜನ್ಮದಿನವು ಕಳೆದ ಶನಿವಾರ ಬಹಳ ವಿಜ್ರಂಭಣೆಯಿಂದ ಇಡೀ ದೇಶದಲ್ಲಿ ಆಚರಿಸಲಾಯಿತು. ಹಿಂದೂಸ್ಥಾನದ ಮುಖ್ಯ ಪಟ್ಟಣಗಳಾದ ಮದ್ರಾಸು, ಬೊಂಬಾಯಿ, ಕಲ್ಕತ್ತಾ, ಪೂನಾ, ಅಲ್ಲಹಾಬಾದ್, ಬನಾರಸ್, ಪಟ್ಟಣಗಳಲ್ಲಿಯೂ ಸಭೆಗಳು ನೆರದು ಜಿಲ್ಲೆ ಜಿಲ್ಲೆಗಳಿಂದಲೂ ಆಶೀರ್ವಚನಗಳು ತಂತಿಂದ್ವಾರಾ ಕಳುಹಿಸಲಾದವು. ಗವರ್ನರ ಜನರಲರವರೂ, ಬೊಂಬೈ ಗವರ್ನರರವರೂ ಸಹಾ ದೀರ್ಘಾಯುಷ್ಯವನ್ನು ಬಯಸಿ ತಂತೀ ಕಳುಹಿಸಿದರು. ಪ್ರಭು ಪ್ರಜೆಗಳ ಅಪಾರ ಪ್ರೀತಿಗೆ ಪಾತ್ರರಾದ ಈ ಮಹಾತ್ಮರ ಜೀವಚರಿತ್ರೆಯನ್ನು ವಿಸ್ತಾರವಾಗಿ ಕೆಲವು ಕಾಲಕ್ಕೆ ಮುಂಚೆ ಈ ಪತ್ರದಲ್ಲಿ ಪ್ರಕಟಿಸಿದ್ದೇವೆ. ಈ ಸಂದರ್ಭದಲ್ಲಿ ಅವರ ಜೀವನದಿಂದ ನಾವು ಕಲಿತುಕೊಳ್ಳಬಹುದಾದ ಮುಖ್ಯ ವಿಷಯಗಳನ್ನು ಮಾತ್ರ ಸೂಚಿಸುವೆವು.

ನವರೋಜಿಯವರ ಜೀವನ ಚರಿತ್ರೆಯಲ್ಲಿ ವ್ಯಾಪಿಸುವ ಮುಖ್ಯ ಲಕ್ಷಣವು ಸರ್ವತೋಮುಖವಾದ ಅಗಾಧ ದೇಶವಾತ್ಸಲ್ಯವಾಗಿದೆ. ಇವರು ಸುಶಿಕ್ಷಿತರೂ ಕಾರ್ಯಪಟುಗಳೂ ಆಗಿರುತ್ತಾ ಧನಾರ್ಜನೆಯಲ್ಲಿ ದೃಷ್ಟಿಯಿಟ್ಟರೆ ಈಹೊತ್ತು ಕೋಟ್ಯಾಧೀಶರಾಗಿ ಅಷ್ಟೈಶ್ವರ್ಯದಲ್ಲಿರಬಹುದಿತ್ತು. ಆದರೆ, ಯುವ್ವನದಲ್ಲಿ ವಿಲಾಯತಿಗೆ ವ್ಯಾಪಾರದ ಉದ್ದಿಶ್ಯ ಹೋಗಿದ್ದರು. ಸ್ವಲ್ಪ ಕಾಲದಲ್ಲಿ ಇವರಲ್ಲಿ ಹುಡುಗಪ್ರಾಯದಲ್ಲೇ ನೆಲೆಗೊಂಡ ದೇಶವಾತ್ಸಲ್ಯವು ಪ್ರಬಲಗೊಂಡು, ಪ್ರಜಾ ಸೇವೆಗೆ ಜೀವನವನ್ನು ಸಮರ್ಪಿಸಿದರು. ಹಿಂದೂಸ್ಥಾನ ರಾಜ್ಯಭಾರದ ಸೂತ್ರವು ಪಾರ್ಲಿಮೆಂಟ್ ಸಭೆಯ ಕೈಯಲ್ಲಿರುವದರಿಂದ ಆ ಸಭೆಯಲ್ಲಿ ತಾನು ಸೇರಿದರೆ ತನ್ನ ಮಾತೃಭೂಮಿಗೆ ನೆರವಾಗಬಹುದೆಂದು ಕಂಡು ಆ ಕಾರ್ಯವನ್ನೇ ಕೈಗೂಡಿಸಿದರು. ಭಾರತೀಯನು ಪಾರ್ಲಿಮೆಂಟ್ ಮೆಂಬರನಾಗುವದು ಈಗಲೂ ಅಮಿತ ಶ್ರಮಸಾಧ್ಯ. ಆ ಕಾಲದಲ್ಲಿ ಅದು ಅದ್ಭುತಕಾರ್ಯವೇ ಅನ್ನಬೇಕು. ನೌರೋಜಿಯವರು ಭಾಷಣಗಳಿಂದಲೂ ಪತ್ರಗಳ ಮೂಲಕವೂ ಗ್ರಂಥ ಪ್ರಚಾರಣೆಯಿಂದ ಇಂಗ್ಲಿಷ್ ಜನರಿಗೆ ಹಿಂದೂಸ್ಥಾನದ ನಿಜವಾದ ಸ್ಥಿತಿಯನ್ನು ತಿಳಿಯಪಡಿಸಿ ಭಾರತೀಯರಲ್ಲಿ ಸಹಾನುಭೂತಿಯನ್ನು ಹುಟ್ಟಿಸಿದರು. ತನ್ನ ಬುದ್ಧಿ ಸಾಮರ್ಥ್ಯದಿಂದಲೂ ಗುಣಗಣಗಳಿಂದಲೂ ಬ್ರಿಟಿಷರಲ್ಲಿ ನಮ್ಮ ಜನಾಂಗಕ್ಕೆ ಗೌರವವನ್ನು ಹುಟ್ಟಿಸಿದರು.

ಜನಾಂಗ ಸಮೂಹದಲ್ಲಿ ಅರಿವು ಹುಟ್ಟಿಸಲಿಕ್ಕೆ ದೇಶಭಾಷಾ ಪತ್ರಗಳೇ ಸಾಧನವೆಂದು ತಿಳಿದು "ರಾಸ್ತ ಗಫ್ತಾರ್" ಎಂಬ ಗುಜರಾತಿ ಪತ್ರವನ್ನು ಪ್ರಕಟಿಸಿದರು. ದೇಶಭಾಷಾ ಪತ್ರ ಪ್ರಚಾರಕ್ಕೆ ಮೊದಲುಮಾಡಿದ್ದು ನೌರೋಜಿಯವರೇ. ಈವರು ತರುಣಪ್ರಾಯದಲ್ಲಿ ಬಾಲಿಕಾ ಶಿಕ್ಷಣದಲ್ಲಿ ಶ್ರಮಪಟ್ಟು ಸ್ಥಾಪಿಸಿದ ಹುಡುಗಿಯರ ಶಾಲೆಗಳು ಈಗಲೂ ಅಭಿವೃದ್ಧಿ ಸ್ಥಿತಿಯಲ್ಲಿವೆ. ಮೊನ್ನೆ ಜನ್ಮ ದಿನದ ಸಂದರ್ಭದಲ್ಲಿ ಶ್ರೀಮತಿ ಸರೋಜನಿ ನಾಯುಡುರವರು ಇವರನ್ನು ಕಾಣಲಿಕ್ಕೆ ಹೋದಾಗ ಇವರು ಬಾಲಿಕೆ ಶಿಕ್ಷಣವನ್ನು ಬಹಳ ಆಸ್ಥೆಯಿಂದ ಉಪದೇಶಿಸಿದರು. ಭಾರತೀಯ ಬಾಲಿಕೆಯರ ವಿದ್ಯಾಭ್ಯಾಸಕ್ಕೆ ತಕ್ಕ ಏರ್ಪಾಡು ನಡಿಸುವದರ ಕುರಿತು ದೇಶದ ಮುಂದಾಳುಗಳು ಸ್ಟೇಟ ಸೆಕ್ರೆಟರಿಯವರಿಗೆ ಮನವಿ ಮಾಡಿರುವರೆಂದೂ ಈ ಚಳವಳದಲ್ಲಿ ಹಿಂದೂಸ್ಥಾನದ ಮಿತ್ರರಾದ ಸರ್ ವಿಲ್ಲಿಯಂ ವೆಡರ್‌ಬರ್ನರಂತಹ ಬ್ರಿಟಿಷ್ ಗೃಹಸ್ಥರ ಸಹಾನುಭೂತಿಯಿದೆಯೆಂದೂ ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಹಿಂದೂಸ್ಥಾನದ ಯುವತಿಯರಿಗೆ ವಿದ್ಯಾಭ್ಯಾಸವನ್ನು ತೋರಿಸುವಾಗ ಯುವಕರಿಗೆ "ಧರ್ಮಂ ಚರ" ಎಂಬ ಉಪದೇಶವನ್ನು ತನ್ನ ಜನ್ಮದಿನ ದಾದಾಭಾಯಿಯವರು ಕಳುಹಿಸಿರುವರು. ಈ ಸಂಗತಿಗಳಿಂದಲೂ ವೈಸರಾಯಿಗಳಿಗೆ ತಾನು ಕೊಟ್ಟ ಕೃತಜ್ಞತಾ ವಾದದ ವಕ್ಕಣೆಯಿಂದಲೂ ನೌರೋಜಿಯವರು ವೃದ್ಧಾಪ್ಯದಲ್ಲಿಯೂ ತನ್ನ ಜೀವಮಾನದ ಉದ್ದಿಶ್ಯವಾದ ದೇಶ ಸೇವೆಯನ್ನು ಮರೆಯಲಿಲ್ಲವೆಂದು ಕಾಣುತ್ತದೆ. ಯಾಕಂದರೆ ಅವರು ಆ ವಕ್ಕಣೆಯನ್ನು "ಯುದ್ಧ ಸಮಾಪ್ತಿಯಾದ ನಂತರ ನನ್ನ ದೇಶಬಾಂಧವರಿಗೆ ಬ್ರಿಟಿಷರ ಕೈಯಿಂದ ಸ್ವರಾಜ್ಯ ದೊರಕೀತೆಂತ ಕೋರುತ್ತೇನೆ" ಎಂಬ ಮಾತುಗಳಿಂದ ಪೂರೈಸಿರುವರು. ತೊಂಭತ್ತು ವರ್ಷದವರೆಗೆ ಬದುಕುವ ಭಾಗ್ಯವು ಅತ್ಯಲ್ಪ ಜನರಿಗೆ ದೊರಕುವದಾದರೂ ಆ ಅಲ್ಪ ಸಂಖ್ಯೆ ಮುಕ್ಕಾಲು ಮೂರು ವೀಸ ಮಂದಿ ಬಾಲ್ಯಾವಸ್ಥೆಯನ್ನು ಕಳೆದು ಬಾಹ್ಯ ಪ್ರವರ್ತನೆಯಲ್ಲಿ ಕೈಹಾಕಲಾರದೆ ಪರವಶರಾಗುವರು. ಇವರು ಕೊಂಗ್ರೆಸ್ ಸಭೆಗೆ ಮೂರು ಬಾರಿ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು. ಇದು ಅಪೂರ್ವ ಬಹುಮಾನ. ಒಮ್ಮೆ ಪುತ್ರಶೋಕದಿಂದ ಬಳಲುತ್ತಿದ್ದರೂ, ಇನ್ನೊಮ್ಮೆ ವೃದ್ಧಾಪ್ಯದ ಭಾರದಿಂದ ನರಳುತ್ತಿದ್ದರೂ, ಇವರು ಧರ್ಮವನ್ನು ದೇಶಸೇವೆಯನ್ನು ಕಾರ್ಯತಃ ತೋರಿ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದ ಮಿ| ನೌರೋಜಿಯವರಿಗೆ ಬೊಂಬೈ ಸಕಲಕಲಾನಿಲಯದವರು ಎಲ್. ಎಲ್. ಡಿ. ಬಿರುದನ್ನು ಕೊಟ್ಟರು. ಇದಲ್ಲದೆ ಬಡೋದೆ ಮಹಾರಾಜರವರು ಕಳೆದ ತಿಂಗಳಲ್ಲಿ ತಿಂಗಳಕಟ್ಲೆ ೩೦೦ ರೂಪಾಯಿ ಪೆನ್ಶನನ್ನು ಸೆಂಕ್ಶನ್ ಮಾಡಿದ್ದಾರೆ.

ಮೂರನೆ ಸಾರಿ ಕೊಂಗ್ರೆಸ್ ಸಭೆಗೆ ನಾಯಕರಾಗಿ ಬಂದಾಗ ಮಿ| ನೌರೋಜಿಯವರು "ಸ್ವರಾಜ್ಯ" ಪದದಲ್ಲಿ ರಾಜದ್ರೋಹ ಸೂಚಕವಾದ ಅರ್ಥವು ಲೇಶಮಾತ್ರವೂ ಇಲ್ಲವೆಂಬದನ್ನು ಸ್ಪಷ್ಟಗೊಳಿಸಿದರು. ಇದರಿಂದ ಸರಕಾರಕ್ಕೂ ಜನರಿಗೂ ಆ ಕಾಲದಲ್ಲಿ ಕೆಲವು ಕಡೆಗಳಲ್ಲಿ ತಲದೋರುತ್ತಿದ್ದ ಪರಸ್ಪರ ಅವಿಶ್ವಾಸವು ಹೋಯಿತು. ಜನರಿಗೆ ಒಂದು ಆದರ್ಶ ದೊರಕಿದಂತಾಯಿತು.

ಶೂರನನ್ನು ಕಂಡರೆ ಜನರು ಸ್ವತೇವ ಮೊಣಕಾಲು ಹಾಕುತ್ತಾರೆಂದು ಒಬ್ಬ ಇಂಗ್ಲಿಷ ಕರ್ತರು ಹೇಳುವರು. ಶೌರ್ಯವು ಯುದ್ಧದಲ್ಲಿ ಮಾತ್ರವಲ್ಲ, ದೈನಿಕ ಲೋಕವ್ಯವಹಾರದಲ್ಲಿಯೂ ತೋರುತ್ತದೆಂದು ಇವರೇ ತೋರಿರುವರು. ಸ್ವಾರ್ಥವನ್ನು ನಿಶ್ಶೇಶವಾಗಿ ತ್ಯಜಿಸಿ ಮಾತೃಭೂಮಿಗೆ ಸರ್ವಸ್ವವನ್ನು ಅರ್ಪಿಸಿದ ಅಕಳಂಕಗುಣಿಯೂ ಪ್ರತಿಭಾಶಾಲಿಯೂ ಶೂರನಲ್ಲವೇ? ನೌರೋಜಿಯವರು ಅಂತಹ ಗುಣವಂತರೂ, ಪ್ರತಿಭಾಶಾಲಿಯೂ, ಪ್ರಜಾನಾಯಕರಿಗೆ ಬೇಕಾದ ಬುದ್ಧಿವಿಶೇಷತೆ ಆತ್ಮನಿವೇಧನವೂ, ಸದಾಚಾರವೂ, ಸ್ಥಿರಪರಿಶ್ರಮವೂ ಇವರಲ್ಲಿ ಪರಿಪೂರ್ಣವದೆ. ಇಂತಹರು ದೇಶದ ಚರಿತ್ರೆಯಲ್ಲಿ ಹೊಸ ದಿನವನ್ನು ಬರಮಾಡುವರು. ಇವರಲ್ಲಿ ನೌರೋಜಿ ನಾಮವು ಸಾರ್ಥಕವಾಯಿತು.

ಕಂದಾರಿಗಳ ಕಾಟ.

ಇಲ್ಲಿಯ ಜನರು ಸಾಮಾನ್ಯ ಕಂದಾರಿಗಳೆಂತ ಕರೆಯುವ ಕೆಲವು ಸ್ತ್ರೀ ಪುರುಷರು ಬಂದಿರುವ ಸಮಾಚಾರವು ಇಲ್ಲಿಯ ಅಧಿಕಾರಿಗಳಿಗೂ, ಮುಖ್ಯವಾಗಿ ಪೋಲಿಸ್ ಅಧಿಕಾರಿಗಳಿಗೂ, ಜನರಿಗೂ ಗೊತ್ತಿರಬಹುದು. ಇಲ್ಲಿಯ ಪಟ್ಟಣದ ಮಧ್ಯದಲ್ಲಿರುವ ಮೈದಾನಿನಲ್ಲಿ ಇವರು ಡೇರೆಗಳನ್ನು ಹಾಕಿಕೊಂಡು ಚೂರಿ, ಪೀಗ, ನಾಣ್ಯಗಳು ಮೊದಲಾದ ಸಾಮಾನುಗಳನ್ನು ಊರೆಲ್ಲಾ ತಿರುಗಿ ಮಾರುತ್ತಿದ್ದಾರೆ. ೩ ಆಣೆಯ ಒಡವೆಗೆ ೮ ಆಣೆ ೮ ಆಣೆಯ ಒಡವೆಗೆ ೨ ರೂಪಾಯಿ ಈ ರೀತಿ ಕ್ರಯ ಇವರು ಹೇಳುವರು. ಕದ್ರೆ, ಮಣ್ಣಗುಡ್ಡ ಮೊದಲಾದ ಪ್ರಾಂತ್ಯಗಳಲ್ಲಿ ಪೋಲಿಸಿನವರ ಮತ್ತು ಜನಸಂಚಾರವು ಕಡಿಮೆಯಾಗಿರುವ ಕಡೆಗಳಲ್ಲಿ ಇವರು ಮನೆಮನೆಗಳಿಗೆ ತಮ್ಮ ಒಡವೆಗಳನ್ನು ತೋರಿಸಿ ವಿಪರೀತ ಕ್ರಯಗಳನ್ನು ಹೇಳುವರು. ಮನೆಯವರು ಇವುಗಳನ್ನು ಕ್ರಯಕ್ಕೆ ಪಡಕೊಳ್ಳಲು ನಿರಾಕರಿಸಿದರೆ ಗಂಡಸರು ಮನೆಯಲ್ಲಿಲ್ಲದ ಸಂದರ್ಭಗಳನ್ನು ನೋಡಿಕೊಂಡು ಮನೆಗಳಲ್ಲಿಯ ಹೆಂಗಸರು ಮಕ್ಕಳನ್ನು ಬೈದು ಕೆಲವು ಕಡೆಗಳಲ್ಲಿ ಮನೆಯೊಳಗೆ ಸಹ ಓಡಿಸಿಕೊಂಡು ಹೋಗುವರಾಗಿ ಕೇಳುತ್ತೇವೆ. ಆದ್ದರಿಂದ ಈ ಸಮಾಚಾರವನ್ನು ವಿಚಾರಿಸಿಕೊಂಡು ಈ ಪಟ್ಟಣದ ಜನರಿಗೂ ಕಂದಾರಿಗಳು ಇಲ್ಲಿಂದ ತೆರಳಿ ಹಳ್ಳಿಗಳಿಗೆ ಹೋಗುವ ಪಕ್ಷದಲ್ಲಿ ಜಿಲ್ಲೆಯ ಜನರಿಗೂ, ಏನೊಂದು ತೊಂದರೆ ಕೊಡದಂತೆ ಬೇಕಾದ ಏರ್ಪಾಡನ್ನು ಪೋಲಿಸಿನವರು ಮಾಡುವರಾಗಿ ಕೋರುತ್ತೇವೆ.

ವಾಙ್ಮಯ ಕಲಾಶಾಸ್ತ್ರಗಳ ಅಭಿವೃದ್ಧಿಯ ಸಮಾಚಾರ.

(Progress of Literature, Science and Art.)

ಎಕ್ಸಾಯಿಜ್ ಕಮಿಶನರಾಗಿ ಪೆನ್ಶನ್ ಪಡೆದವರೂ, ಪುರಾಣವಸ್ತು ಪರಿಶೋಧಕರಲ್ಲಿ ಅಗ್ರಗಣ್ಯರೂ ಆದ ಮಿ ಪೊನ್ನಂಬಲಮ್ ಪಿಳ್ಳೆಯೆಂಬವರನ್ನು, ತಮಿಳಿನಲ್ಲಿ ದೊರೆತುವುಗಳೊಳಗೆ ಅತಿ ಪ್ರಾಚೀನವಾದ "ತೊಲ್ಕಪ್ಪಿಯಮ್" ಎಂಬ ಗ್ರಂಥವನ್ನು ಇಂಗ್ಲಿಷಿಗೆ ಪರಿವರ್ತಿಸುವಂತೆ ಶ್ರೀಮನ್ಮಹಾರಾಜಾ ಗಾಯಕವಾಡರವರು ಆಜ್ಞಾಪಿಸಿರುವಂತೆ ತಿಳಿಯಬರುತ್ತಿದೆ. ತೊಲ್ಕಪ್ಪಿಯಮ್ ಎಂಬುದು ತಮಿಳು ವ್ಯಾಕರಣ ಗ್ರಂಥವು. ಇದನ್ನು ಜಮದಗ್ನಿ ಗೋತ್ರದ ತೊಲ್ಕಪಯ್ಯರ್ ಎಂಬ ಬ್ರಾಹ್ಮಣನು ಬರೆದಿದ್ದನು. ಇದು ಪಾಣಿನಿಯ ವ್ಯಾಕರಣಕ್ಕಿಂತ (ಎಂದರೆ ಕ್ರಿ ಪೂ. ೩೫೦ಕ್ಕೆ) ಮೊದಲೇ ಬರೆಯಲಾಗಿದ್ದಿತೆಂದು ಶೋಧಕರಿಂದ ನಿರ್ಣಯಿಸಲ್ಪಟ್ಟದೆ. ಶ್ರೀ ಗಾಯಕವಾಡ ಮಹಾರಾಜರವರ ದೇಶಭಾಷಾಭಿಮಾನಗಳನ್ನು ಎಷ್ಟೆಂದು ಹೊಗಳುವ?

* * *

ಬಡೋದೆಯ ಸೆಂಟ್ರಲ್ ಲೈಬ್ರರಿ ಎಂಬ ಸಾರ್ವಜನಿಕವಾಚನಾಲಯದಲ್ಲಿ ನೂತನವಾದ ಒಂದು ಏರ್ಪಾಡು ಮಾಡಲಾಗಿದೆ. ಅದರಲ್ಲಿ ಬಾಲಕರ ಶಾಖೆ ಎಂಬ ಶಾಖೆಯನ್ನು ಹೊರಡಿಸಿ ಆ ಶಾಖೆಯಲ್ಲಿ ಪುಸ್ತಕಗಳನ್ನೂ ಮಾತ್ರವೇ ಅಲ್ಲದೆ ಮಕ್ಕಳ ವಿನೋದಕ್ಕಾಗಿ ಮೇಜಿನ ಮೇಲೆ ಆಡತಕ್ಕ ಆಟಗಳನ್ನೂ (table games), ಚಾತುರ್ಯವರ್ಧಕ ಕ್ರೀಡಾಪೇಟಿಕೆಗಳನ್ನೂ (puzzle boxes) ಇಟ್ಟಿರುವರು. ಇನ್ನು ಕಥೆಗಳನ್ನು ಹೇಳುವುದಕ್ಕೂ ಚಲನ ಶಕ್ತಿಯುಳ್ಳ ಚಿತ್ರಗಳನ್ನು (cinoma) ತೋರಿಸುವುದಕ್ಕೂ ಕೂಡ ವ್ಯವಸ್ಥೆ ಮಾಡಲಾಗಿರುವುದೆಂದು ತಿಳಿಯಬರುತ್ತಿದೆ.

ಲಾಹೋರಿನ 'ಪೈಸಾ ಅಖಬರ್' ಎಂಬ ಪತ್ರಿಕೆಯ ಸಂಪಾದಕರು ಹೈದರಾಬಾದಿಗೆ ಹೋಗಿದ್ದಾಗ ನೈಜಾಮರವರ ಸರಕಾರದಿಂದ ೨೭೦೦ ರೂಪಾಯಿ ವಾರ್ಷಿಕ ವೇತನವನ್ನು ತಮ್ಮ ಪತ್ರಿಕೆಗಾಗಿ ಪಡೆದಿರುವರು. ಇನ್ನು ಹೈದರಾಬಾದಿನ ದೈನಿಕ ಪತ್ರಿಕೆಯಾದ 'ಮುಶೀರ್' ಎಂಬ ಪತ್ರಿಕೆಗೆ ೫೦೦ ರೂಪಾಯಿಯಂತೆಯೂ, ಬೊಂಬಾಯಿಯ 'ಇಸ್ಲಾಮಿಕ್‌ಮೇಲ್' ಎಂಬ ಪತ್ರಿಕೆಗೆ ನೂರು ರೂಪಾಯಿಯಂತೆಯೂ, ಪ್ರತಿ ತಿಂಗಳಿಗೆ ಆ ಸರಕಾರದಿಂದ ದೊರೆಯುತ್ತಿದೆ. ಹಾಗೆಯೇ ರಾಜ್ಯದ ಅಧಿಕಾರಿಗಳಿಗೆ ಯುದ್ಧ ವಿಷಯವಾದ ತಂತಿಯ ಸಮಾಚಾರಗಳನ್ನು ಕೊಡುವುದಕ್ಕಾಗಿ ಯುದ್ಧ ನಡೆಯುವಷ್ಟು ಕಾಲವೂ ಸಿಕಂದರಾಬಾದಿನ 'ಬುಲೆಟಿನ್' ಪತ್ರಿಕೆಗೆ ತಿಂಗಳೊಂದರ ಒಂದು ಸಾವಿರ ಕೊಡಬೇಕೆಂದು ಕೂಡ ನಿಜಾಮ ಸರಕಾರದಿಂದ ಆಜ್ಞಾಪಿಸಲಾಗಿದೆ.

* * *

ಪಶುಗಳ ಕೊಂಬಿನಿಂದ ಹಲವು ವಿಧವಾದ ವಸ್ತುಗಳನ್ನು ಮಾಡುವಂತೆಯೇ ಕೊಂಬಿಗಿಂತ ಅಗ್ಗವಾಗಿ ಕೊಂಬಿನಂತೆಯೇ, ಪ್ರಯೋಜನಕಾರಿಯಾದ ಒಂದು ಕೃತಕ ವಸ್ತುವನ್ನು ಇತ್ತಲಾಗೆ ಒಬ್ಬರು ನಿರ್ಮಿಸಿರುವರು. ಗೋಧಿಯ ಹಿಟ್ಟನ್ನೂ ಸೋಡಿಯಂ ಸಿಲಿಕೇಟ್ (sodium silicate) ಎಂಬ ಒಂದು ವಿಧವಾದ ಅಂಟನ್ನು ಬೆರೆಯಿಸಿದರೆ ಕೊಂಬಿನಷ್ಟೇ ಬಲವಾದ ಒಂದು ಪದಾರ್ಥವುಂಟಾಗುವುದು. ಇದರಲ್ಲಿ ಬೇಕಾದ ಸೇಂದ್ರಿಯವರ್ಣ (organic dyes) ವನ್ನು ಕೂಡಿಸಿದರೆ ಎಂಥ ಬಣ್ಣದ ಕೊಂಬನ್ನಾದರೂ, ಹೋಲತಕ್ಕ ವಸ್ತುವನ್ನು ನಿರ್ಮಿಸಬಹುದಾಗಿದೆ. ಆಕೆತೆಯ ಹತ್ತು ಪಾಲು ಸೋಡಿಯಮ್ ಸಿಲಿಕೇಟನ್ನು ಹಬೆಯ ನೀರು ಹಾಕಿ ಕರಡಿಸುತ್ತ ಸ್ವಲ್ಪ ಸ್ವಲ್ಪವಾಗಿ ಬಹು ನಯವಾದ ಬಿಳಿ ಗೋಧಿಯ ಹಿಟ್ಟನ್ನು ಅದರಲ್ಲಿ ಹಾಕಿ ಆ ಮಿಶ್ರಣವನ್ನು ದಪ್ಪನಾಗಿಸಬೇಕು, ಮತ್ತು ಮುಂದೆ ಮೂರು ವಾರಗಳ ತನಕ ಅದನ್ನು ಹಾಗೆಯೇ ಇಟ್ಟಿರಬೇಕು. ಆಗ ಅದರಲ್ಲಿ ಒಂದು ವಿಧವಾದ ರಾಸಾಯನಿಕ ಪ್ರತಿಕ್ರಿಯೆಯುಂಟಾಗಿ ಅದು ಕೊಂಬಿನಂತೆ ಗಟ್ಟಿಯಾದ ಒಂದು ಪದಾರ್ಥರೂಪವನ್ನು ವಹಿಸುವುದು. ಮೊದಲಲ್ಲಿ ಈ ಮಿಶ್ರಣವನ್ನು ಅಚ್ಚುಕಟ್ಟಿಗೆ ಒಳಪಡಿಸದೆ ಯಾವ ಆಕಾರಕ್ಕೆ ಬೇಕಾದರೂ ತರಬಹುದು. ಮತ್ತು ಗಟ್ಟಿಯಾದ ಬಳಿಕ ಮರದ ಹಿತ್ತಾಳೆಯ ಕೆಲಸವಾದ ಮಂತೆಯೇ ಇದರಲ್ಲಿಯೂ ಕೆಲಸಮಾಡಬಹುದು. ಈ ಉದ್ಯೋಗವು ಬಹು ಸುಲಭವಾಗಿರುವುದರಿಂದ ನೀವುರೂ ಪ್ರಯತ್ನಿಸಿ ನೋಡಲು ಬರುವಂತಿದೆ.

* * *

ಕಾಫಿ ಅಥವಾ ಚಹಾ ಸೊಪ್ಪನ್ನು ಉಪಯೋಗಿಸಿದರೆ ಅದರಲ್ಲಿ ಅಡಗಿರುವ ಕೆಫೀನ್ (caffeine) ಎಂಬ ಒಂದು ಮಾದಕ ಪದಾರ್ಥದ ದೆಸೆಯಿಂದ ಮನುಷ್ಯರ ಹೃದಯದ ಮೇಲೆಯೂ ನರಗಳ ಮೇಲೆಯೂ, ಉತ್ತೇಜಕವಾದ ಒಂದು ಪರಿಣಾಮ ಉಂಟಾಗುವುದು. ಒಂದು ಬೀಜದ ಪ್ರತಿ ನೂರು ತೊಲೆಯಲ್ಲಿ ಅರ್ಧತೊಲೆಯಷ್ಟು ಕೆಫೀನು ಇರುವುದು. ಬೀಜದಿಂದ ಈ ಕೆಫೀನನ್ನು ಕೆಲ ಕೆಲವು ರಾಸಾಯನಿಕ ಪ್ರಯೋಗಗಳ ಮೂಲಕ ಹೋಗಗೊಳಿಸಲು ಆಗುವುದಾದರೂ ಕಾಫಿಗೆ ಅದರ ಪರಿಮಳವನ್ನು ಕೊಡತಕ್ಕ ವಸ್ತುಗಳೊಳಗೆ ಕನಿಷ್ಠ ಪಕ್ಷ ಅರರಲ್ಲೊಂದಂಶವು ಆ ಕೆಫೀನಿನ ಸಂಗಡಲೇ ನಷ್ಟವಾಗುವುದೆಂದು ಶಾಸ್ತ್ರಜ್ಞರು ವಿಶ್ಲೇಷಣ ಮಾಡಿ (analyse) ಕಂಡುಕೊಂಡಿದ್ದರು. ಈಗ ಎಲ್ ಎಲ್ ಕ್ಲೀನ್ (L Klein) ಎಂಬ ರಸಾಯನ ಶಾಸ್ತ್ರಿಗಳೊಬ್ಬರು ನೂತನವಾದ ಒಂದು ವಿಧಾನವನ್ನು ಕಂಡುಹಿಡಿದಿರುವರು. ಇವರ ರೀತಿಯನ್ನು ಅವಲಂಬಿಸುದೇ ಆದರೆ ಕಾಫಿಯ ಪರಿಮಳವನ್ನು ಸ್ವಲ್ಪವೂ ಕಡಿಮೆ ಮಾಡದೆ ದೂಷ್ಯವಾದ ಕೆಫೀನನು ಮಾತ್ರ ಹೋಗಗೊಳಿಸಲಾಗುವಾಗಂತೆ.

ಬಿಲ್ಲವರು ಶೈವರೋ?

ಈ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಿಲ್ಲವರ ಜಾತಿಯವರು ಸುಮಾರು ಒಂದು ಲಕ್ಷಕ್ಕಿಂತಲೂ ಜಾಸ್ತಿಯಾಗಿ ಇರುವರೆಂತ ತೋರುತ್ತೆ. ಕಳೆದ ಸಲದ (ಪ್ರಾಯಶಃ ೧೮೮೦) ಖಾನೇಸುಮಾರಿಯಲ್ಲಿ ಬಿಲ್ಲವರು ವೈಷ್ಣವರೆಂತಲೂ, ದೇವದಿಗರೂ, ಬಂಟರೂ ಶೈವರೆಂತಲೂ ಕಾಣಿಸಿರುವರಾಗಿ ಕೇಳಿದ್ದೆ. ಬಿಲ್ಲವರು ವೈಷ್ಣವರೇ ಎಂಬುದಕ್ಕೆ ಬೇರೆ ಅನೇಕ ದೃಷ್ಟಾಂತಗಳಿರುತ್ತವೆ. ಅವರಿಗೆ ಕುಲದೇವರು ತಿರುಪತಿ ವೆಂಕಟರಮಣ ದೇವರು. ಪ್ರತಿ ಮನೆಯಲ್ಲಿಯೂ ತಿರುಪತಿ ಮುಡಿಪು (ಡಬ್ಬಿ) ಇಲ್ಲದೆ ಇಲ್ಲ. ದೀಪಾವಳಿ ಹಬ್ಬದ ಸಮಯದಲ್ಲಿ ಒಂದು ದಿವಸ ತುಲಸಿಪೂಜೆ ಮಾಡಿ ಶ್ರೀನಿವಾಸ ದೇವರಿಗೆ ಕಾಣಿಕೆ ಕಟ್ಟುವ ಸಂಪ್ರದಾಯವು ಅನೇಕರಲ್ಲಿ ಈಗಲೂ ಇರುವುದು. ಈ ಮುಡಿಪಿನಲ್ಲಿ ಕೆಲವು ಹಣವು ಇದ್ದೇ ಇರುವುದು. ಈಗ ಮಾತ್ರ ಕೆಲವು ವರ್ಷಗಳಿಂದ ಕೋಳಿ ಜೂಜಾಟ ಮತ್ತು ಪರೇಲಾಟ ಸೃಷ್ಟಿಯಾದ ಮೇಲೆ ಆ ಮುಡಿಪುಗಳು ಬರಿದಾಗುತ್ತಾ ಬಂದರೂ ಅನೇಕರು ಈಗಲೂ ಮುಡಿಪನ್ನು ಮನೆಯ ಪವಿತ್ರವಾದ ಸ್ಥಳದಲ್ಲಿಟ್ಟು ಭಕ್ತಿಯಿಂದ ಕಾಪಾಡುತ್ತಿರುವರು. ಈ ಜಿಲ್ಲೆಯಿಂದ ಶ್ರಾವಣಮಾಸದಲ್ಲಿ ಅನೇಕರು ಗುಂಪುಗುಂಪಾಗಿ ತಿರುಪತಿ ಯಾತ್ರೆಗೆ ಹೋಗುತ್ತಿರುವದನ್ನು ನೋಡುತ್ತಿದ್ದೇವೆ. ಪ್ರತಿ ಮನೆಯಲ್ಲಿ ವರ್ಷಕ್ಕೊಮ್ಮೆ ಹರಿಸೇವೆ ಎಂಬ ವಿಷ್ಣ್ವಾರಾಧನೆ ಆಗದೆ ಇಲ್ಲ. ಬಿಲ್ಲವರಲ್ಲಿ ಅನೇಕರು ತುಲಸಿಮಣಿಗಳನ್ನು ಧರಿಸುವದೂ, ಹಣೆಗೆ ನಾಮವನ್ನು ಅಥವಾ ತುಲಸಿ ಮೂಲ ಮೃತ್ತಿಕೆಯನ್ನು ನೆಟ್ಟಗೆ ಊರ್ಧ್ವ ಪುಂಡ್ರ ಹಚ್ಚುವದೂ ನಾವು ಈಗಲೂ ನೋಡುತ್ತೇವೆ. ಮನೆ ಯಜಮಾನನಾದರೂ ಬೆಳಗ್ಗೆ ಮುಖಪ್ರಕ್ಷಾಳನ ಮಾಡಿ ತುಲಸಿಗೆ ನೀರು ಎರೆದು ಮಹಾ ಭಕ್ತಿಯಿಂದ ತುಲಸಿ ತೀರ್ಥವನ್ನು ಸೇವಿಸಿ ತುಲಸಿಯನ್ನು ಧರಿಸುವದು ವಾಡಿಕೆಯಾಗಿದೆ. ಪ್ರತಿ ಮನೆಯಲ್ಲಿಯೂ ತುಲಸಿ ವೃಂದಾವನವಿಲ್ಲದೆ ಇಲ್ಲ. ಈ ಎಲ್ಲ ಕಾರಣಗಳಿಂದ ಬಿಲ್ಲವರು ವೈಷ್ಣವರೇ ಅಲ್ಲದೆ ಶೈವರಲ್ಲವೆಂಬುದು ಸ್ಪಷ್ಟವಾಗುತ್ತದೆ. ಅವರು ವಿಷ್ಣು ಭಕ್ತರು. ಶಿವಭಕ್ತರಲ್ಲ, ಅರ್ಥಾತ್ ದ್ವೈತಿಗಳು, ಅದ್ವೈತಿಗಳಲ್ಲ.

ಆದರೆ ಇತ್ತಲಾಗೆ ಮಂಗಳೂರು ಶಹರದ ಕೆಲವರು ಬಿಲ್ಲವರು ಮಲಬಾರ ಪ್ರಾಂತ್ಯದಿಂದ ಬಂದಿದ್ದ ನಾರಾಯಣ ಗುರುಸ್ವಾಮಿ ಎಂಬವರ ಉಪದೇಶದಿಂದಲೋ ಅಥವಾ ಮಲಬಾರಿನ ತೀಯರ್ ಜಾತಿಯವರ ಸಂಪರ್ಕದಿಂದಲೋ ಮಂಗಳೂರಲ್ಲಿ ಗೋಕರ್ಣನಾಥ ಎಂಬ ಹೆಸರಿನಿಂದ ಒಂದ ಶಿವಾಲಯವನ್ನು ಸ್ಥಾಪಿಸಿ ಶಿವಭಜಕರಾಗಿ ನೆಟ್ಟಗೆ ಹಚ್ಚುವ ನಾಮವನ್ನು ಬಿಟ್ಟು ವಿಭೂತಿಯನ್ನು ತಿರ್ಯಕ್ಪುಂಡ್ರವಾಗಿ ಅಂದರೆ ಅಡ್ಡವಾಗಿ ಹಚ್ಚುವದಕ್ಕೆ ಪ್ರಾರಂಭಮಾಡಿರುವಂತೆ ತೋರುತ್ತದೆ. ಅಂದರೆ ಅದ್ವೈತ ಮತವನ್ನು ಅವಲಂಬಿಸುವುದಕ್ಕೆ ಪ್ರಾರಂಭಿಸುವಂತೆ ತೋರುತ್ತದೆ. ಯಾವ ಮತದಲ್ಲಿ ಒಬ್ಬನು ಜನಿಸಿದ್ದಾನೆಯೋ ಅದೇ ಮತರೀತ್ಯಾ ಸಂಸ್ಕಾರಾದಿಗಳು ಆಗಬೇಕೆಂತ ಶಾಸ್ತ್ರಗಳೂ ಹೇಳುತ್ತವೆ. ಅನ್ನಿಬೆಸೆಂಟಮ್ಮನವರಂಥ ಮಹಾತ್ಮರೂ ಘಂಟಾಘೋಷವಾಗಿ ಸಾರುತ್ತಿದ್ದಾರೆ. ಈ ವಿಷಯದಲ್ಲಿ ಇವರು ಪ್ರತಿಬಟಿಸದೆ ಇರುತ್ತಿದ್ದರೆ ಈ ಹಿಂದೂಸ್ಥಾನವು ಇಷ್ಟರಲ್ಲಿಯೆ ಅರ್ಧಕ್ಕಿಂತಲೂ ಹೆಚ್ಚಾಗಿ ಕ್ರೈಸ್ತಮಯವಾಗುತ್ತಿತ್ತು. ಕ್ರೈಸ್ತ ಮತಬೋಧನೆಯ ಕೊನೆಯ ಪರಿಣಾಮವು ಈಗ ನಡಿಯುತ್ತಿರುವ ಯುದ್ಧದಿಂದ ವ್ಯಕ್ತವಾಗುವದು. ಅದು ಈಗ ಪ್ರಸ್ತುತ ವಿಷಯವಲ್ಲ.

ಹಿಂದುಸ್ಥಾನದಲ್ಲಿ ವೇದಮಾರ್ಗವನ್ನೂ ಬ್ರಹ್ಮಸೂತ್ರವನ್ನೂ ಅವಲಂಬಿಸಿರುವ ಮತಗಳಲ್ಲಿ ಅದ್ವೈತ, ವಿಶಿಷ್ಟಾದ್ವೈತ, ದ್ವೈತವೆಂಬ ಈ ಮೂರು ಮತಗಳು ಪ್ರಸಿದ್ಧವಾದವುಗಳು. ವೇದಾಂತ ವಿಚಾರದಲ್ಲಿ ಒಂದರಿಂದ ಒಂದು ಒಂದೊಂದು ಹೆಜ್ಜೆ ಮುಂದರಿಸಿದವುಗಳು. ಅದ್ವೈತಿಯು ವಿಶಿಷ್ಟಾದ್ವೈತಿ ಅಥವಾ ದ್ವೈತಿಯಾಗುವುದು ತಪ್ಪಲ್ಲ. ಶೈವನು ವೈಷ್ಣವನಾಗುವದು ದೋಷವಲ್ಲ. ಅಡ್ಡಲಾಗಿ ಹೋಗತಕ್ಕವನು ನೆಟ್ಟಗ ಹೋಗುವುದಕ್ಕೆ ಪ್ರಯತ್ನಿಸುವುದು ಸಹಜಧರ್ಮ, ಆದುದರಿಂದ ವೈಷ್ಣವರಾಗಿದ್ದ ಬಿಲ್ಲವರು ಶೈವರಾದುದರಿಂದ ವೇದಾಂತಮಾರ್ಗದಲ್ಲಿ ಒಂದು ಹೆಜ್ಜೆ ಮುಂದಕ್ಕೆ ಹೋದವರು ಬಲತ್ಕಾರದಿಂದ ಒಂದಡಿ ಹಿಂದಕ್ಕಿಟ್ಟಂತಾಗುತ್ತದೆ. ಇದರಿಂದ ಸೂಕ್ಷ್ಮವಾಗಿ ವಿಚಾರಿಸಿದರೆ ಇವರ ಅಭಿವೃದ್ಧಿಗೆ ತೊಡಕಾಗಲೂ ಬಹುದೆಂತ ತೋರುತ್ತೆ.

ಬಿಲ್ಲವರ ಮುಂದಾಳುಗಳು ಇದನ್ನು ಮನಸ್ಸಿಗೆ ತಂದು ವಿಚಾರಿಸಿ, ಇದು ವಿಹಿತವಾಗಿ ಕಂಡರೆ ತಮ್ಮ ಪೂರ್ವ ಸಂಪ್ರದಾಯವನ್ನೂ, ಶಿಷ್ಟಾಚಾರವನ್ನೂ ಬಿಡದಂತೆ ನೋಡಿಕೊಳ್ಳುವರಾಗಿ ಬಯಸುತ್ತೇನೆ.

ಸ್ನೇಹಿತ.

ಹಿಂದೀ ಸಾಹಿತ್ಯ ಪರಿಷತ್ತು.

(ಕಳೆದ ಸಂಚಿಕೆಯಿಂದ ಮುಂದರಿಸಿದುದು)

ದೇಶಕರಿಷ್ಟರನ್ನು ಸಾಹಿತ್ಯ ಸಭೆಯವರು ನೇಮಿಸಿ ಅದಕ್ಕಾಗಿಯೇ ಒಂದು 'ನಿಧಿ' (ಫಂಡು) ಏರ್ಪಡಿಸಿರುವರು. ನಾಗರೀಲಿಪಿಯಲ್ಲಿ 'ಅರ್ಜಿ' ಮುಂತಾದುದುಗಳನ್ನು ಬರೆಯಲಾಗದೆಂದು ದೊರೆತನದವರ ನಿರ್ಬಂಧವಿಲ್ಲವಾದರೂ 'ಕೋರ್ಟು'ಗಳಲ್ಲಿ 'ಅರ್ಜಿ' ಮುಂತಾದುದನ್ನು ಬರೆದು ಕೊಡುವ 'ಉಮೇದುವಾರರು' ಉರ್ದು ಭಾಷೆಯನ್ನೇ ಕಲಿತವರಾಗಿರುವುದರಿಂದ, ಪ್ರಾಯಶಃ ಎಲ್ಲವನ್ನೂ ಉರ್ದುವಿನಿಂದಲೇ ಬರೆದು ಕೊಡುತ್ತಿರುವರು. ಹೀಗಾದುದರಿಂದ ನಾಗರೀಲಿಪಿಯಿಂದ ಬರೆದು ಕೊಡಬೇಕೆಂದು ಅಪೇಕ್ಷಿಸತಕ್ಕ ಜನರುಗಳಿಗೆ ಅನುಕೂಲವಾಗುವಂತೆ ಸಾಹಿತ್ಯ ಸಭೆಯವರು ನಾಗರೀಲಿಪಿಬಲ್ಲ ಉಮೇದುವಾರರನ್ನು ದೊಡ್ಡ ಪಟ್ಟಣಗಳ ಕಚೇರಿಗಳಲ್ಲಿ ತಮ್ಮ ಸ್ವಂತ

ವೆಚ್ಚದಿಂದ ಇಟ್ಟಿರುವರು. ನಾಗರೀ ಬಲ್ಲ ಗುಮಾಸ್ತೆಯರು ಬೇಕೆಂದು ಅಪೇಕ್ಷಿಸುವ ವಕೀಲರುಗಳಿಗೆ ಸಭೆಯವರು ಅಂಥ ಜನರನ್ನು ಕೆಲವು ಸಲ ತಮ್ಮ ಸ್ವಂತ ವೆಚ್ಚದಿಂದ ಕೂಡ ಒದಗಿಸಿ ಕೊಡುತ್ತಿರುವರು. ಪ್ರಸಿದ್ಧರಾದ ಹಲವು ವಕೀಲರುಗಳು ಈ ಮುಂದೆ ತಮ್ಮ ಕೆಲಸವನ್ನೆಲ್ಲ ಉರ್ದು ಬಿಟ್ಟು ನಾಗರಿಯಿಂದಲೇ ಮಾಡುವೆವೆಂದು ಸಮ್ಮೇಳನದಲ್ಲಿ ಪ್ರತಿಜ್ಞೆಮಾಡಿರುವರು. ಹಾಗೆಯೇ ಎಷ್ಟೋ ಜಮಿನುದಾರರೂ, ತಾಲೂಕುದಾರರೂ, ವರ್ತಕರೂ, ಸಾಹುಕಾರರೂ ಸಹ ತಮ್ಮ ಲೆಕ್ಕ ಪತ್ರಗಳನ್ನು ನಾಗರಿಯಲ್ಲಿ ಇಡುವುದಕ್ಕೆ ನಿಶ್ಚಯಿಸಿರುವರು. ಬಾಂದಾ ಜಿಲ್ಲೆಯ ಪ್ರಮುಖ ವಕೀಲರೊಬ್ಬರ ಕಾರಕೂನನು ಕಳೆದ ವರ್ಷದಲ್ಲಿ ನ ಮಾರು ಮೂರುಸಾವಿರ ಅರ್ಜಿಗಳನ್ನು ನಾಗರಿಯಲ್ಲಿ ಬರೆದು ಕೋರ್ಟುಗಳಿಗೆ ದಾಖಲು ಮಾಡಿದುದಕ್ಕಾಗಿ ಆತನಿಗೆ ಸಮ್ಮೇಳನದವರು ಒಂದು ಬೆಳ್ಳಿಯ ಕರಡಿಗೆಯನ್ನು ಬಹುಮಾನವಾಗಿ ಕೊಟ್ಟರು.

ಹಿಂದೀ ವಾಙ್ಮಯದ ಅಭಿರುಚಿಯು ವಿದ್ಯಾರ್ಥಿಗಳಲ್ಲಿ ಬೆಳೆಯುವುದಕ್ಕಾಗಿ ಮೂರು ಪರೀಕ್ಷೆಗಳನ್ನು ಏರ್ಪಡಿಸಿರುವರು. ಪ್ರಥಮ ತರಗತಿಯ ಪರೀಕ್ಷೆಯು ಸಮ್ಮೇಳನಕ್ಕೆ ಎರಡು ತಿಂಗಳ ಹಿಂದೆ ನಡೆಯಿತು. ಮೊದಲನೆಯ ತರಗತಿಯಲ್ಲಿ ತೇರಿದ ಪರೀಕ್ಷ್ಯರುಗಳಿಗೆ ಬಂಗಾರದ ಮತ್ತು ಬೆಳ್ಳಿಯ ಪದಕಗಳನ್ನು ಸಮ್ಮೇಳನದಲ್ಲಿ ಕೊಟ್ಟು ಮನ್ನಿಸಿದರು. ಅಲಹಾಬಾದಿನ ಪ್ರೊಫೆಸರ್ ರಾಮದಾಸ ಗೌಡ ಎಮ್. ಎ. ಯವರು ಈ ಪರೀಕ್ಷೆಗಳ ಮೇಲ್ವಿಚಾರಣೆ ನೋಡುತ್ತಿರುವರು. ಈ ದೊಡ್ಡ ಮನುಷ್ಯರು, ಮೇಲಿನ ಪರೀಕ್ಷೆಗಳ ಹೇತುವನ್ನೂ ಕಳೆದ ವರ್ಷದಲ್ಲಿ ಮಾಡಿದ ಪರೀಕ್ಷೆಯ ಧೋರಣೆಯನ್ನೂ ಮುಂದಿನ ಪರೀಕ್ಷೆಗಳ ವಿಷಯಗಳನ್ನೂ ಕುರಿತು ಸಮ್ಮೇಳನದಲ್ಲಿ ಓದಿದ ರಿಪೋರ್ಟನ್ನು ಕೇಳಿದೊಡನೆ, ಈ ಮುಂದೆ ಆ ಪರೀಕ್ಷೆಗಳಲ್ಲಿ ಜಯಿಸುವ ವಿದ್ಯಾರ್ಥಿಗಳಿಗಾಗಿ ಬಹುಮಾನಗಳನ್ನೂ ಪದಕಗಳನ್ನೂ ಸಭಾಸದರುಗಳು ಮುಕ್ತಹಸ್ತರಾಗಿ ಒಪ್ಪಿಸಿದರು.

ಹಿಂದೀ ಭಾಷೆಯಲ್ಲಿ ಶಬ್ದಗಳ ಅಂಗಗಳ ವಿಷಯದಲ್ಲಿಯೂ, ಕ್ರಿಯಾಪದಗಳ ಅಂಗವು ಕರ್ತೃವನ್ನು ಅನುಸರಿಸಬೇಕೇ ಕರ್ಮವನ್ನು ಅನುಸರಿಸಬೇಕೇ ಎಂಬ ವಿಷಯದಲ್ಲಿಯೂ ತುಂಬಾ ಗೊಂದಲವಿದೆ, ಪ್ರಯೋಗಭೇದಗಳೂ ಅನೇಕವಾಗಿವೆ. ಇವೆರಡನ್ನೂ ನಿರ್ಣಯಿಸುವುದಕ್ಕಾಗಿ ಒಂದು 'ಕಮಿಟಿ'ಯು ಏರ್ಪಡಿಸಲಾಯಿತು. ಕಳೆದ ಸಮ್ಮೇಲನದಲ್ಲಿ ಶಾಸ್ತ್ರ ಸಮ್ಮತವಾದ ಒಂದು ಹಿಂದೀ ವ್ಯಾಕರಣವನ್ನು ರಚಿಸುವ ಕೆಲಸವು ಪಂಡಿತ ಕಾಮತಾಪ್ರಸಾದ ಗುರು ಎಂಬುವರಿಗೆ ಒಪ್ಪಿಸೋಣಾಗಿದ್ದಿತು. ಆ ಕೆಲಸವು ಚೆನ್ನಾಗಿ ಸಾಗುತ್ತಿದೆ.

ಸಮ್ಮೇಲನದಲ್ಲಿ ನಡುನಡುವೆ ವಿಷಯೋಚಿತವಾದ ಕವಿತೆಗಳನ್ನೂ ಹಾಡುಗಳನ್ನೂ ಹೇಳುತ್ತಿದ್ದುದರಿಂದ ದೀರ್ಘಕಾಲ ಕುಳಿತು ಬೇಜಾರಪಟ್ಟ ಶ್ರೋತೃಗಳಿಗೆ ಶ್ರಮಪರಿಹಾರವಾಗುತ್ತಿದ್ದಿತು.

ಮುಸಲ್ಮಾನರ ರಾಜ್ಯವಳಿದು ಅವರ ಪ್ರತಿಷ್ಠೆಯು ಕಡಿಮೆಯಾದ ಕಾಲಕ್ಕೆ ದಯಾನಂದ ಸರಸ್ವತಿ ಸ್ವಾಮಿಗಳೆಂಬ ಮಹಾತ್ಮರು ಉತ್ತರ ದೇಶದ ಹಿಂದೂಗಳಲ್ಲಿ ಜಾಗೃತಿಯನ್ನುಂಟುಮಾಡಿ ವೈದಿಕ ಧರ್ಮವನ್ನು ಜೀರ್ಣೋದ್ಧಾರಮಾಡಿದರು. ಈ ಪಂಥವನ್ನು ಆರ್ಯಸಮಾಜವೆಂದು ಕರೆಯುವರು. ಈ ಪಂಥವು ಕೂಡ ವೈದಿಕಧರ್ಮವೇ ಆದರೂ ಇದಕ್ಕೂ ಸನಾತನ ಧರ್ಮಕ್ಕೂ ವಿಗ್ರಹಾರಾಧನೆಯೇ ಮೊದಲಾದ ಕೆಲಕೆಲವು ವಿಷಯಗಳಲ್ಲಿ ತೀವ್ರವಾದ ಭೇದವಿದೆ. ಮತ್ತು ಇದರ ದೆಸೆಯಿಂದ ಆರ್ಯಸಮಾಜೀಯರಿಗೂ ಸನಾತನ ಧರ್ಮೀಯರಿಗೂ ವಿಶೇಷವಾದ ವೈಮನಸ್ಯವಿದೆ. ಹೀಗಾಗಿ ನ್ಯಾಯವಾಗಿ ಯಾವ 'ಆರ್ಯ' ಶಬ್ದವು ಹಿಂದೂ ಜನಗಳೆಲ್ಲರಿಗೂ ಗೌರವನೀಯವಾಗಿರಬೇಕೋ ಅದು ಉತ್ತರ ಹಿಂದೂಸ್ಥಾನದಲ್ಲಿ ಸನಾತನ ಧರ್ಮೀಯರಿಗೆ ಕೋಪೋದ್ರೇಕವನ್ನುಂಟುಮಾಡುವುದಾಗಿ ನಿಂತಿದೆ. ಇದು ಸಾಹಿತ್ಯ ಸಮ್ಮೇಲನದಲ್ಲಿಯೂ ತಾರ್ಕಣೆಗೆ ಬಾರದೆ ಹೋಗಲಿಲ್ಲ. ಸಮ್ಮೇಲನದ ಎರಡನೆಯ ದಿನ ಆರ್ಯಸಮಾಜೀಯರೊಬ್ಬರು ಮಾತನಾಡುತ್ತ, ಸಮ್ಮೇಲನವನ್ನು 'ಹಿಂದೀ ಸಮ್ಮೇಲ'ನವೆನ್ನದೆ 'ಆರ್ಯಸಮ್ಮೇಲನ'ವೆನ್ನಬೇಕೆಂದು ಸೂಚನೆಯನ್ನು ಮಾಡಿದರು. 'ಈ ಆರ್ಯ'ಪದಕ್ಕೂ ಆರ್ಯಸಮಾಜಕ್ಕೂ ಸಂಬಂಧವಿರುವುದೆಂದು ತಪ್ಪು ಭಾವನೆಯಿಂದ ದುರಭಿಮಾನಿಗಳು ರೇಗಿದರು. ಬಳಿಕ ಮಂಟಪದಲ್ಲೆಲ್ಲ ದೊಡ್ಡ ಗದ್ದಲವೆದ್ದಿತು. ಕೆಲವರು ಬೇಕು ಬೇಕೆಂದೂ, ಬೇರೆ ಕೆಲವರು ಆಗದಾಗದೆಂದೂ ಗಟ್ಟಿಯಾಗಿ ಕೂಗಿಕೊಂಡು ಕೊನೆಗೆ ಹೊಡೆದಾಟವೂ ಪ್ರಾರಂಭವಾಗುವುದೋ ಎಂಬ ಭಯಉಂಟಾಯಿತು. ಇಷ್ಟರಲ್ಲಿ ದೈವವಶಾತ್ ಕಾಂಗ್ರಿಯ ಗುರುಕುಲದ ಅಧ್ಯಕ್ಷರಾದ ಮಹಾತ್ಮಾ ಮುನಿಶೀರಾಮರವರ ಕುಮಾರರಾದ ಹರಿಶ್ಚಂದ್ರ ವಿದ್ಯಾಲಂಕಾರರವರು ಎದ್ದು ನಿಂತು 'ಬರೀ ಒಂದು ಶಬ್ದಕ್ಕಾಗಿ ಇಂಥ ದೊಡ್ಡ ಸಮ್ಮೇಳನವು ಇಬ್ಭಾಗವಾಗ ತಕ್ಕುದಲ್ಲವೆಂದೂ, ಮುಂದಿನ ಮಹತ್ಕಾರ್ಯವನ್ನು ಮುಖ್ಯವಾಗಿಟ್ಟುಕೊಂಡು ವಿತಂಡವಾದವನ್ನು ಬಿಟ್ಟುಬಿಡಬೇಕೆಂದೂ, 'ಆರ್ಯ' ಶಬ್ದಕ್ಕೆ ಅನುಕೂಲರಾದ ತನ್ನ ಪಕ್ಷದವರೇ ಸಮಾಧಾನವನ್ನು ವಹಿಸಿ ಬಂದ ವಿಘ್ನವನ್ನು ಹೋಗಗೊಳಿಸತಕ್ಕದೆಂದೂ' ಪ್ರಾರ್ಥಿಸಿಕೊಳ್ಳಲು, ಕಿಂಚಿತ್ಕಾಲದೊಳಗಾಗಿ ಸಭೆಯು ಶಾಂತವಾಗಿ ಮುಂದಿನ ಕೆಲಸಗಳು ನಿರಾತಂಕವಾಗಿ ನಡೆದುವು.

ಸಮ್ಮೇಳನದ ಮೂರನೆಯ ದಿನ ಸಾಹಿತ್ಯ ಸಭೆಯ ನಿಧಿಗಾಗಿ ನೆರೆದ ಜನರನ್ನು ಪ್ರಾರ್ಥಿಸಿಕೊಂಡೊಡನೆ ೫೦೦ ರೂಪಾಯಿ ನಗದಾಗಿ ಆಗಲೇ ಸಿಕ್ಕಿದ್ದು ೩ ಸಾವಿರ ರೂಪಾಯಿಯ ಅಭಿವಚನಗಳೂ ದೊರೆತುವು.

ಸಮ್ಮೇಳನದ ಪ್ರತಿನಿಧಿಗಳಿಗೆ ಸಂತೋಷವನ್ನುಂಟುಮಾಡುವುದಕ್ಕಾಗಿ ಅದನ್ನೇ ಉದ್ಯೋಗವಾಗಿ ಮಾಡತಕ್ಕವರಲ್ಲದ (amateur) ಹಿಂದೀ ತರುಣರು 'ಹರಿಶ್ಚಂದ್ರ ನಾಟಕ'ವನ್ನು ಹಿಂದೀ ಭಾಷೆಯಲ್ಲಿ ಆಡಿ ತೋರಿಸಿದರು.

ಸಮ್ಮೇಳನದ ಕಾಲದಲ್ಲಿಯೇ ಒಂದು ಸಾಹಿತ್ಯ ಪ್ರದರ್ಶನವನ್ನು ನೆರೆಯಿಸಿದ್ದರು. ಅದರಲ್ಲಿ ಪ್ರಾಚೀನ ಅಪ್ರಕಾಶಿತ ಹಿಂದೀ ಗ್ರಂಥಗಳೂ, ಪ್ರಸಿದ್ಧವಾದ ಹಿಂದೀ ಕಾವ್ಯಗಳೊಳಗಿನ ಬೇರೆ ಬೇರೆ ಸಂದರ್ಭಗಳ ಚಿತ್ರಗಳೂ, ಮುಂತಾಗಿ ವಾಙ್ಮಯಾಭಿಮಾನವನ್ನು ವರ್ಧಿಸತಕ್ಕ ಹಲವು ವಸ್ತುಗಳು ಕಾಣಬರುತ್ತಿದ್ದುವು.

~~~~~~~~

ಕಬ್ಬಿನ ಪೈರಿಗೆ ಗೊಬ್ಬರ.

ಈ ವರ್ಷ ಊರು ಬೆಲ್ಲಕ್ಕೆ ಏರಿಹೋದ ಕ್ರಯವು ಮುಂದೆಯೂ ಕಡಿಮೆಯಾಗದಿದ್ದರೆ ನಮ್ಮ ಜಿಲ್ಲೆಯಲ್ಲಿ ಕಬ್ಬಿನ ಕೃಷಿಯು ಮೆಲ್ಲಮೆಲ್ಲನೆ ವಿಸ್ತರಿಸುತ್ತಾ ಹೋಗುವುದೆಂದು ತಿಳುಕೊಳ್ಳಬೇಕಾಗುತ್ತದೆ, ಏಕೆಂದರೆ ಸೋಗರಾಲು, ಚಮನಾಡು, ಬಾರೆಕಾಡು, ಉಳ್ಳಾಲ, ಪಣಂಬೂರು, ಕೆಂಜಾರ ಮೊದಲಾದ ಕರಾವಳಿಯಲ್ಲಿನ ಗ್ರಾಮಗಳಲ್ಲಿಯೂ ಕುದುರುಗಳಲ್ಲಿಯೂ ಕಬ್ಬನ್ನು ಈಚೀಚೆಗೆ ಸಮೃದ್ಧಿಯಾಗಿ ಕೃಷಿಮಾಡುತ್ತಾರೆ. ಊರ ಕಬ್ಬು ಕಡಮೆಯಾಗುತ್ತಾ ಬಂದು ಮೋರಿಸ ಎಂಬ ಹೊಸ ಜಾತಿಯ ಕಬ್ಬನ್ನು ಬೆಲ್ಲಕ್ಕಾಗಿ ಕೃಷಿಮಾಡುವುದು ಇತ್ತಲಾಗೆ ವಿಶೇಷವಾಗಿದೆ. ಹಾಲನ್ನು ಹಿಂಡುವುದರಲ್ಲಿ ಅಲ್ಲಲ್ಲಿ ಮರದ ಆಲೆಯ ಬದಲಿಗೆ ಕಬ್ಬಿಣದ ಗಾಣವು ಒಂದೆರಡು ಹಳ್ಳಿಗಳಲ್ಲಿ ತಲೆದೋರಿದೆ. ಬೆಲ್ಲ ಕಾಸುವುದಕ್ಕೆ ಇದ್ದ ಹಳೇ ಒಲೆಗಳು ಹಾಳುಬಿದ್ದು ಅವುಗಳ ಸ್ಥಾನದಲ್ಲಿ ಕಬ್ಬಿಣದ ದೊಡ್ಡ ದೊಡ್ಡ ಕಾವಲಿಗಳಿಗೆ ಬೇಕಾದ ಹೊಸ ಒಲೆಗಳು ಎದ್ದಿವೆ. ಇದರ ಮೇಲಿಂದ ನೋಡಿದರೆ ಇದೇ ಬಗೆಯ ಸುಧಾರಣೆಯು ಮುಂದಕ್ಕೆ ಕಬ್ಬಿನ ಸಾಗುವಳಿಗೆ ಬೇಕಾದ ಗೊಬ್ಬರದಲ್ಲಿಯೂ ತಪ್ಪದೆ ಬರುವುದೆಂದು ಊಹಿಸುವುದಕ್ಕೆ ಅವಕಾಶವಿದೆ. ಕಬ್ಬಿನ ಕೃಷಿಗೆ ಯಾವ ಬಗೆಯ ಗೊಬ್ಬರಗಳು ಉತ್ತಮವೆಂದು ಕಂಡುಹಿಡಿಯುವುದಕ್ಕಾಗಿ ಸರಕಾರದವರು ಈ ಪ್ರಾಂತ್ಯದಲ್ಲಿ ತಾಳಿಪರಂಭ ಮತ್ತು ಕೊಯಮುತ್ತೂರು ಮೊದಲಾದ ಸ್ಥಳಗಳಲ್ಲಿ ವ್ಯವಸಾಯ ಕ್ಷೇತ್ರಗಳನ್ನು ಏರ್ಪಡಿಸಿ ಸ್ವತಃ ಶೋಧನಗಳನ್ನು ಮಾಡುತ್ತಿದ್ದಾರೆ. ಈ ಕ್ಷೇತ್ರಗಳಲ್ಲಿ ಬೆಳೆಸಿದ ಬೆಳೆಗಳ ಲಕ್ಷಣ, ಗೊಬ್ಬರದ ಗುಣ, ದೊರೆಯುವ ಲಾಭ, ಬೇಕಾದ ಸಾಹಿತ್ಯ ಸಾಮಗ್ರಿಗಳು ಮೊದಲಾದ ಅನುಭವವನ್ನು ರೈತರ ಮಾಹೀತಿಗಾಗಿ ಪ್ರಕಟಿಸುತ್ತಾರೆ. ಹೀಗೆ ಪ್ರಕಟಿಸೋಣಾದ ಪತ್ರಗಳಿಂದ ಸಾಗುವಳಿಗೆ ಬಹುಮಟ್ಟಿಗೆ ಇತ್ತಲಾಗೆ ಉತ್ತೇಜನ ಕೊಟ್ಟಂತಾಗಿದೆ. ವ್ಯವಸಾಯ ಇಲಾಖೆಯ ಡಿಪ್ಯುಟಿ ಡಿರೆಕ್ಟರರಾದ ಮಿ| ಡಿ ಕ್ಲೌಸ್ಟನ್‌ರು ನಾಗಪುರದ ಹತ್ತಿರವಿರುವ ಥಾಸರ್ ಎಂಬ ವ್ಯವಸಾಯ ಕ್ಷೇತ್ರದಲ್ಲಿ ಕಬ್ಬನ್ನು ಪೈರು ಮಾಡಿ ಕಂಡುಹಿಡಿದ ವಿಷಯಗಳನ್ನು ಈ ರೀತಿಯಾಗಿ ಪ್ರಕಟಿಸಿರುತ್ತಾರೆ. ಅವರ ಪ್ರಕಟಣಾ ಪತ್ರದೊಳಗಿನ ಮುಖ್ಯಾಂಶಗಳನ್ನು ನಮ್ಮ ರೈತರ ತಿಳುವಳಿಕೆಗೋಸ್ಕರ ಕನ್ನಡಿಸಿ ಈ ಕೆಳಗೆ ಕೊಟ್ಟಿರುತ್ತೇವೆ.

ಮಿ| ಕ್ಲೌಸ್ಟನರು ಮೊದಲು ಎಳ್ಳುಹಿಂಡಿಯನ್ನೂ ಮತ್ತು ಮೇಲ್ಪುಡಿಯಾಗಿ (Top dressing) ನ್ಯಾಟ್ರೇಟ ಆಫ ಸೋಡಾ ಎಂಬ ಸೌಳುಪ್ಪನ್ನೂ ಕಬ್ಬಿನ ಬೆಳೆಗೆ ಗೊಬ್ಬರವಾಗಿ ಉಪಯೋಗಿಸಿದರು. ಇದರಿಂದ ಕಬ್ಬಿನ ಜಲ್ಲೆಗಳು ಚೆನ್ನಾಗಿ ಬೆಳೆದವು. ಬೆಳೆಯೂ ಹುಲುಸಾಯ್ತು, ಹಾಲೂ ಅಧಿಕವಾಯಿತು, ಬೆಲ್ಲವೂ ಮೊದಲಿಗಿಂತ ಹೆಚ್ಚು ದೊರೆಯಿತು. ಈ ರೀತಿಯಾಗಿ ಪೈರು ಇನ್ನಷ್ಟು ಲಾಭಕರವಾಯಿತು. ಅವರು ಒಂದೊಂದು ಎಕ್ರೆ ವಿಸ್ತೀರ್ಣದ ನಾಲ್ಕು ಕಳಗಳನ್ನು ಕಟ್ಟಿ, ಒಂದೊಂದು ಕಳದಲ್ಲಿ ಇಷ್ಟೇ ತೂಕ 'ಊಟನ್ನು' ಹಾಕಿ ಇಷ್ಟೇ ಫಸಲನ್ನು ಪಡೆದರೆಂಬುದಾಗಿ ಅದೇ ಇಂಗ್ಲಿಷ ಪತ್ರದಲ್ಲಿ ಖಂಡಿತವಾಗಿ ಹೇಳಿರುತ್ತಾರೆ.

ಒಂದು ಎಕ್ರೆ ಸ್ಥಳದಲ್ಲಿ ಸುಮಾರು ೫೦ ಸಾವಿರ ಜಲ್ಲೆಗಳನ್ನು ನಟ್ಟರೆ ಸುಮಾರು ೨೦ ಮಣ ಎಳ್ಳುಹಿಂಡಿಯೂ ಹೆಚ್ಚು ಕಡಮೆ ೩ ಮಣ ಸೌಳುಪ್ಪು ಗೊಬ್ಬರಕ್ಕೆ [illegible]
~~~~~~~~

ದ್ದೀತು; ಅಂದರೆ ಈಗ ದೊರೆಯುವುದಕ್ಕಿಂತ ಅಧಿಕವಾಗಿ ಲಾಭವನ್ನು ಪಡಿಯಬಹುದು. ಈ ಪಟ್ಟಿಯಿಂದ ಇನ್ನೊಂದು ವಿಷಯವನ್ನು ಈ ಕಡೆ ಬೆಲ್ಲ ಮಾಡುವವರು ಚನ್ನಾಗಿ ಲಕ್ಷಿಸಬೇಕಾಗಿದೆ; ಅದೇನಂದರೆ ಕಬ್ಬನ್ನು ಕೆತ್ತಿ ಆಲೆಗೆ ಕೊಟ್ಟರೆ ಸ್ವಚ್ಛವಾಗಿಯೂ, ಸಿಹಿಯಾಗಿಯೂ ಇರುವ ಬೆಲ್ಲವನ್ನ ಮಾಡಬಹುದು.

ಕ್ರ.	1 ಎಕ್ರೆಗೆ ಎಳ್ಳು ಹಿಂಡಿ ಮಣ.	1 ಎಕ್ರೆಗೆ ಸೌಳುತ್ತು ಮಣ	1 ಎಕ್ರೆಯಲ್ಲಿ ಇಳ್ಳೆಗಳು	1 ಎಕ್ರೆಯಲ್ಲಿ ದೊರೆತ ಬೆಲ್ಲ ರಾತಲು	ಆದಾಯ ರೂ ಆ. ಪೈ.
1.	20	1½.	36,550.	3575	61 – 0 9.
2.	20.	2	39,602	4 66.	85 – 4 – 3
3.	20.	2½	41,882	5932.	186 – 12 – 9.
4.	20	3	54,804.	6831.	230 – 4 0.

ಪತ್ರವ್ಯವಹಾರ.

ಅಯ್ಯಾ ಪತ್ರಕರ್ತರೇ,

ಉಡುಪಿ ಪರಸ್ಪರ ಸಹಾಯ ಸಂಘದ ಮಹಾಸಭೆಯು ಮುಂದರಿಸಿದ ಸಮಾಚಾರವನ್ನು ಪ್ರಕಟಿಸಲಿಕ್ಕೆ ಇನ್ನೂ ಕೊಂಚ ಸ್ಥಳ ಕೊಡುವಿರೆಂದು ನಂಬಿದ್ದೇನೆ. ಮೊದಲನೆಯ ದಿನ ರಾತ್ರೆ ೯ ಗಂಟೆ ವರೆಗೆ ಸಭೆಯಾಗಿ ಕಡೆಗೆ ಖಾನ್ ಸಾಹೇಬ್ ಹಾಜಿ ಅಬ್ದುಲ್ಲಾ ಹಾಜಿ ಕಾಸಿಮ್ ಬಹದ್ದೂರರವರು, ಅಬ್ದುಲ್ ರಜಕ್ ಸಾಹೇಬರು, ಮ|ರಾ| ಶೇಷಗಿರಿಪೈಗಳವರು, ಮ| ರಾ| ನಯಂಪಳ್ಳಿ ಆನಂದರಾಯರು, ಮ| ರಾ| ಡಾಕ್ಟರ್ ರಾಮಚಂದ್ರರಾಯರು, ಪಿ|| ವಿಕ್ಟರ್ ಶೇಷಾಚಲಂ, ಪಿ|| ಅಸ್ವರು ಪಂಚಾಯತರಾಗಿ ಚುನಾಯಿಸಲ್ಪಟ್ಟರು. ಇಷ್ಟರಲ್ಲಿ ಸಭೆ ಆರಂಭಿಸುವಾಗ ೧೪೦ಕ್ಕೆ ಮಿಕ್ಕಿದ್ದ ಮೆಂಬರುಗಳಲ್ಲಿ ೭೫ ಜನರು ಮಾತ್ರ 'ಓಟು' ಕೊಟ್ಟಿದ್ದರು. ಉಳಿದವರು ಹಲವು ನೆವನಗಳಿಂದ ಸಭೆಯನ್ನು ಬಿಟ್ಟು ತೆರಳಿದ್ದರು. ಮುಂದರಿಸಿದ ಸಭೆಯು ಜರಗುವುದಕ್ಕೆ ಮರುದಿನ ತಮ್ಮಟೆ ಸಮೇತ ಪ್ರಕಟಿಸಿದರೂ ಸಭೆಯಾಗುವಷ್ಟು ಮಿತಿಯ ಸಂಖ್ಯೆ ಸೇರದ್ದರಿಂದ ಕಳೆದ ಆದಿತ್ಯವಾರ ಪುನಃ ಸಭೆಸೇರಿತು. ಈ ದಿನ ಮ| ರಾ| ವಿಟ್ಠಲಕಾಮತರು ಸ್ವಯಂಸಭೆಗೆ ಹಾಜರಿದ್ದರು. ಸಭೆಯ ಅಧ್ಯಕ್ಷರಾದ ಖಾನ್ ಸಾಹೇಬ ಅಬ್ದುಲ್ಲಾ ಸಾಹೇಬರೇ ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಸಭೆ ಸೇರಿದೊಡನೆ ಹಿಂದಿನ ಸಭೆಯ ಎಲ್ಲಾ ಠರಾವುಗಳು ಸಿಂಧುವಾಗತಕ್ಕವುಗಳಲ್ಲವಾದ್ದರಿಂದ ಅವುಗಳನ್ನು ರದ್ದುಪಡಿಸಿ ಪುನಃ ಎಲ್ಲಾ ಕಾರ್ಯಗಳನ್ನು ನಿರ್ವಹಿಸಬೇಕೆಂದು ಕೆಲವು ಗೃಹಸ್ಥರು ಸಹಿ ಹಾಕಿ ಸಭೆಯ ಮುಂದಿಟ್ಟ ಪತ್ರವು ಚರ್ಚೆಗೆ ತರಲ್ಪಟ್ಟು ಬಹುಮತದ ಅಭಿಪ್ರಾಯದ ಮೇರೆಗೆ ಹಿಂದಿನ ಸಭೆಯ ಠರಾವುಗಳೇ ಮಂಜೂರಾಗಬೇಕೆಂದಾಯಿತು. ಕಡೆಗೆ ಹಿಂದಿನ ಸಭೆಯ ಕೊನೆಯಲ್ಲಿದ್ದವರಿಂದಲೂ ಈ ದಿನ ಹೆಚ್ಚಿಗೆ ಮೆಂಬರುಗಳಿರುವುದರಿಂದ ಪಂಚಾಯತರ ಚುನಾವಣೆ ಪುನರಾಲೋಚನೆಗೆ ತೆಗೆದುಕೊಳ್ಳಬಹುದೆಂದು ಹೇಳಿದ ಸೂಚನೆ ಮೇರೆಗೆ ಆದ ಚುನಾವಣೆಯಲ್ಲಿ ಅಬ್ದುಲ್ ರಜಕ ಸಾಹೇಬರ ಬದಲಾಗಿ ಮ| ರಾ| ವಿಟ್ಠಲ ಕಾಮತರಿಗೆ ಓಟು ಸಿಕ್ಕಿತು. ಎಲ್ಲರೂ ಅವರು ಪಂಚಾಯತರಾಗಿ ಇರುವರೆಂದು ನಂಬಿಕೊಂಡಿದ್ದರು. ಆದರೆ ಆಗಲೇ ಸಭೆಯಲ್ಲಿ ತನ್ನ ಅಭಿಪ್ರಾಯವನ್ನು ಹೇಳದೆ ಮರುದಿನ ಇವರು ರಾಜೀ ಅರ್ಜಿಯನ್ನು ಕಳುಹಿಸಿದರು. ಹೀಗಾದ್ದರಿಂದ ಅವರಿಗಿಂತ ನಂತರದ ಸಂಖ್ಯೆಯ 'ಓಟು' ಸಿಕ್ಕಿದ ಅಬ್ದುಲ್ ರಜಕ್ ಸಾಹೇಬರು ಪಂಚಾಯತರ ಸಭೆಗೆ ಸೇರಿದ ಹಾಗೆ ಆದುದೊಂದೇ ಅಲ್ಲದೆ ಬೇರೆ ಪರಿಣಾಮವೇನೂ ಆಗಲಿಲ್ಲ. ಈಗ ತತ್ಕಾಲಕ್ಕೆ ಬೇರೆ ಒಬ್ಬ ಮೆಂಬರನನ್ನು ಆರಿಸಲಿಕ್ಕೆ ಮಹಾಸಭೆ ಕೂಡಿಸಲು ಸಾಧ್ಯವಿಲ್ಲದ್ದರಿಂದ ೬ ಜನರು ಮಾತ್ರ ಪಂಚಾಯತರಾಗಿ ಕೆಲಸ ನಡಿಸಬೇಕಾಗಿದೆ. ಪ್ರಥಮ ಸಭೆಯಲ್ಲಿಯೇ ಮ| ರಾ| ವಿಟ್ಠಲ ಕಾಮತರು ತನಗೆ ಇನ್ನು ಪಂಚಾಯತನಾಗಿ ಆರಿಸುವುದು ಬೇಡವೆಂದು ಹೇಳಿದರೂ ಅವರನ್ನು ಪುನಃ ಚುನಾಯಿಸಿದ ಕಾರಣ ಮಹಾಸಭೆಯವರಿಗೆ ಅವರ ಮೇಲೆ ನಂಬಿಕೆಯುಂಟು ಎಂಬುದು ಸ್ಪಷ್ಟವಾಗುತ್ತಿದೆ. ಆಗ ಅವರು ಹಿಂಜರಿಯುವುದು ಯುಕ್ತವಲ್ಲವೆಂದು ನನಗೆ ಬೋಧೆಯಾಗುತ್ತದೆ. ಯಾವಾಗಲೂ ಮಹಾಜನಕ್ಕೆ ಸಂಬಂಧವಾದ ಒಂದು ಕೆಲಸವನ್ನು ಕೈಕೊಳ್ಳುವವರು ಇದರ ಕಟೋಕ್ತಿಗಳನ್ನು ಕಿವಿಯಾರೆ ಕೇಳಲಿಕ್ಕೆ ಸಿದ್ಧರಾಗಿಯೇ ಇರಬೇಕು. "ಕಂಡಂತೆ ಹೇಳಿದರೆ ಕೆಂಡದಂತೆ ಸಿಟ್ಟು" ಎಂದು ನಿಜವಾಗಿದೆ. ಆದರೆ ಜನರು, ಮುಖ್ಯವಾಗಿ ಸ್ವಾರ್ಥಪರರು, ತಮ್ಮ ಮತಾನುಸಾರವಾಗಿ ಯಾವುದೊಂದು ಕೆಲಸ ನಡಿಯದೆ ಇದ್ದರೆ ಅಂಥಾ ಕೆಲಸಕ್ಕೆ ಮುಂದಾಳಾಗಿ ಬಂದವರನ್ನು ಅವಿಚಾರದಿಂದ ಬೈಯ್ಯುವರು. ಅವರು ಬೈಯ್ಯುವರೆಂತ ಸಜ್ಜನರು ಕೈ ಹಿಂತೆಗೆಯುವುದು ಸರಿಯಲ್ಲ. ಈಗಿನ ಸ್ಥಿತಿಯಲ್ಲಿ ಖಾಸಗಿಯಾಗಿ ತಮ್ಮ ಸ್ವಂತ ಕೆಲಸಗಳಲ್ಲಿ ಪ್ರಾಮಾಣಿಕತೆಯಿಂದ ಕೆಲಸಮಾಡುವವರೆಂದೂ ಹೆಸರುವಾಸಿಯಾದವರು ಹಲವು ಸಲ ಮಹಾಜನದ ಕೆಲಸಗಳಲ್ಲಿ ತಪ್ಪಿಬೀಳುವುದುಂಟು. ಮಹಾಜನಕ್ಕೆ ಪ್ರಾಮಾಣಿಕತೆಯ ಆವರಣವು ಇನ್ನೂ ಹುಟ್ಟದೆ ಇರುವುದೇ ಇದರ ಕಾರಣ. ಅದಕ್ಕೆ ಇನ್ನೂ ಕೆಲವು ಕಾಲ ಹೋಗಬೇಕು. ಜನರ ಸ್ಥಿತಿಯನ್ನು ಕಡ್ಡಿ ಮುರಿದ ಮಾತ್ರಕ್ಕೆ ಬದಲಾವಣೆ ಮಾಡುವುದಕ್ಕೆ ಸಾಧ್ಯವಲ್ಲ. ಅಂತೂ ಚರ್ಚೆಯು ಅವಿಚಾರದ ದೆಸೆಯಿಂದ ಮಹಾಸಭೆಯಲ್ಲಿ ಉಂಟಾಗಿದ್ದರೂ ಕಾರ್ಯಾಂತದ ಪರಿಣಾಮವು ಬಹುಮತಕ್ಕೆ ಹಿತವಾಗಿಯೇ ಕಂಡುಬಂದ ದರಿಂದ ಮಹಾ ಸಭೆಯಲ್ಲಿ ಉಂಟಾದ ಭೇದಬುದ್ಧಿಯ ಅಲ್ಲೋಲಕಲ್ಲೋಲಗಳು ಅಲ್ಲಿಯೇ ಅಡಗಿ ಈಗ ಕೆಲಸವು ಕ್ರಮವಾಗಿಯೇ ನಡಿಯಲಾರಂಭಿಸಿಯದೆ. ಇದನ್ನು ವಾಚಕರೆಲ್ಲರಿಗೂ ತಿಳಿಸಲಿಕ್ಕೆ ನನಗೆ ತುಂಬಾ ಸಂತೋಷವಿದೆ. ಇನ್ನೂ ಈ ಭೇದಬುದ್ಧಿಗೆ ಅವಕಾಶವಿರದಂತೆ ಉಡುಪಿಯ ಶ್ರೀಕೃಷ್ಣನು ಇಲ್ಲಿಯ ಜನರಿಗೆ ಬುದ್ಧಿಯನ್ನೀಯಲಿ ಎಂದು ಪ್ರಾರ್ಥಿಸಿ ಈ ಪತ್ರವನ್ನು ಮುಗಿಸುವೆನು

ಬಡ ಸಹಕಾರಿ.

ಧರ್ಮಾಶ್ರಯ ಬ್ರಹ್ಮಸಂಘ.

ಅಯ್ಯಾ,

ಉಪ್ಪಿನಂಗಡಿ ತಾಲೂಕು ಮುಂಡಾಜೆ ಗ್ರಾಮದ ಸನ್ಯಾಸಿಕಟ್ಟೆಯ ಬಳಿ ರಾಜಾರಸ್ತೆ ಕಿನಾರೆಯಲ್ಲಿ ಈ ಮುಂಚೆ ರಾ' ಅನಂತಭಟ್ ಗೋರೆಯವರು ಧರ್ಮಾರ್ಥವಾಗಿ ಬಿಟ್ಟುಕೊಟ್ಟ ಸ್ಥಳದಲ್ಲಿ ರಾ| ಮಾಣಿ ಅನಂತಭಟ್ ಫಡಕೆ ವಗೈರೆ ಸಮಸ್ತರಿಂದ ಕಟ್ಟಿಸಲ್ಪಟ್ಟ ದೇವಸ್ಥಾನದಲ್ಲಿ ಇದೇ ರಾಕ್ಷಸ ಸಂವತ್ಸರದ ನಿಜವೈಶಾಖ ಶು| ೫ ಬುಧವಾರ ಶ್ರೀ ಪರಶುರಾಮ ದೇವರನ್ನು ಪ್ರತಿಷ್ಠಿಸಲ್ಪಟ್ಟಿಯದೆ. ಆಷಾಢ ಶುದ್ಧ ೧೧ಯಲಾಗಾಯಿತು ಧರ್ಮಾಶ್ರಯ ಬ್ರಹ್ಮಸಂಘವೆಂಬ ಅಭಿದಾನದಿಂದ ನಮ್ಮ ಚಿತ್ತಪಾವನರ ಉದ್ಧರಣೆ ಬಗ್ಗೆ ಒಂದು ಸಭೆಯು ಏರ್ಪಡಿಸಲ್ಪಟ್ಟು ಈವರೆಗೆ ಪ್ರತಿ ಏಕಾದಶಿಯಲ್ಲಿಯೂ ಸಭೆಗಳು ನಡೆದಿರುವವಲ್ಲದೆ, ಒಂದೆರಡು ಸ್ಪೆಶಲ್ ಸಭೆಗಳು ಕೂಡಾ ಕೂಡಿರುತ್ತವೆ. ಈ ಸಭೆಯು ಪುರವೃದ್ಧಿಗೋಸ್ಕರ ಚಿತ್ತಪಾವನ ಮುಂಡಲಿಯವರಿಂದ ಪ್ರವೇಶಧನ ಮತ್ತು ಚಂದಾ ಹಣ ಕೂಡಾ ಜಮಾಯಿಸುವರೆ ಪ್ರಾರಂಭಿಸಲ್ಪಟ್ಟಿದೆ.

ಈ ಸಭೆಯ ಮುಖ್ಯ ಉದ್ದೇಶವೇನೆಂದರೆ—ನಮ್ಮ ಚಿತ್ತಪಾವನರು ಹಿಂದುಳಿದಿರುವದರಿಂದ ನಮ್ಮ ಏಳಿಗೆಗೆ ಮುಖ್ಯವಾದ ವಿದ್ಯಾಭ್ಯಾಸ ವ ಐಕಮತ್ಯವನ್ನು ವೃದ್ಧಿಸುವದೇ ಆಗಿರುತ್ತದೆ. ಆದ್ದರಿಂದ ಈ ಸಭೆಯು ಅಭಿವೃದ್ಧಿಹೊಂದಬೇಕಾಗಿ ಪ್ರಾರ್ಥಿಸುವ,

ಮುಂಡಾಜೆ, ತಾ. 1 – ೮ – 1915

M. S. B. Phadke.

ಖಾಸಗಿ ಹೊಳೆಯು ಯಾವುದು?

ಅಯ್ಯಾ,

ದಕ್ಷಿಣಕನ್ನಡ ಜಿಲ್ಲಾ ಗಜೇಟಿನ ಆಗೋಸ್ತು ತಿಂಗಳ ಉಪಭಾಗದಲ್ಲಿ ಪ್ರಕಟಿತವಾದ ಗವರ್ನಮೆಂಟ್ ಇಸ್ತಿಹಾರಿನಲ್ಲಿ "ನಮ್ಮ ಜಿಲ್ಲೆಯ ಖಾಸಗಿ ಜಲಾಶಯವಲ್ಲದ ನೇತ್ರಾವತಿ, ಚಂದ್ರಗಿರಿ, ಅಡ್ಯಕಸ್ಥಳ ಮತ್ತು ಚೆರವತ್ತೂರು ಹೊಳೆಗಳಲ್ಲಿ ಮೀನು ಹಿಡಿಯುವ ಉದ್ದಿಶ್ಯ ಯಾವನೊಬ್ಬ ಮನುಷ್ಯನಾದರೂ ಸ್ಥಾವ(fixed)ರ ಯಂತ್ರವನ್ನು ನೆಡಲಿಕ್ಕೂ, ಉಪಯೋಗಿಸಲಿಕ್ಕೂ ಅಥವಾ ಗೂಟಗಳ ಬೇಲಿ ಕಟ್ಟಲಿಕ್ಕೂ ಕೂಡದು. ಈ ಕ್ರಮಕ್ಕೆ ವಿರೋಧವಾಗಿ ನಡಿಯುವವರು ಕ್ರಿಮಿನಲ್ ತಕ್ಸೀರಿಗೆ ಒಳಪಡುವರು" ಎಂದು ಆಜ್ಞಾಪಿಸಿದೆ. ನಮ್ಮ ಜಿಲ್ಲೆಯಲ್ಲಿ ಅನೇಕ ಹೊಳೆಗಳಿರುತ್ತಾ ಮೇಲ್ಕಂಡ ಹೊಳೆಗಳು ಮಾತ್ರವೇ ಖಾಸಗಿ ಜಲಾಶಯವಲ್ಲವೆಂದನ್ನಿಸಿಕೊಳ್ಳಲು ಕಾರಣವೇನು? ಈ ಪ್ರಕಟಣೆ ಪ್ರಕಾರ ಜಿಲ್ಲೆಯ ಬಾಕಿ ಹೊಳೆಗಳೆಲ್ಲಾ ಖಾಸಗಿ ಹೊಳೆಗಳೆಂದು ಅರ್ಥವಾಗುತ್ತದಲ್ಲವೇ? ನಮ್ಮ ಮಂಗಳೂರಲ್ಲೆ ನೇತ್ರಾವತಿ ಹೊಳೆಗೆ ಬಂದು ಕೂಡುವ ಫುಲಾಸಿ ಅಥವಾ ಗುರುಪುರ ಹೊಳೆಯು ಸಹ ಖಾಸಗಿ ಹೊಳೆಯಾಗಿರಬೇಕು. ಹಾಗಾದರೆ ಈ ಹೊಳೆಯಲ್ಲಿ ಮೇಲ್ಕಂಡ ವಿಧಾನದಿಂದ ಮೀನು ಹಿಡಿಯೋಣವು ತಕ್ಸೀರುಕರವಾಗಲಾರದಷ್ಟೆ!

- ಜಿಲ್ಲೆಯಲ್ಲಿರುವ ಎಲ್ಲಾ ಹೊಳೆಗಳು ಸಾರ್ವಜನಿಕ ಉಪಯೋಗವುಳ್ಳವುಗಳಾಗಿರುತ್ತಾ ಈ ರೀತಿ ಕೆಲವು ಹೊಳೆಗಳು ಖಾಸಗಿ ಜಲಾಶಯವಾಗಿಯೂ ಕೆಲವು ಹೊಳೆಗಳು ಖಾಸಗಿಯಲ್ಲದವುಗಳಾಗಿಯೂ ಯಾವ ಕಾರಣದಿಂದ ಹೇಳಲ್ಪಡುವವಾಗುತ್ತವೆ? ಎಂಬದನ್ನೂ ಸರಕಾರವು ಇಂಥಾ ಹುಕುಮನ್ನು ಜಾರಿಗೆ ತಂದದ್ದರ ಉದ್ದೇಶವೇನೆಂಬದನ್ನೂ ಸಂಬಂಧಪಟ್ಟ ರೆವಿನ್ಯೂ ಉದ್ಯೋಗಸ್ಥರಾಗಲೀ, ವಾಚಕಮಹಾಶಯರಾಗಲೀ ಸರ್ವ ಜನರ ತಿಳುವಳಿಕೆ ಬಗ್ಗೆ ಈ ಪತ್ರದಲ್ಲಿ ಪ್ರಕಟಿಸುತ್ತಿದ್ದರೆ ತುಂಬಾ ಉಪಕಾರವಾದೀತು.

ಒಬ್ಬ ಮಂಗಳೂರಿಗ.

ಯುದ್ಧ ಸಮಾಚಾರ.

ಅಗೋಸ್ತು ತಾ. ೨೯, ೩೦.

ಜರ್ಮನ್ ವಾಯುವಿಮಾನಗಳ ಪರ್‍ಯಾಟಯು ಮತ್ತು ಅಲ್ಲಲ್ಲಿ ನಡೆಯುತ್ತಿರುವ ಚಿಕ್ಕ ಪುಟ್ಟ ಕದನಗಳಲ್ಲದೆ ಪಶ್ಚಿಮ ರಣರಂಗದಲ್ಲಿ ಮತ್ತೇನೂ ವಿಶೇಷವಾರ್ತೆ ಇರದು.

ಗೆಲಿಸಿಯದ ಪೂರ್ವ ಪ್ರಾಂತ್ಯಗಳಲ್ಲಿ ಜರ್ಮನರು ರುಶ್ಯಯನರನ್ನು ಯುದ್ಧಕ್ಕೆ ಕೆಣಕಿಸುತ್ತ ವಿಶೇಷವಾಗಿ ಕಾದಾಡುತ್ತಿದ್ದಾರೆ. ಫ್ರೆಡ್ ರಿಚ್‌ಸ್ಟೆಡ್ ಪ್ರಾಂತ್ಯಗಳ ಪಶ್ಚಿಮದಲ್ಲಿರುವ ಸೇನಾ ನೆಲೆಯನ್ನು ಬಿಟ್ಟು ರುಶ್ಯಯನರು ಹಿಂದಕ್ಕೆ ಸೇರುತ್ತಿದ್ದಾರೆ. ಬಿಯೊಲಿಸ್ಟೊಕ್‌ದ ಉತ್ತರ ದಿಕ್ಕಿನಲ್ಲಿ ಶತ್ರುಗಳು ಮುಂದರಿದಿರುವರು.

ಇಸೊಂಜೊದ ಸಮೀಪದಲ್ಲಿ ಇಟೆಲಿಯನರು ಒಸ್ಟ್ರಿಯನರ ಹಲವು ಕಂದಕಗಳನ್ನು ಹಿಡಿದಿರುವರು.

ಅಗೋಸ್ತು ತಾ. ೩೧.

"ಅರಬಿಕ್" ಎಂಬ ಪ್ರಯಾಣಸ್ಥರ ಹಡಗವನ್ನು ಜರ್ಮನರು ನಾಶಪಡಿಸಿದ ವಿಷಯದಲ್ಲಿ ಅಮೇರಿಕದ ಸಂಯುಕ್ತ ಸಂಸ್ಥಾನದವರನ್ನು ಸಮಾಧಾನಗೊಳಿಸಿರುವರು. ಇನ್ನು ಮುಂದೆ ಇಂಥಾ ಹಡಗಗಳನ್ನು ಮುಳುಗಿಸುವ ಮುಂಚೆ ಇವುಗಳಿಗೆ ಬೇಕಾದ ಸೂಚನೆಯನ್ನು ಜರ್ಮನ್ ಸಬ್‌ಮೆರ್‍ಯಾನ್ ನಾವೆಗಳು ಕೊಡಬೇಕೆಂತ ನಿರ್ಣಯಿಸಲ್ಪಟ್ಟಿರುವದು.

ಬೆಲ್ಜಿಯಮ್ ಮತ್ತು ಆರ್ಟೋಯಿ ಪ್ರಾಂತ್ಯಗಳಲ್ಲಿ ತೋಪುಗಳ ಕದನಗಳು ನಡೆದಿದ್ದವು. ಇನ್ನು ಸದ್ಯದಲ್ಲಿಯೇ ಬರುವ ಛಳಿಗಾಲದಲ್ಲಿ ಸೇನೆಗಳಿಗೆ ಯುದ್ಧರಂಗದಲ್ಲಿ ಬೇಕಾದ ಏರ್ಪಾಡುಗಳನ್ನು ಸಂಯುಕ್ತ ಸೇನೆಯವರು ವ್ಯವಸ್ಥೆಗೊಳಿಸುತ್ತಿರುವರು.

ಪೂರ್ವ ರಣರಂಗದಲ್ಲಿ ಗೆಲಿಸಿಯದ ಉತ್ತರದಲ್ಲಿ ಸ್ಟ್ರಿಪಾ ನದಿಯ ಹತ್ತರ ರುಶ್ಯಯನರು ಜರ್ಮನರನ್ನು ಮುಂದರಿಯಲು ಬಿಡದೆ ತಡದಿರುವರು. ಪೆಟ್ರೋಗ್ರೇಡಿನಲ್ಲಿ ಪ್ರಕಟಿತವಾದ ಯುದ್ಧ ಸಮಾಚಾರದಲ್ಲಿ ರುಶ್ಯಯನರ ಜಯದ ವೃತ್ತಾಂತದಿಂದ ಡ್ವಿನಾ ನದಿಯ ಬಲದಡದಲ್ಲಿ ದಾಟಿ ಬಂದ ಶತ್ರುಗಳನ್ನು ಹಿಂದಕ್ಕೆ ಓಡಿಸಿರುವರೆಂತಲೂ ಜರ್ಮನರು ಇಲ್ಲಿ ಪದೇ ಪದೇ ಮೇಲ್ಬಾಯಿದು ಬಂದರೂ ರುಶ್ಯಯನರು ಇವರನ್ನು ಹಿಂದಕ್ಕೆ ಅಟ್ಟಿರುವರೆಂತಲೂ ಲಿಪ್ಸಕ್ ಸಿಡ್ಡಾ ಪ್ರಾಂತ್ಯಗಳಲ್ಲಿ ಶತ್ರುಗಳ ಸೇನಿಕರಲ್ಲಿ ೩೦೦ ಜನರನ್ನು ಸೆರೆಹಿಡಿದಿರುವರೆಂತಲೂ ತೋರಿಬರುತ್ತದೆ. ಸ್ಟ್ರಿಪಾ ಹತ್ತರ ಆದ ಕಾಳಗದಲ್ಲಿ ೩೦೦೦ ಜನ ಶತ್ರುಗಳ ಸೇನಿಕರನ್ನೂ, ೩೦ ತೋಪಿಗಳನ್ನೂ ರುಶ್ಯನರು ಹಿಡಿದಿರುವರು.

ಜರ್ಮನರ ಕೈವಶವಾದ ಪೋಲೆಂಡ್ ಪ್ರಾಂತ್ಯಗಳಲ್ಲಿ ಬೆಲ್ಜಿಯಮಿನಲ್ಲಿ ನಡೆಸಿದ ಅತ್ಯಾಚಾರಗಳನ್ನು ಜರ್ಮನರು ನಡಿಸುತ್ತಿದ್ದಾರೆ. ರುಶ್ಯಯನರ ಶಾಸನಕ್ಕೆ ಅನುಗುಣವಾಗಿ ಜರ್ಮನರ ಕೂಡ ವ್ಯವಹಾರಗಳನ್ನು ನಡಿಸಲು ನಿರಾಕರಿಸುವ ವ್ಯಾಪಾರಸ್ಥರೂ ಬೇಂಕುಗಳ ಮಾಲಿಕರೂ ತಮ್ಮ ವ್ಯಾಪಾರ ಭಂಡಸಾಲೆಗಳನ್ನು ಮುಚ್ಚಬೇಕೆಂತ ಜರ್ಮನರು ನಿರ್ಬಂಧಪಡಿಸುತ್ತಿರುವರು. ರುಶ್ಯಯನರಿಗೆ ಅನುಗುಣವಾಗಿ ನಡೆದವರನ್ನೆಲ್ಲಾ ಕಾರಾಗೃಹಗಳಲ್ಲಿ ಇಡುತ್ತಿದ್ದಾರೆ.

ಯುದ್ಧ ಸಾಮಾಗ್ರಿಗಳು ಖಾಸಗಿ ಕಾರ್ಖಾನೆಗಳಲ್ಲಿಯೂ ಸಹ ತಯಾರಾಗುವ ಏರ್ಪಾಡನ್ನು ನಡಿಸುತ್ತಿರುವರು.

ಸಪ್ಟಂಬರ ತಾ. ೧-೨.

ಬೆಲ್ಜಿಯನರ ಸೇನೆಯು ಬಹಳ ಉತ್ತಮಸ್ಥಿತಿಯಲ್ಲಿರುವದೆಂತಲೂ, ಯುದ್ಧಸಾಮಗ್ರಿಗಳು ಈ ಸೇನೆಯಲ್ಲಿ ತುಂಬಾ ಇರುವವೆಂತಲೂ ತಿಳಿದು ಬರುತ್ತದೆ.

ಫ್ರೆಂಚರ ವಿಚಕ್ಷಣನಾದ ಪೆಗೋಡ್ ಎಂಬ ವಿಮಾನಕಾರನನ್ನು ವಿಮಾನವು ಆಕಾಶದಲ್ಲಿದ್ದಾಗಲೆ ಶತ್ರುಗಳು ಗುಂಡು ಹಾರಿಸಿ ಕೊಂದುಬಿಟ್ಟಿರುವರು. ಜರ್ಮನಿಯ ಯುವರಾಜರ ಸೇನೆಗೆ ಈ ವಿಮಾನಕಾರನಿಂದ ಬಹಳ ಕಾಟವು ಇತ್ತು. ಪ್ಯಾರಿಸ್ ನಗರದಲ್ಲಿ ಈತನ ಸ್ಮರಣೆಯು ಜನರಲ್ಲಿ ಸದಾ ಇರುವಂತೆ ಒಂದು ರಸ್ತೆಯನ್ನು ಈತನ ಹೆಸರಲ್ಲಿ ಕರೆಯಬೇಕೆಂತ ನಿರ್ಣಯಿಸಿದ್ದಾರೆ.

ಕೌಕಾಸಿಯ ಪ್ರಾಂತ್ಯಗಳಲ್ಲಿ ರುಶ್ಯಯನರು ತುರ್ಕರನ್ನು [illegible] ಸೇನಿಕರನ್ನು ಸೆರೆಹಿಡಿದು ೧೩ ತೋಪಿಗಳನ್ನೂ ೧೩ ಯಂತ್ರಕಾಲಿಕ ಫಿರಂಗಿಗಳನ್ನೂ ಕೈವಶಮಾಡಿಕೊಂಡಿರುವರು.

ಜರ್ಮನಿಗೆ [illegible] ಮೇಲೆ ಹಣ ಕೊಡಲು ನಿರಾಕರಿಸಿದ ಪೋಲಂಡ್ ದೇಶದ ೩೦ ಶಹರಗಳನ್ನು ಸ್ವಾಧೀನಮಾಡಿ ಜರ್ಮನಿಗೆ ಕಳುಹಿಸಿಕೊಟ್ಟಿರುವರು.

ಸಪ್ಟಂಬರ ತಾ ೩.

ಸಪ್ಟಂಬರ ತಾ. ೧ಕ್ಕೆ ಅಂತ್ಯವಾಗುವ ವಾರದಲ್ಲಿ ೩ ಹಡಗಗಳು ಮಾತ್ರ ಮುಳುಗಿಹೋಗಿವೆ ಎಂತ ತಿಳಿಯುತ್ತೇವೆ. ಈ ತನಕ ಜರ್ಮನರ ಜಲಂತರ್ಗಾಮಿ ನಾವೆಗಳು ಪ್ರಯಾಣಕ್ಕೆ ತೆರಳಿದ ೧೧,೩೬೮ ವ್ಯಾಪಾರದ ಹಡಗಗಳಲ್ಲಿ ೧೩೮ ಹಡಗಗಳನ್ನು ಮಾತ್ರ ನಾಶಪಡಿಸಿವೆ ಎಂಬುದಾಗಿ ತೋರುತ್ತದೆ.

ಸಂಯುಕ್ತ ಸೇನೆಗಳಲ್ಲಿ ಫಿರಂಗಿಗಳ ಮೂಲಕ ಶತ್ರುಗಳಲ್ಲಿ ವಿಶೇಷ ಹಾವಳಿಯನ್ನು ಮಾಡುತ್ತಿರುವವು. ನಾಲ್ಕು ತಾಸುಗಳಲ್ಲಿ ೮೦,೦೦೦ ಗುಂಡುಗಳನ್ನು ಹಾರಿಸಿ ಕೋಟೆ ಚೆಸ್ಲ ಎಂಬಲ್ಲಿ ಜರ್ಮನರ ಕಂದಕಗಳನ್ನೂ, ಸೇನಾಶಿಬಿರ ಇತ್ಯಾದಿಗಳನ್ನೂ ನಾಶಪಡಿಸಿರುವರು.

ಸಂಧಾನದ ಕುರಿತು ಪೋಪ ಜಗದ್ಗುರುಗಳು ಕಾರ್ಡಿನಲ್ ಗಿಬ್ಬನ್ಸ್‌ರ ಮೂಲಕ ಅಮೇರಿಕಕ್ಕೆ ಕಳುಹಿಸಿಕೊಟ್ಟಿರುವ ಸಂದೇಶವು ಪ್ರೆಸಿಡೆಂಟ ವಿಲ್ಸನರವರ ಕೈಸೇರಿರುತ್ತದೆ. ಜರ್ಮನರಿಗೂ ಆಂಗ್ಲೆಯರಿಗೂ ಸಮುದ್ರಗಳ ಮೇಲಣ ಸ್ವತಂತ್ರದ ವಿಷಯ ತಕರಾರು ಆಗುವದು ಸಂಧಾನಕ್ಕೆ ಪ್ರಥಮದಲ್ಲಿ ಅಗತ್ಯವೆಂತ ಕಾರ್ಡಿನಲ್ ಗಿಬನ್ಸ್‌ರವರು ಹೇಳುವರು. ಯಾವ ಉದ್ದೇಶದ ಬಗ್ಗೆ ಮಿತ್ರರ ಸೇನೆಗಳು ಕಾದಾಡುತ್ತಿರುವವೋ ಅಂಥಾ ಉದ್ದೇಶಗಳು ನೆರವೇರಿದ ಹೊರತು ಸಂಧಾನದ ಅಪೇಕ್ಷೆಯು ತಂತಮ್ಮ ರಾಷ್ಟ್ರಗಳಿಗಿರದೆಂದು ಮಿತ್ರರ ರಾಯಭಾರಿಗಳು ತಿಳಿಪಡಿಸಿರುವರು.

ರುಶ್ಯಯನರ ಸೇನೆಗಳು ನಿರರ್ಥಕವಾಗಿ ಕಾದಾಡಿ ಯುದ್ಧರಂಗದಲ್ಲಿ ಮಡಿದುಹೋಗದಂತೆ ತಮ್ಮ ನೆಲೆಗಳನ್ನು ಬದಲಾಯಿಸುತ್ತ ತಮ್ಮ ಹಿಂದಳಗಳ ಮೂಲಕ ಶತ್ರುಗಳ ಸೇನೆಗಳನ್ನು ನಾಗ ಬಡಿಯುತ್ತಿವೆ.

ಒಸ್ಟ್ರಿಯನರ ಸೆಕ್ಸ್ಟನ್ ಪ್ರದೇಶದಲ್ಲಿರುವ ಯುದ್ಧಸಾಮಾಗ್ರಿಗಳ ಕೊಠಡಿಯನ್ನು ಇಟೆಲಿಯನರು ನಾಶಪಡಿಸಿರುತ್ತಾರೆ.

ಸಪ್ಟಂಬರ ತಾ. ೪.

ಸಂಧಾನದ ಶರ್ತಗಳನ್ನು ವಾದಿಸಲು ಬರ್ಲಿನ್‌ನಲ್ಲಿ ಸಮ್ಮತಿ ಇರುವದೆಂತ ಅಮೇರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಗೊತ್ತಾಗಿರುವದು. ಇಂಥಾ ಸಮ್ಮತಿ ಮಿತ್ರರಿಗೆ ಸಹ ಇರುವದೆಂಬುದು ಗೊತ್ತಾದ ವಿನಹ ಈ ವಿಷಯದಲ್ಲಿ ಪ್ರೆಸಿಡೆಂಟ್ ವಿಲ್ಸನ್‌ರವರು ಯಾವ ಪ್ರಯತ್ನವನ್ನಾದರೂ ಮಾಡಲಾರರೆಂಬದಾಗಿ ತಿಳಿದು ಬರುತ್ತದೆ.

ಏನೂ ಸೂಚನೆ ಕೊಡದೆ ಜರ್ಮನರ ಸಬ್‌ಮೆರ್‍ಯಾನ್ ನಾವೆಯು 'ಹೆಸ್‌ಪರಿಯನ್' ಎಂಬ ಇನ್ನೊಂದು ಪ್ರಯಾಣಿಕರನ್ನು ತುಂಬಿರುವ ಹಡಗವನ್ನು ಟೊರ್ಪೆಡೊ ಮೂಲಕ ತಿವಿದಿರುವದು. ಈ ಹಡಗವು ಲೀವರ್‌ಪೂಲಿನಿಂದ ಮೊಂಟ್ರಿಲಿಗೆ ಹೊರಡಿತು. ಇದು ಮುಳುಗಿ ಹೋಗದೆ ಇದ್ದದ್ದರಿಂದ ಪ್ರಯಾಣಿಕರನ್ನೂ ಕಲಾಸಿಯರನ್ನೂ ಈ ಹಡಗದಿಂದ ರಕ್ಷಿಸಲು ಸಾಧ್ಯವಾಯಿತು.

ಪಶ್ಚಿಮ ರಣರಂಗದಲ್ಲಿ ಶತ್ರುಗಳ ನೆಲೆಗಳ ಮೇಲೆ ತೋಪುಗಳಿಂದ ಗುಂಡುಗಳನ್ನು ಹಾರಿಸುತ್ತ ಶತ್ರುಗಳ ಸೇನೆಯನ್ನು ಮಿತ್ರ ಸೇನಿಕರು ತಳಮಳಗೊಳಿಸುತ್ತಿರುವರು.

ಪೂರ್ವ ರಣರಂಗದಲ್ಲಿ ರುಶ್ಯಯನರು ರೀಗಾ ಪ್ರಾಂತ್ಯಗಳಲ್ಲಿ ಡ್ವೀನಾ ನದಿಯನ್ನು ದಾಟಿಹೋಗಿ ಶತ್ರುಗಳ ಮೇಲೆ ಬಿದ್ದು ಈ ನದಿಯಿಂದ ಇವರನ್ನು ಓಡಿಸಿಬಿಟ್ಟಿರುವರು. ಗ್ರೊಡ್ನೊ ಪಟ್ಟಣವನ್ನು ರುಶ್ಯಯನರ ಸೇನೆಯ ಹಿಂದಳದವರು ಪುನಹ ಪ್ರವೇಶಿಸಿ ೮ ಫಿರಂಗಿಗಳನ್ನೂ ೧೮೦ ಶತ್ರುಗಳ ಸೇನಿಕರನ್ನೂ ಸೆರೆಹಿಡಿದದ್ದರಿಂದ ಇಲ್ಲಿದ್ದ ರುಶ್ಯಯನರ ಹಿಟ್ಟಿನ ಸೇನೆಗೆ ಈ ಪಟ್ಟಣವನ್ನು ತೊಂದರೆ ಇಲ್ಲದೆ ಬಿಟ್ಟುಹೋಗಲು ಬಹಳ ಅನುಕೂಲವಾಯಿತು.

ಉತ್ತರ ಹಿಂದೂಸ್ಥಾನ.

ಬರೋಡೆಯ ಗಾಯಕವಾಡರವರು ಸಾಮ್ರಾಜ್ಯದ ಸೇನೆಯ ಬಗ್ಗೆ ಒಂದು ಆಕಾಶನಾವೆಗಳ ಘಟೆಯನ್ನು ಸಿದ್ಧಗೊಳಿಸಲು ೫ ಲಕ್ಷ ರೂಪಾಯಿಗಳನ್ನು ಕೊಟ್ಟಿರುವರು.

ಬಂಗಾಳದ ಗವರ್ನರ ದೊರೆಗಳಾದ ಕಾರ್ಮಿಕೆಲ್ ಪ್ರಭುಗಳು ಮದ್ರಾಸಿನಲ್ಲಿದ್ದಾಗ ತಮಿಳು ಭಾಷೆಯನ್ನು ಕಲಿತು ಒಂದು ಸಭೆಯಲ್ಲಿ ತಮಿಳಿನಲ್ಲಿಯೇ ಮಾತಾಡಿದ್ದರು. ಬಂಗಾಳಕ್ಕೆ ಹೋದನಂತರ ಬಂಗಾಳಿ ಭಾಷೆಯನ್ನು ಕಲಿತು ಇತ್ತಲಾಗೆ ನವದ್ವೀಪಕ್ಕೆ ಹೋದಾಗ ಅಲ್ಲಿ ಪ್ರಜೆಗಳ ಸಭೆಯಲ್ಲಿ ಬಂಗಾಳಿ ಭಾಷೆಯಿಂದಲೇ ಮಾತಾಡಿದರು.

ಭರತಖಂಡದ ಪ್ರಸಿದ್ಧ ವಯೋವೃದ್ಧರಾದ ದಾದಾಭಾಯಿ ನವರೋಜಿಯವರ ೯೧ನೇಯ ಜನ್ಮದಿನವು ಈ ತಿಂಗಳ ತಾ. ೪ರಲ್ಲಿ ಹಿಂದೂಸ್ಥಾನದ ಎಲ್ಲಾ ಪ್ರಾಂತ್ಯಗಳಲ್ಲಿಯೂ ಆಚರಿಸಲ್ಪಟ್ಟಿತು. ಮುಂಬಯಿಂದ ಕುಲಸ್ತ್ರೀಯರ ಪ್ರತಿನಿಧಿಗಳು ಸರೋಜಿನಿ ನ್ಯಾಡು ಮೊದಲಾದ ಸ್ತ್ರೀಯರೊಡನೆ ನವರೋಜಿಯವರ ದರ್ಶನದ ಬಗ್ಗೆ ಹೋಗಿದ್ದರು. ಸ್ತ್ರೀಶಿಕ್ಷಣ ಪ್ರಸರಣೆಯ ಪ್ರಯತ್ನಗಳನ್ನು ಈ ದೇಶದಲ್ಲಿ ಸಮರ್ಪಕವಾದ ರೀತಿಯಲ್ಲಿ ನಡಿಯುವಂತೆ ಸರ್ ವಿಲಿಯಮ್ ವೆಡರ್‌ಬರ್ನ್‌ರವರೇ ಮೊದಲಾದವರು ಕೂಡಿಕೊಂಡು ಸ್ಟೇಟ್ ಸೆಕ್ರೆಟರಿಯವರಿಗೆ ಬರಕೊಂಡ ವಿಜ್ಞಾಪನೆಯನ್ನು ಹಿಂದುಸ್ಥಾನದವರು ಆದರಿಸಬೇಕೆಂತ ನವರೋಜಿಯವರು ಈ ಸಂದರ್ಭದಲ್ಲಿ ಅಪ್ಪಣೆಕೊಟ್ಟಿರುತ್ತಾರೆ. ಪುನೆ, ಮುಂಬಯಿ, ಅಲಹಾಬಾದ್, ಕಲ್ಕತ್ತಾ, ಮದ್ರಾಸು ಮೊದಲಾದ ಕಡೆಗಳಲ್ಲಿ ಮಹಾಜನರ ಸಭೆಗಳು ಸೇರಿ ನವರೋಜಿಯವರಿಗೆ ತಮ್ಮ ವಂದನೋಕ್ತಿಗಳನ್ನು ತಂತೀಮೂಲಕ ಕಳುಹಿಸಿಕೊಟ್ಟಿರುತ್ತಾರೆ. ವ್ಯಾಸರಾಯಿಗಳಾದ ಹಾರ್ಡಿಂಗ್ ಪ್ರಭುಗಳವರೂ ಮುಂಬಯಿಯ ಗವರ್ನರರಾದ ವೆಲ್ಲಿಂಗ್‌ಡನ್ ಪ್ರಭುಗಳವರೂ ನವರೋಜಿಯವರಿಗೆ ವಂದನೋಕ್ತಿಗಳನ್ನು ಕಳುಹಿಸಿಕೊಟ್ಟು ಸನ್ಮಾನಿಸಿರುವರು.

ಮಹಾಮಾನವಟ್ಟ ಸರ್. ಎಸ್. ಪಿ. ಸಿಂಹರವರು ಕೊಂಗ್ರೆಸು ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳುವರೆ ಸಮ್ಮತಿಸಿರುವರಾಗಿ ತಿಳಕೊಳ್ಳುತ್ತೇವೆ.

ಸಂಯುಕ್ತ ಪ್ರಾಂತ್ಯಗಳಲ್ಲಿ ಗೋಮತಿ ನದಿಯಲ್ಲಿ ನೆರೆ ತುಂಬಿ ಬಹಳ ಹಾವಳಿಯುಂಟಾಗಿದೆಂಬುದಾಗಿ ತಿಳಿದುಬರುತ್ತದೆ. ಈ ನದಿಗೆ ಶಾಖೆಯಾಗಿರುವ ನಡು ರುದ್ದೀನ್ ಕಾಲುವೆಯಲ್ಲಿ ಸಹ ಅತಿರೇಕವಾಗಿ ನೀರು ತುಂಬಿ ಸುತ್ತಲೂ ಇರುವ ಮರ, ಮನೆ, ವಾಸಸ್ಥಳಗಳು ನಾಶವಾಗಿ ಹೋಗಿರುವವು. ಮನೆಮಾರು ಕಳಕೊಂಡ ಗ್ರಾಮಸ್ಥರು ರಸ್ತೆಗಳ ಕಿನಾರೆಗಳಲ್ಲಿ ಮಲಗುತ್ತಿದ್ದಾರೆ. ಸರಕಾರದವರೂ, ಪ್ರಜೆಗಳೂ ಕೂಡಿಕೊಂಡು ತಮ್ಮಿಂದಾಗುವ ಪ್ರಯತ್ನಗಳನ್ನು ನಡಿಸಿ ಸಂಕಷ್ಟದಲ್ಲಿರುವ ಜನರಿಗೆ ಸಹಾಯವನ್ನು ಮಾಡುತ್ತಿರುವರು. ಮೋಟಾರ ಗಾಡಿಗಳಲ್ಲಿ ಜನರನ್ನು ನೆರೆ ತುಂಬಿದ ಸ್ಥಳಗಳಿಂದ ವಯ್ಯುತ್ತಿರುವರಲ್ಲದೆ ಅಂಗಡಿಗಳಲ್ಲಿರುವ ಸಾಮಾಗ್ರಿಗಳನ್ನು ತೆಗಿಸಿ ಅಂಗಡಿಗಳಲ್ಲಿ ಜನರು ಉಳಕೊಳ್ಳುವ ಏರ್ಪಾಡುಗಳನ್ನು ನಡಿಸುತ್ತಿರುವರು. ಈ ನೆರೆಯಿಂದ ಲಕ್ಷ್ಮೀಪುರದಲ್ಲಿಯ ಒಂದು ಕೋಲೇಜನ್ನೂ, ಒಂದು ಶಾಲೆಯೂ ಮುರಿದುಬಿದ್ದು ೧೦೦ರಕ್ಕಿಂತ ಹೆಚ್ಚು ಜನರು ಮಡಿದು ಹೋಗಿರುವರೆಂತ ತಿಳಿದುಬರುತ್ತದೆ. ಲಕ್ಷ್ಮೀಪುರಕ್ಕೆ ಸಮೀಪವಿರುವ ಒಂದು ಗ್ರಾಮವು ನೆರೆ ನೀರಿನಿಂದ ಪೂರ್ಣ ತುಂಬಿರುವದು. ಮಾರ್ಗವರ್ಣ ಮತ್ತು ಮೋನಪುರದ ನಡುವೆ ಇರುವ ರೈಲ್ವೆ ದಾರಿಯು ತುಂಡುತುಂಡುಗಳಾಗಿ ಹೋಗಿರುವದು.

ಖೋನಪುರದಲ್ಲಿ ೪೮-ತಾಸುಗಳ ತನಕ ಮಳೆ ಬಿದ್ದು ಸುಮಾರು ೧೦೦೦ ಮನೆಗಳು ಹಾಳಾಗಿ ಹೋಗಿರುವವು

ಈ ಗೊಂದಲದ ಯಾತನೆಯಲ್ಲಿ ಪೊಲೀಸಿನವರಿಗೂ ಜನರನ್ನು ಈ ಸಂಕಟಗಳಿಂದ ರಕ್ಷಿಸಲು ಪ್ರಯತ್ನಿಸು ವಂಥ ಕೆನಿಂಗ್ ಕೊಲೇಜಿನ ವಿದ್ಯಾರ್ಥಿಗಳಿಗೂ ಜಗಳ ನಡೆಯಿತು ವಿದ್ಯಾರ್ಥಿಗಳು ತಮ್ಮ ದೋಣಿಗಳನ್ನು ಪೊಲೀಸಿನವರಿಗೆ ಕೊಡಬೇಕೆಂತ ಪೊಲೀಸಿನವರು ಪತ್ತಾಯ ನಡಿಸಿದರಂತೆ ಈ ಕಾರಣದಿಂದ ಪೊಲೀಸಿನವರಿಗೂ ವಿದ್ಯಾರ್ಥಿಗಳಿಗೂ ಜಗಳಹತ್ತಿತು. ಒಬ್ಬ ಪೊಲೀಸಿನವನನ್ನು ವಿದ್ಯಾರ್ಥಿಗಳು ಕೆಡವಿಬಿಟ್ಟರು. ಪೊಲೀಸು ಜವಾನನು ಈ ರೀತಿ ಬಿದ್ದದ್ದನ್ನು ಆತನ ಸಂಗಾತಿಗಳು ನೋಡಿ ತಮ್ಮ ಲ್ಯಾನ್ಸ್‌ಗಳಿಗೆ ಹೋಗಿ ಮತ್ತಷ್ಟು ಜವಾನರನ್ನು ಕರಕೊಂಡು ವಿದ್ಯಾರ್ಥಿಗಳನ್ನು ಹಿಂಬಾಲಿಸಿಕೊಂಡು ಕೊಲೇಜಿಗೆ ಹೋದರು ಅಲ್ಲಿ ನಡೆದ ಬಡಿದಾಟದಲ್ಲಿ ಕೊಲೇಜಿನ ಪ್ರೊಫೆಸ್ಸರರಾದ ಸ್ಮಿತ್ ವಾರ್ಡ ಮೊದಲಾದವರಿಗೆ ವಿಶೇಷ ಜಖಂ ಉಂಟಾಗಿರುವುದೆಂತ ತಿಳಿದು ಬರುತ್ತದೆ

〰〰〰

೨ ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨-೮-೦.

೩. ಪಂಚಾಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನು ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ನಾಳುಜವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

ದಿಮ್ಮು ವಿಳಾಸ:—ಬಿ ಎಮ್. ನಾಥ್ ಮತ್ತು ಕಂಪೆನಿ,

ವೆಪರಿ ಪೋಸ್ಟು ಮದರಾಸು.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ಪರಿಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುಲ್ಮ, ಶ್ವಾಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. ಚಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧ ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨ ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩ ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪ ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಪಟ್ಟಿಕೆಯ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

B. M. Nath & Co , *Ayurvedic Chemists,*

Vepery Post, MADRAS.

ಬನ್ನಿರಿ! ನೋಡಿರಿ!! ತಿಳಿಯಿರಿ!!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.

ಬಲ್ಕುತ ಮಿಶ್ರನ್ ಚೀಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೀಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ರನ್ ಶೋಪಿನ ಕೊಡೆಗಳೂ, ರೇಶ್ಮೆವಸ್ತ್ರಗಳೂ, ಬೆಣ್ಣೆ ಬಿಂಬು ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ಧೋತ್ರಗಳೂ, ರುಮಾಲುಗಳೂ, ರವಕೆ

ಕಣಗಳೂ ಕನಾನ್ನೂರು ಶೀರೆಗಳೂ, ಚೀಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಒಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

[illegible]

ಜೆ. ಎಸ್. ಸೋಜ ಎಂಡ್ ಕಂಪೆನಿ.

ಡೋಂಗರೆ

ಇವರ

ಬಾಲಾಮೃತ

ಮಕ್ಕಳಿಗೆ

ಅತ್ಯುತ್ತಮವಾದ ಟಾನಿಕ್

ಈ ಬಾಲಾಮೃತವನ್ನು ಉಪಯೋಗಿಸುವುದರಿಂದ ಮಕ್ಕಳು ಶಕ್ತಿವಂತರಾಗಿ ಆರೋಗ್ಯವಂತರಾಗುವರು. ಇದು ಸವಿ ಇರುವುದರಿಂದ ಮಕ್ಕಳು ಬಹಳ ಸಂತೋಷದಿಂದ ತಕೊಳ್ಳುತ್ತಾರೆ.

ಸೂಚನೆ.—ಬಾಲಾಮೃತವನ್ನು ಪಡಕೊಳ್ಳುವಾಗ ಡೋಂಗರೆಯವರ ಹೆಸರು ಇದ್ದದ್ದನ್ನು ನೋಡಿ ಪಡಕೊಳ್ಳಿರಿ ಇತರ ಕೀಳು ತರಗತಿಯದ್ದನ್ನು ಪಡಕೊಂಡು ಮೋಸಹೋಗಬೇಡಿರಿ.

ಬಾಟ್ಲಿ ಒಂದರ ಕ್ರಯ 0—12—0. ಟಪ್ಪಾಲು ಖರ್ಚು 0—4—0.

K. T. Dongare & Co., *Girgaum, Bomb[illegible]*

ಕೆ. ಟಿ. ಡೋಂಗರೆ ಎಂಡ್ ಕೊ., ಗಿರಗಾಂವ ಬೊಂಬಾಯಿ

ಆತಂಕನಿಗ್ರಹ ಗುಳಿಗೆಗಳು.

ದೇಹದಲ್ಲಿ ಎಂಥಾ ಕಾಯಿಲೆ ಇರುವಲ್ಲಿ ಅದನ್ನು ಶೀಘ್ರದಲ್ಲಿ ಹೋಗಲಾಡಿಸುವ ಪ್ರಯತ್ನ ಮಾಡಿ ತಕ್ಕಂಥಾ ಔಷಧವು ಸೇವಿಸಿ ಅದನ್ನು ಗುಣಹೊಂದಿಸದಿದ್ದರೆ ರತ್ನವಾದ ದೇಹವು ಕ್ಷೀಣಿಸುವದು ಆದಕಾರಣ ಹಾಗೂ ತಮಗೆ ಏನಾದರೂ ದೇಹಅಸೌಖ್ಯ ಕಂಡುಬರುವಲ್ಲಿ ತಕ್ಷಣವೇ ಆತಂಕನಿಗ್ರಹ ಗುಳಿಗೆಗಳನ್ನು ಸೇವಿಸಿ ನಂತರ ದೇಹಬಲವನ್ನು ಸ್ಥಾಪಿಸಿ ಅತಿ ಉತ್ತಮಕರವಾದ ರತ್ನವೆಂಬ ಔಷಧವು

ಕ್ರಯ 32 ಗುಳಿಗೆಗಳಿಗೆ 1 ರೂಪಾಯಿ

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ.

157, 158 ಆತಂಕನಿಗ್ರಹ ಔಷಧಾಲಯ, ಬ್ರಾಡ್ವೇ, ಮದ್ರಾಸ

ಮೈ ಏಜಂಟರು — 1 ಮೆಸ್ಸರ್ಸ್. ರಫಯೆಲ್ ಎಂಡ್ ಕೊ, ಬ್ರಿಟೋಬಿಲ್ಡಿಂಗ

2 ಜುಬಿಲಿ ಕೇಶ್ ಬಜಾರ್, ಬೆಂಗಳೂರು. ಮಂಗಳೂರ

S. U. N. & CO,
BENARES CITY, U P

ಐವತ್ತೈದು ಸಾವಿರ ರೂಪಾಯಿನ ಮಾಲುಗಳನ್ನು

ಅಸಲ್ ಕ್ರಯಕ್ಕೆ ಕೊಡುತ್ತೇವೆ.

ಈ ತಿಂಗಳು ಮಾತ್ರ

ಈ ವರುಷ ಲಗ್ನಕಾರ್ಯಗಳಿಗೆ ತಯಾರಿಸಿದ ಬನಾರಸ್ ಜರಿ ಸಾದಾ ಶೀರೆ, ಬೂಟಾ ಶೀರೆ, ಪೇಟ ಪಗುಟ, ರುಮಾಲು, ಕಣಗಳು, ಕೋಟ ಸಿಲ್ಕುಥಾನುಗಳು ಪಮರಿ ಚದರ್, ಕಾಶ್ಮೀರ್ ಸಾದಾ ಜರಿ ಶಾಲುಗಳು, ಕೊನಾರದ ತಿಂತೆ, ರದ್ರಾಕ್ಷಿ ಮೊದಲಾದ ಎಲ್ಲಾ ತರದ ಸುಮಾರು 25,000 ರೂಪಾಯಿನ ಮಾಲುಗಳು ಉಳಿದಿರುವುದರಿಂದ ನಾವು ಅದನ್ನು ಅಸಲ್ ಕ್ರಯಕ್ಕೆ ಕೊಡುತ್ತೇವೆ ಬೇಕಾದವರು ಬೇಗನೆ ಬರೆದು ತರಿಸಿಕೊಳ್ಳಬಹುದು

ಈ ತಿಂಗಳು ಕಳೆದ ಮೇಲೆ ಇಂಥಾ ಸಮಯ ಸಿಕ್ಕುವದಿಲ್ಲ ಬೇಗ ಬರೆದು ತರಿಸಿಕೊಳ್ಳಿ.

ತಮ್ಮ ವಿಳಾಸ.— ಯಸ್.ಯು.ಯನ್. ಮತ್ತು ಕಂಪೆನಿ, ಕಾಶಿ

THE GREATEST TREASURE OF TRUE VEDIC PRINCIPLES

ಸತ್ಯಾರ್ಥ ಪ್ರಕಾಶ

ಮೊದಲನೇ ೧೦ ಅಧ್ಯಾಯಗಳ ಕನ್ನಡ ಭಾಷಾಂತರ.

ಇದರಲ್ಲಿ ಪ್ರಾಣಿಗಳಿಗೆ ಪರಸ್ಪರ ಸಂಬಂಧವು ಹ್ಯಾಗೆ ಉಂಟಾಯಿತೆಂಬುವದೂ ಜೀವದ ಮತ್ತು ಪರಮೇಶ್ವರನ ಸಂಬಂಧವೂ, ಪರಮೇಶ್ವರನ ಓಂಕಾರಾದಿ ಹೆಸರುಗಳ ವ್ಯಾಖ್ಯೆಯೂ, ಮಕ್ಕಳ ಶಿಕ್ಷಣ ಪದ್ಧತಿಯೂ, ಬ್ರಹ್ಮಚರ್ಯಾದಿ ಆಶ್ರಮಗಳ ವರ್ಣನವೂ, ಬ್ರಾಹ್ಮಣ, ಕ್ಷತ್ರಿಯ ವೈಶ್ಯ ಶೂದ್ರರಿಗೆ ಮತ್ತು ಅಂತ್ಯಜರಿಗೆ ಹಾಗೂ ಸ್ತ್ರೀಯರಿಗೆ ವೇದಾಧ್ಯಯನದ ಅಧಿಕಾರವು ಇದ್ದ ಬಗ್ಗೆ ಸಪ್ರಮಾಣ ವಿವೇಚನವೂ, ಜಗತ್ತಿನ ಉತ್ಪತ್ತಿ ಸ್ಥಿತಿ ಮತ್ತು ಪ್ರಳಯಗಳ ವಿಚಾರವೂ, ಬಂಧ ಮೋಕ್ಷಗಳ ವಿಷಯವೂ ಭಕ್ಷ್ಯಾಭಕ್ಷ್ಯಗಳ ವಿವೇಚನವೂ, ವೇದಾದಿ ಸಚ್ಛಾಸ್ತ್ರಗಳ ಆಧಾರದಿಂದ ಶ್ರೀ ಸ್ವಾಮಿ ದಯಾನಂದ ಸರಸ್ವತಿಗಳವರು ಚನ್ನಾಗಿ ಮಾಡಿದ್ದಾರೆ ಶ್ರೀ ಸ್ವಾಮಿ ದಯಾನಂದ ಸರಸ್ವತಿಯವರ ಚರಿತ್ರವೂ, ಅವರು ಮಿಶನರಿ ಮತ್ತು ಮೌಲ್ವಿಗಳೊಡನೆ ಮಾಡಿದ ತರ್ಕಗಳೂ ಸನಾತನ ವೈದಿಕಧರ್ಮದ ಸತ್ಯಾರ್ಥವನ್ನು ಬೋಧಿಸುವ ಗಹನ ವಿಷಯಗಳೂ ಇದರಲ್ಲಿ ಕೊಟ್ಟಿವೆ ಕಿಮ್ಮತ್ತು ರೂ ೧—೮—೯. ವಿದ್ಯಾರ್ಥಿಯರಿಗೆ ರೂ ೧—೪—೦ ಟಪ್ಪಾಲು ಖರ್ಚು ಬೇರೆ ಪುಟ 560.

ಸತ್ಯಾರ್ಥ ಪ್ರಕಾಶ.

(೧೧ನೇ ಅಧ್ಯಾಯದ ಕನ್ನಡ ಭಾಷಾಂತರ)

ಇದರಲ್ಲಿ ಆರ್ಯಾವರ್ತ ದೇಶದಿಂದಲೇ ಇತರ ದೇಶಗಳು ವಿದ್ಯೆಯನ್ನು ಪ್ರಾಚೀನ ಕಾಲದಲ್ಲಿ ಕಲಿಯುತ್ತಿದ್ದರೆಂತಲೂ ಆರ್ಯಾವರ್ತ ದೇಶದ ಅವನತಿಯ ಕಾರಣಗಳೂ ಅದ್ವೈತಮತ, ಮೂರ್ತಿಪೂಜೆ, ತಪ್ತಮುದ್ರಾಧಾರಣೆ, ಗಯಾಶ್ರಾದ್ಧ, ಪುರಾಣಫಲ, ಜ್ಯೋತಿಷ, ಬ್ರಾಹ್ಮಸಮಾಜ ಪ್ರಾರ್ಥನಾಸಮಾಜ ಮುಂತಾದ ಬಹಳೇ ಪಂಥಗಳ ಪರೀಕ್ಷಣವು ಮಾಡಿಯದೆ. ಕಿಮ್ಮತ್ತು ಆಣೆ 8 ವಿದ್ಯಾರ್ಥಿಯರಿಗೆ ಆಣೆ ೬. ಪಾನು ಡೆಮ್ಮಿ ಅಷ್ಟಪತ್ರದ ಪುಟ ೧೫೦, ಟಪ್ಪಾಲು ಖರ್ಚು ಬೇರೆ.

ಈ ಗ್ರಂಥವನ್ನು ಹಿಂದೀ ಭಾಷೆಯೊಳಗಿನಿಂದ ಕನ್ನಡದಲ್ಲಿ ಸುಬ್ರಾವ್ ಶೇಷಗಿರಿ ಹಾಳಕರ, ಬಿ. ಎ ಎಲ್ ಎಲ್ ಬಿ, ಹೈಕೋರ್ಟ ವಕೀಲ್, ರಂಗೂನ್, ಇವರು ಮಾಡಿರುತ್ತಾರೆ ಹಿಂದು (ಆರ್ಯ) ಧರ್ಮಾಭಿಮಾನಿಯಾದ ಪ್ರತಿಯೊಬ್ಬನು ಸಂಗ್ರಹಿಸಲಿಕ್ಕೆ ದುರ್ಲಭವಾದ ಅತ್ಯಾವಶ್ಯಕ ಗ್ರಂಥವು. ಇದರ ಬೆಲೆಯಾದರೂ ಸರ್ವರೂ ಕೊಂಡುಕೊಳ್ಳುವಂತೆ ತೀರ ಕಮ್ಮಿ ಬೆಲೆಯನ್ನು ಇಟ್ಟಿರುತ್ತದೆ.

ಸಿಗುವ ವಿಳಾಸ — ಎಸ್ ಎಲ್. ಕಾಮತ್ ಧಾಕಪ್ಪನವರ

ಪೋಸ್ಟು ಶಿರ್ಶಿ, ಜಿಲ್ಲಾ ಉತ್ತರ ಕನ್ನಡ.

Estd 1888 — ಸ್ಥಾಪನೆ 1888.

K. B. RELE & Cos.,—BOMBAY

ಕೆ. ಬಿ. ರೇಳೆ ಕಂಪನಿಕೃತ

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರೆ ಮತ್ತು ಹಟಮಾರಿ ಗಜಕರ್ಣವು ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ ೨೦–೨೫ ವರ್ಷಗಳ ಹಳತ, ತ್ಯಮನ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ದೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲಾಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ರೋಗಗಳು ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಟ್ಟಿಗಳೂ, ಜಖಮ್ಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪೀನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳುರಿಯೋಣ, ಕೈ ಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಚರ್ಮ ವ್ಯಾಧಿಗಳು ನಷ್ಟವಾಗುತ್ತವೆ ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ [illegible] ವೆಂದರೆ ಇದೇ ಸಾರ್ಸಾಪರಿಲೆಯು ಕ್ರಯ ಬಾಟ್ಲಿ ೧ಕ್ಕೆ ರೂ ೧—೪—೦ ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕೆಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ, ಗಿರಗಾಂವ ನಂ. ೪ ಮುಂಬಯಿ

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷದಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ ಪ್ರತಿ ವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ

ಮಹಾಭಾಗ ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನ್ನು ಕಾದು ಮೊರೆಯಿಡುವುದು ನಿಜವಾಗಿಯೂ ತಪ್ಪುವುದು

ಶೀತ, ಶೀತವಾಯು ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಟೀನ ಬಲಹೀನತೆ ಕೆಟ್ಟಹವಾ ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧೌಷಧಿ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ ಮಾತ್ರ

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ ೨—0—0

ಯೋಗ್ಯತಾ ಪತ್ರಗಳು

... ಪ್ರಭಾಕರ್ ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎಸ್. ವೈ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಐ ಎನ್ ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್ ಕನ್‌ಸಲ್ಟಿಂಗ್ ಕೆಮಿಸ್ಟ್, ಎಗಿಯರಿವೇಸ್ ನಂ. 2 ಜೊಂಪ್ಪೆ ಇವರು ಬರೆದಿರುವುದು ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವದರಲ್ಲಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ ಮಲಬದ್ಧತೆ ಪಕ್ಕೆಯ ನೋವು, ಹೊಟ್ಟೇನೋವು, ದಿವಸೆಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ, ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ

ಮ। ರಾ। ಪಿ. ಎಸ್ ಅಚ್ಯುತರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್ ಇವರು ಬರೆದಿರುವುದು ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧ ಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ ವೈದ್ಯಶಾಲೆಯಲ್ಲಿ ಅನೇಕ ತರದ ಉಪಯುಕ್ತವಾದ ಕರ್ಣಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರು ಮಾಡುತ್ತಿರುತ್ತಾರೆ

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಅಶಕ್ತರಾದ ಸ್ತ್ರೀಯರಿರಾ!!!

ಗರ್ಭಾವಸ್ಥೆಯಲ್ಲಿಯು, ಅನಂತರ ತೋರಿಬರುವ ಸರ್ವ ಬಗೆಯ ವಿಕಾರಗಳಿಗೆ ನಿಮಗೆ ಒಂದು ಉಪಾಯವು ಅಗತ್ಯವಿರುವುದು ಆ ಉಪಾಯವಾದರೋ

"ಗುಡೆರಿನ್"

ಎಂಬ ಹೆಸರಿನ ಈ ಔಷಧವನ್ನು ಸೇವಿಸುವುದೇ! ಸೂರ್ಯನಕಿರಣಗಳು ಇಬ್ಬನಿಯ ಮೇಲೆ ಎರಗುತ್ತಲೇ ಇಬ್ಬನಿಯೆಲ್ಲವೂ ಹೇಗೆ ಆರಿಹೋಗುವುದೋ, ಅದೇ ಮರ್ಯಾದೆಯಲ್ಲಿ ಅಶಕ್ತರಾದ ಸ್ತ್ರೀಯರು ಈ "ಗುಡೆರಿನ್" ಎಂಬ ಔಷಧವನ್ನು ಸೇವಿಸುತ್ತಲೇ, ಅವರ ಶಾರೀರಕ ದುಃಖಗಳೆಲ್ಲವೂ ಕ್ಷಣಮಾತ್ರದಲ್ಲಿಯೇ ಹುಟ್ಟಡಗಿ ಹೋಗುವವು. ಅನಿಯಮಿತವಾದ ಋತುಸ್ರಾವ, ಅಶಕ್ತತೆ, ಮುಂತಾದ ರೋಗಗಳಿಗೆ ಇದು ರಾಮಬಾಣವೇ ಸರಿ.

ಹದಿನಾರು ಸಾವಿರ (16,000)

[illegible] ಡಾಕ್ಟರರು ಬಹಳ ಸೂಕ್ಷ್ಮತೆಯಿಂದ ಈ "ಗುಡೆರಿನನ್ನು" ಶೋಧಿಸಿ, ಮೇಲೆ ಹೇಳಿದ ರೋಗಗಳಿಗೆ ಇದೇ ಸಿದ್ಧೌಷಧವೆಂದು ನಿರ್ಧಾರಗೈದಿರುವದರಿಂದ, ಈ ಔಷಧವು ಅಸಂಖ್ಯವಾದ ಔಷಧಾಲಯಗಳಲ್ಲಿ ಉಪಯೋಗಿಸಲ್ಪಡುತ್ತದೆ ಇದು "ಹಿಸ್ಟೀರಿಯಾ" ಮೊದಲಾದ ಸ್ತ್ರೀಯರ ಋತು [illegible] ಸರ್ವರೋಗಗಳಿಗೂ ಮಹೋಪಕಾರಿಯು. ಪ್ರಕೃತ ಪ್ರಸೂತವಾದೊಡನೆ [illegible] ಉಪಯೋಗಿಸುವ ಬದಲಿಗೆ, ಇದನ್ನು ಉಪಯೋಗಿಸಿ ನೋಡಿದ್ದಲ್ಲಿ ಇದರ ಗುಣ [illegible] ಯುತು. ಸೀಸೆ ೧ರ ಕ್ರಯ ರೂಪಾಯಿ 3—4—0. ಟಿ. ಖ. ಸೀಸೆ [illegible]

ಪಿ. ಆಲನ್ ಮೋರ್ ... ಮಂಗಳೂರು.

ಮೈಸೂರು ಊದಬತ್ತಿಗಳು

ಇಂಡಿಯಾ ದೇಶದಲ್ಲಿ ನಡೆದಿರುವ ಎಗ್ಸಿಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರಸಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ

ಊದಬತ್ತಿಗಳು 24 ರೂ. ತೂಕದ ಶೇರು 1ಕ್ಕೆ ರೂ, 12-0-0, 5-0-0, 3-0-0. 2—8—0, 1—4—0, 1—0—0.

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0 0, 1—0—0 0—12—0, 0—6—0

ಸುಗಂಧಿ ಕಾಡುರ್ 1ಕ್ಕೆ 0—1—0 **ಬಾಲಗ್ರಹ** ಧೂಪ ಟಿನ್ 1ಕ್ಕೆ 0—8—0 **ಸುವಾಸನೇ ಸುಣ್ಣ** ಸೀಸೆ 1ಕ್ಕೆ 0—2 0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯಸೆನ್ಸ್‌ಗಳು, ಸುಗಂದ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತವೆ ಮತು ವರ್ಷಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರಿ, ಮೈಸೂರ

ಬಹು ಮನೋಹರ! ಅದ್ಭುತ!

ವಸಂತ ಕೋಕಿಲೆ

ಎಂಬ

ನೂತನವಾದ ಹೊಸ ಕಾದಂಬರೀ ಕಥೆ.

ರಸಿಕ ಶಿರೋಮಣಿಗಳೇ,

"ವಸಂತ ಕೋಕಿಲೆ" ಎಂಬ ಇಂದ್ರಜಾಲ ಮಹೇಂದ್ರಜಾಲಗಳನ್ನು ಸ್ಪಷ್ಟವಾಗಿ ತೋರಿಸುವ ಅತ್ಯದ್ಭುತ ಚಮತ್ಕಾರವಾದ ಹೊಸ ಕಾದಂಬರೀ ಕಥೆಯು ಅಚ್ಚಾಗಿ ಈಗ ತಾನೇ ಬಿಕರಿಗೆ ಸಿದ್ಧವಾಗಿದೆ ಈ ಗ್ರಂಥದಲ್ಲಿ ಶೃಂಗಾರಾದಿ ನವರಸಗಳು ತುಂಬಿ ತುಳುಕುತ್ತಿವೆ ಈವರೆಗೆ ಪ್ರಚುರವಾಗಿರುವ ಎಲ್ಲಾ ಕಥೆಗಳಿಗಿಂತಲೂ ಮಿೂರಿದಷ್ಟು ರಸ್ಯವುಳ್ಳದ್ದಾಗಿದೆ ವರ್ಣನಾಭಾಗಗಳು ಎಲ್ಲರಿಗೂ ತಿಳಿಯುವ ಹಾಗೆಯೂ ಸ್ವಾಭಾವವಾಗಿಯೂ ಇವೆ ಭಾಷಾಶೈಲಿಯು ಅತ್ಯುತ್ತಮವಾಗಿದೆ. ಓದುವದಕ್ಕಾರಂಭಿಸಿದ ವಾಚಕರ ಮನಸ್ಸನ್ನು ಸಂಪೂರ್ಣವಾಗಿ ಆಕರ್ಷಿಸಿ ಮುಗಿಯುವವರಿಗೂ ಆವೇಶವನ್ನುಂಟುಮಾಡಿ ಉಲ್ಲಾಸಗೊಳಿಸುವ ಹಾಗಿದೆ ತಮ್ಮ ಜ್ಞಾನ, ಭಕ್ತಿ, ವೈರಾಗ್ಯ ಮೊದಲಾದ ವೇದಾಂತ ವಿಷಯಗಳನ್ನೂ ಚೆನ್ನಾಗಿ ತಿಳಿಸುತ್ತದೆ ಕಥಾ ಸಂವಿಧಾನವು ಹೊಸ ಮಾದರಿಯಾಗಿ ಆಶ್ಚರ್ಯಕರವಾಗಿದೆ. ಪ್ರಕಟವಾಗಿ ಶೃಂಗಾರ ರಸವನ್ನು ವರ್ಣಿಸದೆ ಇರುವುದರಿಂದ ಎಲ್ಲಾ ಸ್ತ್ರೀಜನರಿಗೆ ಓದುವುದಕ್ಕೆ ಅರ್ಹವಾಗಿದೆ. ಇದರಲ್ಲಿ ೯ ಪ್ರಕರಣಗಳೂ ೨೦೬ ಪುಟಗಳೂ ಇವೆ ಉತ್ತಮವಾದ ಕಾಗದ, ಸುಂದರವಾದ ಅಕ್ಷರ, ತಪ್ಪಿಲ್ಲದೆ ಸುಂದರವಾಗಿ ಮುದ್ರಿಸಿದೆ. ಬೇಕಾದವರೆಲ್ಲರೂ ಕೆಳಗಣ ವಿಳಾಸಕ್ಕೆ ಬರದು ತರಿಸಿಕೊಳ್ಳಬಹುದು. ಕ್ರಯ ರೂ. ೧—೦—೦ ಮಾತ್ರ.

ವಿಳಾಸ:— ಟಿ. ಎ. ಮಾಣಿಕ್ಯಂ ಶೆಟ್ಟಿ, ಮಾಣಿಕ್ಯಮಂದಿರ ಬುಕ್ ಡಿಪೋ, ...

ಪ್ರೊಫೆಸರ್ ಜೇಮ್ಸ್‌ರವರ ಎಲೆಕ್ಟ್ರೊ ಟಾನಿಕ್ ಪರ್ಲ್ಸ್ ಎಂಬುವ

ವಿದ್ಯುತ್‌ಶಕ್ತಿಯ ವಾಜೀಕರಣ ಮಾತ್ರೆಗಳು

ಇದು ಮುಖ್ಯವಾಗಿ, ಹೆಚ್ಚಾಗಿ ವ್ಯಾಯಾಮವನ್ನು ತೆಗೆದುಕೊಳ್ಳಲಾರದ ಮನುಷ್ಯರಿಗೂ, ಮೆದುಳಿನಲ್ಲಿಯೇ ಕೆಲಸ ಮಾಡುವಂತಹ ವಿದ್ಯಾವಂತರಿಗೂ, ಬೋಧಕರಿಗೂ, ಗುಮಾಸ್ತೆಯರಿಗೂ, ವಿದ್ಯಾರ್ಥಿಗಳಿಗೂ ಮತ್ತು ವ್ಯಾಪಾರಿಗಳಿಗೂ ಅತ್ಯುತ್ತಮವಾದ ಮುತ್ತಿನೋಪಾದಿಯ ಔಷಧ.

ಈ ಮಾತ್ರೆಗಳು ಕೆಳಗಿನ ವ್ಯಾಧಿಗಳನ್ನು ನಿರ್ಮೂಲ ಮಾಡುತ್ತದೆಂಬುದು ಎಲ್ಲವರ ಅನುಭವಸಿದ್ಧಾಂತವು. ಕ್ಷಯರೋಗ, ಎಳವು (ಹಿಸ್ಟೇರಿಯಾ) ವೀರ್ಯದೌರ್ಬಲ್ಯವು, ಮಂದಾಗ್ನಿ, ಕೆಟ್ಟರಕ್ತ, ತಲೆತಿರುಗುವಿಕೆ, ಶಕ್ತಿಹೀನತೆ, ಧಾತುಕ್ಷೀಣತೆ, ಧಾತು ಸಂಬಂಧವಾದ ವಿಕಾರಗಳು, ಸ್ತ್ರೀಗರ್ಭ ವಿಕಾರಗಳು, ಅಕಾಲದ ಮುಟ್ಟು, ಸೊಂಟದಲ್ಲಿಯ ನೋವು, ಮುಖದಲ್ಲಿಯ ಬಿಳುಪು, ಮಂದವಾದ ದೃಷ್ಟಿ, ಕೀಲುಗಳ ನೋವು, ಈ ಮೇಲೆ ಹೇಳಿರುವ ಎಲ್ಲಾ ವ್ಯಾಧಿಗಳಲ್ಲಿ ನಿಮಗೆ ಯಾವುದಾದದರೂ ಉಂಟಾದರೆ, ಆ ವ್ಯಾಧಿಯು ಆರಂಭಿಸುತ್ತಲೇ, ಬೇರೆ ಚಿಕಿತ್ಸೆಗಳನ್ನು ಮಾಡಿ, ಉಪಯೋಗವಿಲ್ಲದ ಕಷ್ಟಗಳನ್ನು ತಂದುಕೊಳ್ಳದೆ, ತಕ್ಷಣವೇ ಮೇಲೆ ಹೇಳಿರುವ ಪ್ರೊಫೆಸರ್ ಜೇಮ್ಸ್‌ರವರ ವಿದ್ಯುತ್‌ಶಕ್ತಿಯ ವಾಜೀಕರಣ ಮಾತ್ರೆಗಳನ್ನು ತರಿಸಿ ಉಪಯೋಗಿಸಿಕೊಳ್ಳಿರಿ ಈ ಮಾತ್ರೆಗಳನ್ನು ಉಪಯೋಗಿಸುವುದರಿಂದ ಮೇಲೆ ಹೇಳಿರುವ ವ್ಯಾಧಿಗಳೆಲ್ಲವೂ ನಿರ್ಮೂಲವಾಗಿ ವಾಸಿಯಾಗುವುದು ಅಲ್ಲದೆ, ನಿಮ್ಮ ಶರೀರಗಳನ್ನು ದೃಢವಾಗಿಯೂ, ಅಂದವಾಗಿಯೂ, ಕಷ್ಟಪಟ್ಟು ಕೆಲಸಗಳನ್ನು ಮಾಡಲು ಸರಿಸ್ಯೆದೂ ಈ ಮಾತ್ರೆಗಳು ನಿಮಗೆ ಮನೋಲ್ಲಾಸವನ್ನು ಕೊಡುತ್ತವೆ ನೀವು ಈ ಮಾತ್ರೆಗಳನ್ನು ಇದುವರೆಗೂ ಉಪಯೋಗಿಸದಿದ್ದರೆ, ಈಗಲಾದರೂ ಒಂದು ಬುಡ್ಡಿ ತರಿಸಿಕೊಂಡು ಉಪಯೋಗಿಸಿ ನೋಡಿದರೆ, ನಿಮಗೆನೇ ನಂಬಿಕೆಯುಂಟಾಗುವುದು

25 ಮಾತ್ರೆಗಳುಳ್ಳ ಸೀಸೆ 1ಕ್ಕೆ ರೂ. 1—4—0 40 ಮಾತ್ರೆಗಳುಳ್ಳ ಸೀಸೆ 1ಕ್ಕೆ ರೂ. 2—0—0 ಟಪ್ಪಾಲು ಖರ್ಚು ಅಲಾಯಿದ.

ಅಂದವಾಗಿ ಧಳಧಳಿಸುವ ಕೂದಲನ್ನು ಕೊಡುವ

ಕಾಮಿನಿಯಾ ಆಯಿಲ್ (ರಿಜಿಸ್ಟರ್ಡ್).

ಈ ಎಣ್ಣೆಯು ಸುಪ್ರಸಿದ್ಧವಾದ ವನಸ್ಪತಿಗಳ ಮತ್ತು ಸುಗಂಧ ದ್ರವ್ಯಗಳ ಮಿಶ್ರಣದಿಂದ ತಯಾರು ಮಾಡಲ್ಪಟ್ಟಿರುವುದು ಈ ಎಣ್ಣೆಯನ್ನು ಪ್ರತಿ ದಿನವೂ ಉಪಯೋಗಿಸುವುದರಿಂದ ಇದು ಮೆದುಳನ್ನು ತಣ್ಣಗೆ ಗೈದು ಜ್ಞಾಪಕಶಕ್ತಿಯನ್ನು ಅಭಿವೃದ್ಧಿ ಮಾಡುತ್ತದೆ ಇದರ ಘನತೆಯಿಂದ ಅನೇಕ ದೊಡ್ಡ ಮನುಷ್ಯರೂ, ಹಂಗಸರೂ, ಯೌವನಸ್ಥರೂ ಯಾವಾಗಲೂ ಉಪಯೋಗಿಸುತ್ತಲಿರುತ್ತಾರೆ ಕಾಮಿನಿಯಾ ಎಣ್ಣೆಯನ್ನು ಉಪಯೋಗಿಸುವುದರಿಂದ ತಲೆಕೂದಲು ನುಣುಪಾಗಿಯೂ ಬಲವುಳ್ಳದ್ದಾಗಿಯೂ, ನೋಡಲು ರೇಶ್ಮೆಯಂತೆ ಹೊಳಪುಳ್ಳದ್ದಾಗಿಯೂ ಆಗುವುದರಿಂದ ಈಗ ಅಂಗಡಿಗಳಲ್ಲಿ ದೊರಕುವ ಅನೇಕ ಕೀಳು ತರದ ಎಣ್ಣೆಗಳನ್ನು ಕಮ್ಮಿ ಬೆಲೆಗೆ ತೆಗೆದುಕೊಂಡು ಅನ್ಯಾಯವಾಗಿ ತಲೆಯ ಕೂದಲನ್ನು ಹಾಳುಮಾಡಿಕೊಳ್ಳಬೇಡಿರಿ

ಕ್ರಯ ಸೀಸೆ 1ಕ್ಕೆ ರೂ 1—0—0.

,, ,, 3ಕ್ಕೆ ,, 2—10—0

ವಿ ಪಿ ಚಾರ್ಜು ಅಲಾಯಿದ

N B —ಕಾಮಿನಿಯಾ ಎಣ್ಣೆಯನ್ನು ತೆಗೆದುಕೊಳ್ಳುವಾಗ ಕಾಮಿನಿಯಾ (ರಿಜಿಸ್ಟರ್ಡ್) ಎನುವದನ್ನೇ ತೆಗೆದುಕೊಳ್ಳಿರಿ

ವಸಂತ, ಗ್ರೀಷ್ಮ, ವರ್ಷ, ಶರತ ಈ ನಾಲ್ಕು ಋತುಗಳಲ್ಲಿ ಯಾವಾಗಲೂ ನಿಮ್ಮ ಅಂತಃಕರಣಕ್ಕೆ ಆನಂದವನ್ನು ಕೊಟ್ಟು ಸುಪ್ರಸಿದ್ಧವಾದ ಸುವಾಸನೆಯಿಂದೊಡಗೂಡಿದ ಅನೇಕ ಪುಷ್ಪಗಳಿರುವ ತೋಟದಿಂದ ಈಗಲೇ ಹೊಸದಾಗಿ ತಂದ ಪುಷ್ಪಗಳ ಆನಂದವನ್ನು ಕೊಡುವ

ಆಟೋ ದಿಲ್ಬಹಾರ್.

ಇದು ಲೋಕದಲ್ಲಿ ಅದ್ವಿತೀಯವಾದ ಸುಗಂಧಗಳಲ್ಲಿ ಮೇಲಾದ ಸ್ಥಾನವನ್ನು ಹೊಂದಿರುತ್ತದೆ ಎಂದು ಎಲ್ಲರೂ ಉಪಯೋಗಿಸಿ ನೋಡಿ ಶ್ಲಾಘನೆ ಮಾಡಿರುತ್ತಾರೆ ಇದನ್ನು ಉಡುಪುಗಳ ಮೇಲೆ ಚಿಮುಕಿಸಿಕೊಂಡರೆ ಯಾವ ವಿಧವಾದ ಚುಕ್ಕೆಯು ಕಾಣದೆ, ಸದಾ ಇರತಕ್ಕ ಪರಿಮಳ ಸುಗಂಧವನ್ನು ಕೊಡುತ್ತದೆ ಒಂದು ಸಾರಿ ಉಪಯೋಗಿಸುವುದರಿಂದ ಇದರಲ್ಲಿ ನಂಬಿಕೆ ಹುಟ್ಟುತ್ತದೆ. ಇದನ್ನು ಕೊಂಡುಕೊಳ್ಳುವಾಗ ರಿಜಿಸ್ಟರಾಗಿರುವ "ಆಟೋ ದಿಲ್ಬಹಾರ್" ಡಬ್ಬಿಯನ್ನು ಪೇಕಿಂಗ್ ಒಡೆಯದಿರುವುದನ್ನೇ ನೋಡಿ ತೆಗೆದುಕೊಳ್ಳಿರಿ

ಕ್ರಯ ಸಣ್ಣ ಸೀಸೆ 1ಕ್ಕೆ 0—8—0.

,, ಮಿಡಿಯಂ ,, ,, 0—12—0.

,, ½ ಔನ್ಸಿನ ,, ,, 2—0—0.

ಆಟೋ ದಿಲ್ಬಹಾರ್ ಕಾರ್ಡು 1ರ ಬೆಲೆ 0—1—0.

ಪೋಸ್ಟೇಜು ಅಲಾಯಿದ.

ಯಾವಾಗಲೂ ಕುಟುಂಬದಲ್ಲಿ ಅವಶ್ಯವಾಗಿರತಕ್ಕ ಔಷಧವು.

ಆಡ್‌ಮನ್ಸ್ ಸ್ಪೈಪ್ರಸ್ ಸಾಲ್ವ್.

ವಾಯುವಿನಿಂದ ಶರೀರದ ಯಾವ ಭಾಗಕ್ಕೆ ಉಂಟಾಗುವ ನೋವು, ನಾವು ಶ್ವಾಸ ಬಿಡುವಾಗಲೂ ಮತ್ತು ತೆಗೆದುಕೊಳ್ಳುವಾಗಲೂ ಉಂಟಾಗುವ ಎದೆನೋವು ವಾಯುವಿನಿಂದ ಕೀಲುಗಳಲ್ಲಿ ಉಂಟಾಗುವ ನಡುವಿನ ನೋವು, ತಲೆಶೂಲೆ ಮತ್ತು ಕೈಕಾಲು ನೋವು, ಇವುಗಳೆಲ್ಲವೂ ಈ ಮುಲಾಮನ್ನು ಹಚ್ಚುವುದರಿಂದ ಶುದ್ಧಾಂಗವಾಗಿ ನಿವೃತ್ತಿಯಾಗುತ್ತದೆ ಒಂದು ಸಲ ಉಪಯೋಗಿಸಿ ನೋಡಿರಿ. ಇತರ ಮುಲಾಮುಗಳನ್ನು ಉಪಯೋಗಿಸದೆ ಇದನ್ನೆ ಉಪಯೋಗಿಸುವುದರಿಂದ ನಿಮಗೆ ಹೆಚ್ಚಾದ ಲಾಭ ಉಂಟು. ಕ್ರಯ ಬಾಟ್ಲಿ ಒಂದರ ರೂ 1—0—0 ಟಪ್ಪಾಲು ಖರ್ಚು 4 ಆಣೆ

ಆಡ್‌ಮನ್ಸ್ ಮಲೇರಿಯಸ್ ಪಿಲ್ಸ್.

ಶೀತಜ್ವರ, ಚಳಿಜ್ವರ, ಮೊರೆಜ್ವರ ಮತ್ತು ಸಾಧಾರಣ ಜ್ವರ ... ಆಡ್‌ಮನ್ಸ್ ಮಲೇರಿಯಸ್ ಮಾತ್ರೆಗಳು ಬಹು ಆಶ್ಚರ್ಯಕರವಾದ ಗುಣವನ್ನು ಕೊಡುತ್ತವೆ. 30 ಮಾತ್ರೆಗಳ ಡಬ್ಬಿ 1ರ ಬೆಲೆ ರೂ 1—0—0. ಟ. ಖ. ಅಲಾಯಿದ.

THE ANGLO INDIAN DRUG & CHEMICAL COMPANY, 16 MARKET BOMBAY 2.

ಪ್ರಧಾನ ಏಜಂಟರು: **ದಿ ಊಲನ್ ವಾರ್ಟ್, ಮಂಗಳೂರು ದ. ಕನ್ನಡ**

Printed & published by V. S. Kamath at the Mangalore Trading Association's Sharada Press, Mangalore.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ —ವರ್ಷ ಒಕ್ಕೆ ರೂ 1—4—0. ಟಪ್ಪಾಲು ಹಾಸಲು ಸೇರಿ ರೂ. 2— 1— 0.

ಪುಸ್ತಕ IX | ಮಂಗಳೂರು ತಾ. 17 ನೇ ಸಪ್ಟಂಬರ ಶುಕ್ರವಾರ 1915. | ಸಂಚಿಕೆ 38

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು

ಸೆಶಿಂತಾನ್.

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿಂತಾನದ ಸೇವನೆಯಿಂದುಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

1 ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನು ಶೀಘ್ರದಲ್ಲಿ ಪರಿಹರಿಸುವುದು

2 ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತು ಮೆದುಳಿನ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು

3 ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತ ಒಂದಲ್ಲಿ ತಿಂದನ್ನವು ಜೀರ್ಣವಾಗುವದಲ್ಲದೆ, ಕಾಲಪ್ರವೃತ್ತಿಯು ಕ್ರಮವಾಗಿ ಆಗುತ್ತದೆ ಯಾವರೋಗಕ್ಕೂ ಅಸ್ಪದವುಂಟಾಗುವುದಿಲ್ಲವು.

4. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು

5. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ ಎಲ್ಲ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವವು.

6. ಬೇಸಿಗೆ ಮತ್ತು ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು

7. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಅದುಕಾರಣ ಇಂತಹ ಗುಣಕಾರಿಯಾದ ಸೆಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

45 ಮಾತ್ರೆಗಳ ಪೊಟ್ಟ 1 ಕ್ಕೆ	0—2—0	200 ಮಾತ್ರೆಗಳ ಪೊಟ್ಟ 1 ಕ್ಕೆ	0—7—0	80 ಮಾತ್ರೆಗಳ ಟಿನ್ 1 ಕ್ಕೆ	0—4—0	550 ಮಾತ್ರೆಗಳ ಮರದಪೆಟ್ಟಿಗೆ 1 ಕ್ಕೆ	1—0—0
95 ,, ,, ,,	0—4—0	200 ,, ಟಿನ್ ,,	0—9—0	100 ,, ಶೀಸೆ ,,	0—4—6	1200 ,, ,, ,,	2—0—0

1 ರೂಪಾಯಿಗೆ ಕಡಿಮೆಯಾಗಿ ವಿ. ಪಿ ಮೂಲಕ ಕಳುಹಿಸಲ್ಪಡುವುದಿಲ್ಲವು ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

☞ ಭರತಖಂಡ, ಬರ್ಮ, ಮತ್ತು ಸಿಲೋನ್ ಈ ಪ್ರಾಂತ್ಯಗಳ ಎಲ್ಲಾ ಭಾಗದಲ್ಲೂ ಏಜಂಟರು ಬೇಕಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಏಜಂಟರು — ದಿ. ಊಲನ್ ಮಾರ್ಟ್, ಮಂಗಳೂರು

ಸೋಲ್ ಏಜಂಟ್ಸ್—ಸೆಶಿಂತಾನ್ ಡಿಪ್ಪೋ,
ಪ್ರಿನ್ಸೆಸ್ ಸ್ಟ್ರೀಟ್ ಬೊಂಬಾಯಿ ನಂ. 2

TOM VICTOR & CO'S
BUSINESS
Shorthand and Typewriting Institution.

Instruction given in Commercial Subjects, French, Shorthand and Typewriting from Oct. 10th to Jan. 10th; Jan. 15th to April 15; June 15th to Sept. 15th.

N. B. JOB WORK and Typewriter Repairs undertaken at very cheap rates.

[illegible] Mangalore

ವಿನಾಮೂಲ್ಯ! ವಿನಾಮೂಲ್ಯ!! ವಿನಾಮೂಲ್ಯ!!!

ಆರ್ಯಚಿಕಿತ್ಸಾರಹಸ್ಯ

ಆರ್ಯವೈದ್ಯದ ರಹಸ್ಯವೇನೆಂಬದನ್ನು ತಿಳಕೊಳ್ಳಲಿಕ್ಕೆ ಇಚ್ಛೆಯುಳ್ಳವರಿಗೆ ಆರ್ಯಚಿಕಿತ್ಸಾರಹಸ್ಯವು ಪರಮ ಸಾಧನವಾಗಿದೆ. ನಮ್ಮ ದೇಶೀಯ ವೈದ್ಯವಿದ್ಯೆಯಲ್ಲಿ ಪೂರ್ಣ ಗೌರವ ಮತ್ತು ಅಭಿಮಾನವನ್ನು ಇಟ್ಟು ಆರ್ಯಚಿಕಿತ್ಸೆಯನ್ನು ನಮ್ಮ ಜನರೊಳಗೆ ರೂಢಿಗೆ ಹ್ಯಾಗೆ ತರಬೇಕೆಂಬುವದು ಈ ಪುಸ್ತಕವನ್ನು ಮನಸ್ಸಿಟ್ಟು ಓದಿದರೆ ಸಹ ವ್ಯಕ್ತವಾಗುವದು. ಕನ್ನಡನುಡಿಯ ಒಡನಾಟವಿರುವವರಿಗೆ ಎಲ್ಲರಿಗೂ ತಿಳಿಯುವಂತೆ ಈ ಗ್ರಂಥವು ಕನ್ನಡದಲ್ಲಿ ಬರಿಯಲ್ಪಟ್ಟಿದೆ. ವಾಚಕ ಮಹಾಶಯರೇ! ದೇಶಾಭಿಮಾನದಿಂದ ತಮ್ಮ ಆಯುಃಪ್ರಮಾಣದಲ್ಲಿ ಕಾಲುಘಂಟೆ ಸಮಯವನ್ನು ಈ ಪುಸ್ತಕಕ್ಕೋಸ್ಕರ ಕಳೆಯಿರಿ. ಈ ಪುಸ್ತಕ ಬೇಕೆಂದಿರುವವರು ತಮ್ಮ ಎಡ್ರೆಸನ್ನೂ, ಅರ್ಧಾಣೆ ಸ್ಟಾಂಪನ್ನೂ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿಕೊಟ್ಟರೆ ಪುಸ್ತಕವು ದೊರಿಯುವದು.

ಎಂ. ವಿ ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು.

ರಮಾಮಾಧವ.

ಮದ್ರಾಸು ಗವರ್ನಮೆಂಟ್ ಕನ್ನಡ ಟ್ರಾನ್ಸಲೇಟರ್
ಮ. ರಾ. ಬಿ. ರಾಮರಾವ್ ಎಂ.ಎ.ಎಲ್.ಎಲ್.ಬಿ.
ಇವರಿಂದ

ಈ ಕಾದಂಬರಿಯ ಕಥಾನಕವು ಬಹು ಹೃದಯಂಗಮವಾದದ್ದಾಗಿಯೂ, ಸ್ತ್ರೀಪುರುಷರೂ ಬಾಲ್ಯ ವಯಸ್ಸಿನವರೂ ಓದುವದಕ್ಕೆ ತಕ್ಕುದಾಗಿಯೂ ಇದ್ದು, ಸಂಸಾರಿಕರು ಸುಖಿಗಳಾಗಿ ಬಾಳುವ ಮಾರ್ಗವನು ಅತ್ಯುತ್ತಮವಾಗಿ ತಿಳಿಸುತ್ತಲಿದೆ.

ಬೆಲೆ ಪ್ರತಿಯೊಂದಕ್ಕೆ 6 ಆಣೆ. ಅಂಚೆಯ ಹಾಸಲು ಬೇರೆ.

ವಿಳಾಸ— ಮ್ಯಾನೇಜರ್, [illegible] ಮಂಗಳೂರು, [illegible]

ನೇಟಿವ್ ಡಾಕ್ಟರ್ಸ್ ಮೊಳ್ಕಿ ಗಣಪಯ್ಯ ಎಂಡ್ ಸನ್ಸ್ ರವರ

ಔಷಧಗಳು.

ಮಹಾಮದನ ಕಾಮೇಶ್ವರೀ ಲೇಹ್ಯ:—ಬಹಳ ಶ್ರಮಪಟ್ಟು ಕೆಲಸ ಮಾಡುವವರೂ, ಲೇಖಕರೂ, ಮತ್ತು ಇಂದ್ರಿಯ ದೌರ್ಬಲ್ಯ, ಅಜೀರ್ಣ, ಎದೆನೋವು, ಶರೀರಗಳ ಘಳಿತದಿಂದಾದ ನಿಶ್ಶಕ್ತಿ ಮೊದಲಾದ ಪ್ರಕೃತಿಯುಳ್ಳವರೂ ಇದನ್ನು ಸೇವಿಸಿದ್ದಲ್ಲಿ ಧಾತುಪುಷ್ಟಿಯಾಗಿ ಮುಖವು ಕಾಂತಿಗೊಳಿಸುವದು. ಸೇವನಾ ಕ್ರಮ— ಅಭ್ಯಾಸವುಳ್ಳವರು 1 ಪಾವಲಿ ತೂಕ ಯಾ ಗೋಲಗಾತ್ರ ಅಭ್ಯಾಸಿಸುವವರು 2 ಆಣೆ ತೂಕ ರಾತ್ರೆ ಊಟದ ಮೇಲೆ ಸೇವಿಸಿ ಹಾಲು ಕುಡಿಯತಕ್ಕದ್ದು

1 ಶೇರಿನ ಡಬ್ಬಿಗೆ ಕ್ರಯ 2—0—0

ಚಂದ್ರೋದಯಾವರ್ತಿ:—ಕಣ್ಣಿಗೆ ಅಂಜನ ಮಾಡಿದ್ದಲ್ಲಿ ಬೆಳೆದ ದುರ್ಮಾಂಸ, ತಿಮಿರ, 3 ವರ್ಷದ ಹೂವು, ಇರಳುಗಣ್ಣು ತಾಚದಿಂದು ಗುಣ.

ಕ್ರಯ ರೂ 0—12—0

ಮಹಾಜ್ವರಾಂಕುಶ:—ದಿವಸಕ್ಕೊಮ್ಮೆ ದ್ವಿತೀಯ, ತೃತೀಯ, ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ. ಡಜನ್ ಕ್ರಯ 0—8—0,

ಮೇಹಮುದ್ಗರವಟಿ:—20 ನಮೂನೆಯ ಪ್ರಮೇಹ, ಧಾತು ಗತಜ್ವರ ಮೂತ್ರಕೃಛ್ರ, ಅಶ್ಮರಿ, ಕಾಮಲೆ, ಪಾಂಡು ಗುಣ ಡಜನ್ 16 ಕ್ರಯ 1—2—0

ಕೊಲೆರಾ ಯಾನೆ ವಾಂತಿಭೇದಿ ಗುಳಿಗೆ:—ಒಂದೆರಡು ಗುಳಿಗೆಯಿಂದ ವಾಂತಿಭೇದಿ ಕೂಡಲೇ ಗುಣ. ಡಜನ್ ಗುಳಿಗೆಯ ಕ್ರಯ 0—12—0.

ಚಂದನಾಸವ:—ಮೇಹ, ಶುಕ್ಲಧಾತು ನಷ್ಟತ್ವ ಗುಣ ಬಾಟ್ಲಿಗೆ ರೂ. 1

ನಮ್ಮ ಔಷಧಾಲಯ ದಲ್ಲಿ ಅನೇಕ ವಿಧದ ಬೇರೆ ಔಷಧಗಳು ದೊರೆಯುತ್ತವೆ ಅಪೇಕ್ಷೆಯುಳ್ಳವರು ಕೆಟಲಾಗು ತರಿಸಿಕೊಳ್ಳಬಹುದು ಮೇಲಿನ ಔಷಧಗಳು ಬಹಳವಾಗಿ ಖರ್ಚಾಗುವದರಿಂದ ಕ್ರಯವನ್ನು ಕಮ್ಮಿ ಮಾಡಿರುತ್ತದೆ

ವಿಳಾಸ — ಮೊಳ್ಕಿ ಗಣಪಯ್ಯ ಎಂಡ್ ಸನ್ಸ್,
ನೇಟಿವ್ ಡಾಕ್ಟರ್ಸ್,
ತೇರಬೀದಿ ಮನೆ ನಂಬ್ರ 2೧8ನೇ, ಮಂಗಳೂರು

ಉತ್ತಮ ಹೊಸ ನಾವೆಲ್ (ಕಥೆ)ಗಳು.

ಆರಿಸಿ ಆರಿಸಿ ತೆಗೆದಿರುವ ಹೊಸ ಪುಸ್ತಕಗಳೇ.

		ರೂ ಆ ಪೈ			ರೂ ಆ ಪೈ
೧.	ಕಲಿಯುಗ	೦—೫—೦	೧೦	ಅದ್ಭುತ ರಾಮಾಯಣ	೦—೬—೦
೨.	ಸುಚದ್ರೆ	೦—೫—೦	೧೧	ಚಮತ್ಕಾರ ಚಿಂತಾಮಣಿ	೦-೧೦—೦
೩.	ಚಂದ್ರಕಳಾ	೦—೬—೦	೧೨	ನವೀನ ಭರತಖಂಡ	೦—೫—೦
೪.	ಶುಕಸಪ್ತತಿ	೧—೮—೦	೧೩	ವಚನ ಶಿವಪುರಾಣ	೨—೦—೦
೫.	ಕಲಾನಾಥ	೦—೪—೦	೧೪	ವಚನ ದೇವೀಭಾಗವತ	೨—೦—೦
೬.	ಸುಮತಿ	೦—೬—೦	೧೫	ಉತ್ತರ ರಾಮಾಯಣ ಕಥಾ	೦—೫—೦
೭	ಶಕ್ತಿ	೦-೧೨—೦	೧೬	ಸಿಂಹ ಚರಿತ್ರೆ	೦-೧೦—೦
೮	ಮಾಧವೀಕಂಕಣ	೧—೮—೦	೧೭	ಯಯಾತಿ ಚರಿತ್ರೆ	೦—೪—೦
೯.	ಬೆಕ್ಕೋಟಿ	೦—೪—೦	೧೮	ಕಾದಂಬರಿ ಕಥೆ	೦—೮—೦

ವಿದ್ಯಾನಂದ ಮಾಸಪತ್ರಿಕೆ ವಾರ್ಷಿಕ ಚಂದಾ ರೂ ೨—೪—೦

ಸಂಸ್ಕೃತ, ಕನ್ನಡ ಭಾಷೆಗಳಲ್ಲಿ ಕಾದಂಬರಿ ವೇದಾಂತ ಜ್ಯೋತಿಷ ವಗೈರೆ ಗ್ರಂಥಗಳು ಯಾವಾಗಲೂ ದೊರೆಯುವುವು

☞ ಸ್ಕೂಲ್ ಪುಸ್ತಕಗಳೂ ದೊರೆಯುತ್ತವೆ

(ಕ್ಯಾಟಲಾಗ್ ಮಾದರಿ ಪತ್ರಿಕೆ ಉಚಿತ.)

ಬಾಣವಾಡಿ ಆದಿನಾರಾಯಣಶಾಸ್ತ್ರೀ,
ವಿದ್ಯಾನಂದ ಆಫೀಸ್,
ಶಂಕರಪುರ, ಬೆಂಗಳೂರು ಸಿಟಿ.

ಹುಳಬಿದ್ದ ಹುಣ್ಣುಗಳು

ಪಡುಬಿದ್ರೆ ಕಾಡಿಪಟ್ಣ ಮೊಗೇರ ಶೀನ ಹೆಂಗಸು ಬರೆಯುವದು:—ನನಗೆ ಸುಮಾರು ಆರು ವರ್ಷಗಳಿಂದ ಎರಡು ಕಾಲುಗಳಲ್ಲಿ ಬೊಕ್ಕೆಗಳು ಹುಟ್ಟಿ ಅದರಲ್ಲಿ ಕೀವು ಸುರಿಯುತ್ತ ಕೆಲವು ಸಣ್ಣ ಛಿದ್ರಗಳುಂಟಾಗಿ ಆ ಛಿದ್ರದಲ್ಲಿ ಹುಳಗಳು ತುಳುಕುತ್ತಿತ್ತಲ್ಲದೆ ಸದರಿ ವ್ರಣಗಳು ಕರಗಿ ಅರ್ಧಾಣೆ ಗಾತ್ರವಾಗಿತ್ತು. ಇದರಿಂದ ನಡಿಯಲಾರದೆ ಕಾಲಿಗೆ ವಸ್ತ್ರ ಕಟ್ಟಿ ಮಲಗಿದ್ದಲ್ಲಿಯೇ ಇದ್ದೆನು. ದೈವವಶಾತ್ ತಮ್ಮ ಸಬ್ ಏಜಂಟರ ಭೇಟಿಯಾಗಿ ಪರೀಕ್ಷಾರ್ಥವಾಗಿ ಎರಡು ಸೀಸೆ ತಮ್ಮ ಯುಕಲಿಪ್ಟಸ್ ತೈಲವನ್ನು ಕೊಂಡುಕೊಂಡು ಹೊಟ್ಟೆಗೂ ತಕ್ಕೊಂಡು ಹುಣ್ಣಿಗೂ ಹಚ್ಚಿದೆ. ಎರಡು ಸೀಸೆ ಮುಗಿಯುವಷ್ಟರಲ್ಲಿ ನನ್ನ ಹುಣ್ಣುಗಳು ಒಣಗಿ ನಡಿಯಲು ಅನುಕೂಲವಾಗಿಯದೆ ಎಂಬದನ್ನು ತಿಳಿಸಲು ಸಂತೋಷಪಡುತ್ತೇನೆ.

ಒಂದೇ ಸಲ ಕೊಡುವದರಲ್ಲಿ ಗುಣ!

ರಾ ವೆಂಕಟಕೃಷ್ಣ ಆಚಾರಿ, ಶಂಕರನಾರಾಯಣ:—ನಿಮ್ಮಲ್ಲಿಂದ ತರಿಸಿದ ಯುಕಲಿಪ್ಟಸ್ ತೈಲವನ್ನು ಕೆಲವು ಕಾಲದಿಂದ ಕಠಿಣ ಹೊಟ್ಟೆನೋವಿನಿಂದ ನರಳುತ್ತಿದ್ದ ನನ್ನ ತಾಯಿಗೆ ಒಂದು ಸಲ ಕೊಡುವಷ್ಟರಲ್ಲಿ ಗುಣ ಉಂಟಾದಕಾರಣ ಮನಸಿಗೆ ಬಾರಿ ಖುಸಿಯಾಗಿದೆ ಅರ್ಧ ಡಜನ್ ಸೀಸೆ ವಿ ಪಿ. ಮಾಡಿ ಕಳುಹಿಸಿರಿ.

ಇದು ಸಂಜೀವಿನಿಯೇ ಸರಿ!!

ಮ॥ ರಾ॥ ತುಕ್ರಪ್ಪ, ಟಿ ಎಮ್ರಾಳಕಾರ್, ಮುಂಬೈ:—ಕೆಲವು ಸಮಯದಿಂದ ಕೆಮ್ಮು ಉಬ್ಬಸದಿಂದ ಪೀಡಾಡುತ್ತಿದ್ದ ಹುಡುಗಿಯೊಬ್ಬಳಿಗೂ ಹಲವು ಕಾಲದಿಂದ ಹೊಟ್ಟೆನೋವಿನಿಂದ ನರಳುತ್ತಿದ್ದ ಮುದುಕಿಯೊಬ್ಬಳಿಗೂ ನಿಮ್ಮಲ್ಲಿ ದೊರೆಯುತಕ್ಕ ಯುಕಲಿಪ್ಟಸ್ ತೈಲವನ್ನು ನನ್ನ ಸ್ನೇಹಿತರಾದ ವೈ. ಕೊರಗಪ್ಪನವರಿಂದ ಪಡಕೊಂಡು ಕೊಟ್ಟಲ್ಲಿ ಇಬ್ಬರೂ ಗುಣಹೊಂದಿರುತ್ತಾರೆ. ಕೆಮ್ಮು, ಉಬ್ಬಸ, ಹೊಟ್ಟೆನೋವು, ಸರ್ವ ತರದ ವಾಯುರೋಗಗಳಿಗೆ ಇದು ಸಂಜೀವಿನಿಯಂತೆ ಇದೆ. ಆದುದರಿಂದ 2 ಡಜನ್ ವಿ ಪಿ ಮಾಡಿ ಕಳುಹಿಸಿರಿ ಔನ್ಸ್ ಸೀಸೆ 1ಕ್ಕೆ 0—5—0. ಡಜನ್ ಸೀಸೆಗಳಿಗೆ ವಿ ಪಿ ಸಹಿತ ರೂ 3—12—0. ಅನುಪಾನ ಪತ್ರಿಕೆ ಸೀಸೆಯೊಂದಿಗೆ.

☞ ನಮ್ಮಲ್ಲಿ ಹೋಮಿಯೋಪತಿ ಮತ್ತು ಬಿಸ್ಕೂ ರೆಮಿಡೀಸ್ ಗಳೆಂಬ ಔಷಧಗಳು ದೊರೆಯುತ್ತವೆ.

ವಿಳಾಸ:— ಇಕ್ಲಿಪ್ಸ್ ಏಜನ್ಸಿ, ಮಂಗಳೂರು.

ಏಜಂಟರು:— ಸುಗಂಧವಿಲಾಸ, ರಥಬೀದಿ, ಮಂಗಳೂರು.

ಬನ್ನಿರಿ! ನೋಡಿರಿ!! ತಿಳಿಯಿರಿ!!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು

ಉತ್ಕೃಷ್ಟ ಮಿಶ್ಶನ್ ಚೇಳುಗಳೂ; ಬೇರೆ ಅನೇಕ ತರದ ಸ್ವದೇಶೀ ಚೇಳ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಶನ್ ಕೋಪಿನ ಕೊಡಗಳೂ, ರೇಶ್ಮೆ ವಸ್ತ್ರಗಳೂ; ಬೆಬ್ಬ ಎಂಬ ಗುರುಸು ಕಲ್ಲು ಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಸೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಸೀರೆಗಳೂ, ಚೇಳುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ, ಹಂಪನ್‌ಕಟ್ಟ, ಮಂಗಳೂರು.

ಅಮೃತಾಂಜನ.

ಜಗತ್ಪ್ರಸಿದ್ಧವಾದ ಬೇನೆಹಾರಿ ಮುಲಾಮು

ಇದರ ಉಪಯೋಗದಿಂದ —ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಉಳುಕು, ಎದೆ ನೋವು, ಸೊಂಟ ನೋವು, ಶೀತ, ಕೆಮ್ಮು, ದಂತಶೂಲೆ, ಮೂಲವ್ಯಾಧಿ, ಚೇಳು ಕಡಿತ ಆನೆಗಾಲು, ಸುಟ್ಟ ಗಾಯ ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷದವಾಗಿ ರುತ್ತದೆ ಸಾವಿರಾರು ಡಾಕ್ಟರರೂ, ಇದಕ್ಕ ಸರ್ಟಿಪಿಕೇಟುಗಳನ್ನು ಕೊಟ್ಟಿದ್ದಾರೆ. ಪ್ರತಿ ತಿಂಗಳಲ್ಲೂ 25,000 ಬಾಟ್ಲಿಗಳು ಮಾರಲ್ಪಡುತ್ತವೆ ಬಾಟ್ಲಿ ಒಂದರ ಕಿಮ್ಮತು ಆಣೆ 8 ಡಜನ್ 1ಕ್ಕೆ ರೂ 5—4—0 ವಿ ಪಿ ಖರ್ಚು ಪ್ರತ್ಯೇಕ

ಎಚ್ಚರಿಕೆ.—ಅಮೃತಾಂಜನವನ್ನು ಪಡಕೊಳ್ಳುವಾಗ ಸುಂದರವಾದ ಮತ್ತು ಹಲವು ಭಾಷೆಗಳುಳ್ಳ ಕರಡಿಗೆ ಸಮೇತ ಪಡಕೊಳ್ಳಿರಿ

ಗಜಕರ್ಣದ ಮುಲಾಮು.

ಮೂರು ಸರ್ತಿ ತಾಗಿಸುವದರೊಳಗೆ ಗಜಕರ್ಣ ನಾಶನಾಗಿ ಹೋಗುವದು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ ಇಮುವರೆಗೆ ಒಂದು ಮಿಲಿಯ ಡಬ್ಬಿಗಳು ಮಾರಲ್ಪಟ್ಟವು. ರಾಜಾರಾಣಿ ಟ್ರೇಡ್ ಮಾರ್ಕ 0—6—0. 12 ಡಬ್ಬಿಗಳಿಗೆ 3—8—0 ವಿ ಪಿ ಪ್ರತ್ಯೇಕ

ದಂತಮಂಜನ.

ರಾಜಾರಾಣಿ ಟ್ರೇಡ್ ಮಾರ್ಕ

"ಈ ಮಂಜನದಿಂದ ಹಲ್ಲುಗಳನ್ನು ದಿನಾಗಲೂ ತಿಕ್ಕುವದರಿಂದ ಹಲ್ಲುನೋವು, ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ವಾಸನೆ, ಮುಂತಾದವುಗಳೆಲ್ಲಾ ನಿಲ್ಲುತ್ತವೆ. ಇದರಲ್ಲಿ ಹಲವು ನಮೂನೆಯ ಔಷಧಗಳಿವೆ ಬರೀ ಚೋಕಿನ ಹುಡಿ ಅಲ್ಲ. ಡಬ್ಬಿ 1ಕ್ಕೆ 0—2—0 ವಿ ಪಿ ಪ್ರತ್ಯೇಕ

ಮೋಹಿನಿ ತೈಲ.

ಈಗ ಹಲವು ನಮೂನೆಯ ತೈಲಗಳು ಉಪಯೋಗಿಸಿದವರು ಈ ನಮ್ಮ ಸುಗಂಧಮಯವಾದ ಮೋಹಿನಿ ತೈಲವನ್ನು ಒಂದು ಸಾರಿ ಉಪಯೋಗಿಸಿ ನೋಡಿರಿ. ಇದರಲ್ಲಿ ಹ್ವೈಟ್ ಒಯಿಲ್ ಇಲ್ಲಾ ಇದು ಗಿಡಮೂಲಿಕೆಗಳಿಂದಲೂ ಒದಾಮಿನ ಎಣ್ಣೆಯಿಂದಲೂ ತಯಾರಿಸಲ್ಪಟ್ಟಿದೆ ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ ಬೆಳಿಯುವವು

ಬಾಟ್ಲಿ ಒಂದರ ಕಿಮ್ಮತು ಆಣೆ 0—12—0

ಸುಂದರಿ ಮುಲಾಮು.

ಮುದ್ದಣಗಳನ್ನು ನಾಶಪಡಿಸಿ ಮುಖವನ್ನು ಸುಂದರಗೊಳಿಸುವದು • ಡಬ್ಬಿ 1ಕ್ಕೆ ರೂ 0—8—0

ವಜ್ರಗುಟಿಕ.

ಧಾತುಪುಷ್ಟಿ, ಧಾತುವೃದ್ಧಿ, ಶಕ್ತಿವರ್ಧಕ 20 ಗುಳಿಗೆಗಳ ಡಬ್ಬಿ ಒಂದರ ರೂ 1—0—0

ಕೆ. ನಟರಾಜನ್ ಎಡಿಟರ್, ಇಂಡಿಯನ್ ಸೋಶಿಯಲ್ ರಿಫೋರ್ಮರ್:—ಅಮೃತಾಂಜನ ಎಲ್ಲಾ ಔಷಧಗಳಿಗಿಂತಲೂ ಒಹಳ ಉತ್ತಮವಾದ ಔಷದ

ಡಬ್ಲ್ಯು ಮೆಕ್ಸ್‌ವೆಲ್, ಮೈನಾಡ:—ಅಮೃತಾಂಜನದಿಂದ ಎಂಥಾ ಕಠಿಣವಾದ ವಾತ ನೋವಾದರೂ ನಿಲ್ಲುತ್ತದೆ

ಆರ್ ಆರ್ ಗಂಗೋಲಿ:—ಅಮೃತಾಂಜನ ವಾತ, ತಲೆನೋವುಗಳ ಮೇಲೆ ದಿವ್ಯ ಔಷಧ.

ಡಾಕ್ಟರ್ ಡಾಂಡೆಕರ್, ಎಲ್. ಎಮ್. ಎಂಡ್ ಎಸ್:—ಅಮೃತಾಂಜನ ಎಲ್ಲಾ ನೋವುಗಳ ಮೇಲೆ ದಿವ್ಯ ಔಷಧ

ನಮ್ಮ ಔಷಧಗಳನ್ನು ಪಡಕೊಳ್ಳುವಾಗ ಅಮೃತಾಂಜನ ಡಿಪೊ, ಮುಂಬಯಿ ಎಂಬ ಹೆಸರನ್ನು ಓದಿನೋಡಿ ಪಡಕೊಳ್ಳಿರಿ

ಅಮೃತಾಂಜನ ರಖಮಾಗಿಯೂ, ಚಿಲ್ಲರೆಯಾಗಿಯೂ ಬೇಕಾದವರು ನಮ್ಮ ಮುಂಬಯಿ ಆಫೀಸಿಗೆನೇ ಬರಿಯಬೇಕು ಮದ್ರಾಸು ಆಫೀಸಿನವರು ರಖಮಾಗಿ ಅಮೃತಾಂಜನ ರವಾನಿಸಿ ಕೊಡುವ ಏರ್ಪಾಡು ಮಾಡಲಿಲ್ಲ.

ಮಂಗಳೂರಲ್ಲಿ—ಎಲ್ಲಾ ಔಷಧಗಳು ಈ ಕೆಳಗಿನ ಕಂಪೆನಿಗಳಲ್ಲಿ ತಿಕ್ಕುವವು.

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್, ಪರ್ಲ್ ಎಂಡ್ ಸನ್ಸ್, ದಿ ಊಲನ್ ಮಾರ್ಟ್, ಕೊಟ್ಟಿಕಾರ ಬ್ರದರ್ಸ್ ಉಡ್ಪಿ

ಅಮೃತಾಂಜನ ಡಿಪೊ,

5, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ,
ಮುಂಬಯಿ,

ESTABLISHED JULY 1906.

THE CANARA BANK, LIMITED., MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು

Authorised Capital Rs.	300,000—0—0
Issued Capital	225,000—0—0
Subscribed Capital	219,100—0—0
Paid-up Capital	194,100—0—0
Deposits	381,920—5—0
Reserve Fund	33,500—0—0

Besides the uncalled capital of Rs. 25,000/ 25% of the net profits are added annually to the Reserve Fund. Rs. 28,485/ have been invested in Government Paper of the face value of Rs. 29,300/-

Dividends of not less than 6% paid during the past years and a bonus of 1% to 2% paid in addition during the last three years.

Fixed Deposits of Rs. 50/-and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee

Short-notice Deposits requiring one weeks notice of withdrawal after one month received @ 2½%. per annum at the discretion of the managing committee

Current Deposit Account opened free of charge

Savings Bank Account opened for any sum not less than 4 As. and multiples thereof and interest paid @ 4½%.

Loans granted on proper securities and pledges

Sealed Parcels for safe custody received on a moderate charge.

Canara Bank Ltd.,

Mangalore 1st September 1915

ನಿಯಮಿತ ಮೂಲ ಧನವು ರೂಪಾಯಿ	300,000—0—0
ಹುಟ್ಟಿಸಿಂದ ಮೂಲ ಧನವು ,,	225,000—0—0
ಪ್ರತಿಜ್ಞಾತ ಮೂಲ ಧನವು ,,	219,100—0—0
ಆಗತ ಮೂಲ ಧನವು ,,	194,100—0—0
ಠೇವಣಾತಿಯಾಗಿ ಕೊಡೋಣಾದ ಮೊಬಲುಗುಗಳು	381,920—0—0
ರಕ್ಷಿತ ಧನವು	33,500—0—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡವುದಲ್ಲದೆ ಹಿಸೆ ಮಾಲ್ಯಗಳಿಂದ ಕೇಳಲ್ಪಡದಿರುವ ರೂ 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 28,485—0—0 ಸರಕಾರದ ರೂ. 29,300ರ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲು ಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು

"ಕರೆಂಟ್ ಎಕೌಂಟ್" ಎಂಬ ಇಲ್ಲಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

P. Gopal Naik,
Secretary

ಅತ್ತರು ಮತ್ತು ಸುರಭಿಗಳಲ್ಲಿ ಮಕುಟವರ್ಧನದಂತಿರುವ



ಒಟ್ಟೊ ಮೋಹಿನಿ.

(ರಿಜಿಸ್ಟರ್ಡ್.)

ಅನೇಕ ವಸ್ತುಪ್ರದರ್ಶನಗಳಲ್ಲಿ ಪ್ರದರ್ಶಿಸಲ್ಪಟ್ಟು ಕಡೆಗೆ ಅದರ ರಮ್ಯವಾದ ಅತ್ಯಂತ ಶಾಶ್ವತವಾದ ಪರಿಮಳಕ್ಕಾಗಿ ಚಿನ್ನ ಬೆಳ್ಳಿಯ ಪದಕಗಳನ್ನು ಪಡೆದಿದೆ. ಎಲವಸ್ತ್ರದಲ್ಲಿ ನಾಲ್ಕು ತಟಕುಗಳನ್ನು ತಾಗಿಸುವುದರಿಂದ ಹಿಡಿ ತುಂಬಾ ಮಲ್ಲಿಗೆ ಹೂ ಇದ್ದ ಪರಿಮಳವುಂಟಾಗುವುದು. ಈ ಹೂಗಳು ಕೃತಕವಾದವುಗಳಾದರೂ ನೈಸರ್ಗಿಕ ಹೂವಿನಂತೆ ಪ್ರತಿ ಸಾಯಂಕಾಲ ಬಾಡಿಹೋಗದು. ಆದರೆ ತನ್ನ ಪರಿಮಳವನ್ನು 4 ದಿವಸಗಳಿಗಿಂತಲೂ ಹೆಚ್ಚಿಗೆ ಕೊಡುತ್ತಿರುವದು. ಆದುದರಿಂದ ಒಟ್ಟೊ-ಮೋಹಿನಿಯು ಶಾಶ್ವತವಾದ ಸುರಭಿಯೆಂದು ಕರೆಯಲ್ಪಟ್ಟು ಈ ಕಾಲಕ್ಕೆ ತಕ್ಕುದಾದ ಬಹುಮಾನವಾಗಿ ಕೊಡತಕ್ಕ ದ್ರವ್ಯವಾಗಿದೆ ಇದರ ಪರಿಮಳವು ಶಾಶ್ವತವಲ್ಲವೆಂದು ದೃಢಮಾಡಿಕೊಡುವವರಿಗೆ 100 ರೂಪಾಯಿಗಳ ಬಹುಮಾನ ಕೊಡಲಾಗುವದು. ಆದುದರಿಂದ ಯಾಕೆ ಈ ಬಹುಮಾನವನ್ನು ಪಡೆಯಲು ಪ್ರಯತ್ನಿಸಲಾಗದು?

ಕ್ರಯ ಅರ್ಧ ಔನ್ಸ್ ಸೀಸೆಗೆ 2—0—0. 1 ಡ್ರಾಮ್ ಸೀಸೆಗೆ 0—12—0. ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0.

Proprietors:—**The Oriental Drug & Chemical Co.**

Sole Agents:—**MOHINI AGENCY,**

3 Fida Building, Jumma Musjid,
BOMBAY.

ಪ್ರೊಪ್ರೈಟರರು:—ಓರಿಯಂಟಲ್ ಡ್ರಗ್ ಎಂಡ್ ಕೆಮಿಕಲ್ ಕಂ.

ಪ್ರಾಮುಖ್ಯ ಏಜಂಟರು:—ಮೋಹಿನಿ ಏಜನ್ಸಿ

3 ಫಿದಾ ಬಿಲ್ಡಿಂಗ್, ಜುಮ್ಮಾ ಮಸೀದ್

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಕು 17ನೇ ಸಪ್ಟಂಬರ 1915

ಶ್ರೀ ಗಣೇಶ ಮಹೋತ್ಸವವು.

ಕಳೆದ ಆದಿತ್ಯವಾರವು ಶ್ರೀ ಗಣೇಶ ಚತುರ್ಥಿಯ ದಿವಸವಾದ ಕಾರಣ ಸಾಮಾನ್ಯವಾಗಿ ಎಲ್ಲಾ ಹಿಂದು ಜನರು ಆ ದಿನವನ್ನು ವ್ರತಾಚರಣೆಯಿಂದಲೂ, ಆನಂದದಿಂದಲೂ ಕಳೆದರೆಂಬುವುದು ಸಹಜವೇ. ಈ ಗಣೇಶ ಚತುರ್ಥಿಯ ಮಹೋತ್ಸವವು ಹಿಂದೂಸ್ಥಾನದ ಸರ್ವ ಭಾಗಗಳಲ್ಲಿರುವುದರಿಂದ ಈ ಸಮಯವು ಭಾವಿಕರಿಗೆ ಧಾರ್ಮಿಕ ದೃಷ್ಟಿಯಿಂದ ಒಂದು ಪರ್ವಣಿಯೇ ಸರಿ. ನಮ್ಮಲ್ಲಿ ಅನೇಕ ಉತ್ಸವಗಳಿರುವಂತೆ ಪಾಶ್ಚಾತ್ಯರಲ್ಲಿಯೂ, ಮಹಮ್ಮದೀಯರಲ್ಲಿಯೂ, ಬೌದ್ಧರಲ್ಲಿಯೂ, ಪಾರ್ಸಿಯರಲ್ಲಿಯೂ ಮಹೋತ್ಸವಗಳು ಧಾರಾಳವಾಗಿರುವವು. ಆದುದರಿಂದಲೇ ಮಹಾಕವಿ ಕಾಳಿದಾಸನು "ಉತ್ಸವ ಪ್ರಿಯಾಃ ಖಲು ಮನುಷ್ಯಾಃ" ಎಂದರೆ ಮನುಷ್ಯರೆಲ್ಲರು ಉತ್ಸವ ಪ್ರಿಯರೆಂದು ಹೇಳುತ್ತಾನೆ. ಧಾರ್ಮಿಕ ಮತ್ತು ಸಾಮಾಜಿಕ ಕಟ್ಟಿನಂತೆ ಹಿಂದು ಜನರಲ್ಲಿ ಬಹು ಪ್ರಾಚೀನ ಕಾಲದಿಂದ ಅನೇಕ ವ್ರತಗಳೂ, ಉತ್ಸವಗಳೂ, ರೂಢವಾಗಿದ್ದರೂ, ಈ ಗಣೇಶ ಮಹೋತ್ಸವಕ್ಕೆ ಅನೇಕ ದೃಷ್ಟಿಯಿಂದ ಮಹತ್ವವು ಒಂದಿದೆ. ಬಾದ್ರಪದ ತಿಂಗಳಲ್ಲಿ ಸಸ್ಯಾದಿಗಳು ಪೂರ್ಣ ವೃದ್ಧಿಯನ್ನು ಪಡೆದು ಫಲೋನ್ಮುಖವಾಗಿರಲು ಮುಂದೆ ಯಾವ ವಿಘ್ನವು ಬಾರದೆ ಆದ ಫಲವು ತಮ್ಮ ಕೈಯಲ್ಲಿ ಬೀಳುವಂತೆ ನಮ್ಮ ಹಿರಿಯರು ವಿಘ್ನೇಶ್ವರನಾದ ಗಣಪತಿಯನ್ನು ಪೂಜಿಸುವ ಕ್ರಮ ಇಟ್ಟದ್ದು ಆಶ್ಚರ್ಯವಲ್ಲವು. ಅದು ಅವರ ಭಾವಿಕತ್ವದ ಮತ್ತು ಧಾರ್ಮಿಕತೆಯ ಸಾಕ್ಷಿಯಾಗಿದೆ. "ಗಣಾನಾಂತ್ವಾ" ಇತ್ಯಾದಿ ಋಗ್ವೇದದ ಮಂತ್ರದಲ್ಲಾಗಲೀ, ಗಣಪತಿ ಅಥರ್ವಶೀರ್ಷದಲ್ಲಾಗಲೀ ಗಣದೇವರ ಸ್ವರೂಪವನ್ನು ವರ್ಣಿಸಿದ್ದುದನ್ನು ಮನಸ್ಸಿನಲ್ಲಿ ತಂದರೆ ಗಣಪತಿಯೇ ಗಣಕ್ಕೆ, ಸಮಾಜಕ್ಕೆ, ದೇಶಕ್ಕೆ ನಾಯಕನೆಂಬುವುದು ಸ್ಪಷ್ಟವಾಗುತ್ತದೆ. ಸಮಾಜದ ಅಥವಾ ದೇಶದ ನಾಯಕನಾದ ಗಣಪತಿಯನ್ನು ನಿರ್ವಿಘ್ನದ ವಿಷಯದಲ್ಲಿ ಭಕ್ತಿಭಾವದಿಂದ ಪ್ರಾರ್ಥಿಸುತ್ತಿದ್ದ ನಮ್ಮ ಹಿರಿಯರಿಗೆ ಹೆಚ್ಚಿನ ಆಪತ್ತು ಒದಗುತ್ತಿದ್ದಿಲ್ಲ. ಆದರೆ ಈಗಿನವರಾದ ನಮ್ಮ ಶ್ರದ್ಧೆಯು ಅಷ್ಟು ದೃಢವಿಲ್ಲದ್ದರಿಂದ, ಇಂತಹ ಉತ್ಸವಗಳಲ್ಲಿ ಉತ್ಸಾಹವು ಕಡಮೆಯಾಗಿದೆ. ನಮ್ಮ ಪ್ರಾಂತ್ಯದಲ್ಲಿ ಸುಮಾರು ೨೦-೨೫ ವರ್ಷಗಳ ಮುಂಚೆ ಅವರವರ ಮನೆಯಲ್ಲಿ ಅನಂತಚತುರ್ದಶಿಯ ವರೆಗೆ ಶ್ರೀ ಗಣಪತಿಯ ಮೂರ್ತಿಯ ಎದುರಿನಲ್ಲಿ ಅನೇಕ ತರದ ಪೌರಾಣಿಕ ಚಿತ್ರಗಳನ್ನು ಮಾಡಿಡುವುದರಿಂದ ಈ ಉತ್ಸವವು ಪ್ರೇಕ್ಷಕರ ಮನೋರಂಜನೆಗೆ ಒಂದು ಸಾಧನವಾಗಿತ್ತು. ಈಗ ಆ ಉತ್ಸವವೂ ಇಲ್ಲ; ಆ ಮನೋರಂಜನೆಯೂ ಇಲ್ಲ. ಈ ಉತ್ಸವವು ಬರೇ ಕಡಬುಗಳಲ್ಲಿಯೂ, ಚಕ್ಕುಲಿಗಳಲ್ಲಿಯೂ ಸಂತುಷ್ಟವಾಗಿ ಹೊರಟು ಹೋಗುವ ಸ್ಥಿತಿಯು ಬಂದು ಒದಗಿದೆ. ಇದೇ ಈಗ ನಮ್ಮ ಪ್ರಾಂತ್ಯದ ಉತ್ಸವದ ಪರಿಸ್ಥಿತಿಯು.

ಇದೇ ಉತ್ಸವವು ಅನ್ಯ ಪ್ರಾಂತಗಳಲ್ಲಿ ಯಾವ ಪ್ರಮಾಣದಲ್ಲಿ ನಡೆಯುತ್ತದೆ ಎಂಬುದನ್ನು ಸ್ವಲ್ಪ ಮಟ್ಟಿಗೆ ನಿರೀಕ್ಷಿಸಿದರೆ, ನಮಗೆ ಎಷ್ಟೋ ವ್ಯತ್ಯಾಸವು ಕಂಡು ಬರುವುದು. ಮುಂಬಾಯಿ, ಪೂನಾ, ಸಾತಾರಾ, ವಾಯಿ, ಬರೋಡಾ, ನಾಗಪುರ ಮುಂತಾದ ಸ್ಥಳಗಳಲ್ಲಿ ಈ ಉತ್ಸವವು ಶ್ಲಾಘ್ಯವಾದ ರೀತಿಯಲ್ಲಿ ಬಹು ವಿಜೃಂಭಣೆಯಿಂದ ನಡೆದಿರುತ್ತದೆ. ಸುಮಾರು ೨೦-೨೫ ವರ್ಷಗಳಿಂದ ಪೂನಾ ಕಡೆಯ ಕೆಲವು ಸಮಾಜ ಧುರೀಣರು ಈ ಧಾರ್ಮಿಕ ಉತ್ಸವಕ್ಕೆ ಸಾರ್ವಜನಿಕ ಸ್ವರೂಪವನ್ನು ಕೊಟ್ಟು ಆ ಉತ್ಸವದಲ್ಲಿ ಹರಿಕಥೆಗಳು, ಪುರಾಣಪ್ರವಚನಗಳು, ಪ್ರಸಿದ್ಧ ಭಕ್ತರ ಧಾರ್ಮಿಕ, ಸಾಮಾಜಿಕ, ನೈತಿಕ ಯಾ ಪ್ರಚಲಿತ ವಿಷಯಗಳ ಮೇಲೆ ಉಪನ್ಯಾಸಗಳು, ಗಾಯನಗಳ ಜಲಸೆಗಳು ಮತ್ತು ಶಾರೀರಕ ಆಟಗಳು ಹಾಗೂ ಚಿತ್ರಗಳ ಪ್ರದರ್ಶನವು ನಡಿಸುವ ಏರ್ಪಾಡು ಮುಂತಾದುವನ್ನು ಮಾಡಿರುವುದರಿಂದ ಆ ಉತ್ಸವವು ಒಂದೇ ಸಮಯದಲ್ಲಿ ಭಕ್ತಿ, ಜ್ಞಾನ, ಮನೋರಂಜನೆ ಮತ್ತು ದೇಹದೃಢತೆ ಇವುಗಳನ್ನು ಪ್ರಸವಿಸುವ ಒಂದು ಕಾಮಧೇನುವೇ ಆಗಿದೆ. ಪಟ್ಟಣದೊಳಗೆ ಅಲ್ಲಲ್ಲಿ ಸಾರ್ವಜನಿಕ ಗಣಪತಿಗಳನ್ನು [illegible] ಮಂಟಪದಲ್ಲಿ ಸುಪ್ರಸಿದ್ಧ ಮತ್ತು ಬೋಧಪ್ರದವಾದ ಉಪನ್ಯಾಸಗಳಾಗುತ್ತಿರುವುದರಿಂದ ಶ್ರೋತೃ ಜನರಿಗೆ ವಿಶೇಷವಾಗಿ ವಿದ್ಯಾರ್ಥಿ ವರ್ಗದವರಿಗೆ ಇಂತಹ ಉತ್ಸವವು ಶಿಕ್ಷಣದ ಸಂಸ್ಥೆಯಂತೆಯೇ ಪ್ರಯೋಜನಕಾರಿಯಾದದ್ದು ಆಶ್ಚರ್ಯವಲ್ಲ. ಈ ಉತ್ಸವದಲ್ಲಿ ಉಪನ್ಯಾಸಗಳನ್ನು ಕೊಡುವುದಕ್ಕಾಗಿಯೂ ಕೇಳುವುದಕ್ಕಾಗಿಯೂ ಬೇರೆ ಬೇರೆ ಪಟ್ಟಣಗಳಿಂದ ಜನರು ಬರುತ್ತಿರುವುದರಿಂದಲೂ, ಅವರು ಒಬ್ಬರಲ್ಲೊಬ್ಬರು ಬಂಧುವಾತ್ಸಲ್ಯದಿಂದ ನಡೆದುಕೊಳ್ಳುತ್ತಿರುವುದರಿಂದಲೂ ಅವರ ಮನಸ್ಸು ಉದಾರವಾಗಿ ಸ್ವದೇಶ ಒಂದು ಎಂಬ ಭಾವನೆಯಿಂದ ತುಂಬಿಹೋಗಿ ಸಮಾಜೈಕ್ಯದ ವತ್ತು ಸಾರವು ಯಾವುದೆಂಬದನ್ನು ತಿಳಿದುಕೊಳ್ಳಲು ಸಮರ್ಥವಾಗುತ್ತದೆ. ಇದಲ್ಲದೆ, ಆಯಾ ವಕ್ತೃರ ಉಪನ್ಯಾಸಗಳಿಂದ ಬೇರೆ ಬೇರೆ ದೇಶಗಳ ಸಂಪ್ರದಾಯಗಳೂ, ನಡಾವಳಿಗಳೂ ಕಟ್ಟಳೆಗಳೂ ತಿಳಿಯುವುದರಿಂದ ಅವುಗಳನ್ನೂ, ತಮ್ಮ ಆಚಾರಗಳನ್ನೂ ತುಲನೆಮಾಡಿ ತಾರತಮ್ಯವನ್ನು ಊಹಿಸಲು ಜನರಿಗೆ ಸುಲಭವಾಗುತ್ತದೆ. ಹೇಗೆ ಸಂಪ್ರದಾಯ ಮತ್ತು ನಡಾವಳಿಗಳಲ್ಲಿ ಈ ಬಗ್ಗೆ ಬದಲಾವಣೆಗಳಾಗುತ್ತವೆಯೋ ಹಾಗೆಯೇ ವಿಚಾರ ವಿನಿಮಯವೂ ಉಂಟಾಗುತ್ತದೆ. ಈ ಉತ್ಸವದ ಕಾರ್ಯಕ್ರಮದಲ್ಲಿ ಚಿತ್ರಕಲೆಗೂ ಎಡೆಕೊಟ್ಟಿರುವುದರಿಂದ ಚಿತ್ರಕಾರರಿಗೆ ತಮ್ಮ ಚಾತುರ್ಯವನ್ನು ಪ್ರದರ್ಶಿಸಲು ಇದೊಂದು ಒಳ್ಳೇ ಸಂದರ್ಭವಾಗುತ್ತದೆ. ತಾತ್ಪರ್ಯವೇನೆಂದರೆ ಇಂತಹ ಅನೇಕ ಲಾಭಗಳನ್ನು ಅಲ್ಲಿಯ ಜನರು ಈ ಉತ್ಸವದಿಂದ ಪಡೆಯುತ್ತಿದ್ದಾರೆ.

೨೦ ವರ್ಷಗಳ ಹಿಂದೆ ಖರಿಯ ಧಾರ್ಮಿಕವಾದ ಈ ಗಣೇಶ ಮಹೋತ್ಸವಕ್ಕೆ ಈಗ ಈ ಪ್ರಕಾರವಾದ ಸಾರ್ವಜನಿಕ ಮತ್ತು ವ್ಯಾಪಕ ಸ್ವರೂಪವು ಬರಬೇಕಾದರೆ ಆ ದೇಶದ ಮುಖಂಡರ ದೀರ್ಘಪ್ರಯತ್ನವೇ ಕಾರಣವೆಂಬುದು ನಮ್ಮ ವಾಚಕರಿಗೆ ಹೊಸದಾಗಿ ಹೇಳಬೇಕಾದ್ದಿಲ್ಲ. ಮಹಾರಾಷ್ಟ್ರ ದೇಶದ ಮುಂದಾಳುಗಳು ಈ ಉತ್ಸವವನ್ನು ಪ್ರಾರಂಭಿಸಿದ ಕೂಡಲೆ ಅಲ್ಲಿಯ ಸುಧಾರಣಾಪಕ್ಷದ ವಾದಿಗಳು ಈ ಉತ್ಸವವನ್ನೂ ಅದರ ಪ್ರವರ್ತಕರನ್ನೂ ಹೀಯಾಳಿಸಹತ್ತಿದರು. ಆದರೂ ಅವರ ಟೀಕೆಗೆ ಆಗಿಂದಾಗ್ಗೆ ಸರಿಯಾಗಿ ಉತ್ತರವನ್ನು ಕೊಟ್ಟು ಉತ್ಸವ ಪ್ರವರ್ತಕರು ಉತ್ಸವದ ಉಪಯುಕ್ತತೆಯನ್ನು ಬರೆಮಾತಿನಿಂದಲ್ಲ ಕಾರ್ಯದಿಂದ ಅಧಿಕವಾಗಿ ರುಜುಪಡಿಸಿದರು. ಪ್ರತಿಪಕ್ಷದವರ ಟೀಕೆಯ ಪಟುಗಳನ್ನು ಈ ಮೇರೆಗೆ ನಿವಾರಿಸಿ ತನ್ನ ಉಪಯುಕ್ತತೆಯನ್ನು ದೃಢಪಡಿಸಿದ ಈ ಗಣೇಶ ಮಹೋತ್ಸವವು ಮೊದಲು ಮೊದಲು ಪಟ್ಟಣಗಳಲ್ಲಿ ಮಾತ್ರ ಇದ್ದದ್ದು ಈಗ ಆ ಪ್ರಾಂತ್ಯದ ಹಳ್ಳಿಹಳ್ಳಿಗಳಲ್ಲಿ ಕೂಡ ಸಾರ್ವಜನಿಕ ಸ್ವರೂಪದಿಂದ ಹಬ್ಬಿ, ಎಲ್ಲರಿಗೆ ಜ್ಞಾನದ ಮತ್ತು ಮನೋರಂಜನದ ಅತ್ಯುತ್ತಮವಾದ ಒಂದು ಸಾಧನವಾಗಿದೆ.

ಮದ್ರಾಸಿನ 'ಪಿಲಿಗ್ರಿಮ್' ಕಮ್ಮಿಟಿಯವರ ಸಂದರ್ಶನ, ಉಡುಪಿ.

ಸರಕಾರದಿಂದ ನೇಮಕಪಟ್ಟು, ಹೆಚ್ಚು ಪರಿಷೆ ಕೂಡುವ ಪುಣ್ಯಕ್ಷೇತ್ರಗಳಲ್ಲಿ ಬಂದವರ ಆರೋಗ್ಯ ರಕ್ಷಣೆಗೆ ಈಗ ನಡಿಯುವ ವಿಲೆವಾರಿಗಳು ಸಾಕಾಗಿವೆಯೋ ಎಂದು ಪರಿಶೋಧಿಸುವ ಉದ್ದೇಶದಿಂದ ಏರ್ಪಟ್ಟ ಈ ಕಮ್ಮಿಟಿಯವರು ಕಳೆದ ೬ನೆ ತಾರೀಕಿಗೆ ಉಡುಪಿಗೆ ಹೋಗಿ, ಮರುದಿನ ಊರಿನ ಪ್ರಮುಖ ಗೃಹಸ್ಥರನ್ನೂ ರೆವಿನ್ಯೂ ಡಿವಿಜನಲ್ ಆಫೀಸರ್, ತಾಲೂಕು ತಹಸಿಲ್ದಾರರು ಮುಂತಾದ ಮುಖಂಡ ಉದ್ಯೋಗಸ್ಥರನ್ನೂ ಕರೆಸಿ, ಉಡುಪಿಯಲ್ಲಿ ಬಂದು ಸೇರುವ ಪರಿಷೆಯ ಆರೋಗ್ಯದ ವಿಲೆವಾರಿಗಳನ್ನು ಕುಲಂಕುಶ ತನಿಖೆ ನಡಿಸಿದರು. ಅಭಿಪ್ರಾಯಗಳು ಒಮ್ಮುಖವಾಗಿ ಬರಲಿಲ್ಲವೆಂದು ನಾವು ತಿಳಿಯುತ್ತೇವೆ. ಈಗಿನ ಕ್ರಮಗಳಲ್ಲಿ ಜನರಿಗೆ ಏನೊಂದು ತೊಂದರೆಯಿಲ್ಲ, ಸರ್ವವೂ ಜನರ ಅನುಕೂಲತೆಗೆ ಸರಿಯಾಗಿಯೇ ಇದೆ ಎಂದು ಹೇಳುವವರು ಒಂದು ಪಕ್ಷ, ಪರ್ಯಾಯ, ಮಕರಸಂಕ್ರಾಂತಿ, ದೀಪಾವಳಿ, ಮಧ್ವನವಮಿ ಮುಂತಾದ ದಿನಗಳಲ್ಲಿ ಬಳ್ಳಾರಿ, ಕೊಯಮುತ್ತೂರು, ತಂಜಾವೂರು, ದಕ್ಷಿಣ ಮಹಾರಾಷ್ಟ್ರ ಜಿಲ್ಲೆಗಳು, ಮೈಸೂರು ಮುಂತಾದ ಜಿಲ್ಲೆಗಳಿಗೆ ಸಾವಿರಗಟ್ಟಲೆಯಿಂದ ಜನರು ಉಡುಪಿಗೆ ಬರುವಾಗ ಅವರಿಗೆ ಸಾಕಷ್ಟು ವಸತಿಗೃಹಗಳು, ನೀರಾಶ್ರಯ, ಪಾಯಿಖಾನೆಗಳು, ವೈದ್ಯಜನಸಹಾಯ ಇವು ಇಲ್ಲವೆಂತಲೂ, ಉಡುಪಿಗೆ ಹೋಗುವುದಕ್ಕೆ ರೈಲ್ವೆ ಅನುಕೂಲತೆಯಿಲ್ಲದೆ ಹಲವು ಹೊಳೆಗಳನ್ನು ದಾಟಿ ಹೋಗುವುದು ಬಹಳ ಕಷ್ಟತರವೆಂತಲೂ ಕೆಲವರು ಪ್ರತಿಪಾದಿಸಿದರು. ಈ ಸಂದರ್ಭದಲ್ಲಿ ಕಮ್ಮಿಟಿಯವರು ಉಡುಪಿಗೆ ಒಂದು 'ಯೂನಿಯನ್' ಅಥವಾ 'ಮ್ಯುನಿಸಿಪಾಲಿಟಿ'ಯನ್ನು ಏರ್ಪಡಿಸುವುದು ಸಮ್ಮತವೇ ಎಂದು ಕೇಳಿದರು. ಅದಕ್ಕೆ ಇದರಿಂದ ಕಂದಾಯವು ಹೆಚ್ಚುವುದಲ್ಲದೆ ಅದಕ್ಕೆ ಸರಿಯಾದ ಪ್ರತಿಫಲವು ಸಿಕ್ಕಲಾರದು ಎಂದು ಮೊದಲನೆ ಪಕ್ಷದವರೂ [illegible] ಅಂಥಾ ಸಂಸ್ಥೆಯನ್ನು ಏರ್ಪಡಿಸಿದ ವಿನಾ ಊರಿನ ಆರೋಗ್ಯದ ಏರ್ಪಾಡು ನೆಟ್ಟಗಾಗ

ರಿಕ್ಕಿಲ್ಲವೆಂದು ಇನ್ನೊಂದು ಪಕ್ಷದವರೂ ವಾದಿಸಿದರು. ಈ ಚರ್ಚೆಯ ಪರಿಣಾಮವು ಹೇಗಾಗುವುದೊ ಅದನ್ನು ನಾವು ಹೇಳಲಾರೆವು ಆದರೆ ಉಡುಪಿಯ ಈಗಿನ ಸ್ಥಿತಿಯನ್ನು ವಿವರಿಸಿ ಅದನ್ನು ವಾಚಕರ ಮುಂದೆಯೂ, ಸರಕಾರದವರ ಮುಂದೆಯೂ ನಾವು ಇಡಬೇಕಾಗಿದೆ

೧೯೧೧ನೆ ವರ್ಷದ ಖಾನೇಷುಮಾರಿ ಮೇರೆಗೆ ೫೫೭೦ ಗಂಡು, ೫೫೧೧ ಹೆಣ್ಣು ಜುಮಲಾ ೧೧೦೮೧ ಜನಸಂಖ್ಯೆ ಉಡುಪಿಯ ಶಹರಿನಲ್ಲಿದೆಯೆಂದು ಗೊತ್ತಾಗುತ್ತದೆ. ಅಂದರೆ ಈಗ ೧೨೦೦೦ ಜನಸಂಖ್ಯೆ ಇದೆ ಎಂದು ಹೇಳಬಹುದು ಪರ್ಯಾಯದ ವೇಳೆಯಲ್ಲಿ ಸುಮಾರು ೭೦೦೦ ಪರಿಶೆ ಇಲ್ಲಿ ನೆರೆಯುವದೆಂದು ಗೊತ್ತಾಗಿದೆ ಇದಲ್ಲದೆ ಇತರ ವಿಶೇಷ ದಿನಗಳಲ್ಲಿ ಸುಮಾರು ೧೦೦೦೦ಕ್ಕೆ ಕಡಿಮೆಯಾಗದಷ್ಟು ಜನರು ಇಲ್ಲಿ ನೆರೆಯುವರು. ಇವರ ಅನುಕೂಲತೆಗೆ ಇಲ್ಲಿ ಖಾನ್ ಸಾಹೇಬ್ ಅಬ್ದುಲ್ಲಾ ಹಾಜಿ ಕಾಸಿಮ್ ಸಾಹೇಬರವರ ಛತ್ರ ಒಂದು, ಲೋಕಲ್‌ಫಂಡು ಸಿರಿಪೀಡು ಛತ್ರ ಒಂದು, ಲೋಕಲ್‌ಫಂಡು ಬಂಗ್ಲೆಗಳು ಎರಡು ಇವೆ ಈ ಪೈಕಿ ಕಡೆಯ ಎರಡು ಪರಿಶೆಯ ಜನಕ್ಕೆ ಸಿಕ್ಕುವಹಾಗಿಲ್ಲ ಆ ಸಮಯದಲ್ಲಿ ಬಂದೋಬಸ್ತಿಗೆ ಬರುವ ಸರಕಾರಿ ನವುಕರರು ಅವುಗಳಲ್ಲಿ ಉಳಕೊಳ್ಳುವರು. ಬಡಜನರ ಅನುಕೂಲತೆಗೆ ಕೆಲವು ಹೊಟೇಲುಗಳೇ ಗತಿಯಲ್ಲದೆ ಬೇರೆಯಿಲ್ಲ ಸರಕಾರಿ ಪಾಯಖಾನೆಗಳು ನಾಲ್ಕು ಮಾತ್ರ ಇವೆ, ಖಾಸಗಿ ಮನೆಗಳಿಗೆ ೧೬೦ ಪಾಯಿಖಾನೆಗಳು ಇಷ್ಟು ಸ್ಥಳದ ನಿವಾಸಿಗಳಿಗೇನೆ ಸಾಕಾಗಲಾರವು ಹೀಗಾಗಿ ಬೇಸಗೆಯಲ್ಲಿ ಸಿರಿಪೀಡು ಛತ್ರದ ಹಿಂಬದಿಯ ಗದ್ದೆಗಳೂ ಮಠಗಳ ಚೌಕದ ಹಿಂಬದಿಯಲ್ಲಿರುವ ಗದ್ದೆಗಳೂ ಜನರಿಂದ ಉಪಯೋಗಿಸಲ್ಪಟ್ಟು ದುರ್ವಾಸನೆಗೆ ತೌರಮನೆಯಾಗುತ್ತವೆ ಬ್ರಾಹ್ಮಣರಿಗೆ ಮಠದ ಕೊಳವೇ ಸ್ನಾನಕ್ಕೆ ಉಪಯೋಗಕ್ಕೆ ಇದೆ ಇತರರಿಗೆ ಸರಕಾರಿ ಬಾವಿಗಳು ಸಾಕಷ್ಟು ಇಲ್ಲ ರಸ್ತೆಗಳೂ ಒಟ್ಟಿಗೆಲ್ಲಾ ಕೂಡಿ ಸುಮಾರು ೧೧ ಮೈಲು ರಸ್ತೆ ಇರುವಲ್ಲಿ ಒಟ್ಟು ೧೮ ಲಾಂದರಗಳು ಇವೆ, ಹೀಗಾಗಿ ರಾತ್ರೆ ಸಂಚಾರಕ್ಕೆ ಬಹಳ ಇಕ್ಕಟ್ಟಾಗಿದೆ ಸಾಮಾನ್ಯ ಕಾಲದಲ್ಲಿ ಆರೋಗ್ಯ ಸಂಬಂಧಿಯ ಖರ್ಚು ವರ್ಷಕ್ಕೆ ಸುಮಾರು ೧೦೦೦, ಲಾಂದರು ಉರಿಸುವ ಖರ್ಚು ಸುಮಾರು ೧೫೫ ರೂಪಾಯಿ ಇವನ್ನು ತಾಲೂಕು ಬೋರ್ಡಿನವರು ಈ ಶಹರಿನಗೋಸ್ಕರ ಖರ್ಚುಮಾಡುತ್ತಲಿರುವರು ಇದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎರಡನೆ ಶಹರು ಎಂಬುದನ್ನು ಮರೆಯಬಾರದು. ಇಲ್ಲಿಯ ಆಸ್ಪತ್ರೆಯಲ್ಲಿ ದಿನವಹಿ ೧೫೦ರಿಂದ ೨೦೦ ವರೆಗಿನ ರೋಗಿಗಳು ಚಿಕಿತ್ಸೆ ಹೊಂದುತ್ತಲಿದ್ದಾರೆ ಒಳರೋಗಿಗಳಿಗೆ ಕ್ಕೆ ಮಾತ್ರ ಅನುಪಾನಕ್ಕೆ ಅನುಕೂಲತೆಯಿದೆ ಒಬ್ಬಳೇ ಸೂಲಗಿತ್ತಿ ಇರುವಳು. ಖಾನ್ ಸಾಹೇಬ್ ಅಬ್ದುಲ್ಲಾ ಸಾಹೇಬರು ಸ್ತ್ರೀಯರ ಬಗ್ಗೆ ಧರ್ಮಾರ್ಥವಾಗಿ ಕಟ್ಟಿಸಿಕೊಟ್ಟ ಆಸ್ಪತ್ರೆಗೆ ಸರಿಯಾಗಿ ಸಿಬ್ಬಂದಿ ಇದಕ್ಕೆ ಅನುಕೂಲವಿಲ್ಲದೆ ಇದ್ದುದರಿಂದಲೂ, ಗಂಡಸರ ಆಸ್ಪತ್ರೆಯ ಹೊರರೋಗಿಗಳ ಔಷಧಾಲಯದ ಕಟ್ಟೋಣದ ಕೆಲಸವನ್ನು ಇನ್ನೂ ಮುಗಿಸದೆ ಇರುವುದರಿಂದಲೂ, ಆ ಕಟ್ಟೋಣವನ್ನು ಇನ್ನೂ ಹೊರ ರೋಗಿಗಳ ಔಷಧಾಲಯವಾಗಿ ಉಪಯೋಗಿಸುತ್ತಲಿದ್ದಾರೆ ಆಸ್ಪತ್ರೆಯಲ್ಲಿ ಈಗ ಇರುವ ಸಿಬ್ಬಂದಿಯಿಂದ ಕೆಲಸವು ಪೂರೈಸದೆ ಇರುವುದರಿಂದ ಹಂಗಾಮಿಯಾಗಿ ಎರಡು ಜನ ಹೆಚ್ಚಿಸಿರುತ್ತದೆ ಇದಲ್ಲದೆ ಕಂಪೌಂಡರ್ ಒಬ್ಬರೇ ಇರುವುದರಿಂದ ದಿನದಲ್ಲಿ ೧೮ ತಾಸು ಅವರು ಆಸ್ಪತ್ರೆಯಲ್ಲಿಯೇ ಇದ್ದರೂ ತೀರುವುದಿಲ್ಲ ಸಾಮಾನ್ಯ ದಿನಗಳಲ್ಲಿ ಈ ಸ್ಥಿತಿಯಾಗಿದ್ದರೆ ವಿಶೇಷ ಉತ್ಸವಗಳ ಕಾಲದಲ್ಲಿ ಸಾವಿರಾರು ಜನರು ಉಡುಪಿಗೆ ಬರುವ ದಿನಗಳಲ್ಲಿ ಕೆಲಸವು ಹೇಗೆ ನಡೆದೀತು? ಇದಲ್ಲದೆ ಮಾರ್ಕೆಟಿನಲ್ಲಿ ಸ್ಥಳ ಸಾಲದೆ ಸಂತೆ ದಿನ ಮಾರ್ಗಕಟ್ಟಿ ಜನರು ನಿಲ್ಲುವರು, ಮಾರ್ಕೆಟಿನಲ್ಲಿ ಹುಲ್ಲುಛಾವಣಿಯ ಗುಡಾರಗಳೇ ಹೆಚ್ಚು ಇದೂ ಅಲ್ಲದೆ ೧೫೦ ಮಕ್ಕಳಿರುವ ಮೂಲಪಾಠಶಾಲೆಯೊಂದನ್ನು ಬೋರ್ಡಿನವರು ನಡಿಸುವುದಲ್ಲದೆ ಅನಂತೇಶ್ವರ ದೇವಸ್ಥಾನದ ಹೊರ ಜಗಲಿಯಲ್ಲಿ ಒಂದು ಶಾಲೆಯು ಈಗ ಹಲವು ಕಾಲದಿಂದ ನಡೆಯುತ್ತದೆ ಹೀಗೆ ಉಡುಪಿಯಲ್ಲಿ ಅನೇಕ ಕುಂದುಕಗಳಿದ್ದರೂ, ಇಲ್ಲಿ ತೆರಿಗೆ ಹೆಚ್ಚೀತೆಂಬ ಭಯದಿಂದ ತಮಗೆ 'ಯೂನಿಯನ್ ಬೇಡ' 'ಈಗ ಸರ್ವವೂ ಸರಿಯಾಗಿಯೇ ಇದೆ' ಎಂದು ಹೇಳುವುದನ್ನು ಕೇಳುವಾಗ ಅತ್ಯಾಶ್ಚರ್ಯವಾಗುತ್ತಿದೆ. ಆಸ್ಪತ್ರೆಯನ್ನು ವೃದ್ಧಿಪಡಿಸುವುದಲ್ಲದೆ ಆರೋಗ್ಯ ಸಂಬಂಧವಾದ ಏರ್ಪಾಡುಗಳನ್ನು ಮಾಡುವುದಕ್ಕೆ ತಾಲೂಕು ಬೋರ್ಡಿಗೆ ಕೊಟ್ಟ ಹಣಗಳಲ್ಲಿ ೭ ಯಾ ೮ ಸಾವಿರ ರೂಪಾಯಿ ಉಡುಪಿಯ ಶಹರನ್ನು ವೃದ್ಧಿಪಡಿಸುವುದಕ್ಕೆ ಜನಗಳ ಪ್ರತಿನಿಧಿಗಳು ಕೇಳುತ್ತಲಿದ್ದಾರೆ. ಈ ವರ್ಷಕ್ಕೆ ಒಂದೆರಡು ಹೊಸ ರಸ್ತೆಗಳನ್ನು ಮಾಡಲಿಕ್ಕೆ ನಿಶ್ಚಯಿಸಿಯದೆ. ಇದಲ್ಲದೆ ರೈಲ್ವೇ ಮಂಗಳೂರಿಂದ ಉಡುಪಿ ವರೆಗೆ ವಿಸ್ತರಿಸಬೇಕೆಂದೂ ಅಥವಾ ಮಂಗಳೂರಿಂದ ಉಡುಪಿಗೆ ನಡುವೆ ಇರುವ ಹೊಳೆಗಳಿಗೆ ಸೇತು ಕಟ್ಟಿಸಬೇಕೆಂದೂ ಆಗಾಗ ಸರಕಾರಕ್ಕೆ ಮನವಿ ಹೋಗುತ್ತಲೇ ಇದೆ. ಹೀಗಿರುವಾಗ ಇನ್ನೂ ಜನಸಂಖ್ಯೆಯೂ, ಮನೆಮಾರೂ ಹೆಚ್ಚುತ್ತಲೇ ಇರುವಾಗ ಎಲ್ಲಾ ಗ್ರಾಮಗಳವರ ಅನುಕೂಲತೆಗಾಗಿ ಕೊಟ್ಟ ದ್ರವ್ಯಾನುಕೂಲತೆಗಾಗಿ ಸರಕಾರದವರು ದಯಪಾಲಿಸಿದ ಹಣದಲ್ಲಿ ಹೆಚ್ಚಿನ ಅಂಶವನ್ನು ಉಡುಪಿ ಶಹರಿನವರು ಪಡೆಯುತ್ತಲಿದ್ದರೂ ಇನ್ನೂ ಆರೋಗ್ಯ ಸೌಕರ್ಯಗಳಲ್ಲಿ ಅತೀ ಅಗತ್ಯವಾದುವುಗಳನ್ನಾದರೂ ಒದಗಿಸಿಕೊಳ್ಳುವ ಸಂಬಂಧ ಸ್ವಲ್ಪ ತೆರಿಗೆಯ ಭಾರವನ್ನು ಹೊತ್ತುಕೊಳ್ಳಲಾರೆವೆಂದರೆ ಸ್ವಾರ್ಥಪರತೆಯಾಗುವುದಲ್ಲವೆ? ಮಠದ ಚೌಕದಲ್ಲಿ ಮಳೆಗಾಲದಲ್ಲಿ ನೀರು ನಿಂತು ಮಾರ್ಗಗಳು ಕೆಸರಾಗಿ ಜನಗಳಿಗೆ ಎಷ್ಟೋ ತೊಂದರೆಯಾಗುತ್ತದೆ ಸ್ವಲ್ಪ ನೆರೆ ಬಂದೊಡನೆ ಕಲ್ಲುಸಂಕದ ಬಳಿಯಿಂದ ಸಾರಸ್ವತರ ದೇವಸ್ಥಾನದ ವರೆಗೆ ನೀರು ತೋಡಿನಿಂದ ಉಕ್ಕಿಬರುತ್ತದೆ ಹಲವು ಕಡೆಗಳಲ್ಲಿ ರಸ್ತೆಗಳ ಬದಿಗಳಲ್ಲಿ ಚರಂಡಿಗಳೇ ಇಲ್ಲ, ಇದ್ದಲ್ಲಿಯೂ ಅಂಚಿಗೆ ಕಲ್ಲುಕಟ್ಟದೆ ಇರುವ ಕಾರಣ ಮಣ್ಣು ಕುಸಿದು ಬಿದ್ದು ರಾತ್ರಿಕಾಲದಲ್ಲಿ ಸಂಚಾರಮಾಡುವುದೇ ಕಷ್ಟವಾಗಿದೆ ಅದಕ್ಕೆ ಸರಿಯಾಗಿ ಸಾಕಷ್ಟು 'ಲಾಟನು'ಗಳೇ ಇಲ್ಲ ಇದೆಲ್ಲ ಕಾರಣಗಳಿಂದ ಇಲ್ಲಿ 'ಯೂನಿಯನ್ ಅಥವಾ 'ಮ್ಯುನಿಸಿಪಾಲಿಟಿ'ಯನ್ನು ಏರ್ಪಡಿಸುವುದು ಅತ್ಯಗತ್ಯ

ಈಗ ಉಡುಪಿ 'ಟೌನ್' ಅನ್ನಿಸಿಕೊಳ್ಳುವ ಭಾಗದಲ್ಲಿ ೧೯೫೭ ಮನೆಗಳು ೧೯೧೧ನೇ ಇಸವಿ ಖಾನೇಷುಮಾರಿ ಮೇರೆಗೆ ಇದ್ದವು 'ಯೂನಿಯನ್' ಆದರೆ ಒಂದು ಮನೆಗೆ ೪ ಆಣೆಯಿಂದ ೧೦ ರೂಪಾಯಿ ವರೆಗೆ ಕಂದಾಯ ವಸೂಲಾಗಬಹುದು ೧೦ ರೂಪಾಯಿ ಕಂದಾಯ ಕೊಡುವ ಮನೆಗಳು ಬಹಳ ಕಡಿಮೆ ಸರಾಸರಿ ೨ ರೂಪಾಯಿ ಮೇರೆಗೆ ಎಣಿಸಿದರೆ ವರ್ಷಕ್ಕೆ ೪೦೦೦ ರೂಪಾಯಿ ವಸೂಲಾಗಬಹುದು ಇದರಲ್ಲಿ ಅನೇಕ ಅಂಶವು 'ಯೂನಿಯನ್' ಸಿಬ್ಬಂದಿಗೆ ಹೋಗಬಹುದಾದ ಕಾರಣ ಹಲವು ಮನೆಗಳ ಮೇಲೆ ಕಂದಾಯ ಹೊರಿಸಿ ಕೆಲವು ಮನೆಗಳ ಜೀವನ ನಡೆಸುವಂತಾಗುವುದಲ್ಲದೆ ಹೆಚ್ಚಿನ ಉಪಯೋಗ ಸಿಕ್ಕುವುದೆಂದು ನಾವು ನಂಬುವುದಿಲ್ಲ. 'ಮ್ಯುನಿಸಿಪಾಲಿಟಿ' ಎಂದೊಡನೆ ಬೆದರಿ ಹೇಳುವರು ಆದರೆ ನಮಗೆ ಅದರಿಂದ ಅಗತ್ಯವಿರುವಷ್ಟೇ ಹಣವನ್ನು ವಸೂಲುಮಾಡಲಿಕ್ಕೆ ಹೆಚ್ಚಿನ ಅನುಕೂಲತೆಗಳಿವೆ ಕಲ್ಯಾಣಪುರ ಹೊಳೆಯಿಂದ ಮಲ್ಪೆಯ ವರೆಗಿನ ಸ್ಥಳ ಮ್ಯುನಿಸಿಪಾಲಿಟಿಗೆ ಸೇರಬೇಕು. ಮ್ಯುನಿಸಿಪಾಲಿಟಿಯ ಗಡಿಯನ್ನು ಮಲ್ಪೆವರೆಗೆ ವಿಸ್ತರಿಸುವುದು ಅತ್ಯಗತ್ಯ ಏತಕ್ಕೆಂದರೆ ಅದು ಬಂದರು ಸ್ಥಳವಾಗಿಯೂ ಆಗಾಗ ವಾಂತಿಭೇದಿ ಮುಂತಾದ ಅಂಟು ರೋಗಗಳಿಗೆ ಆಸ್ಪದಕೊಡುವ ಸ್ಥಳವಾಗಿಯೂ ಇರುವ ಕಾರಣ ಉಡುಪಿ ಪೇಟೆಯವರು ತಮ್ಮ ಮನೆಯನ್ನು ಚೊಕ್ಕಟವಾಗಿಟ್ಟು ನೆರೆಯಲ್ಲಿ ಹೊಲಸನ್ನು ರಾಶಿ ಬಿದ್ದಿರುವಂತಾಗುವ ಈ ಸ್ಥಳವನ್ನು ಮ್ಯುನಿಸಿಪಾಲಿಟಿಯೊಳಗೆ ಸೇರಿಸುವುದು ಅತ್ಯಗತ್ಯ ಕಲ್ಯಾಣಪುರದಿಂದ ಮಲ್ಪೆಗೆ ರಸ್ತೆಯು ಬರುವ ಕಾರಣ ಹಂಗಾರಕಟ್ಟೆಯಲ್ಲಿ ಸೇರಿಕೊಳ್ಳುವ ಅನೇಕ ವ್ಯಾಪಾರ ಸಾಮಗ್ರಿಗಳು ಮಲ್ಪೆಗೆ ಬರಲಿಕ್ಕೆ ಹೆಚ್ಚಿನ ಅನುಕೂಲತೆಯಿದೆ ರೈಲು ರಸ್ತೆ ಮಲ್ಪೆಗೆ ಕಡಿಸಿದ್ದರೆ ಆಗ ಮಲ್ಪೆಯು ವ್ಯಾಪಾರವೂ ಹೆಚ್ಚಾಗುವುದು ನಿಶ್ಚಯ ಆಗ ಅಲ್ಲಿ ಸಿಕ್ಕುವ ತೆರಿಗೆಯು ಉಡುಪಿಯ ಪೇಟೆಯವರ ಕಂದಾಯ ಭಾರವನ್ನು ತಗ್ಗಿಸುವುದು ಇದಲ್ಲದೆ ಉಡುಪಿಯ ಪೇಟೆಯನ್ನು ಇನ್ನೂ ವಿಸ್ತರಿಸುವುದಾದರೆ ಪಶ್ಚಿಮಕ್ಕೆ ಒತ್ತಿಕೊಂಡು ಹೋಗಬೇಕಲ್ಲದೆ ಶುದ್ಧ ವಾಯು ಸಂಚಾರಕ್ಕೆ ಮುಖ್ಯವಾಗಿ ಕಡಲುಗಾಳಿಯ ಸೇವನೆಗೆ ಬೇರೆ ದಾರಿಯಿಲ್ಲ. ಈಗ ಸರಿಮಾಡಲು ನಿಶ್ಚಯಿಸಿರುವ ಕಾಡಬೆಟ್ಟು ರಸ್ತೆಯನ್ನು ಮುಂದಕ್ಕೆ ಕೊಂಡುಹೋಗಲು ಸಾಧ್ಯವಿದೆ ಮತ್ತು ಅಜ್ಜರ ಕಾಡಿನಲ್ಲಿ ದರಕಾಸ್ತಾದ ಸ್ಥಳಗಳಲ್ಲಿ ಅಲ್ಲಲ್ಲಿ ಮನೆಗಳು ಏಳುತ್ತಲೆ ಇವೆ. ಪೂರ್ವ ಪಶ್ಚಿಮ ಚಾಚಿಕೊಂಡಿರುವ ಮಲ್ಪೆ ರಸ್ತೆಗೆ ಸಮಾನಾಂತರವಾಗಿ ಸಂತೆಕಟ್ಟೆಯಿಂದ ಒಂದು ರಸ್ತೆ, ಇಗರ್ಜಿಯ ಒತ್ತಾಗಿರುವ ಕಾಡುಬೆಟ್ಟು ರಸ್ತೆ ಇವೆರಡು ಕಡಿಸಲ್ಪಟ್ಟರೆ ಅವುಗಳ ಇಕ್ಕಡೆಗಳಲ್ಲಿ ಹೊಸ ಗುಡಿಗಟ್ಟು ವೃದ್ಧಿಯಾಗಲಿಕ್ಕೆ ಸಂದೇಹವಿಲ್ಲ. ಅದೇ ರೀತಿಯಲ್ಲಿ ಮಠದ ಚೌಕಕ್ಕೆ ಇಳಿಯುವ ರಸ್ತೆಗಳನ್ನು ಅಗಲ ಮಾಡಲಿಕ್ಕೆ ಸಾಧ್ಯವಿಲ್ಲ; ಉಪ್ಪರಿಗೆ ಮನೆಗಳು ಕಿಕ್ಕಿರಿದು ಬಿದ್ದುಕೊಂಡಿವೆ. ಆದರೆ ಚೌಕಕ್ಕೆ ಪಶ್ಚಿಮ ಕಡೆಯಿಂದ ಒಂದೆರಡು ರಸ್ತೆಗಳನ್ನು ತೆರದು ಪಶ್ಚಿಮದ ಗಾಳಿಯು ಚೌಕದಲ್ಲಿ ಚೆನ್ನಾಗಿ ಸುಳಿಯುವಂತೆ ಮಾಡುವುದು ಅತ್ಯಗತ್ಯ. ಅಜ್ಜರಕಾಡಿನಲ್ಲಿ ಹೊಸ ಬಾವಿಗಳು ಕಡಿಸಿದ್ದಲ್ಲಿ ಇರುವ ಹಳೇ ಕೆರೆಯನ್ನು ದುರುಸ್ತಿಮಾಡಿ ಅದರ ಬಳಿ ಒಂದೆರಡು ಛತ್ರಗಳನ್ನು ಕಟ್ಟಿಸಿದ್ದಲ್ಲಿ ಪರಿಶೆ ಜನಗಳು ಬಂದು ಇಳಿಯುವುದಕ್ಕೆ ಅನುಕೂಲವಾಗುವುದು. ಇದಲ್ಲದೆ ಪರಊರ ಗೃಹಸ್ಥರನ್ನು ಈಗಲೇ ಇಕ್ಕಟ್ಟಾಗಿರುವ ಬೀದಿಗಳ ಸಂದುಗಳಲ್ಲಿ ತೂರಿಕೊಂಡಿರುವ 'ಹೊಟೇಲು'ಗಳ ಕೈವಶ ಒಪ್ಪಿಸಿ ಕೊಡುವುದು, ಹೆಚ್ಚಿನ ಅನರ್ಥಕ್ಕೆ ಕಾರಣವಾಗುವುದು. ಕಳೆದ ವರ್ಷ ಹಬ್ಬಿದ ಸಿಡುಬಿನ ಅವಾಂತರದಿಂದ ಎಷ್ಟೋ ಜನರು ಬಲಿಬಿದ್ದಿರುವುದು ಜನರ ಜ್ಞಾಪಕದಲ್ಲಿರಬಹುದು. ಸಾವಿರಗಟ್ಲೆಯಿಂದ ಜನರು ಹೊರಊರುಗಳಿಂದ ಒತ್ತಿ ಒತ್ತಿ ಬರುವಾಗ ಎಷ್ಟು ರೀತಿಯ ಅಂಟುರೋಗಗಳು ಬಾರದಿಲ್ಲ

ಂದು ನೆಲಸಬಹುದೆಂದೂ ಕ್ಯ ಮುಂಚೆ ಹಾಳಿದ ಮೇಲೆ ವ್ಯಥಪಡುವುದಕ್ಕಿಂತ ಮುಂಜಾಗ್ರತೆ ಮಾಡುವುದು ಲೇಸೆಂದು ಬೇರೆ ಹೇಳಲಾರೆವು ಇದಲ್ಲದೆ ಈಗೀಗಲೇ ಸೊಳ್ಳೆಗಳ ಚಿತ್ರ, ನೊಣಗಳ ಕಾಟ ಇವು ಹೆಚ್ಚುತ್ತಲೇ ಇವೆ ಇವು ಒಂದು ಸಲ ನೆಲಸಿದವೆಂದರೆ ಅವುಗಳನ್ನು ತಳ್ಳಿಬಿಡುವುದು ಸುಲಭಸಾಧ್ಯವಲ್ಲ ಇದನ್ನೆಲ್ಲ ಈಗಲೇ ವಿಚಾರ ಮಾಡಿ ಜನರು ತಮ್ಮ ಆರೋಗ್ಯ ಸಂರಕ್ಷಣೆಯ ಪಥವನ್ನು ಹಿಡಿಯಬೇಕೆಂದು ಕೋರುತ್ತೇವೆ.

ವಾಙ್ಮಯ ಕಲಾಶಾಸ್ತ್ರಗಳ ಅಭಿವೃದ್ಧಿಯ ಸಮಾಚಾರ.

(Progress of Literature, Science and Art)

ಪಾರ್ಲಕಿಮಿಡಿಯ ಮುಖ್ಯ ಓಢ್ರ ಪಂಡಿತರಾದ ಶ್ರೀಯುತ ಗೋಪೀನಾಥ ನಂದೋ ಎಂಬುವರು ಒಂದು ಓಢ್ರ ಕೋಶವನ್ನು ಪ್ರಚುರಗೊಳಿಸಿರುವರು ಇದಕ್ಕೆ ಸಹಾಯ ದ್ರವ್ಯವಾಗಿ ಮದ್ರಾಸು ಸರಕಾರದವರು ೫೦ ಪ್ರತಿಗಳನ್ನು ಪಡೆದು ಒಂದು ಸಾವಿರ ರೂಪಾಯಿಯನ್ನೂ, ಬಿಹಾರ ಸರಕಾರದವರು ನೂರು ಪ್ರತಿಗಳನ್ನು ಕೊಂಡುಕೊಂಡು ಎರಡು ಸಾವಿರ ರೂಪಾಯನ್ನೂ ಕರ್ತೃವಿಗೆ ಕೊಡಲು ಆಜ್ಞಾಪಿಸಿರುವರು.

* * *

ಕ್ಷಕಿರಣಗಳ ಮೂಲವಾಗಿ ವಯಸ್ಸನ್ನು ಶಾಸ್ತ್ರರೀತ್ಯಾ ನಿರ್ಧಾರವಾಗಿ ಹೇಳಲು ಬರುವ ಒಂದು ವಿಧಾನವು ಅಲ್ಲಹಾಬಾದಿನ ಒಂದು ಮೊಕದ್ದಮೆಯ ಸಂದರ್ಭದಲ್ಲಿ ತಿಳಿಯ ಬಂದಿತು ಲಖನೌವಿನ ಸಿವಿಲ್ ಸರ್ಜನರಾದ ಲೆಫ್ಟಿನೆಂಟ್ ಕರ್ನಲ್ ಒರ್ಡ್‌ವುಡ್‌ರವರೂ ಅಲ್ಲಿಯ ಆಸ್ಪತ್ರೆಯ ಕ್ಷಕಿರಣಗಳಲ್ಲಿ ಪ್ರವೀಣರಾದ ಡಾ ಓಮರ್ ಎಂಬುವರೂ ಕೊಟ್ಟ ಸಾಕ್ಷ್ಯದಲ್ಲಿ "ಮೊಣಕೈಯ ಗಂಟಿನ ಕೆಲವು ಎಲುಬುಗಳು ೧೯ ವರ್ಷ ವಯಸ್ಸಿನ ವರೆಗೂ, ಬೇರೆ ಕೆಲವು ೧೭-೧೮ ವರ್ಷ ವಯಸ್ಸಿನ ವರೆಗೂ ಒಂದಕ್ಕೊಂದು ಕೂಡುವುದಿಲ್ಲವೆಂದೂ, ಇದನ್ನು ಕ್ಷಕಿರಣಗಳ ಮೂಲಕ ಖಂಡಿತವಾಗಿ ಕಂಡುಹಿಡಿಯಬರುವುದೆಂದೂ" ಹೇಳಿದರು.

* * *

ಮದ್ರಾಸು ಯೂನಿವರ್ಸಿಟಿಯ ವಿದ್ಯಾಭ್ಯಾಸದ ಬೇರೆ ಬೇರೆ ವಿಷಯಗಳಿಗೆ ಬೋರ್ಡ್ ಆಫ್ ಸ್ಟಡೀಸ್ ಎಂಬ ತಜ್ಞರ ಉಪಸಭೆಗಳಿರುವವು ಒಂದೊಂದು ಉಪಸಭೆಯಲ್ಲಿ ಹನ್ನೆರಡು ಮಂದಿ ದೊಡ್ಡ ಮನುಷ್ಯರಿರುವರು ದ್ರಾವಿಡ ವರ್ಗದ ಭಾಷೆಗಳಿಗೆಲ್ಲ ಒಟ್ಟಾಗಿ ಹನ್ನೆರಡು ಜನರುಳ್ಳ ಒಂದೇ ಉಪಸಭೆಯು ಇದುವರೆಗೆ ಇದ್ದಿತು ಈ ಏರ್ಪಾಡು ಅಸಮರ್ಪಕವೆಂದೂ, ದ್ರಾವಿಡ ವರ್ಗದ ಪ್ರತಿ ಭಾಷೆಗೂ ಬೇರೆ ಬೇರೆ ಸಭೆ ಇರಬೇಕೆಂದೂ ಕಳೆದ ವರ್ಷ ಸಿನೇಟು ಸಭೆಯವರು ನಿರ್ಣಯಿಸಿದ ಮೇರೆಗೆ ಬರುವ ಅಕ್ಟೋಬರಿನ ಸಿನೇಟು ಸಭೆಯಲ್ಲಿ ಈ ವಿಷಯವು ತೀರ್ಮಾನವಾಗಿ ಏರ್ಪಟ್ಟ ಕ್ಷಿಪ್ರದಲ್ಲಿಯೆ ಪ್ರತಿಪ್ರತ್ಯೇಕ ಉಪಸಭೆಗಳು ನೇಮಕವಡುವಂತಿದೆ ಎಂದು ತಿಳಿಯಬರುತ್ತಿದೆ

* * *

ಉತ್ತರ ಮತ್ತು ದಕ್ಷಿಣ ಧ್ರುವ ಪ್ರದೇಶಗಳಲ್ಲಿ ಸಂಚರಿಸಿ ಹಿಮಾಲಯ ಶಿಖರಗಳನ್ನೇರುವುದಕ್ಕಾಗಿ ಹಿಂದುಸ್ಥಾನಕ್ಕೆ ಬಂದು ಸರಕಾರದವರ ಅಪ್ಪಣೆ ದೊರೆಯದೆ ಭಗ್ನ ಮನೋರಥರಾದ ಡಾ| ಎಫ್ ಎ ಕುಕ್ (F A Cook) ಎಂಬುವರು ಕಲ್ಕತ್ತೆಯ ಒಂದು ಪತ್ರಿಕೆಯ ಪ್ರತಿನಿಧಿಯು ಕೇಳಿದ ಪ್ರಶ್ನೆಗಳಿಗೆ ಉತ್ತರವಾಗಿ "ಅಧಿಕ ಪರಿಶೋಧನೆಗಾಗಿ ತಾನು ಪುನಃ ಮುಂದಿನ ವರ್ಷ ಉತ್ತರ ಧ್ರುವ ಪ್ರದೇಶಕ್ಕೆ ಹೋಗಲುದ್ದೇಶಿಸಿರುವೆನೆಂದೂ, ಆ ಪ್ರದೇಶವು ಜನರು ಭಾವಿಸುವಷ್ಟು ಕೇವಲ ಅಸಹ್ಯ ಸೀತವಲ್ಲವೆಂದೂ, ಅಲ್ಲಿ ಸಜೀವ ಪ್ರಾಣಿಗಳು ವಾಸಿಸಿರುವುದೇ ಆ ತಪ್ಪು ಅಭಿಪ್ರಾಯವನ್ನು ಖಂಡಿಸುವುದೆಂದೂ, ಬೇಸಗೆಯ ದಿನಗಳಲ್ಲಿ ಅಲ್ಲಿ ಹುಲ್ಲು ಯಥೇಷ್ಟವಾಗಿ ಬೆಳೆಯುವುದರಿಂದ ಸುಖವಾಗಿ ಕಾಲಕ್ಷೇಪ ಮಾಡಲು ಅಭ್ಯಂತರವಿಲ್ಲವೆಂದೂ, ಭೂಪ್ರಾಣಿಗಳನ್ನೂ, ಜಲಜಂತುಗಳನ್ನೂ ಹಿಡಿಯುವ ಉದ್ಯೋಗವನ್ನು ಅಲ್ಲಿ ಲಾಭಕರವಾಗಿ ನಡೆಯಿಸಿಕೊಳ್ಳಲು ಬರುವಂತಿದೆಯೆಂದೂ, ರುಶ್ಯದ ಉತ್ತರಭಾಗದ ಧ್ರುವ ಪ್ರದೇಶದ ರೇವಾದ ಆರ್ಚಂಜಲ್ (Archangal) ಪಟ್ಟಣವನ್ನು ಅತ್ಯಧಿಕವಾದರೆ ಪ್ರತಿ ವರ್ಷದ ಅಕ್ಟೋಬರು ವರೆಗೆ ಮಾತ್ರ ಉಪಯೋಗಿಸಿಕೊಳ್ಳಬರುವುದೆಂದೂ ದಕ್ಷಿಣ ಧ್ರುವ ಪ್ರದೇಶವು ಉತ್ತರ ಧ್ರುವದಷ್ಟು ಮನೋಹರವಲ್ಲವೆಂದೂ ಮುಂತಾಗಿ ಅಪ್ಪಣೆ ಕೊಡಿಸಿದರು.

* * *

ಲಾಹೋರಿನ 'ಪಂಜಾಬೀ' ಪತ್ರಿಕೆಯಲ್ಲಿ ಈಗ ಲಂಡನಿನಲ್ಲಿರುವ ಮಿ| ಸಾಗರಚಂದ್ರರೆಂಬ ಭಾರತೀಯ ವಿದ್ಯಾರ್ಥಿಯು 'ಇಟಲೀ ದೇಶದ ಶಿಕ್ಷಣ ಪದ್ಧತಿ'ಯನ್ನು ಕುರಿತು ಒಂದು ಲೇಖನವನ್ನು ಬರೆದಿರುವರು 'ವಿದ್ಯಾರ್ಥಿಗಳಿಗೆ ಆ ದೇಶದಲ್ಲಿ ಸರಾಸರಿ ತಿಂಗಳಿಗೆ ೭೫ ರೂಪಾಯಿ ತಗಲುವುದೆಂದೂ ಸ್ವಲ್ಪ ಬಿಗಿ ಹಿಡಿದು ವೆಚ್ಚಮಾಡಿದರೆ ೫೦ ರೂಪಾಯಿ ಕೂಡ ಸಾಕಾಗುವಂತಿದೆಯೆಂದೂ, ಇಟಲೀ ದೇಶದಲ್ಲಿ ಉಚ್ಚ ಶಿಕ್ಷಣವೆಲ್ಲ ದಮಾರ್ಥವಾಗಿಯೇ ಕೊಡಲ್ಪಡುತ್ತಿರುವುದೆಂದೂ, ವಿದ್ಯಾರ್ಥಿಗಳಿಗೆ ಒಂದು ಕಾಸು ಕೂಡ ವೆಚ್ಚವಾಗದಂತೆ ಪಾಠಪುಸ್ತಕಗಳನ್ನು ಕೂಡ ದೊರೆತನದವರೇ ಒದಗಿಸಿ ಕೊಡುವರೆಂದೂ, ಆ ದೇಶೀಯರಿಗೆ ಭಾರತೀಯರ ವಿಷಯದಲ್ಲಿಯೂ, ಪ್ರಾಚ್ಯ ಭಾಷೆಗಳ ವಿಷಯದಲ್ಲಿಯೂ, ಅನನ್ಯ ಸಾಧಾರಣವಾದ ಪ್ರೇಮವಿರುವುದೆಂದೂ, ಮುಖ್ಯವಾಗಿ ವೈದ್ಯಶಾಸ್ತ್ರವನ್ನು ಉತ್ಕೃಷ್ಟವಾಗಿ ಕಲಿಯಬಯಸುವವರು ಬೇರೆ ಯಾವ ದೇಶಕ್ಕೂ ಹೋಗಲಾಗದೆಂದೂ ಮುಂತಾಗಿ ಆ ಲೇಖನದಲ್ಲಿ ಬರೆಯಲಾಗಿದೆ.

ಪತ್ರವ್ಯವಹಾರ.

ಉಡುಪಿ ಟೋಲ್‌ಗೇಟು

ಬೋರ್ಡಿನವರು ಇಲ್ಲಿ ಇತ್ತಲಾಗೆ ಒಂದು ಟೋಲ್‌ಗೇಟನ್ನು ತೆರೆದಿರುವರು. ಇದು ಬಡಗು ಪೇಟೆಯ ತುದಿಯಲ್ಲಿ ಸಂಕದ ಸಮೀಪ ಕಾರ್ಕಳದಿಂದಲೂ ಕುಂದಾಪುರದಿಂದಲೂ ಬರುವ ರಸ್ತೆಗಳು ಕೂಡುವಲ್ಲಿ ಇದೆ ಶಹರದ ಗಡಿಯು ಇದರಿಂದ ಇನ್ನೂ ಉತ್ತರಕ್ಕೂ ಪೂರ್ವಕ್ಕೂ ಅರ್ಧ ಅರ್ಧ ಮೈಲು ಆಚೆಗೆ ಇರುವದು ಅಂದ ಮೇಲೆ ಇದು ಸ್ವಲ್ಪ ಹೆಚ್ಚು ಕಡಿಮೆ ಶಹರದ ಮಧ್ಯದಲ್ಲಿಯೇ ಇರುವದೆಂಬದು ಸ್ಪಷ್ಟವಾಗುತ್ತದೆ ಒಂದು ಶಹರದ ಮಧ್ಯ ಸ್ಥಳದಲ್ಲಿ ಸುಂಕವನ್ನು ವಸೂಲುಮಾಡತಕ್ಕ ಒಂದು ಟೋಲ್‌ಗೇಟನ್ನು ತೆರೆದಿರುವದು ಇದೇ ಮೊದಲನೆಯದೆಂತ ತೋರುತ್ತದೆ. ಕೆಲವರು ಶಾಲೆಯ ಹುಡುಗರು ಸ್ಯಾಕಲ್ ಹತ್ತಿ ಶಾಲೆಗೆ ಹೋಗಬೇಕಾದರೆ ಈ ಗೇಟು ದಾಟಿ ಹೋಗಬೇಕು, ಈ ಗೇಟಿಗೆ ಸುಂಕ ಕೊಡಬೇಕು. ಉದ್ಯೋಗಸ್ಥರು ಜಟ್ಕಾ ಅಥವಾ ಸಾರೋಟುಗಳಲ್ಲಿ ಕೋರ್ಟು ಕಚೇರಿಗಳಿಗೆ ಹೋಗಬೇಕಾಗಿದ್ದರೆ ಈ ಗೇಟು ಹಾದುಹೋಗಬೇಕು, ಗೇಟಿಗೆ ಸುಂಕ ಕೊಡಬೇಕು. ಉಪಾಧ್ಯಾಯರುಗಳು ಶಾಲೆಗೆ ವಾಹನಗಳಲ್ಲಿ ಹೋಗುವದಾದರೆ ಗೇಟು ಹಾದುಹೋಗಬೇಕು, ಸುಂಕ ಕೊಡಬೇಕು ವರ್ಗದಾರರು ತಮ್ಮ ಮನೆಯಲ್ಲಿ ತಯಾರಾಗುವ ಬೂದಿ ಗೊಬ್ಬರಗಳನ್ನು ತಮ್ಮ ಗದ್ದೆಗಳಿಗೆ ಸಾಗಿಸಬೇಕಾಗಿದ್ದರೆ ಗೇಟು ಹಾದು ಹೋಗಬೇಕು, ಸುಂಕ ಕೊಡಬೇಕು ತಮ್ಮ ಭೂಮಿಯಿಂದ ಸೊಪ್ಪು ಸೌದೆಗಳನ್ನು ತಮ್ಮ ಮನೆಗಳಿಗೆ ಸಾಗಿಸಬೇಕಾಗಿದ್ದರೆ ಗೇಟು ಹಾದು ಹೋಗಬೇಕು, ಸುಂಕ ಕೊಡಬೇಕು. ಸಾರೋಟುಗಳಲ್ಲಿ ಕಡ್ಯಾಳಿ ಎಂಬಲ್ಲಿಯ ದುರ್ಗಾ ದೇವಸ್ಥಾನಕ್ಕೆ ಹೋಗತಕ್ಕವರು ಗೇಟು ದಾಟಿ ಹೋಗಬೇಕು, ಸುಂಕ ಕೊಡಬೇಕು ಮರಗಳಲ್ಲಿರತಕ್ಕ ಆನೆಗಳು ನೀರಿನ ಕಡೆಗೆ ಹೋಗಬೇಕಾಗಿದ್ದರೆ ಗೇಟು ದಾಟಿ ಹೋಗಬೇಕು, ಸುಂಕ ಕೊಡಬೇಕು — ಈ ಗೇಟಿನ ದೆಸೆಯಿಂದ ಇಲ್ಲಿ ಈಗ ಕಟ್ಟಿಗೆಗೆ ವಿಪರೀತ ಕ್ರಯ ಏರಿರುವದು. ಇಷ್ಟುಮಾತ್ರವಲ್ಲ ಇನ್ನೊಂದು ಸ್ವಾರಸ್ಯವೇನಂದರೆ— ಈ ಗೇಟನಿಂದ ಉತ್ತರಕ್ಕೆ ಕಲ್ಯಾಣಪುರ ಹೊಳೆಗೂ, ಭದ್ರಗಿರಿ ಹೊಳೆಗೂ, ದಕ್ಷಿಣ ಉದ್ಯಾವರ ಹೊಳೆಗೂ ಸುಮಾರು ೪-೫ ಮೈಲು ಮಾತ್ರ ದೂರವಿರುವದು ಬ್ರಹ್ಮಾವರ ಕೊಚ್ಚಿಕಾರರ ಮನೆಯಿಂದ ಕಟಪಾಡಿ ಸ್ಯಾಕರಲ್ಲಿಗೆ ಒಂದು ಬಂಡಿಯು ಹೋಗಿ ಬರಬೇಕಾಗಿದ್ದರೆ (ಸುಮಾರು ೧೦ ಮೈಲು ಅಂತರ) ಭದ್ರಗಿರಿ ಹೊಳೆ, ಕಲ್ಯಾಣಪುರ ಹೊಳೆ, ಉಡುಪಿ ಗೇಟು, ಉದ್ಯಾವರ ಹೊಳೆ, ಹಿಂದೆ ಬರುವಾಗ ಹಾಗೆಯೇ ಉದ್ಯಾವರ ಹೊಳೆ, ಉಡುಪಿ ಗೇಟು, ಕಲ್ಯಾಣಪುರ ಹೊಳೆ, ಭದ್ರಗಿರಿ ಹೊಳೆ ಇಷ್ಟೆಲ್ಲ ಸ್ಥಳಗಳಲ್ಲಿ ಸುಂಕ ಕೊಟ್ಟು ಬರಬೇಕು: ಸುಮಾರು ಬಾಡಿಗೆಯಷ್ಟೇ ಈ ಸುಂಕವೂ ಆಗುತ್ತದೆ. ಇಷ್ಟು ಹೊಳೆಗಳ ಮಧ್ಯದಲ್ಲಿ ತಿರಿಗಿ ಒಂದು ಗೇಟು ಆಗಬೇಕೆಂತ ತಮಾಷೆ ಕಂಡದ್ದು ಆಶ್ಚರ್ಯವೇ ಸರಿ. ಇಲ್ಲಿ ಒಂದು ಗೇಟು ಆಗಲೇಬೇಕೆಂತ ಇರುತ್ತಿದ್ದರೆ ಶಹರು ಬಿಟ್ಟು ಪೂರ್ವಕ್ಕೆ ಸಗರಿ ಸಮೀಪ ಕಾರ್ಕಳ ರಸ್ತೆಯಲ್ಲಿ ಒಂದು ಗೇಟನ್ನು ತೆರಿಯುತ್ತಿದ್ದರೆ ಯಾರೊಬ್ಬರು ಉಸಿರಾಡುತ್ತಿದ್ದಿಲ್ಲ ಇಲ್ಲಿಂದ ಕಾರ್ಕಳಕ್ಕೆ ೨೪ ಮೈಲು ಮಾತ್ರ ಇರುವದರಿಂದ ಅದು ಅನ್ಯಾಯವಾಗುತ್ತಿದ್ದಿಲ್ಲ. "ಎತ್ತು ಕರುಹಾಕಿತು, ಕೊಟ್ಟಿಗೆಯಲ್ಲಿ ಕಟ್ಟು" ಎಂಬ ಗಾದೆಯಂತೆ ಮೀಟಿಂಗಿನಲ್ಲಿ ಯಾರೋ ಒಬ್ಬರು ಪುಣ್ಯಾತ್ಮರು ಸೂಚಿಸಿದರು; ಯಾರೋ ಒಬ್ಬರು ಮಹಾಪುರುಷರು ಅದನ್ನು ಅನುಮೋದಿಸಿದರು. ಗುಣ ದೋಷ ವಿಚಾರಿಸದೆ ಪ್ರೆಸಿಡೆಂಟರು ಮಂಜೂರುಮಾಡಿದ್ದಾಗಿರಬೇಕು. ಇದರಿಂದ ಈ ಊರ

ಜನರು ಎಷ್ಟು ಅನುಸಂಕಟಗಳಿಗೆ ಒಳಗಾದರೆಂಬದನ್ನು ಯಾರೂ ಊಹಿಸಬಹುದು. ಮ॥ ರಾ॥ ಶಿವಭಟ್ಟರಂತಹ ವಿಚಾರಶೀಲರು ಅಂದಿನ ಮೀಟಿಂಗಿನಲ್ಲಿ ಇರುತ್ತಿದ್ದರೆ ಇಂತಹ ಅಸಂಗತಗಳಿಗೆ ಅವಕಾಶವಿರುತ್ತಿರಲಿಲ್ಲ. ಇದು ಒರೇ ಅರಣ್ಯ ರೋಧನವಲ್ಲದೆ ಫಲಕಾರಿಯಲ್ಲ ಎಂಬದು ನಿಜವಾದರೂ ಊದುವ ಶಂಖ ಊದಿಬಿಟ್ಟೆ, ಕೇಳುವದಾದರೆ ಕೇಳಲಿ, ಬಿಡುವುದಾದರೆ ಬಿಡಲಿ.

ಪಟ್ಟಣಿಗ

ಬಿಲ್ಲವರು ವೈಷ್ಣವರೋ?

ಕಳೆದ ವಾರದ ಸ್ವದೇಶಾಭಿಮಾನಿ ಪತ್ರಿಕೆಯಲ್ಲಿ ಬಿಲ್ಲವರು ವೈಷ್ಣವರೆಂಬದಾಗಿ "ಸ್ಮಾರ್ತ"ರು ಬರೆದ ಲೇಖನಾಭಿಪ್ರಾಯವನ್ನು ನೋಡಿ ಆಶ್ಚರ್ಯಪಡುತ್ತೇನೆ. ಬಿಲ್ಲವರು ಹರಿಸೇವೆಮಾಡಿ ಮುದ್ರೆ ಹಾಕುವವರಿಂದಲೂ ತಿರುಪತಿಯಾತ್ರೆ ಮಾಡುವದರಿಂದಲೂ, ತುಲಸೀ ಆರಾಧನೆ ಮಾಡುವದರಿಂದಲೂ ವೈಷ್ಣವರೆಂದೆನ್ನಲು ಕಾರಣವಿಲ್ಲ. 'ಸ್ಮಾರ್ತ'ರ ಅಭಿಪ್ರಾಯದಂತೆ ಶೈವರೆನ್ನಿಸುವ ಬಂಟರಲ್ಲಿಯೂ ಈ ಸಂಪ್ರದಾಯವು ಇರುವದು. ಅಂದ ಮೇಲೆ ಬಂಟರು ವೈಷ್ಣವರಾಗಬೇಕು. ಮೇಲಿನದೊಂದೇ ಕಾರಣದಿಂದ ಬಿಲ್ಲವರು ವೈಷ್ಣವರೆಂದು ಸಾಧಿಸಲು ಕಾರಣವಿಲ್ಲ. ತಿರುಪತಿ ದೇವಸ್ಥಾನದ ಅಧಿಕಾರಿಯು ಯಥಾರ್ಥ ಸ್ಮಾರ್ತರು. ಶಿವನೇ ಅವರ ಕುಲದೇವರು. ಆದರೂ ಅವರು ವಿಷ್ಣು ಆರಾಧನೆ ಮಾಡುತ್ತಾರೆ. ಅಂದರೆ ಅವರೂ ವೈಷ್ಣವರಾಗಿ ಬಿಟ್ಟರೋ ಎಂಬದನ್ನು ನನ್ನ ಸಂದೇಹ ನಿವೃತ್ತಿಗಾಗಿ "ಸ್ಮಾರ್ತ"ರು ಇನ್ನೊಂದು ಪತ್ರಿಕೆಯಲ್ಲಿ ದಯವಿಟ್ಟು ವಿವರಿಸಬೇಕೆಂತ ವಿಜ್ಞಾಪಿಸುವೆನು.

ಬಿಲ್ಲವರು ಯಥಾರ್ಥ ಸ್ಮಾರ್ತರೂ, ಭಾಗವತಧರ್ಮಾಚರಣಯುಕ್ತರೂ ಆಗಿರುವರು. ವಿಷ್ಣು ಶಿವರೆಂಬ ಭೇದಬುದ್ಧಿಯಿಂದೊಡಗೂಡಿದ ಮತಾಭಿಮಾನವು ಇವರಲ್ಲಿರದು. ಬಿಲ್ಲವರು ವೈಷ್ಣವಾರಾಧನೆಯನ್ನು ಮಾಡುವಂತೆಯೇ, ಶಿವಗೋತ್ರರೆನ್ನಿಸುವ ಭೂತಾದಿಗಳನ್ನು ಆರಾಧಿಸುತ್ತಾ ಬರುವ ಸಂಗತಿಯು 'ಸ್ಮಾರ್ತ'ರಿಗೆ ತಿಳಿಯದ ವಿಷಯವಲ್ಲ. ಊರ್ಧ್ವಪುಂಡ್ರವನ್ನು ಹಚ್ಚುವಂತೆಯೇ ಬಿಲ್ಲವರು ತಿರ್ಯಕ್ಪುಂಡ್ರಧಾರಣವಾದ ವಿಭೂತಿಧಾರಣಾ ವಿಧಿಯನ್ನು ಕೂಡಾ ಬಹು ಪುರಾತನಕಾಲದಿಂದ ಆಚರಿಸುತ್ತಿದ್ದಾರೆಂಬದು ವಿಚಾರಮೂಲಕ ತಿಳಿದೀತು. ಅಲ್ಲದೆ ಅಕಳಂಕ ಗುಣವಂತರಾದ ಆ ಮಹಾತ್ಮ ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿಯವರು 'ಸ್ಮಾರ್ತ'ರ ತಪ್ಪುಗ್ರಹಿಕೆಗೆ ಬಾಧ್ಯರಲ್ಲ. ಸ್ವಾಮಿಯವರು ಶ್ರೀಗೋಕರ್ಣನಾಥ ದೇವಸ್ಥಾನದಲ್ಲಿ ಶಿವಲಿಂಗವೊಂದನ್ನು ಮಾತ್ರವಲ್ಲ, ಆಯಾಯಾ ಭಜಕರಿಗೆ ಅನುಕೂಲವಾಗುವಂತೆ, ದೇವಿ, ವಿಘ್ನೇಶ್ವರ, ಷಣ್ಮುಖ ಮುಂತಾದ ಮೂರ್ತಿಗಳನ್ನೂ ಪ್ರತಿಷ್ಠೆಮಾಡಿರುವರು. ವಿನಹ ಶ್ರೀವೆಂಕಟರಮಣನಾರಾಧನೆಯು ಆ ಕ್ಷೇತ್ರದಲ್ಲಿ ನಡಿಯುತ್ತಾ ಬರುತ್ತಿರುವದು.

"ಶಿವಸ್ಯ ಹೃದಯಂ ವಿಷ್ಣುಃ ವಿಷ್ಣೋಶ್ಚ ಹೃದಯಂ ಶಿವಃ" ಎಂಬ ಶ್ರುತಿವಚನಾನುಸಾರವಾಗಿ ಬಿಲ್ಲವರು, ಶಿವವಿಷ್ಣುಗಳ ಭೇದಭಾವವನ್ನು ಕಲ್ಪಿಸದೆ ಆಚರಿಸುವ ಪದ್ಧತಿಯನ್ನು ನೋಡಲಾಗಿ ಇವರು ಸ್ಮಾರ್ತರೆಂದು ಸ್ಪಷ್ಟವಾಗುವದು.

ಪತ್ರಬಾಹುಳ್ಯಭಯದಿಂದ ನನ್ನ ಅಭಿಪ್ರಾಯವನ್ನು ಇಷ್ಟರಲ್ಲೇ ಮುಕ್ತಾಯ ಪಡಿಸುತ್ತೇನೆ. ಸ್ಮಾರ್ತರ ಉತ್ತರ ತಿಳಿದೊಡನೆ ಉಳಿದ ಸಂಗತಿಗಳ ಕುರಿತು ವಿಸ್ತರಿಸಿ ಬರೆಕೊಳ್ಳುವೆನು. ತಿ

ಶ್ರೀಗೋಕರ್ಣನಾಥ ಭಜಕನಾದ ಬಿಲ್ಲವನೊಬ್ಬ.

ವಾಚಕ ಮಹಾಶಯರೇ,

ಕಳೆದ ಶುಕ್ರವಾರ ಮಧ್ಯಾಹ್ನ 2 ಘಂಟೆ ಸಮಯದಲ್ಲಿ ಹಯಗ್ರೀವ ಮುದ್ರೆಯಿಂದ ಉದ್ಯಾವರಾಚಾರ್ಯರು ಹಂಚಿದ ಗಣೇಶ ಚತುರ್ಥಿ ವ್ರತದ ವಿಷಯಕವಾದ ನೋಟೀಸನ್ನು ನೋಡಿದವನಾದೆ. ತತ್ಕ್ಷಣದಲ್ಲಿಯೇ ಸ್ವದೇಶಾಭಿಮಾನಿ ಆಫೀಸಿಗೆ ಹೋಗಿ ಲೇಖನವನ್ನು ಬರೆದುಕೊಟ್ಟೆ. ಆದರೆ ಅವಾಗ ಸ್ವದೇಶಾಭಿಮಾನಿಯು ಮುಕ್ಕಾಲು ಭಾಗ ಪ್ರಿಂಟು ಆಗಿದ್ದರಿಂದ ಆ ದಿನವೇ ಅದಕ್ಕೆ ಜವಾಬನ್ನು ಪ್ರಕಟಿಸಲಿಕ್ಕೆ ಆಗಲಿಲ್ಲವೆಂತ ತಿಳಿದೆ.

ಉದ್ಯಾವರಾಚಾರ್ಯರು ತಮ್ಮ ಪಂಚಾಂಗದಲ್ಲಿ ಮರವೆಯಿಂದಲೂ, ಕೈತಪ್ಪಿನಿಂದಲೂ ಉಂಟಾದ ತಪ್ಪನ್ನು ಪ್ರಿಂಟುಮಾಡಿಸಿ ಆಗಿಹೋಯಿತು. ಹಾಗೆ ಉಂಟಾದ ತಪ್ಪನ್ನು ಅದೇ ಪಂಚಾಂಗದಲ್ಲಿ ಶುದ್ಧಾಶುದ್ಧ ಪತ್ರಿಕೆಯಿಂದ ತಿದ್ದಿ ಸರಿಪಡಿಸಬಹುದಾಗಿತ್ತು. ಅಥವಾ ಬೇರೆಯವರು ಆ ತಪ್ಪನ್ನು ಕಂಡುಹಿಡಿದು ಹೇಳಿದಾಗಲಾದರೂ ಸರಿಯೆಂದು ಒಪ್ಪಿಕೊಳ್ಳುವುದು ವಿಹಿತವಾಗಿತ್ತು. ಹಾಗೆ ಒಪ್ಪಿಕೊಳ್ಳದೆ ಅದೇ ಅಶುದ್ಧವನ್ನು ಶುದ್ಧವೆಂದು ಸಿದ್ಧಾಂತಪಡಿಸುವುದಕ್ಕೆ ಅಪಂಡಿತರಾದ ಕಂಡವರ ಮಾತನ್ನು ಕೇಳಿಯೂ, ಕೆಲವು ಚಾಟು ಶ್ಲೋಕಗಳ ಮೇಲೆಯೂ ವಿಶ್ವಾಸವಟ್ಟು ಸರ್ವ ಸ್ಮೃತಿಪುರಾಣೇತಿಹಾಸಾದಿಗಳ ಪ್ರಕಾರ ಭಾನುವಾರವೇ ಆಗಬೇಕಾದ ಗಣೇಶ ಚತುರ್ಥಿ ವ್ರತವನ್ನು ಸೋಮವಾರವಾಗಬೇಕಾಗಿ ನೋಟೀಸುಗಳನ್ನು ಪ್ರಿಂಟುಮಾಡಿಸಿ ಹಂಚಿಸಿ ವೃಥಾ ಶ್ರಮಪಟ್ಟದ್ದನ್ನೂ ನೋಡಿದರೆ ಯಾರಿಗೆ ತಾನೇ ವಿಷಾದವುಂಟಾಗಲಾರದು? ಹಾಗೆ ಮಾಡುವುದು ಭೇದಬುದ್ಧಿಯಲ್ಲವೇ? ಪಂಚಾಂಗಗಳು ಶುದ್ಧವಾಗಿದ್ದರೆ ವೈರಿ ಪಂಚಾಂಗ ಮತ್ತು ಬೇರೆ ಪಂಚಾಂಗಗಳು ಎಂಬ ಭೇದವನ್ನು ವಿಚಕ್ಷಣರಾದ ಯಾರೂ ತಿಳಕೊಳ್ಳಲಾರರು. ಅಶುದ್ಧವಾದ ಪಂಚಾಂಗಕ್ಕಿಂತಲೂ ಶುದ್ಧವಾದ ವೈರಿ ಪಂಚಾಂಗವು ಸಾವಿರ ಪಾಲು ಲೇಸು. ಈ ಭರತಖಂಡದಲ್ಲಿ ಶೈವ ವೈಷ್ಣವಾದಿ ಭೇದಗಳೂ, ಮತಸಾಂಪ್ರದಾಯಗಳೂ, ಎಷ್ಟೇ ಇದ್ದರೂ, ಗಣೇಶ ಚತುರ್ಥಿ ವ್ರತ ವಿಚಾರದಲ್ಲಿ ಇವುಗಳು ವಿಧವಿಧವಾಗಿರುವದೆಂಬ ಅಂಶವನ್ನು ಉದ್ಯಾವರಾಚಾರ್ಯರ ನೋಟೀಸಿನಿಂದ ಮಾತ್ರ ತಿಳಿಯಬೇಕಾಯಿತು. ಈ ಉದ್ಯಾವರಾಚಾರ್ಯರು ಶ್ರೀ ಸಂಸ್ಥಾನ ಗೋಕರ್ಣ ಮಠಕ್ಕೆ ಸೇರಿದವರೆಂದು ಹೇಳುತ್ತಾರೆ. ಅಂಥಾ ಮಠದವರೆಲ್ಲರೂ ಭಾನುವಾರವೇ ಆಚರಿಸಿದ್ದಾರೆ. ಮಾತ್ರವಲ್ಲ, ಶ್ರೀ ಸಂಸ್ಥಾನ ಪರ್ತಕಾಳಿ ಮಠದಲ್ಲಿಯೂ ಭಾನುವಾರವೇ ಆಚರಿಸಿರುತ್ತಾರೆ. ಇದನ್ನೆಲ್ಲಾ ನೋಡುವಾಗ ಉದ್ಯಾವರಾಚಾರ್ಯರು ಯಾವ ಮಠದ ಅನುಯಾಯಿಗಳೆಂತ ಗೊತ್ತು ಮಾಡಲು ಆಗುವುದಿಲ್ಲ. ಗಣೇಶ ಚತುರ್ಥಿ ವ್ರತಾಚರಣೆಯಲ್ಲಿ ಮಾತ್ರ ತಾವು ಯಾವ ಮಠವನ್ನಾದರೂ ಅನುಸರಿಸತಕ್ಕವರಲ್ಲವೆಂತ ಆಚಾರ್ಯರಂಥವರು ಜನರಿಗೆ ತಮ್ಮ ವರ್ತನೆಯಿಂದ ವ್ಯಕ್ತಗೊಳಿಸುವದು ಉಚಿತವಲ್ಲ. ಇಂಥಾ ವರ್ತನೆಯನ್ನು ಆಚಾರ್ಯರು ಕೈಕೊಂಡ ಬಳಿಕ ಇವರ ಪಂಚಾಂಗದ ಮೇಲೆ ಅಶ್ರದ್ಧೆಯನ್ನುಂಟುಮಾಡಬೇಕಾಗಿ ಬೇರೆಯವರು ಪ್ರಯತ್ನಮಾಡತಕ್ಕ ಅಗತ್ಯವೇ ಇಲ್ಲ. ಉದ್ಯಾವರಾಚಾರ್ಯರು ತೋರಿಸಿದ ೭॥ ವತ ೧೦ ಘಳಿಗೆನಂತರ ಮಧ್ಯಾಹ್ನವು (ನೋಟಯಂತ್ರ ಮಧ್ಯಾಹ್ನ ವ್ಯಾಪಿನೀ) ೭॥ ಆಧಾರದಿಂದ ೨ ದಿನಗಳಲ್ಲೂ ಮಧ್ಯಾಹ್ನಕ್ಕೆ ಚತುರ್ಥಿ ಇಲ್ಲದಿರೋಣವು ಶಶವಿಷಾಣ (ಮೊಲಕೋಡು)ದಂತೆ ಅಸಂಗತವಾಗಿದೆ. ಯಾಕಂದರೆ, ತಿಥಿಯು ೬॥ ಘಳಿಗೆ ಕಮ್ಮಿಯಾಗಿ ಬರುವುದೇ ಇಲ್ಲ, ಈ ರೀತಿ ಇರುವುದರಿಂದ ಉದ್ಯಾವರಾಚಾರ್ಯರು ತೋರಿಸಿದ ಮಧ್ಯಾಹ್ನಕಾಲವೂ ಆಚಂದ್ರಾರ್ಕ ವರೇಗೂ ಸಿಕ್ಕುವ ಹಾಗಿಲ್ಲ.

ಐಕ್ಯ ಮತ್ತು ಬಂದ ಈ ಎರಡು ವಚನಗಳ ಅರ್ಥವು ಇವುಗಳ ಪರಸ್ಪರ ಸಂಬಂಧವನ್ನು ಇವರು ಆಚಾರ್ಯರಾದರೂ ಸರಿಯಾಗಿ ತಿಳಿಯಲಾರದೆ-ಹೋದದ್ದು ಆಶ್ಚರ್ಯವೇ ಸರಿ. ಇವರು ಈ ವಿಚಾರದಲ್ಲಿ ಬರೆದಿರುವ ಮಾತುಗಳನ್ನು ಓದಿ ನೋಡಿದರೆ ಇವರು ಈ ವಿಚಾರವನ್ನು ಕೂಪಮಂಡೂಕ ದೃಷ್ಟಿಯಿಂದ ಮಾಡಿರುವರೆಂದು ಬುದ್ಧಿವಂತರೆಲ್ಲರಿಗೂ ತಿಳಿಯದೆ ಇರದು. ಯಾಕಂದರೆ ಸೃಷ್ಟಿಕರ್ತನು ವಿವರಿಸಲು ಅಸಾಧ್ಯವಾದ ಭೇದರಾಶಿಯುಳ್ಳ ಸಕಲ ಸ್ಥಾವರ ಜಂಗಮ ವಸ್ತುಗಳನ್ನು ಈ ಜಗತ್ತಿನಲ್ಲಿ ನಿರ್ಮಿಸಿರುವನಾದರೂ ಇವುಗಳೆಲ್ಲವೂ ತಮ್ಮ ಭೇದಗಳ ಮೂಲಕ ಆ ವಿಶ್ವಕರ್ತನಲ್ಲಿ ತೋರಿಬರುವ ಐಕ್ಯವನ್ನು ಸೂಚಿಸಿ ಸೃಷ್ಟಿ ಸೌಂದರ್ಯವನ್ನು ಮೆರೆಸುವಂಥ ವಿಚಾರವು ಈ ಆಚಾರ್ಯರಿಗೆ ತೋರಿಬಾರದೆ ಇದ್ದದ್ದು ಬಹಳ ವಿಷಾದಕರವೇ ಸರಿ! ಕಲಿಯುಗದ ಅಂತ್ಯದ ಭವಿಷ್ಯವನ್ನು ಆಚಾರ್ಯರು ಸೂಚಿಸಿರುವಾಗ ಅವರ ಸ್ಮೃತಿಪಥಕ್ಕೆ ಬಾರದಿರುವ ಕೆಲವು ಮಾತುಗಳನ್ನು ತಮ್ಮ ಬರವಣಿಗೆಯಲ್ಲಿ ಸೇರಿಸಿಕೊಳ್ಳಬೇಕೆಂತ ವಿಜ್ಞಾಪಿಸಿ ಈ ಲೇಖನವನ್ನು ಮುಗಿಸುತ್ತೇನೆ. ಕಲಿಯುಗದಲ್ಲಿ ದೈತ್ಯ ಸ್ವಭಾವದ ಜನರು ಜನನಕ್ಕೆ ಬಂದು ವ್ರತಾದಿಗಳನ್ನು ಭಂಗಪಡಿಸುವರೆಂಬುದೇ ಈ ಮಾತುಗಳ ಮುಖ್ಯ ಸಾರಾಂಶವಾಗಿದೆ.

ಯತಾರ್ಥ ವಾದಿ.

ನೋಟೀಸು

ಗತಿಸಿದ ಜಾಫರ ಮೇಗ್ರಿ ಸೇಟರ ಬಾಬತು ಜಪ್ಪಿನಲ್ಲಿರುವ ಸುಮಾರು 3 ಎಕ್ರೆ ವಿಸ್ತೀರ್ಣದ ತೋಟ ಮತ್ತು ಮನೆಯನ್ನು ಈ ಕೆಳಗೆ ದಸ್ಕತು ಮಾಡಿದವರು ಮಾರುವರು. ಜೆಪ್ಪು ಕಡವು, ಜೆಪ್ಪು ಹುತ್ತು ಬೋಳಾರ ರಸ್ತೆಗಳು ಕೂಡುವ ಸ್ಥಳಕ್ಕೆ ಎದುರಾಗಿ ಈ ಮನೆ ಮತ್ತು ತೋಟವು ಇರುತ್ತದೆ.

ಇವುಗಳನ್ನು ಕ್ರಯಕ್ಕೆ ಪಡೆಯಲು ಅಪೇಕ್ಷಿಸುವವರು ತಾವು ಕೊಡಲಿಕ್ಕೆ ಸಿದ್ಧರಿರುವ ಕ್ರಯದ ಮೊಬಲಗುಗಳನ್ನು ಕೆಳಗೆ ದಸ್ಕತು ಮಾಡಿದವರಿಗೆ ಸೂಚಿಸಬಹುದು.

ಜೆ. ಎಚ್. ಎ. ಮಸ್ಕರೇಂಞಾಸ್, ಬಿ. ಎ., ಎಲ್. ಎಲ್. ಬಿ.
ಹೈಕೋರ್ಟ್ ವಕೀಲ್,
ಗತಿಸಿದ ಜಾಫರ್ ಮೇಗ್ರಿ ಶೇಟರ ಸೊತ್ತುಗಳ ಗಾರ್ಡಿಯನರು.

ಯುದ್ಧ ಸಮಾಚಾರ.

ತಾರೀಖು ೬ನೇ ಸಪ್ಟಂಬರ.

"ಸಿಂಬೆಲಿನ್ ಎಂಬ ಬ್ರಿಟಿಷರ ವ್ಯಾಪಾರದ ಇನ್ನೊಂದು ಹಡಗವನ್ನು ಜರ್ಮನ್ ಸಬ್‌ಮೆರ್ಯಾನ್ ನಾವೆಯು ಮುಳುಗಿಸಿರುವುದು. ಕೆಲಾಸಿಗಳು ಈ ನಾವೆಯಿಂದ ರಕ್ಷಿಸಲ್ಪಟ್ಟಿರುವರು. ಜರ್ಮನರು ಹೀಗೆ ಅಧಾರ್ಮಿಕ ವರ್ತನವನ್ನು ಕೈಕೊಂಡ ಸಬ್‌ಮೆರ್ಯಾನ್ ನಾವೆಗಳ ಮೂಲಕ ವ್ಯಾಪಾರದ ಹಡಗಗಳನ್ನು ಮುಳುಗಿಸುತ್ತಿರುವರಾದರೂ ಬ್ರಿಟಿಷರ ವ್ಯಾಪಾರ ನಾವೆಗಳ ಒಟ್ಟಿನ ಸಂಖ್ಯೆಯು ಯುದ್ಧ ಪ್ರಾರಂಭವಾದಾಗ ಇದ್ದಷ್ಟಕ್ಕಿಂತ ಈಗ ಹೆಚ್ಚಿರುವುದೆಂಬುದು ಮಿ। ಬಾಸ್ವರ್‌ರವರ ಒಂದು ಪತ್ರದಿಂದ ತೋರಿಬರುವದು.

[illegible] ವರುಷಗಳಿಂದ ೫೦ ವರುಷ ಪ್ರಾಯದವರ ಎಷ್ಟು ಜನರು [illegible] ರಾಷ್ಟ್ರದಲ್ಲಿರುವರೆಂಬ ಲೆಕ್ಕವನ್ನು ಜರ್ಮನರು [illegible] ತ್ತಿ[illegible]. ಜರ್ಮನರಲ್ಲಿ ಸೇನೆಗೆ ಬೇಕಾದ ಜನರು ತಟ್ಟಿ [illegible] ಇರ[illegible]ಂದ ೪೫ ವರುಷ ಪ್ರಾಯದಾಟಿದವರನ್ನೂ ಸಹ ಸೇನೆಗೆ ಕಳು[illegible]ಳ್ಳುವ ಇರಾದೆಯಿಂದ ಈ ಶೋಧನೆಯನ್ನು ನಡಿಸುತ್ತಿರುವರೆಂತ ಫ್ರೆಂಚರ ಸಮಾಚಾರಗಳಿಂದ ತಿಳಿದುಬರುತ್ತದೆ.

ಅಮೇರಿಕದ ಸಂಯುಕ್ತ ಸಂಸ್ಥಾನಗಳ ನ್ಯೂಪೋರ್ಟ್ ಎಂಬ ಬಂದರದಲ್ಲಿ ಬ್ರಿಟನಿಗೆ ಕಳುಹಿಸಿ ಕೊಡತಕ್ಕ ಧಾನ್ಯಗಳನ್ನು ರಾಶಿ ಹಾಕಿದ್ದರು. ಒಂದು ಮಿಲಿಯ ಬುಶಲುಗಳಷ್ಟಿರುವ ಈ ಧಾನ್ಯರಾಶಿಯು ಸುಟ್ಟುಹೋಗಿರುವುದು. ಇದನ್ನು ಒಯ್ಯಲು ಬರುವ ಬ್ರಿಟಿಷ್ ನಾವೆಗಳು ಬೆಂಕಿಯ ಈ ಅಪಾಯದಿಂದ ತಪ್ಪಿಸಿಕೊಂಡಿರುವವು. ಜರ್ಮನರ ಒಳಸಂಚಿನಿಂದ ಈ ಅಪಾಯವು ಸಂಭವಿಸಿರಬೇಕೆಂದು ಆ ಪ್ರಾಂತ್ಯಗಳ ಪೋಲೀಸಿನವರ ಅಭಿಪ್ರಾಯವಾಗಿದೆ.

ಇನ್ನು ಬರುವ ನಾಲ್ಕು ವರುಷಗಳೊಳಗೆ ಅಮೇರಿಕದವರು ೨೦ ಅಥವಾ ಸಾಧ್ಯವಾದರೆ ೪೦ ಡ್ರೆಡ್‌ನೋಟ್ ಯುದ್ಧನಾವೆಗಳನ್ನು ಕಟ್ಟಿಸಬೇಕೆಂತ ನಿರ್ಣಯಿಸಿರುವರು. ಪೂರ್ವರಣರಂಗದಲ್ಲಿ ಮುಖ್ಯದ ಝಾರರವರು ಬಂದಿರುವರು.

ಜರ್ಮನ ಮತ್ತು ಒಸ್ಟ್ರಿಯನರ ಯುದ್ಧ ಸಾಮಾಗ್ರಿಗಳನ್ನು ರುಮೇನಿಯದ ಮಾರ್ಗವಾಗಿ ಟರ್ಕಿಗೆ ಕಳುಹಿಸಿಕೊಡುತ್ತಿರುವಾಗ ದಂತೆ ರುಮೇನಿಯಾ ಸರಕಾರದವರು ಬಹಳ ಎಚ್ಚರದಿಂದಿದ್ದರೆ. ಸೇನಿಕರ ಚಿಕಿತ್ಸಾ ಸಾಮಾಗ್ರಿಗಳೆಂತ ಹೇಳಿ ೨೦ ಗಾಡಿಗಳು ತುಂಬ ಯುದ್ಧ ಸಾಮಾಗ್ರಿಗಳನ್ನು ಜರ್ಮನರು ಟರ್ಕಿಗೆ ಕಳಹಿಸಿಕೊಟ್ಟಿದ್ದರು. ಈ ಗಾಡಿಗಳು ರುಮೇನಿಯಾಕ್ಕೆ ಬಂದ ತಕ್ಷಣ ಅಲ್ಲಿಯ ಅಧಿಕಾರಿಗಳು ಇವುಗಳನ್ನು ಬಿಚ್ಚಿನೋಡಲು ವಿಷಕರವಾದ ಗಾಳಿಯನ್ನು ತಯ್ಯಾರಿಸಲು ಬೇಕಾದ ಸಾಮಾಗ್ರಿಗಳು ಅದರಲ್ಲಿದ್ದವೆಂಬುದಾಗಿ ತಿಳಿದುಬರುತ್ತದೆ.

ಸಪ್ಟಂಬರ ತಾ ೭.

ಮಾರ್ಮೊರಾ ಎಂಬ ಸಮುದ್ರದಲ್ಲಿ ಬ್ರಿಟಿಷರ ಜಲಾಂತರ್ಗಾಮಿ ನಾವೆಯು ಯಾಗ್ಲಿಸ್ಸಾರ್ ಎಂಬ ತುರ್ಕರ ಡಿಸ್ಟ್ರೋಯರ್ ಹಡಗವನ್ನು ಮುಳುಗಿಸಿಬಿಟ್ಟಿರುವುದು. 'ಬ್ಲೇಕ್ ಸೀ'ಯಲ್ಲಿ ಹಮಿಡಿಯಾ ಎಂಬ ತುರ್ಕರ ಯುದ್ಧನಾವೆಯೊಡನೆ ರುಷ್ಯಯನರ ಎರಡು ಯುದ್ಧನಾವೆಗಳು ಕಾದಾಡಿ ಹಮಿಡಿಯಕ್ಕೆ ಹಾನಿಯುಂಟುಮಾಡಿವೆ. ಈ ಡಿಸ್ಟ್ರೋಯರ್ ಹಡಗಗಳೊಡನೆ ರುಷ್ಯಯನರ ಕಲ್ಲಿದ್ದಲು ತುಂಬಿದ ನಾಲ್ಕು ಹಡಗಗಳಿದ್ದುವು. ಶತ್ರುಗಳು ಈ ಹಡಗಗಳನ್ನು ಕೈವಶಮಾಡಿಕೊಳ್ಳದಂತೆ ರುಷ್ಯಯನರೇ ಇವುಗಳನ್ನು ನಾಶಪಡಿಸಿದರು.

ಬ್ರಿಟಿಷರ ನೌಕಾಪಡೆಯನ್ನು ಅಮೇರಿಕದ ಮತ್ತು ಫ್ರೆಂಚ ಪ್ರತಿನಿಧಿಗಳಲ್ಲಿ ಕೆಲವರು ಸಂದರ್ಶಿಸಿ ಬಂದು ಈ ಪಡೆಯ ಮಹತ್ವದ ವರ್ಣನೆಯನ್ನು ವೃತ್ತಪತ್ರಿಕೆಗಳಲ್ಲಿ ಪ್ರಕಟಗೊಳಿಸಿರುತ್ತಾರೆ. ಬ್ರಿಟಿಷರ ನೌಕಾಬಲವು ಸಾಮರ್ಥ್ಯದಲ್ಲಿಯೂ, ಸಂಖ್ಯೆಯಲ್ಲಿಯೂ ಅದ್ವಿತೀಯವೂ, ಧುರೀಣವೂ ಆಗಿರುವುದರಿಂದ ಸಾಗರಗಳ ಮೇಲಣ ಪೂರ್ಣ ಅಧಿಕಾರವು ಬ್ರಿಟನಿನ ಕೈವಶದಲ್ಲಿಯೇ ಇರುವುದು. ಬ್ರಿಟಿಷ ನೌಕಾಪಡೆಯು ಜರ್ಮನರ ಜಲಾಂತರ್ಗಾಮಿ ನಾವೆಗಳನ್ನು ಬಹಳವಾಗಿ ನಾಶಪಡಿಸಿರುವುದರಿಂದ ಜರ್ಮನಿಯಲ್ಲಿ ಈ ಯುದ್ಧನಾವೆಗಳ ಬಗ್ಗೆ ಜನರು ದೊರೆಯುವಂಥಾದ್ದು ದುರ್ಲಭವಾಗಿದೆ. ಝುಫಲಿನ್ ನಾವೆಗಳಿಗೆ ಜನರು ಬೇಕೆಂತ ಹೇಳಿ ಜನರನ್ನು ಸಂಗ್ರಹಿಸಿಕೊಂಡು ಸಬ್ ಮೆರ್ಯಾನ್ ನಾವೆಗಳ ಕೆಲಸಕ್ಕೆ ಜನರನ್ನು ಜರ್ಮನರು ಕಳುಹಿಸುತ್ತಿದ್ದಾರೆಂತ ಈ ಸಂದರ್ಶನೆಯ ವೃತ್ತಾಂತದಿಂದ ತಿಳಿದುಬರುತ್ತದೆ.

ಪಶ್ಚಿಮ ರಣರಂಗದಲ್ಲಿ ಜರ್ಮನರ ನೆಲೆಗಳ ಮೇಲೆ ಮಿತ್ರರ ಸೇನೆಗಳು ತೋಪುಗಳನ್ನು ಹಾರಿಸುತ್ತಿವೆ. ಫ್ರೆಂಚರ ೪೦ ಆಕಾಶನಾವೆಗಳು ಸಾಅರ್‌ಬ್ರುಕೆ ಎಂಬಲ್ಲಿರುವ ಶತ್ರುಗಳ ಕಾರ್ಖಾನೆ ಇತ್ಯಾದಿಗಳ ಮೇಲೆ ತೋಟೆಗಳನ್ನು ಎಸೆದು ಅವುಗಳನ್ನು ನಾಶಪಡಿಸಿರುವುವು. ಫ್ರೆಂಚರ ಕೆಲ್ಕೆ ಬಂದರದ ಮೇಲೆ ಸಂಚರಿಸುತ್ತಿದ್ದ ಜರ್ಮನರ ಆಕಾಶನಾವೆಯನ್ನು ಕೆಳಗಿಳಿಸಿ ಅದರಲ್ಲಿದ್ದ ಯಂತ್ರಚಾಲಕರನ್ನೂ ಇತರರನ್ನೂ ಫ್ರೆಂಚರು ಸೆರೆಹಿಡಿದಿರುವರು.

ಅಮೇರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಜರ್ಮನರು ನಡಿಸುತ್ತಿರುವ ಒಳಸಂಚು ಹೊರಕ್ಕೆ ಬಿದ್ದಿರುವುದು. ಜರ್ಮನರ ರಾಯಭಾರಿಗಳು ಸಹ ಈ ಒಳಸಂಚಿನಲ್ಲಿ ಸೇರಿರುವರೆಂಬ ಆರೋಪಣೆಗಳು ಅಮೇರಿಕದ ಪತ್ರಗಳಲ್ಲಿ ಕಂಡುಬರುತ್ತವೆ.

ಪೂರ್ವ ರಣರಂಗದಲ್ಲಿ ಜರ್ಮನ್ ಸೇನೆಗೆ ಮುಂದರಿಸಲಿಕ್ಕಾಗದೆ ಅಲ್ಲಲ್ಲಿಯೇ ಕಾದಾಡುತ್ತ ನಿಲ್ಲಬೇಕಾಗಿದೆ. ಪೊಲ್ಹೊವಿಸ್ಕ ಜಿಲ್ಲೆಯಲ್ಲಿ ಮುಂದೆ ಹಾರಿಬರಲು ಪ್ರಯತ್ನಿಸಿದ ಜರ್ಮನರನ್ನು ರುಷ್ಯಯನರು ಕೆಡವಿಬಿಟ್ಟು, ಜರ್ಮನ್ ಸೇನಿಕರಲ್ಲಿ ಅನೇಕರನ್ನು ಸೆರೆಹಿಡಿದಿರುತ್ತಾರೆ.

ತಾರೀಖು ೮ನೇ ಸೆಪ್ಟಂಬರ.

೩೦ ರಿಂದ ೪೦ ಬ್ರಿಟಿಷರ ಯುದ್ಧನಾವೆಗಳು ಒಸ್ಟೆಂಡ್ ವರೆಗೆ ಬೆಲ್ಜಿಯಮಿನ ಕರಾವಳಿಯನ್ನು ತೋಪುಗಳನ್ನು ಹಾರಿಸಿ ಮುತ್ತಿದರೆಂತ ತೋರಿಬರುತ್ತದೆ.

ಅಂಗ್ಲೆಂಡದ ಪೂರ್ವ ಕರಾವಳಿಯ ಮೇಲೆ ಶತ್ರುಗಳ ವಾಯುನಾವೆಗಳು ಬಂದು ಸಂಚರಿಸುತ್ತ ಬೊಂಬಗಳನ್ನು ಎಸೆದಿರುತ್ತಾರೆ. ೧೫ ಜನ್ನ ಮನೆಗಳು ಹಾಳಾಗಿ ಹೋಗಿರುವವೆ. ೫ ಜನ ೬ ನಾಗರಿಕರು ಹತರಾಗಿರುವರು. ಇನ್ನು ಕೆಲವರು ಗಾಯಪಡೆದಿರುವರು.

ಪೂರ್ವ ರಣರಂಗದಲ್ಲಿ ಪ್ರೊಲ್ಹೊವಿಸ್ಕ ಎಂಬಲ್ಲಿ ರುಷ್ಯಯನರಿಗೂ ಜರ್ಮನರಿಗೂ ಕಠಿಣ ಕಾಳಗವು ನಡಿಯುತ್ತಿರವುದು.

ರುಷ್ಯಯನರ ಸೇನೆಗಳ ಸರ್ವ ನಾಯಕತ್ವವನ್ನು ಝಾರರವರು ವಹಿಸಿಕೊಂಡಿರುವರು.

ಸಿಬೆರಿಯಾ ರೈಲ್ವೆ ಮಾರ್ಗಗಳ ಮಧ್ಯ ಚೀನಾ ದೇಶದಲ್ಲಿರುವ ಒಂದು ಸಂಕವನ್ನು ಯಾರೋ ಜರ್ಮನರ ಗೂಢಚಾರರು ಮುರಿದುಬಿಡಬೇಕೆಂತ ಬೊಂಬಗಳನ್ನು ಎಸೆದು ಪ್ರಯತ್ನಿಸಿದರು. ಆದರೆ ಇವರ ಈ ಯತ್ನವು ನೆರವೇರಲಿಲ್ಲ.

ತಾರೀಖು ೯ನೇ ಸಪ್ಟಂಬರ.

ಪಶ್ಚಿಮ ರಣರಂಗದ ಅರ್ಗೋನ್ನೆ ಕಡೆಗಳಲ್ಲಿ ಜರ್ಮನ ಯುವರಾಜರ ಸೇನೆಯೊಡನೆ ಬಹಳ ಪರಾಕ್ರಮದಿಂದ ಕಾದಾಡುತ್ತ ಫ್ರೆಂಚರು ಶತ್ರುಗಳನ್ನು ಹಿಂದಟ್ಟುತ್ತಿರುವರು.

ಆಕಾಶನಾವೆಗಳ ಮೂಲಕ ಒಟ್ಟಿಗೆ ಈ ತನಕ ಶತ್ರುಗಳು ೧೯ ಸಲ ಬಂದು ಅಂಗ್ಲೆಂಡದ ಕರಾವಳಿಯ ಕೆಲವು ಪ್ರಾಂತ್ಯಗಳಲ್ಲಿ ಬೊಂಬಗಳನ್ನು ಎಸೆದರೂ ಇದರಿಂದ ವಿಶೇಷ ಹಾನಿಯುಂಟಾದಂತೆ ತೋರಿಬರುವದಿಲ್ಲ. ಆಕಾಶನಾವೆಗಳ ಬೊಂಬಗಳ ನಿಮಿತ್ತದಿಂದ ಈವರೆಗೆ ಮಡಿದವರು ೧೦೩ ಗಾಯ ಪಡೆದವರು ೨೭೦ ಎಂತ ತಿಳಿದುಬರುತ್ತದೆ.

ಪೂರ್ವ ರಣರಂಗದಲ್ಲಿ ಟಾರ್ನಪೋಲ್ ಎಂಬಲ್ಲಿ ರುಶ್ಯಯನರು ಜಯಹೊಂದಿರುವರು. ೮೦೦ ಜರ್ಮನ್ ಸೇನಿಕರನ್ನು ಸೆರೆಹಿಡಿದಿರುತ್ತಾರೆ. ಶತ್ರುಗಳ ೩೦ ಫಿರಂಗಿಗಳು ರಶ್ಯಯನರಿಗೆ ಸಿಕ್ಕಿಯವೆ. ಇತರ ಕಡೆಗಳಲ್ಲಿ ರುಶ್ಯಾ ದೇಶದ ನದಿಗಳೆಲ್ಲ ನೆರೆನೀರಿನಿಂದ ತುಂಬಿರುವದರಿಂದ ಜರ್ಮನರಿಗೆ ಮುಂದರಿಸಲು ಉಪಾಯವಿಲ್ಲದೆ ತಡೆಯುಂಟಾಗಿದೆ.

ಜರ್ಮನರು ಟರ್ಕಿಯನ್ನು ಯುದ್ಧದಲ್ಲಿ ಸೇರುವಂತೆ ಮಾಡಿ ಪ್ರಕೃತ ಯುದ್ಧ ಸಾಮಾಗ್ರಿಗಳಿಗೆಲ್ಲ ಖರ್ಚಿಗೆ ಬೇಕಾದ ಹಣವನ್ನಾಗಲಿ ಕೊಡದ್ದರಿಂದ ಸುಲ್ತಾನರಿಗೆ ಮನನೊಂದಿರುವುದೆಂಬ ವರ್ತಮಾನವಿರುವುದು.

ಸಪ್ಟಂಬರ ತಾ. ೧೦.

ಅಮೇರಿಕದ ಸಂಯುಕ್ತ ಸಂಸ್ಥಾನದಲ್ಲಿ ಒಳಸಂಚು ನಡಿಸುತ್ತಿದ್ದ ಆಸ್ಟ್ರಿಯಾದ ರಾಯಭಾರಿಯಾದ ಡಾಕ್ಟರ್ ಡುಂಬಾ ಎಂಬತನನ್ನು ಅಮೇರಿಕದಿಂದ ಹಿಂದಕ್ಕೆ ತರಬೇಕೆಂತ ಅಮೇರಿಕದ ಸರಕಾರದವರು ಆಸ್ಟ್ರಿಯದ ಸರಕಾರದವರನ್ನು ಕೇಳಿಕೊಂಡಿರುವರು.

ಪೂರ್ವರಣರಂಗದಲ್ಲಿ ರುಶ್ಯಯನರು ಸೆರತ್ ನದಿಯ ಬಳಿಯಲ್ಲಿ ಪಡೆದ ಇನ್ನೊಂದು ಜಯದ ವೃತ್ತಾಂತವು ಪೆಟ್ರೊಗ್ರೇಡಿನಲ್ಲಿ ಪ್ರಕಟಿಸಲ್ಪಟ್ಟಿರುತ್ತದೆ. ಶತ್ರುಗಳ ೭೦೦೦ ಜನ ಸೇನಿಕರನ್ನೂ, ೧೫೦ ಆಫೀಸರರನ್ನೂ, ಕೆಲವು ಫಿರಂಗಿಗಳನ್ನೂ ರುಶ್ಯನರು ಹಿಡಿದಿರುವರು.

ಸಪ್ಟಂಬರ ತಾ. ೧೧. ೧೨.

ಜುಲಾಯಿ ಅಂತ್ಯಕ್ಕೆ ಮುಗಿಯುವ ಒಂದು ವರುಷದಲ್ಲಿ ವ್ಯಾಪಾರ ಹಡಗಗಳು ೧೭೮ ಮುಳುಗಿಹೋಗಿಯವೆ. ಈ ಹಡಗಗಳ ಮೂಲಕ ನಷ್ಟವಾಗಿ ಹೋದ ಸಾಮಾಗ್ರಿಗಳ ಕ್ರಯವು ೧೭,೨೪೦,೨೦೦ ಪವನುಗಳಾಗಿರುತ್ತದೆ. ಹಡಗಗಳಲ್ಲಿ ಮಯ್ಯೋಣಾದ ವ್ಯಾಪಾರ ಸಾಮಾಗ್ರಿಗಳ ಒಟ್ಟಿನ ಮೌಲ್ಯದಲ್ಲಿ ಈ ನಷ್ಟದ ಸರಾಸರಿಯು ನೇಕಡಾ ೧ರಿಂತಿರವುದು.

ಪೂರ್ವ ರಣರಂಗದಲ್ಲಿ ರುಷ್ಯಯನರು ಗೆಲಿಸಿಯಾದಲ್ಲಿ ಮತ್ತೊಮ್ಮೆ ಜಯ ಹೊಂದಿರುವರು.

ಸರ್ಬಿಯದ ಬೆಲ್ಗ್ರೇಡ್ ಪಟ್ಟಣವು ಫ್ರೆಂಚರ ವಾಯುವಿಮಾನಗಳ ಮತ್ತು ಬ್ರಿಟಿಷ್ ನೌಕಾಸೇನೆಯ ರಕ್ಷಣೆಯಲ್ಲಿರುವದರಿಂದ ಒಸ್ಟ್ರಿಯನರಿಗೆ ಇದರ ಮೇಲೆ ಕೈಮಾಡಲು ಉಪಾಯವಿರದು.

ತಾರೀಖು ೧೩ನೇ ಸಪ್ಟಂಬರ.

ಜರ್ಮನಿಯ ಮತ್ತು ಅಮೇರಿಕದ ಸಂಯುಕ್ತ ಸಂಸ್ಥಾನಗಳೊಳಗೆ ಕಲಹ ಕಾರಣಗಳು ಬಲಹೊಂದುತ್ತಾ ಬರುತ್ತಿವೆ. ಜರ್ಮನರು ಅಮೇರಿಕದ ನಿವಾಸಿಗಳಿದ್ದ ಹಡಗಗಳನ್ನು ನಾಶಪಡಿಸಿದ ಬಗ್ಗೆ ಕೊಟ್ಟ ಅತೃಪ್ತಿಕರ ಸಮಾಧಾನವೂ ಅಮೇರಿಕದಲ್ಲಿ ಜರ್ಮನ ಗೂಢಚಾರರ ವರ್ತನೆಯೂ ಈ ಉಭಯ ರಾಷ್ಟ್ರಗಳೊಳಗೆ ತೋರಿಬರುವ ಅಸಂತುಷ್ಟಿಗೆ ಕಾರಣಗಳಾಗಿವೆ.

ಈ ದಿನದ ಯುದ್ಧ ವೃತ್ತಾಂತದಲ್ಲಿ ರುಷ್ಯಯನರ ಜಯಗಳ ಸಮಾಚಾರವು ವಿವರವಾಗಿ ಪ್ರಕಟಿಸಲ್ಪಟ್ಟಿರುವುದು. ಇತರ ರಣರಂಗಗಳಲ್ಲಿ ವಿಶೇಷ ವಾರ್ತೆಗಳೇನೂ ಇರವು.

ಉತ್ತರ ಹಿಂದೂಸ್ಥಾನ.

ನೇಪಾಳದ ರಾಜಕುಮಾರ ನರೇಂದ್ರ ವಿಕ್ರಮ ಶ್ಯಾ ಎಂಬವರ ಸೆಕ್ರೆಟರಿಯಾಗಿದ್ದ ರಾಮಭಟ್ಟ ಎಂಬವನು ೫೦,೦೦೦ ರೂಪಾಯಿ ಕ್ರಯವಾಗುವ ಆಭರಣಗಳನ್ನು ಕಳವುಮಾಡಿದ್ದರಿಂದ ಆತಗೆ ೭ ವರುಷದ ಕಠಿಣ ಕೈದು ಮತ್ತು ರೂ ೫೦೦ ಜುರುಮಾನೆ ವಿಧಿಸಿ ಕೊಟ್ಟ ತೀರ್ಪಿನ ಮೇಲೆ ಸದರಿ ರಾಮಭಟ್ಟನು ಅಪೀಲು ಮಾಡಿದ್ದಲ್ಲಿ ಅಲ್ಲಹಾಬಾದ್ ಸೆಶನ ಜಡ್ಜರು ಶಿಕ್ಷೆಯನು ಊರ್ಜಿತಪಡಿಸಿದರು.

ಜಾತಿಭೇದಗಳನ್ನು ಲಕ್ಷ್ಯಕ್ಕೆ ತಾರದಿರುವ ಈ ದೇಶದ ಹಿಂದುಗಳ ಮಹಾ ಸಭೆಯು ಇದೇ ಬರುವ ನವಂಬರ ತಾ ೪ರಲ್ಲಿ ಮುಂಬಯಿಯಲ್ಲಿ ಜರಗುವುದು.

ಹಿಂದೂಸ್ಥಾನದ ಸ್ತ್ರೀಯರಿಗೆ ವೈದ್ಯಕ ಶಿಕ್ಷಣವನ್ನು ಕೊಡುವ ಏರ್ಪಾಡಿಗೆ ಆಗತ್ಯವುಳ್ಳ ಸಹಾಯವು ಇಲ್ಲಿಯ ಯುನಿವರ್ಸಿಟಿಗಳಿಂದ ಪಡೆಯಬೇಕೆಂಬ ಉದ್ದೇಶದಿಂದ ಲಂಡನಿನಿಂದ ಮಿಸ್‌ಬೆಕ್ ಎಂಬವರು ಹಿಂದೂಸ್ಥಾನಕ್ಕೆ ತೆರಳಿರುತ್ತಾರೆ.

ಕಾರ್ಮಿಕೆಲ್ ಪ್ರಭುಗಳ ಪತ್ನಿಯರು ದೇಹಾಲಸ್ಯದ ನಿಮಿತ್ತ ಇನ್ನು ಸದ್ಯದಲ್ಲಿ ಕಲ್ಕತ್ತೆಯಿಂದ ವಿಲಾಯತಿಗೆ ತೆರಳುವರು.

ಮುಂಬಾಯಿ ಸಂಸ್ಥಾನದಲ್ಲಿ ಕೈಗಾರಿಕೆಗಳ ಅಭಿವೃದ್ಧಿಯನ್ನು ಹೇಗೆ ಸಾಧಿಸಬಹುದೆಂಬ ವಿಷಯವನ್ನು ಪರ್ಯಾ

ಪ್ರಕಟಣೆ

ಉಟಾಕಮಂಡ್, ತಾರೀಖು 27ನೇ ಆಗಸ್ಟು 1915ನೇ ಇಸವಿ.

ನಂ. 25 —

ಇಂಡಿಯಾ ಗವರ್ನ್‌ಮೆಂಟಿನವರ ಕ್ಲಪ್ತ ಫಾಯಿದೆಗೆ ಸಂದಾಯವಾಗುವ ಸಾಲವು.

ಪೋಸ್ಟ್ ಆಫೀಸಿನ ಮುಖಾಂತರ ಜನರು ಚಂದಾದಾರರಾಗುವ ವಿಷಯವಾಗಿ ಏರ್ಪಟ್ಟ ಶರ್ತಗಳ ಕುರಿತು ಪ್ರಕಟಣೆ.

ಗವರ್ನ್‌ಮೆಂಟಿನವರು ಈ ವರುಷದ ಸಾಲವನ್ನು ಒಂದು ಹೊಸ ವಿಧಾನದಲ್ಲಿ ಸೇಕಡಾ 4ರ ಬಡ್ಡಿಯಲ್ಲಿ ಎತ್ತುತ್ತಾರೆ ಅದು 1923ನೇ ಇಸವಿಯ ನವಂಬರ್ ತಿಂಗಳೊಳಗಾಗಿ ಸಂಪೂರ್ಣವಾಗಿ ಮರುಪಾವತಿ ಮಾಡಲ್ಪಡುವದು, ಪರಂತು ಗವರ್ನ್‌ಮೆಂಟಿನವರಿಗೆ ಇಷ್ಟವಿದ್ದರೆ 1920ನೇ ಇಸವಿಯ ಅಕ್ಟೋಬರ್ ತಿಂಗಳ ತರುವಾಯ ಯಾವಕಾಲದಲ್ಲಾದರೂ ಪಾವತಿ ಮಾಡಲ್ಪಡಬಹುದು

2 ಕಲ್ಕತ್ತಾ, ಮದ್ರಾಸ್, ಬೊಂಬಾಯಿ ಮತ್ತು ಇತರ ದೊಡ್ಡ ಮಧ್ಯಸ್ಥಳಗಳಲ್ಲಿ ವಾಡಿಕೆಯಾದ ರೀತಿಯಲ್ಲಿ ದರಖಾಸ್ತುಗಳನ್ನು ಅಂಗೀಕರಿಸಿ $4\frac{1}{2}$ ಕೋಟಿ ರೂಪಾಯಿ ಈ ಮೊದಲೇ ಎತ್ತಲ್ಪಟ್ಟಿರುವುದು, ಮತ್ತು ಇಷ್ಟರ ಮಟ್ಟಿಗೆ ಸದರೀ ಸಾಲವು ಈಗ ಭರ್ತಿಯಾಗಿದೆ ಆದರೆ ಅದು ವಿನಾ ಸಾಲವನ್ನು ಸಣ್ಣ ಮೊಬಲಗುಗಳಲ್ಲಿ ಕೊಡಲು ಇಷ್ಟವುಳ್ಳ ಜನರಿಗೆ, ಅವರು ಸೇವಿಂಗ್ಸ್ ಬ್ಯಾಂಕು ಡಿಪಾಜಿಟರರಾಗಿದ್ದರೂ ಅಲ್ಲದಿದ್ದರೂ, ಸೇವಿಂಗ್ಸ್ ಬ್ಯಾಂಕು ಕೆಲಸವನ್ನು ನಿರ್ವಹಿಸುವ ಅತ್ಯಂತ ಸಮೀಪದ ಪೋಸ್ಟ್ ಆಫೀಸಿನ ಮುಖಾಂತರ ಚಂದಾಕೊಡಲು ಒಂದು ವಿಶೇಷ ಸಂದರ್ಭವು ಕೊಡಲ್ಪಟ್ಟಿದೆ

ಹೇಗೆ ಚಂದಾದಾರರಾಗುವದೆಂಬುದು.

3 ಅಕ್ಟೋಬರ್ 30ನೇ ತಾರೀಖಿನವರೆಗೆ ಯಾವಕಾಲದಲ್ಲಾದರೂ ಟಪ್ಪಾಲ್ ಆಫೀಸಿನ ಮುಖಾಂತರ ಅರ್ಜಿಗಳನ್ನು ಮಾಡಬಹುದು

4 ಅರ್ಜಿಗಳು ನೂರು ರೂಪಾಯಿ ಯಾ ಅದರ ಅಪವರ್ತ್ಯಗಳ ಬಗ್ಗೆ (ಎಂದರೆ ರೂ. 100, 200, 300 ಈ ಮೇರೆಗೆ) ಮಾಡಲ್ಪಡಬೇಕು ಮತ್ತು ಯಾವನೊಬ್ಬ ಅರ್ಜಿದಾರನ ಸಂಗತಿಯಲ್ಲಿ 100 ರೂಪಾಯಿಗಳಿಗೆ ಕಡಿಮೆಯಾಗಿ ಮತ್ತು 5,000 ರೂಪಾಯಿಗಳಿಗೆ ಮೀರಿ ಇರಕೂಡದು.

ನೋಟ ಒಬ್ಬ ಅರ್ಜಿದಾರನು ಟಪ್ಪಾಲ್ ಆಫೀಸಿನ ಮುಖಾಂತರ ಈ ಮೊದಲೇ ಸೇಕಡಾ $3\frac{1}{2}$ ದರದ ಬಡ್ಡಿಯುಳ್ಳ ಪ್ರಾಮಿಸರಿ ನೋಟುಗಳನ್ನು ಪಡೆದಿರುತ್ತಾನಾದರೂ 5,000 ರೂಪಾಯಿಗಳ ವರೆಗೆ ಹೊಸ ಸಾಲಕ್ಕೆ ಅರ್ಜಿಮಾಡಬಹುದು.

5 ಅರ್ಜಿಮಾಡಲು ಅಪೇಕ್ಷಿಸುವ ಒಬ್ಬ ಮನುಷ್ಯನು ಇದರಡಿ ಕೊಟ್ಟಿರುವ ಫಾರ್ಮನ್ನು ಭರ್ತಿಮಾಡಬೇಕು, ಸದರೀ ಫಾರ್ಮನ್ನು ಸೇವಿಂಗ್ಸ್ ಬ್ಯಾಂಕು ಕೆಲಸವು ನಿರ್ವಹಿಸಲ್ಪಡುವ ಪ್ರತಿ ಒಂದು ಟಪ್ಪಾಲ್ ಆಫೀಸಿನಿಂದ ಸಹಾ ಪಡೆಯಬಹುದು. ಆತನು ಎಷ್ಟು ಮೊಬಲಗಿಗೆ ಅರ್ಜಿಮಾಡುತ್ತಾನೋ ಆ ಪೂರಾ ಮೊಬಲಗನ್ನು ಆಗಲೇ ಪಾವತಿ ಮಾಡಬೇಕು. ಆತನು ಒಬ್ಬ ಸೇವಿಂಗ್ಸ್ ಬ್ಯಾಂಕು ಡಿಪೋಜಿಟರಾಗಿದ್ದ ಪಕ್ಷದಲ್ಲಿ ಆತನು ತನ್ನ ಸೇವಿಂಗ್ಸ್ ಬ್ಯಾಂಕು ಲೆಕ್ಕದಲ್ಲಿರುವ ಮೊಬಲಗನ್ನು ಈ ಬಗ್ಗೆ ಉಪಯೋಗಿಸಬಹುದು, ಅಥವಾ ಆತನು ಹಣವನ್ನು ರೊಕ್ಕವಾಗಿಯೂ ಕೊಡಬಹುದು. ಅರ್ಜಿದಾರನು ಟಪ್ಪಾಲ್ ಆಫೀಸಿಗೆ ಸ್ವತಃ ಹೋಗಬಹುದು ಅಥವಾ ಒಬ್ಬ ನೌಕರನನ್ನು ಕಳುಹಿಸಲೂ ಬಹುದು. ಪಾವತಿ ಮಾಡಲ್ಪಟ್ಟ ಯಾವತ್ತೂ ಮೊಬಲಗುಗಳಿಗೆ ರಸೀದು ಕೊಡಲ್ಪಡುವುದು.

6 ಅರ್ಜಿದಾರನು ಪಾವತಿಮಾಡುವ ಪ್ರತಿ 100 ರೂಪಾಯಿಗಳ ಬಗ್ಗೆ ಅಷ್ಟು ಮೊಬಲಗಿನ ಗವರ್ನ್‌ಮೆಂಟ್ ಪ್ರಾಮಿಸರಿ ನೋಟುಗಳು ಆತನಿಗೆ ಕೊಡಲ್ಪಡುವುವು.

ಪ್ರಾಮಿಸರಿ ನೋಟುಗಳ ತಾಬೆ

7. ನೋಟುಗಳನ್ನು ಅರ್ಜಿದಾರನು ತನ್ನ ಸ್ವಂತ ತಾಬೆಯಲ್ಲಿ ಇಟ್ಟುಕೊಳ್ಳಬಹುದು ಅಥವಾ ಆತನಿಗೆ ಇಷ್ಟವಿದ್ದರೆ ಆತನ ಬಗ್ಗಾಗಿ ಅವು ಪೋಸ್ಟ್ ಆಫೀಸ್ ಅಧಿಕಾರಿಗಳ ತಾಬೆಯಲ್ಲಿ ಇಡಲ್ಪಡಬಹುದು ಯಾವ ರೀತಿಯು ತನಗೆ ಇಷ್ಟವೆಂಬುದನ್ನು ಆತನು ಅರ್ಜಿಯ ಫಾರ್ಮನ್ನು ಭರ್ತಿಮಾಡುವಾಗಲೇ ಅದರಲ್ಲಿ ನಮೂದಿಸತಕ್ಕದ್ದು ಆತನು ನೋಟುಗಳನ್ನು ತಾನೇ ಇಟ್ಟುಕೊಳ್ಳಲು ಅಪೇಕ್ಷಿಸುವದಾದರೆ ಅವು ಬಟವಾಡೆಗೆ ಸಿದ್ಧವಾದಾಗ ಆ ಕುರಿತು ಪೋಸ್ಟ್ ಆಫೀಸಿನವರು ಆತನಿಗೆ ತಿಳಿಯಪಡಿಸುವರು, ಮತ್ತು ಆತನು ಸ್ವತಃ ಹಾಜರಾದಲ್ಲಿ ಅವು ಆತನಿಗೆ ಕೊಡಲ್ಪಡುವವು. ಅವುಗಳನ್ನು ಟಪ್ಪಾಲ್ ಆಫೀಸಿನಲ್ಲಿಯೇ ಇಡಲು ಆತನು ನಿರ್ಣಯಿಸುವ ಪಕ್ಷದಲ್ಲಿ ಆತನು ಪುನಃ ಸ್ವತಃ ಹಾಜರಾಗಬೇಕೆಂದಿಲ್ಲ, ಆದರೆ ಟಪ್ಪಾಲ್ ಆಫೀಸಿನವರೇ ಅವು ತಲ್ಪಿರುತ್ತವೆ—ವ ಅವು ಆತನ ಬಗ್ಗಾಗಿ ತಾಬೆಯಲ್ಲಿಟ್ಟುಕೊಳ್ಳಲ್ಪಟ್ಟಿವೆ ಎಂಬುಧನ್ನು ಕುರಿತು ಒಂದು ಸಮಾಚಾರ ಪತ್ರವನ್ನು ಸಕಾಲದಲ್ಲಿ ಆತನಿಗೆ ಕಳುಹಿಸಿಕೊಡುವರು ಸದರೀ ನೋಟುಗಳನ್ನು ತಾನೇ ಇಟ್ಟುಕೊಳ್ಳಲು ಆತನು ಮುಂದೆ ಯಾವಾಗಲಾದರೂ ಅಪೇಕ್ಷಿಸುವದಾದರೆ ಆಗ ಅವು ಆತನ ವಶಕ್ಕೆ ಕೊಡಲ್ಪಡುವುವು

ಬಡ್ಡಿಯನ್ನು ಪಾವತಿಮಾಡೋಣ.

8. ಸಾಲಿಯಾನಾ ಸೇಕಡಾ 4ರ ದರದ ಬಡ್ಡಿಯು ಅರ್ಧ ವರ್ಷಕೊಮ್ಮೆ ಪಾವತಿ ಮಾಡಲ್ಪಡುವದು. ಎಂದರೆ ಪ್ರತಿ ವರ್ಷದ ಮೇ 31ನೇ ತಾರೀಖಿಗೆ ಸೇಕಡಾ 2ರಂತೆಯೂ ನವಂಬರ್ 30ನೇ ತಾರೀಖಿಗೆ ಸೇಕಡಾ 2ರಂತೆಯೂ ಸಲಾಯಿಸಲ್ಪಡುವದು. ಅರ್ಜಿಯ ತಾರೀಖಿನಿಂದ ಬರುವ ನವಂಬರ್ 30ನೇ ತಾರೀಖಿನ ವರೆಗಿನ ಭಿನ್ನಾಂಶದ ಬಗ್ಗೆ ಬಡ್ಡಿಯು ಪ್ರಾಮಿಸರಿ ನೋಟುಗಳನ್ನು ಅರ್ಜಿದಾರನು ಸ್ವತಃ ಇಟ್ಟುಕೊಳ್ಳುವದಾದರೆ ಅವುಗಳನ್ನು ಬಟವಾಡೆಮಾಡುವ ಕಾಲದಲ್ಲಿ ನಗದಾಗಿ ಕೊಡಲ್ಪಡುವದು, ಅಥವಾ ಆತನು ನೋಟುಗಳನ್ನು ಪೋಸ್ಟ್ ಆಫೀಸ್ ಅಧಿಕಾರಿಗಳ ತಾಬೆಯಲ್ಲಿಯೇ ಇಡುವದಾದರೆ ಮುಂದಿನ ಕಲಮಿನಲ್ಲಿ ನಮೂದಿಸಿರುವ ಸೇವಿಂಗ್ಸ್ ಬ್ಯಾಂಕು ಲೆಕ್ಕದಲ್ಲಿ ಆತನ ಬಗ್ಗೆ ಜಮಾ ದಾಖಲುಮಾಡಲ್ಪಡುವದು.

9. ಅರ್ಜಿದಾರನು ತನ್ನ ಪ್ರಾಮಿಸರಿ ನೋಟುಗಳನ್ನು ಪೋಸ್ಟ್ ಆಫೀಸ್ ಅಧಿಕಾರಿಗಳ ತಾಬೆಯಲ್ಲಿಯೇ ಇಡಲು ನಿರ್ಣಯಿಸಿದ ಪಕ್ಷದಲ್ಲಿ ಪೋಸ್ಟ್ ಆಫೀಸ್ ಅಧಿಕಾರಿಗಳು ಪ್ರತಿ ಅರ್ಧ ವರ್ಷಕೊಮ್ಮೆ ಆತನ ಬಗ್ಗಾಗಿ ಬಡ್ಡಿಯನ್ನು ಪಡಕೊಂಡು ಈ ಬಗ್ಗಾಗಿ ಆತನ ಹೆಸರಲ್ಲಿ ಇಡಲ್ಪಡುವ ಒಂದು ಸೇವಿಂಗ್ಸ್ ಬ್ಯಾಂಕು ಲೆಕ್ಕದಲ್ಲಿ ಜಮಾ ದಾಖಿಲ್ ಮಾಡುವರು. ಇದಲ್ಲದೆ ಈ ಮೇರೆಗೆ ಬಡ್ಡಿಯನ್ನು ಪಡೆದುಕೊಂಡಾಗಲೆಲ್ಲಾ ಪೋಸ್ಟ್ ಆಫೀಸಿನವರು ಆಯಾಕಾಲದಲ್ಲಿ ಆತನಿಗೆ ಆ ಕುರಿತು ತಿಳಿಯಪಡಿಸುವರು. ಈ ಕೆಲಸದ ಬಗ್ಗೆ ಯಾವ ಫೀಸೂ ಹೊರಿಸಲ್ಪಡಲಿಕ್ಕಿಲ್ಲ ಮತ್ತು, ಅರ್ಧ ವರ್ಷದ ಬಡ್ಡಿಯ ಮೊಬಲಗನ್ನು ಪಾವತಿಮಾಡುವಾಗ ಇನ್‌ಕಮ್‌ಟ್ಯಾಕ್ಸು ಯಾವದೂ ಅದರಿಂದ ವಜಾಮಾಡಲ್ಪಡಲಿಕ್ಕಿಲ್ಲ.

ಆತನು ಪ್ರಾಮಿಸರಿ ನೋಟುಗಳನ್ನು ಸ್ವತಃ ಇಟ್ಟುಕೊಳ್ಳುತ್ತಾನಾದರೆ ಅರ್ಧ ವರ್ಷದ ಬಡ್ಡಿಯ ಮೊಬಲಗು ಪಾವತಿಮಾಡುವ ಕಾಲದಲ್ಲಿ ವಾಡಿಕೆಯಂತೆ ಬಡ್ಡಿಯ ಮೊಬಲಿಗಿನಿಂದ ಇನ್‌ಕಮ್‌ಟ್ಯಾಕ್ಸು ವಜಾಮಾಡಲ್ಪಡುವದು.

ಪ್ರಾಮಿಸರಿ ನೋಟುಗಳನ್ನು ವಿಕ್ರಯಿಸೋಣ.

10. ಇದರಲ್ಲಿ ವಿವರಿಸೋಣಾದ ನಡವಳಿತೆಯ ಮೇರೆಗೆ ಪೋಸ್ಟ್ ಆಫೀಸಿನ ಮುಖಾಂತರ ಕೊಂಡುಕೊಳ್ಳಲ್ಪಟ್ಟ ಈ ಹೊಸ ಸಾಲದ ಬಾಬತು ಪ್ರಾಮಿಸರಿ ನೋಟುಗಳನ್ನು ಹೊಂದಿರುವ ಒಬ್ಬ ಸೇವಿಂಗ್ಸ್ ಬ್ಯಾಂಕು ಡಿಪಾಜಿಟರನು ಯಾವ ಕಾಲದಲ್ಲಾದರೂ ಅವುಗಳನ್ನು ಯಾ ಅವುಗಳ ಯಾವದೊಂದು ಭಾಗವನ್ನು ವಿಕ್ರಯಿಸಲಿಕ್ಕೆ ಅಪೇಕ್ಷಿಸುತ್ತಾನಾದರೆ ಆತನ ಬಗ್ಗೆ ಪೋಸ್ಟ್ ಆಫೀಸಿನವರು ದಲಾಲಿ ಯಾ ಇತರ ಫೀಸುಗಳನ್ನು ಹೊರಿಸದೇನೆ ಅದರ ಕುರಿತು ವಿಲೇವಾರಿ ಮಾಡುವರು. ಇದರ ವಿಷಯ ಪೂರ್ಣ ಮಾಹಿತಿಯನ್ನು ಪೋಸ್ಟ್ ಆಫೀಸಿನಿಂದ ಯಾವ ಕಾಲದಲ್ಲಾದರೂ ಹೊಂದಬಹುದು.

ಅರ್ಜಿಯ ಫಾರ್ಮು.

ನಾದ ನಾನು 1915ನೇ ಇಸವಿಯ ಜುಲಾಯಿ 28ನೇ ತಾರೀಖಿನ ಇಂಡಿಯಾ ಗಜೇಟಿನ ವಿಶೇಷ (ಎಕ್ಸ್‌ಟ್ರಾರ್ಡಿನರಿ) ಸಂಚಿಕೆಯಾಗಿ ಪ್ರಾಯಿಷ್‌ಮಾಡಲ್ಪಟ್ಟ ಇಸ್ತಿಹಾರಿನಲ್ಲಿ ಪ್ರಕಟಿಸಲ್ಪಟ್ಟ ಕ್ರಮ ಪ್ರಕಾರ ಸಂದಾಯವಾಗುವ ಸೇಕಡಾ ನಾಲ್ಕರ ಬಡ್ಡಿಯ ಸಾಲದ ಬಗ್ಗೆ ರೂ ನ್ನು ಚಂದಾ ಕೊಡಲು ಈ ಮೂಲಕ ಅಪೇಕ್ಷಿಸುತ್ತೇನೆ

ನಾನು ದರಖಾಸ್ತುಮಾಡಿದ ಸಾಲದ ಮೊಬಲಗು ಆಗಿರುವ ರೂ ನ್ನು ನೂರಕ್ಕೆ ನೂರರಂತೆ ಪೂರಾ ಇದರೊಡನೆ ಠೇವಣಿ ಇಟ್ಟಿರುತ್ತೇನೆ.

ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕಿನಲ್ಲಿ ನನ್ನ ಲೆಕ್ಕದಲ್ಲಿ ಜಮಾ ಇರುವ ಮೊಬಲಗಿನ ಪೈಕಿ ನೂರಕ್ಕೆ ನೂರರಂತೆ ನಾನು ದರಖಾಸ್ತುಮಾಡಿದ ಸಾಲದ ಮೊಬಲಗಿಗೆ ಸರಿಯಾಗಿರುವ ರೂ ನ್ನು ಈ ಬಗ್ಗಾಗಿ ಉಪಯೋಗಿಸಿಕೊಳ್ಳಬಹುದಾಗಿ ನಾನು ಅಪೇಕ್ಷಿಸುತ್ತೇನೆ

ನೂರಕ್ಕೆ ನೂರರಂತೆ ನಾನು ದರಖಾಸ್ತುಮಾಡಿದ ಸಾಲದ ಮೊಬಲಗಿನ ಪೈಕಿ ರೂ ಈ ಮೂಲವಾಗಿ ಠೇವಣಿ ಇಟ್ಟಿರುತ್ತೇನೆ; ಮತ್ತು ಉಳಿದ ಮೊಬಲಗು ಎಂದರೆ ರೂ. ನ್ನು ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕಿನಲ್ಲಿ ನನ್ನ ಲೆಕ್ಕದಲ್ಲಿ ಜಮೆ ಇರುವ ಮೊಬಲಗಿನಿಂದ ಉಪಯೋಗಿಸಿಕೊಳ್ಳಬೇಕಾಗಿ ಅಪೇಕ್ಷಿಸುತ್ತೇನೆ

ಅನಾವಶ್ಯಕವಾದ ವಾಕ್ಯಗಳನ್ನು ಹೊಡೆದುಬಿಡತಕ್ಕದ್ದು.

ನನ್ನಿಂದ ಅಂಗೀಕರಿಸಲ್ಪಟ್ಟ ಸಾಲದ ಮೊಬಲಗನ್ನು ನನ್ನ ಬಗ್ಗೆ ಪೋಸ್ಟ್ ಮತ್ತು ಟೆಲಿಗ್ರಾಫ್ ಇಲಾಖೆಯ ಅಕೌಂಟಾಂಟ್ ಜನರಲ್‌ರವರು ಇಟ್ಟುಕೊಳ್ಳಬಹುದಾಗಿ ಮತ್ತು ಆ ಬಾಬತು ಬಡ್ಡಿಯು ನನ್ನ ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕು ಲೆಕ್ಕದಲ್ಲಿ ಆಯಾ ವಾಯಿದೆಗೆ ಜಮಾ ದಾಖಿಲುಮಾಡಬೇಕಾಗಿ ನಾನು ಅಪೇಕ್ಷಿಸುತ್ತೇನೆ

ನನ್ನಿಂದ ಅಂಗೀಕರಿಸಲ್ಪಟ್ಟ ಮೊಬಲಗಿನ ಬಗ್ಗೆ ಈ ಕೆಳಗಿನ * ಮೌಲ್ಯಗಳ ಪ್ರಾಮಿಸರಿ ನೋಟುಗಳು ನನಗೆ ಕೊಡಲ್ಪಡಬೇಕಾಗಿ ಅಪೇಕ್ಷಿಸುತ್ತೇನೆ.

ಅನಾವಶ್ಯಕವಾದ ವಾಕ್ಯಗಳನ್ನು ಹೊಡೆದುಬಿಡತಕ್ಕದ್ದು.

ಹೆಸರು

ವಿಳಾಸ

ತಾರೀಖು 1915.

(ಅವಶ್ಯವಿದ್ದರೆ ಇಲ್ಲಿ ಕೊಟ್ಟಿರುವ ಫಾರ್ಮನ್ನೇ ಕತ್ತರಿಸಿ ಉಪಯೋಗಿಸಬಹುದು.)

ಎ. ಬಟ್ಟರ್‌ವರ್ತ್,

ಚೀಫ್ ಸೆಕ್ರೆಟರಿ.

ಲೋಚಿಸುವರೆ ಪೂನೆಯಲ್ಲಿ ಅಧಿಕಾರಿಗಳ ಒಂದು ಸಭೆಯು ಕೂಡಿತ್ತು.

ಮುಸಲ್ಮಾನ ಯುನಿವರ್ಸಿಟಿ ಬಗ್ಗೆ ಈ ವರೆಗೆ ಕೂಡಿಸಿದ ಹಣದಿಂದ ಮುಸಲ್ಮಾನ ವಿದ್ಯಾರ್ಥಿಗಳನ್ನು ಪರದೇಶಗಳಿಗೆ ಶಿಕ್ಷಣದ ಬಗ್ಗೆ ಕಳುಹಿಸಿಕೊಡುವಂತೆ ಕೆಲವು ವಿದ್ಯಾರ್ಥಿ ವೇತನಗಳನ್ನು ಸ್ಥಾಪಿಸಬಹುದೆಂಬ ವಿಷಯವನ್ನು ಪರ್ಯಾಲೋಚಿಸುತ್ತಿರುವರು.

ಬಿ. ಬಿ. ಸಿ ಐ. ರೈಲ್ವೆ ಕಂಪೆನಿಯು ನೌಕರರು ಸಾಮ್ರಾಜ್ಯದ ಸೇನೆಯವರ ಉಪಯೋಗಕ್ಕಾಗಿ ಒಂದು ವಾಯುವಿಮಾನವನ್ನು ಉಚಿತವಾಗಿ ಕೊಡಬೇಕೆಂತ ನಿರ್ಣಯಿಸಿಕೊಂಡು ಈ ಬಗ್ಗೆ ಬೇಕಾದ ಚಂದಾ ಮೊಬಲಗುಗಳನ್ನು ಸಂಗ್ರಹಿಸುತ್ತಿರುವರು.

ರಾಜಾ ಪ್ರಸನ್ನದೇವ ರೈಕಟ ಎಂಬವರು ಸೆಂಟ್ ಜ್ಹೋನ್ ಅಂಬುಲೇನ್ಸ್ ಎಸ್ಸೋಸಿಯೇಶನಿಗೆ ರೂ.೭೦೦೦ ಕ್ರಯಬಾಳುವ ಒಂದು ಮೋಟಾರ್ ಭಂಡಿಯನ್ನೂ ರೂ. ೯೦೦ ಮತ್ತು ರೂ. ೨೫೦೦ ಕ್ರಯದ ಎರಡು ಡೇರೆಗಳನ್ನೂ ಉಚಿತವಾಗಿ ಕೊಟ್ಟಿರುವರು.

ಈ ತಿಂಗಳ ತಾ ೪ಕ್ಕೆ ಅಂತ್ಯವಾಗುವ ವಾರದಲ್ಲಿ ಇಡೀ ಹಿಂದೂಸ್ಥಾನದಲ್ಲಿ ೧೩೨೭ ಪ್ಲೇಗು ಮರಣಗಳಿದ್ದವು ಮುಂಬಯಿ ಮತ್ತು ಹೈದರಾಬಾದು ಸಂಸ್ಥಾನಗಳಲ್ಲಿ ಪ್ಲೇಗಿನಿಂದ ಮೃತಪಟ್ಟವರ ಸಂಖ್ಯೆಯು ಇತರ ಪ್ರಾಂತ್ಯಗಳ ಸಂಖ್ಯೆಗಳಿಗಿಂತ ಅಧಿಕವಾಗಿರುವುದು.

ಮುಂಬಯಿಯಲ್ಲಿ ಪ್ರಖ್ಯಾತ ವಕೀಲರಾಗಿರುವ ರಾ। ಎಸ್. ಎಸ್. ಸೆಟ್ಲೂರರವರು ಪ್ರಿವಿಕೌನ್ಸಿಲ್ ಮುಂದೆ ಬರುವ ಒಂದು ದಾವೆಯ ವಿಷಯ ಲಂಡನಿನ ಬ್ಯಾರಿಷ್ಟರರಿಗೆ ಅನುಭವ ಹೇಳುವರೆ ಇಂಗ್ಲಾಂಡಕ್ಕೆ ಹೊರಟು ಹೋಗುವರೆಂತ ತಿಳಿದುಬರುತ್ತದೆ. ಪೂರ್ವಾಚಾರ ಪಕ್ಷದವರಾಗಿರುವ ಈ ಬ್ರಾಹ್ಮಣ ವಕೀಲರು ವಿಲಾಯತಿಗೆ ತೆರಳಿರುವ ಈ ಸಂಗತಿಯನ್ನು ಲಕ್ಷಕ್ಕೆ ತಂದುಕೊಳ್ಳಬೇಕೆಂತ ಲಾಹೋರು 'ಟ್ರಿಬ್ಯೂನ್' ಎಂಬ ಪತ್ರವು ಸೂಚಿಸಿರುವುದು.

ಸಂಯುಕ್ತ ಪ್ರಾಂತ್ಯದ ಲಕ್ನೋಪುರದಲ್ಲಿ ನೆರೆಯಿಂದುಂಟಾದ ನಷ್ಟವನ್ನು ತಿಳಕೊಂಡು ಬೇಕಾದ ನಿವೃತ್ತಿಯನ್ನು ಕಲ್ಪಿಸಲು ಅಲ್ಲಿಯ ಲೆಫ್ಟಿನೆಂಟ ಗವರ್ನರರಾದ ಬಹುಮಾನಪಟ್ಟ ಸರ್. ಜೇಮ್ಸ್ ಮೆಸ್ಟನರವರು ನೈನಿಟಾಲ್‌ನಿಂದ ಲಕ್ನೋಪುರಕ್ಕೆ ಬಂದಿದ್ದರು ಈ ಸಂದರ್ಭದಲ್ಲಿಯೇ ಅಲ್ಲಿಯ ಪೋಲೀಸಿನವರಿಗೂ ಕನಿಂಗ್ ಕೋಲೇಜಿನ ಪ್ರೊಫೆಸ್ಸರರು ಮತ್ತು ವಿದ್ಯಾರ್ಥಿಗಳಿಗೂ ನಡದ ಜಗಳದ ಕಾರಣಗಳನ್ನು ಸ್ವತಹ ತಿಳಕೊಳ್ಳುವುದು ಸಾಹೇಬರವರ ಸಂದರ್ಶನೆಯ ಉದ್ದೇಶವಾಗಿತ್ತೆಂತ ತಿಳಿದುಬರುತ್ತದೆ.

ತಿನ್ನಲಿಕ್ಕೆ ಕೂಳಿಲ್ಲದೆ ಸತ್ತ ಹೃದಯ ಭೇದಕ ಒಂದು ವೃತ್ತಾಂತವು ಕಲ್ಕತ್ತೆಯಿಂದ ಕೇಳಿಸುತ್ತದೆ. ಟಿಪ್ಪೆರಾ ಜಿಲ್ಲೆಯಲ್ಲಿ ಕ್ಷಾಮವು ಬಿದ್ದಿರುವುದು. ಈ ಪ್ರಾಂತ್ಯಗಳ ಶಿವಪುರ ಎಂಬ ಗ್ರಾಮದಲ್ಲಿ ಉಣಲು ಅಕ್ಕಿಕಾಳಿಲ್ಲದೆ ಒಬ್ಬನು ಎರಡು ದಿನ ಉಪವಾಸವಿದ್ದನು. ಮಾರಣೇ ದಿನ ಆತಗೆ ದೊರೆತ ಸ್ವಲ್ಪ ಅಕ್ಕಿಯನ್ನು ಬೇಯಿಸಲು ಹೆಂಡತಿಗೆ ಕೊಡುವಷ್ಟರಲ್ಲಿ 'ಚೌಕಿದಾರಿ' ತೆರಿಗೆಯನ್ನು 'ವಸೂಲು ಮಾಡಲಿಕ್ಕೆ ಬಂದವನು ಈ ಅಕ್ಕಿಯನ್ನು ಸೆಳಕೊಂಡು ಹೋದನು. ಹಸಿವೆಯಿಂದ ಮೊದಲೇ ಸಂತಪ್ತನಾಗಿದ್ದ ಈ ಮನುಷ್ಯನ ಸಂಕಷ್ಟವು ನಿರಾಶೆಯಿಂದ ಮತ್ತಷ್ಟು ಬೀಕರವಾಯಿತು. ಈ ಸ್ಥಿತಿಯನ್ನು ತಾಳಲಾರದೆ ಆತನು ಕೂಡಲೆ ಕುತ್ತಿಗೆಗೆ ಹಗ್ಗ ಹಾಕಿಕೊಂಡು ಆತ್ಮಹತ್ಯೆವನ್ನು ಮಾಡಿಕೊಂಡನು ಪತಿಪರಾಯಣೆಯಾದ ಈ ಸ್ತ್ರೀಯು ಗಂಡನನ್ನು ಅಗಲಿರಲಾರದೆ ಗಂಡನಂತೆಯೇ ತಾನೂ ಸಹ ಪ್ರಾಣತ್ಯಾಗವನ್ನು ಮಾಡಿಕೊಂಡಳು ಅಯ್ಯೋ! ಹಸಿವೆಯ ಬಾಧೆಯೆ!

ಗುಜರಾತು ಮತ್ತು ಕಾಧ್ಯಾವಾರ ಪ್ರಾಂತ್ಯಗಳಲ್ಲಿ ಬೆಳೆಗಳ ಸ್ಥಿತಿಯು ತೃಪ್ತಿಕರವಾಗಿರದು. ಕಾಧ್ಯಾವಾರದಲ್ಲಿ ಬರವು ಪ್ರಾಪ್ತವಾಗುವಷ್ಟರಲ್ಲಿ ಅಲ್ಪಸ್ವಲ್ಪ ಮಳೆಯಾದುದರಿಂದ ಯಾತಗಳ ಮೂಲಕ ಬಾವಿನೀರುಗಳಿಂದ ಹೊಲಗಳಿಗೆ ನೀರು ಬಿಟ್ಟು ಪೈರನ್ನು ರಕ್ಷಿಸಿಕೊಳ್ಳಲು ಸಾಧ್ಯವಾಯಿತು ಆದರೆ ಮಳೆಯು ಸರಿಯಾಗಿ ಬಾರದೆ ಇದ್ದದ್ದರಿಂದ ಮುಂದಿನ ಸ್ಥಿತಿಯು ಭಯಂಕರವೆಂತಲೇ ಕಾಣುತ್ತಿದೆ ಜಾನುವಾರುಗಳ ಮೇವೂ, ಕುಡಿಯುವರೆ ಬೇಕಾದ ನೀರೂ ಸಹ ದೊರೆಯಲು ಮುಂದೆ ಅಸಾಧ್ಯವಾದ ಬರಗಾಲವು ಪ್ರಾಪ್ತವಾಗಬಹುದೆಂಬ ಅಂಜಿಕೆಯು ತೋರಿಬರುತ್ತಿರುವುದು.

ಹಾರ್ಡಿಂಗ್ ಪ್ರಭುಗಳ ಉತ್ತರಾಧಿಕಾರಿಗಳಾಗಿ ಇಂಡ್ಯದ ವ್ಯಾಸರಾಯಿ ಪದವಿಗೆ ಬೆಕೆಂಪ್ ಪ್ರಭುಗಳು ಬರುವರೆಂಬದಾಗಿ ವಾರ್ತೆ ಇರುವುದು.

ವ್ಯಾಪಾರಸ್ಥರು ಲಕ್ಷ್ಯಕ್ಕೆ ತಂದುಕೊಳ್ಳಬೇಕಾದ ಒಂದು ಕ್ರಿಮಿನಲ್ ಮೊಕದ್ದಮೆಯು ಕಲ್ಕತ್ತಾದಲ್ಲಿಯ ಮೇಜಿಸ್ಟ್ರೇಟರ ಕೋರ್ಟಿನಲ್ಲಿ ನಡೆಯಿತು. ಸೆಯ್ಯದ್ ಮಹಮ್ಮದ್ ಹುಸೇನ್ ಎಂಬಾತನೊಬ್ಬನು ಒಳ್ಳೇ ಉಡುಪು ತೊಡುಪುಗಳನ್ನು ಹಾಕಿಕೊಂಡು ಅಲ್ಲಿಯ ಅಕ್ಕಿವ್ಯಾಪಾರಸ್ಥರಿಂದ ನಾಲ್ಕು ರೂಪಾಯಿ ಅಕ್ಕಿಯನ್ನು ಪಡಕೊಂಡನು ಒಬ್ಬ ಕೂಲಿಯು ತಲೆಯಮೇಲೆ ಈ ಅಕ್ಕಿಯನ್ನು ತನ್ನ ಹಿಂದೆಯೇ ತರಲಿಕ್ಕೆ ಹೇಳಿದ್ದಲ್ಲದೆ ಈ ಕೂಲಿಯವನ ಕೂಡೆ ಆರು ರೂಪಾಯಿಗಳನ್ನು ಕಳುಹಿಸಿಕೊಟ್ಟರೆ ಹತ್ತು ರೂಪಾಯಿಗಳ ನೋಟನ್ನು ಕೊಡುತ್ತೇನೆಂತ ಅಂಗಡಿಗಾರನಿಗೆ ನಂಬಿಕೆ ಹೇಳಿ ಈ ಕೂಲಿಯೊಡನೆ ಅಂಗಡಿಯಿಂದ ಹೊರಟನು. ಹಾದಿಯಲ್ಲಿ ಹೋಗುತ್ತ ನಾಲ್ಕಾಣೆಯ ತಿಂಡಿ ಸಾಮಾನುಗಳನ್ನು ತಕ್ಕೊಂಡು ಕೂಲಿಯವನ ಹತ್ತರ ಕೊಟ್ಟು ಆತನ ಹತ್ತರವಿದ್ದ ಆರು ರೂಪಾಯಿಗಳನ್ನು ಪಡದು ಅದರಿಂದಲೇ ಈ ಸಾಮಾನುಗಳ ಕ್ರಯ ಕೊಟ್ಟು ಕೂಲಿಯವನೊಡನೆ ಮುಂದರಿಸಿದನು. ಸ್ವಲ್ಪ ದೂರ ಹೋದ ಮೇಲೆ ಅಲ್ಲಿಯ ಕೋಲೇಜಿನ ಗೇಟಿನ ಹತ್ತರ ಕೂಲಿಯವನಿಗೆ ನಿಲ್ಲಿಸಿ ತಾನು ಈಗಲೆ ಬರುವೆನೆಂತ ಗೇಟಿನೊಳಗೆ ಹೋದನು. ಎಷ್ಟು ಸಮಯ ಕಾದಿದರೂ ಈತನು ಬರಲೇ ಇಲ್ಲ. ಕೂಲಿಯವನು ಅಕ್ಕಿ ಸಹಿತ ಅಂಗಡಿಗೆ ತಿರುಗಿಹೋಗಬೇಕಾಯಿತು. ಪೋಲೀಸಿನವರಿಂದ ಈತನನ್ನು ಕೂಡಲೆ ಹಿಡಿಯಲಿಕ್ಕಾಗದ್ದರಿಂದ ಈತನು ಧೈರ್ಯಗೊಂಡು ಇದೇ ರೀತಿ ಇನ್ನೊಬ್ಬ ಬಜವಳಿ ಅಂಗಡಿಯವನನ್ನು ಠಕಾಯಿಸಿದನು. ಆದರೆ ಈ ಸಲ ಈತನಿಗೆ ತಲೆತಪ್ಪಿಸಿ ಓಡಿಹೋಗಲು ಸಾಧ್ಯವಿಲ್ಲದ್ದರಿಂದ ಪೋಲಿಸಿನವರು ಈತನನ್ನು ಕೈದುಮಾಡಿದರು. ತಪ್ಪು ಇವನ ಮೇಲೆ ಸಾಬೀತಾದ್ದರಿಂದ ಮೆಜಿಸ್ಟ್ರೇಟರು ೨ ವರುಷಗಳ ಕಠಿಣ ಸಜೆಯ ಶಿಕ್ಷೆಯನ್ನು ಈ ವಂಚಕನು ಅನುಭವಿಸಬೇಕೆಂತ ವಿಧಿಸಿದ್ದಾರೆ.

ಬರೋಡೆಯ ಮಹಾರಾಣಿ ಗೈಕ್ವಾಡರವರು ಸ್ತ್ರೀ ಶಿಕ್ಷಣ ಪೋಷಣೆಯ ಬಗ್ಗೆ ೧॥ ಲಕ್ಷ ರೂಪಾಯಿಗಳನ್ನು ದಾನವಾಗಿ ಕೊಟ್ಟಿರುತ್ತಾರೆ. ಆಡಳಿತೆದಾರರ ಒಂದು ಬೋರ್ಡನ್ನು ಏರ್ಪಡಿಸಿ ಈ ದ್ರವ್ಯಸಂಚಯದಿಂದ ಬಾಲಿಕೆಯರಿಗೆ ವಿದ್ಯಾರ್ಥಿವೇತನಗಳು ಕೊಡೋಣಾಗುವವು.

ವಿವಿಧ ವಿಷಯಗಳು.

ಕೆಲವು ಕಡೆಗಳಲ್ಲಿ ರೈತರು ಹಟ್ಟೀ ಅಥವಾ ಸೆಗಣಿ ಗೊಬ್ಬರವನ್ನು ಗುಂಡಿಗಳೊಳಗೆ ಹಾಕಿ ಮರೆಮಾಡಿಡದೆ ಖುಲ್ಲಾ ಸ್ಥಳಗಳಲ್ಲಿ ರಾಶಿಹಾಕುವದರಿಂದ ಅದರಲ್ಲಿನ ಗುಣಕಾರಿಯಾದ ಜಾನುವಾರುಗಳ ಮೂತ್ರವು ಬಿಂಗಡವಾಗಿ ಸರಿದುಹೋಗಿ ನಷ್ಟವಾಗುವದಲ್ಲದೆ, ಗೊಬ್ಬರದಲ್ಲಿ ಬೆರತಿರುವ ಸಸ್ಯಾಹಾರ ಪದಾರ್ಥಗಳಲ್ಲಿ ಕೂಡಾ ತೇವಮಾನ ಬರುತ್ತದೆ. ಅಂದಾಜಿನಲ್ಲಿ ೪॥ ತಿಂಗಳೊಳಗೆ ೩೨ ಖಂಡಿ ಸೆಗಣಿಗೊಬ್ಬರದಲ್ಲಿ ಇಂಥಿಂಥಾ ಪದಾರ್ಥಗಳು ಇಂತಿಷ್ಟೇ ತೇವಮಾನ ಬರುತ್ತಿದೆಂದು ಸ್ಕೊಟಲೆಂಡಿನ ಒಂದು ವ್ಯವಸಾಯ ಕ್ಷೇತ್ರದಲ್ಲಿ ಶೋಧಿಸಿ ತಿಳಿದುಬಂದದ್ದು ಅಲ್ಲಿನ ನಂಬ್ರ ೩೫ನೇ ಬುಲ್ಲೆಟಿನ್‌ನಲ್ಲಿ ಈ ಕೆಳಗೆ ಕಾಣಿಸಿದ ಮೇರೆಗೆ ಪ್ರಕಟವಾಗಿಯದೆ.

	ಗುಂಡಿಗಳಲ್ಲಿ ತೇಮಾನ.	ಖುಲ್ಲಾ ರಾಶಿಯಲ್ಲಿ ತೇಮಾನ.
ಸಾರಜನಕ ..	20.4%	... ... 28.4%
ರಂಜಕ ..	ತೇವಮಾನವಿಲ್ಲಾ	... ... 21.1%
ಪೊಟ್ಯಾಶ್ ...	... ಡಿ ...	... ... 28 3%

ಮೇಲಾಗಿ, ಖುಲ್ಲಾ ರಾಶಿಯಲ್ಲಿನ ಗೊಬ್ಬರ ಹಾಕಿದ್ದಕ್ಕಿಂತಲೂ ಗುಂಡಿಗಳಲ್ಲಿ ದಾಸ್ತಾನುಮಾಡಿದ ಗೊಬ್ಬರ ಹಾಕಿದ್ದಲ್ಲಿ ಬೆಳೆಯೂ ಸೇಕಡಾ ೭ರಷ್ಟು ಜಾಸ್ತಿಯಾಗುವುದು.

ರಾಜಾ ಕೇಶವಪಿಳ್ಳೆ.

ಈ ಮಹಾ ಪುರುಷನು ಬಡ ಶೂದ್ರಹುಡುಗನಾಗಿದ್ದನು. ಒಂದು ದಿನ ರಾತ್ರೆ ಇವನು ತ್ರಾವಣಕೂರ ಮಹಾರಾಜನ ಅರಮನೆಯ ಮುಖಮಂಟಪದಲ್ಲಿ ಮಲಗಿದ್ದನು ಮಹಾರಾಜನು ಪ್ರಾತಃಕಾಲಕ್ಕೆ ಏಳುತ್ತಲೆ ಹೊರಗೆ ಬರುವಾಗ ಹರಕು ವಸ್ತ್ರವನ್ನು ಹೊದ್ದುಕೊಂಡು ದಾರಿಯಲ್ಲಿ ಮಲಗಿಕೊಂಡಿದ್ದ ಈ ದರಿದ್ರಿಯನ್ನು ನೋಡಿ, ಆತನನ್ನು ಅಲ್ಲಿಂದ ಎಬ್ಬಿಸಿ ಆತನ ಹರಕುವಸ್ತ್ರಗಳನ್ನು ನೋಡಿ ಕನಿಕರಪಟ್ಟು ಹಿಂದಕ್ಕೆ ಬರುವಾಗ ಮಹಾರಾಜನ ತಲೆಯು ಗೋಡೆಗೆ ಇದ್ದ ಮೊಳೆಗೆ ತಾಗಿ ಘಾಯವಾಯಿತು ಇಡೀ ದಿನ ಮಹಾರಾಜನು ಯತ್ನಿಸಿದ ಯಾವ ಕಾರ್ಯವೂ ಕೈಗೂಡಲಿಲ್ಲ. ತಾನು ಪ್ರಾತಃಕಾಲಕ್ಕೆ ಈ ಕೆಟ್ಟ ಪೋರನ ಮುಖ ಕಂಡದರಿಂದಲೇ ತನಗೆ ಕಷ್ಟ ಬಂತೆಂತ ಹೇಳಿ ಇದರ ಪ್ರಾಯಃಚಿತ್ತವಾಗಿ ಆತನಿಗೆ ಹೊಡೆಯಬೇಕೆಂತ ಅಪ್ಪಣೆ ಕೊಟ್ಟನು. ಮಹಾರಾಜನ ಸೇವಕರು ಧನಿಯ ಅಪ್ಪಣೆ ಜಾರಿಗೆ ತರುವುದಕ್ಕೆ ಕೇಶವನನ್ನು ಕರೆಯುತ್ತಲೇ ಕೇಶವನು ಮಹಾರಾಜನ ಕೂಡೆ ತನ್ನದೊಂದು ಅರಿಕೆಯುಂಟೆಂತ ಹೇಳಿದನು. ಕೇಶವನನ್ನು ಮಹಾರಾಜನ ಸನ್ನಿಧಿಗೆ ಕೊಂಡುಹೋದರು. [illegible] ಏನು ಹೇಳುವುದುಂಟು? ಎಂತ ಮಹಾರಾಜನು [illegible]

ತ್ತಲೇ ಕೇಶವನು "ಮಹಾಸ್ವಾಮಿಗಳೇ, ತಾವು ಪ್ರಾತಃಕಾಲದಲ್ಲಿ ನನ್ನ ಮುಖ ಕಂಡದರಿಂದ ತಮಗೆ ಕಷ್ಟಬಂತು—ನಾನು ಮಲಗಿದವನು ಪ್ರಥಮತ ತಮ್ಮ ಮುಖವನ್ನೇ ಕಂಡೆನು—ನನಗೆ ಈ ಗತಿಯಾಯಿತಲ್ಲ" ಎಂತ ವಿನ್ಯಸಿಕೊಂಡನು. ಮಹಾರಾಜನು ಶಿಟ್ಟಾಗುವ ಬದಲಿಗೆ ಕೇಶವನ ಬುದ್ಧಿಪ್ರಾಚುರ್ಯಕ್ಕೆ ಮೆಚ್ಚಿ ಆತನನ್ನು ತನ್ನ ನೌಕರನಾಗಿ ನೇಮಿಸಿದನು. ಈ ಹುಡುಗನು ನೌಕರನಾಗಿರುವಾಗಲೇ ವಿದ್ಯೆಯನ್ನು ಹೊಂದಿ ನೌಕರಿಯಲ್ಲಿ ಏಣಿ ಹತ್ತಿದಂತೆ ಬಡ್ತಿಹೊಂದುತ್ತಾ ಒಂದು ಕಾಲಕ್ರಮದಲ್ಲಿ ದಿವಾನ ರಾಮಅಯ್ಯರ ದಳವಾ ತನ್ನ ಪ್ರಧಾನಿ ಉದ್ಯೋಗದಲ್ಲಿ ಮರಣಹೊಂದುತ್ತಲೆ ಕೇಶವನು ಪ್ರಧಾನಿ ಉದ್ಯೋಗಕ್ಕೆ ನೇಮಕವಟ್ಟು ಅಂದಿನಿಂದ ಈತಗೆ ದಿವಾನ್ ಕೇಶವಪಿಳ್ಳೆ ಎಂಬ ಹೆಸರಾಯಿತು.

ಈ ಕಾಲದಲ್ಲಿ ಮೈಸೂರಿನ ಟೀಪುಸುಲ್ತಾನನು ಮಲಯಾಳ ಮತ್ತು ಕೊಚ್ಚಿ ಅರಸರುಗಳನ್ನು ಅಪಜಯ ಪಡಿಸಿ ಜನರನ್ನು ಪೀಡಿಸುವ ಕಾಲದಲ್ಲಿ ಆ ದೇಶಗಳ ಬಹು ಜನರು ತ್ರಾವಣಕೂರಿಗೆ ಹೋಗಿ ಮಹಾರಾಜನ ಆಶ್ರಯ ಹೊಂದಿಕೊಂಡಿದ್ದರು. ಈ ಜನರನ್ನು ತನ್ನ ಸ್ವಾಧೀನ ವಾಪಾಸು ಕೊಡಬೇಕೆಂದು ಟೀಪುಸುಲ್ತಾನನು ತ್ರಾವಣಕೂರ ಮಹಾರಾಜನಿಗೆ ವತ್ತಾಯ ಮಾಡಿದ್ದಲ್ಲಿ ಆಶ್ರಿತ ಜನರನ್ನು ಶತ್ರುವಿನ ಸ್ವಾಧೀನ ಬಿಟ್ಟುಕೊಡುವುದು ರಾಜಧರ್ಮವಲ್ಲೆಂತ ತ್ರಾವಣಕೂರ ಮಹಾರಾಜನು ತಿರಸ್ಕರಿಸಿದನು. ಟೀಪುಸುಲ್ತಾನನು ಹುಲಿಯಂತೆ ಶಿಟ್ಟಾಗಿ ೧೭೮೯ನೇ ಇಸವಿ ದಶಂಬರ ತಿಂಗಳಲ್ಲಿ ತ್ರಾವಣಕೂರಿಗ ದಂಡೆತ್ತಿ ಬಂದನು. ದಿವಾನ ಕೇಶವಪಿಳ್ಳೆಯು ಈ ಆಶ್ರಿತ ಜನರನ್ನೇ ಸೇನೆಯಾಗಿ ಉಪಯೋಗಿಸಿಕೊಂಡು ಟೀಪುವಿನ ಕೂಡ ಯುದ್ಧಮಾಡಿ ಎರಡಾವರ್ತಿಯೂ ಟೀಪುವನ್ನು ಸೋಲಿಸಿದನು. ಇಂತಹ ಕಷ್ಟ ತ್ರಾವಣಕೂರಿಗೆ ಒಂದಾಗ ಮದ್ರಾಸಿನ ಗವರ್ನರರಾಗಿದ್ದ ಹೊಲ್ಲೆಂಡ ದೊರೆಯು ದಿವಾನ ಕೇಶವ ಪಿಳ್ಳೆಗೆ ಏನೂ ಸಹಾಯ ಮಾಡಲಿಲ್ಲದಿದ್ದರೂ ಆ ವರ್ತಮಾನ ಗವರ್ನರ್ ಜನರಲ್ ಕೊರ್ನವೆಲ್ಲ ಪ್ರಭು ಕೇಳುತ್ತಲೆ ಮೈಸೂರಿನ ಮೇಲೆ ಯುದ್ಧಮಾಡ ನಿರ್ಣಯಿಸಿ ಸ್ವಲ್ಪ ಸಮಯದಲ್ಲೇ ಯುದ್ಧವನ್ನು ಮಾಡಿ ಟೀಪುಸುಲ್ತಾನನನ್ನು ಸೋಲಿಸಿ ಕೊಂದನಂತರ ಇಂಗ್ಲೀಷ ಸರಕಾರದವರು ಕೇಶವಪಿಳ್ಳೆಯ ಸಾಮರ್ಥ್ಯವನ್ನು ಬಹಳವಾಗಿ ಹೊಗಳಿದರು. ತ್ರಾವಣಕೂರಿನ ಅಭಿವೃದ್ಧಿ ಬಂದರವನ್ನು ಈ ಕೇಶವಪಿಳ್ಳೆಯು ಉಂಟುಮಾಡಿದ್ದಾಗಿರುತ್ತದೆ. ತ್ರಾವಣಕೂರಿನಲ್ಲಿ ಸರ್ವತ್ರವೂ ದಿವಾನಜಿ ಕೇಶವಪಿಳ್ಳೆಯ ಹೆಸರು ಕೀರ್ತಿಗೊಂಡಿತು. ಲೋರ್ಡ್ ಮೋರ್ನಿಂಗಟ್ ಪ್ರಭು ಇಂಗ್ಲಿಷ ಸರಕಾರದವರ ಕಡೆಯಿಂದ ಕೇಶವಪಿಳ್ಳೆಗೆ ರಾಜಾ ಕೇಶವದಾಸ್ ಎಂಬ ಟ್ಯೈಟಲ್ ಯಾನೆ ಬಹುಮಾನದ ಹೆಸರು ಕೊಟ್ಟರು.

~~~~~

ತ್ರಾವಣಕೂರ ಸಂಸ್ಥಾನದ ಮನ್ನಾರ ಎಂಬಲ್ಲಿ ಕೊಳೆತ ತೆಂಗಿನ ಕಾಯಿಯನ್ನು ತುರಿದುಹಾಕಿ ಮಾಡಿದ ದೋಶೆಗಳನ್ನು ತಿಂದಕಾರಣ ವಿಷಪ್ರಯೋಗವಾಗಿ 5 ಜನರು ಮೃತರಾದರೆಂತ ನ್ಯೂಇಂಡಿಯಾ ವರ್ತಮಾನ ಪತ್ರದಿಂದ ತೋರುತ್ತದೆ.

~~~~~

ಇದೀ ಭೂಲೋಕದ ಜನಸಂಖ್ಯೆಯು ಶುಮಾರು ೧೬,೦೦೦೦,೦೦೦೦ ಆಗಿದೆ. ಈ ಪೈಕಿ ೯೬೩,೦೦೦,೦೦೦ ಜನರು, ಈಗಿನ ಯುದ್ಧಮಾಡುವ ಜನಾಂಗದವರೂ ಇವರ ಪ್ರಜಾ ಜನರೂ ಆಗಿರುವರು. ಈ ೯೬೩೦೦೦೦೦೦ ಜನರ ಪೈಕಿ ಅರೆವಾಸಿಗಿಂತಲೂ ಹೆಚ್ಚು ೪೩೧೦೦೦೦೦೦ ಜನರು ಜೋರ್ಜ ಸಾರ್ವಭೌಮರ ಒಳಗಿನ ಅಂದರೆ ಬ್ರಿಟಿಷ್ ರಾಜ್ಯದ ನಿವಾಸಿಕರಾಗಿರುವರು.

~~~~~

ಈಗ ನಡಿಯುವ ಯುದ್ಧದ ಫಲಗಳಲ್ಲಿ ಒಂದು ಯಾವದೆಂದರೆ—ಮೇಲು, ಕೀಲು, ಆ ಮತ, ಈ ಮತ, ಆ ಜನಾಂಗ, ಈ ಜನಾಂಗವೆಂಬ ಭೇದಗಳನ್ನು ಜನರು ಗಣ್ಯಮಾಡದೆ ಆಗೋಸ್ತು ೪ನೆ ತಾರೀಕಿನ ದಿನ ರೈವ್ಹರೆಂಡ್ ಎಂಬಲ್ಲಿ ರೆವರೆಂದ ಜಿ. ಹೆರಿಸನ್‌ರವರು ನಡಸಿದ ದೇವಾರಾಧನೆಯಲ್ಲಿ ಕೂಡಿದರು.

~~~~~

ಬಿಗ್ಲೆಸವೇಡ್ ಎಂಬ ಪಟ್ಟಣದ ಡಾಕ್ಟರ್ ಯಂಗ್ ಎಂಬವರ ೬ ಗಂಡುಮಕ್ಕಳಲ್ಲಿ ಒಬ್ಬನು ಇಂಡ್ಯಕ್ಕೆ ಹೋಗಿದ್ದನು. ಇನ್ನೊಬ್ಬನು ಅಮೇರಿಕದ ಮೆಸಿಪೋಟೇಮಿಯಾ ಎಂಬಲ್ಲಿಗೂ ಮೂರನೆಯವನು ಒಂಟೇರಿಯೊ ಎಂಬಲ್ಲಿಗೂ ಹೋಗಿದ್ದರು. ಅನೇಕ ವರುಷಗಳಿಂದ ಒಬ್ಬನು ಇನ್ನೊಬ್ಬನಿಗೆ ನೋಡಲಿಲ್ಲವಿತ್ತು. ಯುದ್ಧದ ಸಂಬಂಧವಾಗಿ ವಿವಿಧ ಕಡೆಗಳಿಂದ ಬಂದ ಸೇನೆಯವರು ಅಲ್ಡರ್‌ಶೋಟ್ ಎಂಬಲ್ಲಿ ಒಟ್ಟುಕೂಡಿದಾಗ ಆಕಸ್ಮಾತ್ ಹಾಕಿಕೊಂಡ ಮಿಲಿಟರಿ ಉಡುಪಿನಿಂದಾಗಿ ಈ ಮೂವರು ಸಹೋದರರೂ ಒಬ್ಬರಿಗೊಬ್ಬರು ನೋಡಸಿಕ್ಕಿದರು.

~~~~~

ದಕ್ಷಿಣ ಹಿಂದೂಸ್ಥಾನ

~~~~~

ಮದ್ರಾಸ ರಾಜ್ಯದ ಜಿಲ್ಲೆಗಳ ಪರಸ್ಪರ ಸಹಾಯ ಸಂಘಗಳ ಮಹಾಸಭೆಯು ಈ ತಿಂಗಳ ತಾ ೨೮ರಲ್ಲಿ ಜರುಗುವದು. ಮದ್ರಾಸ ಜಿಲ್ಲೆಯ ಕಲೆಕ್ಟರ ದೊರೆಗಳವರೇ ಈ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳುವರು. ನಮಿಸ್ಕೃ ಪ್ರಾಂತ್ಯಗಳಲ್ಲಿ ಸಹ ಅಧಿಕಾರಿಗಳು ನಮ್ಮ ಆದರಣೆಯನ್ನು ಈ ಸಂಘಗಳಿಗೆ ಮದ್ರಾಸು ಜಿಲ್ಲಾ ಕಲೆಕ್ಟರರಂತೆಯೇ ಕೊಟ್ಟರೆ ಈ ಸಂಘಗಳ ಬೆಳವಣಿಗೆಯು ಇಲ್ಲಿ ಇನ್ನೂ ವಿಸ್ತಾರವಾಗಿ ಬೆಳೆಯಲು ಅಸ್ಪದವಿದೆ.

~~~~~

ಬರುವ ಅಕ್ಟೋಬರ ತಿಂಗಳ ತಾ. ೧೯ರಿಂದ ಮೈಸೂರಿನ ಪ್ರಜಾಪ್ರತಿನಿಧಿಗಳ ಸಭಾ ಪ್ರಾರಂಭವಾಗುವದು.

~~~~~

ದಸರಾ ದಿನಗಳಲ್ಲಿ ಮೈಸೂರಿನಲ್ಲಿ ಪರಸ್ಪರ ಸಹಾಯ ಸಂಘಗಳ ಮಹಾಸಭೆಯು ಜರಗುವುದು.

~~~~~

ಮಕ್ಕಳಲ್ಲಿ ಉಂಟಾಗುವ ಮರಣಸಂಖ್ಯೆಯು ಕಡಮೆಯಾಗುವಂತೆ ಪ್ರಯತ್ನಿಸುವ ಒಂದು ಸಂಘ ರಂಗೂನಿನಲ್ಲಿದೆ. ಈ ಸಂಘದವರು ಕೂಸುಗಳ ಬಂದು ಪ್ರದರ್ಶನವನ್ನು ಸದ್ಯದಲ್ಲಿ ಏರ್ಪಡಿಸುವರೆಂಬುದಾಗಿ ತಿಳಿಯುತ್ತೇವೆ.

~~~~~

ಬೆಂಗಳೂರಿನಲ್ಲಿರುವ ಟಾಟಾರವರ ಸಾಯನ್ಸ್ ಇನ್ಸಟಿಟ್ಯೂಟಿಗೆ ಸರ್ ಆಲ್ಫ್ರೆಡ್ ಬೋರ್ನರವರು ಡಿರೆಕ್ಟರರಾಗಿ ಬರುವರೆಂಬ ವಾರ್ತೆ ಇರುವುದು.

~~~~~

ಕಲ್ಲಿಕೋಟೆ ಸಮೀಪ ನಾಚೇರಿ ಮಹಜೇದಿ ಸಮೀಪದಿಂದ ತೀಯರ ಜನರು ವಾದ್ಯದಿಂದ ಮೆರವಣಿಗೆ ಹೋಗುವಾಗ ಮಾಪಿಳೆಯರು ಅವರನ್ನು ಹೊಡೆದು ದೊಂಬಿ ನಡಿಸಿದರೆಂತಲೂ, ತೀಯರರ ದೇವಸ್ಥಾನವನ್ನು ಸುಟ್ಟು ಹಾಕಿದ್ದರೆಂತಲೂ, ಅಪಾದಿತರಾಗಿ ಕಲ್ಲಿಕೋಟೆ ಸೆಶನ್ ಕೋರ್ಟಿಗೆ ಕಮ್ಮಿಟಾದ ಎಲ್ಲಾ ಮುದ್ದೆಯಾಳಿಯರನ್ನು ಸಾಕಷ್ಟು ರುಜುವಾತು ಇಲ್ಲವೆಂತ ಶೆಶನ್ಸ್ ಜಡ್ಜರು ಖುಲಾಸುಮಾಡಿದರು.

~~~~~

ದಕ್ಷಿಣ ಕನ್ನಡ.

~~~~~

ಪುತ್ತೂರು:—ಇದೇ ಬರುವ ದಶಂಬರ ತಾರೀಕು ೩೧ಕ್ಕೆ ಅಂತ್ಯವಾಗುವ ಲೈಸನ್ಸುಗಳುಳ್ಳ ಈ ಜಿಲ್ಲೆಯ ಕೋವಿ ಲೈಸನ್ಸುದಾರರೆಲ್ಲರೂ ಬರುವ ಜನವರಿ ೧ನೇ ತಾರೀಕಿನೊಳಗೆ ಅವರಿಗೆ ತಲಪುವಂತೆ ಲೈಸನ್ಸುಗಳನ್ನು ವಾಪಾಸು ಮಾಡುವದೆ ಅನುಕೂಲವಾಗುವಷ್ಟು ಬೇಗನೇ ತಮ್ಮ ಅರ್ಜಿಗಳೊಡನೆ ಲೈಸನ್ಸುಗಳನ್ನು ಪಾವತಿಸಬೇಕೆಂದು ಈ ಮೂಲಕ ಅವರನ್ನು ಎಚ್ಚರಿಸೋಣವಾಗುತ್ತದೆ ಎಂತಲೂ ೧೯೧೬ನೇ ಇಸವಿ ಜನವರಿ ತಾ ೧ಕ್ಕೆ ತಮ್ಮ ಊರ್ಜಿತವಿಡದ ಲೈಸನ್ಸುಗಳನ್ನು ವಾಪಾಸು ಪಡೆಯದವರು ವಿಳಂಬವಿಲ್ಲದೆ ಹತ್ತರದ ಪೋಲೀಸು ಸ್ಟೇಶನಿನಲ್ಲಿ ತಮ್ಮ ಕೋವಿಗಳನ್ನು ಅಮಾನತು ಇಡದ ಎಲ್ಲಾ ಅಸಾಮಿಗಳು ಕ್ರಿಮಿನಾಲ್ ವ್ಯವಹರಣೆಗೆ ಗುರಿಯಾಗುವದಲ್ಲದೆ ಅವರ ಲೈಸನ್ಸುಗಳು ಊರ್ಜಿತಪಡಿಸಲಿಕ್ಕಿಲ್ಲವೆಂತ ಪ್ರಕಟಿಸಿರುವರು.

ಗ್ರಾಮ ಉದ್ಯೋಗಸ್ಥರ ಸ್ಪೆಶ್ಯಲ್ ಟೆಸ್ಟ ಯಾನೆ ವಿಶೇಷ ನಿರಾ ಪರೀಕ್ಷೆಯು ಬರುವ ನವಂಬರ ೧೫ನೇ ತಾರೀಕು ಸೋಮವಾರ ದಿವಸ ಕುಂದಾಪುರ, ಪುತ್ತೂರು ಮತ್ತು ಮಂಗಳೂರಿನಲ್ಲಿ ನಡಿಯುವದೆಂತಲೂ ಪರೀಕ್ಷೆಗೆ ದಾಖಲಾಗುವ ಉಮ್ಮೆದವಾರರು ತಮ್ಮ ಅರ್ಜಿಯನ್ನು ಉಮೇದ್ವಾರನು ವಾಸವಾಗಿರುವ ಡಿವಿಜನ ಆಫೀಸರರಿಗೆ ಬರುವ ಅಕ್ಟೋಬರ ೧೫ನೇ ತಾರೀಕಿನೊಳಗೆ ಮಾಡತಕ್ಕದೆಂತಲೂ, ಪರೀಕ್ಷೆಗೆ ದಾಖಲುಮಾಡಿಕೊಳ್ಳುವ ಬಗ್ಗೆ ತೆರತಕ್ಕ ಫೀಸು ರೂಪಾಯಿ ೪ ಆಗಿರುತ್ತದೆಂತಲೂ, ಪರಂತು ಜಿಲ್ಲೆಯಲ್ಲಿ ಕೆಲಸದ ಮೇಲೆ ಇರುವ ಒಬ್ಬ ಪಟೇಲನ ಯಾ ಶ್ಯಾನುಭೋಗನ ರಕ್ತಸಂಬಂಧಿಯಾದ ಉಮೇದ್ವಾರನು ತೆರತಕ್ಕ ಫೀಸು ಒನೆ ೧ ಎಂತಲೂ, ತಾನು ಒಬ್ಬ ಗ್ರಾಮ ಉದ್ಯೋಗಸ್ಥನ ರಕ್ತಸಂಬಂಧಿಕನೆಂತ ದಾವೆ ಹೇಳುವ ಅರ್ಜಿದಾರನು ತಾನು ನಿವಾಸಿಸುವ ತಾಲೂಕಿನ ತಹಶೀಲದ್ದಾರರು ಯಾ ಡಿವಿಜನಿನ ಡಿಪ್ಯುಟಿ ತಹಶೀಲದಾರರಿಂದ ತನಗೆ ಸಂಬಂಧ ಇರುವ ಉದ್ಯೋಗಸ್ಥನ ಹೆಸರು ವಗೈರೆ ಕಾಣಿಸಿರುವ ಒಂದು ಸರ್ಟಿಫಿಕೇಟನ್ನು ಪಡೆಕೊಂಡು ಅರ್ಜಿಯೊಂದಿಗೆ ಖಜಾನಾ ಉದ್ಯೋಗಸ್ಥರ ಮುಂದೆ ಹಾಜರುಮಾಡತಕ್ಕದೆಂತಲೂ ಪ್ರಕಟಿಸಿರುವರು.

ಪುತ್ತೂರು ಕಸಬಾ ಗ್ರಾಮದ ದರ್ಬೆ ಎಂಬಲ್ಲಿ ದುಮಿಂಗಲಾಸ್ರಾವನ ಮಗ ೭ ವರುಷ ಪ್ರಾಯದ ಲೂವಿಸ ಎಂಬ ಹುಡುಗನು ತನ್ನ ಮನೆ ಸಮೀಪ ಗಾಳಿ ಹಾಕಲಿಕ್ಕೆ ಹೋದವನು ಕಾಲು ಜಾರಿ ಬಾವಿಗೆ ಬಿದ್ದು ಮೃತಪಟ್ಟನು.

ಪುತ್ತೂರು ರೆವಿನ್ಯೂ ಡಿವಿಜನ್ ಆಫೀಸರವರ ಸರ್ಕಿಟು ಕ್ರಮದ ಪಟ್ಟಿಯು ಈ ರೀತಿಯಾಗಿದೆ. ಸಪ್ಟಂಬರ ತಾ. ೧೫ರಿಂದ ೧೭ ಬೆಳ್ತಂಗಡಿ, ೧೮ ಪುತ್ತೂರು ೨೦ ಪುತ್ತೂರು, ಮಂಗಳೂರು ೨೧ರಿಂದ ೨೪ ಕುಂಬಳೆ ೨೫ರಿಂದ ೨೮ ಮಂಜೇಶ್ವರ, ೨೯ ಮಂಗಳೂರು, ೩೦ ಪುತ್ತೂರು.

ಪುತ್ತೂರು ತಾಲೂಕು ಬೋರ್ಡಿನ ಮೀಟಿಂಗ್ ಇದೇ ತಿಂಗಳ ತಾ. ೨೨ರಲ್ಲು ಕುಂಬಳೆ ಮೊಕ್ಕಾಮಿನಲ್ಲಿ ಜರಗುವದು.
~~~~~

ಈ ವರುಷ ಇಲ್ಲಿಯು ಕೆಲವರಿಗೆ ಇನ್‌ಕಮ್‌ಟೆಕ್ಸ್ ಹೊರಿಸುವದರಲ್ಲಿ ಅನ್ಯಾಯವಾಗಿದೆಂಬದಾಗಿ ಟೆಕ್ಸಿನ ಹಣ ಕೊಡದೆ ತಗಾದಾ ಪತ್ರ ಮೂಲಕ ಜಪ್ತಿಗೆ ಬಂದಾಗ್ಯೆ ಸೊತ್ತುಗಳನ್ನೆ ತೋರಿಸಿದ ಮೇರೆಗೆ ಗ್ರಾಮಾಧಿಕಾರಿಗಳು ಸೊತ್ತುಗಳನ್ನು ಜಪ್ತಿಮಾಡಿಕೊಂಡು ಹೋಗಿರುವರು

~~~~

ಬಂಟವಾಳ:— ಇದೇ ತಾ ೧೧ರಲ್ಲಿ ಇಲ್ಲಿಯ ದೇವಸ್ಥಾನದ ಪಂಚಮಹಾಲದ ಹೋಲ್‌ದಲ್ಲಿ ಬಂಟವಾಳ ಯೂನಿಯನ್ ಸಂಘದ ಪ್ರವೇಶೋತ್ಸಹ. ಊರಲ್ಲಿ ಆಸಕ್ತಿಯುಳ್ಳ ಮಹಾಶಯರು ತಂಡಗಟ್ಟಿ ನೆರೆದು ಬಂದಿದ್ದರು. ಅಗ್ರಾಸನವನ್ನು ಶ್ರೀಯುತ ಎಮ್. ಎ. ಕಾಮತ್ ಡಾಕ್ಟರರವರು ವಹಿಸಿದ್ದರು. ಹತ್ತು ಗಂಟೆಗೆ ಸರಿಯಾಗಿ ಬೋರ್ಡ್‌ಮೆಂಬರರೂ ಸದರೀ ಯೂನಿಯನದ ಅಧ್ಯಕ್ಷರೂ ಆಗಿರುವ ರಾ. ಕೆ. ಕೃಷ್ಣರಾವ್‌ರು ವಾಚನ ಮಂದಿರಗಳನ್ನು ಕುರಿತಾಗಿಯೂ, ಅವುಗಳಿಂದುಂಟಾಗುವ ವಿಶೇಷ ಪ್ರಯೋಜನಗಳನ್ನು ಕುರಿತಾಗಿಯೂ, ಈ ಗ್ರಾಮದಲ್ಲೂ ಅಂತಹುದೊಂದು ಸಂಘವನ್ನೇರ್ಪಡಿಸಿಕೊಂಡಿರುವ ಕಾರಣ ಉಂಟಾಗಬಹುದಾಗಿರುವ ಭವಿಷತ್ಫಲಗಳನ್ನು ಕುರಿತಾಗಿಯೂ ಭಾಷಣಮಾಡಿದರಾದರು. ರಾ| ಬಿ. ನರಸಿಂಹ ಪ್ರಭುಗಳು, ಹಿಂದೂಮಾತೆಯ ಎರಡೂ ಕಣ್ಣುಗಳಂತೆ ಶೋಭಿಸುತ್ತಲಿರುವ ಹಿಂದೂಮುಸಲ್ಮಾನರು, ಪರಸ್ಪರ ಅನುರಾಗದಿಂದಲೂ ಏಕಮತ್ಯದಿಂದಲೂ ವರ್ತಿಸಿದಲ್ಲಿ ಉಂಟಾಗುವಹುದಾದ ಪ್ರಯೋಜನಗಳನ್ನು ಕುರಿತು ಮಾತನಾಡಿ, ಇಂತಹ ವರ್ತನೆಯು ದೇಶೋನ್ನತಿಗೆ ಹೇಗೆ ಸಾಧಕವಾಗುವುದು. ಮತ್ತೂ ಇದನ್ನು ಇವಾಗಲೇ ಕೈಕೊಳ್ಳುವ ಬಗೆ ಹೇಗೆಂಬುವುಗಳನ್ನು ವಿಶದೀಕರಿಸಿದರು. ವ್ಯೆಸೂರು, ಬರೋಡ, ಸಂಸ್ಥಾನಗಳಲ್ಲಿ ಗ್ರಾಮೋನ್ನತಿಯನ್ನು ಸಾಧಿಸುವ ಬಗ್ಗೆ ಅಪಾರ ಸಹಾಯವನ್ನು ಸರಕಾರವೂ ಮಾಡುತ್ತಿದೆ? ಗ್ರಾಮಸ್ಥರು ಅಲ್ಲಿ ನೆರೆದು ಬಂದು ಮಾಡತಕ್ಕ ಕಾರ್ಯಗಳ್ಯಾವುವು? ಈ ಸಂಸ್ಥೆಯ ವಿಶೇಷತ್ವವೇನು? ದೇಶಾಂಗದ ಉನ್ನತಿಗೆ, ಸರಕಾರಕ್ಕೂ ಪ್ರಜೆಗಳಿಗೂ ಮಧ್ಯಸ್ಥವಾದ ಇಂತಹ ಗ್ರಾಮ ಸಂಘದ ಫಲವೇನು? ಇದನ್ನು ಯಾವ್ಯಾವ ಪ್ರಯತ್ನಗಳ ಮೂಲಕವಾಗಿ ಸಾಧಿಸಬಹುದು? ಎಂಬಿತ್ಯಾದಿ ವಿಷಯಗಳನ್ನು ಕುರಿತು ಶ್ರೀದೇವಳ ಸೆಕೆಂಡರಿ ಶಾಲಾ ಮಾಸ್ತರರು ತಿಳಿಸಿದರು. ನಂತರ ಅಧ್ಯಕ್ಷರು ಸಂಘದ ಕಾರ್ಯವು ಇಂದಿಗೆ ಪ್ರಾರಂಭವಾಯಿತೆಂದು ತಿಳಿಸಿದೊಡನೆ, ಪ್ರಾರ್ಥನೆಯೂ ರಾಜಗೀತೆಯೂ ದೇವಳ ಶಾಲಾ ಬಾಲಕರಿಂದ ಹಾಡಿಸಿದಾಯಿತು. ಸಂಘಕ್ಕೆ ಪ್ರಕೃತದಲ್ಲಿ ೬೩ ಸದಸ್ಯರಿದ್ದಾರೆ. ಇಂಗ್ಲಿಷು, ಕನ್ನಡ, ಮರಾಠಿ, ಹೀಗೆ ೧೦ ೧೫ ಪತ್ರಗಳೂ ಬರುತ್ತಲಿವೆ. ಅದಲ್ಲದೆ ಸುಮಾರು ೧೫೦ ಉಪಯುಕ್ತವಾದ ಪುಸ್ತಕಗಳ ಸಂಗ್ರಹವೂ, ಬೇಕಾದ ಉಪಕರಣಗಳ ಬಗ್ಗೆ ರೂ. ೧೫೦ರಷ್ಟು ದಾನವೂ ದೊರಕಿದೆ.

ಇಷ್ಟರೊಳಗಾಗಿ, ಅನೇಕ ಕ್ಲಬ್ಬುಗಳು ನೀರ್ಗುಳ್ಳೆಗಳ ಜೀವನವನ್ನು ಪಡೆದು ಕ್ಷಣಕಾಲಕ್ಕೆ ರಂಜಿಸಿ ನಂತರ ಮಾಯವಾಗಿ, ಅವುಗಳಿಗೆ ಅಶ್ರುಯಿತ್ತವರನ್ನು ನಿರಾಶೆಗೊಳಿಸಿದ್ದದರಿಂದ, ಹೊಸ ಸಂಘಗಳೆಂದರೆ ಇಲ್ಲಿಯ ಕೆಲವರಿಗೆ ಹಾಸ್ಯಾಸ್ಪದವೂ, ಬೆದರಿಕೆಯೂ ಉಂಟಾಗಲು ಕಡಮೆಯಿಲ್ಲ. ಆದರೆ, ಕೇಡು. ಕೆಡುಕಣ್ಣು ಮೊಳಕೆಗಳೇ ಈ ಹೊಸ ಸಂಘದಲ್ಲಿರದಂತೆ ತಕ್ಕ ಏರ್ಪಾಡು ನಡೆದಿರುವುದರಿಂದಲೂ, ಅಗತ್ಯವಾದ ನಿಸ್ವಾರ್ಥಸೇವೆಯನ್ನು ಕೈಕೊಂಡಿರುವ ಎಷ್ಟೋ ಸದಸ್ಯರು ಇದರಲ್ಲಿ ಉಚಿತವಾದಂತೆ ಸೇವೆಯನ್ನು ಚಟುವಟಿಕೆಯಿಂದ ಮಾಡುತ್ತಿರುವದರಿಂದಲೂ, ಪ್ರತಿಯೊಬ್ಬ ಸದಸ್ಯನಿಗೆ ಅಭಿರುಚಿಯಿರುವ ಯಾವದೊಂದು ವಿಷಯವನ್ನು ಈ ಸಂಘವು ಸೌಕರ್ಯದಿಂದ ಒದಗಿಸುವುದಾಗುದರಿಂದಲೂ, ಯಾರ ತಿರಸ್ಕಾರಕ್ಕೆಯಾಗಲಿ ನಿಂದೆಗಾಗಲಿ ಬೆಚ್ಚದೆ ತಮ್ಮ ಕೆಲಸವನ್ನು ತಾವು ಮುಂದುಮಾಡಲೆಳಸಿರುವ ಅಧ್ಯಕ್ಷರೂ ಕಾರ್ಯನಿರ್ವಾಹಕರೂ ಈ ಸಭೆಯ ಚಾಲಕರಾಗಿಯಿರುವುದರಿಂದಲೂ,— ಈ ಸಭೆಯು ತನ್ನ ಉಚ್ಚ ಉದ್ದಿಶ್ಯಗಳನ್ನು ನೆರವೇರಿಸದೆ ಇರಲಾರದೆಂದು ಖಂಡಿತವಾಗಿಯೂ ಹೇಳಬಹುದು. ಮೊದಲು ಹೀಗೆ ಪರಸ್ಪರಸಾಹಾಯ್ಯಕ ಸಂಘವನ್ನು ತೆರೆದೊಡನೆ ಕೆಲವರು ಅದನ್ನು ಇದಿರಿಸಿ ಖಂಡಿಸುತ್ತಿದ್ದು, ಕೊನೆಗೆ ಇವೆರಡು ವರ್ಷಗಳಿಗೊಳಗಾಗಿಯೆ ಆ ಸಂಘದಿಂದ ಸಾಲಪಡೆದು ಅನ್ಯರಿಗೆ ಸಾಲ ಒದಗಿಸಿಕೊಡುತ್ತಲಿದ್ದಾರೆಯೊ, ಹಾಗೆಯೆ, ಈಗ ಇದರ ಸದುದ್ದೇಶಗಳನ್ನು ತಿಳಿಯದೆ ಗುಣುಗುಟ್ಟುತ್ತಿರುವವರೇ ಇನ್ನು ಕೆಲದಿನಗಳೊಳಗೆ ತಾವಾಗಿ ಬಂದು ಈ ಸಂಘದಲ್ಲಿ ಅಗ್ರಗಣ್ಯರೆಂದೆನಿಸುವ ಹಾಗೆ ಏಕೆ ವರ್ತಿಸಬಾರದು? ಸಂಘವು ಮಾತ್ರ ಇಂತಹರನ್ನು ಸೇರಿಸಿಕೊಳ್ಳುವಷ್ಟರ ಯೋಗ್ಯತೆಯುಳ್ಳದ್ದಾಗಿರಲೆಂದು ಸಂಘಚಾಲಕರಿಗೆ ವಿಜ್ಞಾಪಿಸಿಕೊಂಡಿರುವೆವು.

ಕೋಳೀ ಜೂಜಾಟವು ನಡೆಯದ ಹಾಗೆ ಪ್ರತಿಬಂಧಿಸುವಂತೆ ಪೋಲೀಸಿನವರಿಗೆ ಅಧಿಕಾರವಿದೆಯಾಗಿಯೂ, ಅವರು ಈ ಜೂಜಾಟದವರನ್ನು ಶಿಕ್ಷೆಗೆ ಗುರಿಪಡಿಸಬೇಕಾಗಿಯೂ ಕಾನೂನು ಇದೆಯಂತೆ! ಪ್ರಕೃತ ಇಲ್ಲಿ ಒಂದು ತಿಂಗಳಿನಿಂದಲೂ ಜೂಜುನಡಿಯುತ್ತಲೇ ಇದೆ. ಇಂತಹ ಜೂಜಾಟದ ರಂಗಸ್ಥಳದಲ್ಲಿ ಪೋಲೀಸಿನವರೂ ಮುಗುಳುನಗುಗೂಡಿ ಅತ್ತಿತ್ತ ನಲಿದಾಡುವುದೂ ತೋರುತ್ತಿದೆಯಾದುದರಿಂದ ಅಂತಹ ಕಾನೂನು ಇದ್ದರೂ ರದ್ದಾಗಿರಬೇಕೆಂದು ಭಾವಿಸುವೆವು.

~~~~

ಮಂಗಳೂರು.

~~~~

ಕಳದ ವಾರ ಮಂಗಳೂರು ಮುನಿಸಿಪಾಲಿಟಿಯಲ್ಲಿ ೩ ಪ್ಲೇಗು ಮರಣಗಳಿದ್ದವು.

ಮೋಡಗಳು ಆಕಾಶದಲ್ಲಿ ಆಗಿಂದಾಗ್ಯೆ ಕಾಣಿಸಿಕೊಳ್ಳುತ್ತಿವೆಯಾದರೂ ಮಳೆಯಾಗದೆ ಹವಾಗುಣದಲ್ಲಿ ಶಿಷೆಯು ಏರುತ್ತಲಿದೆ. ಇದರಿಂದ ಊರಲ್ಲಿ ಆರೋಗ್ಯವು ಸರಿಯಾಗಿರದು. ಪ್ಲೇಗು ಮರಣಗಳು ಇಲ್ಲವಾದರೂ ಈ ಹವಾಗುಣದಿಂದ ಇಲಿಗಳು ಬೀಳುವಂಥಾದ್ದು ಹೆಚ್ಚಿದೆ ಈ ಕಾಲದ ನೀರಿನಿಂದ ಪೂರ್ಣ ತುಂಬಿರಬೇಕಾದ ಕುಡಿಯುವ ನೀರಿನ ಭಾವಿಗಳನ್ನು ನೋಡಿದರೆ ಸಾಧಾರಣ ಜನವರಿ, ಫೆಬ್ರವರಿ ತಿಂಗಳುಗಳಲ್ಲಿ ಬೇಕಾದಷ್ಟು ನೀರು ಮಾತ್ರ ಬಾವಿಗಳಲ್ಲಿ ಕಾಣಿಸುವದು. ಈ ಲಕ್ಷಣಗಳಿಗನುಗುಣವಾಗಿ ಅಕ್ಕಿ ಧಾರಣೆಯು ಹೆಚ್ಚುತ್ತಿರುವುದು.

ಈ ಸರ್ಕಲಿನ ಶಾಲಾ ಇನ್ಸಪೆಕ್ಟರರಾದ ಮೆ. ಯೇಟ್ಸ್ ದೊರೆಗಳವರು ಶಾಲೆಗಳ ತನಖಿ ಬಗ್ಯೆ ಎರಡು ದಿವಸಗಳ ಹಿಂದೆ ಇಲ್ಲಿಗೆ ಬಂದಿರುವರು. ಕೆನರಾ ಹ್ಯಾಸ್ಕೂಲಿನ ಪರೀಕ್ಷೆಯು ಪ್ರಕೃತ ನಡಿಯುತ್ತಿರುವುದು.

ಗಣೇಶಚತುರ್ಥಿ ವ್ರತವನ್ನು ಪಾಣೆಮಂಗಳೂರು, ಸಜೀಪ, ಮುನ್ನೂರು, ಹೊಸದುರ್ಗ ಪ್ರಾಂತ್ಯಗಳ ಹೊರತು ಮಿಕ್ಕ ಎಲ್ಲಾ ಕಡೆಗಳಲ್ಲಿಯೂ ಆಧಿಕ್ಯವಾಗಿ ಆಚರಿಸಿದರೆಂಬುದಾಗಿ ತಿಳಿಯುತ್ತೇವೆ.

ಆಕ್ಟಿಂಗ್ ಕಲೆಕ್ಟರ ದೊರೆಗಳವರ ತಿದ್ದಿದ ಸರ್ಕೀಟು ಕ್ರಮಪಟ್ಟಿಯು ಈ ರೀತಿಯಾಗಿರುವುದು. ತಾ. ೨೦ ಕಾರ್ಕಳ, ತಾ. ೨೧ ಕಾರ್ಕಳದಿಂದ ಮೂಡಬಿದ್ರಿ, ತಾ. ೨೩ ಮೂಡಬಿದ್ರೆಯಿಂದ ಬೆಳ್ತಂಗಡಿ, ತಾ. ೨೪-೨೫ ಬೆಳ್ತಂಗಡಿ, ತಾ. ೨೬ ಬೆಳ್ತಂಗಡಿಯಿಂದ ಮಂಗಳೂರು:

ಮೂಲವ್ಯಾಧಿ, ಆಸನಕುರು, ಗಂಟಮಾಲೆ ಮೊದಲಾದವುಗಳಿಗೆ ಶಸ್ತ್ರಪ್ರಯೋಗ ಮಾಡದೆ ಚಿಕಿತ್ಸೆ ನಡಿಸಲು ಗೊತ್ತುಳ್ಳ ಮದ್ರಾಸಿನ ವಿ. ಡಿ. ಪರಮಶಿವ ಪಿಳ್ಳೆ ಎಂಬವರು ಇಲ್ಲಿಗೆ ಬಂದಿರುವರು. ರಾಜಶ್ರೀ ನಗರಕಾರ್ ಎಂಡ್ ಸನ್ಸ್ ಇವರ ನಗರ ಶ್ರೀನಿವಾಸರಾವ್‌ರವರು ಇವರಿಂದ ಮೂಲವ್ಯಾಧಿಗೆ ಚಿಕಿತ್ಸೆ ಮಾಡಿಸಿಕೊಂಡು ಗುಣಹೊಂದಿರುವರೆಂದು ತಿಳಿಯುತ್ತೇವೆ. ಇವರಿಂದ ಚಿಕಿತ್ಸೆ ಪಡಿಯಲು ಅಪೇಕ್ಷಿಸುವವರು ಇಲ್ಲಿಯ ಹಿಂದೂ ಹೊಸ್ಟೆಲಿನಲ್ಲಿ ಈ ಪಿಳ್ಳೆಯವರನ್ನು ಕಂಡು ಮಾತಾಡಬಹುದು.

ಮಂಗಳೂರು ಪಂಚಮರ ಉದ್ಧರಣೆ ಬಗ್ಗೆ ಇಲ್ಲಿಯ ನಿರಾಶ್ರಿತರ ಸಹಾಯಕ ಸಂಘಕ್ಕೆ ಎಗ್ಸಿಕ್ಯೂಟಿವ್ ಇಂಜಿನಿಯರ್ ಭಾಸ್ಕರಯ್ಯನವರೂ, ಕಲೆಕ್ಟರ್ ಕರ್ಗನವೆನ್ ದೊರೆಗಳೂ, ಡಿಸ್ಟ್ರಿಕ್ಟ್ ಜಡ್ಜ್ ಪಿ. ಸಿ. ಸ್ಮಿತ್ ದೊರೆಗಳೂ, ವಕೀಲ್ ಮ|| ರಾ|| ರಾ|| ಕಾಸರ್ಗೋಡ ಸದಾಶಿವರಾಯರೂ, ತಿಂಗಳಿಗೆ ರೂ. ೫ರ ಪ್ರಕಾರ ವಂತಿಗೆ ಕೊಡುವ ಸಹಾಯಕರಾಗಿದ್ದಾರೆ.

~~~~

ಜೀನಸು ಧಾರಣೆ. (ರಖಂ)

ಮುಷ್ಟಿ ಅಕ್ಕಿ	5— 8—0	5—14—6
ಗಾಡಿ ರಾಶಿ ,,	5— 0—0	5— 2—0
ಗುಡ್ಡೆ ,,	5— 2—0	5— 8—0
ಅವ್ವಲ್ ಬೆಳ್ತಿಗೆ ,,	6— 8—0	7— 2—0
ಗುಡ್ಡೆ ಬೆಳ್ತಿಗೆ ,,	5— 8—0	5—14—0
ರಂಗೂನು ಬೆಳ್ತಿಗೆ ಗೋಣಿ ೧ರ	10— 0—0	10— 8—0
ಗೋಧಿ ಗೋಣಿ ೧ರ	. . . . .	10— 4—0
ಹುರುಳಿ ಗೋಣಿ ೧ರ ...	6—12—0	7— 0—0
ಕಡಲೆ ಗೋಣಿ ೧ರ. ,,	8— 8—0	9— 8—0
ತೊಗರಿ ಗೋಣಿ ೧ರ ...	10— 0—0	11— 8—0
ತೊಗರಿ ಬೇಳೆ ಗೋಣಿ ೧ರ	12— 8—0	15— 0—0
ಉದ್ದು ಗೋಣಿ ೧ರ	. . . . .	10— 0—0
ಊರುಬೆಲ್ಲ ಖಂಡಿ ೧ರ ...	... ...	75— 0—0
ಉಪ್ಪು ಗೋಣಿ ೧ರ	3—12—0	3—14—0
ಕೊಬ್ರಿ ಖಂಡಿ ೧ರ	70— 0—0	75— 0—0
ಕೊಬ್ರಿ ಹಿಂಡಿ ಖಂಡಿ ೧ರ	20—0—0	21— 0—0
ಎಳ್ಳಿಂಡಿ ಖಂಡಿ ೧ರ	17— 8—0	28—12—0
ಕೊಬ್ರಿ ಎಣ್ಣೆ ಮುಡಿ ೧ರ	6— 0—0	6— 4—0
ಎಳ್ಳೆಣ್ಣೆ ಮುಡಿ ೧ರ(ಕುರಾಸನ)	4— 0—0	4— 2—0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ರ	4— 9—0	5— 0—6
ಮೋರಿಸ್ ಸಕ್ಕರೆ ಮುಡಿ ೧ರ	. . .	5— 0—0
ಕಾಫಿ ಖಂಡಿ ೧ರ	240— 0—0	252— 0—0
ಹೊಸಬೀಳಗೋಟು ಖಂಡಿ೧ರ	94— 0—0	98— 0—0
ಹೊಸ ಗೇರುಬೀಜ ಮುಡಿ ೧ರ	. . . .	2—10—0
ಕಬ್ಬಿಣ ಖಂಡಿ ೧ರ	. . . .	60— 0—0
ತಾಂಬ್ರ ತಗಡು ಮಣ ೧ರ	. . .	20— 0—0
ತಾಂಬ್ರ ಪಾತ್ರಗಳು ಮಣ ೧ರ	. . .	22— 0—0
ಚೀನಿ ಬೆಳ್ಳಿ ಶೇರು ೧ರ	. . .	18—12—0
ಪಚ್ಚೆ ಹೆಸರು ಮುಡಿ ೧ರ	5— 8—0	5—10—0

ನೋಟೀಸು.

ದಕ್ಷಿಣಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ

ಒ ಪಿ ನಂಬ್ರ $\frac{ }{15}$

ಕಡೂರು ಡಿಸ್ಟ್ರಿಕ್ಟ್ ಕೊಪ್ಪ ತಾಲೂಕು ಇಜಬೆಲ ಕಾಫಿ ತೋಟದಲ್ಲಿ ತಾ. 15-6-1915ಲ್ಲಿ ಮೃತಪಟ್ಟ ರ್‍ಯಾಮೊಂದ ಬ್ರ್ಯಾಗ್ಸನ ಊಹಿಲಿನ ಬಾಬಿನಲ್ಲಿ.

1. ವೆರೋನಿಕಾ ಡಿ ಸೋಜ ಬ್ಯಾ } ಅರ್ಜಿದಾರರು
2. ಜೊನ ಬಿ. ಬ್ರ್ಯಾಗ್ಸ }

ಮೃತಪಟ್ಟ ರ್‍ಯಾಮೊಂದ ಬ್ರ್ಯಾಗ್ಸನ ಊಹಿಲಿನ ಪ್ರಕಾರ ಲೆಟರ್ಸ್ ಆಫ್ ಎಡಮಿನಿಸ್ಟ್ರೇಷನ್ ಕೊಡಬೇಕಾಗಿ ಅಪೇಕ್ಷಿಸಿ ಅರ್ಜಿದಾರರು ದಾಖಲು ಮಾಡಿದ ಅರ್ಜಿಯು ತಾ. 5—10—1915ಕ್ಕೆ ದಕ್ಷಿಣಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ತನಿಕೆಗೆ ಇಟ್ಟಿರುತ್ತದೆ. ಈ ಕುರಿತು ಆಕ್ಷೇಪ ಇದ್ದವರು ಸದರಿ ತಾರೀಕಿನಲ್ಲಿ ಸದರಿ ಕೋರ್ಟಿನ ಮುಂದೆ ಹಾಜರಾಗಿ ಜಾಹಿರು ಮಾಡತಕ್ಕದ್ದು.

ಮಂಗಳೂರ.
ತಾ. 13-9-1915

A. C. Gonsalves,
Vakil for Petitioners.

ನೋಟೀಸು.

ಹಿಂದು ಟ್ರೇನ್ಸಿಟ್ ಕಂಪೆನಿ, ಮಂಗಳೂರು.

ನೇ ಸಪ್ಟಂಬರ ತಾ. 11ರ ಲಾಗಾಯಿತು ಮುಂಚಿನಕ್ಕಿಂತಲೂ ದರಗಳನ್ನು ಕಡಿಮೆ ಮಾಡಿ ಈ/ಕೆಳಗಿನ ಚಾರ್ಜು ಇಡೋಣಾಗಿಯದೆ

ಮಂಗಳೂರಿನಿಂದ ಉಡ್ಪಿಗೆ	ಮೈಲ್ ಗಾಡಿ	ರೂ. 2—0—0
ಮತ್ತು	I ಕ್ಲಾಸ್	,, 2—0—0
	II ,,	,, 1-12—0
ಉಡ್ಪಿಯಿಂದ ಮಂಗಳೂರಿಗೆ.	III ,,	,, 1—8—0
ಮಂಗಳೂರಿನಿಂದ ಮುಲ್ಕಿಗೆ		,, 1—0—0
ಮತ್ತು		,, 0-14—0
ಮುಲ್ಕಿಯಿಂದ ಮಂಗಳೂರಿಗೆ.		,, 0-13—0
ಉಡ್ಪಿಯಿಂದ ಕುಂದಾಪುರಕ್ಕೆ	ಮೈಲ್ ಗಾಡಿ	,, 1—4—0
ಮತ್ತು	I ಕ್ಲಾಸ್	,, 1—4—0
ಕುಂದಾಪುರದಿಂದ ಉಡ್ಪಿಗೆ.	II ,,	,, 1—2—0
ಮಂಗಳೂರಿನಿಂದ ಪುತ್ತೂರಿಗೆ ಮತ್ತು ಪುತ್ತೂರಿನಿಂದ ಮಂಗಳೂರಿಗೆ.		,, 1—0—0
ಮಂಗಳೂರಿನಿಂದ ಬಂಟ್ವಾಳಕ್ಕೆ		,, 0-10—0
ಬಂಟ್ವಾಳದಿಂದ ಮಂಗಳೂರಿಗೆ.		,, 0—8—0

Mangalore,
25th August, 1915.

N. V. Rau,
Manager.

ಕನ್ನಡ ಮಾಸಪತ್ರಿಕೆ.



ವಿಕಟ ವಿನೋದಿನಿ.

ಹಾಸ್ಯರಸ ಪ್ರಧಾನವಾದ ಮತ್ತು ನೀತಿಪರವಾದ ಹಾಸ್ಯೋಲ್ಲೇಖನಗಳಿಂದ ಕೂಡಿರುವ ಸಚಿತ್ರವೂ ವಿಚಿತ್ರವೂ ಆದ ಮಾಸಪತ್ರಿಕೆಗೆ ಒಂದು ವರುಷದ ಚಂದಾ ಅಂಚೆ ಹಾಸಲು ಸೇರಿ ರೂ. 1 ಮಾತ್ರ.

ನಮ್ಮ ವಿಳಾಸ:— "ವಿಕಟ ವಿನೋದಿನಿ" ಆಫೀಸು,
ಅರಳೆಪೇಟೆ, ಬೆಂಗಳೂರು ಸಿಟಿ

ಪ್ರಿಯರೇ,

ನಾವು ಮದ್ರಾಸಿಗೆ ಹೋದರೆ ಯಾಂಲ್ಲಿ ಉಳಕೊಳ್ಳುವದು? ಎಂಬ ಈ ಚಿಂತೆ ನಮಗೆ ಇನ್ನು ಮೇಲೆ ಬೇಡ. ಯಾಕಂದರೆ, ಅಲ್ಲಿದ್ದ ನಮ್ಮೂರಿನ ಸೋಮೇಶ್ವರ ನರಶಿಂಗರಾಯರು ಮುಂಚಿಗಿಂತ ರೈಲ್ವೆ ಸ್ಟೇಶನಿಗೆ ಇನ್ನೂ ಹತ್ತರದಲ್ಲಿ ಇನ್ನೂ ವಿಶಾಲವಾದ ಉಪ್ಪರಿಗೆ ಮನೆ ತಕ್ಕೊಂಡಿದ್ದಾರೆ. ಮುಂದಾಗಿ ಒಂದು ಕಾರ್ಡು ಬರೆದರೆ ಸ್ಟೇಶನಿಗೇ ಜನಕಳುಹಿಸಿ ನಿಮ್ಮನ್ನು ಆಮಂತ್ರಿಸುತ್ತಾರೆ. ಊಟಕ್ಕೂ ವಸತಿಗೂ ಮನೆಯಷ್ಟೇ ಸೌಕರ್ಯ ಖರ್ಚೇನೂ ವಿಶೇಷವಿಲ್ಲ. ಹೀಗಿರುವಲ್ಲಿ ನಿಮ್ಮ ಕಾರ್ಯವನ್ನು ಸ್ವತಹಾ ಹೋಗಿ ಜಯಿಸಿಕೊಂಡು ಒರದಕ್ಕೆ ಅನುಮಾನಪಡುವದೇಕೆ?

ವಿಳಾಸ:— ಸೋಮೇಶ್ವರ ನರಶಿಂಗರಾವ್,
ಕೋಮಲ ವಿಲಾಸ,
ರಸಪ್ಪಚೆಟ್ಟಿ ಬೀದಿ, ಮದರಾಸು.

ನ್ಯಾಯದರ್ಪಣ.

ಹೊಸ ಪುಸ್ತಕ.

ಇಂಡಿಯಾ ದೇಶದ ಸಮಸ್ತ ಹಿಂದೂ ಜನರ ಸಾಮಾನ್ಯ ಧರ್ಮಗಳು, ಅವುಗಳನ್ನು ಅತಿಕ್ರಮಿಸಿ ನಡೆಯುವವರಿಗೆ ಉಂಟಾಗತಕ್ಕ ಫಲಗಳು, ಇವುಗಳನ್ನು ಕುರಿತು ಗವರ್ನಮೆಂಟಿನವರಿಂದ ಅನೇಕ ಆಕ್ಟುಗಳು, ರೆಗ್ಯುಲೇಷನ್‌ಗಳು, ಶಾಸನಗಳು, ವಗೈರೆ ವಿಧಾಯಕವಾಗಿ ಇರುತ್ತೆ. ಇವುಗಳೆಲ್ಲಾ ಇಂಗ್ಲೀಷ್ ಭಾಷೆಯಲ್ಲಿಯೇ ಅಪಾರವಾಗಿ ಇರುತ್ತವೆ. ಇವುಗಳಲ್ಲಿ, "ಕಂಟ್ರಾಕ್ಟ್" ಅಂದರೆ ಕರಾರುಗಳು, "ಬ್ರೀಚ್ ಆಫ್ ಕಂಟ್ರಾಕ್ಟ್" ಅಂದರೆ ಒಪ್ಪಂದಕ್ಕೆ ತಪ್ಪಿ ನಡೆಯೋಣ, ದ್ರೋಹ, ಲಿಮಿಟೇಷನ್, ಛಾಪಾಕಾಗದ, ರಿಜಿಸ್ಟ್ರೇಷನ್, ಸಿವಿಲ್ ಪ್ರೊಸಿಡ್ಯೂರ್, ಕ್ರಿಮಿನಲ್ ಪ್ರೊಸಿಡ್ಯೂರ್, ಪೀನಲ್ ಕೋಡ್, ಹಿಂದೂ ಲಾ, ಮುಂತಾದ ಧರ್ಮಶಾಸ್ತ್ರಗಳಿಂದ, ಮನುಷ್ಯರ ನಿತ್ಯಾಚರಣೆಗೆ ಅವಶ್ಯಕವಾದ ಲೌಕಿಕ ವ್ಯವಹಾರ ಧರ್ಮಗಳ ಮುಖ್ಯ ಸಂಗತಿಗಳನ್ನೆಲ್ಲಾ ಆರಿಸಿ ಈ ಸಣ್ಣ ಪುಸ್ತಕವನ್ನು ರಚಿಸಿರುತ್ತೆ ಮತ್ತು ವಾಡಿಕೆಯಲ್ಲಿ ಇರತಕ್ಕ ನಾನಾ ವಿಧಗಳಾದ ದಸ್ತೈವಜುಗಳ ಅನೇಕ ನಮೂನೆಗಳು ಮತ್ತು ಕ್ರಿಮಿನಲ್ ರೆವಿನ್ಯು ಗ್ರಾಮ ಮುನಸೀಫ್ ಕೋರ್ಟುಗಳ ಮುಂದಿನ ದಾವಾ ವಗೈರೆ ಅರ್ಜಿಗಳ ಮಾದರಿಗಳು ಅಡಕವಾಗಿ ಇರುತ್ತೆ. ಬೆಲೆ 1—8—0. ವಿ. ಪಿ. 1—12—0.

ಲಾಯರ್ ಯಂ ಯಸ್. ನಂಜಪ್ಪನವರು,
ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

11 ಪುಸ್ತಕಗಳನ್ನು ಒಟ್ಟಾಗಿ ತರಿಸಿಕೊಂಡರೆ ಪೋಸ್ಟೇಜು ಶೇರಿ 15-0-0 ಆಗುತ್ತೆ.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,
ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ.

೧. ಕುಟುಂಬಜೀವನಿ—ಎಲ್ಲಾ ರೋಗಗಳನ್ನು ತ್ವರಿಯಾಗಿ ಗುಣಪಡಿಸುವದು. 16 ಔಷಧಗಳ ಸಂಗ್ರಹದ ಪೆಟ್ಟಿಗೆ 1ಕ್ಕೆ 8—0—0.

೨. ಶತಮೂಲಿಕಾ ಅಮರಸಂಜೀವನಿ—ಈ ಟೊನಿಕ್ ದ್ರಾವಕವು ನಿತ್ರಾಣಿಗಳಿಗೆ ಚೈತನ್ಯ ಉಂಟುಮಾಡಿ ಶುಮರಕ್ತವನ್ನು ಕೊಡುತ್ತದೆ. ಬಾಟ್ಲಿ 1ಕ್ಕೆ 1—0—0.

೩. ಬಾಲಸಂಜೀವನಿ—ಮಧುರ ಟೊನಿಕ್ ಅಶಕ್ತ ಬಾಲಕರಿಗೆ ಸಶಕ್ತರಾಗಿ ಮಾಡಿ ವರ್ಧಮಾನ ಚಂದ್ರನಂತೆ ಬೆಳಗಿಸುತ್ತದೆ. ಬಾಟ್ಲಿ 1ಕ್ಕೆ 0—12—0.

೪. ವಸಂತ ಕುಸುಮಾಕರ.—ಈ ಸುವಾಸಿಕ ತೈಲವು ಕೇಶ ವೃದ್ಧಿಮಾಡಿ ಶಿರೋರೋಗ ನೇತ್ರರೋಗಗಳನ್ನು ಶಮನಮಾಡಿ ಮೆದುಳನ್ನು ತಂಪು ಮಾಡಿ ಜ್ಞಾನಶಕ್ತಿ, ಚಿತ್ತಶಿ, ಬುದ್ಧಿ ಭ್ರಮಣವನ್ನು ಗುಣಮಾಡುತ್ತದೆ. ಬಾಟ್ಲಿ 1ಕ್ಕೆ 1—0—0

೫. ಸುದರ್ಶನಮಾಲಿನಿ—ಈ ಸಿದ್ಧೌಷಧವು ಮೇಹವ್ರಣ ಇತ್ಯಾದಿ ಎಲ್ಲಾ ದುಸಾಧ್ಯ ವ್ರಣಗಳನ್ನು 7-8 ದಿವಸಗಳಲ್ಲಿ ಪೂರ್ಣ ಗುಣಪಡಿಸುವದು. ಕ್ರಯ 4—0—0.

೬. ಗರುಡಧ್ವಜ—ಇದು ಸರ್ಪ ಹುಚ್ಚುನಾಯಿ, ಚೇಳು, ಇಲಿ ಇತ್ಯಾದಿ ಸರ್ವ ಕಟಿಣ ವಿಷಗಳಿಗೆ ಸಂಜೀವನವಾಗಿರುತ್ತದೆ. ಅನುಭವಸಿದ್ಧ 2—0—0

೭. ಆನಂದವನವಿಲಾಸ—ಇದು ಡ್ಯಾಬಿಟಿಸ ಎಂಬ ಬಹುಮೂತ್ರ ರೋಗವನ್ನು 48 ದಿವಸಗಳಲ್ಲಿ ಪೂರ್ಣ ಗುಣಪಡಿಸುತ್ತದೆ. ಪೂರ್ಣ ಔಷಧಕ್ಕೆ 5—0—0.

ನಮ್ಮ ಡಿಸ್ಪೆನ್ಸರಿಯಲ್ಲಿ ಸಿದ್ಧ ಕಲ್ಪ ಭೈರಾಗಿ ಪ್ರಯೋಗಗಳಿಂದ ತಯಾರಿಸಿದ ಪೌಷ್ಟರ ಮಾತ್ರೆಗಳು, ಲೋಹ ಚೂರ್ಣಗಳು, ತೈಲ ಘೃತಗಳು, ಆಸವಾರಿಷ್ಟಗಳೂ ಸುಂಬಾ ಇರುತ್ತವೆ. ಕ್ರಯವಿಲ್ಲದ ನಮ್ಮ ಕೆಟಲಗನ್ನು ತರಿಸಿಕೊಳ್ಳಿರಿ. ಏಜಂಟರು ಬೇಕು. ಹೆಚ್ಚು ಡಿಸ್‌ಕೌಂಟ್ ಕೊಡಲ್ಪಡುವದು.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

ತಿರುಪತಿ ಯಾತ್ರೆ! ತಿರುಪತಿ ಯಾತ್ರೆ!!

ವೇಂಕಟಗಿರಿ ಮಹಾತ್ಮೆ

ಮತ್ತು

ಪದ್ಮಾವತೀ ಕಲ್ಯಾಣವು.

ಚಿತ್ರಮಯ! ವಿಚಿತ್ರಮಯ!!

೯೫೫ ಪದ್ಯಗಳಿರುವ ೧೫ ಅಧ್ಯಾಯಗಳು. ದಪ್ಪವಾದ ಕಾಗದ. ಶಾರದಾ ಛಾಪಖಾನೆಯಲ್ಲಿ ಹೊಸದಾಗಿ ತಯಾರಿಸಿದ ನಾಜೂಕಾದ ಟೈಪು

ವೆಂಕಟೇಶನು ಗಿರಿಯಲ್ಲಿ ನಡಿಸಿದ ಅದ್ಭುತ ಕಾರ್ಯಗಳು ವಾಚಕರಿಗೆ ಮನೋಭಿತವಾಗುವಂತೆ ಗ್ಲೇಜ್ಡ್ ಕಾಗದದಲ್ಲಿ ೧೫ ಹಾಪ್‌ಟೋನ್ ಬ್ಲಾಕುಗಳಿಂದ ಕೂಡಿದೆ.

ಸಂಸ್ಕೃತ ಭವಿಷ್ಯತ್ಪುರಾಣದಿಂದ ಸ್ವರ್ಗಸ್ಥರಾದ ಕವಿ ಮುಳಿಯ ರಾಮಕೃಷ್ಣಯ್ಯನವರಿಂದ ಭಾಮಿನಿ ಷಟ್ಪದಿಯಲ್ಲಿ ಕನ್ನಡಿಸಲ್ಪಟ್ಟಿತು. ಶುಲಭಶೈಲಿ. ಸರ್ವರಿಗೂ ಅನಿತ್ಯದ ಪಠಣ ಪುಸ್ತಕವಾಗಿರಲು ಉಚಿತವಾಗಿರುವುದು. ಸ್ವಾಜು ಡೆಮಿ ಅಷ್ಟಪತ್ರದ 169 ಪುಟಗಳು. ಕಿತ್ತಾನಾರಿನ ಬೈಂಡು. ಪ್ರತಿಯೊಂದಕ್ಕೆ ರೂ. 1—8—0. ಟ. ಹಾಸಲು ಬೇರೆ

ವಿಳಾಸ:—ಕವಿ ಎಂಡ್ ಸನ್ಸ್, ಜನರಲ್ ಮರ್ಚಂಟ್ಸ್, ಮಂಗಳೂರು, ದ. ಕ. / ಶಾರದಾ ಮುದ್ರಣಾಲಯ, ಮಂಗಳೂರು, ದ. ಕ.

ಹೊಸ ಪುಸ್ತಕಗಳು.

ಸುಭದ್ರೆ.

ನಮ್ಮ ದೇಶದಲ್ಲಿ ಈಚೀಚೆಗೆ ಪ್ರಬಲವಾಗಿ ಹಬ್ಬುತ್ತಿರುವ "ವರಶುಲ್ಕ"ವೆಂಬ ಪಿಶಾಚದ ಪ್ರಭಾವದಿಂದ ಅನೇಕ ಅನರ್ಥಗಳುಂಟಾಗುತ್ತಿರುವುದು ಸರ್ವರಿಗೂ ವಿದಿತವಾದ ಅಂಶವೇ ಆಗಿರುವುದು. ಇದೇ ವಿಚಾರವನ್ನು ಕುರಿತು ಈ ಹೊಸ ಕದೆಯು ಬರೆಯಲ್ಪಟ್ಟಿರುವುದು. ಇದರಲ್ಲಿ ಒಬ್ಬ ಬಡ ಬ್ರಾಹ್ಮಣನು ವರದಕ್ಷಿಣೆಯನ್ನು ಕೊಡಲು ಅಸಮರ್ಥನಾದುದರಿಂದ ತನ್ನ ಮಗಳನ್ನು ಒಬ್ಬ ವಕ್ರಾಕಾರವುಳ್ಳ ಮುದುಕನಿಗೆ ಮಾರಲು ಪ್ರಯತ್ನಪಟ್ಟುದೂ, ಈ ವಿವಾಹವನ್ನು ತಪ್ಪಿಸಿ ಒಬ್ಬ ಶ್ರೀಮಂತನ ಮಗನು ಅವಳನ್ನು ಮದುವೆಮಾಡಿಕೊಂಡುದೂ, ಅನಂತರ ಆ ಹುಡುಗಿಗೆ ಹಿಂದೆ ಗೊತ್ತಾಗಿದ್ದ ಮುದುಕನ ದೆಸೆಯಿಂದ ಸಂಭವಿಸಿದ ಕಷ್ಟಗಳೂ ಹೃದಯಂಗಮವಾಗಿ ವರ್ಣಿಸಲ್ಪಟ್ಟಿವೆ. ಪ್ರತಿ ಕುಟುಂಬದಲ್ಲಿಯೂ ಈ ಪುಸ್ತಕದ ಒಂದು ಪ್ರತಿಯಾದರೂ ಇರಲೇಬೇಕಾದುದು. ಬೆಲೆ ೫ ಆಣೆ ವಿ. ಪಿ. ಮೂಲಕ ೭ ಆಣೆ.

ಜಾನ್ ಪಿಯರ್‌ಪಾಂಟ್ ಮಾರ್ಗನ್ ಚರಿತ್ರೆ.

ಈ ಲೋಕಪ್ರಸಿದ್ಧಿಯಾದ ಕೋಟ್ಯಾಧೀಶನ ಮಗನನ್ನು ಈಗ ಕೆಲವು ದಿನಗಳ ಹಿಂದೆ ಒಬ್ಬ ಜರ್ಮನನು ಹೊಡೆದು ಹಾಕಲು ಪ್ರಯತ್ನಪಟ್ಟಿದ್ದುದು. ಇದು ವೃತ್ತಾಂತ ಪತ್ರಿಕೆಗಳಲ್ಲೆಲ್ಲಾ ತಿಳಿಸಲ್ಪಟ್ಟಿದ್ದಿತಷ್ಟೆ. ಈತನು ಯಾವ ರೀತಿಯಲ್ಲಿ ತನ್ನ ಧನವನ್ನು ವಿನಿಯೋಗ ಮಾಡುತ್ತಿದ್ದನೆಂಬುದೂ ಈತನಿಂದ ಲೋಕಕ್ಕೆ ಎಷ್ಟು ಉಪಕಾರವಾಗುತ್ತಿದ್ದಿತೆಂಬುದೂ ಈತನ ಚರಿತ್ರೆಯನ್ನೋದಿದರೆ ತಿಳಿಯಬರುವುದು. ಬೆಲೆ ೨ ಆಣೆ.

ಗ್ಲಾಡ್‌ಸ್ಟನ್‌ರ ಮಹಿಮೆ.

ಈ ಜಗದ್ವಿಖ್ಯಾತರಾದ ಇಂಗ್ಲಂಡ್ ದೇಶದ ಮಂತ್ರಿಶ್ರೇಷ್ಠರ ಗುಣವರ್ಣನೆಯು ಸರಳವಾದ ಶೈಲಿಯಲ್ಲಿ ಬರೆಯಲ್ಪಟ್ಟಿರುವುದು ಸರ್ವರಿಂದಲೂ ಆದರಣೆಗೆ ಅರ್ಹವಾದ ಪುಸ್ತಕ ಬೆಲೆ ೧ ಆಣೆ.

ತೆನುಗು ಸಂಗೀತ ಕೃತಿವರ್ಣ ಸ್ವರಸಹಿತ ೧೦೦ ಕೀರ್ತನೆಗಳುಳ್ಳದ್ದು ೨-೪-೦

ಶ್ರೀ ಚಾಮರಾಜೇಂದ್ರ ಒಡೆಯರ ಚರಿತ್ರೆ ... ... ೧-೦-೦.

ದೇಶಭಕ್ತಿ ೮ ಆಣೆ. ನವೀನ ಭರತಖಂಡ ೫ ಆಣೆ.

ವಿಳಾಸ:— ಎಚ್. ಎನ್. ರಾವ್ ಅಂಡ್ ಬ್ರದರ್ಸ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯರವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ಶಾಕ್ಕರೈನ್—ಅಥವಾ ಸಂಚದಾರ ಬಿಲ್ಲೆಗಳು.

ಇವು ನಮಗಾಗಿ ಸೀಮೆಯಲ್ಲಿ ಮಾಡಲ್ಪಟ್ಟು ಅಪೂರ್ವವಾಗಿ ೫೫೦ ಮಣುಗುಗಳ ಹೆಚ್ಚಾಗಿ ಪಂಚದಾರ ರುಚಿಯನ್ನು ಕೊಡುವ ಚಿಕ್ಕ ಬಿಲ್ಲೆಗಳ ರೂಪದಲ್ಲಿ ನಾವು ಮಾರುತ್ತಿರುವೆವು. ಒಂದು ಸೇರು ಹಾಲು ಅಥವಾ ಕಾಪಿ ಮತ್ತು ಟೀ ಇವುಗಳ ಉಪಯೋಗದಲ್ಲಿ ಹೇಗೆ ಸಾಧಾರಣವಾದ ಪಂಚದಾರಯನ್ನು ಹಾಕುವಲ್ಲಿ ಎಷ್ಟು ರುಚಿ ಕೊಡುವದೊ ಅದಕ್ಕಿಂತಲು ಅಪೂರ್ವವಾದ ಈ ಬಿಲ್ಲೆಗಳಲ್ಲಿ ಎರಡನ್ನು ಹಾಕಿ ಉಪಯೋಗಿಸಿದರೆ ಸಾಕಾಗುವದು ಇವಲ್ಲದೆ ಸರ್ವಸಾಧಾರಣದಲ್ಲಿ ಪಂಚದಾರಿ ಉಪಯೋಗ, ದೇಹಕ್ಕೆ ಹಾನಿಕರವಾದ ಒಹು ಮೂತ್ರ ಇತ್ಯಾದಿ ಜಾಡ್ಯಗಳ ಅವಲಂಭನೆಯನ್ನು ಈ ಉಪಯೋಗವಾದ ವಸ್ತುವಿಂದ ತೊಲಗಿಸಬಹುದು. ಅಥವಾ ಆ ಜಾಡ್ಯಗಳೆಲ್ಲವು ಸೇರಲು ಸಾಧವಿಲ್ಲ. ಪಂಚದಾರಕ್ಕಿಂತಲು ಇದರ ಬೆಲೆ ಸ್ವಲ್ಪವು. ಈಗ ಬಹು ಜನರು ಪಂಚದಾರ ಕಷ್ಟಕರವೆಂದು ಅದನ್ನು ಉಪಯೋಗಿಸದೆ, ಕಾಫಿ, ಟೀ ಇತ್ಯಾದಿಗಳನ್ನು ಭಯದಿಂದ ನಿವಾರಿಸುವರು, ಅಲ್ಲದೆ ಪಂಚದಾರೆಯನ್ನು ಹಾಕದೆ ಉಪಯೋಗಿಸುವರು. ಇಂಥವರು ಮತ್ತು ಸರ್ವ ಜನರು ಅತ್ಯಂತರ ಮಾತ್ರವಿಲ್ಲದೆ, ಉಪಯುಕ್ತವಾದ ಈ "ಶಾಕ್ಕರೈನ್" ಎಂಬ ಈ ಬಿಲ್ಲೆಗಳನ್ನು ಉಪಯೋಗಿಸಬಹುದು. ಇದರ ಉಪಯೋಗಗಳು ಅಸಾಧ್ಯ. ಸೀಸಾ 1ಕ್ಕೆ 8 ಆಣೆ. ವಿ. ಪಿ. 10ಂದ 12 ಸೀಸಾಗಳಿಗೆ ಆಣೆ 5 ಪ್ರತ್ಯೇಕವು.

ಧಾತುಪುಷ್ಟಿ ರಸಾಯನ:—ಇದರ ಸೇವನೆಯಿಂದ ನರಗಳ ಸಂಬಂಧವಾದ ಮತ್ತು ಅನೇಕ ವಿಧವಾದ ಎಲ್ಲಾ ಶರೀರ ದುರ್ಬಲಗಳು ಹೋಗಿ ಹೊಟ್ಟೆಯಲ್ಲಿ ಅಗ್ನಿ ಉಂಟಾಗಿ, ದೇಹವು ಪುಷ್ಟಿ ಹೊಂದುವದು. ಪುಷ್ಟಿಯನ್ನು ಕಳೆದುಕೊಂಡ ಚಿಕ್ಕ ವಯಸ್ಸಿನವರಿಗೆ ಇದು ತಕ್ಕ ಔಷಧವು ಇದರಿಂದ ಶರೀರದ ಪ್ರತಿ ಅವಯವದ ನೋವೂ, ಅಶಕ್ತಿಯೂ, ರೋಗಿ, ಪುಷ್ಟಿಯೂ, ಬಲವೂ ಉಂಟಾಗುವುದು. ಪೆಟ್ಟಿಗೆ 1ಕ್ಕೆ ರೂ. ೭, ವಿ. ಪಿ ಛಾಂಗಿಚಾರ್ಜಿ ೬ ಆಣೆ.

ಅಜೀರ್ಣ ಮಾತ್ರೆಗಳು:—ಅಜೀರ್ಣ, ತೇಗುವುದು, ಹೊಟ್ಟೆಯಲ್ಲಿ ಉರಿ ಮತ್ತಾಗಿರುವಿಕೆ, ಹಸಿವಿಲ್ಲದಿರುವುದು, ಪಿತ್ತದಿಂದ ಬಾಯಿಯ ದುರ್ಗಂಧ, ಹೊಟ್ಟೆ ಶೂಲೆ, ನಿದ್ದೆ ಹತ್ತದಿರುವಿಕೆ, ತಲೆ ತಿರುಗುವುದು ಇವೆಲ್ಲಾ ನಿರ್ಮೂಲವಾಗುವವು. ಪೆಟ್ಟಿಗೆ 1ಕ್ಕೆ 8 ಆಣೆ, ವಿ. ಪಿ ಛಾಂಗಿಚಾರ್ಜುಗಳು 3 ಪೆಟ್ಟಿಗೆವರಿಗೂ 5 ಆಣೆ.

ಪ್ರಮೇಹ ನಿವಾರಣಿ:—ಯಾವ ಕಾರಣದಿಂದಲಾದರು ಸಂಭವಿಸಿದ ಕಷ್ಟ, ನಿಸ್ಸೆಯಲ್ಲಿ ಉರಿ ಮುಂತಾದವು ವಾಸಿಯಾಗುವುದು. ಸ್ತ್ರೀಪುರುಷರು ಉಪಯೋಗಿಸಬಹುದು. ಸೀಸೆ 1ಕ್ಕೆ 1 ರೂ 6 ಸೀಸೆವರಿಗೂ ವಿ. ಪಿ. ಚಾರ್ಜಿ 5 ಆಣೆ.

☞ ಈ ಪ್ರಾಂತ್ಯದಲಿ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳಿನಲ್ಲಾಗಲೀ ಸ್ಫುಟವಾಗಿ ತಿಳಿಯುವಂತೆ ಬರೆಯಬೇಕು

MY ADDRESS.
P. SUBBA ROY,
Ayurvedic Pharmacy,
Sri Perumalkoil,
SANNATHY, TANJORE.

ನಮ್ಮ ವಿಳಾಸ:—
ಪಿ. ಸುಬ್ಬರಾಯ್,
ಆಯುರ್ವೇದ ಔಷಧಶಾಲ,
ಶ್ರೀ ವೆಂಕಟೇಶ ಪೆರುಮಾಳ್ ದೇವಸ್ಥಾನ,
ಸನ್ನದಿ, ತಂಜಾವೂರು.

ಗಮನಿಸಿ ನೋಡಿರಿ! ಮಾಫಕ್ ದರ!!

ಈ ಸುಸಮಯ ಬಿಟ್ಟರೆ ಮರುಸಮಯ ಶಿಕ್ಕುವದು ದುರ್ಲಭ

ಅನೇಕ ಯೋಗ್ಯತಾಪತ್ರಗಳನ್ನು ಪಡೆದಿರುವ

ಸ್ಪ್ರಿಂಗ್

ಪಾಕೆಟ್ ಲೀವರು ವಾಚು.

(ರಿಜಿಸ್ಟರ್ಡ್)

10 ಬಹುಮಾನಗಳ ಸಹಿತ

ಕ್ರಯ ರೂ. 3—4—0 ಮಾತ್ರ.

7 ವರುಷ ಖಾತ್ರಿಯಾದ ಗ್ಯಾರಂಟಿ

ಅಯ್ಯಾ ಪ್ರಿಯ ಮಿತ್ರರೇ ಈ ಹೊಸನಮೂನೆ ವಾಚು ಸೀಮೆಯಿಂದ ನವಗೆ ಈಗ ತಾನೆ ಬಂದಿರುತ್ತೆ. ಈ ವಾಚಿಗೆ ಮಾಡಿ ಇರತಕ್ಕ ಕೆಲಸವನ್ನು ನಾವು ಹೇಳುವದಕ್ಕೆ ಆಗುವದಿಲ್ಲ ಏನೆಂದರೆ ಆನೆಗೆ ಎಷ್ಟು ಬಲವು ಇರುತ್ತದೋ ಅಷ್ಟು ಬಲವು ಈ ವಾಚಿಗೆ ಇರುತ್ತೆ ಬಹು ಬಲಿಷ್ಟವಾದ ಲೀವರು ಕೆಲಸದಿಂದಲೂ, ನಾಜೂಕಾದ ಯಂತ್ರದಿಂದಲೂ ತಯಾರಾಗಿ ಡೈರೆಕ್ಟ್ ಆಗಿ ಬಂದಿರುತ್ತೆ ಈ ವಾಚಿನ ಬಲವನ್ನು ನಾವು ಹೇಳುವದಕ್ಕೆ ಆಗುವದಿಲ್ಲ ನಾವು ಈ ವಾಚಿಗೆ ಗ್ಯಾರಂಟಿ ಬರಿಯುವದು ಪ್ರಯೋಜನವಿಲ್ಲ, ಒಂದು ತರಿಸಿ ಪರೀಕ್ಷೆಮಾಡಿರಿ ನಮ್ಮ ಈ ಹೊಸ ಕಂಪೆನಿಯ ಹೆಸರು ಪ್ರಖ್ಯಾತಿ ಬರಬೇಕೆಂಬ ಉದ್ದೇಶ ಇಷ್ಟು ಭಾರಿ ಬಾರಿ ಬಹುಮಾನಗಳನ್ನು ಹಾಕಿ ಇರುತ್ತೆ ಕೂಡಲೇ ತರಿಸಿ ಕೊಳ್ಳಿರಿ

ಬಹುಮಾನಗಳ ತಪಸೀಲು

1 ನಾಜೂಕಾದ ಸರಪಣಿ, 2 ಸೊಗಸಾದ ಉತ್ತರವುಖ, 3 ವಾಚುಪೆಟ್ಟಿಗೆ, 4 ವಾಚಿಗೆ ಧೂಳು ಸೇರದಂತೆ ಚೀಲ, 5 ಮುಖ ನೋಡತಕ್ಕ ಕೊರನೇಶನ್ ಕನ್ನಡಿ 6 ಇಂಗ್ಲೀಷು ಬಾಚಣಿಗೆ, 7 ಡೈಮನ್ಡ್ ಶರ್ಟುಗುಂಡಿ ಸೆಟ್, 8 ಸುವಾಸನೆಯುಳ್ಳ ಸೆಂಟ್ ಶೀಸೆ, 9 ಜಪಾನ್ ಸಿಲ್ಕ ಕರವಸ್ತ್ರ, 10 ಕೈಪುಂಗುರ. ಜುಮ್ಲಾ 10

ಎನ್. ಕೆ ಲೋಟಸ್ ಎಂಡ್ ಕೊ,

ನಂಬ್ರ 8 ಇರುಳಪ್ಪನ್ ಸ್ಟ್ರೀಟ್

ಸಾವಕಾರಪೇಟೆ, ಮದ್ರಾಸು

ಡಾಕ್ಟರ್ ನವರತ್ನರ

ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ ಪ್ರಯೋಗಿಸಲು ಸುಲಭವಾಗಿದೆ ಪರಿಮಳ, ಕೆಡದ ಬಣ್ಣ ಬಹಳ ಅಗ್ಗ ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ 1 ಟಪ್ಪಾಲು ಖರ್ಚು 0—4—0.

Dr. Navaratna & Sons,
Kalbadevi Road BOMBAY.

ಏಜಂಟರು:—ಡಿ. ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

ಒಂದು ತಿಂಗಳ ತನಕ ಮಾತ್ರ

ಕಡಿಮೆ ದರ!



ನಮ್ಮ ರೈಲ್ವೆ ರೆಗ್ಯುಲೇಟರ್ ವಾಚು ಸರಿಯಾದ ಸಮಯವನ್ನು ತೋರಿಸುವಂಥಾದ್ದಾಗಿಯೂ ಮಹನೀಯರಿಗೆ ತಕ್ಕುದುದಾಗಿಯೂ ಇದೆ ಈ ವಾಚಿಗೆ 7 ವರುಷಗಳ ಗ್ಯಾರಂಟಿ ಇದೆ ಕ್ರಯ ರೂ 12, ಈಗ ಕ್ರಯ ರೂ 4 ಮಾತ್ರ ಲೇಡಿಸ್ 9 ಕೆರೆಟ್ ಗೋಲ್ಡ ವಾಚು ಕ್ರಯ ರೂ 48 ಈಗ ರೂ 16 ಲೇಡಿಸ್ ಸಿಲ್ವರ್ ವಾಚು ಕ್ರಯ ರೂ 21 ಈಗ ರೂ ~ ಬಲಿಷ್ಟವಾಗಿಯೂ ನ ಬಿಕೆಗೆ ಯೋಗ್ಯವಾಗಿಯೂ ಇದ್ದು 8 ದಿವಸಕ್ಕೊಮ್ಮೆ ಕೀ ಕೊಡುವ ವಾಚು ನಿಕ್ಕಲ್ ಕೇಸು ಕ್ರಯ ರೂ 24 ಈಗ ರೂ 7 ಬಲ್ಪ ಕೇಜು ಓಪನ್‌ಫೇಸ್ ರೂ 33 ಈಗ ರೂ 11 ಸಿಲ್ವರ್ ಹಂಟಿಂಗ್ ಕೇಜು ರೂ 42 ಈಗ ರೂ 14 ಉತ್ತಮವಾದ ರಿಷ್ಟ ವಾಚು ಚರ್ಮದ ಪಟ್ಟಿ ಸಹಿತ ರೂ 15 ಈಗ ರೂ 5

ಸೂಚನೆ —ರಿಷ್ಟ ವಾಚು ವಿನಹ ಇತರ ಪ್ರತಿ ಒಂದು ವಾಚು ತರಿಸಿಕೊಳ್ಳುವವರಿಗೆ ಒಂದು ಚೈನು, ಒಂದು ಚೂರಿ, ಒಂದು ಉಂಗುರ, 6 ವಾಚುಗಳನ್ನು ಒಂದೇ ಸಲ ತರಿಸಿಕೊಳ್ಳುವವರಿಗೆ ಅದೇ ನಮೂನೆಯ ಒಂದು ವಾಚು ಬಹುಮಾನವಾಗಿ ದೊರಿಯುವದು

ವಿಳಾಸ —

ಕಾಂಪಿಟಿಶನ್ ವಾಚ್ ಕೊ,
20 ಮದನ ಮಿತ್ರ ಲೇನ್,
ಕಲ್ಕತ್ತಾ

Address —
Competition Watch Co
20 Madan Mitra Lane
(S) CALCUTTA

B. Narasimha Prabhu,
Bantval, (SOUTH CANARA).
AGENT FOR
Malabar and South Canara.

ಕನ್ನಡ ಅಕ್ಷರದ ಗ್ರಂಥಗಳು.

ಕನ್ನಡ ಟೀಕಾ ತಾತ್ಪರ್ಯ ಸಂಗ್ರಹದೊಂದಿಗಿರುವ ಬೃಹಜ್ಜಾತಕವೆಂಬ ಹೋರಾ ಶಾಸ್ತ್ರವು	4	0	0
ಶ್ರೀಮದ್ಭಾಗವತ ಸಾದಾ ಬ್ಯಾಂಡ ದಶಮಸ್ಕಂದ	1	8	0
ದಶಪರ್ವ ಭಾರತ	2	0	0
ಅಷ್ಟಪರ್ವ ೩ ಅವ್ವಲ್ ಪ್ರತಿ	1	8	0
೩ ಸಾದಾ	1	0	0
ಭಾರತ ಕಥಾಸಂಗ್ರಹ	0	6	0
ಜೈಮಿನಿ ಭಾರತ ಅವ್ವಲ್ ಕ್ಯಾಲಿಕೊ ಬ್ಯಾಂಡ	1	8	0
೩ ೩ ಸಾದಾ ಬ್ಯಾಂಡ	1	4	0
೩ ದುಯ್ಯಂ ೩	0	12	0
ಜೈಮಿನಿ ಭಾರತ ಕಥಾಸಂಗ್ರಹ	0	12	0
ಜೈಮಿನಿ ಭಾರತ ಟೀಕಾ ತಾತ್ಪರ್ಯ ಸಮೇತ ಅವ್ವಲ್	4	8	0
ತೊರವೆ ರಾಮಾಯಣ ಅವ್ವಲ್ ಕ್ಯಾಲಿಕೊ ಬ್ಯಾಂಡ	2	0	0
೩ ಸಾದಾ ಬ್ಯಾಂಡ	1	4	0
ರಾಮಾಯಣ ಕಥಾಸಂಗ್ರಹ	0	12	0
ಸೀತಾ ಚರಿತ್ರ	1	2	0
ರಾಜಶೇಖರ ವಿಲಾಸ	0	8	0
ಗಯೋಪಾಖ್ಯಾನ ಕನ್ನಡಪದ್ಯ ಕಾವ್ಯ	0	8	0
ನಾಗವರ್ಮ ಛಂದಸ್ಸು	0	6	0
ಸಪ್ತಶತಿ ದೇವಿ ಮಹಾತ್ಮೆ (ನಿರ್ಣಯಸಾಗರ ಪ್ರೆಸ್)	0	10	0
ದೇವೀಮಹಾತ್ಮೆ ಕಥಾ ಸಂಗ್ರಹ	0	6	0
ಅನುಭವಾಮೃತ	0	12	0
ವಿವೇಕಚಿಂತಾಮಣಿ	0	12	0
ಹಟಯೋಗಪ್ರದೀಪಿಕಾ	1	4	0
ಪರಮಾನ ಭವಬೋಧೆ	1	0	0
ನಿಜದೀಪಿಕಾ ನಿರೋಷ್ಠ	1	4	0
ಭಗವದ್ಗೀತಾ ಸಂಸ್ಕೃತ ಶ್ಲೋಕ ಮತ್ತು ಅರ್ಥ ಕಿತ್ತನಾದು ಬ್ಯಾಂಡ	0	10	0
೩ ರಾಮಕೃಷ್ಣಸೂರಿ, ಪ್ರತಿಪದ ಟೀಕು ತಾತ್ಪರ್ಯ ಸಹ	2	0	0
ಸತ್ಯನಾರಾಯಣವ್ರತಕಥಾ	0	4	0
ವ್ರತವಳಿ (40 ವ್ರತಗಳು ಅಡಗಿಯುತ್ತೆ)	1	0	0
ಕೈವಲ್ಯ ಪದ್ಧತಿ ಕನ್ನಡ ಟೀಕು	0	12	0
ಬಾಷಾಕುಸುಮ ಮಂಜರಿ	0	8	0
ಮಣಿಮಂಜರಿ ಕನ್ನಡ ಟೀಕು	0	14	0
ಟೀಕಾ ಗುರು ಬಾಲಪ್ರಬೋಧಿಕೆ ಅವ್ವಲ್ ಕ್ಯಾಲಿಕೊ ಬ್ಯಾಂಡ	3	0	0
೩ ತ್ರಿಕಾಂಡ ಅಮರಕೋಶ, ಅವ್ವಲ್ ಕ್ಯಾಲಿಕೊ ಬ್ಯಾಂಡ	1	12	0

ಇವುಗಳಲ್ಲದೆ ಕನ್ನಡ, ಸಂಸ್ಕೃತ ಮರಾಠಿ ಪುಸ್ತಕಗಳೂ, ಶಾಲಾ ವಿದ್ಯಾರ್ಥಿಗಳ ಉಪಯೋಗದ ಎಕ್ಸರಸೈಜ್ ಪುಸ್ತಕ, ಡ್ರೋಯಿಂಗ್ ಪುಸ್ತಕ ಗ್ರಾಫ್ ಎಕ್ಸರಸೈಜ್ ಪುಸ್ತಕ, ಮತ್ತು ನಾನಾತರದ ಬರವಣಿಗೆ ಸಾಮಗ್ರಿಗಳೂ ಇತ್ಯಾದಿ ಸುಲಭ ಕ್ರಯಕ್ಕೆ ದೊರೆಯುತ್ತವೆ

ಕೆ. ಎಮ್ ದಾಸಪ್ರಭು,
ರಥಬೀದಿ,
ಮಂಗಳೂರು.

ಮೋಸಹೋಗಬೇಡಿ! ಮೋಸಹೋಗಬೇಡಿ!!

ಕೆಲವರು ನಮ್ಮ ಕಂಪೆನಿಯ ಹೆಸರನ್ನು ಹೇಳಿ ಜನಗಳಿಗೆ ಮೋಸಮಾಡುತ್ತಿರುವರು. ಆದ್ದರಿಂದ ನಮ್ಮಿಂದ ಕಳುಹಿಸುವ ಬಾಂಗಿಯನ್ನು ತೆಗೆದುಕೊಳ್ಳುವಾಗ ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು, 5 ಅವೆನ್ಯು ರೋಡ್, ಬೆಂಗಳೂರು ಸಿಟಿ ಎಂದು ಮುದ್ರಿಸಿರುವ ಲೇಬಲು ಇರುವದನ್ನು ನೋಡಿ ತೆಗೆದುಕೊಳ್ಳಿರಿ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ ಮುರಬ್ಬಾವು "ಸಾಲಾಮಿಸ್ರಿ"ಯಲ್ಲಿ ತಯಾರಿಸಲ್ಪಟ್ಟದ್ದು ಅಲ್ಲವೆಂದು ವ್ಯಕ್ತಪಡಿಸುವವರಿಗೆ

೧೦೦೦ ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ!!

ಈ ಸಾಲಾಮಿಸ್ರೀ ಎಂಬದು ಒಂದು ಗಿಡದ ಹಣ್ಣಾಗಿರುತ್ತದೆ ಕಾಬೂಲು ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳುಗಡ್ಡೆ, ಶಾಮಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಹೇಳಿ ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದ್ದಲ್ಲಿ ಇದು ಸಾಲಾಮಿಸ್ರಿಯೇ ಅಥವಾ ಬೇರೆ ತರಹಾದ್ದೇ ಎಂಬುವುದು ತಿಳಿದು ಬರುತ್ತೆ.

ಈ ಮುರಬ್ಬವನ್ನು ಪ್ರತಿಯೊಬ್ಬರು ಸೇವಿಸುವ ಹಾಗೆ ಕೈಯಿಂದ ಮುಟ್ಟದೆ ತಯಾರು ಮಾಡಲ್ಪಟ್ಟಿರುವದು

ಸಾಲಾಮಿಸ್ರಿ ಮುರಬ್ಬಾವು — ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು — ಮೂತ್ರದೊಂದಿಗೆ ಧಾತುವು ಹೋಗುವುದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು — ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವುದು.
ಸಾಲಾಮಿಸ್ರಿ ಮುರಬ್ಬಾವು — ಕ್ಷಣಕ್ಷಣಕ್ಕೂ ಮೂತ್ರವಾಗುವದನ್ನು ನಿಲ್ಲಿಸುವದು
ಸಾಲಾಮಿಸ್ರಿ ಮುರಬ್ಬಾವು — ನಿದ್ರೆಯಲ್ಲಿ ಧಾತುವು ಹೋಗುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು — ಮೆದುಳಿಗೆ ಬಲವನ್ನು ಕೊಡುವದು.
ಸಾಲಾಮಿಸ್ರಿ ಮುರಬ್ಬಾವು — ರಕ್ತವನ್ನು ವೃದಿಪಡಿಸಿ ಧಾತುವನು ಶೇಖರಿಸುವದು.
ಸಾಲಾಮಿಸ್ರಿ ಮುರಬ್ಬಾವು — ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು.
ಸಾಲಾಮಿಸ್ರಿ ಮುರಬ್ಬಾವು — ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೇಖರಿಸುವದು.
ಸಾಲಾಮಿಸ್ರಿ ಮುರಬ್ಬಾವು — ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವದು.
ಸಾಲಾಮಿಸ್ರಿ ಮುರಬ್ಬಾವು — ಉತ್ಸಾಹವು, ಬುದ್ಧಿ ಕುಶಲತೆಯು, ಶರೀರಕಾಂತಿಯು ಕೊಡುವದು.
ಸಾಲಾಮಿಸ್ರಿ ಮುರಬ್ಬಾವು — ತಾಂಬ್ರ ಮತ್ತು ಭಂಗಾರ ಭಸ್ಮಕ್ಕಿಂತಲು ಉತ್ತಮವಾದದ್ದು.
ಸಾಲಾಮಿಸ್ರಿ ಮುರಬ್ಬಾವು — ಸ್ತ್ರೀಸಂಗಕ್ಕೆ ಮೊದಲು ಸ್ಖಲನವಾಗುವುದನ್ನು ನಿಲ್ಲಿಸುವದು.

ಒಂದು ಡಬ್ಬಿ ಮುರಬ್ಬವನ್ನು 15 ದಿನಗಳು ಉಪಯೋಗಿಸುವದರಿಂದ ಪೂರಾ ಗುಣಕೊಡುತ್ತೆ. 2—3 ಡಬ್ಬಿ ಮುರಬ್ಬವನ್ನು ಉಪಯೋಗಿಸುವದರಿಂದ ಜನ್ಮಾಂತರದವರೆವಿಗೂ ಗುಣಕೊಡುತ್ತೆ.

15 ತೊಲೆ ಮುರಬ್ಬಾವಿನ ಡಬ್ಬಿ 1ಕ್ಕೆ ರೂ 2. ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿವರೆಗೆ ಆಣೆ 6

ಡಿ. ಮನ್ನಾಲಾಲ್, ಡಿಲ್ಲೀ ವೈದ್ಯರು,
5 ಹಾಜಿಸಾಹೇಬ್ ಹವುಡಿ ಅವೆನ್ಯುರೋಡ್, ಬೆಂಗಳೂರು ಸಿಟಿ.

FREE! FREE!!
S.T A Perpetual Calendar
Beautiful and Artistic
As 10 each Postage Extra.
How to get it Free?
Apply with Postage

Eucalyptus Oil
(Pure & best
As 4 per 1 oz bottle
Packing & postage Extra
M. S. RAO & Co.,
Bangalore City.

ಕನ್ನಡ ಹೊಸ ಪುಸ್ತಕಗಳು—ಕಾದಂಬರಿಗಳು

ಸಂಗೀತಸಮಯಸಾರ, ಹೊಸ ಪುಸ್ತಕ	1—4
ಪ್ರಬಂಧ ಮುಕ್ತಾವಳಿ, ಕನ್ನಡ ವಾಕ್ಯರಚನೆಯ ವಿಧಾನವನ್ನು ಹೊಸ ಮತ್ತು ಸುಲಭವಾದ ರೀತಿಯಲ್ಲಿ ವಿವರಿಸಿದೆ)	0 12
ಅರೇಬಿಯನ್ ನೈಟ್ಸ್, ಹೊಸ ಮುದ್ರಣ	2—2
ಮುದ್ರಾಮಂಜೂಷ ಡಿ	1-10
ಭಕ್ತವಿಜಯ, (ವಿಷ್ಣು ಭಕ್ತರ ಕಥೆಗಳು) ಹೊಸ ಮುದ್ರಣ	3—2
ಮೈತ್ರೇಯಿ, (ಅನೇಕ ರಹಸ್ಯಗಳು ವಿವರಿಸಲ್ಪಟ್ಟಿವೆ)	0—5
ವಾಲ್ಮೀಕಿಯ ಜಯ, ಹೊಸ ಮುದ್ರಣ	0—8
ಸ್ತ್ರೀಧರ್ಮನೀತಿ, (ಸ್ತ್ರೀಯರಿಗೆ ಅತ್ಯಾವಶ್ಯಕವಾದದ್ದು)	0—9
ದುರ್ಗಾದಾಸ (ಬಂಗಾಳಿ ನಾವಿಲ್)	0-12
ಪ್ರಫುಲ್ಲ, ಡಿ (ಪತ್ತೆದಾರಿ ಕಥೆ)	0 12
ವಿಷವಿವಾಹ, ಹೊಸ ಮುದ್ರಣ	0—4
ಶೋಭನೆ, ಡಿ	0 12
ಚಂದ್ರಪ್ರಭಾ, ಹೊಸ ಕಾದಂಬರಿ	0-12
ಚಂಪಕ	0—4
ಪ್ರಿಂರೋಜ ವಿಜಯಂ, ಗೋಲ್ಡ್‌ಸ್ಮಿತ್ ಕವಿಯ ವಿಕಾರ್ ಆಫ್ ವೇಕ್‌ಫೀಲ್ಡ್‌ನ ಭಾಷಾಂತರ	1—9

ಯಂ. ಯಸ್. ರಾವ್ ಕಂಪೆನಿ.,
ಬುಕ್‌ಸೆಲರ್ಸ್, ಅವಿನ್ಯೂರೋಡ್, ಬೆಂಗಳೂರು ಸಿಟಿ.

ಯಂ ಸುಬ್ಬರಾವ್, ಶಂಕರಪುರಂ, ಬೆಂಗಳೂರು ಸಿಟಿ—ಈ ವಿಳಾಸವನ್ನು ಮೇಲ್ಕಂಡಂತೆ ಬದಲಾಯಿಸಿದೆ.

ನಮ್ಮಲ್ಲಿ ಎಲ್ಲಾ ವಿಧವಾದ ಕನ್ನಡ ಕಥೆಗಳೂ, ಬಿ. ವೆಂಕಟಾಚಾರ್ಯರ ನಾವಿಲ್‌ಗಳೂ, ಗವರ್ನಮೆಂಟ್ ಸ್ಕೂಲು ಪುಸ್ತಕಗಳೂ ದೊರೆಯುತ್ತವೆ. ಪುಸ್ತಕದ ಪಟ್ಟಿ ಪ್ರಿಂಟಾಗುತ್ತಿದೆ.

ಯಂ. ಯಸ್. ರಾವ್ ಎಂಡ್ ಕೋ.,
ಬೆಂಗಳೂರು ಸಿಟಿ.

ಇನಾಂ ಸಾಮಾನು 50 ಇನಾಂ ಸಾಮಾನು 50

ಅನೇಕ ಯೋಗ್ಯತಾಪತ್ರಿಕೆಗಳನ್ನು ಹೊಂದಿರುವ (ರಿಜಿಸ್ಟರ್ಡ್)

ರಾಜಸುಂದರಿ ರೋಜ.

ಕೂದಲು ಬೆಳೆಯುವ ಪರಿಮಳ ತೈಲವು 50 ವಿಧವಾದ ಇನಾಂ ಸಾಮಾನುಗಳ ಸಮೇತ ಡಬ್ಬಿ 1ಕ್ಕೆ ರೂ 1 ಮಾತ್ರ ಯಾವ ಸ್ತ್ರೀಗಳಿಗೆ ತಲೆಕೂದಲು ಸುಂದರವಾಗಿರಬೇಕೆಂಬ ಉದ್ದೇಶವಾಗಿಯೂ ಕೂದಲು ಉದುರುವದನ್ನು ತಡದು ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವವರು ಬಜಾರಿನಲ್ಲಿ ದೊರಿಯುವ ಕೀಳು ತರವಾದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡಿಕೊಳ್ಳಬೇಡಿರಿ ಈ ಲೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಅದರ ಸುವಾಸನೆ ಸುತ್ತು ಇರುವ ಮನೆಗಳಿಗೆ ಪರಿಮಳ ವಾಸನೆ ಹೋಗುವದು ಇದರ ಪರಿಮಳ ವಾಸನೆ ಹೇಳುವದಕ್ಕೂ ಬರಿಯುವದಕ್ಕೂ ಆಗುವದಿಲ್ಲ ಇದಲ್ಲದೆ ದೇಹದಲ್ಲಿ ಇರುವ ಉಷ್ಣವನ್ನು ತೆಗದು ಕಣ್ಣಿಗೆ ತಂಪು ಕೊಡುವದು ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯವನ್ನು ಕೊಡುವ ತೈಲ ಇದು ಬಿಟ್ಟರೆ ಬೇರೊಂದಿಲ್ಲ ಹೆಚ್ಚು ಮಾತುಗಳಿಂದ ಏನು ಪ್ರಯೋಜನ? ಒಂದನ್ನು ತರಿಸಿ ನೋಡಿದರೆ ನಿಜ ಸ್ಥಿತಿ ತಿಳಿಯುತ್ತೆ ಇನಾಂ ಸಾಮಾನುಗಳ ತಪಸೀಲು —ಸ್ತ್ರೀಯರು ಧರಿಸಿಕೊಳ್ಳುವ ಕೊಂಡಿಗಿಣಿ 6, ವ್ಯೈಬರಣೆ 1, ಅದ್ದಾ 1, ತಾಂಬೂಲ ಮಾತ್ರೆ 30 ದಂತದ ಬಾಚಣಿಗೆ 1, ಸುವಾಸನೆಯುಳ್ಳ ಸೊಟ್ ಶೀಸೆ 1, ಇಂಗ್ಲೀಷು ಫೋಟೋಗಳು 6, ಸುವಾಸನೆ ಅತ್ತರು ಬಿಲ್ಲೆ 1, ಗಂಧದ ಬಿಲ್ಲೆ 1, ರಾಜಾರಾಣಿ ಕಾರನೇಷನ್ ಪೆಟ್ಟಿಗೆ 1

ಒಂದೇ ಸಾರಿ 3 ತರಿಸಿಕೊಳ್ಳುವವರಿಗೆ ಇನಾಂ ಸಹಿತ 1 ಲಾವೆಂಡರ್ ಬಾಟ್ಲಿ ಇನಾಮಾಗಿ ಕಳುಹಿಸುತ್ತೇವೆ ಒಂದೇ ಸಾರಿ 6 ತರಿಸಿಕೊಳ್ಳುವವರಿಗೆ ಇನಾಂ ಇಲ್ಲದಂತೆ 1 ರಾಸ್ ಪಾಕೆಟ್ ವಾಚ್ ಇನಾಮಾಗಿ ಕಳುಹಿಸುತ್ತೇವೆ

ನಮ್ಮ ವಿಳಾಸ — ವಿ. ಎ. ಎಸ್. ಪಾಣಿ,
3 ಇರುಳಪ್ಪನ್ ಬೀದಿ, ಮದರಾಸು

100 ರೂಪಾಯಿಗಳ ಬಹುಮಾನ

ಲೋಕಪ್ರಸಿದ್ಧವಾದ

"ಪಂಜಾಬಿ ಸಕಲರೋಗ ಸಂಜೀವಿ"

ಯನ್ನು ಸೇವಿಸಿ ಜೀವವಿಮೆಯನ್ನೂ ಮಾಡಿಕೊಳ್ಳಿರಿ. ದುರಭ್ಯಾಸಗಳಿಂದ ಧಾತುವನ್ನೂ ನಷ್ಟಪಡಿಸಿಕೊಂಡು ದುಃಖಿಸುವದನ್ನೂ ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರಿಸಲ್ಪಟ್ಟ "ಪಂಜಾಬಿ ಸಕಲರೋಗ ಸಂಜೀವಿ"ಯನ್ನು ಸೇವಿಸಿರಿ. ಇದನ್ನು ಪಂಜಾಬು, ಕಾಬೂಲ್ ದೇಶದ ಜನಗಳು ಬಹಳವಾಗಿ ಸೇವಿಸುವರು ತಾವು ಪಂಜಾಬಿ ದೇಶದ ಜನಗಳನ್ನು ನೋಡಿ ಇರುವಿರಿ ಅವರು ದಿನದಿನವೂ ಪಂಜಾಬಿ ಸಕಲರೋಗ ಸಂಜೀವಿ ಸೇವಿಸಿ ಬಹಳ ಬಲವೂ ದೃಢವಾಗಿಯೂ ಇರುವರು. ತಾವು ಯಾಕೆ ಹಾಗೆ ಇರಬಾರದು ಪಂಜಾಬಿ ಸಕಲರೋಗಸಂಜೀವಿಯನ್ನು ಸೇವಿಸಿ ದೇಹವನ್ನು ಕಾಪಾಡಿಕೊಳ್ಳಿರಿ ಇದು ಸಮಸ್ತ ಜನಗಳಿಗೂ ವರಪ್ರಸಾದವೆಂದು ಸಕಲರು ಒಪ್ಪಿದ್ದಾರೆ ಇದು ರಕ್ತವನ್ನೂ ವೃದ್ಧಿಪಡಿಸಿ ವೆದುಳಿಗೆ ಬಲವನ್ನೂ ಕೊಡುವದು ಕೈಕಾಲು ಸೊಂಟದ ನೋವುಗಳನ್ನೂ ಹೋಗಲಾಡಿಸುವುದು ಇದರಲ್ಲಿ ಅಪರಂಜಿ ಬೆಳ್ಳಿ, ಅಲುವಂಗಭಸ್ಮ, ಸಪೇದ್‌ಮಿಸ್ರಿ, ಶಾಲಮಿಸ್ರಿ, ಮೊದಲಾದವನ್ನೂ ಮೂಲಿಕೆ 5ನ್ನೂ, ಬಜಾರ್ ಸರಕ 100 ಸೇರಿಸಿ ಬಹಳ ಶುದ್ಧವಾಗಿ ಕೈಯಿಂದ ಮುಟ್ಟದೇ ತಯಾರು ಮಾಡಲ್ಪಟ್ಟಿರುವದು ಇದು ಶಾಸ್ತ್ರಪ್ರಕಾರ ತಯಾರಿಸಲ್ಪಟ್ಟದಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿಗಳ ಬಹುಮಾನ

20 ತೊಲ ಡಬ್ಬಿ 1ಕ್ಕೆ ರೂ 3—0—0 ಒಂದೇ ಸಾರಿ 3 ಡಬ್ಬಿ ತರಿಸಿಕೊಳ್ಳುವವರಿಗೆ ರೂ 8—0—0 ಅನುಪಾನಪತ್ರಿಕೆ ಔಷದ ಸಂಗಡ ಇರುತ್ತೆ

ಮದರಾಸ್ ಏಜನ್ಸಿ— ಧೈರ್ಯಲಕ್ಷ್ಮಿ ಆಂಡು ಕಂಪೆನಿ,
3 ಇರುಳಪ್ಪನ ಬೀದಿ, ಮದರಾಸ್

ಶಾಶ್ವತವಾದ ಆರೋಗ್ಯವನ್ನು

ಹೊಂದುವದಕ್ಕೆ ಸುಲಭವಾದ ಮಾರ್ಗವು

ಮದನಮಂಜರಿ ಮಾತ್ರೆಗಳು

ಉಪಯೋಗಿಸುವದೇ ಆಗಿರುವದು ಈ ಮಾತ್ರೆಗಳು ಅಜೀರ್ಣವು ಮಲಬಂಧ, ಮನೋವ್ಯಥೆ, ಜ್ಞಾಪಕಶಕ್ತಿ ಇಲ್ಲದಿರುವದು, ನರಗಳ ಬಲಹೀನತೆ, ಅಶಕ್ತಿ, ಸ್ವಪ್ನಸ್ಖಲಿತ, ಬಹುಮೂತ್ರ, ಮೂತ್ರಕೋಶ ಸಂಬಂಧವಾದ ವ್ಯಾಧಿಗಳು, ನಪುಂಸಕತ್ವ ಮುಂತಾದ ವ್ಯಾಧಿಗಳನ್ನು ಶೀಘ್ರದಲ್ಲಿಯೇ ಬೇರು ಸಹಿತವು ಕಿತ್ತು ಹಾಕಿ ಪುರುಷರಿಗೆ ಸಂತತ ಪುರುಷತ್ವವನ್ನು ಕೊಡುವವು ಇದು ಸಾಟಿಯಿಲ್ಲದ ಟಾನಿಕ್ಕು ಔಷಧಿಯಾಗಿರುತ್ತದೆ. ಕಳೆದ 25 ವರುಷ ಕಾಲದಲ್ಲಿ ಸಾವಿರಾರು ರೋಗಿಗಳನ್ನು ಸ್ವಸ್ಥಪಡಿಸಿದೆ. ನಿಮ್ಮನ್ನು ಕೂಡ ಸ್ವಸ್ಥ ಮಾಡುವದು. 40 ಮಾತ್ರೆಗಳ ಡಬ್ಬಿ ಕ್ರಯ ರೂ. 1—0—0.

ಉಚಿತ ಕ್ರಯವು ಇಲ್ಲ ಹಾಸಲು ಇಲ್ಲ

144 ಪುಟಗಳುಳ್ಳ ವೈದ್ಯಸಾರಸಂಗ್ರಹವಾದ

ವೈದ್ಯವಿದ್ಯ

ಪುಸ್ತಕದಲ್ಲಿ ಶಾಶ್ವತವಾದ ಆರೋಗ್ಯವನ್ನು ಪಡೆಯಲು ಅತ್ಯವಶ್ಯವಾದ ವಿಷಯಗಳು ಭರಿತವಾಗಿವೆ. ನಿಮ್ಮ ವಿಳಾಸವನ್ನು ತಿಳಿಸಿದರೆ ನಿಮಗೆ ಒಂದು ಪ್ರತಿ ಉಚಿತವಾಗಿ ಕಳುಹಿಸಲ್ಪಡುವದು

—ರಾಜವೈದ್ಯ ನಾರಾಯಣಜಿ ಕೇಶವಜಿ
20 ಚೀನಾ ಬಜಾರ್ ರೋಡ್,
ಮದರಾಸು.

ಓಂ ತತ್ಸತ್

ಯಕ್ಷಗಾನ ಛಂದವಿದ್ದ ಪ್ರೇಮಿಗಳಿಗೂ ತತ್ವಪ್ರೇಮಿಗಳಿಗೂ ಸೂಚನೆ.

ಮಾರಾಟಕ್ಕೆ ಸಿದ್ಧವಾಗಿರುವುದು! ತ್ವರೆಮಾಡಿರಿ!!

ಕವಿ ಮು. ಮ. ಶ್ರೀನಿವಾಸ ಹರಿದಾಸ ಶ್ಯಾನಯಿ ಇವರಿಂದ

ಹಳೇಗನ್ನಡದಿಂದ ವಿರಚಿತಮಾದ

ಯಕ್ಷಗಾನ

ಸೌಭದ್ರಾ ಪರಿಣಯವು.

ಕಪ್ಪು ಬಾರದ ರೀತ್ಯಾ ಬಹಳ ಪರಿಷ್ಕಾರವಾಗಿ ಸುರೇಖ ಅಕ್ಷರಮಾಲಿಕೆಯಿಂದ ಮುದ್ರಿಸಿರುತ್ತದೆ ಕ್ರಯ ರೂ 0—6—6 ಟಪ್ಪಾಲು ಖರ್ಚು ಅಲಾಯಿದ.

ಹೆಚ್ಚಿಗೆ ಪ್ರತಿಗಳನ್ನು ಕೊಂಡುಕೊಳ್ಳುವವರಿಗೂ ವ್ಯಾಪಾರಸ್ಥರಿಗೂ ಧಾರಾಳ ಕಮಿಶನ್ ದೊರೆಯುವದು.

ವಿಳಾಸ —
ಕವಿ ಆಂಡ್ ಸನ್ಸ್, ಮಂಗಳೂರು
ಎನ್. ಎ. ಶೀನಪ್ಪ ಹೆಗ್ಗಡೆ, ಕುಶಲ ಮಂದಿರ, ಪೊಳಲಿ, ಪೋಸ್ಟ್ ಗುರುಪುರ

ಯಕ್ಷಗಾನ

ರತಿಕಲ್ಯಾಣವು

ಬೇಗನೇ ತಯ್ಯಾರಾಗುವುದು! ಅಚ್ಚಿನಲ್ಲಿದೆ!!

ಕ್ರಯ 0—6—6 ಟಪ್ಪಾಲು ಖರ್ಚು ಅಲಾಯಿದ.

ಇವುಗಳಲ್ಲದೆ ಪ್ರಣವ ಗಾಯತ್ರಿಗಳ ವಿಷಯ ಒಳ್ಳೇ ಉಪನ್ಯಾಸವನ್ನೊಳಗೊಂಡಿರುವ ಗಾಯತ್ರ್ಯರ್ಥ ಭಾಸ್ಕರವೆಂಬದೊಂದು ಚಿಕ್ಕ ಉತ್ಕೃಷ್ಟವಾದ ಪುಸ್ತಕವೂ ವೇದಾಂತ ಚತುಷ್ಕಾಂಡ ಶ್ರೀಹರಿಭಕ್ತಿಸಾರವೂ ದ್ವಿಗಾನ ಸುಸ್ವರ ಸಂಗೀತ ಶ್ರೀಹರಿಕಥಾರೂಪ ಶ್ರೀ ದ್ರೌಪದಿ (ವಸ್ತ್ರಾಹರಣ) ವಸನಾಕ್ಷಯವೆಂಬುದೂ ಮತ್ತು ಸ್ವಾನುಭವ ತೇಜಸ್ಸೆಂಬ ವೇದಾಂತ ಗ್ರಂಥ ಗದ್ಯರೂಪದಲ್ಲಿ ಸುಲಭ ಭಾಷಾಶೈಲಿಯುಳ್ಳದ್ದಾಗಿ ಎಲ್ಲಾ ತರದ ಬ್ರಹ್ಮಜ್ಞಾನದ ಕುರಿತು ಪ್ರಶ್ನೋತ್ತರ ಸಾಕ್ಷಿಪ್ರಮಾಣಗಳಿಂದ ರಚಿಸಲ್ಪಟ್ಟದೊಂದು ಸಹ ಮುದ್ರಣಕ್ಕೆ ಸಿದ್ಧವಾಗಿದೆ. ಈ ಮಹತ್ಕಾರ್ಯಕ್ಕೆ ಸರ್ವರೂ ಉದಾರಾಶ್ರಯದಿಂದ ಪ್ರೋತ್ಸಾಹಿಸಬೇಕಾಗಿ ವಿನಂತಿ. ನಿಮ್ಮಗಳೆಲ್ಲರ ಹಿತಕಾಂಕ್ಷಿ,

ಮುಲ್ಕಿ ಮ. ಶ್ರೀನಿವಾಸ ಹರಿದಾಸ ಶಾನಯಿ, ಮಂಗಳೂರು.

ಚುರುಕಾದ ಏಜಂಟರು ಬೇಕಾಗಿರುವರು! ಧಾರಾಳವಾದ ಕಮಿಶನ್!!
ಮುಂದಿನ ಅಭಿವೃದ್ಧಿಗೆ ತುಂಬಾ ಅವಕಾಶವುಳ್ಳ ವೃತ್ತಿ!!!

ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿ,

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಪೀಸು ಮುಂಬಯಿ

ಅಧ್ಯಕ್ಷರು:—ಬಹುಮಾನಪಟ್ಟ ಮಿ| ಲಲ್ಲುಬಾಯಿ ಸಾಮಲ್ ದಾಸರವರು, ಸಿ ಐ ಇ ಜೆ ಪಿ

ಮೆನೇಜಿಂಗ್ ಡಿರೆಕ್ಟರರು:—ಫ್ರಮ್‌ರೋಜ್ ಆರ್ ಜೋಶಿರವರು, ಜೆ ಪಿ ಒನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟ್.

ಎಕ್ಚುವೆರಿ:—ಮಿ| ಜೋರ್ಜ್ ಕಿಂಗ್ ಎಪ್ ಎ ಎಪ್. ಐ ಎ

ಮೆಡಿಕಲ್ ರಿಫರಿಗಳು.—ಡಾಕ್ಟಾರ್ ಆರ್ ರಾವ್, ಎಮ್ ಡಿ. ಡಿ ಎಸ್ ಸಿ (ಲಂಡನ್)

ಗೌರವಾರ್ಥಕ ಮ್ಯಾನೇಜರ್:—ರಾ| ಕೆ ಸುಬ್ರಮಣ್ಯಾಯ್ಯರ್, ಬಿ ಎ ಜೆ ಪಿ ಎಪ್. ಎಸ್ ಎ. ಎ (ಲಂಡನ್)

ವಿಮೆದಾರರ ವಿಮೆ ಪತ್ರಗಳ ಶರ್ತಗಳ ಪ್ರಕಾರ ಸಿಕ್ಕುವ ಹಣವು ಈ ಕಂಪೆನಿಯಲ್ಲಿ ಬಹಳ ಬದ್ರವಾಗಿರುವದೆಂತ ಲೆಕ್ಕ ವ್ಯವಸ್ಥಾಪಕರು ಅಭಿಪ್ರಾಯಪಟ್ಟಿರುವರು

ತರುಣಾವಸ್ಥೆಯಲ್ಲಿರುವ ಈ ಕಂಪೆನಿಯು ಮುಂದಕ್ಕೆ ಇನ್ನೂ ಬಹಳ ಅಭಿವೃದ್ಧಿಯನ್ನು ಹೊಂದುವ ವಿಶೇಷ ಸಂಭವನಗಳಿಂದ ಕೂಡಿರುವುದೆಂದು "ಕೊಮರ್ಸ್" ಎಂಬ ಪತ್ರಿಕೆಯ ಅಭಿಪ್ರಾಯವಾಗಿರುವುದು.

ಇಂಡಿಯಾ ಸರಕಾರದ ಬದ್ರತೆಯಲ್ಲಿ ರೂ 1,55,000ವನ್ನು ರೇವಣಾತಿಯಾಗಿಟ್ಟಿರುವರು

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಗೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ —

ಕೊಚ್ಚಿಕಾರ್ ಬ್ರದರ್ಸ್, ಉಡುಪಿ,
ಕನ್ನಡಾ, ಮಲೆಬಾರ, ತಿರುವಾಂಕೋಡು, ಮತ್ತು
ಕೊಚ್ಚಿ ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು

ಸೂಚನೆ — ಮಂಗಳೂರಲ್ಲಿರುವ ಈ ಕಂಪೆನಿಯ ವಿಮೆದಾರರು ತಮ್ಮ ವಿಮೆ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಗೆ ರಶೀದಿಯನ್ನು ಕೊಚ್ಚಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು

ಉಡ್ಪಿ, 3—7—1914.

ಮಹಾಶಯರ!

ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿ ಎಂಬ ಮ ಜೀವವಿಮೇ ಉತ್ತರಾಯಿಸುವ ಸಂಘದ ಬಗ್ಗೆ ತಾವು ಏನೊಂದೂ ವಿಳಂಬವಿಲ್ಲದೆ, ರೂ 986—10—0ನ್ನು ನನಗೆ ಪಾವತಿಮಾಡಿದುದಕ್ಕಾಗಿ ಅತೀ ಉಪಕಾರವಾಯಿತು. ಸದರಿ ಪೊಲಿಸಿಯನ್ನು ಬೇಕಾದ ಅಗತ್ಯವಾದ ಪತ್ರಗಳನ್ನು ಅವರಿಗೆ ಮುಟ್ಟಿಸಿದ ಮೂರೇ ದಿನಗಳೊಳಗಾಗಿ ನನಗೆ ಸಲ್ಲತಕ್ಕ ವಿಮೆಯ ಐವಜನ್ನು ತಮ್ಮ ಕಂಪೆನಿಯ ಡೈರೆಕ್ಟರರುಗಳು ನನಗೆ ಪಾವತಿಮಾಡಿಸಿದುದಕ್ಕೋಸ್ಕರ ನನ್ನ ಧನ್ಯವಾದಗಳನ್ನು ಅವರಿಗೆ ದಯೆಯಿಟ್ಟು ತಿಳಿಸಿ. ಈ ತೆರದಲ್ಲಿ ಪೊಲಿಸಿದಾರರೊಡನೆ ಯಥಾರ್ಥವಾದ ರೀತಿಯಲ್ಲೂ ನಂಬುಗೆಯುಂಟಾಗುವಂತೆಯೂ ವರ್ತಿಸುವ ತಮ್ಮ ವಿಮೇ ಕಂಪೆನಿಯಿಂದ ಪ್ರತಿಯೊಬ್ಬನೂ ಒಂದೊಂದು ಪೊಲಿಸಿಯನ್ನಾದರೂ ಪಡಕೊಳ್ಳುವುದು ಉಚಿತವೆಂದು ನನ್ನ ಅಪೇಕ್ಷೆ

(ದಸ್ಕತು) ಹಾರಾಡಿ ಆನಂದರಾಯ ಘಡಿಯಾರನ ರುಜು.
(935ನೇ ಪೊಲಿಸಿಯ ವಿಮಾ ಹಣವನ್ನು ಪಡೆಯಲು ಅಧಿಕಾರವುಳ್ಳವನು)

ಉಡ್ಪಿ, ತಾ 20—8—1914

ನನ್ನ ಎಳೇ ಪ್ರಾಯದಲ್ಲಿ ಮೃತರಾದ ನನ್ನ ಗಂಡ ಕೆ ಎಲ್ ಪ್ರಭುಗಳ ವಿಮೇ ಪತ್ರಗಳನ್ನು ನಾನು ಕಳುಹಿಸಿಕೊಟ್ಟ ಕೆಲವೇ ದಿವಸಗಳೊಳಗಾಗಿ ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿಯವರು ನನಗೆ ತತ್ಸಂಬಂಧವಾದ ಹಣವನ್ನು ಪಾವತಿಮಾಡಿಸಿದುದಕ್ಕೆ ನಾನು ಕೃತಜ್ಞಳಾಗಿರುವೆನು ನನ್ನ ಒಬ್ಬನೇ ಬಾಲಕನಿಗೆ ಇದೊಂದೇ ಮಾತೃಪಿತ್ರಾರ್ಜಿತವಾದ ಧನವಾಗಿದೆ. ಅಂತಹ ಬಡಹುಡುಗನಿಗೆ ಇದೊಂದು ಅಪೂರ್ವವಾದ ಮಹಾದಾನವನ್ನು ಮಾಡಿಕೊಟ್ಟುದಕ್ಕೆ ಪ್ರತಿಯಾಗಿ ನಿಮ್ಮ ಕಂಪೆನಿಯು ಚಿರಕಾಲವೂ ಸೌಭಾಗ್ಯದಲ್ಲಿರಲಿ!

ಭವಾನೀಬಾಯಿ, Pol. No 1738.
ಸಾಕ್ಷಿ—ಬವಾನೀಬಾಯಿಯ ಸೋದರ ರಾ| ಕೆ. ರಂಗಪ್ಪ ನಾಗಪ್ಪ.

ಮಂಗಳೂರು, ತಾ 30—10—1914.

ಸಾಧ್ಯವಾದಷ್ಟು ಕಡಿಮೆ ಸಮಯದೊಳಗಾಗಿ ನನಗೆ ಪಾವತಿಯಾಗತಕ್ಕ ಹಣವನ್ನು ಸಲಾಯಿಸಿದುದಕ್ಕೋಸ್ಕರ ಬೊಂಬೇ ಲ್ಯಾಫ್ ಎಸ್ಯುರೆನ್ಸ್ ಕಂಪೆನಿಯವರಿಗೆ ನನ್ನ ಧನ್ಯವಾದಗಳನ್ನು ಪ್ರೀತಿಪೂರ್ವಕವಾಗಿ ಮುಟ್ಟಿಸಿರಿ! 'ಕ್ಲೈಮು' ಪ್ರಕಾರ ಎಲ್ಲಿ ಹಣವನ್ನು ಪಡಕೊಳ್ಳುವ ಹಾಗೆ ಕಂಪೆನಿಯ ಏಜಂಟರೇ ತಮ್ಮಿಂದಾಗುವಷ್ಟರ ಸಹಾಯವನ್ನು ಮಾಡುತ್ತಿರುವರಾದುದರಿಂದ ನನಗೆ ಯಾವ ತೊಂದರೆಗಳೂ ಉಂಟಾಗಲಿಲ್ಲ. ಹಣವನ್ನು ನಾವಿದ್ದ ಸ್ಥಳಕ್ಕೆ ಬಂದು ಕೊಟ್ಟರು — ಇದೊಂದು ತಮ್ಮ ಕಂಪೆನಿಯ ವಿಶೇಷ ಗುಣ. ನಿಮ್ಮ ಸಂಘಕ್ಕೆ ಸದಾ ವಿಜಯವು ಆಗಲಿ.

ಅರ್ಕುಳ ರಾಮಚಂದ್ರ ಶ್ಯಾನಭಾಗನ ರುಜು.
(Pol. No. 2319ನೆಯ ವಾರಿಸಿ ಹಕ್ಕಿನ ಅಸಾಮಿ)

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೊ ದಿಲ್-ಚಮಾನ

(ರಿಜಿಸ್ಟರ್ಡ್.)

ಸುರಭಿಗಳಲ್ಲಿ ಮುಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸದಾ ಸುವಾಸನೆಯುಳಿವ ಸುಗಂಧವು. ಒಂದೆರಡು ತಟಕು ಕೈವಸ್ತ್ರದಲ್ಲಿ ತಾಗಿಸಿದ್ದೇ ಆದರೆ 8 ದಿವಸಗಳ ವರೆಗೂ ಪರಿಮಳವಿರುವದು.

	ರೂ.	ಆ.	ಪೈ.
ಕ್ರಯ ½ ಡ್ರಾಮ್ ಟ್ಯೂಬ್	0	8	0
1 ,,	0	12	0
¼ ಔನ್ಸ್ ಟ್ಯೂಬ್	2	0	0
ಒಟ್ಟೊ ದಿಲ್ ಚಮಾನ್ ಪರಿಮಳದ ಕಾರ್ಡುಗಳು ಡಜನಿಗೆ	0	12	0

ವಿ. ಪಿ ಚಾರ್ಜು 0—4—0 ಬೇರೆ

ಪ್ರಾಮುಖ್ಯ ಏಜಂಟರು—
ಎಚ್. ಆರ್. ಮೋಡಿ ಎಂಡ್ ಕೋ,
10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.

H R MODY & Co.
10 Princes Street, BOMBAY.

ವೈಶೇಷ್ಯವು.

ನಾವು ಲೋಕ ಪ್ರಖ್ಯಾತ ಪೇಟೆಂಟ್ ಔಷಧಿಗಳಿಗೂ ಅತ್ತರು ಮೊದಲಾದ ಪರಿಮಳ ದ್ರವ್ಯಗಳಿಗೂ ಪ್ರಾಮುಖ್ಯ ಏಜಂಟರಾಗಿರುತ್ತೇವೆ.

ಎಕ್ಸೆಲ್ಸಿಯರ್ ಸಾರ್ಸಪರಿಲ್ಲಾ.

(ಐಯೋಡೈಸ್ಡ್)
ಎಂಬ
ರಕ್ತಶುದ್ಧಿಯ ದೀಪಕ.

ಕ್ರಯ ಬಾಟ್ಲಿಗೆ ರೂ 1—4—0 ಮತ್ತು ರೂ. 2—0—0.

ಪಿಯರ್ಸ್ ನರ್ವೈನ್ ಟೋನಿಕ್ ಪಿಲ್ಸ್

(ಆದರ್ಶದೀಪಕ.)

ಆರೋಗ್ಯವನ್ನು ಉಂಟುಮಾಡುವದು, ಅಶಕ್ತಿಯನ್ನು ಹೋಗಗೊಳಿಸುವದು ಅಶಕ್ತರಾದ ಬಾಲಕರಿಗೂ ಬಾಲಕಿಯರಿಗೂ ಬಹಳ ಪ್ರಯೋಜನಕಾರಿ!

ಕ್ರಯ 30 ಮಾತ್ರೆಗಳ ಶೀಸೆ 1ಕ್ಕೆ ರೂ. 1—8—0.

ರಾಮಬಾಣ ಗಜಕರ್ಣ ಮುಲಾಂ.

ಗಜಕರ್ಣಕ್ಕೆ ಅತ್ಯುತ್ಕೃಷ್ಟವಾದ ಮುಲಾಂ. ಡಬ್ಬಿ 1ಕ್ಕೆ 4 ಆಣೆ.

ಮೋಡಿಯವರ

ತಲೆಶಿಡಿತ ಬಿಲ್ಲೆಗಳು

ಒಂದೇ ನಿಮಿಷದಲ್ಲಿ ಗುಣ.

ಒಂದು ಬಿಲ್ಲೆಯನ್ನು ನೀರಿನಲ್ಲಿ ಹಾಕಿ ಸೇವಿಸಬೇಕು. 25 ಬಿಲೆಗಳ ಶೀಸೆ 1ಕ್ಕೆ 0—12—0. ಇತರ ವಿಶೇಷ ಔಷಧಗಳ ಪಟ್ಟಿಗೆ ಬರಕೊಳ್ಳಿರಿ

H. R. Mody & Co., ಎಚ್. ಆರ್. ಮೋಡಿ ಎಂಡ್ ಕೊ,
Chemist, ಕೆಮಿಸ್ಟ್,
10 PRINCES ST., BOMBAY. 10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.

ಇನಾಂ ಸಾಮಾನು 60 ಇನಾಂ ಸಾಮಾನು 60.

ವನಮಾಲಿಕ ಪುಷ್ಪ ಕೂದಲು ಬೆಳೆಯುವ
ಪರಿಮಳ ತೈಲವು.

ಇದರ ಬೆಲೆ 60 ಸಾಮಾನುಗಳ ಸಹಿತ ಟಿನ್ ಒಂದಕ್ಕೆ 14 ಆಣೆ.

ಅಯ್ಯಾ,—ಯಾವ ಸ್ತ್ರೀಗಳಿಗೆ ತಲೆಯ ಕೂದಲು ಬೆಳೆಯಬೇಕೆಂಬ ಉದ್ದೇಶವಾಗಿರುವವರು ಬಜಾರಿನಲ್ಲಿ ದೊರೆಯತಕ್ಕ ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ, ನಿಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡಿಕೊಳ್ಳಬೇಡಿರಿ. ಈ ಎಣ್ಣೆಯನ್ನು ಪ್ರತಿದಿನವೂ ಕೂದಲಿಗೆ ಹಚ್ಚಿಕೊಂಡು ಬಾಚಿಕೊಳ್ಳುತ್ತಾ ಒಂದರೆ, ಬೆಳೆಯದೆ ಇರುವ ಕೂದಲು ಕೂಡಾ ಬೆಳೆಯುವದು. ಇದರ ಸುವಾಸನೆಯನ್ನು ಹೇಳುವದಕ್ಕೆ ಸಾಧ್ಯವಿಲ್ಲ. ಈ ಎಣ್ಣೆಯನ್ನು ಬಹಳ ದಿವಸ ಪ್ರಯತ್ನಮಾಡಿ ಸಕಲ ಜನರಿಗೆ ಬಹಳ ಕಮ್ಮಿ ಧಾರಣೆಗೆ ಕಳುಹಿಸುತ್ತೇವೆ ಇತರ ಕಂಪೆನಿಯಲ್ಲಿ ಇಷ್ಟು ಕಮ್ಮಿ ಧಾರಣೆಗೆ ದೊರೆಯಲಾರದು ಸಾವಿರಗಟ್ಲೆ ಖರ್ಚು ಆಗುತ್ತಿವೆ ನೀವು ಎಷ್ಟೋ ಕಂಪೆನಿಗಳಲ್ಲಿ ಪರಿಮಳ ತೈಲವನ್ನು ಕೊಂಡುಕೊಂಡಿರಬಹುದು. ಆದರೆ ಒಂದು ಸಲ ನಮ್ಮ ಹತ್ತಿರ ತರಿಸಿ ನೋಡಿದರೆ ಅದಕ್ಕೂ ನಮ್ಮ ವಸ್ತುವಿಗೂ ಇರುವ ವ್ಯತ್ಯಾಸವನ್ನು ನೀವೇ ತಿಳಿದುಕೊಳ್ಳಬಹುದು ಬರೀ ಮಾತುಗಳಿಂದೇನು? ದೇಹದಲ್ಲಿ ಇರುವ ಉಷ್ಣವನ್ನು ತೆಗೆದು ಕಣ್ಣುಗಳಿಗೆ ತಂಪುಕೊಡುವುದು.

ಇನಾಂ ಸಾಮಾನುಗಳ ವಿವರ.

ಕೊಂಡಿಗಿಣಿಗಳು 6, ತಾಂಬೂಲ ಪಾತ್ರೆಗಳು 40, ಸಂದನಪಿಲ್ಲಿ 1, ಕಾಡೊನೇಷನ್ ಪೆಟ್ಟಿಗೆ 1, ದಂತದ ಬಾಚಣಿಗೆ 1, ಕುಂಕುಮ ಬರಣಿ 1. ಕಾಟಿಕೆ ಬರಣಿ 1, ಕನ್ನಡಿ 1, ರವಿವರ್ಮ ಪೋಸ್ಟು ಕಾರ್ಡುಗಳು 6, ಅತ್ತರು ಬಿಲ್ಲೆ 1, ಬ್ರೂಚ್ 1

ನಮ್ಮ ವಿಳಾಸ:—

ಕಮಲಾರಾಮ ಎಂಡ್ ಕೊ, **Kamalaram & Co,**
ನಂ. 28 ಇರುಳಪ್ಪನ ಬೀದಿ, *No. 28 Erulappan Street,*
ಮದ್ರಾಸು. MADRAS.

ಜಯವಿಜಯ
ಅಥವಾ
ತೂಗಾಡುವ ಅಸ್ಥಿಪಂಜರ.

ಇದರಲ್ಲಿ "ದಿಲೀಪಸಿಂಹ ಉಬಾರ" ಎಂಬವನು ತನ್ನ ಹಗೆ ತೀರಿಸುವುದಕ್ಕೋಸ್ಕರ ಎಂಥೆಂಥಾ ಅದ್ಭುತ ಕಾರ್ಯಗಳನ್ನೆಸಗಿ ಕಡೆಗೆ ಹೇಗೆ ಜಯ ಹೊಂದಿ ಸುಖವನ್ನನುಭವಿಸಿದನು?

ಒಬ್ಬ ಸ್ತ್ರೀಯು ತನ್ನ ಪತಿವ್ರತಾ ಧರ್ಮಕ್ಕೋಸ್ಕರ ವಿವಿದ ಕಠಿಣ ಕಾರ್ಯಗಳನ್ನು ಕಣ್ಣಾರೆ ಕಂಡರೂ ಎದೆಗುಂದದೆ ಇರಲು ಕಡೆಗೆ ತನ್ನ ಮೂರು ವರ್ಷದ ಪುತ್ರನನ್ನು ತನ್ನ ಸಮಕ್ಷಮದಲ್ಲೇ ತಲೆ ಕೆಳಗಾಗಿ ತೂಗಾಡಿ ಕಟ್ಟಿ ಕಠಾರಿಯಿಂದ ತಿವಿದು ಅದರ ರಕ್ತದಿಂದ ಅವಳಿಗೆ ಸ್ನಾನಮಾಡಿಸಿ, ಆತೂಗಾಡಿಸಿಟ್ಟ ಮಗುವಿನ ಹೆಣವನು ನಿರಂತರ ಅಲ್ಲಿಯೇ ಇರಗೊಳಿಸಿ, ಅದರ ರಕ್ತವನ್ನು ಸಹ ಒಂದು ಪಾತ್ರೆಯಲ್ಲಿ ತುಂಬಿಸಿ ಬಂದಿಖಾನೆಯಲ್ಲಿ ಅವಳ ಪಕ್ಕದಲ್ಲೇ ಇಟ್ಟು ಅವುಗಳನ್ನು ನೋಡಿಯಾದರೂ ಮನ ಕರಗಿ ವಶಳಾಗುವಂತೆ ಶತಪ್ರಯತ್ನಗೈದರೂ ಪರವಶಳಾಗದೆ ಆ ಸತಿಯು ತನ್ನ ಪತಿವ್ರತಾ ಧರ್ಮದಲ್ಲೇ ದೃಢವಾಗಿದ್ದು ತನ್ನ ಸತಿಧರ್ಮವನ್ನು ಹೇಗೆ ಕಾಪಾಡಿಕೊಂಡಳು?

ದಾಸನಾಗಿದ್ದ ನೀಚ ಸೇವಕನೊಬ್ಬನು ತನ್ನ ಅರಸನನ್ನು ಕೊಲ್ಲಿಸಿ ರಾಜ್ಯಭಾರವನ್ನು ತಾನೇ ವಹಿಸಿಕೊಂಡು ನಾನಾಬಗೆಯ ದುಷ್ಕಾರ್ಯಗಳನ್ನು ನಡಿಸಿ, ಕಡೆಗೆ ತಾನು ಗೈದ ದುಷ್ಕರ್ಮಗಳಿಗೆ ಹೇಗೆ ತಕ್ಕ ಫಲವನ್ನನುಭವಿಸಿದನು? ಎಂಬ ಎಲ್ಲಾ ವಿವರವನ್ನು ವ್ಯಕ್ತಪಡಿಸುತ್ತದೆ. ಅದ್ಭುತವಾಗಿಯೂ, ರಸಭರಿತವಾಗಿಯೂ ಇರುವ ಈ ಗ್ರಂಥವನ್ನು ಓದುವದರಿಂದ ಪುರುಷರಲ್ಲಿ ಪೌರುಷವೂ ಸ್ತ್ರೀಯರಲ್ಲಿ ಪತಿವ್ರತಾ ಧರ್ಮವೂ ನೆಲೆಗೊಳ್ಳುವದು!

ಕ್ರಯ: 0-12-0 ಪೋಸ್ಟುಖರ್ಚು ಪ್ರತ್ಯೇಕ. ಹನ್ನೆರಡು ಪುಸ್ತಕಗಳನ್ನು ಒಂದೇಸಲ ಪಡಕೊಳ್ಳುವವರಿಗೆ ಒಂದು ಪುಸ್ತಕ ಉಚಿತವಾಗಿ ದೊರಕುವುದು.

ತಾಜ ಕಲಂ:—ಈ ನನ್ನ ಕಾರ್ಯಕ್ಕೆ ಸ್ವಜಾತಿ ಗ್ರಹಸ್ಥರು ಜಾತಿಯಾಭಿಮಾನದಿಂದಲೂ ವಿಜಾತಿ ಮಹನೀಯರು ಮಿತ್ರಾಭಿಮಾನದಿಂದಲೂ ಪ್ರೋತ್ಸಾಹಕೊಟ್ಟು, ಸರ್ವರೂ ಇದರ ಪ್ರಯೋಜನ ಹೊಂದುವಂತೆ ಕೋರುತ್ತೇನೆ.

ವಿಳಾಸ:— **V. O. Amin**
C/o E. A. Goll E.
Sirdar Palace, Apollo Street, BOMBAY

ಎಸಾರಾಟಕ್ಕ ಸಿದ್ಧವದ! ಪುರಾತನ ಸಂಗ್ರಹ! ನೂತನಗ್ರಂಥ!

ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ
ಮತ್ತು
ಭೂತಾಳಪಾಂಡ್ಯರಾಯನ ಅಳಿಯ ಕಟ್ಟು

ಈ ನವೀನ ಗ್ರಂಥದಲ್ಲಿ ಪರಶುರಾಮದೇವರ ಸೃಷ್ಟಿ ಲಾಗಾಯತು ಬ್ರಿಟಿಷ್ ಮಹಾರಾಜರ ಆಳಿಕೆ ವರೆಗಿನ ಕನ್ನಡಜಿಲ್ಲೆಯ ಪೂರ್ವದ ಎಲ್ಲಾ ರಾಜರ ಚರಿತ್ರೆಗಳೂ, ಹೆಸರುಗಳೂ ಧರ್ಮರಾಯನ ನಂತರ ಕಲಿಯುಗದಲ್ಲಿ ರಾಜ್ಯವಾಳಿದ ಕ್ಷತ್ರಿರಾಜರ ಹೆಸರುಗಳೂ, ಕಾಲಗಳೂ ಸರಿಯಾಗಿರುವದಲ್ಲದೆ, ಮಯೂರವರ್ಮನೇ ಮೊದಲಾದ ಮಹಾ ಪುರುಷರ ಚರಿತ್ರೆಗಳೂ, ಅಹಿಕ್ಷೇತ್ರದಿಂದ ಬ್ರಾಹ್ಮಣರನ್ನು ಕರಿಸಿ ಅವರಿಗೆ ನೇಮಿಸಿದ 326 ಬಹುಮಾನದ ಹೆಸರುಗಳೂ, ಅವರ ಸ್ಥಾನಮಾನಗಳೂ, ಅಳಿಯಸಂತಾನದ ಸಂಪೂರ್ಣ ಅಭಿಪ್ರಾಯಗಳಿರುವ ಭೂತಾಳಪಾಂಡ್ಯನ ಪೂರ್ಣ ಚರಿತ್ರೆಯೂ, ಕಟ್ಟು, ಕಟ್ಟಳೆ, ಮಾನ, ಮರ್ಯಾದೆ, ಜಾತಿ ನೀತಿ ವಿಚಾರಗಳೂ ಅನೇಕ ಕಡೆಗಳಲ್ಲಿದ್ದ ಪೂರ್ವ ಶಿಲಾಶಾಸನಗಳ ಯಥಾ ನಕಲುಗಳೂ ತಾಮ್ರಶಾಸನಗಳ ತದ್ಪ್ರತಿಗಳೂ ಕೂಡಾ ಭರಿತವಾಗಿ ಸಹ್ಯಾದ್ರಿ ಗ್ರಾಮಪದ್ಧತಿ, ರಾಜವಂಶಾವಳಿ ಮೊದಲಾದ ಅಪೂರ್ವ ಗ್ರಂಥಗಳ ಸಹಾಯದಿಂದ ಕೆಲವು ವರ್ಷಗಳಿಂದ ಸಂಗ್ರಹಿಸಿದ ನೂತನ ಸಂಗ್ರಹವು ಹೋಬಳಿ, ಮಾಗಣೆ, ಮನೆತನ, ಅರಸು, ಬಳ್ಳಾಲರು, ಗ್ರಾಮಗುರಿಕಾರರು, ಪಂಚಾಯಿತಿದಾರರು, ನ್ಯಾಯಶಾಲೆಗಳು, ಉಪಾಧ್ಯಾಯರೂ ವಿದ್ಯಾರ್ಥಿಗಳೂ ಗ್ರಾಮಾಧಿಕಾರಿಗಳೂ ವಗೈರೆ ಓದುಬರಹ ಬಲ್ಲ ಮಹನೀಯರಿಗೆ ತಿಳಿಯಲನುಕೂಲವಾದ 296 ಪುಟಗಳು ಭರಿತವಾಗಿ ಸದಾ ಕೈಯಲ್ಲಿರುವದಕ್ಕೆ ಯೋಗ್ಯವಾದ ಈ ಪುಸ್ತಕವು ಈಗಲೇ ತಯಾರಾಗಿ ಸಿದ್ಧವಿವೆ ಅನೇಕ ಮಹನೀಯರ ಉತ್ತಮ ಅಭಿಪ್ರಾಯಗಳೂ ಬಂದಿರುತ್ತವೆ

ಪುಸ್ತಕದ ಬೆಲೆಯು ಈಗ ತರಿಸುವವರಿಗೆ 1—4—0 ಟಪ್ಪಾಲ್ ಖರ್ಚು ಬೇರೆ

ಸಮಯಾನುಸಾರ ಕ್ರಯವು 0—4—0 ಏರಿಸಲಾದೀತು

ಹೆಚ್ಚಿಗೆ ಪ್ರತಿಗಳನ್ನು ಕೊಂಡುಕೊಳ್ಳುವವರಿಗೂ ವ್ಯಾಪಾರಸ್ಥರಿಗೂ ಒಳ್ಳೇ ಕಮಿಷನ್ ಕೊಡಲಾಗುವದು

ಪ್ರಾಮುಖ್ಯ ಏಜಂಟರು — ಎನ್. ಎ ಶೀನಪ್ಪ ಹೆಗ್ಗಡೆ,
ಎಸ್. ಪಿ. ರಾಜ ಎಂಡ್ ಕೊ. ಅಮುಣಿಂಜೆಗುತ್ತು,
ಪೋಸ್ಟು ಪೊಳಲಿ, ದ. ಕ. ಗುರುಪುರ ಪೋಸ್ಟು, ದ. ಕ.

ಈ ಗ್ರಂಥವು ಈ ಕೆಳಗಿನ ವಿಳಾಸದವರಲ್ಲಿಯೂ ದೊರಕುವದು.

1. ಶಾರದಾ ಪ್ರೆಸ್, ಮಂಗಳೂರು.
2. ಶ್ರೀ ರಾಧಾಕೃಷ್ಣ ವಿಲಾಸ, ಮಂಗಳೂರು
3. ಬಂಟರ ವಿದ್ಯಾರ್ಥಿಭವನ, ಮಂಗಳೂರು.
4. ಊಲನ್ ಮಾರ್ಟ್, ಮಂಗಳೂರು.
5. ಕಾದಂಬರಿ ಸಂಗ್ರಹ ಆಫೀಸು, ಚಾಮರಾಜನಗರ ಮೈಸೂರು.
6. ಪ್ರಭಾಕರ ಮುದ್ರಾಯಂತ್ರ, ಉಡುಪಿ.
7. ಹಿರಿಯಡ್ಕ ಕೃಷ್ಣ ರಘುನಾಥ ಕಾಮತ್, ಮರ್ಚಂಟ್ ಕಾರ್ಕಳ.

ಕರ್ಣಾಟಕ ವೃತ್ತ ಮತ್ತು ಧನಂಜಯ.

ಕಳೆದ 25 ವರ್ಷಗಳಿಂದ ಭಾಷಾ ಸೇವೆಯನ್ನೂ ದೇಶ ಸೇವೆಯನ್ನೂ ಮಾಡುತ್ತಿರುವ ಈ ವಾರಪತ್ರಿಕೆಯು ಧಾರವಾಡದಲ್ಲಿ ಪ್ರತಿ ಮಂಗಳವಾರವೂ ಪ್ರಕಟಿಸಲ್ಪಡುವದು.

ಲೋಕವ್ಯವಹಾರದ ಉಪಯುಕ್ತ ವಿಷಯಗಳ ಸದಭಿಪ್ರಾಯವನ್ನು ಜನರಲ್ಲಿ ಉಂಟುಮಾಡುವಂಥ ಚಲೋ ಸ್ಫುಟ ಲೇಖಗಳುಳ್ಳ ಮುಂಬಯಿ ಕರ್ಣಾಟಕದ ಉತ್ತಮ ತರಗತಿಯ ಈ ಪತ್ರವನ್ನು ದಕ್ಷಿಣಕನ್ನಡದವರೂ ಓದುವದು ಅಗತ್ಯ.

ದೊಡ್ಡ ರೊಯಲ್ ಸ್ಯಾಜಿನ ಈ ಪತ್ರಿಕೆಗೆ ವಾರ್ಷಿಕ ಚಂದಾ ಮೊಬಲು ಟಪ್ಪಾಲು ಹಾಸಲು ಸೇರಿ ರೂ. ೨—೪—೦ ಆಗಿರುತ್ತದೆ; ಚಂದಾದಾರರಾಗಿ ಸೇರಲಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಮ್ಯಾನೇಜರ್, ಕರ್ಣಾಟಕ ವೃತ್ತ ಮತ್ತು ಧನಂಜಯ,
ಮಂಗಳವಾರಪೇಟೆ. ಧಾರವಾಡ.

ನೀವು ಹೊಗೆಸೊಪ್ಪನ್ನು ಅಗಿಯುತ್ತೀರೋ?

ಹೊಗೆಸೊಪ್ಪನ್ನು ಅಗಿಯುವ ಅಭ್ಯಾಸವು ಬಹಳ ಹಾನಿಕರವಾಗಿದೆ.

ಮಲಬಾರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಹೊಗೆಸೊಪ್ಪನ್ನು ಸೇವಿಸುತ್ತಿರುವವರು ಬಹಳ ಜನರಿರುವರು. ಹೊಗೆಸೊಪ್ಪಿನಲ್ಲಿ "ನಿಕೊಟಿನ್" ಎಂತ ಕರೆಯಲ್ಪಡುವ ವಿಷಪದಾರ್ಥವಿದೆ. ಇತರ ಮಾದಕ ಪದಾರ್ಥಗಳು ನಮ್ಮ ನರಗಳನ್ನು ಪ್ರಚೋದನ ಪಡಿಸುವಂತೆ "ನಿಕೊಟಿನ್" ಸಹ ನರಗಳಲ್ಲಿ ತತ್ಕಾಲದ ಮಟ್ಟಿಗೆ ಉದ್ದೀಪನೆಯನ್ನುಂಟುಮಾಡುವುದು. ನರಗಳು ಹೀಗೆ ನಿರರ್ಥಕವಾಗಿ ಆಯಾಸಗೊಳ್ಳುವುದರಿಂದ ನರಸಂಸ್ಥಾನವು ಹಾಳಾಗಿ ದೇಹಪ್ರಕೃತಿಯು ಕೆಡುವುದು. ಇಷ್ಟೇ ಅಲ್ಲ, ಭಯಂಕರವಾದ "ಕೆನ್ಸರ್" ಎಂಬ ವ್ರಣಗಳು ನಾಲಿಗೆಯಲ್ಲಿಯೂ ತುಟಿಗಳಲ್ಲಿಯೂ ಹೊಗೆಸೊಪ್ಪಿನ ಸೇವನೆಯಿಂದ ಉಂಟಾಗುವವು. ಇದರ ಚರ್ವಣದಿಂದ ಬಾಯಿಯು ಹೊಲಸಾಗುವದಲ್ಲದೆ ಈ ಅಭ್ಯಾಸ ಹಿಡಿದವರಿಂದ ಹಲ್ಲುಗಳನ್ನು ಸ್ವಚ್ಛವಾಗಿಡುವುದು ತುಂಬಾ ಅಸಾಧ್ಯವಾಗಿದೆ. ಅಲ್ಲಾಡುತ್ತಿರುವ ಹಲ್ಲುಗಳು ಗಟ್ಟಿಯಾಗುತ್ತವೆ. ರಕ್ತವನ್ನು ಸುರಿಸುತ್ತಿರುವ ದಂತ ಮೂಲಗಳು ಸರಿಯಾಗುತ್ತವೆ. ಹಲ್ಲುನೋವು ವಾಸಿಯಾಗುತ್ತದೆ ಎಂಬೀ ಭ್ರಾಂತಿಯಿಂದ ಹಲವರು ಹೊಗೆಸೊಪ್ಪನ್ನು ಉಪಯೋಗಿಸುವರು. ಆದರೆ ಇದರ ಉಪಯೋಗದಿಂದ ಈ ಪ್ರಯೋಜನಗಳಲ್ಲಿ ಒಂದಾದರೂ ಎಂದೂ ಲಭಿಸುವದಿಲ್ಲ.

ಪ್ರತಿನಿತ್ಯದಲ್ಲಿಯೂ ನೀವು ನಾವು ತಯ್ಯಾರಿಸುವ
ಪೊರೆನಾಶಕರ ಮತ್ತು ಚೊಗಥು ಚೆನ್ನಾಗುಳ್ಳ

"ದಂತಮಂಜನ"

ವನ್ನು ಉಪಯೋಗಿಸಿದರೆ ಹೊಗೆಸೊಪ್ಪನ್ನು ಜಗಿಯುವ ಅಭ್ಯಾಸವನ್ನು ಮಾಡಿಕೊಳ್ಳಬೇಕೆಂಬುದೇ ಇಲ್ಲ. ಅಂಥಾ ಅಭ್ಯಾಸವಿದ್ದರೂ ಅವನ್ನು ಇದರ ಉಪಯೋಗದಿಂದ ಬಿಡಲು ಸಾಧ್ಯವಾಗುವುದು.

ಈ ದಂತಮಂಜನವು ಡಾಂಭಿಕ ವೈದ್ಯರ ಅಂತರಂಗದ ಕುಂಬು ಔಷದವಲ್ಲ. ಕಳದ ೧೫ ವರುಷಗಳಿಂದ ಸರ್ವಸಾಮಾನ್ಯವಾಗಿ ಇದು ಎಲ್ಲರಿಂದಲೂ ಉಪಯೋಗಿಸಲ್ಪಟ್ಟಿರುತ್ತದೆ. ದಂತಮೂಲಗಳಲ್ಲಿಯೂ ಹಲ್ಲುಗಳಲ್ಲಿಯೂ ಉಂಟಾಗುವ ಅನಾರೋಗ್ಯಕರ ಕ್ರಿಮಿಗಳನ್ನು ನಾಶಪಡಿಸುವ ವನಸ್ಪತಿಗಳಿಂದ ಇದು ಕೂಡಿರುವುದು. ಇದರ ಉಪಯೋಗದಿಂದ, ದಂತಮೂಲಗಳು ಗಟ್ಟಿಯಾಗುವವು, ದಂತಮೂಲಗಳಲ್ಲಿ ಆಗಿಂದಾಗ್ಯೆ ತಲೆದೋರುವ ಹುಣ್ಣುಗಳು, ಹಲ್ಲುನೋವು ಗುಣಹೊಂದುವವು. ಬಾಯಿಯಿಂದ ಹೊರಡುವ ದುರ್ವಾಸನೆಯು ಹೋಗಿ ಸುವಾಸನೆಯು ಉಂಟಾಗುವದು. ಹೊಲಸಾದ ಹಲ್ಲುಗಳಲ್ಲಿ ಉಂಟಾಗುವ ಕ್ರಿಮಿಗಳು ಅನ್ನಕೋಶದೊಳಗೆ ಸೇರಿಕೊಂಡು ಡಿಸ್ಪೆಪ್ಸಿಯಾ ಎಂಬ ಅಮಾಲಜೀರ್ಣ ರೋಗವನ್ನುಂಟುಮಾಡುವವು ಎಂತ ವೈದ್ಯರ ಅನುಭವಕ್ಕೆ ಬಂದಿರುವುದು. ಆದ್ದರಿಂದ ಹಲ್ಲುಗಳನ್ನು ಸ್ವಚ್ಛವಾಗಿಡುವುದು ಆಗತ್ಯವಾಗಿರುವುದು. ಸಭ್ಯತೆಗೆ ಶುಚಿಭೂತರಾಗಿರುವುದು ಅಗತ್ಯ. ಹೊಲಸಾದ ಹಲ್ಲುಗಳುಳ್ಳವರು ಶುಚಿರ್ಭೂತರಾಗಿರುವದು ಸಾಧ್ಯವಲ್ಲ. ಸುಸ್ವರದಿಂದ ಮಾತುಗಳನ್ನಾಡಲಿಕ್ಕೂ, ಅಂದಚಂದಕ್ಕೂ, ಆರೋಗ್ಯಕ್ಕೂ, ಸ್ವಚ್ಛವಾದ ಹಲ್ಲುಗಳು ಬೇಕಾಗಿವೆ. ನಮ್ಮ ಆಹಾರವನ್ನು ಚನ್ನಾಗಿ ಜಗಿಯಲು ಗಟ್ಟಿಯಾದ ಹಲ್ಲುಗಳು ಇರಬೇಕು. ಆಹಾರವನ್ನು ಹಲ್ಲುಗಳಿಂದ ಚನ್ನಾಗಿ ಜಗಿಯದಿದ್ದರೆ ಅವುಗಳು ಸರಿಯಾಗಿ ಜೀರ್ಣವಾಗದೆ ಶರೀರಕ್ಕೆ ಬೇಕಾದ ಪುಷ್ಟಿಯು ದೊರಕದು. ಆದ್ದರಿಂದ ನಮ್ಮ ದಂತಮಂಜನವನ್ನು ಉಪಯೋಗಿಸಿಕೊಂಡು ಹೊಗೆಸೊಪ್ಪನ್ನು ಸೇವಿಸುವುದನ್ನು ಬಿಟ್ಟುಬಿಡಿರಿ. ಈ ದಂತಮಂಜನವನ್ನು ಉಪಯೋಗಿಸಿಕೊಳ್ಳುವ ಸಾವಿರಾರು ಜನರು ಇದರ ಪ್ರಯೋಜನವನ್ನು ನೋಡಿಕೊಂಡು ಒಂದು ದಿನವಾದರೂ ಇದರ ಉಪಯೋಗವನ್ನು ಬಿಡದೆ ಮಾಡುತ್ತಿದ್ದಾರೆ.

ಕ್ರಯ ಡಬ್ಬಿ ೧ಕ್ಕೆ ಆಣೆ ೬. ೧ ಡಜನು ಡಬ್ಬಿಗಳಿಗೆ ರೂ. ೪.

ಒಮ್ಮೆ ಹಲ್ಲುಗಳನ್ನುಜ್ಜಲು ಈ ಹುಡಿಯು ಸ್ವಲ್ಪಮಾತ್ರವೇ ಇದ್ದರೆ ಸಾಕಾಗುವದರಿಂದ ಒಂದು ತಿಂಗಳಿಗೆ ಒಬ್ಬನಿಗೆ ಒಂದು ಡಬ್ಬಿಯಕ್ಕಿಂತ ಹೆಚ್ಚಿಗೆ ಬೇಡ. ಈ ಕಾರಣದಿಂದ ಇದು ಅಗ್ಗವಾಗಿದೆ. ಬ್ರಶ್ಶಿನಿಂದ ಇದನ್ನು ಉಪಯೋಗಿಸಿದರೆ ಮತ್ತಷ್ಟು ದೀರ್ಘಕಾಲಕ್ಕೆ ಒಂದು ಡಬ್ಬಿ ದಂತಮಂಜನವು ಸಾಕಾಗುತ್ತದೆ.

ಅತ್ಯುತ್ಕೃಷ್ಟವಾದ ಬ್ರುಶ್ ಒಂದಕ್ಕೆ ಆಣೆ ೧೦

ಮೇಲಿನ ಕ್ರಯದಲ್ಲಿ ಟಪ್ಪಾಲು ಮೂಲಕ ಕಳುಹಿಸಿಕೊಡುವ ಖರ್ಚು ಕೂಡಿರದು. ಆದ್ದರಿಂದ ಟಪ್ಪಾಲು ಹಾಸಲು ಪ್ರತ್ಯೇಕವಿರುವುದು.

ವಿಳಾಸ:— ಶ್ರೀ ಕೃಷ್ಣನ್ ಬ್ರದರ್ಸ್, ಔಷಧಿವ್ಯಾಪಾರಸ್ಥರು, ಪೋಸ್ಟ್ ಬೋಕ್ಸ್ ನಂಬ್ರ 166, ಮದ್ರಾಸು.

Sri Krishnan Brothers,

CHEMISTS & OPTICIANS, POST BOX NO. 166, MADRAS

ನಮ್ಮಲ್ಲಿಯ ಸಾಮಾನುಗಳು ಈ ಕೆಳಗಿನ ವಿಳಾಸದವರಲ್ಲಿಯೂ ದೊರಿಯುತ್ತವೆ

ಕುಬೇರ ಸುಬ್ಬರಾವ್,
ಜನರಲ್ ಮರ್ಚೆಂಟ್,
ರಥಬೀದಿ, ಮಂಗಳೂರು.

ಅನುಭವಸಿದ್ಧವಾದ ವನೌಷಧಗಳು

೧. [illegible] ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಕವೂ ಆಗಿದ್ದು ಪ್ರದರ್ಶನಗಳ ೮ ಪಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨-೮-೦.

೩. [illegible] ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ನೊಳಕೆಯ ಮೂಲವ್ಯಾಧಿಯ [illegible] ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ [illegible]ವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ಪರಿಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುಲ್ಮಶ್ವಾಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರಕೃಚ್ಛ್ರ, ಧಾತುಪತನ, ದುವ್ಯರ್ಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩. ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ:—ಬಿ ಎಮ್. ನಾಥ್ ಮತ್ತು ಕಂಪೆನಿ,

ವೆಪರಿ ಪೋಸ್ಟು ಮದರಾಸು.

B. M. Nath & Co., *Ayurvedic Chemists*,

Vepery Post, MADRAS.

ಗಮನ ಕೊಡಿರಿ! ತ್ವರೆ ಮಾಡಿರಿ!

ಶ್ರೀ ಮಾಂಗಿರೀಷ ಬಾಮ್

ತಲೆನೋವು, ಒಕ್ಕಣ್ಣಿ ನೋವು, ಹಲ್ಲು ನೋವು, ಸೊಂಟನೋವು, ಎಲ್ಲಾ ಪುಪ್ಪುಸ ರೋಗಗಳು, ಉಳುಕು, ವಾಯುವಿನಿಂದ ಹೊಟ್ಟೆ ಉಬ್ಬರಿಸುವದು, ಇವುಗಳನ್ನು ಶೀಘ್ರವಾಗಿ ಗುಣಪಡಿಸುವದು. ಸ್ಕ್ರೂಬಾಯಿಯ ಲೋಹದ ಮುದುರುವ ನಳಿಗೆಗಳಲ್ಲಿರುವದರಿಂದ ಬಾಟ್ಲಿಗಳಲ್ಲಿರುವ ಬಾಮುಗಳೋಪಾದಿ ಸೂರ್ಯನ ಬೆಳಕಿಗೂ, ಗಾಳಿಗೂ, ಆಗದೆ ಎಷ್ಟು ಕಾಲಕ್ಕೂ ಹಾಳಾಗುವದಿಲ್ಲ. ನಳಿಗೆಯ ಅಡಿಯನ್ನು ಮಾತ್ರ ಒತ್ತಿದಲ್ಲಿ ಬೇಕಾದಷ್ಟು ಮಾತ್ರ ಬಾಮ್ ಹೊರಗೆ ಬರುವದು. ಇದಲ್ಲದೆ ಪ್ರತಿ ನಳಿಗೆಯಲ್ಲಿ ಬಾಟ್ಲಿಗಳಲ್ಲಿರುವದರ 1½ ಪಾಲು ಬಾಮು ಇರುವದು. ನಳಿಗೆ ಕ್ರಯ ರೂ. 0-8-0.

ವಿಸ್ಫೋಟಿಕ ಮುಟ್ಟಂ, ಸಿಡುಬು, ಕೋರ, ಕೊಟ್ಟೆ ಮಕ್ಕಳಚೇಷ್ಟೆ, ಮುಂತಾದ ಜಾಡ್ಯಗಳಿಗೆ ಅತ್ಯುತ್ತಮವಾದ್ದು. ಸಿಡುಬು ಮುಂತಾದ ಅಂಟುರೋಗಗಳಲ್ಲಿ ಜ್ವರ ಕಾಣಿಸಿಕೊಳ್ಳುವಾಗ ಒಂದು, ಯಾ ಎರಡು ಮಾತ್ರೆಯನ್ನು ಬಿಸಿ ನೀರಿನಲ್ಲಿ ತೇದು ಕೊಟ್ಟರೆ ಕೂಡಲ್ಲೇ ಜ್ವರ ಗುಣವಾಗುವದು. ಮಕ್ಕಳ ಚೇಷ್ಟೆಗೆ ಒಂದು ಮಾತ್ರೆಯಂತೆ ಪ್ರತಿದಿನವೂ ಮೊಲೆಹಾಲಿನಲ್ಲಿ ತೇದು ದಿನಕ್ಕೆ 2 ಸಾರಿ ಕೊಟ್ಟರೆ ಪೀಡೆಯು ಪರಿಹಾರವಾಗಿ ಧೃಡಕಾಯವಾಗಿ ಬೆಳೆಯುವರು. ಎಲ್ಲಾ ತರದ ಜ್ವರಗಳಿಗೂ ಉತ್ತಮವಾದ್ದು. 12 ಮಾತ್ರೆಗಳ ಪೊಟ್ಟ 1ಕ್ಕೆ 0—6—0.

ಸ್ವರಸುಧಿ. ಕೆಮ್ಮು, ಗಂಟಲುನೋವು, ಧ್ವನಿ ಬದಲಾಗುವದು, ಅಗ್ರ ಮುಂತಾದವುಗಳಿಗೆ ಅತ್ಯುತ್ತಮ. ಎಲೆ ಅಡಿಕೆಯ ಸಂಗಡ ತಿನ್ನುವುದರಿಂದ ಹಲ್ಲುಗಳಿಗೂ, ಜೀರ್ಣಕ್ಕೂ ಸಹಕಾರಿ. ದೊಡ್ಡ ಪೊಟ್ಟ 1ಕ್ಕೆ 0-1-6. ಸ್ಯಾಂಪಲ್ ಪೊಟ್ಟ ಪೈ 6.

ಕಾರ್ಬೋಲಿಕ್ ಟೂತ್ ಪೌಡರ್. ಈ ದಂತಮಂಜನದ ಹುಡಿಯಿಂದ ಹಲ್ಲುಗಳನ್ನು ಪ್ರತಿದಿನವೂ ತಿಕ್ಕುವುದರಿಂದ, ಹಲ್ಲುಹುಳುಕ, ಹಲ್ಲುನೋವು, ಮಸಡುಹುಣ್ಣು, ಮುಂತಾದವುಗಳು ಗುಣವಾಗಿ ಹಲ್ಲುಗಳು ಬಲವಾಗುವವು. ದೊಡ್ಡ ಡಬ್ಬಿ 1ರ ಕ್ರಯ 0—2—0. ಸ್ವಶ್ಲಾಘನೆಯು ಯೋಗ್ಯವಲ್ಲ. ಒಮ್ಮೆ [illegible] ಪರೀಕ್ಷಿಸಿದರೆ ತಿಳಿದೀತು.

ಇವುಗಳ [illegible] ಆಯುರ್ವೇದವನ್ನು ಅನುಸರಿಸಿ ತಯ್ಯಾರಿಸಿದ ಅನೇಕ ಔಷಧಗಳು ನಮ್ಮಲ್ಲಿ ತಯ್ಯಾರಿರುತ್ತವೆ. ರೋಗ ಪ್ರಕೃತಿಯನ್ನು ಈ ಕೆಳಗಿನ ವಿಳಾಸಕ್ಕೆ [illegible] ಸಮೇತ ಬರಕೊಂಡಲ್ಲಿ ತಕ್ಕ ಔಷಧದ ದರವನ್ನು [illegible] 1 ಡಜನ್ ಬಾಮ್ ತರಿಸಿಕೊಳ್ಳುವವರಿಗೆ ಒಂದು [illegible] [illegible] ಹಾಸಲು ಮಾಫಿ. [illegible]

M. D. R. & SONS

[illegible] UDIPI, S. C.

ಡೋಂಗರೆ

ಇವರ

ಬಾಲಾಮೃತ.

ಮಕ್ಕಳಿಗೆ

ಅತ್ಯುತ್ತಮವಾದ ಟಾನಿಕ್!

ಈ ಬಾಲಾಮೃತವನ್ನು ಉಪಯೋಗಿಸುವುದರಿಂದ, ಮಕ್ಕಳು ಶಕ್ತಿವಂತರಾಗಿ ಆರೋಗ್ಯವಂತರಾಗುವರು. ಇದು ಸವಿ ಇರುವುದರಿಂದ ಮಕ್ಕಳು ಬಹಳ ಸಂತೋಷದಿಂದ ತಕ್ಕೊಳ್ಳುತ್ತಾರೆ.

ಸೂಚನೆ:—ಬಾಲಾಮೃತವನ್ನು ಪಡಕೊಳ್ಳುವಾಗ ಡೋಂಗರೆಯವರ ಹೆಸರು ಇದ್ದದ್ದನ್ನೇ ನೋಡಿ ಪಡಕೊಳ್ಳಿರಿ. ಇತರ ಕೀಳು ತರಗತಿಯದ್ದನ್ನು ಪಡಕೊಂಡು ಮೋಸಹೋಗಬೇಡಿರಿ.

ಬಾಟ್ಲಿ ಒಂದರ ಕ್ರಯ 0—12—0. ಟಪ್ಪಾಲು ಖರ್ಚು 0—4—0.

K. T. Dongare & Co., ಕೆ. ಟಿ. ಡೋಂಗರೆ ಎಂಡ್ ಕೊ.,

Girgaum, Bombay. [illegible]

ಆತಂಕನಿಗ್ರಹ ಗುಳಿಗೆಗಳು.

ದೇಹದಲ್ಲಿ ಎಂಥಾ ಕಾಯಿಲೆ ಇರುವಲ್ಲಿ ಅದನ್ನು ಶೀಘ್ರದಲ್ಲಿ ಹೋಗಲಾಡಿಸುವ ಪ್ರಯತ್ನ ಮಾಡಿ ತಕ್ಕಂಥಾ ಔಷಧವು ಸೇವಿಸಿ ಅದನ್ನು ಗುಣಹೊಂದಿಸದಿದ್ದರೆ ರತ್ನವಾದ ದೇಹವು ಕ್ಷೀಣಿಸುವದು. ಆದಕಾರಣ ಹಾಗೂ ತವ ೆ ಏನಾದರೂ ದೇಹಾಸೌಖ್ಯ ಕಂಡುಬರುವಲ್ಲಿ ತಕ್ಷಣವೇ ಆತಂಕನಿಗ್ರಹ ಗುಳಿಗೆಗಳನ್ನು ಸೇವಿಸಿ ನಂತರ ದೇಹಬಲವನ್ನು ಸ್ಥಾಪಿಸಿ ಅತಿ ಉತ್ತಮಕರವಾದ ರತ್ನವೆಂಬ ಔಷಧವು

ಕ್ರಯ 32 ಗುಳಿಗೆಗಳಿಗೆ 1 ರೂಪಾಯಿ

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

157, 158 ಆತಂಕನಿಗ್ರಹ ಔಷಧಾಲಯ, ಬ್ರಾಡ್ವೇ, ಮದ್ರಾಸ

ಶಮ್ಮ ಏಜಂಟರು — 1 ಮೆಸ್ಸರ್ಸ್. ರಫಯೆಲ್ ಎಂಡ್ ಕೊ, ದ್ವಿಟೊಬಿಲ್ಡಿಂಗ್ 2 ಜುಬಿಲಿ ಕೇಶ್ ಬಜಾರ್, ಬೆಂಗಳೂರು. ಮಂಗಳೂರು

S. U. N. & CO.,
BENARES CITY, U. P.

ಇಪ್ಪತ್ತೈದು ಸಾವಿರ ರೂಪಾಯಿನ ಮಾಲುಗಳನ್ನು

ಅಸಲ್ ಕ್ರಯಕ್ಕೆ ಕೊಡುತ್ತೇವೆ. ಈ ತಿಂಗಳು ಮಾತ್ರ.

ಈ ವರುಷ ಲಗ್ನಕಾರ್ಯಗಳಿಗೆ ತಯಾರಿಸಿದ ಬನಾರಸ್ ಜರಿ ಸಾದಾ ಸೀರೆ ಬುಟಾ ಸೀರೆ, ಪೇಟ ಮಗುಟ, ರುಮಾಲು ಕಣಗಳು, ಕೋಟ ಸಿಲ್ಕುಥಾನುಗಳು ಪಮರಿ ಚದರ್, ಕಾಶ್ಮೀರ್ ಸಾದಾ ಜರಿ ಶಾಲುಗಳು, ಕೊನಾರದ ಸೀರೆ, ರುದ್ರಾಕ್ಷಿ ಮೊದಲಾದ ಎಲ್ಲಾ ತರದ ಸುಮಾರು 25,000 ರೂಪಾಯಿನ ಮಾಲುಗಳು ಉಳಿದಿರುವುದರಿಂದ ನಾವು ಅದನ್ನು ಅಸಲ್ ಕ್ರಯಕ್ಕೆ ಕೊಡತ್ತೇವೆ. ಬೇಕಾದವರು ಬೇಗನೆ ಬರೆದು ತರಿಸಿಕೊಳ್ಳಬಹುದು.

ಈ ತಿಂಗಳು ಕಳೆದ ನಂತರ ಇಂಥಾ ಸಮಯ ಸಿಕ್ಕುವದಿಲ್ಲ ಬೇಗ ಬರೆದು ತರಿಸಿಕೊಳ್ಳಿ.

ಶಮ್ಮ ವಿಳಾಸ — ಯಸ್ .ಯು.ಯನ್. ಮತ್ತು ಕಂಪೆನಿ, ಕಾಶಿ

THE GREATEST TREASURE OF TRUE VEDIC PRINCIPLES.

ಸತ್ಯಾರ್ಥ ಪ್ರಕಾಶ.

ಮೊದಲನೇ ೧೦ ಅಧ್ಯಾಯಗಳ ಕನ್ನಡ ಭಾಷಾಂತರ.

ಇದರಲ್ಲಿ ಪ್ರಾಣಿಗಳಿಗೆ ಪರಸ್ಪರ ಸಂಬಂಧವು ಹ್ಯಾಗೆ ಉಂಟಾಯಿತೆಂಬುವದೂ ಜೀವದ ವಸ್ತು ಪರಮೇಶ್ವರನ ಸಂಬಂಧವೂ, ಪರಮೇಶ್ವರನ ಓಂಕಾರಾದಿ ಹೆಸರುಗಳ ವ್ಯಾಖ್ಯೆಯೂ, ಮಕ್ಕಳ ಶಿಕ್ಷಣ ಪದ್ಧತಿಯೂ, ಬ್ರಹ್ಮಚರ್ಯಾದಿ ವ್ಯವಸ್ಥೆಗಳ ವರ್ಣನವೂ ಬ್ರಾಹ್ಮಣ, ಕ್ಷತ್ರಿಯ ವೈಶ್ಯ ಶೂದ್ರರಿಗೆ ಮತ್ತು ಅಂತ್ಯಜರಿಗೆ ಹಾಗೂ ಸ್ತ್ರೀಯರಿಗೆ ವೇದಾಧ್ಯಯನದ ಅಧಿಕಾರವು ಇದ್ದ ಬಗ್ಗೆ ಸಪ್ರಮಾಣ ವಿವೇಚನವೂ, ಜಗತ್ತಿನ ಉತ್ಪತ್ತಿ ಸ್ಥಿತಿ ಮತ್ತು ಪ್ರಳಯಗಳ ವಿಚಾರವೂ, ಬಂಧ ಮೋಕ್ಷಗಳ ವಿಷಯವೂ, ಭಕ್ಷ್ಯಾಭಕ್ಷ್ಯಗಳ ವಿವೇಚನವೂ, ವೇದಾದಿ ಸಚ್ಛಾಸ್ತ್ರಗಳ ಆಧಾರದಿಂದ ಶ್ರೀ ಸ್ವಾಮಿ ದಯಾನಂದ ಸರಸ್ವತಿಗಳವರು ಚನ್ನಾಗಿ ಮಾಡಿದ್ದಾರೆ. ಶ್ರೀ ಸ್ವಾಮಿ ದಯಾನಂದ ಸರಸ್ವತಿಯವರ ಚರಿತ್ರವೂ, ಅವರು ವಿಶನರಿ ಮತ್ತು ಮೌಲ್ವಿಗಳೊಡನೆ ಮಾಡಿದ ತರ್ಕಗಳೂ ಪ ಸನಾತನ ವೈದಿಕಧರ್ಮದ ಸತ್ಯಾರ್ಥವನ್ನು ಬೋಧಿಸುವ ಗಹನ ವಿಷಯಗಳೂ ಇದರಲ್ಲಿ ಕೊಟ್ಟಿವೆ. ಕಿಮ್ಮತು ರೂ ೧—೮—೦. ವಿದ್ಯಾರ್ಥಿಯರಿಗೆ ರೂ ೧—೪—೦ ಟಪ್ಪಾಲು ಖರ್ಚು ಬೇರೆ. ಪುಟ 560.

ಸತ್ಯಾರ್ಥ ಪ್ರಕಾಶ.

(೧೧ನೇ ಅಧ್ಯಾಯದ ಕನ್ನಡ ಭಾಷಾಂತರ)

ಇದರಲ್ಲಿ ಆರ್ಯಾವರ್ತ ದೇಶದಿಂದಲೇ ಇತರ ದೇಶಗಳು ವಿದ್ಯೆಯನ್ನು ಪ್ರಾಚೀನ ಕಾಲದಲ್ಲಿ ಕಲಿಯುತ್ತಿದ್ದರೆಂತಲೂ ಆರ್ಯಾವರ್ತ ದೇಶದ ಅವನತಿಯ ಕಾರಣಗಳೂ ಅದ್ವೈತಮತ, ಮೂರ್ತಿಪೂಜೆ, ತಪ್ತಮುದ್ರಾಧಾರಣೆ, ಗಯಾಶ್ರಾದ್ಧ, ಪುರಾಣ ಫಲ, ಜ್ಯೋತಿಷ, ಬ್ರಾಹ್ಮಸಮಾಜ ಪ್ರಾರ್ಥನಾಸಮಾಜ ಮುಂತಾದ ಬಹಳೇ ಪಂಥಗಳ ಪರೀಕ್ಷಣವು ಮಾಡಿಯದೆ. ಕಿಮ್ಮತು ಆಣೆ 8 ವಿದ್ಯಾರ್ಥಿಯರಿಗೆ ಆಣೆ ೬ ಪಾನು ದೆಮ್ಮಿ ಅಷ್ಟಪತ್ರದ ಪುಟ ೧೫೦, ಟಪ್ಪಾಲು ಖರ್ಚು ಬೇರೆ.

ಈ ಗ್ರಂಥವನ್ನು ಹಿಂದೀ ಭಾಷೆಯೊಳಗಿನಿಂದ ಕನ್ನಡದಲ್ಲಿ ಸುಬ್ರಾವ್ ಶೇಷಗಿರಿ ಹಾಳಕರ, ಬಿ. ಎ. ಎಲ್ ಎಲ್ ಬಿ, ಹೈಕೋರ್ಟ ವಕೀಲ್, ರಂಗೂನ್, ಇವರು ಮಾಡಿರುತ್ತಾರೆ. ಹಿಂದು (ಆರ್ಯ) ಧರ್ಮಾಭಿಮಾನಿಯಾದ ಪ್ರತಿಯೊಬ್ಬನು ಸಂಗ್ರಹಿಸಲಿಕ್ಕೆ ದುರ್ಲಭವಾದ ಅತ್ಯಾವಶ್ಯಕ ಗ್ರಂಥವು. ಇದರ ಬೆಲೆಯಾದರೂ ಸರ್ವರೂ ಕೊಂಡುಕೊಳ್ಳುವಂತೆ ತೀರ ಕಮ್ಮಿ ಬೆಲೆಯನ್ನು ಇಟ್ಟಿರುತ್ತದೆ.

ಸಿಗುವ ವಿಳಾಸ — ಎಸ್ ಎಲ್. ಕಾಮತ್ ಧಾಕಪ್ಪನವರ
ಪೋಸ್ಟು ಶಿರ್ಸಿ, ಜಿಲ್ಲಾ ಉತ್ತರ ಕನ್ನಡ.

Estd 1888	ಸ್ಥಾಪನೆ 1888.

K. B. RELE & Cos.,—BOMBAY

ಕೆ. ಬಿ. ರೇಳೆ ಕಂಪನಿಕೃತ

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮುಲಮು.

ಎಷ್ಟೋ ಹಳತ, ಕರೆ ಮತ್ತು ಹಟಮಾರಿ ಗಜಕರ್ಣವು ಈ ಮುಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೩೦—೩೫ ವರ್ಷಗಳ ಹಳತ, ಪೈಮನೆ ಮಾಡಿಕೊಂಡಿದ್ದರಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ಗಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ದೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರಲ್ಲಾ ದೋಷಗಳೆಲ್ಲಾ ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ದಿಂದ ಮೈಮೇಲೆ ಉಬ್ಬುವ ಹಪ್ಪಿಗಳೂ, ಜಖುಮುಗಳೂ, ಬಾಯಿಗೆ ಮತ್ತು ಅಂಗಳಿಗೆ ಹೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮಿ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳುರಿಯೋಣ, ಕೈ ಮೇಲೆ ಕರೆ ಕಲೆ ಬೀಳೋಣ, ಮುಂತಾದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ಗಕ್ಕೆ ರೂ. ೧—೪—೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ, ಗಿರಗಾಂವ ನಂ. ೪ ಮುಂಬಯಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ, ಬರ್ಮಾ, ಸಿಲೋನ್ ಮಲೇಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ

ಮಹಾಭಾಗ ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನ್ನು ಕಾದು ನೊರೆಯಿಡುವುದು ನಿಜವಾಗಿಯೂ ತಪ್ಪುವುದ

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು ಜ್ವರ ಮಂದ ಮಲಬದ್ಧ, ಕೆಮ್ಮು, ಗಸೆಬೇನೆ ಬಲಹೀನತೆ ಕೆಟ್ಟಹವಾ ಮತ್ತು ಕೆಡುಕಾಹಾರದಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು ವಾಯು ಇನ್ನೂ ಅನೇಕ ರೋಗಗಳನ್ನು ಈ ಸಿದ್ಧೌಷಧ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ ಮಾತ್ರ

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—5—0
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—0—0

ಯೋಗ್ಯತಾ ಪತ್ರಗಳು.

ಮ॥ ರಾ॥ ಡಾಕ್ಟರ್ ಪ್ರಭಾಕರ್ ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎನ್. ಮೈ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಎ ಎಸ್ ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್ ಕನ್‌ಸಲ್ಟಿಂಗ್ ಕೆಮಿಸ್ಟ್ ಎಗಿಯರಿವೇನ್ ನಂ 2 ಬೊಂಬಾಯಿ ಇವರು ಬರೆದಿರುವುದು. ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯ ನೋವು, ಹೊಟ್ಟೇನೋವು, ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ, ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ

ಮ॥ ರಾ॥ ಪಿ ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನ್‌ಮೆಂಟ್ ಇವರು ಬರೆದಿರುವುದು ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧ ಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ ವೈದ್ಯಶಾಲೆಯಲ್ಲಿ ಅನೇಕ ತರದ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರು ಮಾಡುತ್ತಿರುತ್ತಾರೆ

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಅಶಕ್ತರಾದ ಸ್ತ್ರೀಯರಿರಾ!!!

ಗರ್ಭಾವಸ್ಥೆಯಲ್ಲಿಯೂ ಅನಂತರ ತೋರಿಬರುವ ಸರ್ವ ಬಗೆಯ ವಿಕಾರಗಳಿಗೆ ನಿಮಗೆ ಒಂದು ಉಪಾಯವು ಅಗತ್ಯವಿರುವುದು ಆ ಉಪಾಯವಾದರೋ

"ಗುಡೆರಿನ್"

ಎಂಬ ಹೆಸರಿನ ಈ ಔಷಧವನ್ನು ಸೇವಿಸುವುದೇ! ಸೂರ್ಯನಕಿರಣಗಳು ಇಬ್ಬನಿಯ ಮೇಲೆ ಎರಚುತ್ತಲೇ ಇಬ್ಬನಿಯೆಲ್ಲವೂ ಹೇಗೆ ಆರಿಹೋಗುವುದೋ, ಅದೇ ಮರ್ಯಾದೆಯಲ್ಲಿ ಅಶಕ್ತರಾದ ಸ್ತ್ರೀಯರು ಈ "ಗುಡೆರಿನ್" ಎಂಬ ಔಷಧವನ್ನು ಸೇವಿಸುತ್ತಲೇ, ಅವರ ಶಾರೀರಕ ದುಃಖಗಳೆಲ್ಲವೂ ಅತ್ಯಲ್ಪಕ್ಷಣದಲ್ಲಿಯೇ ಹುಟ್ಟಡಗಿ ಹೋಗುವವು. ಅನಿಯಮಿತವಾದ ಋತುಸ್ರಾವ, ಅಶಕ್ತತೆ, ಇವೆಲ್ಲ ರೋಗಗಳಿಗೆ ಇದು ರಾಮಬಾಣವೇ ಸರಿ.

ಹದಿನಾರು ಸಾವಿರ (16,000)

ಕ್ಕಿಂತ ಹೆಚ್ಚು ಡಾಕ್ತರರು ಬಹಳ ಸೂಕ್ಷ್ಮತೆಯಿಂದ ಈ "ಗುಡೆರಿನನ್ನು" ಶೋಧಿಸಿ, ಮೇಲೆ ಹೇಳಿದ ರೋಗಗಳಿಗೆ ಇದೇ ಸಿದ್ಧೌಷಧವೆಂದು ನಿರ್ಧಾರಗೈದಿರುವದರಿಂದ, ಈ ಔಷಧವು ಅಸಂಖ್ಯವಾದ ಔಷಧಾಲಯಗಳಲ್ಲಿ ಉಪಯೋಗಿಸಲ್ಪಡುತ್ತದೆ ಇದು "ಹಿಸ್ಟೀರಿಯಾ" ಮೊದಲಾದ ಸ್ತ್ರೀಯರ ಋತುಸ್ರಾವ ಸಂಬಂಧಿಯಾದ ಸರ್ವರೋಗಗಳಿಗೂ ಮಹೋಪಕಾರಿಯು. ಪ್ರಕೃತ ಪ್ರಸೂತವಾದೊಡನೆ ಆಸವರಿಷ್ಟಾದಿಗಳನ್ನು ಉಪಯೋಗಿಸುವ ಬದಲಿಗೆ, ಇದನ್ನು ಉಪಯೋಗಿಸಿ ನೋಡಿದ್ದಲ್ಲಿ ಇದರ ಗುಣ ಪ್ರತ್ಯಕ್ಷವಾಗಿ ಕಂಡುಬರುವದು. ಶೀಸೆ ಗೆರ ಕ್ರಯ ರೂಪಾಯಿ 3—4—0 ಟ. ಖ. ಸೀಸೆ ಗೆ 0—7—0.

ಬಿ. ಜೂಲನ್ ಮಾರ್ಟ. ಮಂಗಳೂರು.

ಮೈಸೂರು ಊದಬತ್ತಿಗಳ್

ಇಂಡಿಯಾ ದೇಶದಲ್ಲಿ ನಡದಿರುವ ಯಗ್ಜಬಿಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರಸಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ

ಊದಬತ್ತಿಗಳು 24 ದೂ ತೂಕದ ಶೇರು 1ಕ್ಕೆ ರೂ, 12-0-0, 5-0-0, 3-0-0, 2—8—0, 1—4—0 1—0—0.

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0—0, 1—0—0 0—12—0, 0—6—0

ಸುಗಂಧಿ ಕಾಡುರ್ 1ಕ್ಕೆ 0—1—0 **ಬಾಲಗ್ರಹ** ದೂಪ ಟಿನ್ 1ಕ್ಕೆ 0—8—0 **ಸುವಾಸನೇ ಸುಣ್ಣ** ಶೀಸೆ 1ಕ್ಕೆ 0—2—0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಒಣ್ಣದ ಸಾಮಾನುಗಳು ಸಹ ಇರುತವೆ ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರಿ, ಮೈಸೂರು.

ಬಹು ಮನೋಹರ! ಅದ್ಭುತ!

ವಸಂತ ಕೋಕಿಲೆ

ಎಂಬ

ನೂತನವಾದ ಹೊಸ ಕಾದಂಬರೀ ಕಥೆ.

ರಸಿಕ ಶಿರೋಮಣಿಗಳೇ,

"ವಸಂತ ಕೋಕಿಲೆ" ಎಂಬ ಇಂದ್ರಜಾಲ ಮಹೇಂದ್ರಜಾಲಗಳನ್ನು ಸ್ಪಷ್ಟವಾಗಿ ತೋರಿಸುವ ಅತ್ಯದ್ಭುತ ಚಮತ್ಕಾರವಾದ ಹೊಸ ಕಾದಂಬರೀ ಕಥೆಯು ಅಚ್ಚಾಗಿ ಈಗ ತಾನೇ ಬಿಕರಿಗೆ ಸಿದ್ಧವಾಗಿದೆ ಈ ಗ್ರಂಥದಲ್ಲಿ ಶೃಂಗಾರಾದಿ ನವರಸಗಳು ತುಂಬಿ ತುಳುಕುತ್ತಿವೆ ಈವರೆಗೆ ಪ್ರಚುರವಾಗಿರುವ ಎಲ್ಲಾ ಕಥೆಗಳಿಗಿಂತಲೂ ಮಿಗಿಲಾದ ರಸ್ಯವುಳ್ಳದ್ದಾಗಿದೆ ವರ್ಣನಾಭಾಗಗಳು ಎಲ್ಲರಿಗೂ ತಿಳಿಯುವ ಹಾಗೆಯೂ ಸ್ವಾಭಾವವಾಗಿಯೂ ಇವೆ ಭಾಷಾಶೈಲಿಯು ಅತ್ಯುತ್ತಮವಾಗಿದೆ ಓದುವದಕ್ಕಾರಂಭಿಸಿದ ವಾಚಕರ ಮನಸ್ಸನ್ನು ಸಂಪೂರ್ಣವಾಗಿ ಆಕರ್ಷಿಸಿ ಮುಗಿಯುವವರೆಗೂ ಆವೇಶವನ್ನುಂಟುಮಾಡಿ ಉಲ್ಲಾಸಗೊಳಿಸುವ ಹಾಗಿದೆ ತಮ್ಮ ಜ್ಞಾನ, ಭಕ್ತಿ, ವೈರಾಗ್ಯ ಮೊದಲಾದ ವೇದಾಂತ ವಿಷಯಗಳನ್ನೂ ಚೆನ್ನಾಗಿ ತಿಳಿಸುತ್ತದೆ ಕಥಾ ಸಂವಿಧಾನವು ಹೊಸ ಮಾದರಿಯಾಗಿ ಆಶ್ಚರ್ಯಕರವಾಗಿದೆ. ಪ್ರಕಟವಾಗಿ ಶೃಂಗಾರ ರಸವನ್ನು ವರ್ಣಿಸದೆ ಇರುವುದರಿಂದ ಎಲ್ಲಾ ಸ್ತ್ರೀಜನರಿಗೆ ಓದುವುದಕ್ಕೆ ಅರ್ಹವಾಗಿದೆ ಇದರಲ್ಲಿ ೯ ಪ್ರಕರಣಗಳೂ ೨೨೬ ಪುಟಗಳೂ ಇವೆ ಉತ್ತಮವಾದ ಕಾಗದ, ಸುಂದರವಾದ ಅಕ್ಷರ ತಪ್ಪಿಲ್ಲದೆ ಸುಂದರವಾಗಿ ಮುದ್ರಿಸಿದೆ. ಬೇಕಾದವರೆಲ್ಲರೂ ಕೆಳಗಣ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಕ್ರಯ ರೂ. ೧—೦—೦ ಮಾತ್ರ.

ವಿಳಾಸ:— ಟಿ. ಎ. ಮಾಣಿಕ್ಯಂ ಶೆಟ್ಟಿ,
ಮಾಣಿಕ್ಯಮಂದಿರ ಬುಕ್ ಡಿಪೋ,
ಬಳ್ಳಾರಿ

ಪ್ರೊಫೆಸರ್ ಜೇಮ್ಸ್‌ರವರ ಎಲೆಕ್ಟ್ರೊ ಟಾನಿಕ್ ಪಿಲ್ಸ್ ಎಂಬುವ

ವಿದ್ಯುತ್ಶಕ್ತಿಯ ವಾಜೀಕರಣ ಮಾತ್ರೆಗಳು.

ಇದು ಮುಖ್ಯವಾಗಿ, ಹೆಚ್ಚಾಗಿ ವ್ಯಾಯಾಮವನ್ನು ತೆಗೆದುಕೊಳ್ಳಲಾರದ ಮನುಷ್ಯರಿಗೂ, ಮೆದುಳಿನಲ್ಲಿಯೇ ಕೆಲಸ ಮಾಡುವಂತಹ ವಿದ್ಯಾವಂತರಿಗೂ, ಬೋಧಕರಿಗೂ, ಗುಮಾಸ್ತೆಯರಿಗೂ, ವಿದ್ಯಾರ್ಥಿಗಳಿಗೂ ಮತ್ತು ವ್ಯಾಪಾರಿಗಳಿಗೂ ಅತ್ಯುತ್ತಮವಾದ ಮುತ್ತಿನೋಪಾದಿಯ ಔಷಧ.

ಈ ಮಾತ್ರೆಗಳು ಕೆಳಗಿನ ವ್ಯಾಧಿಗಳನ್ನು ನಿರ್ಮೂಲ ಮಾಡುತ್ತದೆಂಬುದು ಎಲ್ಲವರ ಅನುಭವಸಿದ್ಧಾಂತವು. ಕ್ಷಯರೋಗ, ಎಳವು (ಹಿಸ್ಟೇರಿಯಾ) ವೀರ್ಯದೌರ್ಬಲ್ಯವು, ಮಂದಾಗ್ನಿ, ಕೆಟ್ಟರಕ್ತ, ತಲೆತಿರುಗುವಿಕೆ, ಶಕ್ತಿಹೀನತೆ, ಧಾತುಕ್ಷೀಣತೆ, ಧಾತು ಸಂಬಂಧವಾದ ವಿಕಾರಗಳು, ಸ್ತ್ರೀಗರ್ಭ ವಿಕಾರಗಳು, ಅಕಾಲದ ಮುಟ್ಟು, ಸೊಂಟದಲ್ಲಿಯು ನೋವು, ಮೂತ್ರದಲ್ಲಿಯು ಬಿಳುಪು, ಮಂದವಾದ ದೃಷ್ಟಿ, ಕೀಲುಗಳ ನೋವು ಈ ಮೇಲೆ ಹೇಳಿರುವ ಎಲ್ಲಾ ವ್ಯಾಧಿಗಳಲ್ಲಿ ನಿಮಗೆ ಯಾವುದಾದರೂ ಉಂಟಾದರೆ, ಆ ವ್ಯಾಧಿಯು ಆರಂಭಿಸುತ್ತಲೇ, ಬೇರೆ ಚಿಕಿತ್ಸೆಗಳನ್ನು ಮಾಡಿ, ಉಪಯೋಗವಿಲ್ಲದ ಕಷ್ಟಗಳನ್ನು ತಂದುಕೊಳ್ಳದೆ, ತಕ್ಷಣವೇ ಮೇಲೆ ಹೇಳಿರುವ ಪ್ರೊಫೆಸರ್ ಜೇಮ್ಸ್‌ರವರ ವಿದ್ಯುತ್‌ಶಕ್ತಿಯ ವಾಜೀಕರಣ ಮಾತ್ರೆಗಳನ್ನು ತರಿಸಿ ಉಪಯೋಗಿಸಿಕೊಳ್ಳಿರಿ. ಈ ಮಾತ್ರೆಗಳನ್ನು ಉಪಯೋಗಿಸುವುದರಿಂದ ಮೇಲೆ ಹೇಳಿರುವ ವ್ಯಾಧಿಗಳೆಲ್ಲವೂ ನಿರ್ಮೂಲವಾಗಿ ವಾಸಿಯಾಗುವುದು. ಅಲ್ಲದೆ, ನಿಮ್ಮ ಶರೀರಗಳನ್ನು ದೃಢವಾಗಿಯೂ, ಬಲವಾಗಿಯೂ, ಕಷ್ಟಪಟ್ಟು ಕೆಲಸಗಳನ್ನು ಮಾಡಲು ಸಶಿಕ್ತರಾಗಿಯೂ ಈ ಮಾತ್ರೆಗಳು ನಿಮಗೆ ಮನೋಲ್ಲಾಸವನ್ನೂ ಕೊಡುತ್ತವೆ. ನೀವು ಈ ಮಾತ್ರೆಗಳನ್ನು ಇದುವರೆಗೂ ಉಪಯೋಗಿಸದಿದ್ದರೆ, ಈಗಲಾದರೂ ಒಂದು ಬುಡ್ಡಿ ತರಿಸಿಕೊಂಡು ಉಪಯೋಗಿಸಿ ನೋಡಿದರೆ, ನಿಮಗೆನೇ ನಂಬಿಕೆಯುಂಟಾಗುವುದು.

25 ಮಾತ್ರೆಗಳುಳ್ಳ ಸೀಸೆ 1ಕ್ಕೆ ರೂ 1—4—0 40 ಮಾತ್ರೆಗಳುಳ್ಳ ಸೀಸೆ 1ಕ್ಕೆ ರೂ. 2—0—0 ಟಪ್ಪಾಲು ಖರ್ಚು ಅಲಾಯಿದ

ಅಂದವಾಗಿ ಥಳಥಳಿಸುವ ಕೂದಲನ್ನು ಕೊಡುವ

ಕಾಮಿನಿಯಾ ಆಯಿಲ್ (ರಿಜಿಸ್ಟರ್ಡ್)



ಈ ಎಣ್ಣೆಯು ಸುಪ್ರಸಿದ್ಧವಾದ ವನಸ್ಪತಿಗಳ ಮತ್ತು ಸುಗಂಧ ದ್ರವ್ಯಗಳ ಮಿಶ್ರಣದಿಂದ ತಯಾರು ಮಾಡಲ್ಪಟ್ಟಿರುವುದು. ಈ ಎಣ್ಣೆಯನ್ನು ಪ್ರತಿದಿನವೂ ಉಪಯೋಗಿಸುವುದರಿಂದ ಇದು ಮೆದುಳನ್ನು ತಣ್ಣಗೆ ಗೈದು ಜ್ಞಾಪಕಶಕ್ತಿಯನ್ನು ಅಭಿವೃದ್ಧಿ ಮಾಡುತ್ತದೆ. ಇದರ ಘನತೆಯಿಂದ ಅನೇಕ ದೊಡ್ಡ ಮನುಷ್ಯರೂ, ಹೆಂಗಸರೂ, ಯೌವನಸ್ಥರೂ ಯಾವಾಗಲೂ ಉಪಯೋಗಿಸುತ್ತಲಿರುತ್ತಾರೆ. ಕಾಮಿನಿಯಾ ಎಣ್ಣೆಯನ್ನು ಉಪಯೋಗಿಸುವುದರಿಂದ ತಲೆಕೂದಲು ನುಣುಪಾಗಿಯೂ ಒಲವುಳ್ಳದ್ದಾಗಿಯೂ, ನೋಡಲು ರೇಷ್ಮೆಯಂತೆ ಹೊಳಪುಳ್ಳದ್ದಾಗಿಯೂ ಆಗುವುದರಿಂದ ಈಗ ಅಂಗಡಿಗಳಲ್ಲಿ ದೊರಕುವ ಅನೇಕ ಕೀಳು ತರದ ಎಣ್ಣೆಗಳನ್ನು ಕಮ್ಮಿ ಬೆಲೆಗೆ ತೆಗೆದುಕೊಂಡು ಅನ್ಯಾಯವಾಗಿ ತಲೆಯ ಕೂದಲನ್ನು ಹಾಳುಮಾಡಿಕೊಳ್ಳಬೇಡಿರಿ.

ಕ್ರಯ ಸೀಸೆ 1ಕ್ಕೆ ರೂ 1—0—0

„ „ 3ಕ್ಕೆ „ 2—10—0

ವಿ ಪಿ ಚಾರ್ಜು ಅಲಾಯಿದ

N B ಕಾಮಿನಿಯಾ ಎಣ್ಣೆಯನ್ನು ತೆಗೆದುಕೊಳ್ಳುವಾಗ ಕಾಮಿನಿಯಾ (ರಿಜಿಸ್ಟರ್ಡ್) ಎನ್ನುವದನ್ನೇ ತೆಗೆದುಕೊಳ್ಳಿರಿ

ವಸಂತ, ಗ್ರೀಷ್ಮ, ವರ್ಷ, ಶರತ್ ಈ ನಾಲ್ಕು ಋತುಗಳಲ್ಲಿ ಯಾವಾಗಲೂ ನಿಮ್ಮ ಅಂತಃಕರಣಕ್ಕೆ ಆನಂದವನ್ನು ಕೊಟ್ಟು ಸುಪ್ರಸಿದ್ಧವಾದ ಸುವಾಸನೆಯಿಂದೊಡಗೂಡಿದ ಅನೇಕ ಪುಷ್ಪಗಳಿರುವ ತೋಟದಿಂದ ಈಗಲೇ ಹೊಸದಾಗಿ ತಂದ ಪುಷ್ಪಗಳ ಆನಂದವನ್ನು ಕೊಡುವ

ಆಟೋ ದಿಲ್ಬಹಾರ್.

ಇದು ಲೋಕದಲ್ಲಿ ಅದ್ವಿತೀಯವಾದ ಸುಗಂಧಗಳಲ್ಲಿ ಮೇಲಾದ ಸ್ಥಾನವನ್ನು ಹೊಂದಿರುತ್ತದೆ ಎಂದು ಎಲ್ಲರೂ ಉಪಯೋಗಿಸಿ ನೋಡಿ ಶ್ಲಾಘನೆ ಮಾಡಿರುತ್ತಾರೆ. ಇದನ್ನು ಉಡುಪುಗಳ ಮೇಲೆ ಚಿಮುಕಿಸಿಕೊಂಡರೆ ಯಾವ ವಿಧವಾದ ಚುಕ್ಕೆಯು ಕಾಣದೆ, ಸದಾ ಇರತಕ್ಕ ಪರಿಮಳ ಸುಗಂಧವನ್ನು ಕೊಡುತ್ತದೆ. ಒಂದು ಸಾರಿ ಉಪಯೋಗಿಸುವುದರಿಂದ ಇದರಲ್ಲಿ ನಂಬಿಕೆ ಹುಟ್ಟುತ್ತದೆ. ಇದನ್ನು ಕೊಂಡುಕೊಳ್ಳುವಾಗ ರಿಜಿಸ್ಟರಾಗಿರುವ "ಆಟೋ ದಿಲ್ಬಹಾರ್" ಡಬ್ಬಿಯನ್ನು ಪೇಕಿಂಗ್ ಒಡೆಯದಿರುವುದನ್ನೇ ನೋಡಿ ತೆಗೆದುಕೊಳ್ಳಿರಿ.

ಕ್ರಯ ಸಣ್ಣ ಸೀಸೆ 1ಕ್ಕೆ 0—8—0.

„ ಮಿಡಿಯಂ „ „ 0—12—0.

„ ½ ಔನ್ಸಿನ „ „ 2—0—0.

ಆಟೋ ದಿಲ್ಬಹಾರ್ ಕಾರ್ಡು 1ರ ಬೆಲೆ 0—1—0.

ಪೋಸ್ಟೇಜು ಅಲಾಯಿದ

ಯಾವಾಗಲೂ ಕುಟುಂಬದಲ್ಲಿ ಅವಶ್ಯವಾಗಿರತಕ್ಕ ಔಷಧವು.

ಆಡ್‌ಮನ್ಸ್ ಸ್ಪೈಸ್ ಸಾಲ್ವ್.

ವಾಯುವಿನಿಂದ ಶರೀರದ ಯಾವ ಭಾಗಕ್ಕೆ ಉಂಟಾಗುವ ನೋವು, ನಾವು ಶ್ವಾಸ ಬಿಡುವಾಗಲೂ ಮತ್ತು ತೆಗೆದುಕೊಳ್ಳುವಾಗಲೂ ಉಂಟಾಗುವ ಎದೆನೋವು, ವಾಯುವಿನಿಂದ ಕೀಲುಗಳಲ್ಲಿ ಉಂಟಾಗುವ ಸೆಡುವಿನ ನೋವು, ತಲಶೂಲೆ ಮತ್ತು ಕೈಕಾಲು ನೋವು, ಇವುಗಳೆಲ್ಲವೂ ಈ ಮುಲಾಮನ್ನು ಹಚ್ಚುವುದರಿಂದ ಶುದ್ಧಾಂಗವಾಗಿ ನಿವೃತ್ತಿಯಾಗುತ್ತದೆ. ಒಂದು ಸಲ ಉಪಯೋಗಿಸಿ ನೋಡಿರಿ. ಇತರ ಮುಲಾಮುಗಳನ್ನು ಉಪಯೋಗಿಸದೆ ಇದನ್ನೇ ಉಪಯೋಗಿಸುವುದರಿಂದ ನಿಮಗೆ ಹೆಚ್ಚಾದ ಲಾಭ ಉಂಟು. ಕ್ರಯ ಬಾಟ್ಲಿ ಒಂದರ ರೂ 1—0—0 ಟಪ್ಪಾಲು ಖರ್ಚು 4 ಆಣೆ

ಆಡ್‌ಮನ್ಸ್ ಮಲೇರಿಯಸ್ ಪಿಲ್ಸ್.

ಶೀತಜ್ವರ, ಚಳಿಜ್ವರ, ನೋವುಜ್ವರ ಮತ್ತು ಸಾಧಾರಣ ಜ್ವರ ಇವುಗಳಿಗೆ ಆಡ್‌ಮನ್ಸ್ ಮಲೇರಿಯಸ್ ಮಾತ್ರೆಗಳು ಬಹು ಆಶ್ಚರ್ಯಕರವಾದ ಗುಣಗಳನ್ನು ಕೊಡುತ್ತವೆ. 30 ಮಾತ್ರೆಗಳ ಡಬ್ಬಿ 1ರ ಬೆಲೆ ರೂ 1—0—0 ಟ. ಖ ಅಲಾಯಿದ.

THE ANGLO INDIAN DRUG & CHEMICAL COMPANY, 16 MARKET : BOMBAY 2.

ಪ್ರಧಾನ ಏಜಂಟರು: **ದಿ ಊಲನ್ ಮಾರ್ಟ್, ಮಂಗಳೂರು ದ. ಕನಡಾ**

Printed & Published by V. S. Kamath at the Mangalore Trading Association's Sharada Press, Mangalore

Registered No. M. 498.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ — ವರ್ಷ ಒಂದಕ್ಕೆ ರೂ. 1—4—0. ಟಪ್ಪಾಲು ಹಾಸಲು ಸೇರಿ ರೂ 2—1—0

ಪುಸ್ತಕ IX | ಮಂಗಳೂರು ತಾ 24ನೇ ಸಪ್ಟಂಬರ ಶುಕ್ರವಾರ 1915. | ಸಂಚಿಕೆ 39

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತಾನ್.

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು ಈ ಸೆಶಿಂತಾನದ ಸೇವನೆಯಿಂದುಟಾಗತಕ್ಕ ಗುಣಗಳಲ್ಲಿ ಕೆಲವನು ಮಾತ್ರ ಇಲ್ಲಿ ಕೊಟ್ಟಿದೆ

1 ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯನೋವು ತಲೆತಿರುಗುವದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು

2 ರೋಗಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು ಮತ್ತು ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹೋಪಕಾರವಾಗಿರುವುದು

3. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತ ಬಂದಲ್ಲಿ ತಿಂದದ್ದನ್ನು ಜೀರ್ಣವಾಗುವದಲ್ಲದೆ, ಕಾಲಪ್ರವೃತ್ತಿಯು ಕ್ರಮವಾಗಿ ಆಗುತ್ತದೆ ಯಾವರೋಗಕ್ಕೂ ಅವಕಾಶವುಂಟಾಗುವುದಿಲ್ಲವು

4 ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು

5. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ ಎಲ್ಲ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವವು

6. ಬೇಸಿಗೆ ಮತ್ತು ಚಳಿಗಾಲಗಳಲ್ಲಿ ಎಲ್ಲಾ ತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು

7 ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು

ಆದುಕಾರಣ ಇಂತಹ ಗುಣಕಾರಿಯಾದ ಸೆಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ

45 ಮಾತ್ರೆಗಳ ಪೊಟ್ಟಣ 1ಕ್ಕೆ 0—2—0	210 ಮಾತ್ರೆಗಳ ಪೊಟ್ಟಣ 1ಕ್ಕೆ 0—7—0	80 ಮಾತ್ರೆಗಳ ಟಿನ್ 1ಕ್ಕೆ 0—4—0	550 ಮಾತ್ರೆಗಳ ಮಂದಪೆಟ್ಟಿಗೆ 1ಕ್ಕೆ 1—0—0
95 ,, ,, , 0—4—0	200 , ಟಿನ್ ,, 0—9—0	100 ,, ಶೀಶೆ ,, 0—4—6	1200 ,, ,, , 2—0—0

1 ರೂಪಾಯಿಗೆ ಕಡಿಮೆಯಾಗಿ ವಿ ಪಿ ಮೂಲಕ ಕಳುಹಿಸಲ್ಪಡುವುದಿಲ್ಲವು ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು

☞ ಹಿಂದುಸ್ಥಾನ, ಬರ್ಮ, ಮತ್ತು ಸಿಲೋನ್ ಈ ಪ್ರಾಂತ್ಯಗಳ ಎಲ್ಲಾ ಭಾಗದಲ್ಲೂ ಏಜಂಟರು ಬೇಕಾಗಿದೆ

ದಕ್ಷಿಣ ಕನ್ನಡ ಜಿಲ್ಲೆಯ ಏಜಂಟರು — ದಿ ಊಲನ್ ಮಾರ್ಟ್, ಮಂಗಳೂರು

ಸೋಲ್ ಏಜಂಟ್ಸ್ — ಸೆಶಿಂತಾನ್ ಡಿಪೋ,
ಪ್ರಿನ್ಸೆಸ್ ಸ್ಟ್ರೀಟ್ ಬೊಂಬಾಯಿ ನಂ 2.

TOM VICTOR & COS
BUSINESS
Shorthand and Typewriting Institution.

Instruction given in Commercial Subjects, French, Shorthand and Typewriting from "Oct. 10th to Jan 10th, Jan 15th to April 15; June 15th to Sept. 1cth"

N. B. JOB-WORK and Typewriter Repairs undertaken at very, ates,

MILAGRES. Mangalore.

ವಿನಾಮೂಲ್ಯ! ವಿನಾಮೂಲ್ಯ!! ವಿನಾಮೂಲ್ಯ!!!

ಆರ್ಯಚಿಕಿತ್ಸಾರಹಸ್ಯ

ದೇಶೀಯ ಚಿಕಿತ್ಸೆಯನ್ನು ನಮ್ಮ ಜನಸಮುದಾಯದಲ್ಲಿ ಹ್ಯಾಗೆ ರೂಢಿಗೆ ತರಬೇಕೆಂಬುವದು ಈ ಗ್ರಂಥದಿಂದ ಸಮ್ಯಕ್ ವ್ಯಕ್ತವಾಗುವದು ಕನ್ನಡ ನುಡಿಯ ಒಡನಾಟವಿರುವವರೆಲ್ಲರಿಗೂ ತಿಳಿಯುವಂತೆ ಈ ಗ್ರಂಥವು ಬರೆಯಲ್ಪಟ್ಟಿದೆ

ಆರ್ಯಮಹಾಶಯರೇ, ಆರ್ಯಚಿಕಿತ್ಸೆಯಲ್ಲಿ ಪೂರ್ಣ ಗೌರವ ಮತ್ತು ಅಭಿಮಾನವನ್ನು ತೋರಿಸಿ ತಮ್ಮ ಆಯುಃಪ್ರಮಾಣದಲ್ಲಿ ಕಾಲುಘಂಟೆ ಸಮಯವನ್ನು ದೇಶಸೇವೆಗೋಸ್ಕರ ಕಳೆಯಿರಿ

ಈ ಪುಸ್ತಕ ಬೇಕೆಂದಿರುವವರು ತಮ್ಮ ಪೂರ್ಣ ಎಡ್ರೆಸನ್ನು ಅರ್ಧಾಣೆ ಸ್ಟಾಂಪಿನೊಂದಿಗೆ ಈ ಕೆಳಗಣ ವಿಳಾಸಕ್ಕೆ ಕಳುಹಿಸಿಕೊಟ್ಟರೆ ಈ ಪುಸ್ತಕವು ದೊರಿಯುವದು.

ಎಂ. ವಿ. ಶಾಸ್ತ್ರೀ,
ಆಯುರ್ವೇದಾಗ್ರ ಭೂಷಣ,
ಮಂಗಳೂರು.

ರಮಾಮಾಧವ.

ಮದ್ರಾಸು ಗವರ್ನಮೆಂಟ್ ಕನ್ನಡ ಟ್ರಾನ್ಸ್‌ಲೇಟರ್ ಮ ರಾ ಬಿ ರಾಮರಾವ್ ಎಂ.ಎ.,ಎಲ್.ಎಲ್.ಬಿ. ಇವರಿಂದ

ಈ ಕಾದಂಬರಿಯ ಕಥಾನಕವು ಬಹು ಹೃದಯಂಗಮವಾದದ್ದಾಗಿಯೂ, ಸ್ತ್ರೀಪುರುಷರೂ ಬಾಲ್ಯ ವಯಸ್ಸಿನವರೂ ಓದುವುದಕ್ಕೆ ತಕ್ಕುದಾಗಿಯೂ ಇದ್ದು, ಸಂಸಾರಿಕರು ಸುಖಿಗಳಾಗಿ ಬಾಳುವ ಮಾರ್ಗವನ್ನು ಅತ್ಯುತ್ತಮವಾಗಿ ತಿಳಿಸುತ್ತಲಿದೆ.

ಬೆಲೆ ಪ್ರತಿಯೊಂದಕ್ಕೆ 6 ಆಣೆ. ಅಂಚೆಯ ಹಾಸಲು ಬೇರೆ.

ವಿಳಾಸ:— ಮ್ಯಾನೇಜರು,
ಶಾರದಾ ಪ್ರೆಸ್, ಮಂಗಳೂರು, ದ. ಕ.

ನೇಟಿವ್ ಡಾಕ್ಟರ್ಸ್ ಮೂಲ್ಕಿ ಗಣಪಯ್ಯ ಎಂಡ್ ಸನ್ಸ್‌ರವರ

ಔಷಧಗಳು.

ಮಹಾಮದನ ಕಾಮೇಶ್ವರೀ ಲೇಹ್ಯ:— ಬಹಳ ಶ್ರಮ ಪಟ್ಟು ಕೆಲಸ ಮಾಡುವವರೂ, ಲೇಖಕರೂ, ಮತ್ತು ಇಂದ್ರಿಯ ದೌರ್ಬಲ್ಯ ಅಜೀರ್ಣ ಎದೆನೋವು, ಶರೀರಗಳ ಘಳಿತದಿಂದಾದ ನಿಶ್ಶಕ್ತಿ ಮೊದಲಾದ ಪ್ರಕೃತಿಯವರೂ ಇದನ್ನು ಸೇವಿಸಿ ವೃದ್ಧಿ ಧಾತುಪುಷ್ಟಿಯಾಗಿ ಮುಖವು ಕಾಂತಿಯೂ ... ಸೇವನಾ ಕ್ರಮ — ಅಭ್ಯಾಸವುಳ್ಳವರು 1 ವಾವಟಿ ತೂಕ ... 2 ... ತೂಕ ರಾತ್ರಿ ಊಟದ ಮೇಲೆ ಸೇವಿಸಿ ...

1 ಶೇರಿನ ಡಬಿಗೆ ಕ್ರಯ 2—0—0

ಚಂದ್ರೋದಯಮಾತ್ರೆ.— ಕಣ್ಣಿಗೆ ... ಮಾಡಿದ್ದಲ್ಲಿ ಬೆಳಪ ದು ... ತಿಮಿರ, ... ಹೂವು ಇರು... ಕಡಿಮೆಯಾಗಿ ಗುಣ

ಕ್ರಯ ರೂ 0—12—0

ಮಹಾಜ್ವರಾಂಕುಶ — ದಿವಸಕ್ಕೊಮ್ಮೆ ದ್ವಿತೀಯ, ತೃತೀಯ ... ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ ಡಜನ್ ಕ್ರಯ 0—...—0,

ಮೋಹಮುದ್ಗರವಟಿ — 20 ನಮೂನೆಯ ಪ್ರಮೇಹ, ಧಾತು ಗತಜ್ವರ ಮೂತ್ರಕೃಚ್ಛ್ರ, ಅಶ್ಮರಿ, ಕಾಮಾಲೆ, ... ಡಜನ್ 1ರ ಕ್ರಯ 1—2—0

ಕೊಲೆರಾ ಯಾನೆ ವಾಂತಿಭೇದಿ ಗುಟಿಕೆ.— ಒಂದೆರಡು ಗುಟಿಕೆಯಿಂದ ವಾಂತಿಭೇದಿ ... ಗುಣ ಡಜನ್ ಗುಟಿಕೆಯ ಕ್ರಯ 0—12—0

ಚಂದನಾಸವ.— ಮೇಹ, ಶುಕ್ಲದಾತು ... ಗುಣ ಬಾಟ್ಲಿಗೆ ರೂ 1

ನಮ್ಮ ಔಷಧಾಲಯದಲ್ಲಿ ಅನೇಕ ವಿಧದ ... ಔಷಧಗಳು ದೊರೆಯುತ್ತವೆ ... ಕ್ರಯವು ಕಡಿಮೆ ...

ವಿಳಾಸ — ಮೂಲ್ಕಿ ಗಣಪಯ್ಯ ಎಂಡ್ ಸನ್ಸ್,

ನೇಟಿವ್ ಡಾಕ್ಟರ್ಸ್,

ತೇರಬೀದಿ ಮನೆ ನಂಬ್ರ 2...ನೇ ಮಂಗಳೂರು

ಉತ್ತಮ ಹೊಸ ನಾವೆಲ್ (ಕಥೆ)ಗಳು.

ಆರಿಸಿ ಅಚ್ಚಿಸಿ ತೆಗೆದಿರುವ ಹೊಸ ಪುಸ್ತಕಗಳೇ.

		ರೂ ಆ ಪೈ			ರೂ ಆ ಪೈ
೧	ಕಲಿಯುಗ	೦—೫—೦	೧೦	ಅದ್ಭುತ ರಾಮಾಯಣ	೦—೬—೦
೨	ಸುಭದ್ರೆ	೦—೫—೦	೧೧	ಚಮತ್ಕಾರ ...	೦ ೧೦—೦
೩	ಚಂದ್ರಕಳಾ	೦—೬—೦	೧೨	ನವೀನ ಭರತಖಂಡ	೦—೫—೦
೪	ಶಕಸಪ್ತತಿ	೧—೮—೦	೧೩	ವಚನ ಶಿವಪುರಾಣ	೨—೦—೦
೫	ಕಲಾನಾಥ	೦—೪—೦	೧೪	ವಚನ ದೇವೀಭಾಗವತ	೨—೦—೦
೬	ಸನ್ಮತಿ	೦—೬—೦	೧೫	ಉತ್ತರ ರಾಮಾಯಣ ಕಥಾ	೦—೫—೦
೭	ಶಕ್ತಿ	೦ ೧೨—೦	೧೬	... ಚರಿತ್ರೆ	೦ ೧೦—೦
೮	ಮಾಧವೀಕಂಕಣ	೧—೮—...	೧೭	... ತಂತ್ರ	೦—೪—೦
೯	ಬೆಕ್ಕೊಂ...	೦—೪—	೧...	... ಕಥೆ	೦—೨—೦

ವಿದ್ಯಾನಂದ ಮಾಸಪತ್ರಿಕೆ ವಾರ್ಷಿಕ ... ರೂ ...—೦

ಸಂಸ್ಕೃತ ... ಗ್ರಂಥಗಳು ಯಾವಾಗಲೂ ದೊರೆಯುವವು

☞ ಸ್ಕೂಲ್ ಪುಸ್ತಕಗಳೂ ದೊರೆಯುತವೆ

(ಕ್ಯಾಟಲಾಗ್ ... ಪತ್ರಿಕೆ ಉಚಿತ)

ಬಾಣವಾಡಿ ಆದಿನಾರಾಯಣಶಾಸ್ತ್ರಿ,

ವಿದ್ಯಾನಂದ ಆಫೀಸ್,

ಶಂಕರಪುರ, ಬೆಂಗಳೂರು ಸಿಟಿ

ಹುಳಬಿದ್ದ ಹುಣ್ಣುಗಳು

ಹುಳುಬಿದ್ದ ಕಾಡಿಪಟ್ಟ ಮೊಗೇರ ಕೀವು ಹೊಂಗಸು ಬರಿಯುವದು —ನನಗೆ ಸುಮಾರು ಆರು ವರ್ಷಗಳಿಂದ ಎರಡು ಕಾಲುಗಳಲ್ಲಿ ಬೊಕ್ಕೆಗಳು ಹುಟ್ಟಿ ಅದರಲ್ಲಿ ಕೀವು ಸುರಿಯುತ್ತ ಕೆಲವು ಸಣ್ಣ ಛಿದ್ರಗಳುಂಟಾಗಿ ಆ ಛಿದ್ರದಲ್ಲಿ ಹುಳಗಳು ತುಳುಕುತ್ತಿತ್ತಲ್ಲದೆ ಸವರಿ ವ್ರಣಗಳು ಕರಗಿ ಅರ್ಧಾಣೆ ಗಾತ್ರವಾಗಿತ್ತು. ಇದರಿಂದ ನಡೆಯಲಾರದೆ ಕಾಲಿಗೆ ವಸ್ತ್ರ ಕಟ್ಟಿ ಮಲಗಿದ್ದಲ್ಲಿಯೇ ಇದ್ದನು ದೈವವಶಾತ್ ತಮ್ಮ ಸಬ್ ಏಜಂಟರ ಭೇಟಿಯಾಗಿ ಪರೀಕ್ಷಾರ್ಥವಾಗಿ ಎರಡು ಸೀಸೆ ತಮ್ಮ ಯುಕಲಿಪ್ಟಸ್ ತೈಲವನ್ನು ಕೊಂಡುಕೊಂಡು ಹೊಟ್ಟೆಗೂ ತಕ್ಕೊಂಡ ಹುಣ್ಣಿಗೂ ಹಚ್ಚಿದೆ ಎರಡು ಸೀಸೆ ಮುಗಿಯುವಷ್ಟರಲ್ಲಿ ನನ್ನ ಹುಣ್ಣುಗಳ ಒಣಗಿ ನಡೆಯಲು ಅನುಕೂಲವಾಗಿಯದೆ ಎಂಬದನ್ನು ತಿಳಿಸಲು ಸಂತೋಷಪಡುತ್ತೇನೆ

ಒಂದೇ ಸಲ ಕೊಡುವದರಲ್ಲಿ ಗುಣ'

ರಾ। ವೆಂಕಟಕೃಷ್ಣ ಆಚಾರಿ, ಶಂಕರನಾರಾಯಣ —ನಿಮ್ಮಲ್ಲಿಯ ... ಯುಕಲಿಪ್ಟಸ್ ತೈಲವನ್ನು ಕೆಲವು ಕಾಲದಿಂದ ಕಠಿಣ ಹೊಟ್ಟೆನೋವಿನಿಂದ ನರಳುತ್ತಿದ್ದ ನನ್ನ ತಾಯಿಗೆ ಒಂದು ಸಲ ಕೊಡುವಷ್ಟರಲ್ಲಿ ಗುಣ ಉಂಟಾದಕಾರಣ ಮನಸ್ಸಿಗೆ ಭಾರಿ ಖುಷಿಯಾಗಿದೆ ಅರ್ಧ ಡಜನ್ ಸೀಸೆ ವಿ ಪಿ ಮಾಡಿ ಕಳುಹಿಸಿರಿ.

ಇದು ಸಂಜೀವಿನಿಯೇ ಸರಿ''

ಮ। ಶಾ। ತುಕ್ರಪ್ಪ, ಟಿ ಎವರ್ಾಳಕಾರ್ ಮುಂಬೈ —ಕೆಲವು ಸಮಯದಿಂದ ಕೆಮ್ಮು ಉಬ್ಬಸದಿಂದ ಪೇಚಾಡುತ್ತಿದ್ದ ಹುಡುಗಿಯೊಬ್ಬಳಿಗೂ ಹಲವು ಕಾಲದಿಂದ ಹೊಟ್ಟೆನೋವಿನಿಂದ ನರಳುತ್ತಿದ್ದ ಮುದುಕಿಯೊಬ್ಬಳಿಗೂ ನಿಮ್ಮಲ್ಲಿ ದೊರೆಯುತಕ್ಕ ಯುಕಲಿಪ್ಟಸ್ ತೈಲವನ್ನು ನನ್ನ ಸ್ನೇಹಿತರಾದ ವೈ ಕೊರಗಪ್ಪನವರಿಂದ ಪಡಕೊಂಡು ಕೊಟ್ಟಲ್ಲಿ ಇಬ್ಬರೂ ಗುಣಹೊಂದಿರುತ್ತಾರೆ ಕೆಮ್ಮು ಉಬ್ಬಸ, ಹೊಟ್ಟೆನೋವು, ಸರ್ವ ತರದ ವಾಯು ರೋಗಗಳಿಗೆ ಇದು ಸಂಜೀವಿನಿಯಂತೆ ಇದೆ ಆದುದರಿಂದ 2 ಡಜನ್ ವಿ ಪಿ ಮಾಡಿ ಕಳುಹಿಸಿರಿ ಔನ್ಸ್ ಸೀಸೆ 1ಕ್ಕೆ 0—5—0 ಡಜನ್ ಸೀಸೆಗಳಿಗೆ ವಿ ಪಿ ಸಹಿತ ರೂ 3—12—0 ... ಪಾನ ಪತ್ರಿಕೆ ಸೀಸೆಯೊಂದಿಗೆ.

☞ ನಮ್ಮಲ್ಲಿ ಹೋಮಿಯೋಪತಿ ಮತ್ತು ಟಿಸ್ಯೂ ರೆಮಿಡಿಸ್ ಎಂಬ ಔಷಧಿಗಳು ದೊರೆಯುತ್ತವೆ

ವಿಳಾಸ — ಏಜಂಟರು —

ಇಕ್ಲಿಪ್ಸ್ ಏಜನ್ಸಿ, ಮಂಗಳೂರು | ಸುಗಂಧವಿಲಾಸ, ರಥಬೀದಿ, ಮಂಗಳೂರು.

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು



ಬಲ್ಮಠ ಮಿಶ್ಯನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಶೋಪಿನ ಕೊಡಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಬ್ಲ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ... ಸೀರೆಗಳೂ, ಧೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಸೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ— ಜೆ. ಎಸ್. ಸೋಜ ಎಂಡ್ ಕಂಪೆನ್ನಿ, ಹಂಪನ್‌ಕಟ್ಟಾ, ಮಂಗಳೂರು.

ಅಮೃತಾಂಜನ.

ಜಗತ್ಪ್ರಸಿದ್ಧವಾದ ಬೇನೆಹಾರಿ ಮುಲಾಮು

ಇದರ ಉಪಯೋಗದಿಂದ —ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಉಳುಕು, ಎದೆ ನೋವು, ಸೊಂಟದ ನೋವು, ಶೀತ್ರ ಕೆಮ್ಮು, ದಂತಶೂಲೆ, ಮೂಲವ್ಯಾಧಿ, ಚೇಳು ಕಡಿತ, ಆನೆಗಾಲು, ಸುಟ್ಟ ಘಾಯ, ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷದವಾಗಿ ರುತ್ತದೆ ಸಾವಿರಾರು ಡಾಕ್ಟರರೂ, ಇದಕ್ಕೆ ಸರ್ಟಿಪಿಕೇಟುಗಳನ್ನು ಕೊಟ್ಟಿದ್ದಾರೆ. ಪ್ರತಿ ತಿಂಗಳಲ್ಲೂ 25,000 ಬಾಟ್ಲಿಗಳು ಮಾರಲ್ಪಡುತ್ತವೆ ಬಾಟ್ಲಿ ಒಂದರ ಕಿಮ್ಮತು ಆಣೆ 8. ಡಜನ್ 1ಕ್ಕೆ ರೂ 5—4—0 ವಿ. ಪಿ. ಖರ್ಚು ಪ್ರತ್ಯೇಕ

ಎಚ್ಚರಿಕೆ:—ಅಮೃತಾಂಜನವನ್ನು ಪಡಕೊಳ್ಳುವಾಗ ಸುಂದರವಾದ ಮತ್ತು ಹಲವು ಭಾವೆಗಳುಳ್ಳ ಕರಡಿಗೆ ಸಮೇತ ಪಡಕೊಳ್ಳಿರಿ

ಗಜಕರ್ಣದ ಮುಲಾಮು.

ಮೂರು ಸರ್ತಿ ತಾಗಿಸುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು. ಇದರಿಂದ ಉರಿಯು ಬರುವದಿಲ್ಲ. ಚರ್ಮವು ಕಪ್ಪಾಗುವದಿಲ್ಲ. ಇದುವರೆಗೆ ಒಂದು ಮಿಲಿಯ ಡಬ್ಬಿಗಳು ಮಾರಲ್ಪಟ್ಟವು. ರಾಜಾರಾಣಿ ಟ್ರೇಡ್ ಮಾರ್ಕ 0—6—0. 12 ಡಬ್ಬಿಗಳಿಗೆ 3—8—0. ವಿ. ಪಿ. ಪ್ರತ್ಯೇಕ.

ದಂತಮಂಜನ.

ರಾಜಾರಾಣಿ ಟ್ರೇಡ್ ಮಾರ್ಕ

ಈ ಮಂಜನದಿಂದ ಹಲ್ಲುಗಳನ್ನು ದಿನಾಗಲೂ ತಿಕ್ಕುವದರಿಂದ ಹಲ್ಲುನೋವು, ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ವಾಸನೆ, ಮುಂತಾದವುಗಳೆಲ್ಲಾ ನಿಲ್ಲುತ್ತವೆ. ಇದರಲ್ಲಿ ಹಲವು ನಮೂನೆಯ ಔಷಧಗಳಿವೆ. ಒರೀ ಚೋಕಿನ ಹುಡಿ ಅಲ್ಲ. ಡಬ್ಬಿ 1ಕ್ಕೆ 0—2—0. ವಿ. ಪಿ. ಪ್ರತ್ಯೇಕ.

ಮೋಹಿನಿ ತೈಲ

ಈಗ ಹಲವು ನಮೂನೆಯ ತೈಲಗಳು ಉಪಯೋಗಿಸಿದವರು ಈ ನಮ್ಮ ಸುಗಂಧಮಯವಾದ ಮೋಹಿನಿ ತೈಲವನ್ನು ಒಂದು ಸಾರಿ ಉಪಯೋಗಿಸಿ ನೋಡಿರಿ. ಇದರಲ್ಲಿ ಕ್ರೂಡ್ ಒಯಿಲ್ ಇಲ್ಲಾ: ಇದು ಗಿಡಮೂಲಿಕೆಗಳಿಂದಲೂ ಒದಾಮಿನ ಎಣ್ಣೆಯಿಂದಲೂ ತಯಾರಿಸಲ್ಪಟ್ಟಿದೆ. ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ ಬೆಳೆಯುವವು.

ಬಾಟ್ಲಿ ಒಂದರ ಕಿಮ್ಮತು ಆಣೆ 0—12—0.

ಸುಂದರಿ ಮುಲಾಮು.

ಮುದ್ದಣಗಳನ್ನು ನಾಶಪಡಿಸಿ ಮುಖವನ್ನು ಸುಂದರಗೊಳಿಸುವದು. ಡಬ್ಬಿ 1ಕ್ಕೆ ರೂ 0—8—0

ವಜ್ರಗುಟಿಕ.

ಧಾತುಪುಷ್ಟಿ, ಧಾತುವೃದ್ಧಿ, ಶಕ್ತಿವರ್ಧಕ 20 ಗುಳಿಗೆಗಳ ಡಬ್ಬಿ ಒಂದರ ರೂ. 1—0—0.

ಕೆ. ನಟರಾಜನ್ ಎಡಿಟರ್, ಇಂಡಿಯನ್ ಸೊಸಿಯಲ್ ರಿಫ್ರೊರ್ಮರ್:—ಅಮೃತಾಂಜನ ಎಲ್ಲಾ ಔಷಧಗಳಿಗಿಂತಲೂ ಒಹಳ ಉತ್ತಮವಾದ ಔಷಧ.

ಡಬ್ಲ್ಯು ಮೆಕ್ಸ್‌ವೆಲ್, ವೈನಾಡ:—ಅಮೃತಾಂಜನದಿಂದ ಎಂಥಾ ಕಠಿಣವಾದ ವಾತ ನೋವಾದರೂ ನಿಲ್ಲುತ್ತದೆ.

ಆರ್. ಆರ್. ಗಂಗೋಲಿ:—ಅಮೃತಾಂಜನ ವಾತ, ತಲೆನೋವುಗಳ ಮೇಲೆ ದಿವ್ಯ ಔಷಧ.

ಡಾಕ್ಟರ್ ಡಾಂಡೆಕರ್, ಎಲ್. ಎಮ್. ಎಂಡ್ ಎಸ್:—ಅಮೃತಾಂಜನ ಎಲ್ಲಾ ನೋವುಗಳ ಮೇಲೆ ದಿವ್ಯ ಔಷಧ.

ನಮ್ಮ ಔಷಧಗಳನ್ನು ಪಡಕೊಳ್ಳುವಾಗ ಅಮೃತಾಂಜನ ಡಿಪೊ, ಮುಂಬಯಿ ಎಂಬ ಹೆಸರನ್ನು ಓದಿನೋಡಿ ಪಡಕೊಳ್ಳಿರಿ.

ಅಮೃತಾಂಜನ ರಖಮಾಗಿಯೂ, ಚಿಲ್ಲರೆಯಾಗಿಯೂ ಬೇಕಾದವರು ನಮ್ಮ ಮುಂಬಯಿ ಆಫೀಸಿಗೆನೇ ಬರಿಯಬೇಕು. ಮದ್ರಾಸು ಆಫೀಸಿನವರು ರಖಮಾಗಿ ಅಮೃತಾಂಜನ ರವಾನಿಸಿ ಕೊಡುವ ಏರ್ಪಾಡು ಮಾಡಲಿಲ್ಲ.

ಮಂಗಳೂರಲ್ಲಿ—ಎಲ್ಲಾ ಔಷಧಗಳು ಈ ಕೆಳಗಿನ ಕಂಪೆನಿಗಳಲ್ಲಿ ಶಿಕ್ಕುವವು.

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್, ಪರ್ಲ್ ಎಂಡ್ ಸನ್ಸ್, ದಿ ಊಲನ್ ಮಾರ್ಟ್, ಕೊಟ್ಟಿಕಾರ ಬ್ರದರ್ಸ್ ಉಡ್ಪಿ

ಅಮೃತಾಂಜನ ಡಿಪೊ,

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ ಟೌನ್, ಮದ್ರಾಸು.

109 ಫ್ರೇಯರ್ ರೋಡ, ಮುಂಬಯಿ

ESTABLISHED JULY 1906.

THE CANARA BANK, LIMITED., MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0
Issued Capital	225,000—0—0
Subscribed Capital	219,100—0—0
Paid up Capital	194,100—0—0
Deposits	381,920—5—0
Reserve Fund	33,500—0—0

Besides the uncalled capital of Rs. 25,000/- 25% of the net profits are added annually to the Reserve Fund. Rs. 28,485/ have been invested in Government Paper of the face value of Rs 29,300/-

Dividends of not less than 6% paid during the past years and a bonus of 1% to 2% paid in addition during the last three years.

Fixed Deposits of Rs. 50/-and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee

Short-notice Deposits requiring one weeks notice of withdrawal after one month received @ 2½% per annum at the discretion of the managing committee

Current Deposit Account opened free of charge.

Savings Bank Account opened for any sum not less than 4 As and multiples thereof and interest paid @ 4½%.

Loans granted on proper securities and pledges.

Sealed Parcels for safe custody received on a moderate charge

Canara Bank Ltd.,
Mangalore, 1st September 1915.

ನಿಯಮಿತ ಮೂಲ ಧನವು ರೂಪಾಯಿ	300,000—0—0
ಹುಟ್ಟಿಸಿದ ಮೂಲ ಧನವು „	225,000—0—0
ಪ್ರತಿಜ್ಞಾತ ಮೂಲ ಧನವು „	219,100—0—0
ಆಗತ ಮೂಲ ಧನವು „	194,100—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು ...	381,920—0—0
ರಕ್ಷಿತ ಧನವು	33,500—0—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಿಸೆ ಮೌಲ್ಯಗಳಿಂದ ... ಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 28,485—0—0 ಸರಕಾರದ ರೂ. 29,300ರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಡಿಮೆಯಾಗದಂತೆ ಲಾಭವು ಪಾಲು ...ಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು

"ಕರೆಂಟ್ ಎಕೌಂಟ್" ಎಂಬ ಚಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲಕ್ಕಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿಇಡೋಣಾದೀತು. ಆ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು.

ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ

ಮೊಹರು ಹಾಕಲ್ಪಟ್ಟ ತಪ್ಪಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

P. Gopal Naik,
Secretary.

ಅತ್ತರು ಮತ್ತು ಸುರಭಿಗಳಲ್ಲಿ ಮಕುಟವರ್ಧನದಂತಿರುವ

ಒಟ್ಟೊ ಮೋಹಿನಿ

(ರಿಜಿಸ್ಟರ್ಡ್.)

ಅನೇಕ ವಸ್ತುಪ್ರದರ್ಶನಗಳಲ್ಲಿ ಪ್ರದರ್ಶಿಸಲ್ಪಟ್ಟು ಕಡೆಗೆ ಅದರ ರಮ್ಯವಾದ ಅತ್ಯಂತ ಶಾಶ್ವತವಾದ ಪರಿಮಳಕ್ಕಾಗಿ ಚಿನ್ನ ಬೆಳ್ಳಿಯ ಪದಕಗಳನ್ನು ಪಡೆದಿದೆ. ಒಂದು ವಸ್ತ್ರದಲ್ಲಿ ನಾಲ್ಕು ತಟಕುಗಳನ್ನು ತಾಗಿಸುವುದರಿಂದ ಹಿಡಿ ತುಂಬಾ ಮಲ್ಲಿಗೆ ಹೂ ಇಟ್ಟ ಪರಿಮಳವುಂಟಾಗುವುದು. ಈ ಹೂಗಳು ಕೃತಕವಾದವುಗಳಾದರೂ ಸ್ವಭಾವಿಕ ಹೂವಿನಂತೆ ಪ್ರತಿ ಸಾಯಂಕಾಲ ಬಾಡಿಹೋಗದು. ಆದರೆ ತನ್ನ ಪರಿಮಳವನ್ನು 4 ದಿವಸಗಳಿಗಿಂತಲೂ ಹೆಚ್ಚಿಗೆ ಕೊಡುತ್ತಿರುವದು. ಆದುದರಿಂದ ಒಟ್ಟೊ ಮೋಹಿನಿಯು ಶಾಶ್ವತವಾದ ಸುರಭಿಯೆಂದು ಕರೆಯಲ್ಪಟ್ಟು ಈ ಕಾಲಕ್ಕೆ ತಕ್ಕುದಾದ ಬಹುಮಾನವಾಗಿ ಕೊಡತಕ್ಕ ದ್ರವ್ಯವಾಗಿದೆ. ಇದರ ಪರಿಮಳವು ಶಾಶ್ವತವಲ್ಲವೆಂದು ದೃಢಮಾಡಿಕೊಡುವವರಿಗೆ 100 ರೂಪಾಯಿ ಬಹುಮಾನ ಕೊಡಲಾಗುವದು. ಆದುದರಿಂದ ಯಾಕೆ ಈ ಬಹುಮಾನವನ್ನು ಪಡೆಯಲು ಪ್ರಯತ್ನಿಸಲಾಗದು?

ಕ್ರಯ ಅರ್ಧ ಔನ್ಸ್ ಸೀಸೆಗೆ 2-0-0. 1 ಡ್ರಾಮ್ ಸೀಸೆಗೆ 0-12-0. ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0-12-0

Proprietors:—The Oriental Drug & Chemical Co.
Sole Agents—MOHINI AGENCY,
3 Fida Building, Jumma Musjid, BOMBAY.
Agents:—**Bhagavandas Choonilal & Co.,**
177 China Bazar Road, MADRAS.

ಪ್ರೊಪ್ರೈಟರರು:—ಓರಿಯಂಟಲ್ ಡ್ರಗ್ ಎಂಡ್ ಕೆಮಿಕಲ್ ಕಂಪೆನಿ
ಪ್ರಾಮುಖ್ಯ ಏಜಂಟರು:—ಮೋಹಿನಿ ಏಜನ್ಸಿ,
3 ಫಿಡಾ ಬಿಲ್ಡಿಂಗ್, ಜುಮ್ಮಾ ಮಸೀದ್, ಬೊಂಬಾಯಿ.
ಏಜಂಟರು:—ಭಗವಾನ್‌ದಾಸ್ ಚೂನಿಲಾಲ್ ಎಂಡ್ ಕೋ.
177 ಚೀನಾ ಬಜಾರ ರಸ್ತೆ, ಮದ್ರಾಸು.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 24ನೇ ಸಪ್ಟಂಬರ 1915

ಮಂಗಳೂರು ಪಟ್ಟಣದ ಮುನ್ಸಿಪಲ್ ಆಡಳಿತೆಯು.

ಈ ಪಟ್ಟಣದ ಮುನ್ಸಿಪಲ್ ಆಡಳಿತೆಯ ವೃತ್ತಾಂತವನ್ನು ಸರಕಾರದವರು ಪರಿಶೀಲಿಸಿ ಆಡಳಿತೆಯ ವಿಷಯ ತಮ್ಮ ಅಭಿಪ್ರಾಯಗಳನ್ನು ಇತ್ತಲಾಗೆ ಪ್ರಕಟಿಸಿರುವರು. ಇಲ್ಲಿಯ ಮುನ್ಸಿಪಲ್ ಆಡಳಿತೆಯು ಕಳೆದ ವರುಷ ತೃಪ್ತಿಕರವಾದ ರೀತಿಯಲ್ಲಿ ನೆರವೇರಿದೆ ಎಂಬ ಅಭಿಪ್ರಾಯವು ಸರಕಾರದವರ ಪರಿಶೀಲನೆಯಿಂದ ತೋರಿಬರುತ್ತದೆ ತಮ್ಮ ಪರಿಶೀಲನೆಯಲ್ಲಿ ಸರಕಾರದವರು ಕೆಲವು ಸೂಚನೆಗಳನ್ನು ಮುನ್ಸಿಪಲ್ ಕೌನ್ಸಿಲಿಗೆ ಕೊಟ್ಟಿರುವರು. ಇವುಗಳನ್ನು ಪಟ್ಟಣಿಗರೂ ಇವರ ಪ್ರತಿನಿಧಿಗಳಾದ ಕೌನ್ಸಿಲರರೂ ಇಲ್ಲಿಯ ಸರಕಾರದ ಅಧಿಕಾರಿಗಳೂ ಲಕ್ಷ್ಯಕ್ಕೆ ತಂದುಕೊಳ್ಳುವದು ಅಗತ್ಯವಾಗಿರುವುದು.

ಮುನ್ಸಿಪಲ್ ಕೌನ್ಸಿಲಿನವರು ಆಗಿಂದಾಗ್ಯೆ ಸಭೆಕೂಡುವಾಗ ಸರಕಾರದ ಕಡೆಯಿಂದ ನೇಮಿಸಲ್ಪಟ್ಟ ಕೌನ್ಸಿಲರರ ಹಾಜರಿಯು ಕಡಿಮೆಯಾಗುತ್ತ ಬಂದಿರುವ ವಿಷಯವನ್ನು ಕಲೆಕ್ಟರ ದೊರೆಗಳವರ ದೃಷ್ಟಿಗೆ ಸರಕಾರದವರು ತಂದಿರುತ್ತಾರೆ. ಸರಕಾರದವರ ಈ ಸೂಚನೆಗೆ ವಿಸ್ತಾರವಾದ ಟಿಪ್ಪಣಿಯನ್ನು ಬರೆಯಬೇಕೆಂತಿಲ್ಲ ಸರಕಾರದ ಕಡೆಯ ಮೆಂಬರರನ್ನು ಕಲೆಕ್ಟರ ದೊರೆಗಳವರು ಚುನಾಯಿಸುವಾಗ ಉಮೇದ್ವಾರರುಗಳಲ್ಲಿ ಪರೋಪಕಾರಬುದ್ಧಿಯೂ ಕಾರ್ಯಪಟುತ್ವವೂ ಹೇಗಿದೆಂಬುದನ್ನು ಮೊದಲಾಗಿ ನಿರ್ಣಯಿಸಿಕೊಂಡು ನಂತರ ಇಂಥಾ ಚುನಾವಣೆಗಳಲ್ಲಿ ಇತರ ಸೂತ್ರಗಳನ್ನು ಪರ್ಯಾಲೋಚನೆಗೆ ತಂದುಕೊಳ್ಳಬಹುದೆಂತ ನಮಗೆ ತೋರುತ್ತದೆ. ತೆರಿಗೆಗಳ ರಿಜಿಸ್ಟ್ರಿಗಳು ಗತವರುಷದಲ್ಲಿ ಪರಿಷ್ಕರಿಸಲ್ಪಟ್ಟಿದ್ದವು ಇದರಿಂದ ಪಟ್ಟಣದ ಮುನ್ಸಿಪಲ್ ಉತ್ಪತ್ತಿಯಲ್ಲಿ ಶುಮಾರು ರೂ. ೫,೦೦೦ ಮೊದಲಿನಕ್ಕಿಂತ ಹೆಚ್ಚಾಗಿ ದೊರಿಯುತ್ತದೆ. ಈ ಪರಿಷ್ಕರಣೆಯಲ್ಲಿ ನಿರ್ಣಯಿಸಿದ ತೆರಿಗೆಗಳ ಮೇಲೆ ಅಪೀಲುಗಳ ಸಂಖ್ಯೆಯು ಬಹಳ ಕಡಮೆಯಾಗಿದ್ದದರಿಂದ ತೆರಿಗೆಗಳ ಪುನರ್ವಿಚಾರವು ಬಹಳ ವಿವೇಕದಿಂದ ಮಾಡೋಣಾಗಿದೆ ಎಂತ ಸರಕಾರದವರು ಶ್ಲಾಘಿಸಿರುವರು. ಪ್ರಕೃತ ತೆರಿಗೆಯು ಹೀಗೆ ಹೆಚ್ಚಿದ್ದರಿಂದ ತೆರಿಗೆಯ ಸರಾಸರಿಯು ಪ್ರತಿ ನಿವಾಸಿಕನ ಮೇಲೆ ರೂ. ೧—೧-೧೧ ಆಗಿದೆ. ಮುನ್ಸಿಪಲ್ ಗೇಟುಗಳ ಆದಾಯವನ್ನು ಸೇರಿಸಿದರೆ ಈ ಸರಾಸರಿಯು ರೂ ೧—೩—೮ ಆಗುವುದು. ಮಂಗಳೂರಿನಂಥಾ ಬಡ ಪಟ್ಟಣದಲ್ಲಿ ಈ ಸರಾಸರಿಯು ವಿಶೇಷವೆಂತಲೇ ಹೇಳಬಹುದು.

ಪಟ್ಟಣದಲ್ಲಿಯ ನಿವಾಸಿಕರ ವಸ್ತಿಗಳು ಖಾಸಗಿ ತೋಟಿಗಳನ್ನು ಹೆಚ್ಚೆಚ್ಚಾಗಿ ಕೌನ್ಸಿಲಿನ ಮೂಲಕ ಉಪಯೋಗಿಸಿಕೊಳ್ಳುತ್ತಿರುವರು ಈ ಬಾಬಿನಲ್ಲಿ ಮುನ್ಸಿಪಲ್ ಕೌನ್ಸಿಲಿಗೆ ಖರ್ಚು ಕಳೆದು ರೂ. ೮೫೮ ಆದಾಯವು ಉಳಿದಿರುವುದು. ಹೀಗೆ ಮುನಾಫೆಯುಂಟಾಗುವಂತೆ, ಈ ಏರ್ಪಾಡನ್ನು ನಡೆಸಬಾರದೆಂತ ಸರಕಾರದವರ ಇನ್ನೊಂದು ಸೂಚನೆಯಾಗಿರುವುದು. ತೋಟಿಗಳ ಸಂಖ್ಯೆಯು ಇಲ್ಲಿಯ ವಸ್ತಿಗಳಿಗೆ ಬೇಕಾದಷ್ಟು ಇಲ್ಲದೆ ಇರುವುದರಿಂದ ತೋಟಿಗಳನ್ನು ಹೆಚ್ಚೆಚ್ಚಾಗಿ ನೇಮಿಸುವುದು ಅಗತ್ಯ. ಮತ್ತು ಇವರು ಕೆಲಸವನ್ನು ಸರಿಯಾಗಿ ಮಾಡುವಂತೆ ಈ ಬಗ್ಯೆ ಯೋಗ್ಯರಾದ ಮೇಲ್ವಿಚಾರಕರನ್ನು ಇಡುವುದು ಸಹ ಅವಶ್ಯಕವಾಗಿದೆ.

ಪಟ್ಟಣದ ರಸ್ತೆಗಳು ಚಲೋ ಸ್ಥಿತಿಯಲ್ಲಿರುವವು ಎಂತ ವೃತ್ತಾಂತದಲ್ಲಿದೆ ಇಲ್ಲಿಯ ರಸ್ತೆಗಳ ಚಲೋ ಸ್ಥಿತಿಯನ್ನು ಯಾರೂ ಅಲ್ಲಗಳೆಯಲಾರರು. ಕಳೆದ ವರುಷದಲ್ಲಿ ಸರಕಾರದವರ ದ್ರವ್ಯಸಹಾಯದಿಂದ ಮುನ್ಸಿಪಾಲಿಟಿಯವರು ಜನರ ಬಗ್ಯೆ ೨೦ ಆರೋಗ್ಯ ಮಂದಿರಗಳನ್ನೂ, ೪ ಶಾಲಾ ಕಟ್ಟೋಣಗಳನ್ನೂ, ೨ ಬಾವಿಗಳನ್ನೂ ೭ ಪಾಯಿಖಾನೆಗಳನ್ನೂ ಕಸ ತುಂಬಿಸುವ ೩೭ ತೊಟ್ಟಿಗಳನ್ನೂ ಸಿದ್ಧಪಡಿಸಿರುವರು.

ನಿವಾಸಿಕರ ವಿದ್ಯಾಭ್ಯಾಸದ ಬಗ್ಯೆ ಮುನ್ಸಿಪಾಲಿಟಿಯು ಖರ್ಚು ಮಾಡುವ ಮೊಬಲಗು ತೆರಿಗೆಯ ಸೇಕಡಾ 3¾ರಷ್ಟು ಇರುವುದು. ವಿದ್ಯಾಭ್ಯಾಸದ ಈ ಖರ್ಚಿನ ಮೊಬಲಗನ್ನು ಸಂಸ್ಥಾನದ ಇತರ ಪ್ರಾಂತ್ಯಗಳ ಇದೇ ಖರ್ಚಿನ ಮೊಬಲಗುಗಳೊಂದಿಗೆ ಸರಿಹೋಲಿಸಿದರೆ ನಮ್ಮಲ್ಲಿಯ ಖರ್ಚು ಬಹಳ ಕಡಮೆಯಾಗಿದೆಂದು ಸರಕಾರದವರು ಅಭಿಪ್ರಾಯಪಟ್ಟಿರುತ್ತಾರೆ. ಈ ಬಾಬಿನಲ್ಲಿ ಹೆಚ್ಚಿನ ಹಣ ವಿನಿಯೋಗವನ್ನು ಮಾಡುವುದು ಸಾಧ್ಯವೋ ಎಂಬುದನ್ನು ಇಲ್ಲಿಯ ವಿದ್ಯಾ ಅಧಿಕಾರಿಗಳಿಂದ ತಿಳಕೊಂಡು ೧೯೧೫-೧೬ನೇ ಆಡಳಿತೆ ವೃತ್ತಾಂತದೊಡನೆ ಮುನ್ಸಿಪಲ್ ಚೇಯರ್ಮೇನರು ತಿಳಿಸಬೇಕೆಂತ ಸರಕಾರದವರು ಕೇಳಿರುವರು. ಸೆಕೆಂಡರಿ ವಿದ್ಯಾಭ್ಯಾಸ ಪ್ರಸರಣೆಗೆ ಈ ಪಟ್ಟಣದಲ್ಲಿ ಬೇಕಾದ ಸಾಧನಗಳಿರುವವಾದರೂ ಇದೇ ರೀತಿ ಸಾಧನಗಳು ಎಲಿಮೆಂಟರಿ ವಿದ್ಯಾಪ್ರಸರಣೆ ಬಗ್ಯೆ ಇಲ್ಲಿ ಇರವು. ಮುನ್ಸಿಪಾಲಿಟಿಯವರು ಪ್ರಕೃತ ೭ ಎಲಿಮೆಂಟರಿ ಶಾಲೆಗಳನ್ನು ನಡಿಸುತ್ತಿದ್ದಾರೆ ಆದರೆ ಇದು ಸಾಲದೆಂತ ನಮ್ಮ ಅಭಿಪ್ರಾಯವಾಗಿದೆ. ನಿವಾಸಿಕನೊಬ್ಬನಿಗೆ ರೂ. ೧—೩ರಂತೆ ತೆರಿಗೆಯು ವಸೂಲಾಗುವ ಈ ಪಟ್ಟಣದಲ್ಲಿ ಸಾಮಾನ್ಯ ಶಿಕ್ಷಣದ ಬಗ್ಯೆ ವಿನಿಯೋಗಿಸಲ್ಪಡುವ ಮೊಬಲಗು ಅಧಿಕವಾಗಬೇಕು. ಎಲಿಮೆಂಟರಿ ವಿದ್ಯಾಪ್ರಸರಣೆಯು ಇಲ್ಲಿ ಅಧಿಕವಾಗುವಂತೆ ಪಟ್ಟಣದ ಮಧ್ಯಭಾಗದಲ್ಲಿ ಇಲ್ಲಿಯ ಬಡಜನರಿಗೆ ತಕ್ಕದಾದ ಒಂದು ಹಾಯರ್ ಎಲಿಮೆಂಟರಿ ಶಾಲೆಯನ್ನು ಮುನ್ಸಿಪಾಲಿಟಿಯವರು ಸರಕಾರದವರ ಸಹಾಯದಿಂದ ಸ್ಥಾಪಿಸಿ ನಡಿಸುವುದು ಅಗತ್ಯವಾಗಿರುವುದು. ಆಗ ಸೆಕೆಂಡರಿ ಶಾಲೆಗಳಲ್ಲಿ ವಿಪರೀತ ದರಗಳ ಶಾಲಾ ಫೀಸುಗಳನ್ನು ಕೊಡಲಾರದ ಮಧ್ಯಮ ತರಗತಿಯಲ್ಲಿರುವ ಕನಿಷ್ಟ ದರ್ಜೆಯ ನಿವಾಸಿಕರಿಗೆ ಮಹದುಪಕಾರವಾಗುವುದು.

ಇಲ್ಲಿಯ ಮುನ್ಸಿಪಾಲಿಟಿಯ ವೆನ್‍ಲೋಕ್ ಆಸ್ಪತ್ರೆಯಿಂದಲೂ ಮಕ್ಕಳ ಮತ್ತು ಸ್ತ್ರೀಯರ ಆಸ್ಪತ್ರೆಯಿಂದಲೂ ಜನರು ವಿಶೇಷವಾಗಿ ಪ್ರಯೋಜನವನ್ನು ಪಡಿಯುತ್ತಿದ್ದಾರೆ ಈ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಹೊಂದುತ್ತಿರುವ ರೋಗಿಗಳ ಸಂಖ್ಯೆಯು ಗತ ವರುಷದಲ್ಲಿ ಬಹಳ ತೃಪ್ತಿಕರವಾದ ರೀತಿಯಲ್ಲಿ ಏರಿರುವುದು ವೆನ್‍ಲೋಕ್ ಆಸತ್ರೆಯ ಬಗ್ಯೆ ನೂತನವಾಗಿ ಕಟ್ಟಡಗಳನ್ನು ಕಟ್ಟಿಸುವ ಏರ್ಪಾಡು ಇನ್ನು ಬೇಗನೆ ಜಾರಿಗೆ ಬರುವದೆಂಬದಾಗಿ ಕೇಳುತ್ತೇವೆ ಡಿಸ್ಟ್ರಿಕ್ಟ್ ಬೋರ್ಡಿನವರು ಈ ಆಸ್ಪತ್ರೆಯ ವರುಷಾವಧಿ ಖರ್ಚಿನ ಬಗ್ಯೆ ಕಳೆದ ವರುಷ ರೂ ೨,೫೦೦ನ್ನು ಕೊಟ್ಟಿರುವರು ಪಟ್ಟಣದ ವಿಸ್ತಾರವು ಪೆಂಟ್ಲಂಡ್ ಪೇಟೆ ಮೊದಲಾದವುಗಳ ರಚನೆಯಿಂದ ಹೆಚ್ಚುತ್ತಲಿದೆ. ಇಂಥಾ ವಿಸ್ತಾರವಾದ ಪಟ್ಟಣದ ಮಧ್ಯಭಾಗದಲ್ಲಿ ಮಾತ್ರ ಒಂದು ಆಸ್ಪತ್ರೆಯನ್ನು ನಡಿಸಿದರೆ ಸಾಕಾ[illegible] ಯಾಳ ಮೈಲುಗಳ ದೂರದಿಂದ ನಿವಾಸಿಸು ಬಗ್ಯೆ ಬರುವ ಜನರು ಕೆಲವು ಸಂದರ್ಭಗಳಲ್ಲಿ [illegible] ಸಮಯ ಸಾಲದ್ದರಿಂದ ಔಷಧಿಗಳನ್ನು ಪಡಕೊಳ್ಳದೇ [illegible] ಸಂಭವಗಳು ಬಂದೊದಗುತ್ತಿರುವವೆಂತ ಕೇಳುತ್ತೇವೆ [illegible] ರಹದ್ದುಗಳಲ್ಲಿ ಒಂದೆರಡು ಡಿಸ್ಪೆನ್ಸರಿಗಳನ್ನು ತೆರೆ[illegible] ಮಾಡ್ಡೊಂದು ಡಿಸ್ಪೆನ್ಸರಿಯನ್ನು ಪ್ರಕೃತ ಪೆಂಟ್ಲಂಡ್ ಪೇಟೆ[illegible] ಪ್ರಾಂತ್ಯದ ಪಟ್ಟಣಿಗರಿಗೂ, ದೇರೆಬೈಲ್, ಕೂಳೂರು [illegible] ನಿವಾಸಿಕರಿಗೂ ವಿಶೇಷ ಪ್ರಯೋಜನ ಉಂಟಾಗುವುದು [illegible] ಹೊರಗಿನ ನಿವಾಸಿಕರೂ ಸಹ ಈ ಡಿಸ್ಪೆನ್ಸರಿಗಳನ್ನು ಉಪಯೋಗಿಸಿಕೊಳ್ಳುವದರಿಂದ ಡಿಸ್ಟ್ರಿಕ್ಟ್ ಬೋರ್ಡಿನವರು ಈ ಬಗ್ಯೆ ಕೊಡುವ ದ್ರವ್ಯ ಸಹಾಯದ ಮೊಬಲಗನ್ನು ಹೆಚ್ಚಿಸಬಹುದಾಗಿದೆ.

ಗತವರುಷದಲ್ಲಿ ಪಟ್ಟಣದ ಆರೋಗ್ಯದ ಸ್ಥಿತಿಯು ತೃಪ್ತಿಕರವಾಗಿತ್ತು. ಪ್ಲೇಗು ಬಾಧೆಯು ವಿಶೇಷವಾಗಿದ್ದಿಲ್ಲ. ಮಿಕ್ಕ ವಿಚಾರಗಳಲ್ಲಿ ಮುನ್ಸಿಪಲ್ ಆಡಳಿತೆಯು ಸಮಾಧಾನಕರವಾಗಿತ್ತು ಜನನ ಮರಣಗಳ ಸಂಖ್ಯೆ ಕಡಮೆಯಾಗಲು ಕಾರಣವೇನೆಂಬುದನ್ನು ಕೌನ್ಸಿಲಿನವರು ಸರಿಯಾಗಿ ಪರಿಶೋಧಿಸಿ ನೋಡುವದು ಅಗತ್ಯವಾಗಿದೆ.

ವಾಙ್ಮಯ ಕಲಾಶಾಸ್ತ್ರಗಳ ಅಭಿವೃದ್ಧಿಯ ಸಮಾಚಾರ.
(Progress of Literature, Science and Art)

ಸಾಯಂಟಿಫಿಕ್-ಅಮೇರಿಕನ್ (Scientific American) ಪತ್ರಿಕೆಯು ಈ ಕೆಳಗಿನಂತೆ ಬರೆಯುತ್ತಿದೆ:—"ಸೊಳ್ಳೆಗಳನ್ನು ಬಾವಲಿಗಳ ಮೂಲವಾಗಿ ನಾಶಪಡಿಸಬಹುದೆಂಬದಾಗಿ ಕೆಲವು ವರ್ಷಗಳ ಹಿಂದೆ ಎಷ್ಟೋ ಕೇಳಬರುತ್ತಿದ್ದಿತು. ಆದರೆ, ಈಗ ಬಾತುಕೋಳಿಯು ಸೊಳ್ಳೆಗಳ ಪರಮಶತ್ರುವೆಂದೂ, ಸೊಳ್ಳೆಗಳ ಕಾಟವನ್ನೂ, ತನ್ಮೂಲವಾಗಿ ಬರುವ ರೋಗಗಳನ್ನೂ ಪರಿಹರಿಸಬೇಕಾದರೆ ನೀರು ಹರಿಯಿಸಿ ಜವಗು ಭೂಮಿಯನ್ನು ಸ್ವಚ್ಛಗೊಳಿಸಲು ತುಂಬಾ ವೆಚ್ಚ ತಗಲಬಹುದಾದ ಸ್ಥಳಗಳಲ್ಲಿ ಬಾತುಗಳನ್ನು ತಂದು ಬಿಡಬೇಕೆಂದೂ, ಪ್ರಯೋಗ ಮೂಲವಾಗಿ ಮಿ| ಡಿಕ್ಸನ್ ಎಂಬುವರು ಕಂಡುಕೊಂಡು ಹೇಳುತ್ತಿರುವರು. ಒಂದೇ ಪರಿಮಾಣದ ಎರಡು ಸರೋವರಗಳನ್ನು ನಿರ್ಮಿಸಿ ಒಂದರಲ್ಲಿ ಮೀನುಗಳನ್ನೂ, ಇನ್ನೊಂದರಲ್ಲಿ ಬಾತುಗಳನ್ನೂ ಬಿಟ್ಟಲ್ಲಿ, ಮೊದಲನೆಯ ಕೊಳವು ಸೊಳ್ಳೆಗಳ ತತ್ತಿಗಳಿಂದ ಎಂದಿನಂತೆಯೇ ತುಂಬಿಕೊಂಡಿದ್ದಿತೆಂದೂ, ಎರಡನೆಯದರೊಳಗಣ ತತ್ತಿಗಳು ಕ್ಷಿಪ್ರದಲ್ಲಿಯೇ ನಿರ್ನಾಮವಾದುವೆಂದೂ ಬೇರೆ ಯಾವ ಆಹಾರಕ್ಕಿಂತಲೂ ಕಾಡು ಬಾತುಗಳಿಗೆ ಸೊಳ್ಳೆಗಳೇ ಬಹು ಪ್ರಿಯವೆಂದೂ ತಿಳಿಯಬರುತ್ತಿದೆ."

ಶಾಮಶುಲ್ ಅಲೇಮಾ ಶಹಾರಿಯಾರಜೀ ದಾಧಾಬಾಯಿ ಭರೋಚಾ ಎಂಬ ಪಾರ್ಸೀ ಮಹಾ ವಿದ್ವಾಂಸರು ಕಳೆದ ಸಪ್ಟಂಬರು ೨ನೆಯ ತಾರೀಖಿನ ದಿನ ತೀರಿಕೊಂಡರು. ಇವರು ಅವೇಸ್ತಾ, ಪೆಹೆಲವಿ ಮತ್ತು ಸಂಸ್ಕೃತಗಳಲ್ಲಿ ಉತ್ತಮಪಂಡಿತರಾಗಿದ್ದು, ಅವೇಸ್ತಾ ಮತ್ತು ಪೆಹೆಲವೀ ಭಾಷೆಗಳನ್ನು ಚೆನ್ನಾಗಿ ಪರಿಸಿ ಭಾಷಾ ಶಾಸ್ತ್ರದ ಮೂಲವಾಗಿ ಧರ್ಮವಿಷಯಕವಾದ ಅನೇಕ ಸಂಗತಿಗಳನ್ನು ಸಿದ್ಧಾಂತಗೊಳಿಸಿದ ಪಾರಸೀಕ ಪಂಡಿತರಲ್ಲಿ ಮೊದಲನೆಯವರು. ಪಾರ್ಸೀ ದರ್ಮದ ವಿಷಯವಾಗಿ ಇವರು ಅನೇಕ ಗ್ರಂಥಗಳನ್ನು ಬರೆದಿರುವರು. ಮತ್ತು ಆ ದರ್ಮವನ್ನು ಕುರಿತು ಎಷ್ಟೋ ಉಪನ್ಯಾಸಗಳನ್ನು ಆಗಿಂದಾಗ ಕೊಡುತ್ತಿದ್ದರು. ಶ್ರೀ ದಾದಾಭಾಯಿ ನವರೋಜಿಯವರೇ ಮುಂತಾದ ಪಾರಸೀ ಸುಧಾರಕರಿಂದ ೬೦ ವರ್ಷಗಳ ಕೆಳಗೆ ಸ್ಥಾಪಿಸಲಾಗಿದ್ದ ರಹನೂಮಾಯಿ ಸಭಾ ಎಂಬ ಸಂಘದ ಸದಸ್ಯರೊಳಗೆ ಇವರ ಅಗ್ರಗಣ್ಯರಾಗಿದ್ದರು.

* * *

ಬೊಂಬಾಯಿಯ ಜೀವದಯಾಜ್ಞಾನ ಪ್ರಸಾರಕ ಸಭೆ (Humanitarian League) ಯ ವರ ಆಶ್ರಯದಲ್ಲಿ ಕಳೆದ ಆಗೋಸ್ಟ ೨೮ನೆಯ ತಾರೀಖಿನಲ್ಲಿ ಒಂದು ಮಹಾ ಸಭೆ ನಡೆಯಿತು. 'ಅಹಿಂಸಾ ಪರಮೋ ಧರ್ಮಃ' ಎಂಬುದು ಉಪನ್ಯಾಸ ವಿಷಯವಾಗಿದ್ದಿತು. ಶಾಕಾಹಾರವು ಇತ್ತಿತ್ತಲಾಗೆ ಇಂಗ್ಲಂಡಿನಲ್ಲಿಯೂ ಜನ ಪ್ರಿಯವಾಗುತ್ತಲಿರುವುದೆಂದೂ ಇದರ ದೆಸೆಯಿಂದ ಒಯಿದ ಸಾವಿರ ಕಟುಕರು ತಮ್ಮ ಅಂಗಡಿಗಳನ್ನು ಮುಚ್ಚಿಬಿಟ್ಟರೆಂದೂ ಉಪನ್ಯಾಸಕರು ಅಪ್ಪಣೆ ಕೊಡಿಸಿದರು. ಹಿಂದು ದೇಶದಲ್ಲಿ ಮಾಂಸಾಹಾರವು ಹಿಂದೂಜನರೊಳಗೆ ಕೂಡ ಬಹು ವಿಶೇಷವಾಗಿದ್ದರೂ, ಮೇಲೆ ಹೇಳಿದ ಸಭೆಯವರ ಪ್ರಯತ್ನಗಳಿಂದ ಈ ದುರಭ್ಯಾಸವು ಬಹಳ ಮಟ್ಟಿಗೆ ಕಡಿಮೆಯಾಗುತ್ತಿದೆಯೆಂದೂ, ಮಾಂಸ ಮಾತ್ರವೇ ಅಲ್ಲದೆ ಸಾರಾಯಿ, ಬಂಗಿ, ಅಪೀಮು, ಹೊಗೆಸೊಪ್ಪು ಮುಂತಾದುವುಗಳ ಸೇವನದ ವಿಷಯದಲ್ಲಿಯೂ ಅಲ್ಲಿಯ ಜನರೊಳಗೆ ಪ್ರತಿಕೂಲಭಾವವುಂಟಾಗಿದೆಯೆಂದೂ ತಿಳಿಯಬರುತ್ತಿದೆ.

ಬಾಲಗಂಗಾಧರ ತಿಲಕರ ಹೊಸ ಗ್ರಂಥವು.

ಶ್ರೀಯುತ ಬಾಲಗಂಗಾದರ ತಿಲಕರವರು ಈಗೆ ಎಂದರೆ ಸುಮಾರು ಎರಡು ತಿಂಗಳ ಹಿಂದೆ, ಗೀತಾರಹಸ್ಯ ಅಥವಾ ಕರ್ಮಯೋಗಶಾಸ್ತ್ರವೆಂಬ ಅಪೂರ್ವವಾದ ಗ್ರಂಥವನ್ನು ಮರಾಟಿಯಲ್ಲಿ ಪ್ರಸಿದ್ಧಮಾಡಿರುವರು. ಇದರ ಮೊದಲನೆ ಆವೃತ್ತಿಯ ೦೦೦ ಪ್ರತಿಗಳು ಎರಡೇ ವಾರದೊಳಗೆ ಖರ್ಚಾಗಿ ಈಗ ಎರಡನೇ ಆವೃತ್ತಿಯೂ ಕೂಡಾ ಪ್ರಸಿದ್ಧವಾಗಿದೆ ಎಂದು ಹೇಳಿದರೆ ಈ ಗ್ರಂಥವು ಎಷ್ಟು ಲೋಕಪ್ರಿಯವಾಗಿದೆ ಎಂಬದನ್ನು ನಾವು ಬೇರೆ ಹೇಳಬೇಕಾಗಿಲ್ಲ. ಇದು ೯೦೦ ಪೃಷ್ಠವಿದ್ದು, ಇದರಲ್ಲಿ ಬಗವದ್ಗೀತೆಯ ಅಂತರಂಗ ಪರೀಕ್ಷಣೆ ಎಂತಲೂ, ಬಹಿರಂಗ ಪರೀಕ್ಷಣೆ ಎಂತಲೂ, ಮೂಲಗೀತೆ ಅದರ ಭಾಷಾಂತರ ಮತ್ತು ಅರ್ಥನಿರ್ಣಾಯಕ ಟಿಪ್ಪಣಿಗಳಂತಲೂ ಮೂರು ಭಾಗಗಳಿವೆ. ಅಂತರಂಗ ಪರೀಕ್ಷಣೆಯಲ್ಲಿ ಬಗವದ್ಗೀತೆಯ ಪ್ರಮೇಯವು ಯಾವುದು ಎಂಬುದನ್ನು ಗ್ರಂಥಕರ್ತರು ನಿರ್ಣಯಿಸಿದ್ದಾರೆ, ಮತ್ತು ಬಹಿರಂಗ ಪರೀಕ್ಷಣೆಯಲ್ಲಿ ಗೀತೆಯ ಕಾಲನಿರ್ಣಯ ಮುಂತಾದ್ದನ್ನು ತೋರಿಸಿ ಮೂರನೇ ಬಾಗದಲ್ಲಿ ಮೂಲಗೀತೆಯನ್ನೂ, ಅದರ ಅರ್ಥವನ್ನೂ, ಆ ಅರ್ಥವನ್ನು ನಿರ್ಧಯಿಸಲು ಟಿಪ್ಪಣಿಗಳನ್ನೂ ಕೊಟ್ಟಿದ್ದಾರೆ.

ಕೌರವ ಪಾಂಡವರ ದಾಯಾದಿ ಕಲಹದ ಪರ್ಯವಸಾನವು ಕೊನೆಗೆ ಯುದ್ಧದಲ್ಲಾಯಿತೆಂಬುದು ಆಬಾಲವೃದ್ಧರಿಗೆ ಗೊತ್ತುಂಟಷ್ಟೇ! ಈ ಯುದ್ಧದ ಪ್ರಾರಂಬದಲ್ಲಿ ಇತ್ತಟ್ಟಿನ ಸೇನೆಗಳು ರಣರಂಗದಲ್ಲಿ ನಿಂತು ಶಸ್ತ್ರಾಸ್ತ್ರಗಳ ಕ್ಷೇಪಪ್ರತಿಕ್ಷೇಪಗಳನ್ನು ಮಾಡಿಕೊಳ್ಳುವುದಕ್ಕಿಂತ ಮುಂಚೆ ದುರ್ಯೋಧನನು ತನ್ನ ಮತ್ತು ಪ್ರತಿಪಕ್ಷದವರ ಸೇನೆಯನ್ನೆಲ್ಲ ಹೇಗೆ ವಿಮರ್ಶಿಸಿದನೋ ಹಾಗೆಯೇ ಪಾಂಡವರಲ್ಲಿ ತ್ರೈಲೋಕ್ಯ ವೀರನಾದ ಅರ್ಜುನನು ಶ್ವೇತಾಶ್ವಗಳಿಂದ ಒಪ್ಪುತ್ತಿರುವ ಮಹಾರಥವನ್ನಾರೋಹಿಸಿ ಯುದ್ಧ ಭೂಮಿಗೆ ಬಂದ. ತನ್ನವರು ಯಾರು, ಅನ್ಯರು ಯಾರು ಎಂಬುದನ್ನು ತಿಳಿದುಕೊಳ್ಳುವುದಕ್ಕಾಗಿ ರಥವನ್ನು ಸೇನೆಯ ನಡುವೆ ನಿಲ್ಲಿಸಬೇಕೆಂದು ಸಾರಥಿಯಾದ ಶ್ರೀಕೃಷ್ಣನಿಗೆ ವಿಜ್ಞಾಪಿಸಿದನು. ಯುದ್ಧಾವೇಶದಿಂದಲೂ, ವಿಜಯಾಶೆಯಿಂದಲೂ ರಣಕ್ಷೇತ್ರಕ್ಕೆ ಬಂದು ಅದರ ಮಧ್ಯದಲ್ಲಿ ನಿಂತ ಅರ್ಜುನನು ಗುರುವಾದ ದ್ರೋಣನನ್ನೂ, ಅಜ್ಜನಾದ ಭೀಷ್ಮನನ್ನೂ, ದಾಯಾದರಾದ ಕೌರವರನ್ನೂ, ಇನ್ನೂ ಅನೇಕ ಆಪ್ತೇಷ್ಟರನ್ನೂ ನೋಡಿ ಮೂಢನಾದನು. ನನಗೀಯುದ್ಧವು ಏಕೆ? ಪೂಜ್ಯರಾದ ಗುರುಹಿರಿಯರನ್ನೂ, ಬಂಧುಬಳಗದವರನ್ನೂ ಸಂಹರಿಸಿ ಅವರ ರಕ್ತದಿಂದ ನಿರ್ಲಿಪ್ತವಾದ— ನಿರ್ಲಿಪ್ತ ಮಾತ್ರವಲ್ಲ—ದೂಷಿತವಾದ ರಾಜಸಂಪತ್ತಿನಿಂದ ನನಗೇನಾಗಬೇಕು? ಈ ಭೂಮಿಯ ರಾಜ್ಯವೇ ಅಲ್ಲ. ಇಡೀ ತ್ರೈಲೋಕ್ಯವು ನನಗೆ ದೊರೆಯುತ್ತದೆಂದಿದ್ದರೂ ನನಗೀಯುದ್ಧವು ಬೇಡ. ಇವೇ ಮೊದಲಾದಂಥ—ಮೇಲಿನಿಂದ ಮೇಲೆ ನೋಡುವವರಿಗೆ ಸಾತ್ವಿಕವಾಗಿ ಕಾಣುತ್ತಿರುವವಾದರೂ, ಕೇವಲ ಹೇಡಿಗಳಿಗೆ ಹೇಳುವಂಥ ವಿಚಾರಗಳಿಂದ ಅರ್ಜುನನ ಅಂತರಂಗವು ದುರ್ಬಲವಾಯಿತು. ಈ ದುರ್ಬಲತೆಯು ಅಂತರಂಗದಲ್ಲಿ ನಿಲ್ಲದೆ ರೋಗದ ಅಣುಗಳಂತೆ ಶರೀರವನ್ನೆಲ್ಲಾ ವ್ಯಾಪಿಸಿತು. ಗಾಂಡೀವವು ಕೈಯಿಂದ ಜಾರಿತು, ಮುಖವು ಬೆವರಿನಿಂದ ನನೆಯಿತು; ತೊಗಲು ದುಃಖಸಂತಾಪದಿಂದ ಬಿಸಿಯಾಯಿತು, ಈ ಅವಸ್ಥೆಯಲ್ಲಿ ಅರ್ಜುನನು ಯುದ್ಧ ಮಾಡುವುದು ಹೇಗೆ? ಈ ಯುದ್ಧವು ಕೃಷ್ಣನೇ, ನನಗೆ ಬೇಡ ಎಂದು ನಿರಾಕರಿಸಿ, ಈ ನಿರಾಕರಣೆಗೆ ಬೇಕಾದ್ದನ್ನೆಲ್ಲ ಉಪಪಾದಿಸಿ, ಭಿಕ್ಷಾವೃತ್ತಿಯೇ ಲೇಸೆಂದು ಪ್ರಮುಖಯೋಧನಾದ ಅರ್ಜುನನು ಯುದ್ಧಮುಖದಲ್ಲಿಯೇ ಸ್ಥಾಪಿಸಿದನು. ಇಂಥಾ ಅವಸ್ಥೆಯು ಅರ್ಜುನನಿಗೆ ಒದಗಿದಾಗ ಅವನು ಯುದ್ಧವಿರಕ್ತನಾದದ್ದು ಆಶ್ಚರ್ಯವಲ್ಲ. ಆ ಸಮಯದಲ್ಲಿ ಪರಸ್ಪರ ವಿರುದ್ಧವಾದರೂ ತುಲ್ಯಬಲವಾದ ಎರಡು ಕರ್ತವ್ಯಗಳು ಅವನ ಅಂತಃಕರಣದ ಎದುರಿನಲ್ಲಿದ್ದುವು — ಒಂದು ಕ್ಷತ್ರಿಯ ವರ್ಣಕ್ಕೆ ಹೇಳಿದ ಯುದ್ಧವನ್ನಾಚರಿಸುವುದು, ಇನ್ನೊಂದು ಘೋರ ಸಂಹಾರದ ದೆಸೆಯಿಂದ ಪಾಪಮಿಶ್ರವಾದ ಸಂಗ್ರಾಮವನ್ನು ಬಿಟ್ಟು ಭಿಕ್ಷಾವೃತ್ತಿಯನ್ನು ಅವಲಂಬಿಸುವುದು. ಈ ಎರಡು ಕರ್ತವ್ಯಗಳಲ್ಲಿ "ಕಾರ್ಯಾಕಾರ್ಯವ್ಯವಸ್ಥೆ"ಯನ್ನು ಮಾಡಲು ಅಸಮರ್ಥನಾದ ಅರ್ಜುನನಿಗೆ ಶ್ರೀಕೃಷ್ಣನು ಆ ಕಾರ್ಯಾಕಾರ್ಯವ್ಯವಸ್ಥೆಯ ಯಾವ ನಿಯಮಗಳನ್ನು ಉಪದೇಶಿಸಿದನೋ ಅದೇ ಗೀತೆಯು. ಈ ಗೀತೆಯ ಅಂತರಂಗ ಪರೀಕ್ಷಣೆಯಲ್ಲಿ "ಕಾರ್ಯಾಕಾರ್ಯವ್ಯವಸ್ಥೆ"ಯನ್ನು ಕುರಿತು ರಹಸ್ಯಕಾರರು ಉಪಪಾದಿಸಿದ ವಿಷಯಗಳ ಮೇಲಿಂದ ಬಗವದ್ಗೀತೆಯ ತತ್ವಜ್ಞಾನವು ಅರಿಸ್ಟಾಟಲ್, ಸೊಕ್ರೆಟಿಸ್ ಮುಂತಾದ ಪ್ರಾಚೀನ ಗ್ರೀಕ ತತ್ವಜ್ಞರ ನೀತಿಶಾಸ್ತ್ರಕ್ಕಿಂತಲೂ ಮಿಲ್ಲ್, ಸ್ಪೇನ್ಸರ್, ಕೋಂಟ್, ಕೆಂಟ್, ನೀಟ್‌ಶೇ ಮೊದಲಾದ ಅಧುನಿಕ ಪಾಶ್ಚಾತ್ಯ ತತ್ವಜ್ಞರ ನೀತಿಮೀಮಾಂಸೆಗಿಂತಲೂ ಎಷ್ಟೋ ಅದಿಕ ಮತ್ತು ಎಷ್ಟೋ ಉದಾತ್ತವಾಗಿದೆ ಎಂಬುದು ವಾಚಕರಿಗೆ ಅಲ್ಲಲ್ಲಿ ಮಾಡಿದ ಪರಸ್ಪರ ತುಲನೆಯಿಂದ ಸ್ಪಷ್ಟವಾಗುತ್ತದೆ. ಈ ಪ್ರಕಾರ ಸ್ಪಷ್ಟಪಡಿಸುವಾಗ ಗ್ರಂಥಕಾರರು "ಕರ್ಮಜಿಜ್ಞಾಸೆ" "ಕರ್ಮಯೋಗಶಾಸ್ತ್ರ" "ಆದಿಭೌತಿಕ ಸುಖವಾದ" "ಸುಖದುಃಖ ವಿವೇಕ" ಮುಂತಾದ ಅಂತರಂಗಪರೀಕ್ಷಣೆಯ ೧೫ ಪ್ರಕರಣಗಳಲ್ಲಿ ಪಾಶ್ಚಾತ್ಯ ತತ್ವಜ್ಞರ ಮತದಲ್ಲಿರುವ ಅಪೂರ್ಣ ಮತ್ತು ಅಪಕ್ವವಾದ ಅಂಶಗಳನ್ನು ತಮ್ಮ ಪ್ರಾಸಾದಿಕ ಲೇಖನದಿಂದ ಸೋಪಪತ್ತಿಕವಾಗಿಯೂ ಸಪ್ರಮಾಣವಾಗಿಯೂ ವಿಶದಪಡಿಸಿರುತ್ತಾರೆ. ಹಾಗೆಯೇ ಬಗವದ್ಗೀತೆಯಲ್ಲಿ ಹೇಳಿದ "ಕಾರ್ಯಾಕಾರ್ಯವ್ಯವಸ್ಥಾಪಕ"ವಾದ ಶಾಸ್ತ್ರವು, ನಿಷ್ಕಾಮಕರ್ಮಿಯಾದ ಜನಕನ ದೃಷ್ಟಾಂತದಿಂದಲೂ, "ತಸ್ಮಾದ್ಯುಧ್ಯಸ್ವ ಭಾರತ" "ಕುರು ಕರ್ಮೈವ ತಸ್ಮಾತ್ತ್ವಮ್," "ಕರ್ಮಯೋಗೋ ವಿಶಿಷ್ಯತೇ" ಇವೇ ಮೊದಲಾದ ಶ್ರೀಕೃಷ್ಣನ ಉಪದೇಶದಿಂದಲೂ ಗ್ರಂಥದ ತಾತ್ಪರ್ಯ ನಿರ್ಣಾಯಕವಾದ ಉಪಕ್ರಮೋಪಸಂಹಾರಾದಿ ಆರು ವಿಧ ಲಿಂಗಗಳಿಂದಲೂ ನಿಷ್ಕಾಮಕರ್ಮವನ್ನೇ ಪ್ರತಿಪಾದಿಸುತ್ತದೆಂಬುದನ್ನು ಯುಕ್ತಿಪ್ರಯುಕ್ತಿಗಳಿಂದ ಸ್ಥಾಪಿಸಿರುತ್ತಾರೆ. ಗೀತೆ ಎಂಬ ನಿಷ್ಕಾಮಕರ್ಮಯೋಗ ಶಾಸ್ತ್ರಕ್ಕೆ ತತ್ತ್ವಜ್ಞಾನದಲ್ಲಿ ಉಪನಿಷತ್ತಿನಂತೆ ಅದ್ವೈತವೇ ಅಭಿಮತವಾದ್ದೆಂತಲೂ, ಜ್ಞಾನನಿಷ್ಠೆ, ಕರ್ಮನಿಷ್ಠೆ ಇವುಗಳಂತೆ ಬಕ್ತಿಯೂ ಒಂದು ನಿಷ್ಠೆ ಎಂದು ಕೆಲವರು ಅಭಿಪ್ರಾಯಪಡುವುದು ತಪ್ಪೆಂತಲೂ, ಬಕ್ತಿಯು ನಿಷ್ಠೆ ಎಂಬ ಹೆಸರಿಗೆ ಅಪಾತ್ರವಾದ ಕಾರಣ "ಯೋಗಸಾಧನೆ" ಎಂಬ ಸಂಜ್ಞೆಯನ್ನು ತಕ್ಕೊಳ್ಳುತ್ತದೆಂತಲೂ ಗ್ರಂಥಕಾರರು ರಹಸ್ಯದ ಪೂರ್ವಾರ್ಧದಲ್ಲಿ ಆಧಾರಪೂರ್ವಕವಾಗಿ ವಿವೇಚಿಸಿರುತ್ತಾರೆ. ಸಾರಾಂಶವೇನೆಂದರೆ ಮಾನ್ಯರಾದ ಗ್ರಂಥಕಾರರು ಅಂತರಂಗ ಪರೀಕ್ಷಣೆಯಲ್ಲಿ ಗೀತೆಯು ವ್ಯವಹಾರ, ನೀತಿ ಮತ್ತು ತತ್ವಜ್ಞಾನ ಇವುಗಳನ್ನು ಹೇಗೆ ಏಕಜೀವವಾಗಿ ಕೊಡುತ್ತದೆಂಬುದನ್ನು ಬಹು ಚಂದವಾಗಿ ತೋರಿಸಿರತ್ತಾರೆ.

ಬಹಿರಂಗ ಪರೀಕ್ಷಣೆಯಲ್ಲಿ ಗ್ರಂಥಕಾರರು ಗೀತೆ ಮತ್ತು ಮಹಾಭಾರತ ಇವುಗಳ ಕಾಲನಿರ್ಣಯ, ಗೀತೆ ಮತ್ತು ಬ್ರಹ್ಮಸೂತ್ರ, ಗೀತೆ ಮತ್ತು ಉಪನಿಷತ್ತು, ಗೀತೆ ಮತ್ತು ಬೌದ್ಧಮತ, ಗೀತೆ ಮತ್ತು ಕ್ರಿಸ್ತಧರ್ಮ ಮುಂತಾದ ಏಳು ವಿಷಯಗಳನ್ನೆತ್ತಿಕೊಂಡು ಐತಿಹಾಸಿಕದೃಷ್ಟಿಯಿಂದ ಬಹು ಮಾರ್ಮಿಕವಾಗಿ ವಿವೇಚನೆ ಮಾಡಿರುತ್ತಾರೆ. ಬಗವದ್ಗೀತೆಯ ಮತ್ತು ಭಾರತದ ಅವರು ಮಾಡಿರುವ ಕಾಲನಿರ್ಣಯವನ್ನು ನೋಡಿದರೆ ಬೌದ್ಧಮತವಾಗುವುದಕ್ಕಿಂತಲೂ ಪೂರ್ವದಲ್ಲಿಯೇ ಭಕ್ತಿಯು ಭಾರತೀಯರ ಧಾರ್ಮಿಕ ಅಂಗವಾಗಿದ್ದದ್ದು ಸ್ಫುಟವಾಗಿ ತಿಳಿಯಬರುತ್ತದೆ. ಹೀಗಿರಲು

ಹಿಂದು ಜನರಲ್ಲಿ ಭಕ್ತಿಯ ತತ್ವವು ಮತಾಂತರದಿಂದ ಸೇರಿತು ಎಂಬ ನಿರಾಧಾರವಾದ ಮಾತಿಗೆ ಹಿನೂ ಎಡೆಯಿರುವುದಿಲ್ಲ.

ಗ್ರಂಥದ ಮೂರನೇ ಭಾಗವು ಮೂಲಗೀತೆಯ ಭಾಷಾಂತರಾತ್ಮಕವಾಗಿದೆಂಬ ಸಂಗತಿಯು ಮೇಲೆ ಹೇಳಿದೆ

ಇಂಥಾ ಅಪೂರ್ವವಾದ ಗ್ರಂಥವನ್ನು ಬರೆದ ತಿಲಕರು ಕಾರಾಗ್ರಹವಾಸದಲ್ಲಿ ಪಾಲೀ, ಫ್ರೆಂಚ್, ಜರ್ಮನ್ ಈ ಭಾಷೆಗಳನ್ನು ಕಲಿತಂತೆ ಬರೆದಿರುವರು. "ವಿದ್ವಾಂಸರ ವಿಪತ್ತು ಲೋಕಕ್ಕೆ ಸಂಪತ್ತು" ಎಂಬೀ ಮಾತು ಈ ಗ್ರಂಥವನ್ನು ನೋಡಿ ಸಹೃದಯರಿಗೆ ನೆನಪು ಬಾರದೆ ಇರದು ಓಜಸ್ವಿಯಾದ ಈ ಗ್ರಂಥಸಂಪತ್ತನ್ನು ತಮ್ಮ ದೇಶಬಾಂಧವರ ಕೈವಶ ಮಾಡಿದಕ್ಕೆ ಈಗಿನ ಜನಾಂಗದವರು ಮಾತ್ರವಲ್ಲ, ಮುಂದಿನ ಜನಾಂಗದವರೂ ಕೂಡ ಇವರ ಅತ್ಯಂತ ಋಣಿಯಾಗದೆ ಇರರು.

ಇವರ ಗ್ರಂಥದೊಳಗಣ ಅನೇಕ ವಿಚಾರಗಳನ್ನು ನಮ್ಮ ವಾಚಕರಿಗೆ ತಿಳಿಸಬೇಕೆಂದಿರುತ್ತೇವೆ. ಆದರೂ ಮರಾಠೀ ಭಾಷೆ ಬಲ್ಲವರು ಈ ಮೂಲ ಗ್ರಂಥವನ್ನೇ ಅವಶ್ಯವಾಗಿ ಓದಬೇಕೆಂದು ಹೇಳುವುದಕ್ಕಿಂತ ಬೇರೆ ರೀತಿಯಾಗಿ ಅದನ್ನು ಕೊಂಡಾಡಲಾರೆವು.

~~~~~~~

ಕನ್ನಡ ಜಿಲ್ಲೆಯ ರೈತರು ತಿಳಿಯಬೇಕಾದ ಸಂಗತಿ.

ಕೃಷಿ ಇಲಾಖೆಯವರ ಪ್ರಯತ್ನದಿಂದ ಕನ್ನಡ ಜಿಲ್ಲೆಗೆ ತಕ್ಕಮಟ್ಟಿನ ಪ್ರಯೋಜನವು ದೊರತಂತೆ ತೋರುತ್ತದೆ ಕೆಲವು ವರ್ಷಗಳ ಮುಂಚೆ ಈ ಜಿಲ್ಲೆಯಲ್ಲಿ ಮೊರೀಸಿಯಸ್ ಕಬ್ಬು ಇರಲಿಲ್ಲ ಈಗ ೪೨೫ ಎಕ್ರೆಯಲ್ಲಿ ಈ ಕಬ್ಬು ಸಾಗುವಳಿ ಮಾಡಲ್ಪಡುತ್ತದೆ. ವರ್ಷ ಹೋದಹಾಗೆಯೆ ಈ ಕಬ್ಬಿನ ಸಾಗುವಳಿಯು ಹೆಚ್ಚಾಗುತ್ತಲಿದೆ. ಕಬ್ಬು ಸಾಗುವಳಿಯ ವಿಸ್ತೀರ್ಣವು ಕೂಡಾ ಹೆಚ್ಚಾಗುತ್ತಲಿದೆ ಐದಾರು ವರ್ಷಗಳ ಹಿಂದೆ ಮರದ ಗಾಣಗಳಲ್ಲದೆ ಕಬ್ಬಿಣದ ಗಾಣಗಳಿರಲಿಲ್ಲ ಈಗಲಾದರೂ ಜಿಲ್ಲೆಯಲ್ಲಿ ೧೫೦ ಕಬ್ಬಿಣದ ಗಾಣಗಳಿಂದ ಕೆಲಸವು ನಡೆಯುತ್ತಿದೆ ಮುಂಚೆ ಬೆಲ್ಲ ಮಾಡಲಿಕ್ಕೆ ಹೆಚ್ಚಾದ ಕಟ್ಟಿಗೆಯು ಅವಶ್ಯವಿತ್ತು. ಈಗಲಾದರೊ ನೂತನ ಒಲೆಗಳಿಂದ ಹೆಚ್ಚಿನ ಕಟ್ಟಿಗೆಯ ಖರ್ಚು ಇಲ್ಲದೆ ಬೆಲ್ಲ ಮಾಡಲಿಕ್ಕೆ ರೈತರಿಗೆ ತೋರಿಸಿಕೊಟ್ಟಿರುತ್ತದೆ.

ಭತ್ತದ ಸಾಗುವಳಿಯಲ್ಲಿ ಕೂಡಾ ಕೆಲವು ಬದಲಾವಣೆಗಳು ಆಗುತ್ತಲಿವೆ. ಈ ಪೈರಿಗೆ ಸೊಪ್ಪು ಗೊಬ್ಬರವು ಬಹು ಅವಶ್ಯವಾದದ್ದು ಎಲ್ಲಾ ಕಡೆಗಳಲ್ಲಿ ಸೊಪ್ಪು ಗೊಬ್ಬರವು ದೊರೆಯುವದು ದುರ್ಲಭವಾಗಿರುತ್ತದೆ ಢೈಂಚವೆಂಬ ಸಸಿ ಗೊಬ್ಬರವನ್ನು ಗದ್ದೆಯಲ್ಲಿ ಬೆಳೆಯಿಸಿ, ಅದನ್ನು ಗದ್ದೆಗೆನೆ ಉತ್ತು ಭತ್ತದ ಪೈರನ್ನು ನಟ್ಟರೆ ಅತ್ಯುತ್ತಮವಾದ ಬೆಳೆಯು ದೊರೆಯುವದು. ಇಂಥಾ ಪ್ರಯತ್ನಗಳು ಈಗ ಎರಡು ಮೂರು ವರುಷಗಳಿಂದ ಮಂಗಳೂರು ತಾಲೂಕಿನಲ್ಲಿ ನಡೆಯುತ್ತಲಿದೆ. ಈ ವರ್ಷ ಢೈಂಚ ಬೆಳೆಯಿಸಿದ ಗದ್ದೆಗಳ ಪೈರುಗಳು ಬಹು ಉತ್ತಮವಾಗಿರುತ್ತವೆ. ಕೊಡಿಯಾಲಬೈಲು, ಕಂಕನಾಡಿ, ಬೋಳೂರು, ಕಣ್ಣೂರು, ಕೊಳ್ನಾಡು ಮೊದಲಾದ ಗ್ರಾಮಗಳಲ್ಲಿ ಢೈಂಚ ಬೆಳೆಯಿಸಿರುತ್ತದೆ. ಭತ್ತದ ಪೈರು ಈಗ ಗದ್ದೆಯಲ್ಲಿರುತ್ತದೆ ಕೃಷಿ ಕುತೂಹಲರೂ, ವರ್ಗದಾರರೂ, ರೈತರೂ ಇದನ್ನು ನೋಡಿ ಅನುಭವಮಾಡಿಕೊಳ್ಳಬಹುದು. ಢೈಂಚ ಬೆಳೆಯಿಸಿದ ಗದ್ದೆಗಳ ಪೈರುಗಳು ಗ್ರಾಮಗಳಲ್ಲಿ ಒಂದನೇ ತರಗತಿಯ ಪೈರುಗಳಾಗಿರುತ್ತವೆ. ಹೊಳೆಕಿನಾರೆಯವರಿಗೂ, ಸಮುದ್ರ ಕರಾವಳಿಯವರಿಗೂ ಇದರಿಂದ ಹೆಚ್ಚಿನ ಪ್ರಯೋಜನವು ದೊರೆಯುವದು. ಸೌಳು ಭೂಮಿಗಳಲ್ಲಿ ಇದು ಚನ್ನಾಗಿ ಬೆಳೆದು ಒಳ್ಳೇ ಭತ್ತದ ಪೈರನ್ನು ಕೊಡುವದು. ಒಂದು ಎಕ್ರೆ ಸ್ಥಳಕ್ಕೆ ಬಿತ್ತಲಿಕ್ಕೆ ನಾಲ್ಕು ಸೇರು ಬೀಜ ಮಾತ್ರ ಸಾಕು ಇದಕ್ಕೆ ಒಂದು ರೂಪಾಯಿ ಕ್ರಯವಾಗುವದು. ಈ ಬೀಜವನ್ನು ಸುಗ್ಗಿ ಕಟಾವು ಆದ ತರುವಾಯ ಧಾನ್ಯವನ್ನು ಬಿತ್ತುವ ಸಮಯದಲ್ಲಿ ಗದ್ದೆಗೆ ಬಿತ್ತಬೇಕು. ಜೂನು ತಿಂಗಳಲ್ಲಿ ಮಳೆ ಬಂದು ಎಣಿಲು ಬೆಳೆಗೆ ಹೂಡುವ ಸಮಯದಲ್ಲಿ ಈ ಢೈಂಚದ ಪೈರನ್ನು ಗದ್ದೆಗೆ ಉತ್ತು ನೇಜಿ ನಟ್ಟರೆ ಒಳ್ಳೇ ಪೈರಾಗುತ್ತದೆ. ಬಹು ಕಮ್ಮಿ ಖರ್ಚಿನಿಂದ ಅತ್ಯುತ್ತಮವಾದ ಗೊಬ್ಬರವನ್ನು ಪಡೆಯಬಹುದು. ಈ ಢೈಂಚದ ಬೀಜವು ಬಂಗಾಳ ದೇಶದಿಂದ ಬರಬೇಕಾದದ್ದು ಇದು ಬೇಕೆಂದಿದ್ದವರು ಈ ಕೆಳಗಿನ ವಿಳಾಸಕ್ಕೆ ಬರದ್ದಲ್ಲಿ ತರಿಸಿ ಕೊಡಲಾಗುವದು. ಇದು ದೂರ ದೇಶದಿಂದ ಬರಬೇಕಾದ್ದರಿಂದ ಮುಂಚೆಯೆ ಬರಕೊಳ್ಳುವದು ಅವಶ್ಯವಾಗಿರುತ್ತದೆ.

ಪುತ್ತೂರು ತಾಲೂಕಿನಲ್ಲಿ ಕಬ್ಬಿನ ಸಾಗುವಳಿಗೆ ಒಳ್ಳೇ ಆಸ್ಪದ ಉಂಟು. ಈ ತಾಲೂಕಿನ ಊರಿನ ಕಬ್ಬು ಬಹು ಕೀಳು ಸ್ಥಿತಿಗೆ ಹೋಗಿರುತದೆ. ಕಳೆದ ವರುಷ ಪುತ್ತೂರಿನ ವಕೀಲರಾದ ಮ॥ ರಾ॥ ರಾ॥ ನೆಟ್ಟಾರು ನರಸಿಂಗರಾಯರು ಮತ್ತು ಮ॥ ರಾ॥ ರಾ॥ ಗಣಪತಿ ಐಯ್ಯರು ಮೋರಿಸಿಯಸ್ ಕಬ್ಬು ನಟ್ಟಿರುತ್ತಾರೆ. ಇದು ಬಹು ಒಳ್ಳೇ ಸ್ಥಿತಿಯಲ್ಲಿರುತ್ತದೆ. ಬೇಕಾದವರು ಈ ಕಬ್ಬಿನ ಪೈರನ್ನು ನೋಡಿ ಬೀಜಕ್ಕೆ ಅವರ ಕೂಡೆ ವಿಲೆವಾರಿ ಮಾಡತಕ್ಕದ್ದು. ಬೇಕಾದವರು ಮುಂದಾಗಿಯೆ ಇವರಿಗೆ ತಿಳಿಸತಕ್ಕದ್ದು ಬರುವ ಜನವರಿ ಫೇಬ್ರುವರಿಗೆ ಇವರು ಕಬ್ಬನ್ನು ಗಾಣ ಹಾಕುವರು. ಊರಿನ ಕಬ್ಬಿನ ಸಾಗುವಳಿಯ ಇಮ್ಮಡಿ ಮುನಾಫೆಯು ಇದರಲ್ಲಿ ದೊರೆಯುವದು. ಮೊರೀಸಿಯಸ್ ಕಬ್ಬು ಗಟ್ಟಿಯಾದ ಕಾರಣ ನರಿಗಳು ಮುಟ್ಟುವದಿಲ್ಲ ಮಂಗಳೂರು ಅತ್ತಕಡೆಯಿಂದ ಕಬ್ಬಿನ ಬೀಜವನ್ನು ತರಿಸುವಾಗ ಕ್ರಯವು ಹೆಚ್ಚಿಗೆ ತಗಲುವದು ಆದ್ದರಿಂದ ಮೊರೀಸಿಯಸ್ ಕಬ್ಬು ಸಾಗುವಳಿ ಮಾಡಬೇಕೆಂದಿರುವ ಎಲ್ಲಾ ರೈತರು ಮ॥ ರಾ॥ ರಾ॥ ನರಸಿಂಗರಾಯರ ಕೂಡೆ ಕಬ್ಬಿನ ಬೀಜಕ್ಕೆ ಆದಷ್ಟು ಬೇಗನೆ ವಿಲೆವಾರಿ ಮಾಡುವದು ಉತ್ತಮ ವಿಶೇಷ ಅನುಭವಬೇಕೆಂದಿರುವವರು ಈ ಕೆಳಗಿನ ವಿಳಾಸಕ್ಕೆ ಬರದ್ದಲ್ಲಿ ಕೂಡಲೆ ವಿಲೆವಾರಿ ಮಾಡಲಾದೀತು

K T Alwa,

Asstt. Manager,

Taliparamba Farm,

Taliparamba North Malabar

~~~~~~~

ಬೋಧಿನೀ.

ಸಂಪಾದಕರಿಂದ ಈ ಪತ್ರಿಕೆಯ ಪರವಾಗಿ ಕಳುಹಿಸೋಣಾದ ಬೋಧಿನಿ ಎಂಬ ಹೆಸರಿನ ವಿದ್ಯಾವಿಷಯಕವಾದ ನೂತನ ಮಾಸಪತ್ರಿಕೆಯನ್ನು ನಾನು ಈ ಮೊದಲೇ ಸ್ವೀಕರಿಸಿದ್ದರೂ ಅದನ್ನು ಕುರಿತು ಈ ಪತ್ರದಲ್ಲಿ ಇದು ವರೆಗೆ ಪ್ರಸ್ತಾಪಿಸದೆ ಇದ್ದ ವಿಳಂಬಕ್ಕಾಗಿ ಬೇಸರಪಡುತ್ತೇನೆ ಈ ಸಚಿತ್ರ ಮಾಸಪತ್ರಿಕೆಯು "ವಿದ್ಯೆ, ಪರಸ್ಪರ ಸಾಹಾಯ್ಯ, ಗ್ರಾಮೋನ್ನತಿ, ಸಾಹಿತ್ಯ, ಸ್ತ್ರೀಧರ್ಮ ಮೊದಲಾದ ವಿಷಯಗಳನ್ನು ಒಳಕೊಂಡಿದೆ. ಈ ಉದ್ದೇಶವನ್ನು ನಿದರ್ಶಿಸುವಂಥಾ ಹಲವು ಲೇಖಗಳು ಪತ್ರಿಕೆಯ ಮೊದಲನೇ ಎರಡು ಸಂಚಿಕೆಗಳಲ್ಲಿಯೂ ಇವೆ ಮುದ್ರಣಕಾರ್ಯವು ಬಹಳ ಅಂದವಾಗಿದೆ. ವಾರ್ಷಿಕ ಚಂದಾಹಣವಾದ ಎರಡು ರೂಪಾಯಿ ಮೊಬಲಗನ್ನು ಸಹಿಸಿಕೊಳ್ಳುವುದಕ್ಕೆ ಹೋಬಳಿ ಶಾಲಾ ಉಪಾಧ್ಯಾಯರಿಗೆ ಬಹುತರ ಕಷ್ಟವಾಗದು. ಉಪಾಧ್ಯಾಯರಿಗೂ ವಿದ್ಯಾರ್ಥಿಗಳಿಗೂ ಉಪಯುಕ್ತವಾಗುವ ಈ ಪತ್ರಿಕೆಯನ್ನು ಕನ್ನಡ ಪಾಠಶಾಲೆಗಳ ಆಡಳಿತೆದಾರರು ತರಿಸಿ ಇಟ್ಟುಕೊಳ್ಳುವುದು ಯೋಗ್ಯವೆಂದು ನಾನು ಹೇಳುತ್ತೇನೆ.

ನಾನು ಹಳ್ಳಿಯ ಶಾಲೆಯ ಉಪಾಧ್ಯಾಯರ ದೃಷ್ಟಿಯಿಂದ ಬೋಧಿನಿಯನ್ನು ಓದಿಕೊಂಡು ಒಂದೆರಡು ಸೂಚನೆಗಳನ್ನು ಇಲ್ಲಿ ಕೊಡಬೇಕಾಗಿದೆ ವರ್ಣಯೋಜನವೂ ಅಕ್ಷರಸ್ವಾರಸ್ಯವೂ ಹೇಗೂ ಇರಲಿ. ವಿಷಯಗಳನ್ನು ಹಳ್ಳಿಯ ಬಡ ಮೇಸ್ತರುಗಳು ನಿರಾಯಾಸವಾಗಿ ತಿಳಿದುಕೊಳ್ಳುವಷ್ಟು ಸುಲಭವಾಗಿಯೂ, ಸುಬೋಧವಾಗಿಯೂ ಇರತಕ್ಕದ್ದು ಮೊದಲನೇ ಸಂಚಿಕೆಯ ಏಳನೇ ಪುಟದಲ್ಲಿ 'ಬೋಧಿನಿಯ ದ್ವಿತೀಯ ಭಾಗದಿಂದ ಆರೋಗ್ಯ ಪಾಠಗಳ ಟಿಪ್ಪಣಿಯನ್ನು ಕ್ರಮವಾಗಿ ಮುದ್ರಿಸುವೆವು' ಎಂದಿದೆ; ಆದರೆ ಎರಡನೇ ಭಾಗದಲ್ಲಿ ಈ ಆರೋಗ್ಯ ಪಾಠಗಳ ಟಿಪ್ಪಣಿಯೇ ಕಾಣುವುದಿಲ್ಲ. ಭಿನ್ನರಾಶಿಗಳ ಗುಣಾಕಾರವನ್ನು ವಿಶದೀಕರಿಸುವಾಗ ಇಂಗ್ಲಿಷ್ ಅಕ್ಷರಗಳನ್ನು ಯಾಕೆ ತರಬೇಕೆಂಬುದು ಗೊತ್ತಾಗುವುದಿಲ್ಲ $\frac{AEFD}{ABJH}=\frac{8}{2}$ ಇತ್ಯಾದಿ ಗ್ರ್ಯಾಫ್‌ಗಳನ್ನು ಓದುವಷ್ಟು ಸಾಮರ್ಥ್ಯವು ಈ ಜಿಲ್ಲೆಯ ಹಲವು ಮರಡಿ ಹಳ್ಳಿಯ ಉಪಾಧ್ಯಾಯರಲ್ಲಿ ಈ ವರೆಗೂ ಮೊಳೆಯಲಿಲ್ಲ.

$\frac{AEFD}{ABJH}=\frac{8}{2}=4$ ಕೋಣೆಗಳು ಇಲ್ಲಿ ಕೋಣೆಗಳು ಎಂಬ ಪದವು ತಪ್ಪಾಗಿ ಬಿದ್ದಿರಬಹುದು.

ಉಪನ್ಯಾಸಗಳು ನಿರರ್ಥಕವಾಗಿ ಹಾಸ್ಯಾತ್ಮಕವಾಗದಂತೆ ನೋಡಿಕೊಳ್ಳತಕ್ಕದ್ದು ದಶಮಾಂಶಗಳನ್ನು ಕುರಿತು ಬರೆಯುವಾಗ ಲೇಖಕರ ಲೇಖಣಿಯಿಂದ ಇಳಿದು ಬಂದ ಹಾಸ್ಯರಸಕ್ಕೂ, 'ರಂಗನ ಮಾನಸಿಕ ಏಕಾಗ್ರತೆ' ಎಂಬ ಲೇಖದ ಪ್ರಾರಂಭದಲ್ಲಿ ಹರಿಯುತ್ತಿರುವ ಹಾಸ್ಯರಸಕ್ಕೂ ಅಜಗಜಾಂತರವಿದೆ. "ಕನ್ನಡ ಭಾಷೆಯ ಸರಿಯಾದ ಪ್ರಯೋಗವನ್ನು ತಿಳಿಯುವುದರಿಂದ ಬೋಧಕರಿಗೆ ಯಾವ ಲಾಭ" ಉಂಟಾಗುತ್ತದೆ ಎಂಬುದನ್ನು ಆ ಲೇಖವನ್ನೇ ಓದಿ ಕಂಡು ತಿಳಿಯಬೇಕಲ್ಲದೆ ನಾನು ಅದನ್ನು ಕುರಿತು ಇಲ್ಲಿ ಹೆಚ್ಚು ಹೇಳಲಾರೆನು. ಬೋಧಿನಿ ಪತ್ರಿಕೆಯು ನಿಜವಾಗಿಯೂ ಬೋಧಪ್ರದವಾಗಿ ಚಿರಕಾಲ ಬಾಳಲಿ ಎಂಬುದೇ ನನ್ನ ಪ್ರಾರ್ಥನೆ. ಶಾಸ್ತ್ರಿ.

ಫ್ರೆಂಚು ಭಾಷೆಯು ಮತ್ತು ವಾಙ್ಮಯದ ಶ್ರೇಷ್ಠತೆ.

ಕಳೆದ ೩೦ನೇ ಆಗಸ್ಟು ಸೋಮವಾರ ದಿನ ಅಲಾಯೆನ್ಸ್ ಫ್ರಾಂಕೇಸ್ (Alliance Francaise) ಎಂಬ ಸಮಾಜದ ಮದ್ರಾಸು ಶಾಖೆಯ ಸಭೆ ಸೇರಿದಾಗ ಮದ್ರಾಸಿನ ಪ್ರಸಿದ್ಧ ವಕೀಲರಾದ ಮ| ರಾ| ಸಿ. ಪಿ. ರಾಮಸ್ವಾಮಿ ಅಯ್ಯರ್‌ರವರು ಮೇಲಣ ವಿಷಯವನ್ನು ಕುರಿತು ಉಪನ್ಯಸಿಸಿದರು. ಮಿ| ಜೆ. ಸಿ ಮೊಲೋನಿ ಐ. ಸಿ. ಎಸ್ ಯವರು ಅಧ್ಯಕ್ಷರಾಗಿದ್ದರು. ಉಪನ್ಯಾಸಕರು ಕಳೆದ ೧೫-೧೬ ವರ್ಷಗಳಿಂದ ಫ್ರೆಂಚು ವಾಙ್ಮಯವನ್ನು ಅಭ್ಯಸಿಸಿದವರಾದುದರಿಂದ ಅವರ ಅಭಿಪ್ರಾಯಗಳು ಸರ್ವಗ್ರಾಹ್ಯವಾಗದಿರವು ಮತ್ತು ನಮ್ಮ ಜನರಲ್ಲಿಯೂ ಇತರ ಪಾಶ್ಚಿಮಾತ್ಯ ಭಾಷೆಗಳನ್ನು ಕೂಡ ಕಲಿಯಬೇಕೆಂದೂ ಅವುಗಳೊಳಗೆ ತುಂಬಿರುವ ಸಾಹಿತ್ಯದ ಮಾಧುರ್ಯವನ್ನು ಸೇವಿಸಬೇಕೆಂದೂ ಕುತೂಹಲವುಂಟಾಗದಿರದೆಂದು ನಂಬುವೆವು. ಉಪನ್ಯಾಸದ ಮುಖ್ಯಾಂಶವು ಈ ಕೆಳಗೆ ಸಂಗ್ರಹಿಸಲ್ಪಟ್ಟಿದೆ.

"ಇಂಗ್ಲಿಷು ಭಾಷೆ ಮತ್ತು ವಾಙ್ಮಯಕ್ಕಿಂತ ಫ್ರೆಂಚು ಜನರ ಪ್ರಕೃತಿಯೂ (genius) ಫ್ರೆಂಚು ಭಾಷೆ ಮತ್ತು ಸಾಹಿತ್ಯದ ತತ್ವವೂ (spirit) ಭಾರತವರ್ಷದ ಜನರ ಮನೋಭಾವನೆಗಳಿಗೆ ಅಧಿಕ ಸಮೀಪವಾಗಿದೆ. ಫ್ರೆಂಚು ಭಾಷೆಯ ಅತ್ಯುತ್ಕೃಷ್ಟವಾದ ಗ್ರಂಥಗಳನ್ನು ಓದುತ್ತಿದ್ದಾಗ ನಾನು ಪರಭಾಷೆಯ ಗ್ರಂಥಗಳನ್ನು ಓದುತ್ತಿರುವೆನೆಂಬುದು ನನ್ನ ಮನಸ್ಸಿಗೆ ಹೊಳೆಯಲೇ ಇಲ್ಲವು. ಇಂಗ್ಲಿಷ್ ಕಾವ್ಯಗಳ ವಿಷಯವೇ ಬೇರೆ, ಭಾರತೀಯರ ಮನಸ್ಸುಗಳಲ್ಲಿ ಹುಗದಂಥ ಒಂದು ವಿಧವಾದ ಸ್ವೀಯತ್ವವು (Individuality) ಅವುಗಳಲ್ಲಿ ಪ್ರಬಲವಾಗಿದೆ. ಸಾಹಿತ್ಯ ವಿಚಾರದಲ್ಲಿ ಫ್ರೆಂಚು ಜನರ ಅಭಿಪ್ರಾಯಗಳು ಭಾರತೀಯರ ಅಭಿಪ್ರಾಯಗಳಂತೆಯೇ, ಕೇವಲ ಉದಾತ್ತವಾಗಿವೆ. ಭಾರತೀಯ ವಾಙ್ಮಯದಲ್ಲಿ ಹೇಗೋ ಫ್ರೆಂಚು ವಾಙ್ಮಯದಲ್ಲಿಯೂ ಹಾಗೆಯೇ ಒಂದು ವಿಧವಾದ ಕ್ರಮಬದ್ಧತೆಯೂ ಸರ್ವಾಂಗಶುದ್ಧಿಯೂ (symmetry) ಕಂಡುಬರುವುದು.

ನಿರ್ವಾಣ ಸಾಹಿತ್ಯದಲ್ಲಿ ಮಹಾಕವಿಗಳು ಕೆಲಕೆಲವು ವರ್ಗಗಳಾಗಿ ವಿಂಗಡಿಸಿ ಪ್ರತಿ ವರ್ಗಕ್ಕೂ ತಕ್ಕಂತೆ ಮೇರೆಗಡಿಗಳನ್ನು ಕಲ್ಪಿಸಿ ತಮ್ಮ ಮಹಾ ಕಾವ್ಯಗಳನ್ನು ಆ ಗಡಿಗಳನ್ನತಿಕ್ರಮಿಸದೆ ಬರೆಯುವ ಪದ್ಧತಿ ಇರುವುದಲ್ಲವೇ? ಇದೇ ಕ್ರಮವು ಫ್ರೆಂಚು ಕಾವ್ಯಗಳಲ್ಲಿಯೂ ಕಂಡುಬರುತ್ತಿದೆ. ಫ್ರೆಂಚು ಗ್ರಂಥಗಳು ಸಂಸ್ಕೃತದಂತೆಯೇ ಕೇವಲ ಕವಿಸಮಯ ಪ್ರಚುರಗಳಾಗಿವೆ. ಹಾಗೆಯೇ ಸಂಸ್ಕೃತದಲ್ಲಿರುವಂತೆ ಫ್ರೆಂಚು ಸಾಹಿತ್ಯದಲ್ಲಿಯೂ ಸಂಕ್ಷಿಪ್ತವಾದ ಸೂತ್ರಗಳೂ ನೀತಿವಾಕ್ಯಗಳೂ ವಿಶೇಷವಾಗಿ ಕಂಡುಬರುತ್ತಿವೆ. ಭರ್ತೃಹರಿಯ ಕಾವ್ಯದಲ್ಲಿ ಕಂಡುಬರುವಂಥ ಜ್ಞಾನದ ಮತ್ತು ಅನುಭವದ ಸಾರಸಂಗ್ರಹವು ಪ್ರಾಯಶಃ ಇಂಗ್ಲಿಷ್ ಸಾಹಿತ್ಯದಲ್ಲಿ ಇಲ್ಲವೇ ಇಲ್ಲವೆನ್ನಬಹುದು. ಕ್ರಮಬದ್ಧತೆ, ಆಕಾರ, ಆದರ್ಶಾನುಸರಣಗಳನ್ನು ಕಣ್ಣೆದಿರಲ್ಲಿಟ್ಟುಕೊಂಡು ಕವಿಯು ತನ್ನ ಕಾವ್ಯದ ಚೆಲುವನ್ನು ಪರಮೋನ್ನತಿಗೆ ಮುಟ್ಟಿಸಲು ಸಾಧ್ಯವಾಗಿ ಮಾಡಿತೋರಿಸಿದುದೇ ಫ್ರೆಂಚು ಸಾಹಿತ್ಯದ ದೆಸೆಯಿಂದ ಲೋಕದ ಯಾವತ್ತು ಸಾಹಿತ್ಯಗಳಿಗೆ ಉಂಟಾದ ಮಹೋಪಕಾರವೆನ್ನಬಹುದು. ಸರಳವೂ, ತೀವ್ರವೂ ಆದ ವಾಕ್ಯಗಳಿಂದ ಬರೆಯುವುದೂ, ಮಹೋನ್ನತವಾದ ವಿಷಯಗಳಲ್ಲಿ ಹೇಗೋ ಅತ್ಯಲ್ಪವಾದ ವಿಷಯಗಳಲ್ಲಿಯೂ ಹಾಗೆಯೇ ಸಾರವನ್ನು ಗ್ರಹಿಸಿ ವಿವೇಚಿಸುವುದೂ ಫ್ರೆಂಚ್ ಲೇಖಕರ ಗುಣವಿಶೇಷವಾಗಿದೆ. ಇದು ಪ್ರಾಚೀನ ಭಾರತೀಯ ಲೇಖಕರಲ್ಲಿಯೂ ಕಂಡುಬರುತ್ತಿದೆ.

ಕಳೆದ ೩೦-೪೦ ವರ್ಷಗಳಲ್ಲಿ ಬರೆಯಲಾದ ಇಂಗ್ಲಿಷ್ ಕಾವ್ಯಗಳಲ್ಲಿ ವಿಲ್ಲನ್ (Villon) ಎಂಬ ಫ್ರೆಂಚ್ ಕವಿಯ ಲೇಖನ ಪದ್ಧತಿಯು ತುಂಬ ಅನುಸರಿಸಲ್ಪಟ್ಟ ಹಾಗೆ ತೋರುತ್ತಿದೆ. ಆದರೂ ಬಹಳ ಇಂಗ್ಲಿಷ್ ಕಾವ್ಯಗಳು ಫ್ರೆಂಚ್ ಕಾವ್ಯಗಳ ಪ್ರತಿಷ್ಠೆಗೆ ಅಷ್ಟೊಂದು ಒಳಪಟ್ಟಿವೆಯೆಂದು ಹೇಳಬರುವಂತಿಲ್ಲ. ಪರಂತು, ನಾಟಕ ಕಥಾ ಲೇಖನ, ಪರಿಶೀಲನ (criticism) ಪತ್ರಿಕಾಲೇಖನ (journalism)ಗಳ ವಿಷಯದಲ್ಲಿ ಫ್ರೆಂಚರೇ ಇಂಗ್ಲಿಷರಿಗೆ ಯಾವತ್ಕಾಲವೂ ಆದರ್ಶಸ್ವರೂಪರಾಗಿ ನಿಂತಿರುವರು. ಗಲನೆಯ ಶತಮಾನದ ಇಂಗ್ಲಿಷ್ ನಾಟಕಗಳಲ್ಲಿ ಮೋಲಿಯರಿನ (moliere) ಪ್ರೇರಣಾಶಕ್ತಿಯು ಪ್ರಬಲವಾಗಿದೆ. ಹಾಗೆಯೇ ಯುರೋಪಿನಲ್ಲಿಯ ಉಪನ್ಯಾಸ ಲೇಖನವು (essay writing) ಫ್ರೆಂಚು ಸಾಹಿತ್ಯದಿಂದ ಚಿರೋಪಕೃತವಾಗಿದೆ. ಯಾವುದಕ್ಕೂ ಅಧಿಕವಾಗಿ ನಾವೆಲ್ ಎಂಬ ಕಲ್ಪನಾ ಕಥೆಯು ಹುಟ್ಟಿ ಈಗಳಿನ ಪ್ರವರ್ಧಮಾನ ದಶೆಗೆ ಬರುವುದಕ್ಕೆ ಕೇವಲ ಫ್ರೆಂಚರೇ ಕಾರಣಭೂತರಾಗಿರುವರು. ಇಂದಿನ ನಾವೆಲ್ ಲೇಖನ ಕಲೆಯು ಬೆಲ್ಜಾಕನ (balzac) ಮಾನಸ ಸಂತಾನವಾಗಿದೆ. ಸರಳವಾದ ವರ್ಣನೆಯನ್ನು ಮಾಡುವಲ್ಲಿ ದ್ಯೂಮಸ (Deumus) ಕವಿಯು ಅದ್ವಿತೀಯನು. ಪ್ರಪಂಚದ ಹಲವು ತತ್ವಗಳನ್ನು ಪರಿಶೀಲಿಸುವಲ್ಲಿ ಅಗ್ರಗಣ್ಯರಾದ ಪ್ರೊ| ಹಕ್ಸ್ಲೇ ಮತ್ತು ಮಿ| ಮಾರ್ಲೀ ಎಂಬ ಇಂಗ್ಲಿಷ್ ಲೇಖಕರ ಪರಿಶೀಲನ ಪದ್ಧತಿಯು ಫ್ರೆಂಚ್ ಲೇಖಕರ ಪದ್ಧತಿಯನ್ನೇ ಬಹಳ ಮಟ್ಟಿಗೆ ಅನುಸರಿಸಿಕೊಂಡಿದೆ. ಜ್ಞಾನದಿಂದಲೂ ಹಾಸ್ಯರಸದಿಂದಲೂ ತುಂಬಿ ತುಳುಕತಕ್ಕ ವಚನ ಶೈಲಿಯು ಫ್ರೆಂಚರಲ್ಲಿದ್ದಂತೆ ಬೇರೊಬ್ಬರಲ್ಲಿ ಕಂಡುಬರುವುದಿಲ್ಲ.

"ವೃತ್ತಪತ್ರಿಕೆಗಳ ವಿಷಯದಲ್ಲಿ ಫ್ರೆಂಚರಿಗೆ ಸಮಾನರಾದವರು ಬೇರೆ ಯಾರಾರೂ ಇಲ್ಲವೆಂದು ನಿರ್ಭಯವಾಗಿ ಹೇಳಬಹುದು. ಲೇಖನಗಳಲ್ಲಿ ಪರಿಶೋಧನೆ ಶಕ್ತಿಯು ತುಂಬಿಕೊಂಡಿರುವುದಾದರೂ ಶೈಲಿಯ ಲಾಲಿತ್ಯದಿಂದಲೂ ಗಮ್ಯತೆಯಿಂದಲೂ ಓದುವವರಿಗೆ ತಿಳಿಯಲು ಸುಲಭವಾಗಿರುವುದು. ಇದೇ ಜಾತಿಯ ಇಂಗ್ಲಿಷ್ ಲೇಖನಗಳಲ್ಲಿ ಪರಿಶೋಧಕನ ಜ್ಞಾನವು ಅಪರಿಮಿತವಾಗಿ ಸೇರಿಕೊಂಡು ಅವು ಸಾಮಾನ್ಯರಿಗೆ ಶೀಘ್ರಗಮ್ಯವಾಗಿರುವುದಿಲ್ಲ. ಇನ್ನು ಉತ್ಕೃಷ್ಟವಾದ ಫ್ರೆಂಚು ಗ್ರಂಥಗಳ ಶೈಲಿಗೂ ಫ್ರೆಂಚು ವರ್ತಮಾನ ಪತ್ರಿಕೆಗಳ ಶೈಲಿಗೂ ಕಿಂಚಿತ್ತಾದರೂ ಹೆಚ್ಚುಕಡಿಮೆ ಇರುವುದಿಲ್ಲ. ಈಗಳಿನ ಆಂಗ್ಲೇಯ ಪತ್ರಿಕೆಗಳ ರೀತಿಯು ಇದಕ್ಕೆ ಕೇವಲ ವಿಪರೀತವಾಗಿದೆ. ಹೀಗೆ ಇಂಗ್ಲಿಷ್ ವಾಙ್ಮಯದಲ್ಲಿಯೂ ಸ್ವತಂತ್ರವಾದ ಅನೇಕ ವಿಷಯಗಳಿರುವುವಾದರೂ ಕೆಲಕೆಲವು ವಿಷಯಗಳಲ್ಲಿ ಅದು ಫ್ರೆಂಚರ ಅಮೋಘವಾದ ಸಾಹಿತ್ಯದ ಮೂಲವಾಗಿ ತುಂಬಾ ಪ್ರಯೋಜನವನ್ನು ಪಡೆದಿದೆ"—ಎಂಬುದಾಗಿ ಹೇಳಿದರು.

ಸದಸ್ಯರೊಳಗೆ ಒಬ್ಬರಾದ ಶ್ರೀ| ಅನ್ನೀಬಿಸೆಂಟ್ ಅಮ್ಮನವರು ಮಾತನಾಡುತ್ತ ಫ್ರೆಂಚು ಲೇಖಕನು ಭಾವದ ಚಿತ್ರಕನಾಗಿರುವನೆಂದೂ, ಭಾವವು ಹೇಗೋ ಶಬ್ದರೂಪವೂ ಹಾಗೆಯೇ ನಿರ್ದುಷ್ಟವಾಗಿದ್ದರೇನೇ ವಿನಾ ಫ್ರೆಂಚು ಲೇಖಕರು ಗಣ್ಯರಾಗಿ ತಿಳಿಯಲ್ಪಡುವುದಿಲ್ಲವೆಂದೂ, ಈ ಗೌರವವು ಇಂಗ್ಲಿಷ್ ಗ್ರಂಥಕರ್ತೃಗಳಿಗೆ ಸಲ್ಲದಾಗಿ ತಾನು ಅಭಿಪ್ರಾಯಪಡುವೆನೆಂದೂ, ಇಂಗ್ಲಿಷ್ ಲೇಖಕರು ಶಬ್ದಗಳ ರೂಪಗಳನ್ನು ಲಕ್ಷಿಸುವುದಿಲ್ಲವೆಂದೂ, ಫ್ರೆಂಚು ಲೇಖಕರು ಪ್ರತಿ ಶಬ್ದವನ್ನೂ ಬಹು ಕುಶಲತೆಯಿಂದ ಪೋಣಿಸುವುದರಲ್ಲಿ ಗಮನವಿಡುವುದರಿಂದ "ಸರಳವಲ್ಲದುದು ಫ್ರೆಂಚು ಅಲ್ಲ"ವೆಂಬ ಗೌರವವು ಮಾತ್ರವೇ ಅಲ್ಲದೆ "ಆಕಾರದಲ್ಲಿ ಸುಂದರವಲ್ಲದುದು ಕೂಡಾ ಫ್ರೆಂಚು ಅಲ್ಲ"ವೆಂಬ ಕೀರ್ತಿಯು ಆ ಭಾಷೆಗೆ ಬಂದಿರುವುದೆಂದೂ, ಚಿಕ್ಕ ಕಥೆಗಳನ್ನು (Short stories) ಅತ್ಯುತ್ಕೃಷ್ಟವಾಗಿ ಬರೆಯುವ ಕಲೆಯು ಫ್ರೆಂಚರಲ್ಲಿ ಮಾತ್ರವೇ ಇರುವುದೆಂದೂ, ಫ್ರೆಂಚು ಸಾಹಿತ್ಯದ ಚೆಲುವನ್ನು ಸೇವಿಸಲು ಬಯಸುವವರು ಮೊತ್ತ ಮೊದಲು ವಾಲ್ಟೇರು ಕವಿಯ ಗ್ರಂಥಗಳನ್ನು (Voltaire) ಓದಬೇಕೆಂದೂ ಹೇಳಿದರು.

ಪತ್ರವ್ಯವಹಾರ.

ಪುತ್ತೂರು ಇನ್ಕಂಟೇಕ್ಸು ಜಪ್ತಿ.

ಅಯ್ಯಾ,

ಇದೇ ತಿಂಗಳ ತಾ. ೧೬ನೇ ಸ್ವದೇಶಾಭಿಮಾನಿಯಲ್ಲಿ "ಈ ವರುಷ ಇಲ್ಲಿ ಕೆಲವರಿಗೆ ಇನ್ಕಂಟೇಕ್ಸು ಹೊರಿಸುವುದರಲ್ಲಿ ಅನ್ಯಾಯವಾಗಿದೆಂಬದಾಗಿ ಟೇಕ್ಸಿನ ಹಣ ಕೊಡದೆ ತಗಾದಾ ಪತ್ರಮೂಲಕ ಜಪ್ತಿಗೆ ಒಂದಾಗ್ಯೆ ಸೊತ್ತುಗಳನ್ನು ತೋರಿಸಿದ ಮೇರೆಗೆ ಗ್ರಾಮಾಧಿಕಾರಿಗಳು ಸೊತ್ತುಗಳನ್ನು ಜಪ್ತಿಮಾಡಿಕೊಂಡು ಹೋಗಿರುವರು" ಎಂದುಂಟು. ತಗಾದಾ ಪತ್ರಮೂಲಕ ಜಪ್ತಿಗೆ ಗ್ರಾಮಾಧಿಕಾರಿಗಳು ಬಂದದ್ದೆಂಬುದು ನಿಜವೇ ಸರಿ. ಆದರೆ, ಸೊತ್ತುಗಳನ್ನು ಮ್ಹಾಲಿಕರು ತೋರಿಸಿಕೊಟ್ಟ ಮೇರೆಗೆ ಗ್ರಾಮಾಧಿಕಾರಿಗಳು ಜಪ್ತಿಮಾಡಿಕೊಂಡು ಹೋದರೆಂಬುದನ್ನು ಮಾತ್ರ ಒಪ್ಪತಕ್ಕದ್ದಲ್ಲ. ಇದ್ಯಾರೋ ಗ್ರಾಮಾಧಿಕಾರಿಗಳ ಮಿತ್ರರು ಗ್ರಾಮಾಧಿಕಾರಿಗಳು ಬಹಳ ಲೋಕಪ್ರಿಯರಾಗಿಯೂ ಲೋಕರಂಜಕರಾಗಿಯೂ ಇರುವರೆಂದು ತೋರಿಸುವುದಕ್ಕೆ ಬರೆದದ್ದಾಗಿರುತ್ತದೆ. ಗ್ರಾಮಾಧಿಕಾರಿಗಳು ಹಾಗೆಲ್ಲ ದಯಾದಾಕ್ಷಿಣ್ಯವುಳ್ಳವರಲ್ಲ. ಅವರು ತಾರತಮ್ಯವನ್ನು ತೋರಿಸದೆ ತಮಗೆ ಇಷ್ಟವಿದ್ದಂತೆ ಸೊತ್ತುಗಳನ್ನು ಜಪ್ತಿಮಾಡಿಕೊಂಡು ಹೋಗಿದ್ದಾರೆ. ಹೀಗಿರುವಲ್ಲಿ, ಸುಮ್ಮನೆ ಗ್ರಾಮಾಧಿಕಾರಿಗಳ ತರಫಿನಿಂದ ಅವರು ಬಹಳ ದಯಾಸಾಗರರೆಂದೂ, ತೋರಿಸಿಕೊಟ್ಟ ಸೊತ್ತುಗಳನ್ನೇ ಜಪ್ತಿಮಾಡಿದ್ದಾರೆಂದೂ ನಿರರ್ಥಕವಾದ ಮಾತುಗಳನ್ನಾಡಿದ್ದರೆ ಯಾರೂ ನಂಬಲಿಕ್ಕಿಲ್ಲ.

ಬಡ ಪ್ರಾಣಿ.

ಯುದ್ಧ ಸಮಾಚಾರ.

ಸಪ್ಟಂಬರ ತಾರೀಕು ೧೪ ೧೫.

ಆಕಾಶನಾವೆಗಳ ಮೂಲಕ ಸಂಯುಕ್ತ ಸೇನೆಯವರು ಶತ್ರು ಸೇನಾಸಿಬಿರಗಳ ಮೇಲೆ ಸಿಡಿಮದ್ದಿನ ತೋಟಿಗಳನ್ನು ಎಸೆದ ವೃತ್ತಾಂತವು ಈ ದಿನಗಳಲ್ಲಿ ಪಶ್ಚಿಮ ರಣರಂಗದಲ್ಲಿ ನಡೆದ ಯುದ್ಧ ಸಮಾಚಾರದಲ್ಲಿ ಮುಖ್ಯವಾಗಿರುವದು. ಅಂಗ್ಲಂಡದ ಪೂರ್ವ ಕರಾವಳಿಯ ಮೇಲೆ ಶತ್ರುಗಳ ಒಂದ ಜಫೆಲಿನ್ ನಾವೆಯು ಎಂದು ಕೆಲವು ಬೊಂಬಗಳನ್ನು ಹಾಕಿಹೋಗಿರುವುದು. ಈ ಬೊಂಬುಗಳ ಸಿಡಿತದಿಂದ ಹಾವಳಿಯೇನೂ ಉಂಟಾದದ್ದಿಲ್ಲ.

ಕಿಚ್ನರ್ ಪ್ರಭುಗಳು ಯುದ್ಧದ ಈ ವರೆಗಿನ ಫಲಾಫಲಗಳ ಕುರಿತು ಪಾರ್ಲಿಮೆಂಟಿನ ಪ್ರಭುಸದನದಲ್ಲಿ ಆಪ್ತನೆ ಕೊಡಿಸಿದ ಮಾತುಗಳಿಂದ ತೋರಿಬರುವ ಮುಖ್ಯ ಸಾರಾಂಶವೇನೆಂದರೆ — ಪಶ್ಚಿಮ ರಣರಂಗದಲ್ಲಿ ಸಂಯುಕ್ತ ಸೇನಾವ್ಯೂಹವು ಬಹಳವಾಗಿ ಮುಂದರಿಸದೆ ಇದ್ದರೂ ಬಹಳ ಜಾಗರೂಕತೆಯಿಂದಲೂ ಎಡೆಬಿಡದೆಯೂ ಶತ್ರುಗಳೊಡನೆ ವಿತ್ರರ ಸೇನೆಗಳು ಕಾದಾಡುತ್ತಲಿವೆ. ಇದರಿಂದ ರಣರಂಗಕ್ಕೆ ಹೋದ ಕೆಲವು ನವೀನ ಬ್ರಿಟಿಷ ಸೇನಾಂಗಗಳಿಗೆ ಕಾದಾಟಗಳ ಅನುಭವವನ್ನು ಮಾಡಿಕೊಳ್ಳಲು ಅನುಕೂಲವಾದದ್ದಲ್ಲದೆ ಈ ನವೀನ ಸೇನಾಂಗಗಳು ಬ್ರಿಟಿಷರ ಮುಖ್ಯ ಸೇನೆಯೊಡನೆ ಸೇರಿಕೊಂಡು ತಮ್ಮ ವ್ಯೂಹರಚನೆಯನ್ನು ೧೭ ಮೈಲುಗಳ ವಿಸ್ತೀರ್ಣಕ್ಕೆ ಮುಂದರಿಸಲು ಆಸ್ಪದ ದೊರಕಿತು. ಫ್ರೆಂಚರ ಸೇನೆಗಳು ಸಹ ಎರೆಸ್ ಮತ್ತು ಅಲ್‌ಸೆಸ್ ಪ್ರಾಂತ್ಯಗಳಲ್ಲಿ ಶತ್ರುಗಳಿಂದ ಮುಖ್ಯ ಮುಖ್ಯವಾದ ಕೆಲವು ಸೇನಾನೆಲೆಗಳನ್ನು ಪಡೆದಿರುವರು. ಪೂರ್ವರಣರಂಗದಲ್ಲಿ ರಶ್ಯಯನರ ಸೇನೆಯನ್ನು ಪೂರ್ಣವಾಗಿ ನಾಶಮಾಡಿದ ನಂತರ ಈ ಪ್ರಾಂತ್ಯಗಳಲ್ಲಿ ಒಂದಿಷ್ಟಾದರೂ ಯೋಚನೆಗೆ ಎಡೆ ಇಡದೆ ಇತರ ಪ್ರಾಂತ್ಯಗಳಲ್ಲಿ ಯುದ್ಧ ನಡೆಸಬೇಕೆಂಬ ಉದ್ದೇಶದಿಂದ ಮಿತಿಯಿಲ್ಲದ ಸೇನೆಯನ್ನು ಅನುಗೊಳಿಸಿ ಹೇರಳವಾದ ಯುದ್ಧ ಸಾಮಗ್ರಿಗಳನ್ನು ಸಂಗ್ರಹಿಸಿಕೊಂಡು ಶತ್ರುಗಳ ಸಂಗ್ರಾಮವನ್ನು ನಡಿಸಿದರು. ರುಶ್ಯಯನರು ತಮ್ಮ ಸೇನೆಯು ನಾಶವಾಗದಂತೆ ಯುಕ್ತಿಯಿಂದ ಹಿಂದಕ್ಕೆ ಸರಿರುವರು. ಜರ್ಮನರ ಸಾಹಸವು ಈ ಪ್ರಯತ್ನದಲ್ಲಿ ಕುಂದಿಹೋಗಿದೆಂಬುದು ಈಚೆಗೆ ಕಂಡುಬಂದ ಹಲವು ವಿದ್ಯಮಾನಗಳಿಂದ ಸ್ಪಷ್ಟವಾಗುತ್ತದೆ. ಈ ಸಂಗ್ರಾಮದ ಪ್ರಾರಂಭದಲ್ಲಿ ದಿನ ಒಂದಕ್ಕೆ ೫ ಮೈಲುಗಳ ಪ್ರಕಾರ ಮುಂದರಿಸಿ ಬರುತ್ತಿದ್ದ ಜರ್ಮನರ ಸೇನೆಗೆ ಈಗ ದಿನ ಒಂದಕ್ಕೆ ಒಂದು ಮೈಲು ಪ್ರಕಾರವಾದರೂ ಮುಂದರಿಸಲು ಶಕ್ತಿಯಿರದ ರುಶ್ಯಯನರ ಸೇನೆಯು ಬೆಂಬಲದಿಂದಲೂ, ವಿಶೇಷವಾದ ಯುದ್ಧ ಸಾಮಗ್ರಿಗಳಿಂದಲೂ ಪ್ರಕೃತ ಪುಷ್ಟಿಹೊಂದಿರುವುದು.

ಕಳೆದ ಒಂದು ವರುಷ ಕಾಲದಲ್ಲಿ ನಡೆದ ಯುದ್ಧದಲ್ಲಿ ಉಂಟಾದ ಬ್ರಿಟಿಷರ ಸೇನಾನಷ್ಟವು ಈರೀತಿಯಾಗಿದೆ. ಮೃತಪಟ್ಟವರು ಆಫೀಸರರು ೪,೯೬೫, ಸೇನಿಕರು ೭೦,೯೯೨. ಗಾಯಪಡದವರು — ಆಫೀಸರರು ೯,೯೭೨ ಸೇನಿಕರು ೨೪೧,೦೮೬. ಕಾಣೆಯಾದವರು — ಆಫೀಸರರು ೧,೫೦೧, ಸೇನಿಕರು ೫೩,೪೬೬.

ಪೂರ್ವರಣರಂಗದ ಗೆಲಿಸಿಯಾ ಪ್ರಾಂತ್ಯಗಳಲ್ಲಿ ರೊಸ್‌ಕೋಕಿ ಎಂಬ ಗ್ರಾಮದಿಂದ ರುಶ್ಯಯನರು ಶತ್ರುಗಳನ್ನು ಓಡಿಸಿಬಿಟ್ಟು ಸುಮಾರು ೩೦೦೦ ಸೇನಿಕರನ್ನು ಸೆರೆಹಿಡಿದ ರುಶ್ಯಯನರ ಜಯದ ವೃತ್ತಾಂತವು ಪೆಟ್ರೊಗ್ರೇಡಿನಲ್ಲಿ ಪ್ರಕಟವಾದ ಯುದ್ಧ ಸಮಾಚಾರದಲ್ಲಿರುವದು.

ಸಪ್ಟಂಬರ ತಾರೀಕು ೧೬, ೧೭.

ವಿಷಮಯ ವಾಯುವನ್ನೂ ಉರಿಯುತ್ತಿರುವ ದ್ರಾವಕಗಳನ್ನೂ ಉಪಯೋಗಿಸುವ ಜರ್ಮನರ ಸಾಧನವನ್ನು ಮುರಿದುಬಿಡುವ ಉಪಾಯವನ್ನು ಮಿತ್ರರು ಕಂಡುಹಿಡಿದಿರುವದರಿಂದ ಜರ್ಮನರ ಈ ಅಧಾರ್ಮಿಕ ವರ್ತನೆಯು ಸಂಯುಕ್ತ ಸೇನೆಯವರಲ್ಲಿ ಏನೂ ಅಂಜಿಕೆಯನ್ನುಂಟುಮಾಡದೆಂಬದಾಗಿ ಕಿಚ್ನರ್ ಪ್ರಭುಗಳ ಮಾತುಗಳಿಂದ ತೋರಿಬರುತ್ತದೆ.

ಅಮೇರಿಕದಿಂದ ಕೊಪ್ಪನ್ ಹೆಗನಿಗೆಂತ ಬರುತ್ತಿದ್ದ ಸರಕು ತುಂಬಿದ ನಾಲ್ಕು ಹಡಗುಗಳು ಶತ್ರುಗಳ ಬಗ್ಗೆ ಸಾಮಾಗ್ರಿಗಳನ್ನು ಒಯ್ಯುತ್ತಿರುವವೆಂತ ಕಂಡು ಬಂದದ್ದರಿಂದ ಈ ನಾಲ್ಕು ಹಡಗಗಳನ್ನು ಇವುಗಳಲ್ಲಿರುವ ಸಾಮಾಗ್ರಿಗಳೊಡನೆ ಬ್ರಿಟಿಷ ಅಧಿಕಾರಿಗಳು ಸ್ವಾಧೀನ ಮಾಡಿಕೊಂಡಿರುವರು. ಇದೇ ರೀತಿ ಇನ್ನು ಸಾಮಾಗ್ರಿಗಳು ತುಂಬಿರುವ ೩೮ ಹಡಗಗಳು ಬ್ರಿಟಿಷರಿಗೆ ಸಿಕ್ಕಿಯವೆ. ವಿಶೇಷ ಕ್ರಯಬಾಳುವ ಸಾಮಾಗ್ರಿಗಳು ಈ ಹಡಗಗಳಲ್ಲಿದ್ದವೆಂಬುದಾಗಿ ತಿಳಿದುಬರುತ್ತದೆ.

ಪಶ್ಚಿಮ ರಣರಂಗದಲ್ಲಿ ಶತ್ರುಗಳ ಮೂರು ಆಕಾಶನಾವೆಗಳನ್ನು ಬ್ರಿಟಿಷರು ಹೊಡೆದು ನಾಶಪಡಿಸಿರುವರು.

ಜರ್ಮನಿಯಲ್ಲಿ ಅರಳೆ ಕಾರ್ಖಾನೆಗಳಿಗೆ ಹತ್ತಿಯು ದೊರಕಲಾರದೆ ಹಲವು ಗಿರಣಿಗಳನ್ನು ಮುಚ್ಚಿರುವರು.

೧೭೦೦ ಜನ ಇಟೆಲಿಯನರನ್ನು ತುಂಬಿಕೊಂಡು ಅಮೇರಿಕದಿಂದ ಹೊರಟಿರುವ ನಾವೆಯನ್ನು ಜರ್ಮನರ ಒಳಸಂಚಿನಿಂದ ಯಾರೋ ಘಾತಕರು ಸುಟ್ಟುಬಿಡಲು ಪ್ರಯತ್ನಿಸಿದರು. ಆದರೆ ಈ ಕೆಟ್ಟ ಪ್ರಯತ್ನವು ನೆರವೇರಲಿಲ್ಲ.

ರುಮೇನಿಯವು ಜರ್ಮನರಿಗೆ ಜರ್ಮನರ ಸೇನೆಗಳನ್ನು ರುಮೇನಿಯದ ಮಾರ್ಗವಾಗಿ ಅತ್ತಿತ್ತ ಒಯ್ಯಲು ಬಿಡಬೇಕಲ್ಲದೆ ಅಲ್ಲಿಯ ಪವನಗಳ ಮೌಲ್ಯದ ಬೆಂಜಿನ್ ಮೊದಲಾದ ವಸ್ತುಗಳನ್ನು ಸಂಗ್ರಹಿಸಿಕೊಡಬೇಕೆಂಬದಾಗಿ ಜರ್ಮನರು ರುಮೇನಿಯವನ್ನು ಕೇಳುವರಾಗಿ ತಿಳಿದುಬರುತ್ತದೆ.

ಸಪ್ಟಂಬರ ತಾ ೧೮-೧೯.

ಯುದ್ಧವು ಪ್ರಾರಂಭವಾದ ದಿನದ ಇಷ್ಟರ ತನಕ ಬ್ರಿಟಿಷ ಸೇನೆಯ ಬಗ್ಗೆ ಮೂರು ಮಿಲಿಯ ಜನರು ಸೇರಿದವರು. ಪಶ್ಚಿಮ ರಣರಂಗದಲ್ಲಿ ತೋಫುಗಳ ಕಾಳಗವು ನಡಿಯುತ್ತಿದೆ ಎಂತ ಫ್ರೆಂಚರ ವರ್ತಮಾನ ಸಂಗ್ರಹದಲ್ಲಿದೆ. ಪೂರ್ವರಣರಂಗದಲ್ಲಿ ಶತ್ರುಗಳು ವಿಲ್ನಾದ ವಾಯುವ್ಯ ದಿಕ್ಕಿನಲ್ಲಿ ವಿಲಿಯಾ ನದಿಯನ್ನು ದಾಟಿರುವರು. ಪಿನ್ಸ್ಕ್ ಕಡೆಗಳಲ್ಲಿರುವ ರಶ್ಯಯನರು ಹಿಂದಕ್ಕೆ ಸರಿಯುತ್ತಿರುವರು. ಡಿರಾಂಜೆಯ ಹತ್ತಿರ ೧೧೦೦೦ ಜನ ಶತ್ರುಗಳ ಸೇನಿಕರನ್ನು ರಶ್ಯಯನರು ಸೆರೆಹಿಡಿದಿರುವರು.

ಸ್ಟೇಟ್ಸ್‌ಮನ್ ಎಂಬ ಪತ್ರಿಕೆಯಲ್ಲಿ ಈ ತಿಂಗಳ ೧೬ರ ಲಂಡನಿನ ಒಂದ ತಂತಿ ವರ್ತಮಾನವು ಪ್ರಕಟಿಸಲ್ಪಟ್ಟಿರುವುದು. ಪೆಟ್ರೊಗ್ರೇಡಿನ ಹತ್ತಿರ ಒಬ್ಬಾ ಎಂಬಲ್ಲಿದ ರುಶ್ಯಯನರ ಆಯುಧಶಾಲೆಯನ್ನು ಅಲ್ಲಿ ಕೆಲಸದಲ್ಲಿದ್ದ ಕ್ರಿಶ್ಚನ ಜರ್ಮನರ ಮುಖಾಂತರ ಸಿಡಿಮದ್ದಿನ ತೋಟಿಗಳಿಂದ ಯುದ್ಧ ಪ್ರಾರಂಭವಾದ ಕೂಡಲೆ ನಾಶಪಡಿಸಿದ್ದರಂತೆ. ನಿವಾನದಿಯ ತಳದಿಂದ ಸರಿಗೆಗಳನ್ನು ಯಾರಿಗೂ ತಿಳಿಯದಂತಿಟ್ಟು ಅವುಗಳ ಮೂಲಕ ತೋಟಿಗಳನ್ನು ಹಾರಿಸಿದರೆಂತ ಕೆಲವರು ಅನ್ನುವರು. ಈ ಘಾತದಿಂದ ರುಶ್ಯಯನರಿಗೆ ಯುದ್ಧ ಸಾಮಾಗ್ರಿಗಳ ಅಡಚಣೆಯು ಉಂಟಾಯಿತೆಂತಲೂ ಈ ಅಡಚಣೆಯನ್ನು ನಿವಾರಿಸುವ ಬಗ್ಗೆ ಫ್ರೆಂಚರೂ, ಬ್ರಿಟಿಷರೂ ರುಶ್ಯಯನರಿಗೆ ಬೇಕಾದ ಯುದ್ಧಸಾಮಾಗ್ರಿಗಳ ಸಂಗ್ರಹವನ್ನು ಕಳುಹಿಸಿಕೊಡಬೇಕಾಯಿತೆಂತಲೂ ಆದ್ದರಿಂದ ಫ್ರೆಂಚರೂ, ಬ್ರಿಟಿಷರೂ ಪ್ರಕೃತಕ್ಕೆ ಜರ್ಮನರನ್ನು ಒತ್ತಿಕೊಂಡು ಹಿಂದಕ್ಕೆ ಓಡಿಸುವ ಸಾಹಸವನ್ನು ಕೈಕೊಳ್ಳಲಿಲ್ಲವೆಂತಲೂ ವರ್ತಮಾನವಿರುವದು.

ಒಸ್ಟ್ರಿಯನರ ಸೇನೆಯು ಬೆಂಬಲಗಳಿಂದ ಬಲಹೊಂದಿ ಇಟಲಿಯನರ ಸೇನಾವ್ಯೂಹವನ್ನು ಮುರಿಯಲು ಪ್ರಯತ್ನಿಸಿತು. ಆದರೆ ಒಸ್ಟ್ರಿಯನರು ಈ ಕಾಳಗದಲ್ಲಿ ಪರಾಜಯಪಟ್ಟರು.

ತಾ ೧೯-೨೦.

ಬ್ಲೆಕ್‌ಸಿ' ಸಮುದ್ರದಲ್ಲಿ ರುಶ್ಯಯನ್ ಡಿಸ್ಟ್ರೊಯರ್ ನಾವೆಗಳು ತುರ್ಕರ ಯುದ್ಧಸಾಮಾಗ್ರಿಗಳನ್ನು ತುಂಬಿರುವ ನಾಲ್ಕು ಹಡಗಗಳನ್ನು ಮುಣಗಿಸಿ ಬಿಟ್ಟಿವೆ.

ಯುದ್ಧ ಪ್ರಾರಂಭವಾದ ನಂತರ ಜರ್ಮನರ ೨೦ ಜಲಾಂತರ್ಗಾಮಿ ನಾವೆಗಳು ನಾಶವಾಗಿ ಹೋದವೆಂತ ತಿಳಿದುಬರುತ್ತದೆ. ಯುದ್ಧ ಪ್ರಾರಂಭವಾದಾಗ ಜರ್ಮನರ ಕೂಡೆ ೧೧ ದೊಡ್ಡ ಮತ್ತು ೧೫ ಸಣ್ಣ ಜಲಾಂತರ್ಗಾಮಿ ನಾವೆಗಳಿದ್ದವು. ನಂತರ ೧೮ ದೊಡ್ಡ ಸಬ್ ಮೆರ್‍ನ್‌ಗಳನ್ನು ಜರ್ಮನರು ತಯ್ಯಾರಿಸಿದರು. ಇವುಗಳಲ್ಲಿ ಪ್ರಕೃತ ೧೬ ನಾವೆಗಳು ಮಾತ್ರ ಉಳಿದಿವೆ ಎಂಬದಾಗಿ ತೋರಿಬರುತ್ತದೆ.

ಪೂರ್ವರಣರಂಗದಲ್ಲಿ ಡಿರಾಂಜೊದಲ್ಲಿ ರುಶ್ಯಯನರು ಶತ್ರುಗಳನ್ನು ಪಟ್ಟಣದಿಂದ ಓಡಿಸಿ ಹಲವರನ್ನು ಸೆರೆಹಿಡಿದಿರತ್ತಾರೆ. ವಿಲ್ನಾಕಡೆಯಲ್ಲಿ ಕದನವು ಪ್ರಬಲವಾಗುತ್ತ ಬಂದಿರುವದು. ಶತ್ರುಗಳು ವಿಲ್ನಾಕೋಟೆಗೆ ಮುತ್ತಿಗೆ ಹಾಕುವ ಸಾಧನೆಯಲ್ಲಿರುವರು.

ಸಪ್ಟಂಬರ ತಾ ೨೧.

ಪೆಟ್ರೊಗ್ರೇಡಿನಲ್ಲಿ ಪ್ರಕಟವಾದ ಯುದ್ಧ ವೃತ್ತಾಂತದಿಂದ ವಿಲ್ನಾಕೋಟೆಯ ಗತಿಯು ಏನಾಗಿದೆಂಬುದು ತೋರಿಬರುವದಿಲ್ಲ. ದಕ್ಷಿಣ ಪ್ರಾಂತ್ಯಗಳಲ್ಲಿ ಗೆಲಿಸಿಯಾದಲ್ಲಿ ರುಶ್ಯಯನರು ಶತ್ರುಗಳನ್ನು ಸದೆಬಡಿಯುತ್ತಿದ್ದಾರೆ.

ಪಶ್ಚಿಮ ರಣರಂಗದಲ್ಲಿ ಫ್ರೆಂಚರು ತಮ್ಮ ತೋಫುಗಳ ಮೂಲಕವೂ ಬ್ರಿಟಿಷರು ತಮ್ಮ ನೌಕಾ ಸೇನೆಯ ಮೂಲಕ ಜರ್ಮನರು ಭದ್ರಪಡಿಸಿದ ಬೆಲ್ಜಿಯಮಿನ ಕರಾವಳಿಯನ್ನು ಮುತ್ತುತ್ತಿರುವರು.

ಉತ್ತರ ಹಿಂದೂಸ್ಥಾನ.

ಸ್ವರ್ಗಸ್ಥ ಗೋಖಲೆಯವರ ಸ್ಮಾರಕ ಫಂಡಿನವರು ಅಲ್ಲಾಹಾಬಾದಿನಿಂದ ಒಂದು ವಿಜ್ಞಾಪನೆಯನ್ನು ದೇಶದ ಎಲ್ಲಾ ಕಡೆಗಳಿಗೂ ಕಳುಹಿಸಿಕೊಟ್ಟಿರುವರು. ದಿಲ್ಲಿ ಪಟ್ಟಣದಲ್ಲಿ ಗೋಖಲೆಯವರ ಒಂದು ಪ್ರತಿಮೆಯನ್ನು ಸ್ಥಾಪಿಸಬೇಕೆಂದೂ, ಇವರಿಂದ ಸ್ಥಾಪಿತವಾದ ಭಾರತ ಸೇವಾ ಸಂಘದ ಪೋಷಣೆಯ ಬಗ್ಗೆ ಒಂದು ದ್ರವ್ಯನಿಧಿಯನ್ನು ಏರ್ಪಡಿಸಬೇಕೆಂತಲೂ ಈ ವಿಜ್ಞಾಪನೆಯಲ್ಲಿದೆ. ಈ ಬಗ್ಗೆ ರೂ ೭ ಲಕ್ಷ ಬೇಕೆಂತ ಅಂದಾಜು ಮಾಡಿರುತ್ತಾರೆ. ವೈಸರಾಯಿಗಳಾದ ಹಾರ್ಡಿಂಗ್ ಪ್ರಭುಗಳವರು ಈ ಬಗ್ಗೆ ರೂ ೨೦೦೦ವನ್ನು ಕೊಟ್ಟಿರುವರು.

ಗೋಮತಿ ನದಿಯಲ್ಲಿ ಒಂದ ನೆರೆಯು ಬಹಳ ಮೇಲ್ಗಡೆ ಇಳಿಯುತ್ತ ಬರುತ್ತಿದೆ. ಸರಕಾರದವರು ನೆರೆಯಿಂದ ಉಂಟಾದ ಅರಿಷ್ಟ ನಿವಾರಣಾರ್ಥವಾಗಿ ತತ್ಕಾಲಕ್ಕೆ ರೂ ೫೦೦೦ ಕೊಟ್ಟಿರುವರು. ಪ್ರಜೆಗಳೂ ಸಹ ಈ ಬಗ್ಗೆ ಚಂದಾಹಣವನ್ನು ಕೂಡಿಸುತ್ತಲಿದ್ದಾರೆ.

ಮುಂಬಯಿಯಲ್ಲಿ ಬರುವ ಡಿಸೆಂಬರ ತಿಂಗಳಲ್ಲಿ ಕೂಡುವ ಸಾಮಾಜಿಕ ಪರಿಷತ್ತಿನ ಅಧ್ಯಕ್ಷತೆಯನ್ನು ಪೂನೆಯಲ್ಲಿ ವಿಧವಾ ಗೃಹವನ್ನು ಸ್ಥಾಪಿಸಿದ ಪಂಡಿತ ಕರ್ವೆಯವರು ವಹಿಸಿಕೊಳ್ಳಲು ಸಮ್ಮತಿಸಿರುವರು.

ಬೆರಿಸಲಿನಲ್ಲಿ ಕೆಲವು ದರೋಡೆ ಕಳ್ಳರು ಒಂದು ಮನೆಯನ್ನು ಪ್ರವೇಶಿಸಿ ಬೇಕಾದ ಒಡವೆಗಳನ್ನು ಕದ್ದುಕೊಂಡ ನಂತರ ಇನ್ನೂ ಕೆಲವು ಪೆಟ್ಟಿಗೆಗಳ ಬಾಗಿಲುಗಳನ್ನು ಒಡೆದು ತೆಗಿಯುವಾಗ ಈ ಪೆಟ್ಟಿಗೆಗಳ ಪೈಕಿ ಒಂದರಲ್ಲಿದ್ದ ಮದ್ದಿನ ತೋಟಿಗಳು ಇತ್ಯಾದಿಗಳಿಗೆ ಬೆಂಕಿ ಬಿದ್ದು ಉಂಟಾದ ಸಿಡಿತದಿಂದ ಕಳ್ಳರಲ್ಲಿ ಮೂರು ಜನರು ಕೂಡಲೆ ಮೃತಪಟ್ಟರು. ಇನ್ನು ಕೆಲವರು ವಿಶೇಷ ಗಾಯ ಪಡೆದಿರುತ್ತಾರೆ.

ಸಿಲ್ಹಟ್ ಜಿಲ್ಲೆಯ ಸುನಾಮಗಂಜ್ ಗ್ರಾಮದಲ್ಲಿ ನಡೆದ ಭಯಂಕರವಾದ ಕೊಲೆಯ ವರ್ತಮಾನವು ಕಲ್ಕತ್ತೆಗೆ ಬಂದಿರುವದು. ಜಾಹಾಬಕ್ಷ್ ಮತ್ತು ಆತನ ಸಹೋದರಿ ಮೆರಿಯಮ್ ಬಿಬಿ ಎಂಬವರಿಬ್ಬರು ಕತ್ತಿಗಳನ್ನು ಹಿಡಕೊಂಡು ತಮ್ಮ ಸಹೋದರನ ಕೋಣೆಯನ್ನು ಪ್ರವೇಶಿಸಿ ಅಲ್ಲಿ ಮಲಗಿರುವ ಅವರ ತಾಯಿ, ಸಹೋದರನ ಹೆಂಡತಿ ಮತ್ತು ಒಬ್ಬ ಮಗ ಮೂರು ಜನ ಮಗಳಂದಿಯರ ಕುತ್ತಿಗೆಗಳನ್ನು ಕಡಿದುಬಿಟ್ಟಿರುವರು. ಯಾವ ಬಗ್ಗೆ ಈ ರೀತಿ ಇಷ್ಟು ಜನರನ್ನು ಕೊಂದರೆಂಬುದು ಇಷ್ಟರತನಕ ತಿಳಿದುಬಂದಿಲ್ಲ. ಪೋಲೀಸಿನವರು ಕೊಲೆಪಾತಕಿಗಳಿಬ್ಬರನ್ನೂ ಕೈದುಮಾಡಿರುತ್ತಾರೆ.

ಏಸಿಯಟಿಕ್ ಪೆಟ್ರೊಲಿಯಮ್ ಕಂಪೆನಿಯ ಮುಂಬಯಿಯಲ್ಲಿರುವ ಕೆರೆಸಿನ ಎಣ್ಣೆಯ ಕೋಳಕ್ಕೆ ಬೆಂಕಿ ಬಿದ್ದು ೩,೦೦೦೦೦ ಗೆಲನುಗಳಷ್ಟು ಎಣ್ಣೆಯು ಸುಟ್ಟುಹೋ

ಪ್ರಕಟಣೆ.

ಉಟಾಕಮಂಡ್, ತಾರೀಖು 27ನೇ ಆಗಸ್ಟು 1915ನೇ ಇಸವಿ.

ನಂ. 25 —

ಇಂಡಿಯಾ ಗವರ್ನಮೆಂಟಿನವರ ಕ್ಲುಪ್ತ ವಾಯಿದೆಗೆ ಸಂದಾಯವಾಗುವ ಸಾಲವು.

ಪೋಸ್ಟ್ ಆಫೀಸಿನ ಮುಖಾಂತರ ಜನರು ಚಂದಾದಾರರಾಗುವ ವಿಷಯವಾಗಿ ಏರ್ಪಟ್ಟ ಶರ್ತಗಳ ಕುರಿತು ಪ್ರಕಟಣೆ.

ಗವರ್ನಮೆಂಟಿನವರು ಈ ವರುಷದ ಸಾಲವನ್ನು ಒಂದು ಹೊಸ ವಿಧಾನದಲ್ಲಿ ಸೇಕಡಾ 4ರ ಬಡ್ಡಿಯಲ್ಲಿ ಎತ್ತುತ್ತಾರೆ ಅದು 1928ನೇ ಇಸವಿಯ ನವಂಬರ್ ತಿಂಗಳೊಳಗಾಗಿ ಸಂಪೂರ್ಣವಾಗಿ ಮರುಪಾವತಿ ಮಾಡಲ್ಪಡುವದು, ಪರಂತು ಗವರ್ನಮೆಂಟಿನವರಿಗೆ ಇಷ್ಟವಿದ್ದರೆ 1920ನೇ ಇಸವಿಯ ಅಕ್ಟೋಬರ್ ತಿಂಗಳ ತರುವಾಯ ಯಾವಕಾಲದಲ್ಲಾದರೂ ಪಾವತಿ ಮಾಡಲ್ಪಡಬಹುದು

2 ಕಲ್ಕತ್ತಾ, ಮದ್ರಾಸ್, ಬೊಂಬಾಯಿ ಮತ್ತು ಇತರ ದೊಡ್ಡ ಮಧ್ಯಸ್ಥಳಗಳಲ್ಲಿ ವಾಡಿಕೆಯಾದ ರೀತಿಯಲ್ಲಿ ದರಖಾಸ್ತುಗಳನ್ನು ಅಂಗೀಕರಿಸಿ 4½ ಕೋಟಿ ರೂಪಾಯಿ ಈ ಮೊದಲೇ ಎತ್ತಲ್ಪಟ್ಟಿರುವುದು, ಮತ್ತು ಇಷ್ಟರ ಮಟ್ಟಿಗೆ ಸದರೀ ಸಾಲವು ಈಗ ಬರ್ತಿಯಾಗಿದೆ ಆದರೆ ಅದು ವಿನಾ ಸಾಲವನ್ನು ಸಣ್ಣ ಮೊಬಲಗುಗಳಲ್ಲಿ ಕೊಡಲು ಇಷ್ಟವುಳ್ಳ ಜನರಿಗೆ, ಅವರು ಸೇವಿಂಗ್ಸ್ ಬ್ಯಾಂಕು ಡಿಪಾಜಿಟರರಾಗಿದ್ದರೂ ಅಲ್ಲದಿದ್ದರೂ, ಸೇವಿಂಗ್ಸ್ ಬ್ಯಾಂಕು ಕೆಲಸವನ್ನು ನಿರ್ವಹಿಸುವ ಅತ್ಯಂತ ಸಮೀಪದ ಪೋಸ್ಟ್ ಆಫೀಸಿನ ಮುಖಾಂತರ ಚಂದಾಕೊಡಲು ಒಂದು ವಿಶೇಷ ಸಂದರ್ಭವು ಕೊಡಲ್ಪಟ್ಟಿದೆ

ಹೇಗೆ ಚಂದಾದಾರರಾಗುವದೆಂಬುದು.

3 ಅಕ್ಟೋಬರ್ 30ನೇ ತಾರೀಖಿನವರೆಗೆ ಯಾವಕಾಲದಲ್ಲಾದರೂ ಟಪ್ಪಾಲ್ ಆಫೀಸಿನ ಮುಖಾಂತರ ಅರ್ಜಿಗಳನ್ನು ಮಾಡಬಹುದು

4 ಅರ್ಜಿಗಳು ನೂರು ರೂಪಾಯಿ ಯಾ ಅದರ ಅಪವರ್ತ್ಯಗಳ ಬಗ್ಗೆ (ಎಂದರೆ ರೂ 100, 200, 300 ಈ ಮೇರೆಗೆ) ಮಾಡಲ್ಪಡಬೇಕು ಮತ್ತು ಯಾವನೊಬ್ಬ ಅರ್ಜಿದಾರನ ಸಂಗತಿಯಲ್ಲಿ 100 ರೂಪಾಯಿಗಳಿಗೆ ಕಡಿಮೆಯಾಗಿ ಮತ್ತು 5,000 ರೂಪಾಯಿಗಳಿಗೆ ಮೀರಿ ಇರಕೂಡದು

ಷರಾ ಒಬ್ಬ ಅರ್ಜಿದಾರನು ಟಪ್ಪಾಲ್ ಆಫೀಸಿನ ಮುಖಾಂತರ ಈ ಮೊದಲೇ ಸೇಕಡಾ 3½ ದರದ ಬಡ್ಡಿಯುಳ್ಳ ಪ್ರಾಮಿಸರಿ ನೋಟುಗಳನ್ನು ಪಡೆದಿರುತ್ತಾನಾದರೂ 5,000 ರೂಪಾಯಿಗಳ ವರೆಗೆ ಹೊಸ ಸಾಲಕ್ಕೆ ಅರ್ಜಿಮಾಡಬಹುದು

5 ಅರ್ಜಿಮಾಡಲು ಅಪೇಕ್ಷಿಸುವ ಒಬ್ಬ ಮನುಷ್ಯನು ಇದರಡಿ ಕೊಟ್ಟಿರುವ ಫಾರ್ಮನ್ನು ಬರಾಯಿಸಬೇಕು, ಸದರೀ ಫಾರ್ಮನ್ನು ಸೇವಿಂಗ್ಸ್ ಬ್ಯಾಂಕು ಕೆಲಸವು ನಿರ್ವಹಿಸಲ್ಪಡುವ ಪ್ರತಿ ಒಂದು ಟಪ್ಪಾಲ್ ಆಫೀಸಿನಿಂದ ಸಹಾ ಪಡೆಯಬಹುದು ಆತನು ಎಷ್ಟು ಮೊಬಲಗಿಗೆ ಅರ್ಜಿಮಾಡುತ್ತಾನೋ ಆ ಪೂರಾ ಮೊಬಲಗನ್ನು ಆಗಲೇ ಪಾವತಿ ಮಾಡಬೇಕು ಆತನು ಒಬ್ಬ ಸೇವಿಂಗ್ಸ್ ಬ್ಯಾಂಕು ಡಿಪೋಜಿಟರಾಗಿದ್ದ ಪಕ್ಷದಲ್ಲಿ ಆತನು ತನ್ನ ಸೇವಿಂಗ್ಸ್ ಬ್ಯಾಂಕು ಲೆಕ್ಕದಲ್ಲಿರುವ ಮೊಬಲಗನ್ನು ಈ ಬಗ್ಗೆ ಉಪಯೋಗಿಸಬಹುದು, ಅಥವಾ ಆತನು ಹಣವನ್ನು ರೊಕ್ಕವಾಗಿಯೂ ಕೊಡಬಹುದು ಅರ್ಜಿದಾರನು ಟಪ್ಪಾಲ್ ಆಫೀಸಿಗೆ ಸ್ವತಃ ಹೋಗಬಹುದು ಅಥವಾ ಒಬ್ಬ ನೌಕರನನ್ನು ಕಳುಹಿಸಲೂ ಬಹುದು ಪಾವತಿ ಮಾಡಲ್ಪಟ್ಟ ಯಾವತ್ತೂ ಮೊಬಲಗುಗಳಿಗೆ ರಸೀದು ಕೊಡಲ್ಪಡುವುದು

6 ಅರ್ಜಿದಾರನ ಪಾವತಿಮಾಡುವ ಪ್ರತಿ 100 ರೂಪಾಯಿಗಳ ಬಗ್ಗೆ ಅಷ್ಟು ಮೊಬಲಗಿನ ಗವರ್ನಮೆಂಟ್ ಪ್ರಾಮಿಸರಿ ನೋಟುಗಳು ಆತನಿಗೆ ಕೊಡಲ್ಪಡುವುವು.

ಪ್ರಾಮಿಸರಿ ನೋಟುಗಳ ತಾಬೆ

7 ನೋಟುಗಳನ್ನು ಅರ್ಜಿದಾರನು ತನ್ನ ಸ್ವಂತ ತಾಬೆಯಲ್ಲಿ ಇಟ್ಟುಕೊಳ್ಳಬಹುದು ಅಥವಾ ಆತನಿಗೆ ಇಷ್ಟವಿದ್ದರೆ ಆತನ ಬಗ್ಗಾಗಿ ಅವು ಪೋಸ್ಟ್ ಆಫೀಸ್ ಅಧಿಕಾರಿಗಳ ತಾಬೆಯಲ್ಲಿ ಇಡಲ್ಪಡಬಹುದು ಯಾವ ರೀತಿಯು ತನಗೆ ಇಷ್ಟವೆಂಬುದನ್ನು ಆತನು ಅರ್ಜಿಯ ಫಾರ್ಮನ್ನು ಬರಾಯಿಸುವಾಗಲೇ ಅದರಲ್ಲಿ ನಮೂದಿಸತಕ್ಕದ್ದು ಆತನು ನೋಟುಗಳನ್ನು ತಾನೇ ಇಟ್ಟುಕೊಳ್ಳಲು ಅಪೇಕ್ಷಿಸುವದಾದರೆ ಅವು ಬಟವಾಡೆಗೆ ಸಿದ್ಧವಾದಾಗ ಆ ಕುರಿತು ಪೋಸ್ಟ್ ಆಫೀಸಿನವರು ಆತನಿಗೆ ತಿಳಿಯಪಡಿಸುವರು, ಮತ್ತು ಆತನು ಸ್ವತಃ ಹಾಜರಾದಲ್ಲಿ ಅವು ಆತನಿಗೆ ಕೊಡಲ್ಪಡುವವು ಅವುಗಳನ್ನು ಟಪ್ಪಾಲ್ ಆಫೀಸಿನಲ್ಲಿಯೇ ಇಡಲು ಆತನು ನಿರ್ಣಯಿಸುವ ಪಕ್ಷದಲ್ಲಿ ಆತನು ಪುನಃ ಸ್ವತಃ ಹಾಜರಾಗಬೇಕೆಂದಿಲ್ಲ, ಆದರೆ ಟಪ್ಪಾಲ್ ಆಫೀಸಿನವರೇ ಅವು ತಲ್ಪಿರುತ್ತವೆ—ವ ಅವು ಆತನ ಬಗ್ಗಾಗಿ ತಾಬೆಯಲ್ಲಿಟ್ಟುಕೊಳ್ಳಲ್ಪಟ್ಟಿವೆ ಎಂಬುದನ್ನು ಕುರಿತು ಒಂದು ಸಮಾಚಾರ ಪತ್ರವನ್ನು ಸಕಾಲದಲ್ಲಿ ಆತನಿಗೆ ಕಳುಹಿಸಿಕೊಡುವರು ಸದರೀ ನೋಟುಗಳನ್ನು ತಾನೇ ಇಟ್ಟುಕೊಳ್ಳಲು ಆತನು ಮುಂದೆ ಯಾವಾಗಲಾದರೂ ಅಪೇಕ್ಷಿಸುವುದಾದರೆ ಆಗ ಅವು ಆತನ ವಶಕ್ಕೆ ಕೊಡಲ್ಪಡುವವು

ಬಡ್ಡಿಯನ್ನು ಪಾವತಿಮಾಡೋಣ.

8 ಸಾಲಿಯಾನಾ ಸೇಕಡಾ 4ರ ದರದ ಬಡ್ಡಿಯು ಅರ್ಧ ವರ್ಷಕೊಮ್ಮೆ ಪಾವತಿ ಮಾಡಲ್ಪಡುವದು. ಎಂದರೆ ಪ್ರತಿ ವರ್ಷದ ಮೇ 31ನೇ ತಾರೀಖಿಗೆ ಸೇಕಡಾ 2ರಂತೆಯೂ ನವಂಬರ್ 30ನೇ ತಾರೀಖಿಗೆ ಸೇಕಡಾ 2ರಂತೆಯೂ ಸಲಾಯಿಸಲ್ಪಡುವದು ಅರ್ಜಿಯ ತಾರೀಖಿನಿಂದ ಬರುವ ನವಂಬರ್ 30ನೇ ತಾರೀಖಿನ ವರೆಗಿನ ಭಿನ್ನಾಂಶದ ಬಗ್ಗ ಬಡ್ಡಿಯು ಪ್ರಾಮಿಸರಿ ನೋಟುಗಳನ್ನು ಅರ್ಜಿದಾರನು ಸ್ವತಃ ಇಟ್ಟುಕೊಳ್ಳುವದಾದರೆ ಅವುಗಳನ್ನು ಬಟವಾಡೆಮಾಡುವ ಕಾಲದಲ್ಲಿ ನಗದಾಗಿ ಕೊಡಲ್ಪಡುವದು, ಅಥವಾ ಆತನು ನೋಟುಗಳನ್ನು ಪೋಸ್ಟ್ ಆಫೀಸ್ ಅಧಿಕಾರಿಗಳ ತಾಬೆಯಲ್ಲಿಯೇ ಇಡುವದಾದರೆ ಮುಂದಿನ ಕಲಮಿನಲ್ಲಿ ನಮೂದಿಸಿರುವ ಸೇವಿಂಗ್ಸ್ ಬ್ಯಾಂಕು ಲೆಕ್ಕದಲ್ಲಿ ಆತನ ಬಗ್ಗೆ ಜಮಾ ದಾಖಲುಮಾಡಲ್ಪಡುವದು

9. ಅರ್ಜಿದಾರನು ತನ್ನ ಪ್ರಾಮಿಸರಿ ನೋಟುಗಳನ್ನು ಪೋಸ್ಟ್ ಆಫೀಸ್ ಅಧಿಕಾರಿಗಳ ತಾಬೆಯಲ್ಲಿಯೇ ಇಡಲು ನಿರ್ಣಯಿಸಿದ ಪಕ್ಷದಲ್ಲಿ ಪೋಸ್ಟ್ ಆಫೀಸ್ ಅಧಿಕಾರಿಗಳು ಪ್ರತಿ ಅರ್ಧ ವರ್ಷಕೊಮ್ಮೆ ಆತನ ಬಗ್ಗಾಗಿ ಬಡ್ಡಿಯನ್ನು ಪಡಕೊಂಡು ಈ ಬಗ್ಗಾಗಿ ಆತನ ಹೆಸರಲ್ಲಿ ಇಡಲ್ಪಡುವ ಒಂದು ಸೇವಿಂಗ್ಸ್ ಬ್ಯಾಂಕು ಲೆಕ್ಕದಲ್ಲಿ ಜಮಾ ದಾಖಲ್ ಮಾಡುವರು. ಇದಲ್ಲದೆ ಈ ಮೇರೆಗೆ ಬಡ್ಡಿಯನ್ನು ಪಡೆದುಕೊಂಡಾಗಲೆಲ್ಲಾ ಪೋಸ್ಟ್ ಆಫೀಸಿನವರು ಆಯಾಕಾಲದಲ್ಲಿ ಆತನಿಗೆ ಆ ಕುರಿತು ತಿಳಿಯಪಡಿಸುವರು. ಈ ಕೆಲಸದ ಬಗ್ಗೆ ಯಾವ ಫೀಸೂ ಹೊರಿಸಲ್ಪಡಲಿಕ್ಕಿಲ್ಲ ಮತ್ತು, ಅರ್ಧ ವರ್ಷದ ಬಡ್ಡಿಯ ಮೊಬಲಗನ್ನು ಪಾವತಿಮಾಡುವಾಗ ಇನ್‌ಕಮ್‌ಟ್ಯಾಕ್ಸು ಯಾವದೂ ಅದರಿಂದ ವಜಾಮಾಡಲ್ಪಡಲಿಕ್ಕಿಲ್ಲ.

ಆತನು ಪ್ರಾಮಿಸರಿ ನೋಟುಗಳನ್ನು ಸ್ವತಃ ಇಟ್ಟುಕೊಳ್ಳುತ್ತಾನಾದರೆ ಅರ್ಧ ವರ್ಷದ ಬಡ್ಡಿಯ ಮೊಬಲಗು ಪಾವತಿಮಾಡುವ ಕಾಲದಲ್ಲಿ ವಾಡಿಕೆಯಂತೆ ಬಡ್ಡಿಯ ಮೊಬಲಿಗಿನಿಂದ ಇನ್‌ಕಮ್‌ಟ್ಯಾಕ್ಸು ವಜಾಮಾಡಲ್ಪಡುವದು

ಪ್ರಾಮಿಸರಿ ನೋಟುಗಳನ್ನು ವಿಕ್ರಯಿಸೋಣ.

10. ಇದರಲ್ಲಿ ವಿವರಿಸೋಣಾದ ನಡವಳಿಕೆಯ ಮೇರೆಗೆ ಪೋಸ್ಟ್ ಆಫೀಸಿನ ಮುಖಾಂತರ ಕೊಂಡುಕೊಳ್ಳಲ್ಪಟ್ಟ ಈ ಹೊಸ ಸಾಲದ ಬಾಬತು ಪ್ರಾಮಿಸರಿ ನೋಟುಗಳನ್ನು ಹೊಂದಿರುವ ಒಬ್ಬ ಸೇವಿಂಗ್ಸ್ ಬ್ಯಾಂಕು ಡಿಪಾಜಿಟರನು ಯಾವ ಕಾಲದಲ್ಲಾದರೂ ಅವುಗಳನ್ನು ಯಾ ಅವುಗಳ ಯಾವದೊಂದು ಭಾಗವನ್ನು ವಿಕ್ರಯಿಸಲಿಕ್ಕೆ ಅಪೇಕ್ಷಿಸುತ್ತಾನಾದರೆ ಆತನ ಬಗ್ಗೆ ಪೋಸ್ಟ್ ಆಫೀಸಿನವರು ದಲಾಲಿ ಯಾ ಇತರ ಫೀಸುಗಳನ್ನು ಹೊರಿಸದೇನೆ ಅದರ ಕುರಿತು ವಿಲೇವಾರಿ ಮಾಡುವರು ಇದರ ವಿಷಯ ಪೂರ್ಣ ಮಾಹಿತಿಯನ್ನು ಪೋಸ್ಟ್ ಆಫೀಸಿನಿಂದ ಯಾವ ಕಾಲದಲ್ಲಾದರೂ ಹೊಂದಬಹುದು

ಅರ್ಜಿಯ ಫಾರ್ಮು.

ನಾದ ನಾನು 1915ನೇ ಇಸವಿಯ ಜುಲಾಯಿ 28ನೇ ತಾರೀಖಿನ ಇಂಡಿಯಾ ಗಜೇಟಿನ ವಿಶೇಷ (ಎಕ್ಸ್‌ಟ್ರಾರ್ಡಿನೆರಿ) ಸಂಚಿಕೆಯಾಗಿ ಪಾಯಿಷ್‌ಮಾಡಲ್ಪಟ್ಟ ಇಸ್ತಿಹಾರಿನಲ್ಲಿ ಪ್ರಕಟಿಸಲ್ಪಟ್ಟ ಕ್ಲಿಪ್ತವಾಯಿದೆಗೆ ಸಂದಾಯವಾಗುವ ಸೇಕಡಾ ನಾಲ್ಕರ ಬಡ್ಡಿಯ ಸಾಲದ ಬಗ್ಗೆ ರೂ   ನ್ನು ಚಂದಾ ಕೊಡಲು ಈ ಮೂಲಕ ಅಪೇಕ್ಷಿಸುತ್ತೇನೆ

ನಾನು ದರಖಾಸ್ತುಮಾಡಿದ ಸಾಲದ ಮೊಬಲಗು ಆಗಿರುವ ರೂ   ನ್ನು ನೂರಕ್ಕೆ ನೂರರಂತೆ ಪೂರಾ ಇದರೊಡನೆ ರೇವಣಿ ಇಟ್ಟಿರುತ್ತೇನೆ.

ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕಿನಲ್ಲಿ ನನ್ನ ಲೆಕ್ಕದಲ್ಲಿ ಜಮಾ ಇರುವ ಮೊಬಲಗಿನ ಪೈಕಿ ನೂರಕ್ಕೆ ನೂರರಂತೆ ನಾನು ದರಖಾಸ್ತುಮಾಡಿದ ಸಾಲದ ಮೊಬಲಗಿಗೆ ಸರಿಯಾಗಿರುವ ರೂ   ನ್ನು ಈ ಬಗ್ಗಾಗಿ ಉಪಯೋಗಿಸಿಕೊಳ್ಳಬಹುದಾಗಿ ನಾನು ಅಪೇಕ್ಷಿಸುತ್ತೇನೆ

ನೂರಕ್ಕೆ ನೂರರಂತೆ ನಾನು ದರಖಾಸ್ತುಮಾಡಿದ ಸಾಲದ ಮೊಬಲಿಗಿನ ಪೈಕಿ ರೂ   ಈ ಮೂಲವಾಗಿ ರೇವಣಿ ಇಟ್ಟಿರುತ್ತೇನೆ; ಮತ್ತು ಉಳಿದ ಮೊಬಲಗು ಎಂದರೆ ರೂ.   ನ್ನು ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕಿನಲ್ಲಿ ನನ್ನ ಲೆಕ್ಕದಲ್ಲಿ ಜಮೆ ಇರುವ ಮೊಬಲಗಿನಿಂದ ಉಪಯೋಗಿಸಿಕೊಳ್ಳಬೇಕಾಗಿ ಅಪೇಕ್ಷಿಸುತ್ತೇನೆ

(ಅನಾವಶ್ಯಕವಾದ ವಾಕ್ಯಗಳನ್ನು ಹೊಡೆದುಬಿಡತಕ್ಕದ್ದು.)

ನನ್ನಿಂದ ಅಂಗೀಕರಿಸಲ್ಪಟ್ಟ ಸಾಲದ ಮೊಬಲಗನ್ನು ನನ್ನ ಬಗ್ಗೆ ಪೋಸ್ಟ್ ಮತ್ತು ಟೆಲಿಗ್ರಾಫ್ ಇಲಾಖೆಯ ಅಕೌಂಟಾಂಟ್ ಜನರಲ್‌ರವರು ಇಟ್ಟುಕೊಳ್ಳಬಹುದಾಗಿ ಮತ್ತು ಆ ಬಾಬತು ಬಡ್ಡಿಯು ನನ್ನ ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕು ಲೆಕ್ಕದಲ್ಲಿ ಆಯಾ ವಾಯಿದೆಗೆ ಜಮಾ ದಾಖಲುಮಾಡಬೇಕಾಗಿ ನಾನು ಅಪೇಕ್ಷಿಸುತ್ತೇನೆ

ನನ್ನಿಂದ ಅಂಗೀಕರಿಸಲ್ಪಟ್ಟ ಮೊಬಲಗಿನ ಬಗ್ಗೆ ಈ ಕೆಳಗಿನ * ಮೌಲ್ಯಗಳ ಪ್ರಾಮಿಸರಿ ನೋಟುಗಳು ನನಗೆ ಕೊಡಲ್ಪಡಬೇಕಾಗಿ ಅಪೇಕ್ಷಿಸುತ್ತೇನೆ

(ಅನಾವಶ್ಯಕವಾದ ವಾಕ್ಯಗಳನ್ನು ಹೊಡೆದುಬಿಡತಕ್ಕದ್ದು.)

ಹೆಸರು

ವಿಳಾಸ

ತಾರೀಖು   1915

(ಅವಶ್ಯವಿದ್ದರೆ ಇಲ್ಲಿ ಕೊಟ್ಟಿರುವ ಫಾರ್ಮನ್ನೇ ಕತ್ತರಿಸಿ ಉಪಯೋಗಿಸಬಹುದು.)

ವಿ. ಬಟ್ಟೆರ್‌ವರ್ತ್,

ಚೀಫ್ ಸೆಕ್ರೆಟರಿ.

ಯಿತು. ಇದರಿಂದ ರೂ. ೧೫೦,೦೦೦ ನಷ್ಟವುಂಟಾಗ ಬಹುದೆಂತ ಅಂದಾಜು ಮಾಡೋಣಾಗಿರುವದು.

ಈ ತಿಂಗಳ ತಾ. ೨೮ರಲ್ಲಿ ಸಿಮ್ಲಾದಲ್ಲಿ ಇಂಡಿಯಾ ಸರಕಾರದವರ ನ್ಯಾಯವಿಧಾಯಕ ಸಭೆ ಕೂಡಿತು. ಹಿಂದೂ ಯೂನಿವರ್ಸಿಟಿಯ ಮಸೂದೆಯ ಕಮಿಟಿಯವರ ರಿಪ್ಪೋರ್ಟು ಸಭೆಯ ಮುಂದೆ ಇಡೋಣಾಗಿದೆ. ಇಂಪಿರಿಯಲ್ ಕನ್ಫರೆನ್ಸ್ ಎಂಬ ಸಾಮ್ರಾಜ್ಯದ ಪ್ರತಿನಿಧಿಗಳ ಸಭೆಯಲ್ಲಿ ಹಿಂದೂಸ್ಥಾನದ ಪ್ರತಿನಿಧಿಗಳನ್ನೂ ಸಹ ಸೇರಿಸಿಕೊಳ್ಳಬೇಕೆಂಬುವ ಪ್ರಜಾ ಕಡೆಯ ನಿರ್ಣಯವನ್ನು ಸರಕಾರದ ಪರವಾಗಿ ವೈಸರಾಯಿ ಪ್ರಭುಗಳು ಅಂಗೀಕರಿಸಿಕೊಂಡಿರುವರು.

~~~~

ಪಬ್ಲಿಕ್ ಸರ್ವಿಸ್ ಕಮಿಶನಿನಲ್ಲಿ ತಮ್ಮ ಕೆಲಸವನ್ನು ಮುಗಿಸಿ ಬಹುಮಾನಪಟ್ಟ ಮದ್ರಾಸು ಹೈಕೋರ್ಟು ಜಡ್ಜರಾದ ಅಬ್ದುಲ್ ರಹಿಮ್ ಸಾಹೇಬರವರು ಪ್ರಕೃತ ಕಲ್ಕತ್ತೆಯಲ್ಲಿರುವರು. ಬಂಗಾಳದ ಗವರ್ನರ್ ಕಾರ್ಮೈಕೆಲ್ ಪ್ರಭುಗಳಿಗೂ ಇವರಿಗೂ ಭೇಟಿಯಾಯಿತು. ಮದ್ರಾಸಿಗೆ ಇವರು ತೆರಳಿರುವರೆಂತಲೂ ಇದೇ ತಿಂಗಳ ತಾ. ೨೭ರಲ್ಲಿ ಮದ್ರಾಸು ಹೈಕೋರ್ಟಿನಲ್ಲಿ ತಮ್ಮ ಪದವಿಯನ್ನು ವಹಿಸಿಕೊಳ್ಳುವರಾಗಿಯೂ ತಿಳಿಯುತ್ತೇವೆ.

~~~~

ದಕ್ಷಿಣ ಹಿಂದೂಸ್ಥಾನ

~~~~

ಬೆಂಗಳೂರಿನಲ್ಲಿ ಪ್ರಕಟವಾಗುತ್ತಿರುವ ಶೈಲಿಪೋಸ್ಟ್ ಎಂಬ ಪತ್ರದ ಮುದ್ರಣವನ್ನು ಪುನಹ ನಿಲ್ಲಿಸಬೇಕಾಗಿ ಬಂದಿದೆ.

~~~~

ಮದ್ರಾಸು ಗವರ್ನರ ದೊರೆಗಳವರು ಬರುವ ತಿಂಗಳ ತಾ. ೧೧-೧೨ರಲ್ಲಿ ಉದಕಮಂಡಲದಿಂದ ಪೊನ್ನೂರಿಗೆ ಬಂದು ಅಲ್ಲಿ ಪೊಳ್ಳಾಚಿ ಪೊನನೂರು ರೈಲ್ವೆ ಮಾರ್ಗದ ಮುಹೂರ್ತ ಸಮಾರಂಭವನ್ನು ನೆರವೇರಿಸಿಕೊಡುವರು.

~~~~

ಕಲ್ಲಿಕೋಟೆಯ ಮುನ್ಸಿಪಲ್ ಚೇಯರ್ಮೇನರಾಗಿದ್ದ ರಾ! ಬ. ಕೃಷ್ಣನ್‌ರವರು ಜ್ವರ ಬಾಧೆಯಿಂದ ಈ ತಿಂಗಳ ತಾ. ೧೯ನೇ ರಾತ್ರಿ ಮೃತಪಟ್ಟರೆಂಬದಾಗಿ ತಿಳಿಸಲು ವಿಷಾದಪಡುತ್ತೇವೆ.

~~~~

ಸಂಯುಕ್ತ ಗೌಡಸಾರಸ್ವತ ಸಭಾ, ಮದ್ರಾಸು.

ಈ ದಿನವೇ ಮದ್ರಾಸಿನಿಂದ ನಮಗೆ ಬಂದಿರುವ ಮದ್ರಾಸಿನ ಸಂಯುಕ್ತ ಗೌಡಸಾರಸ್ವತ ಸಭೆಯ ವೃತ್ತಾಂತವನ್ನು ಈ ಸಂಚಿಕೆಯ ಪತ್ರವ್ಯವಹಾರ ಭಾಗದಲ್ಲಿ ಸ್ಥಳವಿಲ್ಲದ್ದರಿಂದ ಈ ಕೆಳಗೆ ಪ್ರಕಟಿಸಿರುತ್ತೇವೆ:—

ಇದೇ ಸಪ್ಟಂಬರ ತಾ. ೧೯ನೇ ಭಾನುವಾರ ದಿವಸ ನಮ್ಮ ಸಭೆಯಲ್ಲಿ ಎಂದಿನಂತೆ ಸಭೆಯ ಎಲ್ಲಾ ಸಭಾಸದರಿಗೆ ಮತ್ತು ಸಭೆಯ ನಿರ್ಣಯದ ಪ್ರಕಾರ ಅವರ ಸ್ನೇಹಿತರಿಗೆ ಫಲಹಾರದ ಬಗ್ಗೆ ಎಂತ ಆಮಂತ್ರಣವಿತ್ತು. ಸಭೆಯ ಎಲ್ಲಾ ಕೆಲಸಗಳು ನಡಿಯುವ ಕಟ್ಟೋಣದಲ್ಲಿ ಫಲಹಾರದ ಬಗ್ಗೆ ಆಮಂತ್ರಿಸಲ್ಪಟ್ಟ ಗೃಹಸ್ಥರು ಕೂಡಿಬಂದು ಫಲಹಾರವು ಯೋಗ್ಯರೀತಿಯಿಂದ ನಡಿಯಿತು. ಆ ದಿನ ಸಭೆ ಕೂಡಿದ ಗೃಹಸ್ಥರಲ್ಲಿ ಮಂಗಳೂರಿಂದ ಬಂದ ಒಬ್ಬ ಗೃಹಸ್ಥರು ಹಾಜರಿದ್ದರು. ಅವರು ಫಲಹಾರದ ನಂತರ, ನಮ್ಮ ಜಾತಿಯವರು ಬೇರೆ ಬೇರೆ ಊರುಗಳಿಂದ ಸಂಸ್ಥಾನದ ಮುಖ್ಯ ಪಟ್ಟಣವಾದ ಈ ಮದ್ರಾಸಿಗೆ ಬಂದ-ವೇಳ್ಯ ಇಂಥಾ ಜನ ಸಂಪತ್ತು ಇರುವ ಈ ಊರಲ್ಲಿ ಬಂದವನಿಗೆ ಏನಾದರೂ ಆಶ್ರಯವು ದೊರಕುವ ಹತ್ತು-ಸಮಸ್ತರಿಗೆ ಸಂಬಂಧವಾದ ಸ್ಥಳವು ಇರುವದಾದರೆ ಈಗ ಸಭೆಕೂಡಿದ ಸ್ಥಳ ವಿನಹಾ ಬೇರೆ ಸ್ಥಳವಿರುವದಿಲ್ಲವೆಂತಲೂ, ಈ ಸಭೆ ಮದ್ರಾಸ ಪಟ್ಟಣದಲ್ಲಿ ಉಂಟಾದಂದಿನಿಂದ ಆಯಾಯ ಕಾಲದಲ್ಲಿ ಜಾತಿಯವರು ಒಟ್ಟು ಕೂಡಲಿಕ್ಕೆ ಒಂದು ಸಂದರ್ಭ ದೊರಿಯಿತೆಂತಲೂ, ಜಾತಿಯವರ ಯೋಗಕ್ಷೇಮ ಮೊದಲಾದವುಗಳು ಒಬ್ಬರಿಂದ ಒಬ್ಬರು ತಿಳಕೊಳ್ಳಲಿಕ್ಕೆ ಅನುಕೂಲವಾಯಿತೆಂತಲೂ, ಈ ಸಭೆಯಿಂದ ಜಾತಿಯ ಅಭಿವೃದ್ಧಿಗೆ ಬೇಕಾಗುವ ಎಲ್ಲಾ ಕಾರ್ಯಗಳು ನೆರವೇರುವ ಸುಕಾಲ ಬೇಗನೆ ಒದಗುವದೆಂತಲೂ ತನ್ನ ಮಾತುಕಥೆಗಳಿಂದ ಕೂಡಿದ ಗೃಹಸ್ತರಿಗೆ ಸಮಾಧಾನವಾಗುವಂತೆ ತಿಳಿಸಿದರು. ಈ ಸಂಸ್ಥೆಯು ಊರ್ಜಿತ ಮತ್ತು ಶಾಶ್ವತ ನಡಿಯಬೇಕಾದರೆ ಜಾತಿಯ ಸರ್ವರೂ ತಮ್ಮ ತನುಮನಧನಗಳಿಂದ ಪ್ರಯತ್ನಿಸುವದು ತಮ್ಮ ಕರ್ತವ್ಯವೆಂದು ತನ್ನ ಸಂಭಾಷಣೆಗಳಿಂದ ಸಭಾಸದರಿಗೆ ದೃಢೀಕರಿಸಿದರು. ಕೂಡಿದ ಗೃಹಸ್ಥರು ಸಂಸ್ಥೆಯು ಊರ್ಜಿತವಾಗುವದಕ್ಕೆ ಏನು ಉಪಾಯಗಳು ಅಗತ್ಯವಾಗಿರುತ್ತವೆ ಎಂತ ಆಲೋಚಿಸಿದರು. ಮುಖ್ಯವಾಗಿ ದ್ರವ್ಯ ಸಹಾಯ ವಿನಹಾ ಯಾವ ಕಾರ್ಯಗಳೂ ಕೈಗೂಡುವ ಹಾಗಿಲ್ಲವೆಂಬದನ್ನು ಸರ್ವಸಮ್ಮತಿಯಿಂದ ಒಪ್ಪಿಕೊಂಡರು. ತತ್ಕಾಲಕ್ಕೆ ಸಭೆ ಕೂಡುವ ಕಟ್ಟೋಣವು ಬಾಡಿಗೆಗೆ ಪಡೆದ್ದಾಗಿರುತ್ತದೆ. ಸಂಸ್ಥೆಯು ಯೋಗ್ಯರೀತಿಯಿಂದ ನಡಿಸಲಿಕ್ಕೆ ಮತ್ತು ಸಭೆಯ ಉದ್ದೇಶಗಳು ಪ್ರಾಪ್ತವಾಗಲಿಕ್ಕೆ ಸ್ವಂತ ಕಟ್ಟೋಣ ಮತ್ತು ಸ್ಥಳವಿರಬೇಕೆಂಬುದನ್ನು ಎಲ್ಲರು ಅನುಮೋದಿಸಿದರು. ಆಗ ಮಾತ್ರ ಸಂಸ್ಥೆಯ ಪ್ರಯೋಜನವು ಊರು ಪರ ಊರುಗಳಿಂದ ಬರುವ ವಿದ್ಯಾರ್ಥಿಗಳು ಮೊದಲಾಗಿ ನಮ್ಮ ಜಾತಿಯ ಸರ್ವರಿಗೂ ಶಿಕ್ಕುವ ಹಾಗಿನ ಯುಕ್ತವಾದ ತಜವೀಜು ಇಡಲಿಕ್ಕೆ ಸಾಧ್ಯವಾಗುವದೆಂದು ನಿರ್ಣಯವಾಯಿತು. ಈ ಒಟ್ಟು ದ್ರವ್ಯಾನುಕೂಲವನ್ನು ಸಂಗ್ರಹಿಸುವ ಉಪಾಯಗಳು ಯಾವದೆಂದು ಆಲೋಚಿಸಲಾಯಿತು. ಬಾಡಿಗೆಗೆ ಪಡದಿರುವ ಈಗಿನ ಕಟ್ಟೋಣಕ್ಕಿಂತ ಸಣ್ಣ ಕಟ್ಟೋಣವು ನಮ್ಮ ಉದ್ದೇಶಗಳನ್ನು ಪೂರೈಸಲಿಕ್ಕೆ ಎಂದಿಗೂ ಅನುಕೂಲವಾಗಲಿಕ್ಕಿಲ್ಲ. ಈ ಕಟ್ಟೋಣದ ಬಾಡಿಗೆಯು ತಿಂಗಳಿಗೆ ೪೫೦ ರೂಪಾಯಿಗಳು ಇರುತ್ತದೆ. ಅಂದರೆ ಒಂದು ದಿನಕ್ಕೆ ಸುಮಾರು ಒಣೆಗಳು ೧೫ ಬಾಡಿಗೆ ಎಂತ ಎಣಿಸಬಹುದು. ಇಂಥಾ ಒಂದು ದಿನದ ಬಾಡಿಗೆ ಉತ್ಪನ್ನವಾಗಲಿಕ್ಕೆ ಮೂಲಧನವು ೧೫ ರೂಪಾಯಿಗಳು ಅಗತ್ಯ. ಈ ಪ್ರಕಾರ ಪ್ರತಿದಿನಕ್ಕೆ ೧೫ ರೂಪಾಯಿಗಳು ಎಣಿಸಿ ಒಂದು ವರ್ಷದ ಬಾಡಿಗೆ ಉತ್ಪನ್ನವಾಗಲಿಕ್ಕೆ ಕನಿಷ್ಟಪಕ್ಷಕ್ಕೆ ರೂ. ೫೪೭೫ ಬೇಕಾಗುವುದು. ಆಗ್ಯೆ ಒಂದು ಕಟ್ಟೋಣವನ್ನು ಕ್ರಯಕ್ಕೆ ದೊರಕಿಸಿಕೊಳ್ಳಲೂ ಬಹುದು ಯಾ ಹೊಸತಾಗಿ ಯೋಗ್ಯರೀತಿಯಿಂದ ಕಟ್ಟಿಸಲೂ ಬಹುದು. ಆ ವಿನಹಾ ನಾವು ಪ್ರಾರಂಭಿಸಿದ ಕಾರ್ಯವು ಕೈಗೂಡುವ ಹಾಗಿಲ್ಲ. ಆದ್ದರಿಂದ ಸಭೆಗೆ ಹಾಜರಿದ್ದ ಗೃಹಸ್ಥರು ತಮ್ಮ ಶಕ್ತ್ಯಾನುಸಾರ ಯುಕ್ತವಿರುವಷ್ಟು ದಿನಗಳ ಬಾಡಿಗೆ ಹಂಚಿಕೊಂಡು ಮೂಲಧನ ಶೇಖರಿಸಬೇಕೆಂದು ಮಾಡಿದ ಸೂಚನೆ ಪ್ರಕಾರ ಆಗಲೇ 62 ದಿನಗಳ ಬಾಡಿಗೆ ಹುಟ್ಟಿ ಬರಬಹುದಾದ ರೂಪಾಯಿ 930-0-0 ಜಮೆ ಆಯಿತು. ಇದೇ ರೀತಿಯಿಂದ ಸಭೆಯಲ್ಲಿ ಹಾಜರಿಲ್ಲದ ಮತ್ತು ಊರು ಪರವೂರುಗಳಲ್ಲಿರುವ ಸಂಭಾವಿತ ಗೃಹಸ್ಥರಿಂದ ದ್ರವ್ಯಸಹಾಯವನ್ನು ಪಡದು ನಮ್ಮ ಅಭ್ಯುದಯಕ್ಕೆ ಕಾರಣವಾದ ಈ ಸಂಸ್ಥೆಯು ಚಿರಸ್ಥಾಯಿಯಾಗುವಂತೆ ಪ್ರಯತ್ನಿಸುವ ನಮ್ಮ ಈ ಸತ್ಕಾರ್ಯವನ್ನು ದೇವರು ಸಫಲಗೊಳಿಸುವನು. ಮೇಲಿನಂತೆ ಬೇಕಾಗುವ ಪೂರಾ ನೊಬಲಗು ದೊರಕುವ ವರೆಗೆ ವಸೂಲು ಆಗುವ ಐವಜು ಬಡ್ಡಿಯಿಂದ ವೃದ್ಧಿಪಡಿಸಿ ಜಮೆ ಮಾಡಲಾಗುವದು. ನಂತರ ಜಮೆ ಆದ ಮೊಬಲಗು ತಕ್ಕ ವ್ಯವಸ್ಥೆಯಿಂದ ಸಂಸ್ಥೆಯ ಕಟ್ಟೋಣ ಮೊದಲಾದವುಗಳಿಗೆ ಖರ್ಚು ಮಾಡಲಾದೀತೆ ಎಂತ ನಿರ್ಣಯಿಸಿರುತ್ತದೆ. ಇಂತಿ ತಮ್ಮ ವಿಧೇಯ,

ಉಳ್ಳಾಲ ವಿಠಲರಾವ್,
ಸಕ್ರಟರಿ.

~~~~

ವಿವಿಧ ವಿಷಯಗಳು.

~~~~

ಸ್ತ್ರೀ ಚಿಹ್ನೆಯುಳ್ಳ ಗಂಡಸರು.

ಚೀನಾದೇಶದಲ್ಲಿ ವಿಚಿತ್ರವಾದೊಂದು ಜಾತಿಯವರಿರುವರು. ಇವರು ಆ ದೇಶದವರೆಂದು ನಿರೂಪಿಸುವುದಕ್ಕೆ ಸಾಧ್ಯವಿಲ್ಲ. ಚೀನಾದೇಶದವರು ಕೂಡ ಗುಂಪು ಗುಂಪಾಗಿ ಕೂಡಿ ಇವರನ್ನು ಆಶ್ಚರ್ಯದಿಂದ ನೋಡುತ್ತಿರುವರು. ಕಪ್ಪಾದ ದೇಹ, ಸೋಗೆಕಣ್ಣುಗಳು, ಚಪ್ಪಟೆಯಾದ ಮೂಗು, ಕುರುಚಾದ ಕೈಗಳು, ಉದ್ದವಾದ ಕಾಲುಗಳು ಉಳ್ಳವರು ಗಂಡಸರೆಂದೂ, ಚಂದವಾದ ಮೂಗು, ಕೆಂಪಾದ ದೇಹ, ಗುಂಡಾದ ಕಣ್ಣುಗಳು, ಉದ್ದವಾದ ಕೈಗಳು, ಆದರೆ ಗಿಡ್ಡಾದ ಕಾಲುಗಳು ಉಳ್ಳವರು ಹೆಂಗಸರೆಂದೂ ತಿಳಿದುಕೊಳ್ಳಲೇ ಬೇಕಲ್ಲದೆ, ಬಾಹ್ಯದೃಷ್ಟಿಗೆ ಇದಕ್ಕಿಂತ ಹೆಚ್ಚಿನ ಸ್ತ್ರೀಪುರುಷ ಭೇದವು ತೋರದು. ಹೆಂಗಸರಿಗೆ ಜಡೆಗಳಿರುವವು, ಗಂಡಸರಿಗೂ ಜಡೆಗಳಿರುವವು. ಸ್ತ್ರೀಯರಿಗೆ ಸ್ತನಗಳಿರುವಂತೆಯೇ ಗಂಡಸರಿಗೂ ಇರುವವು. ಶಿಶುಗಳು ತಮ್ಮ ತಾಯಿಂದಿಯರ ಸ್ತನ್ಯಪಾನ ಮಾಡುವಂತೆಯೇ ತಂದೆಗಳ ಹತ್ತಿರವೂ ಮೊಲೆಹಾಲು ಕುಡಿಯುವಂತೆ ಅಭಿನಯಿಸುವವು.

ಇವರಲ್ಲಿ ವ್ಯಭಿಚಾರ ದೋಷವಿಲ್ಲವಂತೆ—ಪ್ರತ್ಯಕ್ಷವಾಗಿ ತಮ್ಮ ಗಂಡಸರ ಮುಂದೆ ಪರಪುರುಷರ ತೊಡೆಗಳ ಮೇಲೆ ತಲೆಯನ್ನಿಟ್ಟು ಅನೇಕ ತಾಸುಗಳ ತನಕ ನಿದ್ದೆ ಮಾಡುವರಂತೆ.

ನಾಲ್ಕು ತಿಂಗಳಿಗೇನೇ ಮಕ್ಕಳು ಈ ಸ್ತ್ರೀಯರಿಗೆ ಹುಟ್ಟುವರಂತೆ! ಇದಕ್ಕಿಂತಲೂ ಹೆಚ್ಚಿನ ವಿಚಿತ್ರವಾವುದು? ಇವರ ಭಾಷೆಯು ಚೀನಾದವರಿಗೂ ತಿಳಿಯದು. ಬೆನ್ನ ಮೇಲೆ ಹೆಂಡಂದಿರನ್ನು ಹೊತ್ತುಕೊಂಡು ಹೋಗುವರು ಮೀನಿನ ವ್ಯಾಪಾರವನ್ನು ಮುಖ್ಯವಾಗಿ ಮಾಡುವರು ಇವರ ಸಂಖ್ಯೆಯು ಕ್ರಮಕ್ರಮವಾಗಿ ತಗ್ಗುತ್ತಲಿರುವುದು ಈ ಚೈನಾದೇಶದಲ್ಲಿ ಇವರ ಸಂಖ್ಯೆಯು ೩೦೦ಕ್ಕಿಂತ ಹೆಚ್ಚಾಗಿಲ್ಲ. ಇವರ ಹುಟ್ಟು, ಪೂರ್ವೋತ್ತರಗಳನ್ನು ವಿಚಾರಿಸುವುದಕ್ಕೆ ಉಪಾಯವು ಆರಿಗೂ ತಿಳಿಯದು—ಇವರ ಭಾಷೆ ಇತರರಿಗೆ ಬಾರದು. ಇನ್ನೊಬ್ಬರ ಮಾತ ಇವರಿಗೆ ತಿಳಿಯದು.

~~~~

ಮದುವೆಯಲ್ಲಿ ಆಳುವುದು.

~~~~

ಆಫ್ರಿಕಾ ಖಂಡದಲ್ಲಿ ಅನೇಕ ಮೂಢಾಚಾರಗಳಿರುವವು. ವಿಚಿತ್ರವಾದೊಂದು ಜಾತಿಯವರು ಅಲ್ಲಿ ಕೂಡ ಇರುವರು. ಅವರ ವಿವಾಹ ಪದ್ಧತಿಗಳು ಅತಿ ವಿನೋದಕರವಾಗಿರುವುವು. ಎರಡು ದಿನಗಳ ತನಕ ಮದುವೆಯು ಜರಗುವುದಂತೆ. ವಧುವು ವರನ ಮನೆಗೆ ಎರಡನೆಯ ದಿನ ಬಿಸಿಲುಕಾಯುತ್ತಿರುವಾಗ ಪರಿಮಧ್ಯಾಹ್ನದ ಹೊತ್ತಿನಲ್ಲಿ ಮಸಣದ ಕಡೆಯಿಂದ ಬರಬೇಕಂತೆ. ವಧುವು ಕಣ್ಣು ಕಾಣದಂತೆ ಬಟ್ಟೆಯನ್ನು ಕಟ್ಟಿಕೊಂಡು—ಬರಬೇಕು—ಮನೆಹೊಕ್ಕ ಕೂಡಲೇ ವರನು ನಾಚಿಕೆ

ಬಂದು ಅವಳನ್ನು ಮಲಗುವ ಕೋಣೆಗೆ ಕರಕೊಂಡು ಹೋಗುವನು. ಅಲ್ಲಿ ಎರಡು ತಾಸುಗಳ ತನಕ ಇದ್ದ ಮೇಲೆ ಮದುವಣಿಗನು ಹೊರಗೆ ಬರುವನು. ಒಂದುಗಳು ಕೋಣೆಯೊಳಕ್ಕೆ ಹೋಗಿ ಮದುವಣಗಿತ್ತಿಯನ್ನು ನೋಡಿ ಅಳುವರು. ವಧುವು ಅವರ ಕಣ್ಣೀರನ್ನು ತನ್ನ ಬಲಗಾಲಿನ ಹೆಬ್ಬೆರಳಿನಿಂದ ಒರಸುವಳು

ದಕ್ಷಿಣ ಕನ್ನಡ.

ಪುತ್ತೂರು: — ಪುತ್ತೂರಿನಲ್ಲಿ ಮೈಸೂರು ಅತ್ತಲಾಗಿನಿಂದ ಕಂದಹಾರಿಗಳ ಗುಂಪು ಬಂದು ಅವರ ಗಲಭೆ ಮತ್ತು ಕಲಹಗಳಿಂದ ಮಾರ್ಗಗಳಲ್ಲಿ ಒಂದೊಂದು ವೇಳೆ ಆಮುದು ರಪ್ತಿಗೂ ಕೂಡಾ ತೊಂದರೆಯಾಗುತ್ತದೆ ನಮ್ಮ ಡಿಪ್ಯುಟಿ ಕಲೆಕ್ಟರ್‌ರವರು ಕಾಸರಗೋಡು ತಾಲೂಕಿನಲ್ಲಿ ಕುಂಬಳೆ ಮುತ್ತಕಡೆಗೆ ಸರ್ಕಿಟಿಗೆ ಹೋಗಿದ್ದಾರೆ ಮುಂಚಿನ ಸ್ಟೇಶನರಿ ಮೆಜಿಸ್ಟ್ರೇಟರು ಕೆಲವು ದಿವಸಗಳ ಹಿಂದೆ ವರ್ಗಾಯಿಸಲ್ಪಟ್ಟು ಹೋಗಿದ್ದಾರೆ ಹೊಸಬರು ಇನ್ನೂ ಬರಲಿಲ್ಲ ತಹಸೀಲ್ದಾರರವರು ಮಾತ್ರ ಒಬ್ಬರಿದ್ದರು ಆದರೆ, ಅವರು ತಹ ತಾಲೂಕು ಬೋರ್ಡಿನ ಮೀಟಿಂಗಿಗೆ ಎಂದು ಕುಂಬಳೆಗೆ ಹೊರಟುಹೋಗಿದ್ದಾರೆ ಪೋಕ್ರಿ ಸ್ವಭಾವದ ಕಂದಹಾರಿಗಳು ತಾಲೂಕಿನ ಮುಖ್ಯ ಪಟ್ಟಣವಾದ ನಮ್ಮ ಊರಿನಲ್ಲಿರುವಾಗ ಒಬ್ಬ ಮೆಜಿಸ್ಟ್ರೇಟರಾದರೂ ಇಲ್ಲದ್ದರಿಂದ ಜನರು ಭೀತಿಗೊಳ್ಳುತ್ತಾರೆ.

ಇಲ್ಲಿ ಬರುವ ವಿದ್ಯಾದಶಮಿ ಸಮಯದಲ್ಲಿ ಜರಗುವ ಶಾರದಾ ವಾಚಕ ಮಂದಿರದ ವರ್ಷಾಂತಿ ಉತ್ಸವಕಾಲದಲ್ಲಿ ಮಹಾರಾಜಶ್ರೀ ಎಮ್ ಎಸ್ ರಾಮ ರಾಯರು ಗೀತಾಂಜಲಿಯ ವಿಷಯವಾಗಿ ಒಂದು ಭಾಷಣವನ್ನು ಮಾಡಲು ಒಪ್ಪಿರುತ್ತಾರೆಂದು ವರ್ತಮಾನವಿದೆ

ಇಡೀ ಉಪ್ಪಿನಂಗಡಿ ತಾಲೂಕಿನಲ್ಲಿ ಒಂದಾದರೂ ಸೆಕೆಂಡರಿ ಶಾಲೆಯು ಇಲ್ಲ ಸಣ್ಣ ಮಕ್ಕಳನ್ನು ಪ್ಲೇಗ್ ಅಂಟುರೋಗಗಳಿಂದ ಪೀಡಿತವಾದ ಮಂಗಳೂರಿಗೆ ಕಳುಹಿಸಲಿಕ್ಕೆ ಜನರು ಹಿಂಜರಿಯುತ್ತಾರೆ ಈ ಕಾರಣಗಳಿಂದ ಪುತ್ತೂರಿನಲ್ಲಿ ಒಂದು ಸೆಕೆಂಡರಿ ಶಾಲೆಯನ್ನು ಏರ್ಪಡಿಸುವುದು ತಾಲೂಕಿನ ಜನರ ಮುಖ್ಯ ಕರ್ತವ್ಯವಾಗಿದೆ ಈ ಉದ್ದೇಶಾರ್ಥವಾಗಿ ತ್ವರ್ಯದಲ್ಲಿ ಇಲ್ಲಿ ಒಂದು ಮಹಾ ಸಭೆ ಜರಗುವದು. ಆಗ ತಾಲೂಕಿನ ಎಲ್ಲಾ ಜಮೀನುದಾರರು ಉದಾರ ಮನಸ್ಸಿನಿಂದ ದ್ರವ್ಯಸಹಾಯವನ್ನು ಮಾಡದೆ ಇರಲಾರರೆಂದು ನಂಬುತ್ತಾರೆ

ಇಲ್ಲಿ ಹಿಂದೂ ಜನರ ಸ್ಮಶಾನಕ್ಕೆ ಹೋಗುವುದಕ್ಕೆ ಒಂದು ಲೋಕಲ್ ಫಂಡ್ ರಸ್ತೆಯು ಆಗಬೇಕೆಂದು ಈಗ ಒಂದೆರಡು ವರುಷಗಳಿಂದ ಆಲೋಚನೆಯುಂಟೆಂದೂ, ಇದರ ಹಣವನ್ನು ಕೂಡಾ ತಾಲೂಕು ಬೋರ್ಡಿನಿಂದ ಸೆಂಕ್ಷನ್ ಆಗಿದೆಯೆಂದೂ ವರ್ತಮಾನವಿದೆ ಹೀಗಿರಲು, ರಸ್ತೆಯನ್ನು ಮಾಡಲಿಕ್ಕೆ ಯಾಕೆ ಪ್ರಾರಂಭಿಸುವುದಿಲ್ಲವೆಂದು ಗೊತ್ತಾಗುವುದಿಲ್ಲ.

ಸ್ಮಶಾನ ಸ್ಥಳಗಳಲ್ಲಿ ಶ್ರವ ದಹನವಾಗುವವರೆಗೆ ಮಳೆಗಾಲದಲ್ಲಿ ನಿಂತುಕೊಳ್ಳಲಿಕ್ಕೆ ಕೂಡಾ ಸ್ಥಳವಿಲ್ಲದ್ದರಿಂದ ಅಲ್ಲಿ ಒಂದು ಕಟ್ಟಡವನ್ನು ಕಟ್ಟಿಸುವರೆ ಮಂತಿಗೆ ಮಸೂರಾಗಿ ಈ ಹೊತ್ತಿಗೆ ಒಂದೆರಡು ವರುಷಗಳಾದವು. ಆದರೆ ಕಟ್ಟಡವನ್ನು ಮಾತ್ರ ನಾವು ಇದುವರೆಗೂ ಕಣ್ಣಾರೆ ನೋಡಲಿಲ್ಲ!

ವಿಟ್ಲ: — ಇಲ್ಲಿ ಅನೇಕರು ಶ್ರೀ ಗಣೇಶಚತುರ್ಥಿಯನ್ನು ರವಿವಾರವೇ ಆಚರಿಸಿ ಶ್ರೀ ಗಣೇಶನನ್ನು ಬಹಳ ಸಂಭ್ರಮದಿಂದ ಬುಧವಾರ ದಿವಸ ಸುಮಾರು ೪ ಘಂಟೆಗೆ ಮಂಗಳವಾದ್ಯದೊಡನೆ ಮೆರವಣಿಗೆಯಿಂದ ಇಲ್ಲಿಯ ಮ. ರಾ. ರಾ. ರವಿವರ್ಮ ನರಸಿಂಹರಾಜರವರು ಕಟ್ಟಿಸಿದ ದೊಡ್ಡ ಕೆರೆಯಲ್ಲಿ ಶ್ರೀ ಗಣೇಶನನ್ನು ಸಾಗಿಸಿಕೊಟ್ಟರು

ಇಲ್ಲಿಯ ಹರಿದಾಸರಾದ ಮ. ರಾ. ರಾ. ಗಲ್ವಾಡಿ ದೇವರಾಯರ ಹರಿಕೀರ್ತನೆಯೂ, ವಾಚಕವೂ ನಡಿಯುತ್ತಾ ಇದೆ

ವೇಷರಾಜನು ಕಾಣಿಸುತ್ತಿರುವನು, ಪರ್ಜನ್ಯನು ದಯೆಯನ್ನು ಇಡಲೇ ಇಲ್ಲ ಒಡವರು ಗೋಳಾಡುತ್ತಿರುವರ

ಫರಂಗಿಪೇಟೆ: — ಇಲ್ಲಿಯ ಮೇರಿಮಜಲ್ಲಿ ಸೈಂಟ್ ಜೊಸೆಫ್ಸ್ ಶಾಲೆಯ ೧೫ನೇ ವರ್ಷೋತ್ಸವವೂ, 'ಮೆನೆ ಜರ್ಸ್ಡೆಯೂ' ಇದೇ ಕಳೆದ ತಾ ೧೯ನೇ ಆದಿತ್ಯವಾರ ದಿನ ಇಲ್ಲಿಯ ವಿದ್ಯಾರ್ಥಿಗಳಿಂದ ಬಹು ವಿಜೃಂಭಣೆಯಿಂದ ಜರಗಿಸಲ್ಪಟ್ಟಿತು ರೆವೆರೆಂಡ್ ಫಾದರ್ ಎಮ್ ಎಸ್ ಫೆರ್ನಾಂಡಿಸರವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು ಹಲವು ಗ್ರಾಮಸ್ಥರೂ ಉಪಾಧ್ಯಾಯರೂ ಸೇರಿ ಶಾಲಾ ಕಟ್ಟೋಣವು ತುಂಬಿ ಹೋಗಿತ್ತು ಹುಡುಗರು ದೇವರ ಪ್ರಾರ್ಥನೆಯ ನಂತರ ಅತಿಥಿಗಳಿಗೆ ಹಾಡು ಹೇಳಿದರ ಬಳಿಕ ಶಾಲಾ ಹೆಡ್‌ಮಾಸ್ತರ್ ಎ ರಾಮ ಚಂದ್ರ ಹೆಗ್ಗಡೆಯವರು ಒಂದು ವರ್ಷದ ಫಲಿತಾಂಶವನ್ನು ಸಭಿಕರಿಗೆ ಓದಿ ತಿಳಿಸಿದ ತರುವಾಯ, ವಿದ್ಯಾರ್ಥಿಗಳಲ್ಲಿ ಒಬ್ಬನು ಮೆನೆಜರರಿಗೆ ಒಂದು ಬಹುಮಾನ ಪತ್ರವನ್ನು ಓದಿದನು ಶಾಲಾ ವಿದ್ಯಾರ್ಥಿಗಳು 'ತಾಂಡವ ಮುನಿಯ ಕಥೆ' ಎಂಬ ನಾಟಕವನ್ನು ಚಲೋ ಸಂಗೀತದಿಂದ ನಟಿಸಿದರು ನೆರೆದ ಸಭಿಕರು ಎಲಿಮೆಂಟರಿ ಶಾಲಾ ವಿದ್ಯಾರ್ಥಿಗಳು ಆಡಿದ ಈ ಆಟವನ್ನು ನೋಡಿ ಬಹು ಸಂತೋಷಗೊಂಡರು. ಅಧ್ಯಕ್ಷರು ವಿದ್ಯಾರ್ಥಿಗಳಿಗೂ, ಉಪಾಧ್ಯಾಯರಿಗೂ, ಗ್ರಾಮಸ್ಥರಿಗೂ, ಉಪಯುಕ್ತವಾದ ವಿದ್ಯಾ ಸಮ್ಬಂಧದ ಕಾಲೋಚಿತ ಮಾತುಗಳನ್ನೇ ಆಡಿದ ಬಳಿಕ ಸಭಿಕರಿಗೆಲ್ಲಾ ಪಾನಸುಪಾರಿ, ಹೂವು, ಇತ್ಯಾದಿ ಹಂಚೋಣವಾಯಿತು ರಾಷ್ಟ್ರಗೀತದೊಂದಿಗೆ ಉತ್ಸವವು ಮುಕ್ತಾಯ ಮಾಡಲ್ಪಟ್ಟಿತು ಶಾಲಾ ರಿಪೋರ್ಟಿನಿಂದ ತೋರುವ ಮೇರೆಗೆ ಈ ಶಾಲೆಯಲ್ಲಿ ಸ್ಥಾಪಿಸಲ್ಪಟ್ಟ 'ಲ್ಯಾಬ್ರರಿ ಯಾನೆ ಪುಸ್ತಕ ಸಂಗ್ರಹವು' ಎಲ್ಲರ ಮನಸ್ಸನ್ನು ಆಕರ್ಷಿಸಿತು ಸಭಿಕರಲ್ಲಿ ಹಲವರು ತಮ್ಮ ಅಲ್ಪ ಸ್ವಲ್ಪ ಸಹಾಯವನ್ನು ತ್ವರಿತದಲ್ಲಿಯೇ ಮಾಡುತ್ತೇವಾಗಿಯೂ, ಮುಂದೆ ಸದರಿ ಪುಸ್ತಕ ಸಂಗ್ರಹವು' ವೃದ್ಧಿಗೊಳ್ಳುವಂತೆ ಎಲ್ಲರ ಆಶ್ರಯವನ್ನು ಅಪೇಕ್ಷಿಸಬೇಕಾಗಿಯೂ ಸಹಾ ಸದರಿ ಶಾಲಾ ಹೆಡ್‌ಮಾಸ್ತರರ ಕೂಡ ಸೂಚಿಸಿರುತ್ತಾರೆ.

ಕಾಪು: — ನಾಂಗಾಳ ಎಂಬುದೊಂದು ಸಣ್ಣ ಹಳ್ಳಿ ಈ ಹಳ್ಳಿಯಲ್ಲಿ ನಡದ ಒಂದು ಕೊಲೆಮೊಕದ್ದಮೆಯಿಂದ ಸದರಿ ಗ್ರಾಮವು ಬೆಳಕಿಗೆ ಬಂದಂತಾಯಿತು ಈ ಗ್ರಾಮದಲ್ಲಿ ಬಂಟರ ಜಾತಿಯವರು ವಸತಿಯಾಗಿರುವ ಒಂದು ಚಿಕ್ಕ ಬೀಡು ಇದೆ. ಈ ಬೀಡಿನ ಯಜಮಾನನ ನಾಮಧೇಯವು ಚಂದಯ್ಯಸೆಟ್ಟಿ ಆತನಿಗೂ ಆತನ ಸಮ್ಬಂಧಿಕರಿಗೂ ಮನಃಕ್ಲೇಶಗಳುಂಟಾಗಿ ಕೆಲವು ತಿಂಗಳಾಗಿದ್ದವಂತೆ. ಕಳೆದ ಅಮಾವಾಸ್ಯೆ ದಿನ ರಾತ್ರಿ ಊಟಕ್ಕೆ ಬಂದ ಯಜಮಾನನು ಮರುದಿನ ಬೆಳಗ್ಗೆ ಮೃತಪಟ್ಟಿರುವನೆಂಬ ವಾರ್ತೆಯು ಊರಲ್ಲಿ ಕೇಳಿಸಿತು ಆತನ ಎಲುಬುಗಳು ಗದ್ದೆಯಲ್ಲಿದ್ದವಂತೆ ಗ್ರಾಮಪಟೇಲರಿಗೂ ಇತರರಿಗೂ ಚಂದಯ್ಯಸೆಟ್ಟಿ ಮೃತಪಟ್ಟ ವಿಷಯ ಸಂಶಯವು ಹುಟ್ಟಿತು ಗ್ರಾಮಪಟೇಲರು ಪೋಲೀಸಿಗೆ ರಿಪೋರ್ಟ್ ಮಾಡಿದ ಪ್ರಯುಕ್ತ ಪೋಲೀಸ್ ಸಬ್ ಇನ್ಸ್‌ಪೆಕ್ಟರವರು ಬಂದು ೩, ೪, ದಿವಸಗಳು ನಿಂತು ಬಲು ಪ್ರಯತ್ನಪಟ್ಟು ಕೊಲೆನಡಿಸಿದ್ದು ನಿಜವಾಗಿರಬಹುದೆಂದು ೫ ಜನರನ್ನು ಉಡ್ಪಿ ಮೇಜಿಸ್ಟ್ರೇಟು ಕೋರ್ಟಿಗೆ ಕೊಂಡುಹೋಗಿ ರಿಮಾಂಡಿನಲ್ಲಿಟ್ಟಿರುವರು ಈ ಕೊಲೆಮೊಕದ್ದಮೆ ತನಿಕೆ ಬಗ್ಗೆ ಪೋಲೀಸು ಸುಪರಿಂಟೆಂಡೆಂಟರವರೂ ತಾಲೂಕು ಇನ್ಸ್‌ಪೆಕ್ಟರವರೂ ಬಂದು ತೆರಳಿರುವರು

ಜಟ್ಕಾ ಕುದುರೆ ಸಾಕುವ ಓರ್ವ ಮಲೆಯಾಳಿಗೂ ನಾಂಗಾಳದ ಹೊಳೆ ಸಮೀಪವಿರುವ ಓರ್ವ ಪೂಜಾರಿಗಳಿಗೂ ಬಂದದ ಕಾರಣದಿಂದ ದ್ವೇಷವುಂಟಾಗಿ ಪೂಜಾರಿಗಳು ಮಲೆಯಾಳಿಗೆ ಮ ಪ್ಪಿಪೂಜೆಯನ್ನು ಮಾಡಿದರಂತೆ ಸದರಿ ಮಲೆಯಾಳಿಯು ಉಡ್ಪಿ ಮೇಜಿಸ್ಟ್ರೇಟ ಕೋರ್ಟಿನಲ್ಲಿ ಫಿರ್ಯಾದ ದಾಖಲುಮಾಡಿದ್ದನು. ಇಕ್ಕೆಯ ಧಾರಣೆ ಏರುತ್ತಾ ಇರುವ ಈ ಕಾಲದಲ್ಲಿ ಜಗಳದಲ್ಲಿ ರಾಗದ್ವೇಷಗಳು ಹೆಚ್ಚಾಗುತ್ತಾ ಬರುವದು ವಿಶೇಷವಲ್ಲ

ಪಡುಬಿದ್ರೆ ಸಮೀಪ ಓರ್ವ ಗಾಡಿವಾಲನು ಗಾಡಿಯನ್ನು ಓಡಿಸುತ್ತಿರುವ ಸಮಯ "ತಾನು ಜಂಪ್ರಪಟ್ಟವನ್ನೇರಿದವನೆಂದಾಗಿ ತಿಳಕೊಂಡ ಪ್ರಯುಕ್ತ" ತನ್ನ ಗಾಡಿಯ ಅಡಿಯಲ್ಲಿ ಬಿದ್ದ ಮಗುವು ಸಹಾ ಕಣ್ಣಿಗೆ ಗೋಚರವಾಗದೆ ಗಾಡಿಯನ್ನು ನಾಗಾಲೋಟದಿಂದ ಓಡಿಸುವದನ್ನು ಮಗುವಿನ ಸಮ್ಬಂಧಿಕರು ತಡೆದು ನಿಲ್ಲಿಸಿ ಮಗುವನ್ನು ನೋಡಲು ಮಗುವು ಸ್ಮೃತಿತಪ್ಪಿ ಬಿದ್ದಿತ್ತು ಅಯ್ಯೋ ಪಾಪ! ಮಗುವು ಮತ್ತೆರಡು ಗಳಿಗೆಯಲ್ಲಿ ಮೃತಪಟ್ಟಿತು ಅಹಾ! ಗಾಡಿವಾಲರ ಉದ್ಧಮೆಯೇ ಮಗುವಿನ ಸಮ್ಬಂಧಿಕರ ವ್ಯಸನವಿಷ್ಟಿರಬಹುದು?

ಈ ಊರ ಕೆಲವು ಜನರಿಗೆ ಮದುವೆ ಫಂಡಿಗೆ ಸೇರಿದ್ದರ ಬಗ್ಗೆ ಹಣ ಹೊಂದಲೇ ಇಲ್ಲವೆಂತಲೂ, ಮದುವೆ ಆಗಿ ಬಹಳ ಕಾಲವಾದರೂ ತಮಗೆ ಕಟ್ಟಲು ಮೋಹಿಸಿದ ಏಜೆಂಟರುಗಳನ್ನು ಈಗ ಊದಿ ಎಬ್ಬಿಸಿದರೂ ಎಚ್ಚರ ಪಡುವದಿಲ್ಲವೆಂತಲೂ ತಾವು ಹಾಕಿದ ಹಣವೆಲ್ಲಾ ಕೃಷ್ಣಾರ್ಪಣವಾಗಿ ಹೋಯಿತಲ್ಲಾ ಎಂದು ಮರುಗುತ್ತಿರುವರು ಮದುವೆ ಉಪನಯನ ಫಂಡಿನ ಏಜೆಂಟರುಗಳೇ ಇನ್ನಾದರೂ ನೀವು ಎಚ್ಚೆತ್ತವರಾಗಿ ಬಡಜನರ ಗೋಳಿಗೆ ಪಾತ್ರರಾಗದಂತೆ ನೋಡುವದು ಸಹಜ ಧರ್ಮವಲ್ಲವೇ!

ಕಲ್ಯಾಣಪುರ: — ಇಲ್ಲಿಯ ಸಭ್ಯ ಗೃಹಸ್ಥರು ಬಟ್ಟೆಗೂಡಿ ಒಂದು ಹಿಂದೂ ಶಾಲೆಯಗೋಸ್ಕರ ಪ್ರತ್ಯೇಕ ಚಲೋ ಕಟ್ಟಡವನ್ನು ತಯಾರಿಸಿರುತ್ತಾರೆ. ಈ ವಿಷಯದಲ್ಲಿ ಸದರಿ ಹಿಂದೂ ಶಾಲೆಯ ಮೆನೇಜರರಾದ ಮ. ರಾ. ಪದ್ಮನಾಭಬಾಳಿಗರು ಹೆಚ್ಚಿನ ದ್ರವ್ಯ ಸಹಾಯವನ್ನು ವ ಹೆಚ್ಚಿನ ಪ್ರಯತ್ನವನ್ನು ಮಾಡಿದುದಲ್ಲದೆ ಇಲ್ಲಿಯ ಮ. ರಾ. ನಾಗಪ್ಪನಾಯ್ಕರವರು ವ ಇತರ ಮಹಾನುಭಾವರು ಸಹ ಬಹಳ ಉತ್ತೇಜನವನ್ನು ಕೊಟ್ಟಿರುವರು. ಇಂಥಾ ಚಲೋ ಕಟ್ಟಡವು ಇತ್ತಕಡೆ ಬೇರೆ ಎಲ್ಲಿಯಾದರೂ ಇಲ್ಲ. ಮಕ್ಕಳ ಸಂಖ್ಯೆಯು ಹೆಚ್ಚುತ್ತಲಿದೆ. ಇದರಿಂದ ಉಪಾಧ್ಯಾಯರೆಲ್ಲರು ಶ್ರಮಪಟ್ಟು ಕೆಲಸಮಾಡುವ ಹಾಗೆ ತೋರುತ್ತದೆ.

ಈ ಶಾಲೆಯು ಶ್ರೀವೆಂಕಟರಮಣ ದೇವಸ್ಥಾನದ ಬಳಿಯಲ್ಲಿರುವುದು. ಈ ದೇವಸ್ಥಾನದ ಕೆರೆಯು ನಾದುರುಸ್ತಿಯಲ್ಲಿರುವದರಿಂದ ಥಕ್ಕನೆ ಯಾರಿಗಾದರೂ ಅಪಾಯ ಸಂಭವಿಸಬಹುದು. ಆದುದರಿಂದ ಮಹಾನುಭಾವರೆಲ್ಲರೂ ಕೂಡಿ ಅದನ್ನು ಸರಿಪಡಿಸಿದರೆ ಪ್ರತಿ ವರ್ಷಕ್ಕೂ ನೆರೆಯುವ ಕೆರೆ ದೀಪೋತ್ಸವವನ್ನು ಕೈಕೊಂಡ ಮ. ರಾ. ವಿಟ್ಠಪ್ಪ ಕಿಣಿಯವರು ವರ್ಷವರ್ಷಕ್ಕೂ ಒಳ್ಳೇ ರೀತಿಯಿಂದಲೂ, ಉತ್ಸಾಹದಿಂದಲೂ ನಡಿಸುವರಾಗಿ ನಂಬಿದ್ದೇವೆ.

ಮಂಗಳೂರು.

ಕೊಡಗಿನ ಅಸಿಸ್ಟಾಂಟ ಇನ್ಸ್‌ಪೆಕ್ಟರರಾದ ಮ. ರಾ. ಎ. ರಾಮರಾಯರಿಗೆ ಕೊಡೋಣಾದ ಮೂರು ತಿಂಗಳ ಪ್ರಿವಿಲೇಜ ರಜಾಕಾಲದಲ್ಲಿ ಕಾಸರಗೋಡು ರೇಂಜ್ ಸಬ್ ಅಸಿಸ್ಟಾಂಟ ಇನ್ಸ್‌ಪೆಕ್ಟರರಾದ ಮ. ರಾ. ನಾರಾಯಿ ಕೃಷ್ಣರಾಯರೂ, ಅವರ ಬದಲಿಗೆ ಮ. ರಾ. ಎಚ್ ಚನ್ನಪ್ಪಯ್ಯ ಎಂ ಎ ಎಲ್. ಟಿ. ಯವರೂ ಮೊಕರೂರಾಗಿರುವರಾಗಿ ಸಮಾಚಾರವಿದೆ

ಕಾಸರಗೋಡು ತಾಲೂಕಿನ ತಹಸೀಲ್ದಾರರಾಗಿರುವ ಮ। ರಾ। ರಾ। ಎಮ್. ಅನಂತನ್ ನಾಯರರವರಿಗೆ ಬರುವ ಅಕ್ಟೋಬರ ತಿಂಗಳ ತಾ ೧ರಿಂದ ಒಂದು ತಿಂಗಳ ಹಕ್ಕಿನ ರಜೆಯು ಕೊಡೋಣಾಗಿದೆ ಇವರ ಬದಲಿಗೆ ಮ। ರಾ। ರಾ। ವಿ ಯನ್. ಕೃಷ್ಣರಾವರವರು ೩ನೇ ಗ್ರೇಡಿಗೂ ಮಿ. ಎಮ್ ಪ್ಯಾಸ್‌ರವರು ೪ನೇ ಗ್ರೇಡಿಗೂ ಬಡ್ತಿ ಹೊಂದಿರುವರು. ಕಾಸರಗೋಡಿನ ಸ್ಟೇಶನರಿ ಸಬ್ ಮೇಜಿಸ್ಟ್ರೇಟರಾಗಿರುವ ಮ. ರಾ। ರಾ। ಸುಬೀರ ಬಾಬುರಾವರವರು ಆಕ್ಟಿಂಗ್ ೫ನೇ ಗ್ರೇಡಿನ ತಹಸೀಲದಾರರಾಗಿ ನೇಮಿಸಲ್ಪಟ್ಟಿರುವರು. ಇಲ್ಲಿಯ ಆಕ್ಟಿಂಗ್ ಟೌನ್ ಡಿಪ್ಯೂಟಿ ತಹಸೀಲ್ದಾರರಾಗಿರುವ ಮ। ರಾ। ರಾ। ಕೃಷ್ಣ ಪಾಂಡುರಂಗ ಕಿಣಿಯವರು ಕಾಸರಗೋಡಿನ ಸಬ್ ಮೇಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿರುವರು. ಮ। ರಾ। ರಾ। ಸುಬೀರ ಬಾಬುರಾವರವರು ಕಾಸರಗೋಡು ತಾಲೂಕಿನ ಚಾರ್ಜನ್ನು ಬರುವ ತಿಂಗಳ ತಾ ೧ಕ್ಕೆ ವಹಿಸಿಕೊಳ್ಳಬೇಕಾಗಿದೆ. ಮ। ರಾ। ರಾ। ರಗಡೆ ಶಿವರಾಯರ ರಜೆಯು ಬರುವ ತಿಂಗಳ ತಾ. ೧೦ಕ್ಕೆ ಮುಗಿಯುವದರಿಂದ ತಾ. ೧೧ಕ್ಕೆ ಇವರು ರಾ ಕಿಣಿಯವರಿಂದ ಇಲ್ಲಿಯ ಟೌನ್ ಸಬ್ ಮೇಜಿಸ್ಟ್ರೇಟರ ಚಾರ್ಜು ವಹಿಸಿಕೊಂಡ ಕೂಡಲೇ ಕಿಣಿಯವರು ಕಾಸರಗೋಡು ಸಬ್ ಮೇಜಿಸ್ಟ್ರೇಟ ಕೆಲಸದ ಚಾರ್ಜನ್ನು ವಹಿಸಿಕೊಳ್ಳುವರು.

ಇದೇ ಬರುವ ಅಕ್ಟೋಬರ ತಿಂಗಳ ತಾ. ೧ರಿಂದ ಕಾಸರಗೋಡು ಪ್ರಾಂತ್ಯಗಳತ್ತಕಡೆ ರೈಲ್ವೆ ಕಂಪೆನಿಯವರಿಂದ ಹಿಡೋಣಾದ ಸ್ಥಳಗಳ ವಿಲೆವಾರಿ ಒಗ್ಗೆ ೩ ತಿಂಗಳ ತನಕ ೨ ಜನ ರೆವಿನ್ಯೂ ಇನ್ಸ್‌ಪೆಕ್ಟರರವರು ನೇಮಿಸಲ್ಪಟ್ಟಿರುವರು. ಕಾಸರಗೋಡು ಫಿರ್ಕಾ ರೆವಿನ್ಯು ಇನ್ಸ್‌ಪೆಕ್ಟರರಾದ ರಾ। ಎ. ಶ್ರೀನಿವಾಸ ಶ್ಯಾನುಭಾಗರವರು ತಳಂಗಿರೆ ಪ್ರಾಂತ್ಯಗಳಲ್ಲಿಯೂ, ಇಲ್ಲಿಯ ತಾಲೂಕು ಆಫೀಸಿನ ೩ನೇ ಕ್ಲಾರ್ಕರಾದ ರಾ। ಎಮ್. ರಾಘವೇಂದ್ರರಾವ್ ರವರು ಕಾಸರಗೋಡು ಫಿರ್ಕಾ ರೆವಿನ್ಯು ಇನ್ಸ್‌ಪೆಕ್ಟರರಾಗಿಯೂ ನೇಮಿಸಲ್ಪಟ್ಟಿರುತ್ತಾರೆ. ಕಾಸರಗೋಡು ತಾಲೂಕು ಆಫೀಸಿನ ಕ್ಲಾರ್ಕರಾದ ರಾ। ಕೆ. ರಾಮಶ್ಯಾನುಭಾಗರವರು ಆರಿಕಾಡಿ ಪ್ರಾಂತ್ಯಗಳ ಹಂಗಾಮಿ ರೆವಿನ್ಯು ಇನ್ಸ್‌ಪೆಕ್ಟರರಾಗಿಯೂ ನೇಮಿಸಲ್ಪಟ್ಟಿರುವರು.

ಉಡ್ಪಿಯ ಮಿಶನ್ ಹ್ಯಾಸ್ಕೂಲಿನಲ್ಲಿ ಉಪಾಧ್ಯಾಯರಾಗಿದ್ದ ಮ। ರಾ। ರಾ। ಪಡುಮನ್ನೂರು ರಾಮಚಂದ್ರಯ್ಯನವರು ತಮ್ಮ ಕದ್ರೆ ಮೊದಲಾದ ಕಡೆಗಳಲ್ಲಿರುವ ಸ್ಥಿರಾಸ್ತಿಗಳೆಲ್ಲವು ಈ ಜಿಲ್ಲೆಯ ನಿವಾಸಿಗಳ ಸಾರ್ವಜನಿಕ ಪ್ರಯೋಜನಾರ್ಥವಾಗಿ ವಿನಿಯೋಗಿಸಲ್ಪಡುವಂತೆ ಒಂದು ದಾನಶಾಸನವನ್ನು ಕಳೆದ ಬುಧವಾರ ರಿಜಿಸ್ಟ್ರಿಮಾಡಿಸಿರುವರೆಂಬುದನ್ನು ತಿಳಿಸಲು ಸಂತೋಷಪಡುತ್ತೇವೆ ಈ ದಾನಶಾಸನದ ಪ್ರಕಾರ ಮ। ರಾ। ರಾ। ರಾವ್‌ಬಹದ್ದೂರ್ ಎಸ್. ಸುಬ್ಬರಾವ್, ಮ। ರಾ। ರಾ। ನೆಲ್ಲಿಕಾಯಿ ವೆಂಕಟರಾವ್, ಮ। ರಾ। ರಾ। ಅತ್ತಾವರ ಬಾಲಕೃಷ್ಣ ಶೆಟ್ಟಿ, ಮ। ರಾ। ರಾ। ಅತ್ತಾವರ ರಾಮರಾವ್, ಮ। ರಾ। ರಾ। ನಾನ್‌ಜಿ ಪುರುಷೋತ್ತಮಸೇಟ್, ಮ। ರಾ। ರಾ। ಅಮ್ಮೆಂಬಳ ಶ್ರೀನಿವಾಸಪೈ, ಮತ್ತು ರಾ. ರಾಮಚಂದ್ರಯ್ಯನವರು ಕೂಡಿ ೭ ಜನ ಟ್ರಸ್ಟಿಗಳು ಈ ದಾನಶಾಸನದಲ್ಲಿ ಸೂಚಿಸಿದ ಉದ್ದೇಶಗಳನ್ನು ನೆರವೇರಿಸುವ ಒಗ್ಗೆ ಆರಿಸಲ್ಪಟ್ಟಿರುವರು

ಈ ತಿಂಗಳ ತಾ. ೧೦ರಿಂದ ಇಲ್ಲಿಂದ ಕಾರ್ಕಳ ಮಾರ್ಗವಾಗಿ ಪ್ರಯಾಣಿಕರನ್ನು ಒಯ್ಯುವ ಮೋಟರ್‌ಗಳ ಚಲಾವಣೆಗೆ ಪ್ರಾರಂಭವಾಗುವದೆಂಬದಾಗಿ ತಿಳಿಸಿದ್ದೆವು. ಆದರೆ ಈ ಒಗ್ಗೆ ಪ್ರತ್ಯೇಕ ಒಂದು ಸರ್ವಿಸ್ಸನ್ನು ಏರ್ಪಡಿಸುವ ಬದಲಿಗೆ ಈ ಒಗ್ಗೆ ತಯಾರುಪಡಿಸಿರುವ ಮೋಟರ್ ಭಂಡಿಯನ್ನು ಇಲ್ಲಿಯ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿಯವರಿಗೆ ಕೊಟ್ಟು ಕಾರ್ಕಳ ಮಾರ್ಗವಾಗಿ ಈ ಸರ್ವಿಸನ್ನು ಇಡುವ ಬದಲಿಗೆ ಕರಾವಳಿ ಮಾರ್ಗವಾಗಿಯೇ ಇದನ್ನು ಇಡುವುದು ಉಪಯುಕ್ತವೆಂತ ಅಭಿಪ್ರಾಯಪಟ್ಟು ಮ। ರಾ। ರಾ। ಅತ್ತಾವರ ರಾಮರಾವರವರು ತನ್ನ ಮೋಟರ್ ಗಾಡಿಯನ್ನು ಕೆನರಾ ಪಬ್ಲಿಕ್ ಕನ್ವೆಯನ್ಸ ಕಂಪನಿಗೆ ಮಾರಿರುವರೆಂಬದಾಗಿ ಕೇಳುತ್ತೇವೆ ಪ್ರತ್ಯೇಕ ಒಂದು ಸರ್ವಿಸನ್ನು ರಚಿಸುವ ಬದಲಿಗೆ ರಾಮರಾವರವರು ಕೆನರಾ ಪಬ್ಲಿಕ್ ಕನ್ವೇಯನ್ಸ್ ಕಂಪೆನಿಯವರಿಗೆ ಇದನ್ನು ವಹಿಸಿಕೊಟ್ಟದ್ದು ಸ್ತುತ್ಯವಾಗಿರುವದು. ಈ ಕಂಪೆನಿಯವರು ಉಡ್ಪಿಯವರೆಗೆ ಮೋಟರ್ ಭಂಡಿಗಳನ್ನು ಚಲಾವಣೆ ಮಾಡುವ ಏರ್ಪಾಡನ್ನು ಮಾಡುತ್ತಿದ್ದಾರೆ. ಈ ಒಗ್ಗೆ ಈ ಕಂಪೆನಿಯವರಿಗೆ ಬೇಕಾದ ಹಣ ಸಂಗ್ರಹವು ಕಂಪೆನಿಯ ಪಾಲುಗಳ ವಿಕ್ರಿತದಿಂದ ದೊರೆತೊಡನೆಯೇ ಉಡ್ಪಿಯತ್ತಕಡೆ ಮೋಟಾರ್ ಭಂಡಿಗಳ ಚಲಾವಣೆಗೆ ಪ್ರಾರಂಭವಾಗುವದು. ಮಹಾಜನರು ಶೀಘ್ರದಲ್ಲಿ ಪಾಲುಗಳನ್ನು ಈ ಕಂಪೆನಿಯಲ್ಲಿ ಪಡದು ಇದನ್ನು ಪ್ರೋತ್ಸಾಹಿಸಿದರೆ ಕರಾವಳಿ ಪ್ರಾಂತ್ಯಗಳಲ್ಲಿ ಮೋಟಾರ್ ಗಾಡಿಗಳ ಚಲಾವಣೆಯು ಬೇಗನೆ ಸಾಧ್ಯವಾಗುವದು.

ಈ ತಿಂಗಳ ತಾ. ೨೦ರಿಂದ ಪ್ರೊಬೆಷನರಿ ರೆವಿನ್ಯು ಇನ್ಸ್‌ಪೆಕ್ಟರರಾಗಿರುವ ರಾ. ಕೆ. ಕೃಷ್ಣಯ್ಯನವರಿಗೆ ಒಂದು ತಿಂಗಳ ಹಕ್ಕಿನ ರಜೆಯು ಕೊಡೋಣಾಗಿದೆ

ಈ ತಿಂಗಳ ತಾ ೨೫ರಿಂದ ರಾ। ಎಮ್ ರಾಮಪ್ಪನವರಿಗೆ ಒಂದು ತಿಂಗಳ ರಜೆಯು ಕೊಡೋಣಾದ್ದರಿಂದ ಇವರ ಬದಲಿಗೆ ರಾ। ಬಿ. ಸೋಮಪ್ಪನವರು ರೂ ೪೦ರ ಸಂಬಳದ ಮೇಲೆ ನೇಮಕ ಹೊಂದಿರುವರು.

ಮದ್ರಾಸು ಗವರ್ನರ ದೊರೆಗಳವರ ಪ್ರೈವೇಟ್ ಸೆಕ್ರಿಟರಿಗಳಾಗಿದ್ದ ಮಿ। ಸಿ. ಬಿ. ಕೊಟೆರಲ್‌ರವರು ರಜೆಯ ಮೇಲೆ ಹೋಗುವದರಿಂದ ಅವರ ಬದಲಿಗೆ ಪ್ರಾವೇಟ್ ಸೆಕ್ರಿಟರಿಗಳಾಗಿ ಮಿ। ಎಚ್. ಜಿ ಸ್ಟೋಕ್ಸ್ ಸಿ. ಐ. ಇ ಯವರು ನೇಮಿಸಲ್ಪಟ್ಟಿರುವರು.

ಈ ಜಿಲ್ಲೆಯಲ್ಲಿ ತಹಸಿಲ್ದಾರರಾಗಿರುವ ಮ। ರಾ। ರಾ। ಕೆ. ರಾಮವರ್ಮರಾಜರವರು ಮಲಬಾರಿನ ಆಕ್ಟಿಂಗ್ ಜನರಲ್ ಡ್ಯೂಟಿ ಡಿಪ್ಯೂಟಿ ಕಲೆಕ್ಟರರಾಗಿ ನೇಮಕ ಹೊಂದಿರುತ್ತಾರೆ.

ತಿದ್ದುಪಡಿ:—ಕಳೆದ ವಾರದಲ್ಲಿ ಪ್ರಕಟಿಸೋಣಾದ "ಬಿಲ್ಲವರು ವೈಷ್ಣವರೋ" ಎಂಬ ಪತ್ರವ್ಯವಹಾರದಲ್ಲಿ "ವಿಷ್ಣುಸ್ಯ ಹೃದಯಂ ಶಿವಃ" ಎಂಬದು ತಪ್ಪಾಗಿರುವುದರಿಂದ ಅದನ್ನು "ವಿಷ್ಣೋಶ್ಚ ಹೃದಯಂ ಶಿವ" ಎಂತ ತಿದ್ದುಪಡಿಯಿಂದ ಓದತಕ್ಕದ್ದು.

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟಿನಲ್ಲಿ.

ಸ್ಮಾಲ್ ನಂಬ್ರ 541/1915.

ಸಂಜು ಭಂಡಾರಿ — ವಾದಿ.

ಐತುಮ್ಮೊರಿ-ವಾಸುಮ್ಮೊರಿ ಅಳಿಯ } ತೋಕೂರ ಗ್ರಾಮಸ್ಥ. } ಪ್ರತಿವಾದಿ.

ಸದರಿ ವ್ಯಾಜ್ಯವು ಇದೇ ತಿಂಗಳ ತಾ. 30ಕ್ಕೆ ತನಿಖೆಗೆ ಇಟ್ಟಿರುತ್ತದೆ ಪ್ರತಿವಾದಿಯು ಆ ತಾರೀಕಿಗೆ ಹಾಜರಾಗಿ ವ್ಯವಹರಿಸಬಹುದು ಪ್ರತಿವಾದಿಯು ನೋಟೀಸಿಗೆ ಸಿಕ್ಕದೆ ಇರುವದರಿಂದ ಈ ಪೇಪರಿನಲ್ಲಿ ಪ್ರಕಟಿಸಬೇಕಾಗಿ ಆದ ಹುಕುಂ ಪ್ರಕಾರ ಈ ಮೂಲಕ ಪ್ರಕಟಿಸಿರುತ್ತದೆ.

ತಾ. 22—9—1915.

B. Venkatrao Baliga,
Vakil for Plaintiff

ಜೀನಸು ಧಾರಣೆ. (ರಖಂ)

ಮುಸ್ತಿ ಅಕ್ಕಿ .	6—10—0	5—15—0
ಗಾಡಿ ರಾಶಿ ,, .	5—1—0	5—4—0
ಗುಡ್ಡು ,, .	5—6—0	5—9—0
ಅವ್ವಲ್ ಬೆಳ್ತಿಗೆ ,, .	6—14—0	7—6—0
ಗುಡ್ಡು ಬೆಳ್ತಿಗೆ ,, .	5—14—0	6—0—0
ರಂಗೂನು ಬೆಳ್ತಿಗೆ ಗೋಣಿ ೧ರ	10—0—0	10—8—0
ಗೋಧಿ ಗೋಣಿ ೧ರ		10—4—0
ಹುರುಳಿ ಗೋಣಿ ೧ರ ...	6—12—0	7—0—0
ಕಡಲೆ ಗೋಣಿ ೧ರ. ,,	8—8—0	9—8—0
ತೊಗರಿ ಗೋಣಿ ೧ರ ...	10—0—0	11—8—0
ತೊಗರಿ ಬೇಳೆ ಗೋಣಿ ೧ರ.	12—8—0	15—0—0
ಉದ್ದು ಗೋಣಿ ೧ರ		10—0—0
ಊರುಬೆಲ್ಲ ಖಂಡಿ ೧ರ		75—0—0
ಉಪ್ಪು ಗೋಣಿ ೧ರ . .	3—12—0	3—14—0
ಕೊಬ್ರಿ ಖಂಡಿ ೧ರ . .	70—0—0	75—0—0
ಕೊಬ್ರಿಹಿಂಡಿ ಖಂಡಿ ೧ರ	26—0—0	28—0—0
ಎಳ್ಳಿಂಡಿ ಖಂಡಿ ೧ರ . .	17—8—0	22—12—0
ಕೊಬ್ರಿ ಎಣ್ಣೆ ಮುಡಿ ೧ರ. .	6—0—0	6—4—0
ಎಳ್ಳೆಣ್ಣೆ ಮುಡಿ ೧ರ(ಕುಡಾಪಸ)	4—0—0	4—2—0
ಚಿಮಣಿ ಎಣ್ಣೆ ಪೆಟ್ಟಿಗೆ ೧ರ .	4—9—0	5—0—6
ಮೋರಿಸ್ ಸಕ್ಕರೆ ಮುಡಿ ೧ರ . . .		5—0—0
ಕಾಫಿ ಖಂಡಿ ೧ರ. .	240—0—0	252—0—0
ಹೊಸಬೇಳೆಗೋಟು ಖಂಡಿ೧ರ.	94—0—0	98—0—0
ಹೊಸ ಗೇರುಬೀಜ ಮುಡಿ ೧ರ		2—12—0
ಕಬ್ಬಿಣ ಖಂಡಿ ೧ರ		50—0—0
ಕಾಂಬ್ರ ತಗಡು ಮಣ ೧ರ. . . .		20—0—0
ಕಾಂಬ್ರ ಪಾತ್ರೆಗಳು ಮಣ ೧ರ. . . .		22—0—0
ಚೀನಿ ಬೆಳ್ಳಿ ಸೇರು ೧ರ.		18—12—0
ಪಟ್ಟೆ ಹೆಸರು ಮುಡಿ ೧ರ .	5—8—0	5—10—0

ಕೊಡ್‌ಲಿವರ್ ಎಣ್ಣೆ.



ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಯಿಂದ ಪಕ್ವಗೈದುದು. ಇದರಿಂದ ದೊರಕತಕ್ಕ ಲಾಭವಾದರೋ ಇದರಲ್ಲಿಯ ಎಷ್ಟನೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ತಾನೇ ಅವಲಂಬಿಸಿರುತ್ತದೆ. ಅಚ್ಚ ಕೊಡಲೀವರ್ ಎಣ್ಣೆಯೂ ಅದರಿಂದ ಪಕ್ವಗೈದ ಬೇರೆ ಔಷಧಗಳು ಹೊಲಸಾಗಿಯೂ ಕುಶ್ಚಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗದಾದುದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಅನುಸರಿಸುತ್ತದೆ. ಆದರೆ ಅಂತಹ ಅಪಾಯಗಳಾದರು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ಪೋಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತರ ಫಲವು ಆಶ್ಚರ್ಯಕರವಾಗಿದೆ. ಶ್ವಾಸ ಕಾಸ, ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಅಗತ್ಯವಿದೆಯೋ ಅಂತಹ ಶ್ವಾಸಕಾಸ ಕ್ಷಯಾದಿ ರೋಗಗಳಲ್ಲಿಯೂ ಇತರ ರೋಗಗಳಲ್ಲಿಯಾದರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಯೆ ಪೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೇ ಕೇಳಿಕೊಳ್ಳಿರಿ. ಈ ಮಿಶ್ರಣವು ಸುರಸವಾಗಿರುತ್ತದೆ. ಅದು ಎಲ್ಲಾ ಕಡೆಗಳಲ್ಲಿ ಮಾರಲ್ಪಡುವದು. ಮತ್ತು ಕನ್ನಡ ಬಲ್ಲವರೆಲ್ಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಬಾಟ್ಲಿ 1ಕ್ಕೆ 3—4—0. ಅರ್ಧ ಬಾಟ್ಲಿಗೆ 1—12—0

ದಿ ಊಲನ್ ಪಾಟ್ನರ್,
ಮಂಗಳೂರು, ದ. ಕ.

ನೋಟೀಸು.

ಹಿಂದು ಟ್ರಾನ್ಸಿಟ್ ಕಂಪೆನಿ, ಮಂಗಳೂರು.

ಇದೇ ಸಪ್ಟಂಬರ ತಾ. 11ರ ಲಾಗಾಯಿತು ಮುಂಚಿನಕ್ಕಿಂತಲೂ ದರಗಳನ್ನು ಕಡಿಮೆ ಮಾಡಿ ಈ ಕೆಳಗಿನ ಚಾರ್ಜು ಇದೋಗಾಗಿಯದೆ.

ಮಂಗಳೂರಿನಿಂದ ಉಡ್ಪಿಗೆ	ಮೈಲ್ ಗಾಡಿ	ರೂ 2—0—0
	I ಕ್ಲಾಸ್	,, 2—0—0
ಮತ್ತು	II ,,	,, 1-12—0
ಉಡ್ಪಿಯಿಂದ ಮಂಗಳೂರಿಗೆ.	III ,,	,, 1—8—0
ಮಂಗಳೂರಿನಿಂದ ಮುಲ್ಕಿಗೆ		,, 1—0—0
ಮತ್ತು		,, 0 14—0
ಮುಲ್ಕಿಯಿಂದ ಮಂಗಳೂರಿಗೆ.		,, 0-13—0
ಉಡ್ಪಿಯಿಂದ ಕುಂದಾಪುರಕ್ಕೆ	ಮೈಲ್ ಗಾಡಿ	,, 1—4—0
ಮತ್ತು	I ಕ್ಲಾಸ್	,, 1—4—0
ಕುಂದಾಪುರದಿಂದ ಉಡ್ಪಿಗೆ.	II ,,	,, 1—2—0
ಮಂಗಳೂರಿನಿಂದ ಪುತ್ತೂರಿಗೆ ಮತ್ತು ಪುತ್ತೂರಿನಿಂದ ಮಂಗಳೂರಿಗೆ.		,, 1—0—0
ಮಂಗಳೂರಿನಿಂದ ಬಂಟ್ವಾಳಕ್ಕೆ		,, 0-10—0
ಬಂಟ್ವಾಳದಿಂದ ಮಂಗಳೂರಿಗೆ.		,, 0—8—0

Mangalore,
25th August, 1915.

N. V. Rau,
Manager.

Vikata Vinodini.

An illustrated Kannada monthly journal, full of humourous stories, witty sayings, comic sketches, moral truths, Etc.

Annual subscription (including postage) Re. 1—0—0 only.

Address:— **Vikata Vinodini Office,**
Cottonpet, Bangalore City.

ಕನ್ನಡ ಮಾಸಪತ್ರಿಕೆ

ವಿಕಟ ವಿನೋದಿನಿ.

ಹಾಸ್ಯರಸ ಪ್ರಧಾನವಾದ ಮತ್ತು ನೀತಿಪರವಾದ ಹಾಸ್ಯೋಲ್ಲೇಖನಗಳಿಂದ ಕೂಡಿರುವ ಸಚಿತ್ರವೂ ವಿಚಿತ್ರವೂ ಆದ ಮಾಸಪತ್ರಿಕೆಗೆ ಒಂದು ವರುಷದ ಚಂದಾ ಅಂಚೆ ಹಾಸಲು ಸೇರಿ ರೂ. 1 ಮಾತ್ರ.

ನಮ್ಮ ವಿಳಾಸ:— "ವಿಕಟ ವಿನೋದಿನಿ" ಆಫೀಸು,
ಅರಳೆಪೇಟೆ, ಬೆಂಗಳೂರು ಸಿಟಿ.

ಪ್ರಿಯರೇ,

ನಾವು ಮದ್ರಾಸಿಗೆ ಹೋದರೆ ಯಾರಲ್ಲಿ ಉಳಕೊಳ್ಳುವದು? ಎಂಬ ಈ ಚಿಂತೆ ನಮಗೆ ಇನ್ನು ಮೇಲ ಬೇಡ. ಯಾಕಂದರೆ, ಅಲ್ಲಿದ್ದ ನಮ್ಮೂರಿನ ಸೋಮೇಶ್ವರ ನರಸಿಂಗರಾಯರು ಮುಂಚಿಗಿಂತ ರೈಲ್ವೆ ಸ್ಟೇಶನಿಗೆ ಇನ್ನೂ ಹತ್ತರದಲ್ಲಿ ಇನ್ನೂ ವಿಶಾಲವಾದ ಉಪ್ಪರಿಗೆ ಮನೆ ತಕ್ಕೊಂಡಿದ್ದಾರೆ. ಮುಂದಾಗಿ ಒಂದು ಕಾರ್ಡು ಬರೆದರೆ ಸ್ಟೇಶನಿಗೇ ಜನಕಳುಹಿಸಿ ನಿಮ್ಮನ್ನು ಆಮಂತ್ರಿಸುತ್ತಾರೆ. ಊಟಕ್ಕೂ ವಸತಿಗೂ ಮನೆಯಷ್ಟೇ ಸೌಕರ್ಯ. ಖರ್ಚೇನೂ ವಿಶೇಷವಿಲ್ಲ. ಹೀಗಿರುವಲ್ಲಿ ನಿಮ್ಮ ಕಾರ್ಯವನ್ನು ಸ್ವತಹಾ ಹೋಗಿ ಜಯಿಸಿಕೊಂಡು ಬರಲಿಕ್ಕೆ ಅನುಮಾನಪಡುವದೇಕೆ?

ವಿಳಾಸ.— ಸೋಮೇಶ್ವರ ನರಸಿಂಗರಾವ್,
ಕೋಮಲ ವಿಲಾಸ,
ರಸಪ್ಪಚೆಟ್ಟಿ ಬೀದಿ, ಮದರಾಸು.

ನೋಟೀಸು.

ಮಂಗಳೂರು ತಾಲೂಕು ವಾಮಂಜೂರು ಮಾಗಣೆ ಕೊಂಪದವು ಗ್ರಾಮದಲ್ಲಿ ಇರುವ ಸಾಂತುಗೌಡನ ಮಗ ಸೊನುಗೌಡನು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನಂದರೆ.—

ನನ್ನ ಅಣ್ಣ ಮೃತಪಟ್ಟ ಬಾಬಿಗೌಡನ ಮಗ ರಾಮ ಯಾನೆ ಅಪ್ಪು ಗೌಡನು ಸುಮಾರು ವರ್ಷಗಳಿಂದ ಬುದ್ಧಿ ಸ್ವಸ್ಥತೆ ಇಲ್ಲದವನಾಗಿದ್ದು ಆತನು ಮ ನಮ್ಮ ಸ್ವಜಾತಿಯ ಕೆಲವರು ಕೂಡಿಕೊಂಡು ಇದೇ ಆಗೋಸ್ತು ತಿಂಗಳ ತಾ. ೧೧ನೇ ಮಂಗಳವಾರ ದಿವಸ ಅಂದರೆ ಆಟಿ ಅಮಾವಾಸೆ ನಮ್ಮಿಂದ ಸಮುದ್ರ ಸ್ನಾನದ ಬಗ್ಯೆ ಸುರತಕಲ್ಲು ಗ್ರಾಮಕ್ಕೆ ಹೋದ್ದಲ್ಲಿ, ಆತನನ್ನು ನಮ್ಮ ಕೊಂಪದವು ಗ್ರಾಮದ ಮೋನು ಶೆಟ್ಟಿ ಅಳಿಯ ತನಿಯ ಶೆಟ್ಟಿ ಎಂಬವನು ತನ್ನ ಹೆಂಡತಿ ಮನೆಗೆ ಕೊಂಡುಹೋಗಿ ಆತನನ್ನು ಹೆದರಿಸಿ ಪತ್ತಾಯದಿಂದಲೂ, ಬಲೋತ್ಕಾರದಿಂದಲೂ ಕಾಗದಕ್ಕೆ ಆತನಿಂದ ಗೆರೆಗಳು ಹಾಕಿಸಿ, ಮ ಆತನಿಂದ ಹೆಬ್ಬೆಟ್ಟಿನ ಗುರ್ತು ಸಹಾ ಮಾಡಿಸಿ ಅಲ್ಲಿಯ ಪೋಸ್ಟು ಮಾಸ್ಟರ ನಾರಾಯಣ ಶ್ಯಾನಭೋಗ, ಮ ಮಾಜಿ ಪಟೇಲ ವೆಂಕಟಾಚಲಯ್ಯ ಮ ಇನ್ನು ಕೆಲವು ಬಂಟರ ಜಾತಿಯವರು ಕೂಡಿಕೊಂಡು ಏನೋ ಒಂದು ತರದ ದಾಖ್ಲೆಯನ್ನು ಸೃಷ್ಟನೆ ಮಾಡಿರುತ್ತಾರಾಗಿ ನಾನು ವರ್ತಮಾನ ಕೇಳುವದರಿಂದ ಹಾಗೆ ಸದರಿಯವರೆಲ್ಲರು ಒಟ್ಟಾಗಿ ಅನ್ಯಾಯದಿಂದ ಪ್ರತಿಫಲ ವಗೈರೆ ಕೊಡದೆ ಯಾವ ವಿಧದಿಂದಲೂ ತಯಾರಿಸಿ ಇರುವ ನೋಟು ಆಗಲಿ, ದಸ್ತೈವಜು ಆಗಲಿ, ಮ ಅಥವಾ ಕೈ ಕಾಗದವಾಗಲಿ, ಯಾರೊಬ್ಬರಾದರೂ ಅವುಗಳ ಹಕ್ಕನ್ನು ಟ್ರಾನ್ಸ್‌ಫರ್ ಪಡಕೊಳ್ಳಬಾರದೆಂತಲೂ, ಹಾಗೆ ಟ್ರಾನ್ಸ್‌ಫರ್ ಮಾಡಿಕೊಂಡಲ್ಲಿ ಅಂಥವರಿಗೆ ಎಷ್ಟುಕ್ಕೂ ಪ್ರಯೋಜನ ಸಿಕ್ಕಲಾರದೆಂತಲೂ, ಈ ಬಗ್ಯೆ ಸದರಿ ತನಿಯ ಶೆಟ್ಟಿಗೆ ಮ ಸದರಿ ನಾರಾಯಣ ಶ್ಯಾನಭಾಗರಿಗೆ ಅಲಾಯಿದಾ ಟಪ್ಪಾಲು ರಿಜಿಸ್ಟ್ರಿ ನೋಟೀಸು ಮೂಲಕ ತಿಳಿಸಿರುತ್ತೇನೆ. ಅದಲ್ಲದೆ ನಮ್ಮ ಕುಟುಂಬದಲ್ಲಿ ನಾನು ಹಿರಿಯವನಿದ್ದು ಕುಟುಂಬದ ಆಡಳಿತೆ ವಗೈರೆ ನಾನೇ ನಡಿಸಿಕೊಂಡು ಬರುವಂಥವನಾದ್ದರಿಂದಲೂ, ಆತಗೆ ಸಾಲಮಾಡುವ ಅಥವಾ ಸಾಲ ಪಡಕೊಳ್ಳುವ ಗರ್ಜು ಎಷ್ಟನ್ನಾದರೂ ಇಲ್ಲದೆ ಇರುವದರಿಂದ ಮ ಆತನು ಈ ವರೇಗೂ ಸಾಲಪಡಕೊಂಡವನಲ್ಲವಾದ್ದರಿಂದ ಕೂಡಾ ಜ್ಯಾಹಿರಾತಿ ಬಗ್ಯೆ ನಡದ ಸಂಗತಿಗಳನ್ನು ಸರ್ವ ಜನರ ತಿಳುವಳಿಕೆ ಬಗ್ಯೆ ಬರಕೊಂಡಿರುತ್ತೇನೆ.

ತಾ. 18—9—1915 ||| ಈ ಮೂರು ಗೆರೆ ಸೊನುಗೌಡನ ರುಜು.
ಬೆಳ್ಳಿಬೆಟ್ಟುಗುತ್ತಿನ ವಾಂಟಪ್ಪ ಗೌಡನ ಸಾಕ್ಷಿ

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,
ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ.

೧. ಕುಟುಂಬಜೀವನಿ—ಎಲ್ಲಾ ರೋಗಗಳನ್ನು ತ್ವರೆಯಾಗಿ ಗುಣಪಡಿಸುವದು. 16 ಔಷಧಗಳ ಸಂಗ್ರಹದ ಪೆಟ್ಟಿಗೆ 1ಕ್ಕೆ 8—0—0.

೨. ಶತಮೂಲಿಕಾ ಅಮರಸಂಜೀವನಿ—ಈ ಟೊನಿಕ್ ದ್ರಾವಕವು ನಿಶ್ಶಾಣಗಳಿಗೆ ಚೈತನ್ಯ ಉಂಟುಮಾಡಿ ಅಮರತ್ವವನ್ನು ಕೊಡುತ್ತದೆ. ಬಾಟ್ಲಿ 1ಕ್ಕೆ 1—0—0.

೩. ಬಾಲಸಂಜೀವನಿ—ಮಧುರ ಟೊನಿಕ್ ಅಶಕ್ತ ಬಾಲಕರಿಗೆ ಸಶಕ್ತರಾಗಿ ಮಾಡಿ ವರ್ಧಮಾನ ಚಂದ್ರನಂತೆ ಬೆಳಗಿಸುತ್ತದೆ. ಬಾಟ್ಲಿ 1ಕ್ಕೆ 0—12—0.

೪. ವಸಂತ ಕುಸುಮಾಕರ—ಈ ಸುವಾಸಿಕ ತೈಲವು ಕೇಶ ವೃದ್ಧಿಮಾಡಿ ಶಿರೋರೋಗ ನೇತ್ರರೋಗಗಳನ್ನು ಶಮನಮಾಡಿ ಮೆದುಳನ್ನು ತಂಪು ಮಾಡಿ ಜ್ಞಾನಶಕ್ತಿ ಹೆಚ್ಚಿಸಿ, ಬುದ್ಧಿ ಭ್ರಮಣವನ್ನು ಗುಣಮಾಡುತ್ತದೆ. ಬಾಟ್ಲಿ 1ಕ್ಕೆ 1—0—0

೫. ಸುದರ್ಶನಮಾಲಿನಿ—ಈ ಸಿದ್ಧೌಷಧವು ಮೇಹವ್ರಣ ಇತ್ಯಾದಿ ಎಲ್ಲಾ ದುಸಾಧ್ಯ ವ್ರಣಗಳನ್ನು 7-8 ದಿವಸಗಳಲ್ಲಿ ಪೂರ್ಣ ಗುಣಪಡಿಸುವದು. ಕ್ರಯ 4—0—0.

೬. ಗರುಡಧ್ವಜ—ಇದು ಸರ್ಪ ಹುಚ್ಚುನಾಯಿ, ಚೇಳು, ಇಲಿ ಇತ್ಯಾದಿ ಸರ್ವ ಕಠಿಣ ವಿಷಗಳಿಗೆ ಸಂಜೀವನವಾಗಿರುತ್ತದೆ. ಅನುಭವಸಿದ್ಧ 2—0—0

೭. ಆನಂದವನವಿಲಾಸ—ಇದು ಡ್ಯಾಬಿಟಿಸ ಎಂಬ ಬಹುಮೂತ್ರ ರೋಗವನ್ನು 48 ದಿವಸಗಳಲ್ಲಿ ಪೂರ್ಣ ಗುಣಪಡಿಸುತ್ತದೆ. ಪೂರ್ಣ ಔಷಧಕ್ಕೆ 5—0—0.

ಬಳ್ಳಾರ ಮಿಶ್ಶನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಶನ್ ಕೋಪಿನ ಕೊಡೆಗಳೂ, ರೇಷ್ಮೆ ವಸ್ತ್ರಗಳೂ; ಬೆಲ್ಜಿಯಂ ಎಂಬ ಗುರುಸು ಕಲ್ಲು ಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ, ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಷ್ಮೆಯ ವಸ್ತ್ರಗಳೂ; ... ಶೀರೆಗಳೂ, ಬೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ, ಹಂಪನ್‌ಕಟ್ಟಾ, ಮಂಗಳೂರು.

ಅಮೃತಾಂಜನ.

ಜಗತ್ಪ್ರಸಿದ್ಧವಾದ ಬೇನೆಹಾರಿ ಮುಲಾಮು

ಇದರ ಉಪಯೋಗದಿಂದ —ವಾತ, ಸಂಧಿವಾತ, ತಲೆನೋವು ಶಿರೋಭಾರ, ಅರ್ಧಾಂಗ ವಾಯು, ಉಳುಕು, ಎದೆ ನೋವು, ಸೊಂಟದ ನೋವು, ಶೀತ, ಕೆಮ್ಮು, ದಂತಶೂಲೆ, ಮೂಲವ್ಯಾಧಿ, ಚೇಳು ಕಡಿತ, ಆನೆಗಾಲು, ಸುಟ್ಟ ಗಾಯ, ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷಧವಾಗಿ ರುತ್ತದೆ ಸಾವಿರಾರು ಡಾಕ್ಟರರೂ, ಇದಕ್ಕೆ ಸರ್ಟಿಫಿಕೇಟುಗಳನ್ನು ಕೊಟ್ಟ ದ್ದಾರೆ ಪ್ರತಿ ತಿಂಗಳಲ್ಲೂ 25,000 ಬಾಟ್ಲಿಗಳು ಮಾರಲ್ಪಡುತ್ತವೆ ಬಾಟ್ಲಿ ಒಂದರ ಕಿಮ್ಮತು ಆಣೆ 8 ಡಜನ್ 1ಕ್ಕೆ ರೂ 5—4—0 ವಿ ಪಿ ಖರ್ಚು ಪ್ರತ್ಯೇಕ

ಎಚ್ಚರಿಕೆ:—ಅಮೃತಾಂಜನವನ್ನು ಪಡಕೊಳ್ಳುವಾಗ ಸುಂದರವಾದ ಮತ್ತು ಹಲವು ಭಾಷೆಗಳುಳ್ಳ ಕರಡಿಗೆ ಸಮೇತ ಪಡಕೊಳ್ಳಿರಿ

ಗಜಕರ್ಣದ ಮುಲಾಮು.

ಮೂರು ಸರ್ತಿ ತಾಗಿಸುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ. ಇದುವರೆಗೆ ಒಂದು ಮಿಲಿಯ ಡಬ್ಬಿಗಳು ಮಾರಲ್ಪಟ್ಟವು. ರಾಜಾರಾಣಿ ಟ್ರೇಡ್ ಮಾರ್ಕ್ 0—6—0 12 ಡಬ್ಬಿಗಳಿಗೆ 3—8—0 ವಿ ಪಿ ಪ್ರತ್ಯೇಕ

ದಂತಮಂಜನ.

ರಾಜಾರಾಣಿ ಟ್ರೇಡ್ ಮಾರ್ಕ್

ಈ ಮಂಜನದಿಂದ ಹಲ್ಲುಗಳನ್ನು ದಿನಾಗಲೂ ತಿಕ್ಕುವದರಿಂದ ಹಲ್ಲುನೋವು, ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ವಾಸನೆ, ಮುಂತಾದವುಗಳೆಲ್ಲಾ ನಿಲ್ಲುತ್ತವೆ. ಇದರಲ್ಲಿ ಹಲವು ನಮೂನೆಯ ಔಷದಗಳಿವೆ ಬರೀ ಚೋಕಿನ ಹುಡಿ ಅಲ್ಲ ಡಬ್ಬಿ 1ಕ್ಕೆ 0—2—0 ವಿ ಪಿ ಪ್ರತ್ಯೇಕ

ಮೋಹಿನಿ ತೈಲ.

ಈಗ ಹಲವು ನಮೂನೆಯ ತೈಲಗಳು ಉಪಯೋಗಿಸಿದವರು ಈ ನಮ್ಮ ಸುಗಂಧಮಯವಾದ ಮೋಹಿನಿ ತೈಲವನ್ನು ಒಂದು ಸಾರಿ ಉಪಯೋಗಿಸಿ ನೋಡಿರಿ ಇದರಲ್ಲಿ ಕೆಸ್ಟರ್ ಒಯಿಲ್ ಇಲ್ಲಾ. ಇದು ಗಿಡಮೂಲಿಕೆಗಳಿಂದಲೂ ಬದಾಮಿನ ಎಣ್ಣೆಯಿಂದಲೂ ತಯಾರಿಸಲ್ಪಟ್ಟಿದೆ ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ ಬೆಳೆಯುವವು

ಬಾಟ್ಲಿ ಒಂದರ ಕಿಮ್ಮತು ಆಣೆ 0—12—0

ಸುಂದರಿ ಮುಲಾಮು.

ಮುದ್ದಣಗಳನ್ನು ನಾಶಪಡಿಸಿ ಮುಖವನ್ನು ಸುಂದರಗೊಳಿಸುವದ ಡಬ್ಬಿ 1ಕ್ಕೆ ರೂ 0—8—0

ವಜ್ರಗುಟಿಕ.

ಧಾತುಪುಷ್ಟಿ, ಧಾತುವೃದ್ಧಿ, ಶಕ್ತಿವರ್ಧಕ 20 ಗುಳಿಗೆಗಳ ಡಬ್ಬಿ ಒಂದರ ರೂ 1—0—0

ಕೆ. ನಟರಾಜನ್ ಎಡಿಟರ್, ಇಂಡಿಯನ್ ಸೋಶಿಯಲ್ ರಿಫ್ರೋಮರ್:—ಅಮೃತಾಂಜನ ಎಲ್ಲಾ ಔಷಧಗಳಿಗಿಂತಲೂ ಬಹಳ ಉತ್ತಮವಾದ ಔಷದ

ಡಬ್ಲ್ಯು ಮೆಕ್ಸ್‌ವೆಲ್, ಮೈಸೂರು:—ಅಮೃತಾಂಜನದಿಂದ ಎಂಥಾ ಕಠಿಣವಾದ ವಾತ ನೋವಾದರೂ ನಿಲ್ಲುತ್ತದೆ

ಆರ್. ಆರ್. ಗಂಗೋಲಿ:—ಅಮೃತಾಂಜನ ವಾತ, ತಲೆನೋವುಗಳ ಮೇಲೆ ದಿವ್ಯ ಔಷದ

ಡಾಕ್ಟರ್ ಡಾಂಡೆಕರ್, ಎಲ್. ಎಮ್. ಎಂಡ್ ಎಸ್:—ಅಮೃತಾಂಜನ ಎಲ್ಲಾ ನೋವುಗಳ ಮೇಲೆ ದಿವ್ಯ ಔಷಧ

ನಮ್ಮ ಔಷಧಗಳನ್ನು ಪಡಕೊಳ್ಳುವಾಗ ಅಮೃತಾಂಜನ ಡಿಪೋ, ಮುಂಬಯಿ ಎಂಬ ಹೆಸರನ್ನು ಓದಿನೋಡಿ ಪಡಕೊಳ್ಳಿರಿ

ಅಮೃತಾಂಜನ ರಖಮಾಗಿಯೂ, ಚಿಲ್ಲರೆಯಾಗಿಯೂ ಬೇಕಾದವರು ನಮ್ಮ ಮುಂಬಯಿ ಆಫೀಸಿಗನೇ ಬರಿಯಬೇಕು. ಮದ್ರಾಸು ಆಫೀಸಿನವರು ರಖಮಾಗಿ ಅಮೃತಾಂಜನ ರವಾನಿಸಿ ಕೊಡುವ ಏರ್ಪಾಡು ಮಾಡಲಿಲ್ಲ

ಮಂಗಳೂರಲ್ಲಿ—ಎಲ್ಲಾ ಔಷಧಗಳು ಈ ಕೆಳಗಿನ ಕಂಪೆನಿಗಳಲ್ಲಿ ಸಿಕ್ಕುವವು.

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್, ಪರ್ಲ್ ಎಂಡ್ ಸನ್ಸ್, ದಿ ಉಲನ್ ಮಾರ್ಟ್, ಕೊಚ್ಚಿಕಾರ ಬ್ರದರ್ಸ್ ಉಡ್ಪಿ

ಅಮೃತಾಂಜನ ಡಿಪೋ,

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ ಟೌನ್, ಮದ್ರಾಸು.

109 ಫ್ರೇಯರ್ ರೋಡ, ಮುಂಬಯಿ,

ESTABLISHED JULY 1906.

THE CANARA BANK, LIMITED., MANGALORE.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0	ನಿಯಮಿತ ಮೂಲ ಧನವು ರೂಪಾಯಿ	300,000—0—0
Issued Capital	225,000—0—0	ಹುಟ್ಟಿಬಂದ ಮೂಲ ಧನವು „	225,000—0—0
Subscribed Capital	219,100—0—0	ಪ್ರತಿಜ್ಞಾತ ಮೂಲ ಧನವು „	219,100—0—0
Paid up Capital	194,100—0—0	ಆಗತ ಮೂಲ ಧನವು „	194,100—0—0
Deposits	[illegible]1,920—5—0	ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು	381,920—0—0
Reserve Fund	[illegible]3,500—0—0	ರಕ್ಷಿತ ಧನವು	33,600—0—0

Besides the uncalled capital of Rs. 25,000/- 25% of the net profits are added annually to the Reserve Fund. Rs 28,485/ have been invested in Government Paper of the face value of Rs 29,300/-

Dividends of not less than 6% paid during the past years and a bonus of 1% to 2% paid in addition during the last three years.

Fixed Deposits of Rs 50/ and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee

Short-notice Deposits requiring one weeks notice of withdrawal after one month received @ 2½% per annum at the discretion of the managing committee

Current Deposit Account opened free of charge.

Savings Bank Account opened for any sum not less than 4 As and multiples thereof and interest paid @ 4%

Loans granted on proper securities and pledges

Sealed Parcels for safe custody received on a moderate charge

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಿಸೆ ಮಾಲ್ಕರಿಗಳಿಂದ ಕೇಳಲ್ಪಡದಿರುವ ರೂ 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 28,485—0—0 ಸರಕಾರದ ರೂ 29,300ರ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವದು.

ಕಳೆದ ವರುಷಗಳಲ್ಲಿ ಸೇಕಡಾ 6ಕ್ಕೆ ಕಡಿಮೆಯಾಗದಂತೆ ಲಾಭವು ಪಾಲುದಾರರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ [illegible] ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಕರಾರಿನ ರೂ 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರ [illegible] ಮೇರೆಗೆ ಪಡಕೊಳ್ಳಲಾದಾವು

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೆಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣವಾಯಿತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು.

ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು

Canara Bank Ltd.,
Mangalore 1st September 1915.

P. Gopal Naik,
Secretary.

ಅತ್ತರು ಮತ್ತು ಸುರಭಿಗಳಲ್ಲಿ ಮಕುಟವರ್ಧನದಂತಿರುವ

ಒಟ್ಟೊ ಮೋಹಿನಿ.

(ರಿಜಿಸ್ಟರ್ಡ.)

ಅನೇಕ ವಸ್ತುಪ್ರದರ್ಶನಗಳಲ್ಲಿ ಪ್ರದರ್ಶಿಸಲ್ಪಟ್ಟು ಕಡೆಗೆ ಇದರ ದಿವ್ಯವಾದ ಅತ್ಯಂತ ಶ್ರೇಷ್ಠವಾದ ಪರಿಮಳಕ್ಕಾಗಿ ಚಿನ್ನ ಬೆಳ್ಳಿಯ ಪದಕಗಳನ್ನು ಪಡೆದಿದೆ. ಒಂದುಸ್ವಲ್ಪದಲ್ಲಿ ನಾಲ್ಕು ತಟಕುಗಳನ್ನು ತಾಗಿಸುವುದರಿಂದ ಹಿಡಿ ತುಂಬಾ ಮಲ್ಲಿಗೆ ಹೂ ಇದ್ದ ಪರಿಮಳವುಂಟಾಗುವುದು. ಈ ಹೂಗಳು ಕೃತಕವಾದವುಗಳಾದರೂ ನೈಸರ್ಗಿಕ ಹೂವಿನಂತೆ ಪ್ರತಿ ಸಾಯಂಕಾಲ ಬಾಡಿಹೋಗದು. ಆದರೆ ತನ್ನ ಪರಿಮಳವನ್ನು 4 ದಿವಸಗಳಿಗಿಂತಲೂ ಹೆಚ್ಚಿಗೆ ಕೊಡುತ್ತಿರುವದು. ಆದುದರಿಂದ ಒಟ್ಟೊ-ಮೋಹಿನಿಯು ಶಾಶ್ವತವಾದ ಸುರಭಿಯೆಂದು ಕರೆಯಲ್ಪಟ್ಟು ಈ ಕಾಲಕ್ಕೆ ತಕ್ಕುದಾದ ಬಹುಮಾನವಾಗಿ ಕೊಡತಕ್ಕ ದ್ರವ್ಯವಾಗಿದೆ. ಇದರ ಪರಿಮಳವು ಶಾಶ್ವತವಲ್ಲವೆಂದು ದೃಷ್ಟಾಂತಮಾಡಿಕೊಡುವವರಿಗೆ 100 ರೂಪಾಯಿಗಳ ಬಹುಮಾನ ಕೊಡಲಾಗುವದು. ಆದುದರಿಂದ ಏನಕೆ ಈ ಬಹುಮಾನವನ್ನು ಪಡೆಯಲು ಪ್ರಯತ್ನಿಸಲಾಗದು?

ಕ್ರಯ ಅರ್ಧ ಔನ್ಸ್ ಸೀಸೆಗೆ 2—0—0 1 ಡ್ರಾಮ್ ಸೀಸೆಗೆ 0—12—0 ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0.

Proprietors:—The Oriental Drug & Chemical Co.
Sole Agents—MOHINI AGENCY,
3 Fida Building, Jumma Musjid, BOMBAY.
Agents:—Bhagavandas Choonilal & Co.,
177 China Bazar Road, MADRAS.

ಪ್ರೊಪ್ರೈಟರರು:—ಒರಿಯಂಟಲ್ ಡ್ರೆಗ್ ಎಂಡ್ ಕೆಮಿಕಲ್ ಕೋ
ಪ್ರಾಮುಖ್ಯ ಏಜಂಟರು:—ಮೋಹಿನಿ ಏಜನ್ಸಿ
3 ಫಿಡಾ ಬಿಲ್ಡಿಂಗ್, ಜುಮ್ಮಾ ಮಸೀದ್, ಬೊಂಬೈ.
ಏಜಂಟರು:—ಭಗವಾನ್‌ದಾಸ್ ಚೂನಿಲಾಲ್ ಎಂಡ್ ಕೋ.
177 ಚೀನಾ ಬಜಾರ ರಸ್ತೆ, ಮದರಾಸು.

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಖು 1ನೇ ಒಕ್ಟೋಬರ 1915.

ಬ್ರಿಟಿಷ ಸಾಮ್ರಾಜ್ಯದಲ್ಲಿ ಹಿಂದೂಸ್ಥಾನದ ತರಗತಿಯು

ಬ್ರಿಟಿಷ ಸಾಮ್ರಾಜ್ಯದ ಅಧೀನತೆಯಲ್ಲಿ ಸ್ವರಾಜ್ಯ ಭಾಗ್ಯವನ್ನು ಅನುಭವಿಸುತ್ತಿರುವ ಕೆನಡಾ, ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕ ಮೊದಲಾದ ದೇಶಗಳ ಪದವಿಗೆ ಸಮತುಲ್ಯವಾದ ಪದವಿಯು ಹಿಂದೂಸ್ಥಾನಕ್ಕೆ ಬ್ರಿಟಿಷ ಸಾಮ್ರಾಜ್ಯದಲ್ಲಿ ದೊರಕಬೇಕೆಂಬುದು ನಮ್ಮೆಲ್ಲವರ ಆಕಾಂಕ್ಷೆಯಾಗಿದೆ. ಈ ಆಕಾಂಕ್ಷೆಗೆ ಅನುಗುಣವಾಗಿ ಕಳೆದ ವಾರ ಸಿಮ್ಲಾದಲ್ಲಿ ಕೂಡಿದ ಇಂಡಿಯಾ ಸರಕಾರದ ನ್ಯಾಯವಿಧಾಯಕ ಸಭೆಯಲ್ಲಿ ಬಹುಮಾನಪಟ್ಟ ಮಹಮ್ಮದ್ ಶಾಫಿಯವರು ಪ್ರಜಾಕಡೆಯಿಂದ ಒಂದು ನಿರ್ಣಯವನ್ನು ಸಭೆಯ ಅಂಗೀಕಾರದ ಒಗ್ಗೆ ತಂದಿದ್ದರು. ಈ ನಿರ್ಣಯವು ಸಭೆಯಲ್ಲಿ ಸ್ವೀಕರಿಸಲ್ಪಟ್ಟಿತೆಂಬದಾಗಿ ಕಳೆದ ಸಂಚಿಕೆಯ ವರ್ತಮಾನ ಸಂಗ್ರಹದಲ್ಲಿ ವಾಚಕರಿಗೆ ತಿಳಿಸಿದ್ದೇವೆ. ಈ ನಿರ್ಣಯವು ಪ್ರಜಾ ಕಡೆಯವರಿಂದಲೂ ಸರಕಾರದವರಿಂದಲೂ ಸನ್ಮಾನಿಸಲ್ಪಟ್ಟದ್ದರಿಂದ ಮೇಲೆ ನಮೂದಿಸಿರುವ ನಮ್ಮ ಆಕಾಂಕ್ಷೆಯು ಎಷ್ಟರಮಟ್ಟಿಗೆ ಈ ಮೂಲಕ ನೆರವೇರುವಂತಿದೆ ಎಂಬುದನ್ನು ಈ ಸಂದರ್ಭಗಳಲ್ಲಿ ತಿಳಿಯುವದು ಅಗತ್ಯವಾಗಿರುವದು. 'ಇಂಪೀರಿಯಲ್ ಕೊನ್ಫರೆನ್ಸ್' ಸಭೆಗೆ ಹಿಂದೂಸ್ಥಾನದ ಪ್ರತಿನಿಧಿಯನ್ನು ಸೇರಿಸಿಕೊಳ್ಳಬೇಕೆಂಬುದು ಬಹುಮಾನಪಟ್ಟ ಶಾಫಿಯವರ ನಿರ್ಣಯದ ಮುಖ್ಯ ಸಾರಾಂಶವಾಗಿರುವದು. ಇಂಪಿರಿಯಲ್ ಕನ್ಫರೆನ್ಸ್ ಸಭೆಯೆಂದರೇನೆಂಬುದನ್ನು ಬಹುಮಾನಪಟ್ಟ ಹಾರ್ಡಿಂಗ್ ಪ್ರಭುಗಳು ಈ ನಿರ್ಣಯವನ್ನು ಆದರಿಸಿ ಮಾತಾಡುವಾಗ ಸೂಚಿಸಿರುವರು. ಸ್ವರ್ಗಸ್ಥರಾದ ಮಹಾರಾಜ್ಞಿ ವಿಕ್ಟೋರಿಯಾ ಚಕ್ರವರ್ತಿನಿಯವರ ಜುಬಿಲಿ ಮಹೋತ್ಸವ ಕಾಲದಲ್ಲಿ ಸ್ವರಾಜ್ಯ ಪದವೀಧರರಾದ ಬ್ರಿಟಿಷ ವಸಾಹತಗಳ ಸರಕಾರದ ಮಂತ್ರಿಗಳು ಬಂದಿದ್ದರು. ಈ ಸಮಯದಲ್ಲಿ ವಸಾಹತಗಳ ಇಂಥಾ ಪ್ರತಿನಿಧಿಗಳನ್ನು ಕೂಡಿರುವ ಒಂದು ಸಭೆಯನ್ನು ಏರ್ಪಡಿಸುವದು ಉಪಯುಕ್ತವೆಂತ ಕಂಡುಬಂತು. ಈ ಸಭೆಯು ಕೊಲೋನಿಯಲ್ ಕನ್ಫರೆನ್ಸೆಂಬ ಹೆಸರಿನಲ್ಲಿ ೧೯೦೭ನೇ ವರುಷದ ವರೆಗೆ ಐದು ವರುಷಗಳಿಗೆ ಒಮ್ಮೆ ಸರಿಯಾಗಿ ಕೂಡಿಬಂತು. ಬ್ರಿಟಿಷ ಸಾಮ್ರಾಜ್ಯ ಸರಕಾರದ ಕೊಲೋನಿಯಲ್ ಸೆಕ್ರೆಟರಿ ಎಂಬ ವಸಾಹತಗಳ ಮಂತ್ರಿಗಳು ಈ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳುತ್ತಿದ್ದರು. ಸಾಮ್ರಾಜ್ಯ ಸರಕಾರದವರಿಗೂ ವಸಾಹತಗಳ ಸರಕಾರದವರಿಗೂ ಸಮ್ಮಂದಪಟ್ಟ ಸಾಮಾನ್ಯ ವಿಷಯಗಳನ್ನು ಈ ಸಭೆಯಲ್ಲಿ ಚರ್ಚಿಸುವದಿತ್ತು. ೧೯೦೭ನೇ ವರುಷದಲ್ಲಿ ಇಂಡಿಯಾ ಸರಕಾರದ ಪರವಾಗಿ ಮೋರ್ಲಿ ಪ್ರಭುಗಳ ಮೂಲಕ ಇಬ್ಬರು ಪ್ರೇಕ್ಷಕರಾಗಿ,—ಪ್ರತಿನಿಧಿಗಳಾಗಿ ಅಲ್ಲ—ಸಭೆಗೆ ಹೋಗಬಹುದೆಂಬ ಕನ್ಫರೆನ್ಸ್ ಸಭೆಯ ಅನುಜ್ಞೆಯು ದೊರಕಿತು. ಅದೇ ವರುಷದಲ್ಲಿ ಈ ಸಭೆಯ ಹೆಸರನ್ನು "ಇಂಪೀರಿಯಲ್ ಕನ್ಫರೆನ್ಸ್" ಎಂತ ಮಾರ್ಪಡಿಸಿದರು. ಇದೇ ವರುಷದಿಂದ ಬ್ರಿಟಿಷ ಸರಕಾರದ ಪ್ರಧಾನ ಮಂತ್ರಿಗಳು ಈ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡರು. ವಸಾಹತಗಳ ಸರಕಾರದ ಮಂತ್ರಿಗಳೂ, ಸಾಮ್ರಾಜ್ಯ ಸರಕಾರದ ಕೊಲೋನಿಯಲ್ ಸೆಕ್ರೆಟರಿಗಳೂ, ಬ್ರಿಟಿಷ ಪ್ರಧಾನಮಂತ್ರಿಗಳೂ ಈ ಸಭೆಯ ಮೆಂಬರರಾಗಿರುತ್ತಾರೆ. ಸಭೆಯ ರಚನಾ ಕ್ರಮಗಳ ಪ್ರಕಾರ ಹೊಸ ಮೆಂಬರರನ್ನು ಸೇರಿಸಿಕೊಳ್ಳುವದು ಸಭೆಯ ಬಹುಮತದಿಂದಲೇ ನೆರವೇರಬೇಕಾಗಿದೆ. ಇಂಥಾ ಸಭೆಗೆ ಪ್ರವೇಶವು ಹಿಂದೂಸ್ಥಾನದ ಪ್ರತಿನಿಧಿಗೆ ದೊರಕಬೇಕೆಂದು ಮಿ. ಶಾಫಿಯವರ ನಿರ್ಣಯವಾಗಿತ್ತು. ಹಿಂದೂಸ್ಥಾನಕ್ಕೆ ಸ್ವರಾಜ್ಯಧಾರದ ಪದವಿಯು ಇಲ್ಲದಿದ್ದರೂ ಈ ಸಭೆಗೆ ಪ್ರತಿನಿಧಿಯನ್ನು ಕಳುಹಿಸಿಕೊಡುವ ಅರ್ಹತೆಯು ಹಿಂದೂಸ್ಥಾನಕ್ಕೆ ತುಂಬಾ ಇದೆ ಎಂಬುದಾಗಿ ಉದಾರಮತಿಗಳಾದ ಹಾರ್ಡಿಂಗ್ ಪ್ರಭುಗಳು ತಮ್ಮ ಭಾಷಣದಲ್ಲಿ ಅಪ್ಪಣೆಕೊಡಿಸಿರುವರು. ಸಾಮ್ರಾಜ್ಯ ಸರಕಾರದವರ ಅಭಿಪ್ರಾಯವು ಇದೇ ರೀತಿಯಿದ್ದರೂ ಹಿಂದೂಸ್ಥಾನದ ಪ್ರತಿನಿಧಿಗೆ ಈ ಸಭೆಯಲ್ಲಿ ಪ್ರವೇಶವನ್ನು ದೊರಕಿಸಿಕೊಡುವ ಭಾರವನ್ನು ಅವರು ವಹಿಸಿಕೊಂಡದ್ದಿಲ್ಲವೆಂತ ಹಾರ್ಡಿಂಗ್ ಪ್ರಭುಗಳ ಭಾಷಣದಿಂದ ತೋರಿಬರುತ್ತದೆ. ಹಿಂದೂಸ್ಥಾನಕ್ಕೆ ಈ ಸಭೆಯ ಮೆಂಬರುತನವು ಸಭಾ ಮೂಲಕವೇ ದೊರಕಬೇಕೆಂದು ಸಾಮ್ರಾಜ್ಯ ಸರಕಾರದವರ ಅಭಿಮತವೆಂತ ಕಾಣುತ್ತದೆ. ಸಭೆಗೆ ಪ್ರತಿನಿಧಿಯನ್ನು ಕಳುಹಿಸಿಕೊಡುವ ಅಧಿಕಾರವು ಹಿಂದೂಸ್ಥಾನಕ್ಕೆ ದೊರಕುವದೆಂತ ಹೇಳಿದರೂ ಪ್ರತಿನಿಧಿಗಳಾಗಿ ಹೋಗತಕ್ಕವರಾರು? ಇಂಡಿಯಾ ಸರಕಾರದ ಅಧಿಕಾರಿಗಳೋ ಅಥವಾ ಭಾರತೀಯ ಪ್ರಜಾ ವರ್ಗದ ಪ್ರತಿನಿಧಿಗಳೋ ಎಂಬ ಪ್ರಶ್ನೆಯು ಇದೆ. ಸರಕಾರದ ಅಧಿಕಾರಿಗಳು ಹೋಗುವ ಪಕ್ಷದಲ್ಲಿ ಈಗಿನ ವಿಷ್ಯಮಾನಗಳಲ್ಲಿ ದೇಶದ ಯಥಾರ್ಥ ಮಾಹಿತಿಯುಳ್ಳ ಪ್ರತಿನಿಧಿಗಳು ಇವರಾಗುವರೋ? ಒಂದು ವೇಳೆ ಇದ್ದರೂ ಪ್ರಜಾ ಪ್ರತಿನಿಧಿಗಳಿಗೆ ಈ ಮೆಂಬರುತನವು ಕೊಡೋಣಾಗುವದೆಂತ ಇಟ್ಟುಕೊಂಡರೂ ಇವರ ಮೂಲಕ ಸಭೆಯಲ್ಲಿ ನಿಶ್ಚಿತವಾದ ನಿರ್ಣಯಗಳಿಗೂ ಇಂಡಿಯಾ ಸರಕಾರದವರ ಅಭಿಪ್ರಾಯಕ್ಕೂ ಮಿಗಿದು ಇದ್ದರೆ ಇಂಥಾ ನಿರ್ಣಯಗಳ ಪ್ರಯೋಜನವು ವಸಾಹತಗಳ ನಿವಾಸಿಗರಿಗೆ ದೊರಕುವ ರೀತಿಯಲ್ಲಿಯೇ ನಮಗೆ ಎಂದೂ ಈಗಿನ ವಿದ್ಯಮಾನಗಳಲ್ಲಿ ದೊರಕಲಾರದು. ಆದ್ದರಿಂದ ಬ್ರಿಟಿಷ ಸಾಮ್ರಾಜ್ಯಕ್ಕೆ ಒಳಪಟ್ಟ ಸ್ವರಾಜ್ಯಭಾಗ್ಯವು ವಸಾಹತಗಳಿಗಿರುವಂತೆ ನಮಗೂ ಸಹ ದೊರೆತ ವಿನಹ ಇಂಪಿರಿಯಲ್ ಕನ್ಫರೆನ್ಸ್ ಸಭೆಯ ಮೆಂಬರುತನದಿಂದ ಬ್ರಿಟಿಷ ಸಾಮ್ರಾಜ್ಯದಲ್ಲಿ ನಮ್ಮ ತರಗತಿಯು ಗೌರವವು ಹೆಚ್ಚುವಂತಿಲ್ಲ. ಹೀಗಿದ್ದರೂ ಇಂಥಾ ಪ್ರಯತ್ನಗಳು ಸ್ವರಾಜ್ಯ ಪ್ರಾಪ್ತಿಗೆ ಬೇಕಾಗಿರುವ ಸೋಪಾನಗಳೆಂತ ಪ್ರಕೃತ ಅಭಿಪ್ರಾಯಪಡಬೇಕಾಗಿರುವದು.

ವಾಙ್ಮಯ ಕಲಾಶಾಸ್ತ್ರಗಳ ಅಭಿವೃದ್ಧಿಯ ಸಮಾಚಾರ.

(Progress of Literature, Science and Art)

ಉಜ್ಜಯಿನಿಯ ಪ್ರಸಿದ್ಧವಾದ ಪ್ರಾಚೀನ ವೇಧಶಾಲೆ (observatory) ಯನ್ನು ಜೀರ್ಣೋದ್ಧಾರಗೊಳಿಸುವದಕ್ಕಾಗಿಯೂ ಭಾರತೀಯ ಜ್ಯೋತಿಷವನ್ನು ಉಳಿಸುವಂತೆ ಮಾಡುವದಕ್ಕಾಗಿಯೂ ಬರುವ ನವೆಂಬರು ೧೫ರಿಂದ ೨೫ನೇ ತಾರೀಖಿನ ಪರ್ಯಂತ ಉಜ್ಜಯಿನಿಯಲ್ಲಿ ಭಾರತೀಯ ಜ್ಯೋತಿಷ ಪಂಡಿತರ ಮಹಾ ಸಭೆ ಕೂಡತಕ್ಕದ್ದೆಂದು ಗೊತ್ತಾಗಿದೆ. ಈ ಹೊತ್ತಿನಲ್ಲಿ ಪಂಡಿತ ಸಭೆಗಳೂ ವ್ಯಾಖ್ಯಾನಗಳಲ್ಲಿ ಸಾರ್ವಜನಿಕ ಸಭೆಗಳೂ ನಡೆಯುವವು. ಮಹಾರಾಜರು ಎರಡು ಲಕ್ಷ ರೂಪಾಯಿ ವೆಚ್ಚಮಾಡಿ ಪಂಡಿತಾಶ್ರಮವೆಂಬ ಮಂದಿರವನ್ನೂ ಅಲ್ಲಿ ಕಟ್ಟುವರೆಂದು ತಿಳಿಯಬರುತ್ತದೆ

∴

ಕಳೆದ ಸಪ್ಟಂಬರು ೯ನೇ ತಾರೀಖಿನ ದಿನ ಕಲಿಕತ್ತೆಯ ಕಾಲೇಜು ಸ್ಕ್ವಾರಿನಲ್ಲಿ ಮಹಾಬೋಧೀ ಸಂಘದ ಹೊಸ ನಿವೇಶನವನ್ನು ಪ್ರಾರಂಭಿಸುವದಕ್ಕಾಗಿ ದೊಡ್ಡ ಸಭೆ ಸೇರಿದ್ದಿತು. ಪೂಜ್ಯ ಬೌದ್ಧ ಗುರುಗಳಾದ ಧರ್ಮಪಾಲರೂ, ಮಿಸೆಸ್ ಫಾಸ್ಟರ್ ಎಂಬ ಅಮೇರಿಕದ ಸ್ತ್ರೀಯೊಬ್ಬರೂ, ಈ ನಿವೇಶನವನ್ನು ಕೊಂಡುಕೊಳ್ಳುವ ವೆಚ್ಚವನ್ನು ಸಮಾನವಾಗಿ ತೆತ್ತಿರುವರು. ಬೌದ್ಧ ಧರ್ಮದ ಉತ್ಕೃಷ್ಟವಾದ ತತ್ವಗಳನ್ನು ತಿಳಿಯಲಪೇಕ್ಷಿಸುವ ಜಿಜ್ಞಾಸುಗಳಿಗೆ ಅನುಕೂಲವಾದ ಸ್ಥಳಾವಕಾಶವನ್ನು ಕಲ್ಪಿಸಿಕೊಡುವುದೇ ಈ ನಿವೇಶನದ ಉದ್ದೇಶವಾಗಿದೆ. ಶ್ರೀಯುತ ಧರ್ಮಪಾಲರೂ ಇಲ್ಲಿಯೇ ವಾಸಿಸಿಕೊಂಡಿರುವರು. ಬೌದ್ಧ ಧರ್ಮ ವಿಷಯಕವಾದ ಒಂದು ದೊಡ್ಡ ಸರಸ್ವತೀ ಭಂಡಾರವೂ ಇಲ್ಲಿ ಇರುವುದು. ರಾಜಕೀಯ ವಿಷಯಗಳನ್ನುಳಿದು ಬೇರೆ ಅನೇಕ ವಿಷಯಗಳನ್ನು ಕುರಿತು ಈ ಸ್ಥಳದಲ್ಲಿ ಆಗಿಂದಾಗ ಉಪನ್ಯಾಸಗಳೂ ವ್ಯಾಖ್ಯಾನಗಳೂ ನಡೆಯಲು ಏರ್ಪಾಡು ಮಾಡಲಾಗಿದೆ.

∴

ಪ್ಲೇಗಿಗೂ ಇಲಿಗಳಿಗೂ ಯಾವ ಸಂಬಂಧವೂ ಇರುವುದಿಲ್ಲವೆಂದು ಕಲಿಕತ್ತಾ ಮ್ಯುನಿಸಿಪಾಲಿಟಿಯ ಹೆಲ್ತ್ ಆಫಿಸರರು ಡಾ ಕ್ರೇಕರವರು ಅಭಿಪ್ರಾಯಪಟ್ಟು, ಇಲಿಗಳನ್ನು ಕೊಲ್ಲುವುದನ್ನೇ ನಿಲ್ಲಿಸಿಬಿಡಬೇಕೆಂದು ಅವರು ಆ ಮ್ಯುನಿಸಿಪಾಲಿಟಿಯವರಿಗೆ ಸೂಚಿಸಿರುವರು. 'ಒಂದು ಪ್ರದೇಶದಲ್ಲಿ ಪ್ಲೇಗ್ ತಗಲುವ ರೋಗಿಗಳ ಸಂಖ್ಯೆಗೂ ಕೊಂದ ಇಲಿಗಳ ಸಂಖ್ಯೆಗೂ ಏನೇನೂ ಸಂಬಂಧವಿರುವುದಿಲ್ಲ. ಕಲಿಕತ್ತಾ ನಗರಿಯ ೮ನೇ ಡಿಸ್ಟ್ರಿಕ್ಟಿನಲ್ಲಿ ಕಳೆದ ಕೆಲವು ವರ್ಷಗಳಿಂದ ಇಲಿಗಳನ್ನು ಕೊಂದೇ ಇಲ್ಲವಾದರೂ, ಕಳೆದ ಐದು ವರ್ಷಗಳಿಂದಲೂ ಅಲ್ಲಿ ಪ್ಲೇಗು ಕ್ರಮಕ್ರಮವಾಗಿ ಮತ್ತು ನಿರಂತರವಾಗಿ ಕಡಿಮೆಯಾಗುತ್ತ ಹೋಗಿದೆ.* ಆದರೆ ಅದೇ ೧ನೇ ಡಿಸ್ಟ್ರಿಕ್ಟಿನಲ್ಲಿ ವಿಶೇಷವಾಗಿ ಇಲಿಗಳನ್ನು ನಾಶಪಡಿಸುತ್ತಿದ್ದರೂ ೧೯೧೪ನೇ ವರ್ಷದಲ್ಲಿ ಪ್ಲೇಗಿನಿಂದ ಸತ್ತವರ ಸಂಖ್ಯೆಗೂ ೧೯೧೦ರಲ್ಲಿ ಸತ್ತವರ ಸಂಖ್ಯೆಗೂ ಏನೂ ಹೆಚ್ಚು ಕಡಿಮೆ ಕಂಡು ಬರುವು

ದಿಲ್ಲ ಹಾಗೆಯೇ ಅನೇಕ ಡಿಸ್ಟ್ರಿಕ್ಟಿನಲ್ಲಿ ಗ್ರಾಮಗಳಲ್ಲಿ ಕೊಂದ ಇಲಿಗಳ ಮೂರು ಪಾಲಷ್ಟು ಇಲಿಗಳು ಗ್ರಾಮದಲ್ಲಿ ಕೊಲ್ಲಲ್ಪಟ್ಟರೂ ಗ್ರಾಮದಲ್ಲಿ ಪ್ಲೇಗ್ ತಗಲಿದ ಜನರ ಸಂಖ್ಯೆಯು ಗ್ರಾಮದಲ್ಲಿ ತಗಲಿದವರ ಸಂಖ್ಯೆಗಿಂತ ಅಧಿಕವಾಗಿದ್ದಿತು—ಇತ್ಯಾದಿಯಾಗಿ ಡಾ ಕ್ರೇಕ್‌ರವರು ಅನೇಕ ಕಾರಣಗಳನ್ನು ತಮ್ಮ ಸೂಚನೆಗೆ ಪುಷ್ಟಿಯಾಗಿ ಕೊಟ್ಟಿರುವರು.

* *

ಬೆಂಗಳೂರಿನ ಪ್ರಮುಖ ನಾಗರಿಕರು ಹಲವರು ಸೇರಿ ಒಂದು ಮುದ್ರಾಲಯವನ್ನೂ, ದಿನ ಪತ್ರಿಕೆಯನ್ನೂ ಹೊರಡಿಸುವ ಬಗ್ಗಾಗಿ ಒಂದು "ಜಾಯಿಂಟ್‌ಸ್ಟಾಕ್ ಕಂಪೆನಿ"ಯನ್ನು ಸ್ಥಾಪಿಸಲು ಪ್ರಯತ್ನಪಡುತ್ತಿರುವರು. ಮೈಸೂರು ದಿವಾನರಾದ ಶ್ರೀ ಸರ್ ವಿಶ್ವೇಶ್ವರಯ್ಯನವರೂ ಈ ಕಾರ್ಯದಲ್ಲಿ ಪ್ರೋತ್ಸಾಹಿಸಲು ಸಿದ್ಧರಾಗಿರುವರೆಂದು ತಿಳಿಯಬರುತ್ತಿದೆ.

* *

ದ್ರವರೂಪವಾದ ವಾಯುವಿನಲ್ಲಿರುವ ಅಮೋಘವಾದ ಹಲವು ಗುಣಗಳ ದೆಸೆಯಿಂದ ಅದನ್ನು ಇತ್ತೀಚೆಗಾಗಿ ದೊಡ್ಡ ಪ್ರಮಾಣದಲ್ಲಿ ಸಾಧಿಸತೊಡಗಿರುವರು. ಇದರಿಂದ ಒಂದು ವಿಧವಾದ ಉಡಾಯಿಸುವ ಬಾರೂದನ್ನು ಕೂಡ ಮಾಡಬಹುದು. ದ್ರವರೂಪವಾದ ಪ್ರಾಣವಾಯು (Oxygen)ವಿನಲ್ಲಿ ತೀವ ಕಾವಿಗೆಯು ಬಹು ತೀವ್ರವಾಗಿ ಉಡಾಯಿಸುವ ಶಕ್ತಿಯನ್ನು ಹೊಂದುತ್ತದೆ. ದ್ರವರೂಪವಾದ ವಾಯುವನ್ನು ಮುಟ್ಟಿದರೂ ಅದರಲ್ಲಿ ಸ್ವಲ್ಪ ಹೊತ್ತು ಬೆರಳನ್ನು ಅದ್ದಿಸಿ ಹಿಡಿದರೂ ಸುಟ್ಟ ಗುಳ್ಳೆಗಳೇಳುವವು ಮತ್ತು ಈ ಗುಳ್ಳೆಗಳು ಬೇಗನೆ ಮಾಯುವುದಿಲ್ಲ. ದ್ರವರೂಪ ವಾಯುವಿನಷ್ಟು ಶೀತಾವಸ್ಥೆಯಲ್ಲಿ ಸೇಂದ್ರಿಯ (Organic) ವಸ್ತುಗಳು ಕೇವಲ ಗಾಜಿಗಿಂತಲೂ ಪೆಡಸಾಗುವವು. ತಥಾಪಿ ಕೆಲಕೆಲವು ಜೀವಿಗಳು ಅಂಥ ದ್ರವೀಕೃತವಾದ ವಿಷದಲ್ಲಿ ಕೂಡಾ ಜೀವಿಸಲಾಪವಂತೆ. ಇಂಥ ವಾಯುವಿನ ಮೂಲವಾಗಿ ಬಾಷ್ಪರೂಪ ದ್ರವಗಳನ್ನು ಘನಾವಸ್ಥೆಗೆ (Solid) ತರಬಹುದು, ಮತ್ತು ಘನವಸ್ತುಗಳನ್ನು ಇದರಲ್ಲಿ ಅದ್ದಿದ ಪಕ್ಷದಲ್ಲಿ ಅವು ಅಧಿಕ ಘನವಾಗುವವು. ಸಾಮಾನ್ಯವಾಗ ಸೀಸದಗುಂಡಿನಿಂದ ಯಾವ ಶಬ್ದವೂ ಹೊರಡುವದಿಲ್ಲವಷ್ಟೆ. ಆದೇ ಗುಂಡನ್ನು ದ್ರವೀಕೃತವಾಯುವಿನಲ್ಲಿ ಸ್ವಲ್ಪ ಹೊತ್ತು ಹಿಡಿದ ಮಾತ್ರದಿಂದ ಅದು ಉಕ್ಕಿನಷ್ಟು ಗಟ್ಟಿಯಾಗಿ ಕಂಚಿನಂತೆ ಸ್ಪಷ್ಟವಾದ ಶಬ್ದವನ್ನೂ ಕೊಡುವುದು. ಇದರಂತೆಯೇ ಮರಗಳ ಎಲೆಗಳಿಂದ ರಸವನ್ನು ಸುಲಭವಾಗಿ ತೆಗೆಯುವಲ್ಲಿಯೂ ಆಹಾರ ಪದಾರ್ಥಗಳನ್ನು ನಿರ್ದುಷ್ಟಸ್ಥಿತಿಯಲ್ಲಿಡುವಲ್ಲಿಯೂ ಈ ವಾಯುವು ಬಹು ಪ್ರಯೋಜನಕಾರಿಯಾಗಿರುವುದೆಂದು ತಿಳಿಯಬರುತ್ತಿದೆ.

ಮುದುಕನೇಂ ಪುಡುಕುವನೊ.

ಕಂ॥ ನಡುಬಾಗಿದ ಮೆಯ್ಯಂ ಕಾಂ
ಬಿಡಿಪ್ಪೊಂದೂರುಗೋಲಿನೊಳ್ ಪರಿಸುತ್ತಂ ।
ಎಡಬಲಕೆ ನೋಡುತಂ ಮು
ನ್ನಡೆಯಿಂ ಬರ್ಪ ಮುದುಕನದೇಂ ಪುಡುಕುವನೋ ॥ ೧ ॥
ಕಳವಾ ಬಾಲ್ಯಯನಾವೆಡೆ ।
ಯೊಳಾದೊಡಂ ಪುಡುಕಿಮುಗ್ಗಪಡವೆನೆನುತ್ತಂ ।
ಸುಳಿವನೋ ತನ್ನ ಕೆಳೆಯರಂ ।
ಸೆಳೆದೊಯ್ದನನೆಲ್ಲಿ ಕಾಣ್ಬೆನೆಂದರಸುವನೊ ॥ ೨ ॥
ಅಂತಿರದು ತನ್ನ ಹರೆಯದೊ ।
ಳೆಂತು ಮನಂ ಬಂದುದಂತೆ ನಡೆದುದರಿಂದಂ ॥
ಚಿಂತಿಸಿ ಮುಪ್ಪಿನೊಳೀಗಳ್ ।
ಮುಂತಿನ ಸದ್ಗತಿಗೆ ಮಾರ್ಗಮಂ ಪುಡುಕಿದಪಂ ॥ ೩ ॥

ಉ ಮ. ರಾ

ಜೀವದ ಉತ್ಪತ್ತಿಯು.

ಇದು ಶಾಸ್ತ್ರೀಯ ವಿಷಯವು ಇದನ್ನು ಕುರಿತು ಬರೆಯುವಾಗಾಗಲಿ ಮಾತಾಡುವಾಗಾಗಲಿ ಬಹು ಜಾಗರೂಕತೆಯನ್ನು ಇಟ್ಟುಕೊಳ್ಳಬೇಕಾಗುತ್ತದೆ. ಈ ವಿಷಯದಲ್ಲಿ ಒಬ್ಬ ಪ್ರೊಫೆಸರರ ಮನನೀಯವಾದ ಒಂದು ಉಪನ್ಯಾಸವಾಯಿತು. ಆ ಉಪನ್ಯಾಸದ ಸಂಕ್ಷಿಪ್ತ ಸಾರಾಂಶವನ್ನು ನಮ್ಮ ವಾಚಕರಿಗಾಗಿ ಕೆಳಗೆ ಕೊಡುತ್ತೇವೆ.

ಜೀವದ ಉತ್ಪತ್ತಿಯನ್ನು ಮೂರು ವಿಧವಾಗಿ ತೋರಿಸಬಹುದು. ಮೊದಲನೇದು ಯಾವುದೆಂದರೆ ಬರೆ ಜಡಸೃಷ್ಟಿಯಿಂದ ಹೊಸಜೀವವನ್ನು ಹೊಸದೇಹದಲ್ಲಿ ಉತ್ಪನ್ನ ಮಾಡುವುದು. ಹೋದಜೀವವನ್ನು ಪುನಃ ತಂದು ಮೃತಶರೀರದಲ್ಲಿ ಹಾಕುವುದು ಎಂದರೆ ಸಂಜೀವಿನೀ ವಿದ್ಯೆಯು ಇದು ಎರಡನೇ ಭೇದವು. ಜೀವೋತ್ಪತ್ತಿಯ ಪಾಶ್ಚಾತ್ಯರ ಶೋಧಗಳು ಮೊದಲನೇ ವಿಭಾಗಕ್ಕೆ ಸೇರುತ್ತವೆ; ಮತ್ತು ನಮ್ಮಿತ್ತಕಡೆಯ ಈಶ್ವರನಾಗಲಿ ಸಾಧುಪುರುಷರಾಗಲಿ ತೋರಿಸಿದ ಚಮತ್ಕಾರಗಳು ಎರಡನೇ ವರ್ಗಕ್ಕೆ ಸೇರುತ್ತವೆ. ಈಶ್ವರನ ದಶಾವತಾರಗಳಲ್ಲಿಯ ಪರಶುರಾಮ, ರಾಮ, ಕೃಷ್ಣ ಈ ಅವತಾರಗಳಲ್ಲಿ ಅನುಕ್ರಮವಾಗಿ ತಾಯಿಯ, ಬ್ರಾಹ್ಮಣಪುತ್ರನ, ಮತ್ತು ಗುರುಪುತ್ರನ ಜೀವವನ್ನು ಹಿಂದಕ್ಕೆ ತಂದ ಕಥೆಗಳು ಪುರಾಣ ಪ್ರಸಿದ್ಧವಾಗಿವೆ. ಈಶ್ವರಾವತಾರದ ಈ ಕೃತ್ಯಗಳನ್ನು ಬಿಟ್ಟರೂ 'ಸಂಜೀವಿನೀ ವಿದ್ಯೆ'ಯು ದೈತ್ಯಗುರುವಾದ ಶುಕ್ರಾಚಾರ್ಯನಿಗೆ ಗೊತ್ತಿತ್ತೆಂಬುವುದಾಗಿ ಕಾಣುತ್ತದೆ. ಬೌದ್ಧರ ಕಾಲದಲ್ಲಿ ಈ ವಿದ್ಯೆಯನ್ನು ಸಾಧ್ಯಪಡಿಸಲು ಸಿದ್ಧನಾಗಾರ್ಜುನನ ಮುಂತಾದವರ ಯತ್ನವು ನಡೆದಿತ್ತು. ರಾಮ, ಕೃಷ್ಣ ಮುಂತಾದವರು ಯಮಧರ್ಮನ ಸ್ವಾಧೀನವಾದ ಜೀವವನ್ನು ಹಿಂದಕ್ಕೆ ತಂದು ಮೃತರನ್ನು ಬದುಕಿಸಿದರು. ಆದರೆ ಶುಕ್ರಾಚಾರ್ಯನು ಔಷಧಿಗಳ ವೀರ್ಯದಿಂದ ಪ್ರಾಣಗಳನ್ನು ಹಿಂದಕ್ಕೆ ತರುತ್ತಿದ್ದನು. ಮತ್ತು ಮೇಲೆ ಹೇಳಿದ ಸಿದ್ಧನಾಗಾರ್ಜುನನ ಪ್ರಯತ್ನವಾದರೂ ಇದೇ ದಿಕ್ಕಿನಿಂದ ನಡೆದಿತ್ತು. ಪಾಶ್ಚಾತ್ಯರಸಾಯನ ಶಾಸ್ತ್ರಜ್ಞರು ಒಂದೆರಡು ಶತಕಗಳ ಹಿಂದೆ ಇದೇ ತರದ ಅಮೃತಸಂಜೀವಿನಿಯ (Elixir of life) ಬೆನ್ನು ಹತ್ತಿದ್ದರು. ಈ ಬಗೆಯ ಎಲ್ಲ ಪ್ರಯತ್ನಗಳಲ್ಲಿ ಯುರೋಪದಲ್ಲಿಯಾಗಲಿ ಇಲ್ಲಿಯಾಗಲಿ ಒಂದೇ ಮಾದರಿಯ ಫಲನಿಷ್ಪತ್ತಿಯಾಯಿತು! ಆದರೆ ಇದರಿಂದ ಆವ ರಕ್ತ ವಿಷಯದಲ್ಲಿ ಎಲ್ಲರ ಕಲ್ಪನೆಯು ಏನಿದೆಂಬುವುದೊಂದು ಸಂಗತಿ ಮಾತ್ರ ಕಂಡುಬರುತ್ತದೆ.

ಜೀವೋತ್ಪತ್ತಿಯ ಮೂರನೇ ಪ್ರಕಾರವು ಯಾವುದೆಂದರೆ ಮಣ್ಣಿನ, ಕಲ್ಲಿನ ಇಲ್ಲವೇ ಧಾತುವಿನ ಪ್ರತಿಮೆಯಲ್ಲಿ ಜೀವಕಳೆಯನ್ನು ಆವಾಹಿಸುವುದು. ಇದಕ್ಕೆ ಪ್ರಾಣಪ್ರತಿಷ್ಠೆಯೆಂತಲೂ ಇನ್ನೊಂದು ಹೆಸರಿದೆ. ನಾವು ಹಿಂದುಗಳು ಮೂರ್ತಿಪೂಜಕರಿದ್ದರೂ ಮತ್ತು ದೇವರ ಮೂರ್ತಿಯು ಜಡವಸ್ತುವಿನದಿದ್ದರೂ ನಾವು ಆ ಜಡವಸ್ತುವಿನ ಪೂಜೆಯನ್ನಾಚರಿಸುವುದಿಲ್ಲ. ಆದರೆ ಅದರಲ್ಲಿ ಸ್ಥಾಪಿಸಲ್ಪಟ್ಟ ಚೈತನ್ಯದ ಉಪಾಸನೆಯನ್ನು ಮಾಡುತ್ತೇವೆ. ಈ ಸಂಗತಿಯು ಪ್ರಾಣಪ್ರತಿಷ್ಠೆಯ ಕೃತಿಯಿಂದ ಸ್ಪಷ್ಟವಾಗುತ್ತದೆ. ಈಗ ಕೆಲಕೆಲವು ವಿಶಿಷ್ಟಮಂತ್ರಗಳನ್ನುಚ್ಚರಿಸಿದ ಕೂಡಲೆ ಜಡಮೂರ್ತಿಯೊಳಗ ಚೈತನ್ಯವು ಸಂಚರಿಸುವುದು ಹೇಗೆ? ಇದು ಅಸಂಭವವು ಎಂದು ಕೆಲವರಿಗೆ ತೋರಬಹುದು. ಆದರೆ ಈ ಸಂಗತಿಯು ಪ್ರತ್ಯೇಕವು. ಅನೇಕ ಸತ್ಪುರುಷರು ಒಂದೇ ಭಾವನೆಯಿಂದ ಒಂದು ಸಂಗತಿಯನ್ನು ಚಿಂತಿಸಿದ್ದಾದರೆ ಆ ಮೂರ್ತಿಯಲ್ಲಿ ಚೈತನ್ಯಪ್ರವೇಶವು ಏಕೆ ಆಗಕೂಡದು? ಇದು ಸಾಯನ್ಸರೂಮಿನಲ್ಲಿ ನಿಂತು ಮಾಡತಕ್ಕ ಪ್ರಶ್ನೆಯಲ್ಲ, ಶ್ರದ್ಧಾಮಂದಿರದಲ್ಲಿ ಹೊಕ್ಕು ಕೇಳಿದರೆ ಇದಕ್ಕೆ ಸಮಾಧಾನವಾಗಬಹುದು. ಈ ಪ್ರಾಣಪ್ರತಿಷ್ಠೆಯ ಸಮಯದಲ್ಲಿ ಹೇಳುವ ಮಂತ್ರಗಳ ಅರ್ಥವನ್ನು ಆಲೋಚಿಸಿದರೆ ಬಲು ಆಶ್ಚರ್ಯವಾಗುತ್ತದೆ. ಏಕೆಂದರೆ "ಅಸುನೀತೆ" ಮುಂತಾದ ಮಂತ್ರಗಳು ಮನಸ್ಸಿಗೆ ಉದ್ದೇಶಿಸಿದ್ದು, ಪೃಥಿವೀ, ಅಪ, ತೇಜ, ವಾಯು, ಆಕಾಶ ಈ ಪಂಚಮಹಾಭೂತಗಳಲ್ಲಿ ಲೀನವಾದ ಎಲೇ ಮನಸ್ಸೇ ನೀನು ಹಿಂತಿರುಗಿ ಬಾ. ಎಂದು ಹೇಳುತ್ತವೆ. ಅಂತ್ಯೇಷ್ಟಿ (ಉತ್ತರಕ್ರಿಯೆ) ಸಮಯದಲ್ಲಿ ಹೇಳತಕ್ಕ ಮಂತ್ರಗಳಲ್ಲಿ, ಮೃತಶರೀರವನ್ನು ಬಿಟ್ಟುಹೋದ ಆತ್ಮನಿಗೆ ಅಥವಾ ಮನಸ್ಸಿಗೆ ಹೊಸಶರೀರ ಪ್ರಾಪ್ತವಾಗುವುದಕ್ಕಾಗಿ "ಈ ಪಿಂಡದಿಂದ ನಿನಗೆ ಕೈಕಾಲುಗಳು ಶಿಗಲಿ; ಈ ಪಿಂಡದಿಂದ ನಿನಗೆ ಘ್ರಾಣ ಚಕ್ಷುರಾದಿ ಇಂದ್ರಿಯಗಳುಂಟಾಗಲಿ" ಎಂಬಭಿಪ್ರಾಯವು ಹೇಳಿರುತ್ತದೆ. ಈ ಅಭಿಪ್ರಾಯದ ಮೇಲಿಂದ ಈ ಮಂತ್ರಗಳು ಜಡವಸ್ತುವಿನಲ್ಲಿ ಚೈತನ್ಯವನ್ನು ತರುವುದಿಲ್ಲ, ಚೈತನ್ಯಕ್ಕೇ ಜಡದ ಆವರಣವನ್ನು ಹಾಕುತ್ತವೆ; ಹಾಗೆಯೇ ಇದರ ಮೇಲಿಂದ ಜಡವಸ್ತುವಿನಲ್ಲಿ ಚೈತನ್ಯವನ್ನು ಆವಾಹಿಸುವುದು ಮತ್ತು ಮೃತಶರೀರದಿಂದ ಹೊಸಶರೀರ ಮುಂತಾದ್ದುಂಟಾಗುವುದು ಈ ಎರಡು ಸಂಗತಿಗಳಲ್ಲಿ ಪರಸ್ಪರ ವಿರೋಧವಿಲ್ಲ, ಅವು ಸಮಾನಾರ್ಥಕವೇ ಎಂದೆನ್ನಲೇನೂ ಸಂಶಯವಿಲ್ಲ. ಸಾರಾಂಶವೇನೆಂದರೆ —ಮೃತನನ್ನು ಸಜೀವಿಸುವುದು ಹಾಗೆಯೇ ಜಡದಲ್ಲಿ ಹೊಸ ಚೈತನ್ಯವನ್ನು ಹಾಕುವುದು ಈ ಎರಡೂ ಬಗೆಯ ಜೀವದ ಉತ್ಪತ್ತಿಯನ್ನು ಹೇಗೆ ಮಾಡಬಹುದೆಂಬೀ ವಿಷಯದ ವಿಚಾರವು ಅನಾದಿಕಾಲದಿಂದಲೇ ನಡೆಯುತ್ತಿತ್ತೆಂದು ಜಗದ್ವಾಙ್ಮಯದ ಆದಿಗ್ರಂಥವಾದ ಋಗ್ವೇದದಿಂದ ತಿಳಿದು ಬರುತ್ತದೆ.

ಸಂಸ್ಕರಣವೆಂದರೇನು?

ಕಳೆದ ಸೆಪ್ಟಂಬರು ೧೬ನೇ ತಾರೀಖಿನ ದಿನ ಡಾ|| ಡಿ ಪಿ. ಠಾಕೂರ್ (Dr. D. P. Thakore) ಪಿ. ಎಚ್ ಡಿ., ಎಂಬ ಮಹನೀಯರೊಬ್ಬರು ಮದ್ರಾಸು ಹಿಂದೂ ಸಮಾಜ ಸಂಸ್ಕರಣ ಸಭೆಯ ಆಶ್ರಯದಲ್ಲಿ 'ಸಂಸ್ಕರಣವೆಂದರೇನು? ಎಂಬ ವಿಷಯವಾಗಿ ಗಂಭೀರವಾದ ವ್ಯಾಖ್ಯಾನವನ್ನು ಕೊಟ್ಟರು. ಅದನ್ನು ಕುರಿತು ಮಾತನಾಡುತ್ತ: ಪರರನ್ನು ತಿದ್ದುವುದಕ್ಕೆ ಉದ್ಯುಕ್ತನಾಗುವುದಕ್ಕಿಂತ ಪೂರ್ವದಲ್ಲಿ ತನ್ನನ್ನು ತಾನೇ ಹೇಗೆ ತಿದ್ದಿಕೊಳ್ಳಬೇಕೆಂಬುದನ್ನು ಎಲ್ಲರೂ ಅರಿತಿರಬೇಕು. ತನ್ನ ಕುಂದಕಗಳನ್ನು ತಾನು ತಿಳಿದುಕೊಳ್ಳುವುದಕ್ಕೆ ಮುಂಚೆ ಯಾರೂ ಸಂಸ್ಕರಣಾಭಿಲಾಷಿಯಾಗಲಾರನು. ಸಂಸ್ಕರಣ ಪದದಿಂದಲೇ ನ್ಯೂನತಾಜ್ಞಾನವುಂಟಾದಂತೆ ಧ್ವನಿ ಹೊರಡುತ್ತದೆ ಸಮಾಜ ಸಂಸ್ಕರಣಾಭಿಲಾಷಿಯು ಅದೇ ಸಮಾಜದ ಅಂಗವಾಗಿರುವುದು ಸಾಧ್ಯವಲ್ಲ ಏಕೆಂದರೆ ಯಾವುದೊಂದು ಸಮಾಜಕ್ಕೆ ಸೇರಿದವನಾಗಿ ಆ ಸಮಾಜವನ್ನು ತಿದ್ದ ಹೋದರೆ ಅದು ಸಂಸ್ಕರಣವೆನ್ನಿಸಲಾರದು. ಈಗಿನ ಸಮಾಜ ಸುಧಾರಕರೆನ್ನಿಸುವವರಲ್ಲಿ ತಾವು ತಿದ್ದಲು ಉದ್ದೇಶಿಸಿರುವ ಸಮಾಜದಿಂದ ಪ್ರತ್ಯೇಕವಾಗಿ ನಿಲ್ಲುವಷ್ಟು ಧೈರ್ಯವು ಕಂಡು ಬರುವುದಿಲ್ಲ ಪ್ರಕೃತದಲ್ಲಿ ಕೈಕೊಳ್ಳಲಾಗಿರುವ ಪ್ರತಿ ಸಂಸ್ಕರಣವೂ ಮಹಾಜನರ ಅಜ್ಞಾನದ ದುರುಪಯೋಗವನ್ನು ಪಡೆಯುವುದಕ್ಕಾಗಿ ಕೇವಲ ಸ್ವಪ್ರಯೋಜನಕ್ಕಾಗಿ, ಏರ್ಪಟ್ಟಿದೆ ಪರಸ್ಪರ ಪ್ರೇಮ ಸಂಬಂಧವಿಲ್ಲದಿರುವಷ್ಟು ದಿನವೂ ಸಂಸ್ಕರಣವನ್ನು ಮಾಡುವುದು ಕೇವಲ ಅಸಾಧ್ಯವು ಯಾವತ್ತು ಜಾತಿಗಳ ಜನರು ಒಂದಾಗಿ ಕುಳಿತು ಉಣ್ಣುವುದದೊಂದು ಸಂಸ್ಕರಣವಲ್ಲ ಸಮಾಜವನ್ನು ಜೀರ್ಣೋದ್ಧಾರಪಡಿಸಿ ಪುನಃ ಏರ್ಪಡಿಸುವುದೇ ಸಂಸ್ಕರಣವೆನ್ನಿಸುವುದು ಜಾತಿ ಭೇದಗಳನ್ನು ನಿರ್ಮೂಲಗೊಳಿಸುವುದು ನಮ್ಮ ಸುಧಾರಕರ ಮುಖ್ಯ ಮನೋದ್ದೇಶವಾಗಿದೆ. ಆದರೆ ಇವರಲ್ಲನೇಕರಿಗೆ ಜಾತಿಯೆಂಬುದರ ಅರ್ಥವೇ ತಿಳಿಯದು. ಜಾತಿಭೇದಗಳು ಪ್ರಕೃತಿ ಕ್ರಮಗಳಿಗನುಸಾರವಾಗಿ ಏರ್ಪಟ್ಟಿವೆ ವಿವಿಧತ್ವ (ಭಿನ್ನತ್ವ) ವೇ ಪ್ರಕೃತಿ ಕ್ರಮವು ಮತ್ತು ವಿವಿಧತ್ವವಿರುವಲ್ಲಿ ಶ್ರಮವಿಭಾಗವಿದ್ದೇ ಇರುವುದು ಸಮಾಜ ಸಂಸ್ಕಾರಕರು ಪೂರ್ವಾಚಾರಪ್ರಿಯರನ್ನು ನಿಂದಿಸಿ ಮಾತನಾಡುವರು ಆದರೆ ಈಗಿನ ಕಾಲದಲ್ಲಿ ಭಾರತ ವರ್ಷದೊಳಗೆ ಅಂಥ ಪೂರ್ವಾಚಾರಪ್ರಿಯರೆಲ್ಲಿರುವರು? ಪೂರ್ವಾಚಾರವನ್ನು ಮುಳುಗಿಸಲು ಕೈಕೊಂಡ ಸಂಸ್ಕಾರಕನು ತನಗಾಗಿ ಒಂದು ಹೊಸ ಜಾತಿಯನ್ನು ಮಾತ್ರ ಉಂಟು ಮಾಡುವನು ಜಾತಿಗಳೊಳಗೆ ವೈಮನಸ್ಸನ್ನುಂಟು ಮಾಡುವ ಕಾರ್ಯದಲ್ಲಿ ಸಮಾಜ ಸಂಸ್ಕಾರಕರು ಪ್ರವೃತ್ತರಾಗುವಷ್ಟು ದಿನವೂ ಸಮಾಜ ಸಂಸ್ಕರಣವು ಜಯಶಾಲಿಯಾಗಲಾರದು. ಪ್ರೇಮವೇ ಸಂಸ್ಕರಣದ ಬೀಜವು. ಈಗ ಒಬ್ಬೊಬ್ಬರೂ ಉಳಿದವರಿಗೆ ಸುಧಾರಣೆಗಳನ್ನು ಉಪದೇಶಿಸುವ ಕಾರ್ಯವನ್ನು ಕೈಕೊಂಡಂತ್ತಿದೆ. ಹೀಗೆ ಪರರಿಗೆ ಉಪದೇಶಿಸಲು ಸುಧಾರಕರಿಗೆ ಏನು ಅಧಿಕಾರವಿದೆ? ಮತ್ತು ಆ ಅಧಿಕಾರವು ಇವರಿಗೆ ಎಲ್ಲಿಂದ ಬಂದಿತು? ಒಬ್ಬರು ಇನ್ನೊಬ್ಬರನ್ನು ವಿದ್ಯಾಸಂಪನ್ನರಾಗಿಸಬಹುದು ಆದರೆ ಹಾಗೆ ವಿದ್ಯಾಸಂಪನ್ನರಾಗಿ ಜನರು ತಮಗೆ ತಾವೇ ವಿವೇಚಿಸಲು ಶಕ್ತರಾದ ಬಳಿಕ, ನೀವು ಹೀಗೆ ಮಾಡಬೇಕೆಂದೂ, ಹಾಗೆ ಮಾಡಬಾರದೆಂದೂ' ಅವರಿಗೆ ಹೇಳಿದರೆ ಅದು ಅವರನ್ನು ತಪ್ಪುಮಾರ್ಗಕ್ಕೊಯ್ಯುವುದಲ್ಲದೆ ಬೇರೊಂದಲ್ಲ. ಯಾವುದೊಂದು ಸಂಸ್ಕರಣವನ್ನು ಮಾಡುವಲ್ಲಿ ಇತರರ ಪ್ರಯೋಜನಕ್ಕೆಂದು ತನ್ನ ಮನಸ್ಸಾಕ್ಷಿಗೆ ವಿರೋಧವಾಗಿ ವರ್ತಿಸಬೇಕಾಗಿದ್ದರೆ ಅದು ಸಂಸ್ಕರಣವೇ ಅಲ್ಲ. ಆತ್ಮಸಂಸ್ಕರಣ, ಆತ್ಮಗೌರವ, ಆತ್ಮಜ್ಞಾನ ಆತ್ಮಸಂಯಮನ, ಇವೇ ನಿಜವಾದ ಸಂಸ್ಕರಣವು"—ಎಂದು ಉಪನ್ಯಾಸಕರು ಅಪ್ಪಣೆಕೊಡಿಸಿದರು

ಮಠ, ದೇವಸ್ಥಾನಗಳ ಆಡಳಿತೆ.

ಒಂದು ಮಶೀದಿಯ ಆಡಳಿತೆಯನ್ನು ನಡಿಸುತ್ತಿದ್ದ ಒಬ್ಬ ಮೌಲ್ವಿಯು ಒಂದು ದಿನ ರಾತ್ರೆ ಮಶೀದಿಯ ಲೆಕ್ಕಪತ್ರಗಳನ್ನು ಬರಿಯುತ್ತಿರುವಾಗ ಒಬ್ಬ ಸ್ನೇಹಿತನು ಅವನ ಕೂಡೆ ಮಾತಾಡುವುದಕ್ಕೆ ಬಂದನಂತೆ ಆತನು ಬಂದ ಕೂಡಲೆ ಮೌಲ್ವಿಯು ಉರಿಯುತ್ತಿದ್ದ ದೀಪವನ್ನು ಆರಿಸಿ ಬೇರೊಂದು ದೀಪವನ್ನು ಉರಿಸಿದನಂತೆ ಸ್ನೇಹಿತನು ಆಶ್ಚರ್ಯಪಟ್ಟು ಉರಿಯುತ್ತಿದ್ದ ದೀಪವನ್ನು ನೊಂದಿಸಿ ಪ್ರತ್ಯೇಕ ದೀಪವನ್ನು ಉರಿಸುವುದಕ್ಕೆ ಕಾರಣವೇನೆಂದು ಮೌಲ್ವಿಯ ಕೂಡೆ ಕೇಳಿಕೊಳ್ಳಲು "ನಾನು ಮಶೀದಿಯ ಆಡಳಿತೆ ನೋಡತಕ್ಕವನು. ನನ್ನ ಕೆಲಸಕ್ಕೆ ಭಂಡಾರದಿಂದ ಸಂಬಳ ಸಿಕ್ಕುತ್ತದೆ ಮಶೀದಿಯ ಸಂಬಂಧವಾದ ಕೆಲಸವನ್ನು ಮಾಡುತ್ತಿರುವಾಗ್ಯೆ ಆ ಲೆಕ್ಕದ ದೀಪವನ್ನು ಉರಿಸಬಹುದು. ನನ್ನ ಸ್ನೇಹಿತನ ಕೂಡೆ ತಮಾಷೆ ಮಾತಾಡುತ್ತಿರುವಾಗ ಮಶೀದಿ ಸಂಬಂಧವಾದ ದೀಪವನ್ನು ಉರಿಸಿದರೆ ನಾನು ಭಂಡಾರಕ್ಕೆ ದ್ರೋಹ ಮಾಡಿದಂತಾಗಲಿಲ್ಲವೇ" ಎಂಬದಾಗಿ ಉತ್ತರಕೊಟ್ಟನಂತೆ. ಮಠ ದೇವಸ್ಥಾನಗಳ ಈಗಿನ ಆಡಳಿತೆವ ಪಾರುಪತ್ಯಗಾರರಲ್ಲಿ ಹಲವರು ಈ ಮೌಲ್ವಿಯು ಒಬ್ಬ ಹುಚ್ಚನಾಗಿರಬೇಕೆಂತ ಭಾವಿಸಬಹುದು. ಆದರೆ ಆತನ ಮಾರ್ಗವನ್ನು ಅನುಸರಿಸಿದರೆ ನಮ್ಮ ಮಠ ದೇವಸ್ಥಾನಗಳು ಎಷ್ಟೋ ಅಭಿವೃದ್ಧಿಗೆ ಬಂದಾವು ಸನಾತನ ಧರ್ಮಗಳ ಪರಿಪಾಲನೆಗಾಗಿ ಏರ್ಪಡಿಸಲ್ಪಟ್ಟ ಈ ಸಂಸ್ಥೆಗಳ ಉದ್ದೇಶಗಳು ಸಾಂಗವಾಗಿ ನೆರವೇರಿಸಲ್ಪಟ್ಟಾವು. ಹೇಗಿದ್ದಾಗ್ಯೂ ತಮಗೆ ಕೈವರ್ತಿಸಿದ ಖಜಾನೆ ಪೆಟ್ಟಿಗೆಯ ಬಾಗಿಲು ತೆರಿಯುವಾಗ್ಯೆ ಈ ಮೌಲ್ವಿಯ ಸುಸೂತ್ರವು ಪ್ರತಿಯೊಬ್ಬ ಆಡಳಿತೆದಾರನ ಸ್ಮೃತಿಪಥಕ್ಕೆ ಬರಲಿ!

ಹಲವು ಮಠಗಳಲ್ಲಿ ಇವುಗಳ ಆಡಳಿತೆಯನ್ನು ಆ ಮಠದ ಸ್ವಾಮಿಗಳು ತಮಗೆ ಪೂರ್ವಾಶ್ರಮದಲ್ಲಿ ಅತ್ಯಂತ ಸಮೀಪವಾದ ಬಂಧುವಿಗೆ ಅಂದರೆ ತಂದೆ, ಅಣ್ಣ, ತಮ್ಮ ಮಾವ, ಭಾವ ಇವರ ಪೈಕಿ ಯಾರಿಗಾದರೂ ಒಬ್ಬನಿಗೆ ಕೈವರ್ತಿಸುವದು ಅನಾದಿಯಿಂದ ನಡೆದು ಬಂದ ಸಂಪ್ರದಾಯವಾಗಿದೆ ಈ ಕ್ರಮವು ಪೂರ್ವಕಾಲದಲ್ಲಿ ಚೆನ್ನಾಗಿ ನಡೆದು ಬಂದಿತು. ಆ ಕಾಲದ ಜನರು ದೇವರಲ್ಲಿಯೂ ಗುರುಗಳಲ್ಲಿಯೂ ಭಕ್ತಿಯುಕ್ತರಾಗಿದ್ದರು. ಪಾಪಪುಣ್ಯಗಳಿಗೆ ಭಯಪಡುತ್ತಿದ್ದರು. ಲೋಕಾಪವಾದಕ್ಕೆ ಹೆದರುತ್ತಿದ್ದರು. ತಮಗೆ ಈ ಪಾರುಪತ್ಯವನ್ನು ಕೊಟ್ಟಿರುವದು ತಮ್ಮ ಭೋಗಕ್ಕಾಗಿ ಅಲ್ಲ ಮಠವನ್ನೂ ಅಭಿವೃದ್ಧಿ ಮಾಡಿ, ಸನಾತನ ಧರ್ಮವನ್ನೂ ಪರಿಪಾಲನೆ ಮಾಡಿ ತನ್ಮೂಲಕ ತಮಗೆ ಪರಲೋಕ ಸಾಧನೆಯಾಗುವುದಕ್ಕಾಗಿ ಎಂಬದಾಗಿ ಮನಃಪೂರ್ವಕವಾಗಿ ತಿಳಿಯುತ್ತಿದ್ದರು. ಇದಕ್ಕೆ ದೃಷ್ಟಾಂತ, ಕೃಷ್ಣಾಪುರ ಮಠದ ದಾಸಾಚಾರ್ಯರು, ಅದಮಾರು ಮಠದ ರಂಗಾಚಾರ್ಯರು, ಸೋದೇಮಠದ ಶ್ಯಾಮಾಚಾರ್ಯರು, ಪೇಜಾವರ ಮಠದ ವಿಠಲಾಚಾರ್ಯರು. ಇವರೆ ಮೊದಲಾದವರಾಗಿರುವರು ಇವರೆಲ್ಲರು ಈಗ ಮೃತರಾಗಿದ್ದರೂ ಆ ಮಠಗಳು ಇರುವ ವರೆಗೆ ಬದುಕಿರುವಂತೆಯೇ ಇರುವರು. ಈಗಿನ ಕಾಲವಾದರೋ ವಿಪರೀತವಾಗಿದೆ ತಮಗೆ ಪಾರುಪತ್ಯ ಬಂದ ಕೂಡಲೆ ಯಾವ ವಿಧದಿಂದಲಾದರೂ ಸ್ವಾಮಿಗಳನ್ನು ತಮ್ಮ ವಶಮಾಡಿಕೊಂಡು ಬಿಡುವರು. ಸಾಧ್ಯವಿದ್ದಷ್ಟು ಸೊತ್ತನ್ನು ತಮ್ಮ ಸ್ವಂತಕ್ಕಾಗಿ ಮಾಡಿಕೊಳ್ಳುವರು. ಮಠವನ್ನು ವಹಿಸಲಾರದಷ್ಟು ಸಾಲಕ್ಕೆ ಗುರಿಪಡಿಸುವರು. ಎಲ್ಲವರೂ ಹೀಗೆ ಮಾಡುತ್ತಾರೆಂತ ಹೇಳಕೂಡದಾದರೂ ಹೆಚ್ಚಿನವರು ಸ್ವಾರ್ಥಪರರು. ಇದಕ್ಕೆ ಈಗ ಪ್ರಾಪ್ತವಾಗುತ್ತಿರುವ ಕೆಲವು ಮಠಗಳ ಅವಸ್ಥೆಯೇ ದೃಷ್ಟಾಂತ ಶಿಷ್ಯಸಂಪತ್ತಿನಲ್ಲಿಯೂ, ಧನಸಂಪತ್ತಿನಲ್ಲಿಯೂ, ಕೀರ್ತಿಯಲ್ಲಿಯೂ ಮೊದಲನೆಯದಾದರೂ ಸ್ವಾಮಿಗಳವರು ಅವರ ಪಾರುಪತ್ಯಗಾರರ ವಂಚನೆಯಿಂದ ಅನಿರ್ವಚನೆಯಿಂದ ಕಷ್ಟಗಳಿಗೆ ಗುರಿಯಾಗಿರುವ ದೃಷ್ಟಾಂತವು ಒಂದು ಕಡೆಯಿಂದ ತೋರಿಬರುತ್ತದೆ ಮಠಕ್ಕೆ ಎಲ್ಲಿ ಹೋದರೂ ಶಿಷ್ಯರು, ಬ್ರಾಹ್ಮಣರು ಮಾತ್ರವಲ್ಲ ಇತರರಲ್ಲಿಯೂ ಅನೇಕ ಸಹಸ್ರ ಶಿಷ್ಯರು, ಎಲ್ಲಿ ಹೋದರೂ ಮಠದ ಆಸ್ತಿ, ಎಲ್ಲೆಲ್ಲಿಯೂ ಮಠಕ್ಕೆ ಮಠಗಳು ಸುಮಾರು ೩೦-೪೦ ಸಹಸ್ರ ರೂಪಾಯಿ ವರ್ಷ ಒಂದಕ್ಕೆ ಉತ್ಪತ್ತಿ ಇಷ್ಟು ಸ್ಥಿತಿ ಇದ್ದರೂ ಪಾರುಪತ್ಯಗಾರರ ವಂಚನೆಯಿಂದಲೋ, ಅವಿವೇಕದಿಂದಲೊ ಮಠವು ವಹಿಸಲಾರದ ಋಣಬಾಧೆಗೂ ಕಷ್ಟ ಪರಂಪರೆಗಳಿಗೂ ಗುರಿಯಾಗಿದೆ ಎಂದು ಇನ್ನೊಂದು ಕಡೆ ಕೇಳಿಬರುತ್ತದೆ ಇದೆಲ್ಲ ಸಮೀಪದ ಬಂಧುಗಳಿಗೆ ಪಾರುಪತ್ಯ ಕೊಟ್ಟದ್ದರ ಫಲವು ಇನ್ನೂ ಒಂದು, ಎರಡು, ಮೂರು ಮಠಗಳು ಈಗಲೇ ಅಲ್ಲದಿದ್ದರೂ ಇನ್ನು ೧೦ ವರ್ಷಗಳಲ್ಲಿಯಾದರೂ ದಿವಾಳಿಯಾಗುವದರಲ್ಲಿ ಸಂದೇಹವಿಲ್ಲವೆಂತ ಮತ್ತೊಂದು ಕಡೆಯ ವರ್ತಮಾನ ದಿವಾಳಿಯೆಂದರೆ ಪಾಪಾರಿಯಾಗುವದೆಂಬ ಅಭಿಪ್ರಾಯವಲ್ಲ ವಹಿಸಲಾರದ ಸಾಲಬಾರಕ್ಕೆ ಗುರಿಯಾಗುವವೆಂಬ ಅಭಿಪ್ರಾಯ. ಆದುದರಿಂದ ಮಠದ ಆಡಳಿತೆಯನ್ನು ಜಾಣನಾಗಿದ್ದರೂ ತಮ್ಮ ಬಂಧುಗಳಿಗೆ ಕೊಡ್ರಬಾರದು ಕೇವಲ ಪರಕೀಯನಿಗೆ ಕೊಡಬೇಕು. ಆತನು ಬುದ್ಧಿವಂತನಾಗಿಯೂ ಹಿತೈಷಿಯಾಗಿಯೂ ಇದ್ದರೆ ಚಲೋದಾಗುವದು ಆದರೆ ಅಂಥವರು ದೊರಕುವದು ದುರ್ಲಭ ಅಷ್ಟು ಬುದ್ಧಿವಂತನಲ್ಲದಿದ್ದರೂ ಹಿತೈಷಿಯಾಗಿದ್ದರೆ ಸಾಕು ಅವನ ಲೆಕ್ಕ ಪತ್ರಗಳನ್ನು ಆಗ್ಯಾಗ್ಯೆ ತನ್ನಿಖೆಮಾಡಬಹುದು, ಇಲ್ಲವೆ ಮಾಡಿಸಬಹುದು. ತಪ್ಪಿದರೆ ದಂಡಿಸಬಹುದು ನ್ಯಾಯಕ್ಕೆ ಗುರಿಪಡಿಸಬಹುದು. ಮಠದಿಂದ ಹೊರಡಿಸಬಹುದು ಬಂಧುಗಳಾಗಿದ್ದರೆ ಇದು ಯಾವದೂ ಸಾಧ್ಯವಲ್ಲ. ಮಠಾಧಿಪತಿಗಳು ತಮ್ಮ ಮಠಗಳ ಆಡಳಿತೆಯನ್ನು ಕೊಡುವದರಲ್ಲಿ ಇನ್ನಾದರೂ ಚನ್ನಾಗಿ ಜಾಗರೂಕರಾಗಿರುವದು ಒಳ್ಳೆಯದು.

ಧರ್ಮಾಭಿಮಾನಿ.

ವಿಚಿತ್ರವಾದ ಔಷಧ.

ಕುಡಿಕತನವನ್ನು ಅಣಗಿಸುವುದಕ್ಕಾಗಿ ಈಚೆಗೆ ಕೆಲವರು ಮದ್ಯ ನಿರೋಧಕ ಸಂಘದವರು ಒಂದು ಸಲಹೆಯನ್ನು ಕೊಟ್ಟರಂತೆ! ಎಲ್ಲೆಲ್ಲಿ ಹೆಂಡದ ಅಂಗಡಿಗಳು ಈಗ ವ್ಯಾಪನೆಯಲ್ಲಿರುವುವೋ ಅಲ್ಲಲ್ಲಿ ಕಾಪಿ ಅಥವಾ ಚಾ ನೀರಿನ ಅಂಗಡಿಗಳನ್ನಿಟ್ಟಲ್ಲಿ ಕುಡಿಕರ ದೃಷ್ಟಿಯು ಹೆಂಡದ ಮೇಲಿನಿಂದ ಇವುಗಳ ಮೇಲಕ್ಕೆ ತಿರುಗಿಸಲ್ಪಟ್ಟು ಕುಡಿಕತನವು ತಪ್ಪಿಹೋಗುವುದೆಂದು ತಿಳಿಯಪಡಿಸಿದರಂತೆ. ಆ ಸಲಹೆಯನ್ನನುಸರಿಸಿ ಮದ್ರಾಸು ಸರಕಾರದವರು ಒಂದು ವಿಧಿಯನ್ನು ಮಂಜೂರು ಮಾಡಿರುವರೆಂದು ಕೇಳುತ್ತೇವೆ.

ಸ್ಥಾನಿಕವಾಗಿ ವ್ಯಾಪಾರಸ್ಥರಿಂದ ಕಾಪಿ, ಚಾ ಹೊಟೇಲುಗಳನ್ನು ಇಡಿಸಬೇಕೆಂದಿರುವವರಿಗೆ ಅಂಗಡಿಗಳನ್ನಿಡುವುದಕ್ಕೆ ತಕ್ಕ ಸ್ಥಳಗಳನ್ನು ಸುಲಭವಾಗಿ ಕೊಡಿಸಿ ಪ್ರೋತ್ಸಾಹಿಸಬೇಕೆಂದೂ, ವ್ಯಾಪಾರಸ್ಥರು ಅಂಗಡಿಗಳನ್ನಿಡುವುದಕ್ಕೆ ಅಂಗೀಕರಿಸದಿರುವಲ್ಲಿ, ನಷ್ಟವುಂಟಾಗದಿರುವ ಸ್ಥಳಗಳಲ್ಲಿ ಸ್ಥಳೀಯ ಬೋರ್ಡಿನವರೇ ಅಂಗಡಿಗಳನ್ನಿಡಿಸಿ ನಿರ್ವಹಿಸಬೇಕೆಂದೂ ಆಯಾ ಜಿಲ್ಲೆಯ ಕಲೆಕ್ಟರುಗಳಿಗೆ ತಿಳಿಯಪಡಿಸಬೇಕಾಗಿ ನಿಶ್ಚೈಸಲ್ಪಟ್ಟಿದೆ. ಕಾಪಿ ಮತ್ತು ಚಾ ಹೊಟೇಲುಗಳು ಹೆಚ್ಚಾಗಿರುವ ಮ್ಯುನಿಸಿಪಾಲಿಟಿಗಳಲ್ಲಿಯೂ, ದೊಡ್ಡ ಪಟ್ಟಣಗಳಲ್ಲಿಯೂ ಒಂದಾದರೂ ಇಲ್ಲದೆ ಅವುಗಳನ್ನು ಪ್ರಜೆಗಳು ಆದರಿಸರೆಂದು ಸ್ಪಷ್ಟವಾಗುತ್ತಿರುವ ಸ್ಥಳಗಳಲ್ಲಿಯೂ, ಇಂತಹ ಪ್ರೋತ್ಸಾಹಗಳು ಅಗತ್ಯವಿರುವುದಿಲ್ಲ. ಪಟ್ಟಣಗಳಲ್ಲಿ ವಾಸಿಸುತ್ತ ಗ್ರಾಮ ಸೀಮೆಗಳ ಜೀವಿತವನ್ನರಿಯದ ಭಾರತೀಯರಿಗೂ ಚಳಿದೇಶದಲ್ಲಿ ಬೆಚ್ಚಗೆ ಚಾ ಮತ್ತು ಕಾಪಿಯನ್ನು ಸೇವಿಸುತ್ತ ಶಾಕವನ್ನುಂಟುಮಾಡುವುದೆಂದು ಕುಡಿಕರಲ್ಲಿ ಪ್ರತೀತಿಯಿರುವ ಪಾಟು ಸಾರಾಯಿಗಳನ್ನು ತ್ಯಜಿಸುವಂತೆ ಮಾಡಬೇಕೆಂದಿರುವ ಯೂರೋಪದವರಿಗೂ ಈ ಸಲಹೆಯು ಬಹು ಸುಲಭವಾಗಿ ಅಂಗೀಕಾರಾರ್ಹವೆಂದು ತೋರಬಹುದು. ಆದರೆ ಈ ದೇಶದ ಗ್ರಾಮವಾಸಿಗಳ ಜೀವಿತವನ್ನೂ ಅವರಲ್ಲಿಯೂ ಹೆಂಡವನ್ನು ಹೆಚ್ಚಾಗಿ ಉಪಯೋಗಿಸುವ ಸಾಮಾನ್ಯ ಜನರ ಜೀವಿತವನ್ನೂ ತಿಳಿದವರಿಗೆ ಮಾತ್ರ ಈ ಸಲಹೆಯು ನಿರುಪಯೋಗವೆಂದೂ, ನಿಜವಾಗಿಯೂ ಹಾನಿಕರವೆಂದೂ ಸ್ಪಷ್ಟವಾಗಿ ಗೋಚರಿಸದೆ ಇರದು. ಸರಕಾರದವರು ಲೋಕಲ್ ಬೋರ್ಡು ಮೂಲಕವಾಗಿಯೂ, ಕಲೆಕ್ಟರರ ಮೂಲಕವಾಗಿಯೂ ಮೇಲೆ ಹೇಳಿದ ವಿಧಿಯನ್ನು ಜಾರಿಯಲ್ಲಿ ಇಡಿಸಿದಲ್ಲಿ ಕಾಫಿ ಮತ್ತು ಚಾ ತೋಟಗಳ ಸಾಹುಕಾರರಿಗೆ ಲಾಭವು ತಪ್ಪದೆ ಉಂಟಾಗುವುದಲ್ಲದೆ, ಈ ದಕ್ಷಿಣ ರಾಜಧಾನಿಯಲ್ಲಿ ಮಾತ್ರ ಕುಡಿಕತನವು ಕಡಿಮೆಯಾಗದು. ಹೆಂಡವನ್ನು ಕುಡಿಯುವವರಿಗೆ ಕಾಪಿ ಮತ್ತು ಚಾ ಈ ದೇಶದ ಶೀತೋಷ್ಣ ಸ್ಥಿತಿಗಳನ್ನನುಸರಿಸಿ ಆಕರ್ಷಕಗಳಾಗಿರಲಾರವು. ಹೆಂಡಕ್ಕಿಂತಲೂ ಕಾಪಿ ಮತ್ತು ಚಾ ಹೆಚ್ಚಿನ ಬೆಲೆಯುಳ್ಳದಾಗಿದೆ. ಇದೂ ಅಲ್ಲದೆ ಹೆಂಡ ಕುಡಿಕರು ಕಾಪಿ ಮತ್ತು ಚಾ ಕುಡಿಯುವವರೂ ಒಂದೇ ತರಗತಿಯವರಲ್ಲ. ಕಾಪಿ ಮತ್ತು ಚಾ ಕುಡಿಯುವ ಅಭ್ಯಾಸವು ಹೆಂಡದ ಅಭ್ಯಾಸದಂತೆಯೇ ಬಿಡಲಾರದುದೇ. ವೈದ್ಯ ಶಾಸ್ತ್ರಜ್ಞರು ಇವುಗಳನ್ನು ಕೂಡ ದುಷ್ಟ ವಸ್ತುಗಳೆಂದೇ ಖಂಡಿಸಿರುವರು.

ಆದುದರಿಂದ ಇವುಗಳನ್ನು ಹಳ್ಳಿಗಳಲ್ಲಿ ಪ್ರಚಾರಕ್ಕೆ ಇನ್ನೂ ತರುವುದು ಅವರನ್ನು ಈಗಳಿಗಿಂತಲೂ ಹೆಚ್ಚಿನ ವ್ಯಯಪರರನ್ನಾಗಿ ಮಾಡುವುದಕ್ಕೂ ದರಿದ್ರರನ್ನಾಗಿ ಮಾಡುವುದಕ್ಕೂ ಆಗುವುದು. ಈ ವಿಚಾರವಾಗಿ ಯೋಗ ನೋಡಿದರೂ ಹೆಂಡದ ಸ್ಥಾನದಲ್ಲಿ ಕಾಫಿ ಮತ್ತು ಚಾ, ಇವುಗಳನ್ನು ಸರಕಾರದವರೂ ಲೋಕಲ್ ಬೋರ್ಡಿನವರೂ ಪ್ರೋತ್ಸಾಹಿಸಬೇಕೆಂಬುದು ಹಳೆಯ ಚಾಳಿಯನ್ನು ಹೋಗಲಾಡಿಸದೆ ಹಳೆಯ ಕುಡಿಕರನ್ನು ಸಂಸ್ಕರಿಸದೆ ಹೊಸ ಅಭ್ಯಾಸಗಳನ್ನು ಹಿಡಿಸಿ ಹೊಸ ಮಾದರಿಯ ಕುಡಿಕರನ್ನು ಬೆಳೆಯಿಸಿ, ಮೆಲ್ಲಮೆಲ್ಲನೆ ವ್ಯಾಪಿಸುತ್ತಲಿರುವ ವ್ಯಯ ಪರತ್ವವನ್ನು ಎಷ್ಟೋ ಪಾಲು ಬೇಗನೆ ವ್ಯಾಪಿಸುವಂತೆ ಮಾಡುವುದೇ ಆಗದೆ ಇರದೆಂದು ನಮ್ಮ ಅಭಿಪ್ರಾಯವು. ಆದುದರಿಂದ ಸರಕಾರದವರೂ ಲೋಕಲ್ ಬೋರ್ಡಿನವರೂ ಆಲೋಚಿಸಿ ಈ ವಿಷಯದಲ್ಲಿ ಪ್ರವರ್ತಿಸುವರೆಂದೂ, ಪ್ರಭುತ್ವದವರು ಈ ಮೊದಲೇ ಆ ನಿಬಂಧನೆಯನ್ನು ಮಂಜೂರು ಮಾಡಿದ್ದರೆ ಪುನರ್ವಿಮರ್ಶೆಗೆ ತರುವರೆಂದೂ, ನಮ್ಮ ಭಾರತೀಯ ಮುಖಂಡರು ಚನ್ನಾಗಿ ವಿಷಯಗಳನ್ನು ಯೋಚಿಸಿ ಅಭಿಪ್ರಾಯಗಳನ್ನು ಕೊಡುವರೆಂದೂ, ನಮ್ಮ ದೇಶವು ವ್ಯರ್ಥವಾದ ಮತ್ತೊಂದು ಅಭ್ಯಾಸದ ಪಾಲಾಗದಂತೆ ಮಾಡುವರೆಂದೂ ನಂಬುತ್ತೇವೆ.

K.

ಪತ್ರವ್ಯವಹಾರ.

ಸ್ವಾಮಿಾ, ಪತ್ರಿಕಾಕರ್ತರೇ,

ಸ್ವದೇಶಾಭಿಮಾನಿಯ ಕಳೆದ ಸಂಚಿಕೆಯಲ್ಲಿ ಮ. ರಾ. ಪಿ. ರಾಮಚಂದ್ರಯ್ಯನವರು ತಮ್ಮ ಕದ್ರಿ ಮೊದಲಾದ ಕಡೆಗಳಲ್ಲಿದ್ದ ಸ್ಥಿರಾಸ್ತಿಗಳನ್ನೆಲ್ಲ ಈ ಜಿಲ್ಲೆಯ ನಿವಾಸಿಗಳ ಸಾರ್ವಜನಿಕ ಪ್ರಯೋಜನಾರ್ಥವಾಗಿ ವಿನಿಯೋಗಿಸಲ್ಪಡುವಂತೆ ಒಂದು ದಾನ ಶಾಸನವನ್ನು ಮಾಡಿಕೊಟ್ಟರೆಂತಲೂ ಅದಕ್ಕೆ ಮ. ರಾ. ರಾವ್‌ಬಹದ್ದೂರ್ ಎನ್. ಸುಬ್ಬರಾವರೇ ಮೊದಲಾಗಿ ಏಳು ಮಂದಿ ಟ್ರಸ್ಟಿಗಳು ನೇಮಿಸಲ್ಪಟ್ಟಿರುವರೆಂತಲೂ ತಿಳಿದು ತುಂಬಾ ಸಂತೋಷವಾಯಿತು. ಈ ದಾನಶಾಸನ ಆಸ್ತಿಗಳು ಈ ಜಿಲ್ಲೆಯೊಳಗಾಗಿ ಸರ್ವೋತ್ಕೃಷ್ಟವಾದ ಸ್ಥಳಗಳೆಂತಲೂ, ಋಷ್ಯಾಶ್ರಮಗಳಂತೆ ಇರತಕ್ಕವುಗಳೆಂತಲೂ, ಸುಮಾರು ಹತ್ತಿಪ್ಪತ್ತು ಸಹಸ್ರ ರೂಪಾಯಿ ಬೆಲೆಬಾಳತಕ್ಕವುಗಳೆಂತಲೂ ಕೇಳಿದ್ದೆ. ಇಂಥ ಮಹತ್ತರ ದಾನವನ್ನು ಸಾರ್ವಜನಿಕ ಪ್ರಯೋಜನಾರ್ಥವಾಗಿ ಮಾಡಿದವರು ಈ ಜಿಲ್ಲೆಯ ಹಿಂದುಗಳಲ್ಲಿ ಇವರೆ ಮೊದಲನೆಯವರೆಂತ ತೋರುತ್ತೆ. ಆದರೆ ಇಂದ ದಾನವನ್ನು ಹಿಂದು ಸಮಾಜಕ್ಕೆ ಕೈವರ್ತಿಸುವುದಕ್ಕಿಂತಲೂ ಬ್ರಹ್ಮಸಮಾಜ, ಆರ್ಯಸಮಾಜ ಅಥವಾ ಕ್ರೈಸ್ತರಿಗಾದರೂ ಕೊಟ್ಟಿದ್ದರೆ ಚನ್ನಾಗಿತ್ತು. ಏತಕ್ಕೆಂದರೆ ನಾವು ಈ ಜಿಲ್ಲೆಯ ಹಿಂದುಗಳು ಸಂಘದಿಂದ ಕೆಲಸಮಾಡುವುದರಲ್ಲಿ ಎಲ್ಲರಿಂದಲೂ ಹಿಂದೆಯೇ ಉಳಿದಿರುವೆವು. ಒಂದು ಕೆಲಸವನ್ನು ನಾವು ಒಬ್ಬೊಬ್ಬರಾಗಿ ಮಾಡಿದರೆ ಅದು ಕೆಲವು ಕಾಲವಾದರೂ ಬಾಳಿ ಬದುಕುವದಲ್ಲದೆ ಇನ್ನೊಬ್ಬರನ್ನು ಕೂಡಿಕೊಂಡು ಮಾಡಿದರೆ ಸ್ವಲ್ಪ ಕಾಲದಲ್ಲಿಯೇ ಕೆಟ್ಟುಹೋಗುತ್ತದೆಂಬುದು ಅನುಭವಸಿದ್ಧ. ಒಬ್ಬನ ಸಂಗಡ ಇನ್ನೊಬ್ಬನು ಸೇರಬೇಕಾದರೆ 'ನನಗೇನು ಪ್ರಯೋಜನ' ಎಂಬದಾಗಿ ಮೊದಲು ಸ್ವಪ್ರಯೋಜನವನ್ನು ನೋಡುವೆವು. ಯಾವದಾದರೂ ಒಂದು ವಿಧದ ಲಾಭವಿಲ್ಲದಿದ್ದರೆ ಅಂಥ ಕಾರ್ಯಗಳಿಗೆ ಕೈಹಾಕುವುದೇ ಇಲ್ಲ. ತನಗೆ ಪ್ರತಿಫಲವಿಲ್ಲದಿದ್ದರೂ ಹತ್ತು ಮಂದಿಗೆ ಪ್ರಯೋಜನವಾಗತಕ್ಕ ಕಾರ್ಯದಲ್ಲಿ ತನ್ನ ಕೈಲಾದ ಸಹಾಯಮಾಡಬೇಕೆಂಬ ಸಹನಸ್ವಭಾವವು ನಮ್ಮವರಲ್ಲಿ ಬಹಳ ವಿರಳ. ಅಥವಾ ಒಬ್ಬಿಬ್ಬರು ಸಾರ್ವಜನಿಕ ಕಾರ್ಯಗಳಲ್ಲಿ ಪ್ರವೇಶಿಸಿ ನಿಸ್ಪೃಹತೆಯಿಂದ ಕೆಲಸಮಾಡುತ್ತಿದ್ದರೆ ಅಂಥವರನ್ನು ನಾನಾ ವಿಧದಲ್ಲಿ ನಿಂದಿಸಿ ವರ್ತಮಾನ ಪತ್ರಿಕೆಗಳಿಗೆ ತಮ್ಮಾಷೆಯಾಗಿ ಬರೆದೋ ಬೇರೆ ವಿಧದಿಂದಲೋ ಉತ್ಸಾಹ ಭಂಗಮಾಡುವದಲ್ಲದೆ, ಪ್ರೋತ್ಸಾಹಿಸುವವರಿಲ್ಲ. ಇದಕ್ಕೆ ಉಡುಪಿ ಪರಸ್ಪರ ಸಹಾಯಕ ಸಂಘ, ಉಡುಪಿ ಚಿನ್ನದ ಪಾಲಕಿ ಇವುಗಳ ಕುರಿತು ಇತ್ತಲಾಗೆ ಸ್ವದೇಶಾಭಿಮಾನಿ ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳೆ ದೃಷ್ಟಾಂತ. ಮ. ರಾ. ರಾಮಚಂದ್ರಯ್ಯನವರು ಒಂದು ಹಿಂದು ಅನಾಥಾಲಯವನ್ನೂ, ಒಂದು ವಿಧವಾಶ್ರಮವನ್ನೂ, ಒಂದು ಗೋರಕ್ಷಣೆ ಸಭೆಯನ್ನೂ, ಒಂದು ರಾತ್ರಿ ಶಾಲೆಯನ್ನೂ ಏರ್ಪಡಿಸಬೇಕೆಂತ ನಮ್ಮ ಉಡುಪಿಯಲ್ಲಿರುವಾಗ್ಯೆ ಅತಿ ಸಾಹಸಪಟ್ಟರು. ಸಾಯುತ್ತಿರುವ ಅಥವಾ ವಿಮತೀಯರು ಕೊಂಡ್ಡುಹೋಗುತ್ತಿರುವ ಅನಾಥ ಶಿಶುಗಳನ್ನು ಇವರು ತಂದು ಪೋಷಣೆ ಮಾಡುತ್ತಿದ್ದ ವಿಷಯವು ಯಾರಿಗೂ ತಿಳಿಯದ ಸಮಾಚಾರವಲ್ಲ. ಖರ್ಚಿಗೆ ಸಾಲದೆ ಎಷ್ಟೋ ದಿವಸ ಇವರು ದಿವಸಕ್ಕೆ ಒಂದೇ ಊಟಮಾಡುತ್ತಿದ್ದರು. ಇವರ ಪತ್ನಿ ಬೋರ್ಡು ಬಾಲಿಕಾ ಶಾಲೆಯ ಮುಖ್ಯ ಉಪಾಧ್ಯಾಯಿನಿಯರಾದ ಶ್ರೀಮತಿ ಲಕ್ಷ್ಮೀಕಾಂತಮ್ಮನವರು ತಮ್ಮ ಶಾಲೆಯ ಕೆಲಸವನ್ನೂ, ಗೃಹಕೃತ್ಯದ ಕೆಲಸವನ್ನೂ ಪೂರೈಸಿ ತಮ್ಮ ಸಂರಕ್ಷಣೆಯಲ್ಲಿದ್ದ ಅನಾಥ ಮಕ್ಕಳಲ್ಲಿ ಕಾಹಿಲೆಯಾದವುಗಳಲ್ಲಿ ಒಂದನ್ನು ತನ್ನ ಹೆಗಲಲ್ಲಿ ಹಾಕಿಕೊಂಡು ಮತ್ತೊಂದನ್ನು ಮೆಲ್ಲಗೆ ನಡಿಸಿಕೊಂಡು ತಮ್ಮ ಮನೆಯಿಂದ ಸುಮಾರು ಅರ್ಧ ಮೈಲು ದೂರವಿರುವ ಆಸ್ಪತ್ರೆಗೆ ಕೆಲವು ದಿವಸ ಪ್ರತಿನಿತ್ಯ ಕರಕೊಂಡು ಒಂದು ಆರೈಕೆ ಮಾಡುತ್ತಿದ್ದದ್ದನ್ನು ನಾವು ಕಣ್ಣಾರೆ ನೋಡುತ್ತಿದ್ದರೂ ಅವರಿಗೆ ಕೈಲಾದ ಸಹಾಯವನ್ನಾದರೂ ಮಾಡಬೇಕೆಂತ ನಮಗೆ ಯಾರಿಗೂ ತೋರಲಿಲ್ಲ. ಆದ್ದುದರಿಂದ ಐಕ್ಯದಿಂದ ಸತ್ಕಾರ್ಯಗಳನ್ನು ಮಾಡಲಿಕ್ಕೆ ನಾವು ಇನ್ನೂ ಅಭ್ಯಾಸ ಮಾಡಬೇಕಾಗಿದೆ. ಆದರೆ ಮ. ರಾ. ರಾಮಚಂದ್ರಯ್ಯನವರು ಟ್ರಸ್ಟಿಗಳಾಗಿ ಚುನಾಯಿಸಿರುವ ಮ. ರಾ. ಎನ್. ಸುಬ್ಬರಾಯರೇ ಮೊದಲಾದ ಮಹನೀಯರು ಪರೋಪಕಾರಬುದ್ಧಿಯುಳ್ಳವರೂ, ಕಾರ್ಯಪಟುತ್ವವುಳ್ಳವರೂ ಆಗಿರಬಹುದು. ಮ. ರಾ. ರಾಮಚಂದ್ರಯ್ಯನವರಿಗೂ ಅವರು ಚುನಾಯಿಸಿರುವ ಟ್ರಸ್ಟಿಗಳಿಗೂ ಈ ಸತ್ಕಾರ್ಯವನ್ನು ಐಕ್ಯದಿಂದ ನೆರವೇರಿಸುವುದರಲ್ಲಿ ಇತೋಪ್ಯಧಿಕವಾದ ಉತ್ಸಾಹವನ್ನೂ, ಸಾಹಸವನ್ನೂ, ಧೈರ್ಯವನ್ನೂ, ಬುದ್ಧಿಯನ್ನೂ, ಶಕ್ತಿಯನ್ನೂ, ಆಯುರಾರೋಗ್ಯವನ್ನೂ ದಯಪಾಲಿಸಲೆಂತ ಶ್ರೀ ಪರಮಾತ್ಮನನ್ನು ಸದಾ ಪ್ರಾರ್ಥಿಸುತ್ತಿರುವೆನು. ಈ ಸತ್ಕಾರ್ಯಗಳಿಗೆ ಸರ್ವರೂ ಮನೋವಾಕ್ಕರ್ಮಗಳಿಂದ ಸಹಾಯ ಮಾಡುವರಾಗಿ ನಂಬಿದ್ದೇನೆ.

ಒಬ್ಬ ಹಿಂದು

ಯುದ್ಧ ಸಮಾಚಾರ.

ಸಪ್ಟಂಬರ ತಾ. ೨೦, ೨೧.

ಮಿ. ಮೆಕನ್ನಾರವರು ಬ್ರಿಟಿಷ ಪಾರ್ಲಿಮೆಂಟ ಸಭೆಯಲ್ಲಿ ಮುಂದಿನ ವರುಷದ ಆದಾಯ ವೆಚ್ಚಗಳ ಅಂದಾಜು ಪಟ್ಟಿಯನ್ನು ಸಭೆಯ ಮಂಜೂರಾತಿ ಬಗ್ಗೆ ಇಟ್ಟಿದ್ದರು. ಯುದ್ಧದ ಖರ್ಚ ವಿಶೇಷವಾಗಿದ್ದದರಿಂದ ಆದಾಯವು ಇದಕ್ಕೆ ಸರಿಯಾಗಿ ದೊರಕುವಂತೆ ಪರದೇಶಗಳಿಂದ ಬ್ರಿಟಿಷ ದ್ವೀಪಗಳಿಗೆ ಬರುವ ಸಾಮಾಗ್ರಿಗಳ ಮೇಲಿನ ಸುಂಕ ದರವನ್ನು ಹೆಚ್ಚಿಸಿರುತ್ತಾರೆ. ಇನ್ಕಮ್‌ಟ್ಯಾಕ್ಸ್ ಎಂಬ ಆದಾಯಗಳ ಮೇಲಿನ ತೆರಿಗೆಯನ್ನು ಸೇಕಡಾ ೪೦ರಂತೆ ಹೆಚ್ಚಿಸಿರುವರು. ೧೩೦ ಪವನುಗಳ ಮಿತಿಗೆ ಮೀರಿರುವ ಆದಾಯಗಳ ಮೇಲೆ ಈ ತೆರಿಗೆಗಳನ್ನು ವಿಧಿಸಬೇಕೆಂದು ನಿರ್ಣಯಿಸಿರುವರು. ಸಕ್ಕರೆ ಮೇಲೆ ರಾತಲಿಗೆ ಅರ್ಧ ಪೆನ್ನಿ ಪ್ರಕಾರ ತೆರಿಗೆಯನ್ನು ಹೆಚ್ಚಿಸಿರುತ್ತಾರೆ. ಚಾ, ಹೊಗೆಸೊಪ್ಪುಗಳ ಮೇಲಣ ತೆರಿಗೆಯು ಸೇಕಡಾ ೫೦ರಂತೆಯೂ, 'ಪೇಟಂಟ್ ಮೆಡಿಸನ್' ಎಂಬ ಔಷಧಿಗಳ ಮೇಲೆ ತೆರಿಗೆಯು ಸೇಕಡಾ ೧೦೦ರಂತೆಯೂ, ಕಿಸೆಗಡಿಯಾರು, ಗಡಿಯಾರು, ಮೋಟರ್ ಭಂಡಿ, ಗಾಯನ ಸಾಮಗ್ರಿಗಳು ಇವುಗಳ ಮೇಲೆ ಸೇಕಡಾ 33⅓ರಂತೆಯೂ ಹೆಚ್ಚಿಸಲ್ಪಡುವುದು. ಟಪ್ಪಾಲು ಇಲಾಖೆಯಲ್ಲಿ ಸಹ ಇದೇ ರೀತಿ ಹೆಚ್ಚಿಗೆ ಆದಾಯವು ದೊರಕುವ ಕೆಲವು ಮಾರ್ಪಾಟುಗಳು ಮಾಡೋಣಾಗಿವೆ. ಪಾರ್ಲಿಮೆಂಟ ಸಭೆಯವರು ಈ ಅಂದಾಜು ಪಟ್ಟಿಯನ್ನು ಸ್ವೀಕರಿಸಿರುತಾರೆ.

ಪಶ್ಚಿಮ ರಣರಂಗದಲ್ಲಿ ತೋಫುಗಳ ಕಾಳಗವು ವಿಶೇಷವಾಗಿ ನಡಿಯುತ್ತಿರುವದು. ಫ್ರೆಂಚರು ಶತ್ರುಗಳು ಕೆಲವು ಸೇನಾನೆಲೆಗಳನ್ನು ಬಿಟ್ಟು ಓಡುವಂತೆ ಪರಾಕ್ರಮದಿಂದ ಕಾದಾಡುತ್ತಿರುವರೆಂತ ತಿಳಿದುಬರುತ್ತದೆ. ಆಕಾಶನಾವೆಗಳ ಮೂಲಕ ೯ ಕಾಳಗಗಳು ನಡೆದವು. ಈ ಕಾಳಗಗಳಲ್ಲಿ ಎರಡು ಜರ್ಮನ್ ನಾವೆಗಳನ್ನು ಹೊಡೆದು ಕೆಳಕ್ಕೆ ಇಳಿಸಿ ಸುಟ್ಟುಬಿಟ್ಟರವಂ.

'ಬ್ಲೇಕ್‌ಸಿ' ಕಪ್ಪು ಸಮುದ್ರದಲ್ಲಿ ರುಷ್ಯನರ ಯುದ್ಧನಾವೆಗಳು ಟರ್ಕೀ ಜರ್ಮನರ ಒಂದು ಜಲಾಂತರ್ಗಾಮಿ ನಾವೆಯನ್ನು ನಾಶಪಡಿಸಿದವು.

ಪೂರ್ವ ರಣರಂಗದ ದಕ್ಷಿಣ ಪ್ರಾಂತ್ಯಗಳಲ್ಲಿ ರುಷ್ಯಯನರು ಶತ್ರುಗಳನ್ನು ಸೋಲಿಸಿಬಿಟ್ಟು ಕೆಲವು ಸೇನಿಕರನ್ನು ಸೆರೆ ಹಿಡಿದಿರುತ್ತಾರೆಂಬುದಾಗಿ ತಿಳಿದುಬರುತ್ತದೆ.

ತಾರೀಕು ೨೪ ನೇ ಸಪ್ಟಂಬರ

"ಕೊನ್ನಿನ್‌ಹಿನ್‌ಎವನ್ಸ್" ಎಂಬ ಡಚ್ಚರ ವ್ಯಾಪಾರದ ಹಡಗವು ಜಾವಾದಿಂದ ಹೊಲ್ಲೆಂಡಿಗೆ ಬರುತ್ತಿರುವಾಗ ಸಮುದ್ರದೊಳಗಣ ಮದ್ದಿನ ಗನಿಗೆ ತಾಗಿ ಹೋಗಿದೆ. ಇದರಲ್ಲಿದ್ದ ೨೫೦ ಪ್ರಯಾಣಿಕರನ್ನು ಬೇರೊಂದು ಹಡಗಕ್ಕೆ ಒಯ್ದು ಹಾಳಾದ ಹಡಗವನ್ನು ದುರುಸ್ತಿ ಬಗ್ಗೆ ಟೆಮ್ಸ್ ನದಿಗೆ ತಕ್ಕೊಂಡು ಹೋಗಿರುವರು

ಫ್ರೆಂಚರ ಮತ್ತು ಆಂಗ್ಲೇಯರ ಆಕಾಶನಾವೆಗಳು ಜರ್ಮನಿಯ ಸ್ಟುಟ್‌ಗಾರ್ಟ ಪಟ್ಟಣದ ಮೇಲೆ ತಮ್ಮ ವಿಜಯ ಯಾತ್ರೆ ನಡಿಸಿ ಅಲ್ಲಿರುವ ಅರಮನೆಯ ಮೇಲೂ ಇತರ ವಸ್ತಿಗಳ ಮೇಲೂ ಸಿಡಿಮದ್ದಿನ ತೋಟಿಗಳನ್ನು ಹಾಕಿ ಹಿಂತಿರುಗಿ ಬಂದಿರುವವು

ಪೂರ್ವ ರಣರಂಗದಲ್ಲಿ ರುಷ್ಯಯನರ ಸೇನಾಧಿಪತಿಗಳಾದ ಜನರಲ್ ಇವನೊಫ್‌ರವರು ಆಗೋಸ್ತು ತಿಂಗಳ ಅಂತ್ಯದಲ್ಲಿ ಯೂ ಸಪ್ಟಂಬರ ತಿಂಗಳ ಆದಿಭಾಗದಲ್ಲಿಯೂ ಒಟ್ಟಿಗೆ ೭೦,೦೦೦ ಮಂದಿ ಶತ್ರುಗಳ ಸೇನಿಕರನ್ನು ಸೆರೆ ಹಿಡಿದು ಶತ್ರುಗಳಿಂದ ೭೦ ತೋಫುಗಳನ್ನೂ ಯಂತ್ರಗಳ ಮೂಲಕ ಚಲಿಸುವ ೧೩೦ ಫಿರಂಗಿಗಳನ್ನೂ ಪಡೆದಿರುವರೆಂತ ತಿಳಿದುಬರುತ್ತದೆ.

ಕೊನ್ಸಟಿಂಟಿನೋಪಲದಲ್ಲಿ ಗುರುಗಳು ದಂಗೆ ಎದ್ದಿರುವರೆಂಬ ವಾರ್ತೆ ಇದೆ. ತುರ್ಕಿ ಯುವಜನರು ಇನ್ವರ್‌ಪಾಶಾ ಮತ್ತು ಜರ್ಮನರ ಮೇಲೆ ಇವರಿಗೆ ಮನಸ್ತಾಪವೂ ಉಂಟಾಗಿರುವದು. ತುರ್ಕರ ಗುರುಗಳು ಸಭೆಕೂಡಿ ಎನ್ವರ್‌ಪಾಶಾನನ್ನು ಬಹಿಷ್ಕರಿಸಿರುವರು. ಗುರುಗಳ ಈ ವರ್ತನೆಯಿಂದ ಜನರಾಶಿಗೂ, ಸೇನಿಕರಿಗೂ ಯುದ್ಧದ ಕಡೆಗೆ ಅಭಾವವು ಉಂಟಾಗುತ್ತ ಬಂದಿದೆ.

ಬಲ್ಗೇರಿಯದಲ್ಲಿ ಸೇನಾ ತಯ್ಯಾರಿಯು ಆಗಬೇಕೆಂತ ಅಲ್ಲಿಯ ಸರಕಾರದವರು ಆಜ್ಞಾಪಿಸಿರುವರು.

ಸಪ್ಟಂಬರ ತಾ. ೨೫.

ಸಪ್ಟಂಬರ ತಾ. ೨೨ಕ್ಕೆ ಅಂತ್ಯವಾಗುವ ವಾರದಲ್ಲಿ ಬ್ರಿಟಿಷ ಬಂದರುಗಳಲ್ಲಿ ೧೩೨೩ ಹಡಗುಗಳು ಆಮದರಫ್ತಾದವು. ಇವುಗಳಲ್ಲಿ ೨ ಮಾತ್ರ ಮುಳುಗಿಹೋಗಿವೆ. 'ಕೊನ್ನಿನ್‌ಗೆನ್ ಎಮ್ಮಾ' ಹಡಗವು ಮುಳುಗಿಹೋಯಿತೆಂತ ತಿಳಿಯುತ್ತೇವೆ

ಫ್ರೆಂಚರು ಪಶ್ಚಿಮ ರಣರಂಗದಲ್ಲಿ ತೋಫುಗಳನ್ನು ಹಾರಿಸಿ ಶತ್ರುಗಳ ಮದ್ದಿನ ಕೊರಡಿಯನ್ನೂ, ಸುರಂಗಗಳನ್ನೂ ನಾಶಪಡಿಸಿರುವರು.

ಕಣ್ಣುಗಳಿಂದ ನೀರು ದ್ರವಿಸುವಂತೆ ಮಾಡಿ ಸೇನಿಕರ ದೃಷ್ಟಿಯನ್ನು ಬಂಧಿಸುವ ಒಂದು ಹೊಸ ಕುಯುಕ್ತಿಯ ಪ್ರಯೋಗವನ್ನು ಜರ್ಮನರು ಯುದ್ಧರಂಗದಲ್ಲಿ ನಡಿಸುತ್ತಿರುವರಂತೆ.

ಬ್ರಿಟಿಷ ಆಕಾಶನಾವೆಗಳು ವಲೆನ್‌ಸೇನ್ ಎಂಬಲ್ಲಿ ಹಾದು ಹೋಗುವ ಶತ್ರುಗಳ ರೈಲ್ವೆ ಭಂಡಿಗಳ ಮೇಲೆ ತೋಟಿಗಳನ್ನು ಹಾಕಿರುವರು. ಈ ರೈಲ್ವೆ ದಾರಿಯು ಹಲವು ಕಡೆಗಳಲ್ಲಿ ಮುರಿದು ಬಿದ್ದಿರುವದು

ಜರ್ಮನರಿಗೆ ಉಂಟಾದ ಸೇನಾನಷ್ಟವು ೪ ಮಿಲಿಯಗಳಿಗೆ ಮಿಕ್ಕಬಹುದೆಂತ ಅಂದಾಜು ಮಾಡಿರುತ್ತಾರೆ

ರೀಗಾ ಅತ್ತಕಡೆ ಹಾರಿಹೋಗುತ್ತಿರುವ ಜರ್ಮನರ ಒಂದು ಆಕಾಶನಾವೆಯನ್ನು ರುಷ್ಯಯನರು ಕೆಡವಿಬಿಟ್ಟಿರುವರು

ರುಷ್ಯಯನರ ಸೇನೆಯು ಮುಂದೆ ಮೆಕನ್‌ಸೇನ್ ಎಂಬ ದಳವಾಯಿಯ ಸೇನೆಯು ಕಾದಾಡಲಾರದೆ ಹಿಂದಕ್ಕೆ ಸರಿಯುತ್ತಿದೆ ಎಂಬದಾಗಿ ಬರ್ಲಿನ್ ಪಟ್ಟಣದ ಯುದ್ಧಸಮಾಚಾರದಲ್ಲಿರುವದು

ಸಪ್ಟಂಬರ ತಾರೀಕು ೨೬, ೨೭.

ಬಂಗಾಳದ ದಕ್ಷಿಣ ದಿಕ್ಕಿನಲ್ಲಿ ಜರ್ಮನ ಸಬ್‌ಮೆರೀನ್ ನಾವೆಗಳು ಮೂರು ವ್ಯಾಪಾರದ ಹಡಗುಗಳನ್ನು ನಾಶಮಾಡಿರುವವು.

ಹೋಲೆಂಡನ್ನು ಕುರಿತು ಕೊಪನ್ ಹೇಗನ್‌ನಿಗೆ ಬರುವಂಥಾ ಡಚ್ಚರ ಎಮ್ಸಿಜಕ್ ನಾವೆಯನ್ನು ಜರ್ಮನರ ಜಲಾಂತರ್ಗಾಮಿ ನಾವೆಗಳು ಮುಳುಗಿಸಿಬಿಟ್ಟವೆ

ಫ್ರೆಂಚರ ಆಕಾಶನಾವೆಗಳು ಮೇಟ್ಜ್ ರೈಲ್ವೆ ಸ್ಟೇಶನಿನ ಮೇಲೆ ೪೦ ಬಾಂಬುಗಳನ್ನು ಎಸೆದಿರುವವು

ಫ್ರೆಂಚರು ಚೆಂಪೇನ್ ಪ್ರಾಂತ್ಯದಲ್ಲಿ ಶತ್ರುಗಳೊಡನೆ ಕಾದಾಡಿ ಶತ್ರುಗಳ ಸೇನಾ ನೆಲೆಗಳಲ್ಲಿ ಹಲವನ್ನು ತಮ್ಮ ಸ್ವಾಧೀನ ಮಾಡಿಕೊಂಡಿರುವರು. ಸೌಚೆಜ್ ಎಂಬ ಇಡೀ ಗ್ರಾಮವು ಫ್ರೆಂಚರ ಆಧೀನಕ್ಕೆ ಬಂದಿದೆ. ಶತ್ರುಗಳ ಹಲವು ಸೇನಿಕರನ್ನು ಫ್ರೆಂಚರು ಸೆರೆಹಿಡಿದಿರುತ್ತಾರೆ. ಚೆಂಪೇನ್‌ನಲ್ಲಿ ಶತ್ರುಗಳು ಹಲವು ತಿಂಗಳುಗಳಿಂದ ತಯ್ಯಾರಿಸಿರುವ ಕಂದಕಗಳ ವ್ಯೂಹವನ್ನೂ ತೋಟಿಗಳನ್ನೂ ಫ್ರೆಂಚರು ಕೈವಶಮಾಡಿಕೊಂಡಿರುವರು. ಈ ಪ್ರಾಂತ್ಯಗಳಲ್ಲಿ ನಡೆದ ಎರಡು ದಿನಗಳ ಕಾಳಗದಲ್ಲಿ ಮಿತ್ರರು ಶತ್ರುಗಳ ೨೦ ಸಾವಿರ ಸೇನಿಕರನ್ನು ಸೆರೆಹಿಡಿದಿರುವರಾಗಿ ತಿಳಿದುಬರುತ್ತದೆ

ಬ್ರಿಟಿಷರು ಲಾಬೆಸ್ಸೆ ಪ್ರಾಂತ್ಯಗಳಲ್ಲಿ ಶತ್ರುಗಳನ್ನು ಹಿಂದಕ್ಕೆ ಅಟ್ಟಿ ೪೦೦೦ ಗಜಗಳಷ್ಟು ವಿಸ್ತೀರ್ಣದ ಶತ್ರುಗಳ ಸೇನಾನೆಲೆಯನ್ನು ಸ್ವಾಧೀನಮಾಡಿಕೊಂಡಿರುವರಾಗಿ ತಿಳಿದುಬರುತ್ತದೆ.

ಪೂರ್ವ ರಣರಂಗದಲ್ಲಿ ರುಷ್ಯಯನರು ಒಸ್ಟ್ರಿಯನರಿಂದ ಲಕ್ ಎಂಬ ಪಟ್ಟಣವನ್ನು ಹಿಂದಕ್ಕೆ ಪಡೆದಿರುವರು. ಡ್ವಿನೆಟ್ ಪ್ರಾಂತ್ಯಗಳಲ್ಲಿ ರುಷ್ಯಯನರು ಲೊಗ್ನಿಟೆನ್ ಎಂಬ ಪಟ್ಟಣವನ್ನು ಹಿಂದಕ್ಕೆ ಪಡೆದಿರುತ್ತಾರೆ.

ಗ್ರೀಸು ದೇಶದಲ್ಲಿ ಸೇನೆಗಳನ್ನು ಸಿದ್ಧಗೊಳಿಸಲು ರಾಜಾಜ್ಞೆಯಾಗಿರುವದು

ಸಪ್ಟಂಬರ ತಾ. ೨೮.

ಜರ್ಮನ ನೌಕಾ ಸೇನೆಯು ಬೆಲ್ಜಿಯಂ ಪ್ರಾಂತ್ಯಗಳನ್ನು ಬಿಟ್ಟುಹೋಗಿರುವದು.

೨೦೦ ಗಜಗಳಷ್ಟು ವಿಸ್ತೀರ್ಣದ ಕಂದಕಗಳನ್ನು ಶತ್ರುಗಳಿಂದ ಬಿಡಿಸಿಕೊಂಡು ಬೆಲ್ಜಿಯಮನ್ನು ಮುಂದರಿಸಿರುವರು.

ಫ್ರೆಂಚರು ಶತ್ರುಗಳಿಂದ ಪಡೆದ ಹೊಸ ಸೇನಾ ನೆಲೆಗಳನ್ನು ಇತರ ಪ್ರಾಂತ್ಯಗಳನ್ನೂ ಭದ್ರಪಡಿಸಿರುವರು.

ಡಾರ್ಡನೆಲ್ಸ್ ಪ್ರಾಂತ್ಯಗಳಲ್ಲಿ ಮಿತ್ರರ ೧೧೦,೦೦೦ ಸೇನಿಕರಿರುವ ಹೊಸ ಸೇನೆಯು ಬಂದು ತಲ್ಪಿದೆ.

ಕೂಲಿ ಜನರ ಪರವಾಗಿ ಬ್ರಿಟಿಷ್ ಪಾರ್ಲಿಮೆಂಟ ಸಭೆಯ ಮೆಂಬರರಾಗಿದ್ದ ಮಿ। ಕಿಯರ್ ಹಾರ್ಡಿಯವರು ಮೃತಪಟ್ಟರೆಂಬ ವರ್ತಮಾನವನ್ನು ತಿಳಿಸಲು ವಿಷಾದಪಡುತ್ತೇವೆ. ಬ್ರಿಟಿಷ ಪಾರ್ಲಿಮೆಂಟ ಸಭೆಯಲ್ಲಿ ಇವರು ಹಿಂದೂಸ್ಥಾನದ ಪ್ರಜಾಪಕ್ಷದ ಕಡೆಯವರಾಗಿದ್ದರು. ಸಾಮ್ರಾಜ್ಯ ಸರಕಾರದವರಿಗೆ ಭಾರತೀಯರ ಸಂಕಷ್ಟಗಳೇನೆಂಬುದಾಗಿ ತಿಳಿಸುವದರಲ್ಲಿ ವಿಶೇಷ ಶ್ರಮಪಡುತ್ತಿದ್ದರು. ಇವರ ಮರಣದಿಂದ ಹಿಂದೂಸ್ಥಾನವು ಬ್ರಿಟಿಷ ಪಾರ್ಲಿಮೆಂಟ ಸಭೆಯಲ್ಲಿರುವ ತನ್ನ ಸ್ನೇಹಿತರಲ್ಲೊಬ್ಬನನ್ನು ಕಳಕೊಂಡಿರುವದು

ಉತ್ತರ ಹಿಂದೂಸ್ತಾನ.

ಸ್ವರ್ಗಸ್ಥ ರಾಜಾ ರಾಮಮೋಹನ ರೋಯಿಯವರ ಸ್ಮಾರಕದಿನವು ಈ ತಿಂಗಳ ತಾ. ೨೭ರಲ್ಲಿ ಕಲ್ಕತ್ತೆಯಲ್ಲಿ ಆಚರಿಸಲ್ಪಟ್ಟಿತು. ಸರ್ ರವೀಂದ್ರನಾಥ ಟಾಗೋರರವರು ಈ ಸಂದರ್ಭದಲ್ಲಿ ಕೂಡಿದ ಸಭಾನಾಯಕರಾಗಿದ್ದರು. ಸತ್ಯಶೋಧನೆಯೇ ಇವರ ಜೀವನದ ಮುಖ್ಯ ಉದ್ದೇಶವಾಗಿತ್ತೆಂದೂ, ಇಂಥಾ ಧರ್ಮ ಮಾರ್ಗದ ಮೂಲಕ ರಾಜಾ ರಾಮಮೋಹನ್ ರೋಯಿಯವರು ತಮ್ಮ ದೇಶದವರನ್ನು ಮಾತ್ರವಲ್ಲ ಇಡೀ ಮಾನವ ವರ್ಗವನ್ನು ಸಹ ಉದ್ಧರಿಸುವ ಪ್ರಯತ್ನಗಳಲ್ಲಿ ತಮ್ಮ ಜೀವಮಾನವನ್ನು ಕಳೆದರೆಂತ ಸರ್ ಟಾಗೋರರವರು ತಮ್ಮ ಭಾಷಣದಲ್ಲಿ ಅಪ್ಪಣೆಕೊಟ್ಟರು.

ಇಂಡಿಯಾ ದೇಶದಲ್ಲಿ ಕಳೆದವಾರ ಗೋಧಿಯ ಧಾರಣೆಯು ಕೊಂಚಮಟ್ಟಿಗೆ ಇಳಿದಿರುವುದು. ಲಾಹೋರ್ ಮತ್ತು ಮೀರತ್ ಪಟ್ಟಣಗಳಲ್ಲಿ ರೂಪಾಯಿಗೆ ೯ ಸೇರಿನಂತೆ ವಿಕ್ರಯಿಸಲ್ಪಡುತ್ತಿರುವುದು. ಕಾನ್‌ಪೂರ್, ಡೆಲ್ಲಿ ಮತ್ತು ಜಬ್ಬಲ್‌ಪುರಗಳಲ್ಲಿ ರೂಪಾಯಿ ೧ಕ್ಕೆ ೮ ಮತ್ತು ೮। ಸೇರಿನಂತಿರುವುದು.

ಪೂನಾ ಪಟ್ಟಣದ ಗುಪ್ತ ಪೋಲೀಸು ಇಲಾಖೆಗೆ ಸೇರಿದ ಸಂದರಪಾರ್ತಾ ಎಂಬ ಇನ್ಸ್‌ಪೆಕ್ಟರನೊಬ್ಬನು ರಿವಾಲ್ವರಿನ ಮೂಲಕ ಗುಂಡು ಹೊಡೆಯುವುದನ್ನು ತನ್ನ ಮನೆಯ ಅಂಗಳದಲ್ಲಿ ಅಭ್ಯಾಸಮಾಡುತ್ತಿರುವಾಗ ತುಪಾಕಿಯಿಂದ ಹಾರಿದ ಒಂದು ಗುಂಡು ಅದೇ ಅಂಗಳದಲ್ಲಿ ಕೆಲಸಮಾಡುತ್ತಿದ್ದ ಒಬ್ಬ ಕೂಲಿಯ ಹೆಂಗಸಿಗೆ ತಗಲಿತೆಂತಲೂ, ಅದರಿಂದ ಆಕೆಯು ಮೃತಪಟ್ಟಳೆಂತಲೂ ಈ ವಿಷಯದಲ್ಲಿ ಈಗ ಕ್ರಿಮಿನಲ್ ವಿಚಾರಣೆಯು ನಡೆಯುತ್ತಿರುವುದೆಂತಲೂ ಕೇಳುತ್ತೇವೆ.

ಬಂಗಾಳದ ರಂಗಪುರ ಜಿಲ್ಲೆಯ ಕರೀಮಗಂಜ್ ಗ್ರಾಮದಲ್ಲಿ ಕಾಶಿಮುದ್ದಿ ಬೇಪಾರಿ ಎಂಬವನೊಬ್ಬನು ಈ ಗ್ರಾಮದಿಂದ ಯುದ್ಧರಂಗಕ್ಕೆ ಯಾರ್ಯಾರನ್ನು ಕಳುಹಿಸಿಕೊಡಬೇಕೆಂಬುವ ವಿಷಯ ಹೆಸರುಗಳ ಒಂದು ಪಟ್ಟಿಯು ಬಂದಿದೆ ಎಂತ ಹೇಳಿ ಗ್ರಾಮದ ನಿವಾಸಿಕರಲ್ಲಿ ನಿಷ್ಕಾರಣವಾಗಿ ಅಂಜಿಕೆಯನ್ನುಂಟು ಮಾಡುತ್ತ ತನಗೆ ಹಣ ಕೊಟ್ಟವರ ಹೆಸರುಗಳನ್ನು ಪಟ್ಟಿಯಿಂದ ತೆಗೆದು ಹಾಕಿಸುತ್ತೇನೆಂತ ಹೇಳುತ್ತ ಠಕಾಯಿಸುತ್ತಿದ್ದನು. ಬೇಪಾರಿಯ ಈ ಠಕ್ಕು ವೃತ್ತಿಯಿಂದ ಗ್ರಾಮಸ್ಥರಲೆಲ್ಲಾ ದಿಗಿಲುಹಿಡಿಯಿತು. ಈ ವರ್ತಮಾನವನ್ನು ಕೇಳಿ ಅಲ್ಲಿಯ

ಪ್ರಕಟಣೆ.

ಊಟಕಮಂಡ್, ತಾರೀಖು 27ನೇ ಅಗಸ್ಟು 1915ನೇ ಇಸವಿ.

ನಂ. 25 —

ಇಂಡಿಯಾ ಗವರ್ನಮೆಂಟಿನವರ ಕ್ಲುಪ್ತ ವಾಯಿದೆಗೆ ಸಂದಾಯವಾಗುವ ಸಾಲವು.

ಪೋಸ್ಟ್ ಆಫೀಸಿನ ಮುಖಾಂತರ ಜನರು ಚಂದಾದಾರರಾಗುವ ವಿಷಯವಾಗಿ ಏರ್ಪಟ್ಟ ಶರ್ತಗಳ ಕುರಿತು ಪ್ರಕಟಣೆ.

ಗವರ್ನಮೆಂಟಿನವರು ಈ ವರುಷದ ಸಾಲವನ್ನು ಒಂದು ಹೊಸ ವಿಧಾನದಲ್ಲಿ ಸೇಕಡಾ 4ರ ಬಡ್ಡಿಯಲ್ಲಿ ಎತ್ತುತ್ತಾರೆ. ಅದು 1923ನೇ ಇಸವಿಯ ನವಂಬರ್ ತಿಂಗಳೊಳಗಾಗಿ ಸಂಪೂರ್ಣವಾಗಿ ಮರುಪಾವತಿ ಮಾಡಲ್ಪಡುವದು, ಪರಂತು ಗವರ್ನಮೆಂಟಿನವರಿಗೆ ಇಷ್ಟವಿದ್ದರೆ 1920ನೇ ಇಸವಿಯ ಅಕ್ಟೋಬರ್ ತಿಂಗಳ ತರುವಾಯ ಯಾವಕಾಲದಲ್ಲಾದರೂ ಪಾವತಿ ಮಾಡಲ್ಪಡಬಹುದು.

2 ಕಲ್ಕತ್ತಾ, ಮದ್ರಾಸ್, ಬೊಂಬಾಯಿ ಮತ್ತು ಇತರ ದೊಡ್ಡ ಮಧ್ಯಸ್ಥಳಗಳಲ್ಲಿ ವಾಡಿಕೆಯಾದ ರೀತಿಯಲ್ಲಿ ದರಖಾಸ್ತುಗಳನ್ನು ಅಂಗೀಕರಿಸಿ 4½ ಕೋಟಿ ರೂಪಾಯಿ ಈ ಮೊದಲೇ ಎತ್ತಲ್ಪಟ್ಟಿರುವದು, ಮತ್ತು ಇಷ್ಟರ ಮಟ್ಟಿಗೆ ಸದರೀ ಸಾಲವು ಈಗ ಭರ್ತಿಯಾಗಿದೆ. ಆದರೆ ಅದು ವಿನಾ ಸಾಲವನ್ನು ಸಣ್ಣ ಮೊಬಲಗುಗಳಲ್ಲಿ ಕೊಡಲು ಇಷ್ಟವುಳ್ಳ ಜನರಿಗೆ, ಅವರು ಸೇವಿಂಗ್ಸ್ ಬ್ಯಾಂಕು ಡಿಪಾಜಿಟರರಾಗಿದ್ದರೂ ಅಲ್ಲದಿದ್ದರೂ, ಸೇವಿಂಗ್ಸ್ ಬ್ಯಾಂಕು ಕೆಲಸವನ್ನು ನಿರ್ವಹಿಸುವ ಅತ್ಯಂತ ಸಮೀಪದ ಪೋಸ್ಟ್ ಆಫೀಸಿನ ಮುಖಾಂತರ ಚಂದಾಕೊಡಲು ಒಂದು ವಿಶೇಷ ಸಂದರ್ಭವು ಕೊಡಲ್ಪಟ್ಟಿದೆ.

ಹೇಗೆ ಚಂದಾದಾರರಾಗುವದೆಂಬುದು..

3 ಅಕ್ಟೋಬರ್ 30ನೇ ತಾರೀಖಿನವರೆಗೆ ಯಾವಕಾಲದಲಾದರೂ ಟಪ್ಪಾಲ್ ಆಫೀಸಿನ ಮುಖಾಂತರ ಅರ್ಜಿಗಳನ್ನು ಮಾಡಬಹುದು.

4 ಅರ್ಜಿಗಳು ನೂರು ರೂಪಾಯಿ ಯಾ ಅದರ ಅಪವರ್ತ್ಯಗಳ ಬಗ್ಗೆ (ಎಂದರೆ ರೂ 100, 200, 300 ಈ ಮೇರೆಗೆ) ಮಾಡಲ್ಪಡಬೇಕು ಮತ್ತು ಯಾವನೊಬ್ಬ ಅರ್ಜಿದಾರನ ಸಂಗತಿಯಲ್ಲಿ 100 ರೂಪಾಯಿಗಳಿಗೆ ಕಡಿಮೆಯಾಗಿ ಮತ್ತು 5,000 ರೂಪಾಯಿಗಳಿಗೆ ಮೀರಿ ಇರಕೂಡದು.

ಷರಾ — ಒಬ್ಬ ಅರ್ಜಿದಾರನು ಟಪ್ಪಾಲ್ ಆಫೀಸಿನ ಮುಖಾಂತರ ಈ ಮೊದಲೇ ಸೇಕಡಾ 3½ ದರದ ಬಡ್ಡಿಯುಳ್ಳ ಪ್ರಾಮಿಸರಿ ನೋಟುಗಳನ್ನು ಪಡೆದಿರುತ್ತಾನಾದರೂ 5,000 ರೂಪಾಯಿಗಳ ವರೆಗೆ ಹೊಸ ಸಾಲಕ್ಕೆ ಅರ್ಜಿಮಾಡಬಹುದು.

5 ಅರ್ಜಿಮಾಡಲು ಅಪೇಕ್ಷಿಸುವ ಒಬ್ಬ ಮನುಷ್ಯನು ಇದರಡಿ ಕೊಟ್ಟಿರುವ ಫಾರ್ಮನ್ನು ಭರಾಯಿಸಬೇಕು, ಸದರೀ ಫಾರ್ಮನ್ನು ಸೇವಿಂಗ್ಸ್ ಬ್ಯಾಂಕು ಕೆಲಸವು ನಿರ್ವಹಿಸಲ್ಪಡುವ ಪ್ರತಿ ಒಂದು ಟಪ್ಪಾಲ್ ಆಫೀಸಿನಿಂದ ಸಹಾ ಪಡೆಯಬಹುದು. ಆತನು ಎಷ್ಟು ಮೊಬಲಗಿಗೆ ಅರ್ಜಿಮಾಡುತಾನೋ ಆ ಪೂರಾ ಮೊಬಲಗನ್ನು ಆಗಲೇ ಪಾವತಿ ಮಾಡಬೇಕು. ಆತನು ಒಬ್ಬ ಸೇವಿಂಗ್ಸ್ ಬ್ಯಾಂಕು ಡಿಪೋಜಿಟರಾಗಿದ್ದ ಪಕ್ಷದಲ್ಲಿ ಆತನು ತನ್ನ ಸೇವಿಂಗ್ಸ್ ಬ್ಯಾಂಕು ಲೆಕ್ಕದಲ್ಲಿರುವ ಮೊಬಲಗನ್ನು ಈ ಬಗ್ಗೆ ಉಪಯೋಗಿಸಬಹುದು, ಅಥವಾ ಆತನು ಹಣವನ್ನು ರೊಕ್ಕವಾಗಿಯೂ ಕೊಡಬಹುದು. ಅರ್ಜಿದಾರನು ಟಪ್ಪಾಲ್ ಆಫೀಸಿಗೆ ಸ್ವತಃ ಹೋಗಬಹುದು ಅಥವಾ ಒಬ್ಬ ನೌಕರನನ್ನು ಕಳುಹಿಸಲೂ ಬಹುದು. ಪಾವತಿ ಮಾಡಲ್ಪಟ್ಟ ಯಾವತ್ತೂ ಮೊಬಲಗುಗಳಿಗೆ ರಸೀದು ಕೊಡಲ್ಪಡುವುದು.

6 ಅರ್ಜಿದಾರನು ಪಾವತಿಮಾಡುವ ಪ್ರತಿ 100 ರೂಪಾಯಿಗಳ ಬಗ್ಗೆ ಅಷ್ಟು ಮೊಬಲಗಿನ ಗವರ್ನಮೆಂಟ್ ಪ್ರಾಮಿಸರಿ ನೋಟುಗಳು ಆತನಿಗೆ ಕೊಡಲ್ಪಡುವುವು.

ಪ್ರಾಮಿಸರಿ ನೋಟುಗಳ ತಾಬೆ

7. ನೋಟುಗಳನ್ನು ಅರ್ಜಿದಾರನು ತನ್ನ ಸ್ವಂತ ತಾಬೆಯಲ್ಲಿ ಇಟ್ಟುಕೊಳ್ಳಬಹುದು ಅಥವಾ ಆತನಿಗೆ ಇಷ್ಟವಿದ್ದರೆ ಆತನ ಬಗ್ಗಾಗಿ ಅವು ಪೋಸ್ಟ್ ಆಫೀಸ್ ಅಧಿಕಾರಿಗಳ ತಾಬೆಯಲ್ಲಿ ಇಡಲ್ಪಡಬಹುದು. ಯಾವ ರೀತಿಯು ತನಗೆ ಇಷ್ಟವೆಂಬುದನ್ನು ಆತನು ಅರ್ಜಿಯ ಫಾರ್ಮನ್ನು ಭರಾಯಿಸುವಾಗಲೇ ಅದರಲ್ಲಿ ನಮೂದಿಸತಕ್ಕದ್ದು. ಆತನು ನೋಟುಗಳನ್ನು ತಾನೇ ಇಟ್ಟುಕೊಳ್ಳಲು ಅಪೇಕ್ಷಿಸುವದಾದರೆ ಅವು ಬಟವಾಡೆಗೆ ಸಿದ್ಧವಾದಾಗ ಆ ಕುರಿತು ಪೋಸ್ಟ್ ಆಫೀಸಿನವರು ಆತನಿಗೆ ತಿಳಿಯಪಡಿಸುವರು, ಮತ್ತು ಆತನು ಸ್ವತಃ ಹಾಜರಾದಲ್ಲಿ ಅವು ಆತನಿಗೆ ಕೊಡಲ್ಪಡುವವು. ಅವುಗಳನ್ನು ಟಪ್ಪಾಲ್ ಆಫೀಸಿನಲ್ಲಿಯೇ ಇಡಲು ಆತನು ನಿರ್ಣಯಿಸುವ ಪಕ್ಷದಲ್ಲಿ ಆತನು ಪುನಃ ಸ್ವತಃ ಹಾಜರಾಗಬೇಕೆಂದಿಲ್ಲಾ, ಆದರೆ ಟಪ್ಪಾಲ್ ಆಫೀಸಿನವರೇ ಅವು ತಪ್ಪಿರುತ್ತವೆ—ವ ಅವು ಆತನ ಬಗ್ಗಾಗಿ ತಾಬೆಯಲ್ಲಿಟ್ಟುಕೊಳ್ಳಲ್ಪಟ್ಟಿವೆ ಎಂಬುದನ್ನು ಕುರಿತು ಒಂದು ಸಮಾಚಾರ ಪತ್ರವನ್ನು ಸಕಾಲದಲ್ಲಿ ಆತನಿಗೆ ಕಳುಹಿಸಿಕೊಡುವರು. ಸದರೀ ನೋಟುಗಳನ್ನು ತಾನೇ ಇಟ್ಟುಕೊಳ್ಳಲು ಆತನು ಮುಂದೆ ಯಾವಾಗಲಾದರೂ ಅಪೇಕ್ಷಿಸುವದಾದರೆ ಆಗ ಅವು ಆತನ ವಶಕ್ಕೆ ಕೊಡಲ್ಪಡುವವು.

ಬಡ್ಡಿಯನ್ನು ಪಾವತಿಮಾಡೋಣ.

8 ಸಾಲಿಯಾನಾ ಸೇಕಡಾ 4ರ ದರದ ಬಡ್ಡಿಯು ಅರ್ಧ ವರ್ಷಕೊಮ್ಮೆ ಪಾವತಿ ಮಾಡಲ್ಪಡುವದು. ಎಂದರೆ ಪ್ರತಿ ವರ್ಷದ ಮೇ 31ನೇ ತಾರೀಖಿಗೆ ಸೇಕಡಾ 2ರಂತೆಯೂ ನವಂಬರ್ 30ನೇ ತಾರೀಖಿಗೆ ಸೇಕಡಾ 2ರಂತೆಯೂ ಸಲಾಯಿಸಲ್ಪಡುವದು. ಅರ್ಜಿಯ ತಾರೀಖಿನಿಂದ ಬರುವ ನವಂಬರ್ 30ನೇ ತಾರೀಖಿನ ವರೆಗಿನ ಭಿನ್ನಾಂಶದ ಬಗ್ಗೆ ಬಡ್ಡಿಯು ಪ್ರಾಮಿಸರಿ ನೋಟುಗಳನ್ನು ಅರ್ಜಿದಾರನು ಸ್ವತಃ ಇಟ್ಟುಕೊಳ್ಳುವದಾದರೆ ಅವುಗಳನ್ನು ಬಟವಾಡೆಮಾಡುವ ಕಾಲದಲ್ಲಿ ನಗದಾಗಿ ಕೊಡಲ್ಪಡುವದು, ಅಥವಾ ಆತನು ನೋಟುಗಳನ್ನು ಪೋಸ್ಟ್ ಆಫೀಸ್ ಅಧಿಕಾರಿಗಳ ತಾಬೆಯಲ್ಲಿಯೇ ಇಡುವದಾದರೆ ಮುಂದಿನ ಕಲಮಿನಲ್ಲಿ ನಮೂದಿಸಿರುವ ಸೇವಿಂಗ್ಸ್ ಬ್ಯಾಂಕು ಲೆಕ್ಕದಲ್ಲಿ ಆತನ ಬಗ್ಗೆ ಜಮಾ ದಾಖಲುಮಾಡಲ್ಪಡುವದು.

9. ಅರ್ಜಿದಾರನು ತನ್ನ ಪ್ರಾಮಿಸರಿ ನೋಟುಗಳನ್ನು ಪೋಸ್ಟ್ ಆಫೀಸ್ ಅಧಿಕಾರಿಗಳ ತಾಬೆಯಲ್ಲಿಯೇ ಇಡಲು ನಿರ್ಣಯಿಸಿದ ಪಕ್ಷದಲ್ಲಿ ಪೋಸ್ಟ್ ಆಫೀಸ್ ಅಧಿಕಾರಿಗಳು ಪ್ರತಿ ಅರ್ಧ ವರ್ಷಕೊಮ್ಮೆ ಆತನ ಬಗ್ಗಾಗಿ ಬಡ್ಡಿಯನ್ನು ಪಡಕೊಂಡು ಈ ಬಗ್ಗಾಗಿ ಆತನ ಹೆಸರಲ್ಲಿ ಇಡಲ್ಪಡುವ ಒಂದು ಸೇವಿಂಗ್ಸ್ ಬ್ಯಾಂಕು ಲೆಕ್ಕದಲ್ಲಿ ಜಮಾ ದಾಖಲ್ ಮಾಡುವರು. ಇದಲ್ಲದೆ ಈ ಮೇರೆಗೆ ಬಡ್ಡಿಯನ್ನು ಪಡೆದುಕೊಂಡಾಗಲೆಲ್ಲಾ ಪೋಸ್ಟ್ ಆಫೀಸಿನವರು ಆಯಾಕಾಲದಲ್ಲಿ ಆತನಿಗೆ ಆ ಕುರಿತು ತಿಳಿಯಪಡಿಸುವರು. ಈ ಕೆಲಸದ ಬಗ್ಗೆ ಯಾವ ಫೀಸೂ ಹೊರಿಸಲ್ಪಡಲಿಕ್ಕಿಲ್ಲ ಮತ್ತು, ಅರ್ಧ ವರ್ಷದ ಬಡ್ಡಿಯ ಮೊಬಲಗನ್ನು ಪಾವತಿಮಾಡುವಾಗ ಇನ್‌ಕಮ್‌ಟ್ಯಾಕ್ಸು ಯಾವದೂ ಅದರಿಂದ ವಜಾಮಾಡಲ್ಪಡಲಿಕ್ಕಿಲ್ಲ.

ಆತನು ಪ್ರಾಮಿಸರಿ ನೋಟುಗಳನ್ನು ಸ್ವತಃ ಇಟ್ಟುಕೊಳ್ಳುತ್ತಾನಾದರೆ ಅರ್ಧ ವರ್ಷದ ಬಡ್ಡಿಯ ಮೊಬಲಗು ಪಾವತಿಮಾಡುವ ಕಾಲದಲ್ಲಿ ವಾಡಿಕೆಯಂತೆ ಬಡ್ಡಿಯ ಮೊಬಲಿಗಿನಿಂದ ಇನ್‌ಕಮ್‌ಟ್ಯಾಕ್ಸು ವಜಾಮಾಡಲ್ಪಡುವದು.

ಪ್ರಾಮಿಸರಿ ನೋಟುಗಳನ್ನು ವಿಕ್ರಯಿಸೋಣ.

10. ಇದರಲ್ಲಿ ವಿವರಿಸೋಣಾದ ನಡವಳಿತೆಯ ಮೇರೆಗೆ ಪೋಸ್ಟ್ ಆಫೀಸಿನ ಮುಖಾಂತರ ಕೊಂಡುಕೊಳ್ಳಲ್ಪಟ್ಟ ಈ ಹೊಸ ಸಾಲದ ಬಾಬತು ಪ್ರಾಮಿಸರಿ ನೋಟುಗಳನ್ನು ಹೊಂದಿರುವ ಒಬ್ಬ ಸೇವಿಂಗ್ಸ್ ಬ್ಯಾಂಕು ಡಿಪಾಜಿಟರನು ಯಾವ ಕಾಲದಲ್ಲಾದರೂ ಅವುಗಳನ್ನು ಯಾ ಅವುಗಳ ಯಾವದೊಂದು ಭಾಗವನ್ನು ವಿಕ್ರಯಿಸಲಿಕ್ಕೆ ಅಪೇಕ್ಷಿಸುತ್ತಾನಾದರೆ ಆತನ ಬಗ್ಗೆ ಪೋಸ್ಟ್ ಆಫೀಸಿನವರು ದಲಾಲಿ ಯಾ ಇತರ ಫೀಸುಗಳನ್ನು ಹೊರಿಸದೇನೆ ಅದರ ಕರಿತು ವಿಲೇವಾರಿ ಮಾಡುವರು. ಇದರ ವಿಷಯ ಪೂರ್ಣ ಮಾಹಿತಿಯನ್ನು ಪೋಸ್ಟ್ ಆಫೀಸಿನಿಂದ ಯಾವ ಕಾಲದಲ್ಲಾದರೂ ಹೊಂದಬಹುದು.

ಅರ್ಜಿಯ ಫಾರ್ಮು.

ನಾದ ನಾನು 1915ನೇ ಇಸವಿಯ ಜುಲಾಯಿ 28ನೇ ತಾರೀಖಿನ ಇಂಡಿಯಾ ಗಜೇಟಿನ ವಿಶೇಷ (ಎಕ್ಸ್‌ಟ್ರಾರ್ಡಿನರಿ) ಸಂಚಿಕೆಯಾಗಿ ಪಾಯಿಪ್‌ಮಾಡಲ್ಪಟ್ಟ ಇಸ್ತಿಹಾರಿನಲ್ಲಿ ಪ್ರಕಟಿಸಲ್ಪಟ್ಟ ಕ್ಲಿಪ್ತವಾಯಿದೆಗೆ ಸಂದಾಯವಾಗುವ ಸೇಕಡಾ ನಾಲ್ಕರ ಬಡ್ಡಿಯ ಸಾಲದ ಬಗ್ಗೆ ರೂ ನ್ನು ಚಂದಾ ಕೊಡಲು ಈ ಮೂಲಕ ಅಪೇಕ್ಷಿಸುತ್ತೇನೆ.

ನಾನು ದರಖಾಸ್ತುಮಾಡಿದ ಸಾಲದ ಮೊಬಲಗು ಆಗಿರುವ ರೂ ನ್ನು ನೂರಕ್ಕೆ ನೂರರಂತೆ ಪೂರಾ ಇದರೊಡನೆ ರೇವಣಿ ಇಟ್ಟಿರುತ್ತೇನೆ.

ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕಿನಲ್ಲಿ ನನ್ನ ಲೆಕ್ಕದಲ್ಲಿ ಜಮಾ ಇರುವ ಮೊಬಲಗಿನ ಪೈಕಿ ನೂರಕ್ಕೆ ನೂರರಂತೆ ನಾನು ದರಖಾಸ್ತುಮಾಡಿದ ಸಾಲದ ಮೊಬಲಗಿಗೆ ಸರಿಯಾಗಿರುವ ರೂ ನ್ನು ಈ ಬಗ್ಗಾಗಿ ಉಪಯೋಗಿಸಿಕೊಳ್ಳಬಹುದಾಗಿ ನಾನು ಅಪೇಕ್ಷಿಸುತ್ತೇನೆ.

ನೂರಕ್ಕೆ ನೂರರಂತೆ ನಾನು ದರಖಾಸ್ತುಮಾಡಿದ ಸಾಲದ ಮೊಬಲಿಗಿನ ಪೈಕಿ ರೂ ಈ ಮೂಲವಾಗಿ ರೇವಣಿ ಇಟ್ಟಿರುತ್ತೇನೆ; ಮತ್ತು ಉಳಿದ ಮೊಬಲಗು ಎಂದರೆ ರೂ. ನ್ನು ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕಿನಲ್ಲಿ ನನ್ನ ಲೆಕ್ಕದಲ್ಲಿ ಜಮೆ ಇರುವ ಮೊಬಲಗಿನಿಂದ ಉಪಯೋಗಿಸಿಕೊಳ್ಳಬೇಕಾಗಿ ಅಪೇಕ್ಷಿಸುತ್ತೇನೆ.

ಅನಾವಶ್ಯಕವಾದ ವಾಕ್ಯಗಳನ್ನು ಹೊಡೆದುಬಿಡತಕ್ಕದ್ದು.

ನನ್ನಿಂದ ಅಂಗೀಕರಿಸಲ್ಪಟ್ಟ ಸಾಲದ ಮೊಬಲಗನ್ನು ನನ್ನ ಬಗ್ಗೆ ಪೋಸ್ಟ್ ಮತ್ತು ಟೆಲಿಗ್ರಾಫ್ ಇಲಾಖೆಯ ಅಕೌಂಟಂಟ್ ಜನರಲ್‌ರವರು ಇಟ್ಟುಕೊಳ್ಳಬಹುದಾಗಿ ಮತ್ತು ಆ ಬಾಬತು ಬಡ್ಡಿಯು ನನ್ನ ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕು ಲೆಕ್ಕದಲ್ಲಿ ಆಯಾ ವಾಯಿದೆಗೆ ಜಮಾ ದಾಖಲುಮಾಡಬೇಕಾಗಿ ನಾನು ಅಪೇಕ್ಷಿಸುತ್ತೇನೆ.

ನನ್ನಿಂದ ಅಂಗೀಕರಿಸಲ್ಪಟ್ಟ ಮೊಬಲಗಿನ ಬಗ್ಗೆ ಈ ಕ[illegible] ಅಪೇಕ್ಷಿಸುತ್ತೇನೆ.

ಅನಾವಶ್ಯಕವಾದ ವಾಕ್ಯಗಳನ್ನು ಹೊಡೆದುಬಿಡತಕ್ಕದ್ದು.

ಹೆಸರು

ವಿಳಾಸ

ತಾರೀಖು 1915.

(ಅವಶ್ಯವಿದ್ದರೆ ಇಲ್ಲಿ ಕೊಟ್ಟಿರುವ ಫಾರ್ಮನ್ನೇ ಕತ್ತರಿಸಿ ಉಪಯೋಗಿಸಬಹುದು.)

ಪಿ. ಬಟ್ಟರ್‌ವರ್ತ್,

ಚೀಫ್ ಸೆಕ್ರೆಟರಿ.

ಬ್ ಡಿವಿಜನಲ್ ಆಫೀಸರರವರು ಗ್ರಾಮಸ್ಥರನ್ನು ಶಾಂತಗೊಳಿಸುವ ಬಗ್ಗೆ ಹೋದರು ಕಾಶೀಮುದ್ದಿಯ ರಕ್ಕು ವೃತ್ತಿಯ ಕುರಿತು ನಿವಾಸಿಕನೊಬ್ಬನು ಫಿರ್ಯಾದು ಕೊಟ್ಟನು. ಈ ಫಿರ್ಯಾದು ಮೇರೆಗೆ, ಮುದ್ದೈಯಿಂದ ೨ ರೂಪಾಯಿಗಳನ್ನು ಪಟ್ಟೆಯಿಂದ ಹೆಸರು ತೆಗಿಸುತ್ತೇನೆಂತ ಸುಳ್ಳು ಹೇಳಿ ಪಡಕೊಂಡಿರುವನೆಂಬ ತಪ್ಪು ಬೇಪಾರಿಯ ಮೇಲೆ ಸ್ಥಾಪಿತವಾಗಿ ೧೦ ರೂಪಾಯಿಗಳ ಜುರುಮಾನೆ ಮತ್ತು ೪ ತಿಂಗಳುಗಳ ಕಠಿಣ ಕಾವಲಿನ ಶಿಕ್ಷೆಯನ್ನು ಆತನಿಗೆ ವಿಧಿಸಿದರು ಈ ತೀರ್ಮಾನದ ಮೇಲೆ ಹ್ಯಾಕೋರ್ಟಿನವರಿಗೆ ಅಪೀಲುಮಾಡಿದ್ದಲ್ಲಿ ಸಬ್ ಡಿವಿಜನಲ್ ಆಫೀಸರರ ತೀರ್ಮಾನವನ್ನೇ ಊರ್ಜಿತವಿಟ್ಟಿರುವರು

ಸಿಮ್ಲಾದಲ್ಲಿ ನೂತನವಾಗಿ ಕಟ್ಟಿಸಲ್ಪಟ್ಟ ಶ್ರೇಷ್ಠ ಸರಕಾರದವರ ನ್ಯಾಯವಿಧಾಯಕ ಸಭೆಯ ಸಭಾಮಂದಿರದಲ್ಲಿ ಹಾರ್ಡಿಂಗ್ ಪ್ರಭುಗಳವರ ಚಿತ್ರಪಟವು ಬಹುಮಾನಪಟ್ಟ ಮದನಮೋಹನ ಮಾಲವೀಯರವರಿಂದ ಬಹಳ ಸಂಭ್ರಮದಲ್ಲಿ ಪ್ರತಿಷ್ಠಿಸಲ್ಪಟ್ಟಿತು

ಬಂಗಾಳದ ಹ್ಯಾಕೋರ್ಟಿನ ಚೀಫ್ ಜಡ್ಜರ ಪದವಿಯನ್ನು ಮಿ. ಲ್ಯಾನ್ಸಲೋಟ್ ಸೆಂಡರ್ಸನ್‌ರೆಂಬವರು ರಜಾಕಾಲದ ನಂತರ ಬರುವ ನವಂಬರ ತಿಂಗಳಲ್ಲಿ ವಹಿಸಿಕೊಳ್ಳುವರೆಂಬುದಾಗಿ ತಿಳಿಯುತ್ತೇವೆ

ಕಲ್ಕತ್ತೆಯ ಮೆಕಲೊಯಿಡ್ ಮತ್ತು ಕಂಪೆನಿಯವರನ್ನು ಕೃತಿಮ ಚೇಕ್‌ಗಳಿಂದ ಬಹಳ ನಷ್ಟಕ್ಕೆ ಗುರಿಪಡಿಸಿದ್ದಾರೆ ಎಂತ ತಿಳಿದುಬರುತ್ತದೆ ಬೇಂಕಿನಿಂದ ಹಣ ತರುವ ಬಗ್ಗೆ ಉಪಯೋಗಿಸುವ ಚೇಕುಗಳಲ್ಲಿ ಒಂದನ್ನು ಯಾರೋ ಒಬ್ಬರು ತೆಗೆದು ಅದರಲ್ಲಿ ಕಂಪೆನಿಯ ಸಹಿ ಮಾಡಿ ರೂ [illegible],೦೦೦ವನ್ನು ಬೇಂಕಿನಿಂದ ಕಂಪೆನಿಯವರ ಲೆಕ್ಕದಲ್ಲಿ ಪಡಕೊಂಡಿರುವರು ಇದೇ ರೀತಿ ಇನ್ನೂ ಹಲವು ಕೃತಿಮ ಚೇಕ್ಕುಗಳ ಮೂಲಕ ಬೇಂಕಿನಿಂದ ಹಣವು ವರ್ಜ್ಯವಾಗಿದೆಯಂತೆ

ಲಕ್ಷ್ಮೀಪುರದ ಗೋಮತಿ ನದಿಯ ನೆರೆಯಿಂದ ಉಂಟಾದ ಹಾನಿಯ ನಿವಾರಣೆ ಬಗ್ಗೆ ಅಲ್ಲಿಯ ಮುನ್ಸಿಪಾಲಿಟಿಯವರು ಸರಕಾರದವರಿಂದ ರೂ ೩ಲಕ್ಷವನ್ನು ಮರಳಿಸಿಕೊಡಲ್ಲದ ನಿವಾಸಿಕರ ಸಹಾಯಾರ್ಥವಾಗಿಯೂ, ರೂ ೫೦,೦೦೦ ವನ್ನು ಬಿದ್ದುಹೋದ ಮುನ್ಸಿಪಲ್ ಶಾಲೆಗಳನ್ನು ಕಟ್ಟಿಸುವ ಬಗ್ಗೆಯೂ ಎರಡು ಲಕ್ಷ ರೂಪಾಯಿಗಳನ್ನು ಕ್ಷೇಮಪಾಲನೆಯ ಬಗ್ಗೆಯೂ ಕೇಳಿರುವರು

ಈ ತಿಂಗಳ ತಾ ೧೧ಕ್ಕೆ ಅಂತ್ಯವಾಗುವ ವಾರದಲ್ಲಿ ಇಡೀ ಹಿಂದುಸ್ಥಾನದಲ್ಲಿ ಒಟ್ಟಿಗೆ ೯೮೧ ಪ್ಲೇಗು ಮರಣಗಳಿದ್ದವು

ಜೂನಾಘಡ ದರಬಾರದವರು ಸಕಲ ಯುದ್ಧ ಸಾಮಾಗ್ರಿಗಳಿಂದ ತುಂಬಿರುವ ಮೂರು ಆಕಾಶನಾವೆಗಳನ್ನು ಸರಕಾರದವರಿಗೆ ಉಚಿತವಾಗಿ ಕೊಟ್ಟಿರುವರು ಸೋನಪುರದ ಮಹಾರಾಜರವರು ರೂ ೪,೪೪೪ನ್ನು ಯುದ್ಧದಲ್ಲಿ ಸೇನಿಕರ ಸುಖಕ್ಕಾಗಿ ಉಪಯೋಗಿಸಬೇಕೆಂತ ಕೊಟ್ಟಿರುತ್ತಾರೆ.

ಬರುವ ತಿಂಗಳ ಒಂದನೇ ತಾರೀಕಿನಲ್ಲಿ ಕೂಡುವ ಇಂಡಿಯಾ ಸರಕಾರದವರ ನ್ಯಾಯವಿಧಾಯಕ ಸಭೆಯಲ್ಲಿ ಹಿಂದೂ ಯುನಿವರ್ಸಿಟಿಯ ಕಾನೂನು ಮಸೂದೆಯು ಮಂಜೂರಾಗುವದೆಂಬದಾಗಿ ತಿಳಕೊಳ್ಳುತ್ತೇವೆ.

ಇಂಗ್ಲಾಂಡದ ಈಗಿನ ಸಂಯುಕ್ತ ಮಂತ್ರಿಮಂಡಲದಲ್ಲಿ ಹಿಂದೂಸ್ಥಾನಕ್ಕೆ ವ್ಯಾಸರಾಯಿಗಳನ್ನು ನೇಮಿಸುವುದರಲ್ಲಿ ಕನ್ಸರವೇಟಿವ್ ಪಕ್ಷದವರಿಗೆ ಹೆಚ್ಚಿನ ಅಧಿಕಾರವು ದೊರಿಯುವ ಸಂಭವವಿರುವುದರಿಂದ ಈ ಪಕ್ಷದ ಈಗಿನ ಮುಂದಾಳುಗಳಾದ ಕರ್ಜನ್ ಪ್ರಭುಗಳು ತಮಗೆ ಯುಕ್ತ ತೋರುವಂಥವರನ್ನು ಇಲ್ಲಿಯ ವ್ಯಾಸರಾಯ ಪದವಿಗೆ ನೇಮಿಸಲು ಸಾಕೆಂತ 'ಕೆಪಿಟಲ್' ಎಂಬ ಪತ್ರದಲ್ಲಿ ಒಂದು ಸೂಚನೆ ಇರುವುದು ಇಂಥಾ ನೇಮಕವಾಗುವಲ್ಲಿ ಕ್ರೊಫರ್ಡ್ ಪ್ರಭುಗಳು ಮುಂದಿನ ವ್ಯಾಸರಾಯಿಗಳಾಗಿ ನೇಮಿಸಲ್ಪಡಬಹುದೆಂಬ ವರ್ತಮಾನವು ಅದೇ ಪತ್ರದಲ್ಲಿರುವುದು

ಬರುವ ದಶಂಬರ ತಿಂಗಳ ಕ್ರಿಸ್ತ್‌ಮಸ್ ರಜಾಕಾಲದಲ್ಲಿ ಮುಂಬಾಯಿಯಲ್ಲಿ ವ್ಯಾಪಾರಸ್ಥರ ಒಂದು ಮಹಾ ಸಭೆಯನ್ನು ಏರ್ಪಡಿಸಬೇಕೆಂತ ನಿರ್ಣಯಿಸಲ್ಪಟ್ಟಿರುವದು ಹಿಂದೂದೇಶದ ದೇಶೀಯ ಚೇಂಬರ್ ಆಫ್ ಕೊಮರ್ಸ್‌ಯೆಂಬ ವ್ಯಾಪಾರ ಸಮಿತಿಗಳೂ ಇತರ ವ್ಯಾಪಾರ ಸಂಘಗಳೂ ಈ ಮಹಾಸಭೆಗೆ ತಮ್ಮ ಸಹಕಾರವನ್ನು ಕೊಡಲು ಸಮ್ಮತಿಸಿರುವರು ಯುರೋಪಿಯರ ಒಂದೆರಡು ವ್ಯಾಪಾರ ಸಮಿತಿಗಳ ಹೊರತು ಮಿಕ್ಕ ಎಲ್ಲಾ ಸಮಿತಿಗಳು ಈ ಸಭೆಯವರ ಸಹಾನುಭೂತಿಯನ್ನು ಸೂಚಿಸಿರುತ್ತಾರೆ

ಆಗಾಖಾನ್‌ರವರು ಗೋಖಲೆಯವರ ಸ್ಮಾರಕ ಫಂಡಿಗೆ ರೂ ೪೦೦೦ವನ್ನು ಚಂದಾದ್ರವ್ಯಗಾಗಿ ಕೊಟ್ಟಿರುತ್ತಾರೆ

ಭಾವನಗರದ ಮಹಾರಾಣಿಗಳವರು ಯುರೋಪಿನಲ್ಲಿ ಕಾದಾಡುತ್ತಿರುವ ಹಿಂದೂ ಸೇನೆಗಳ ಉಪಯೋಗದ ಬಗ್ಗೆ ೨೦೦೦ ಪನಿವಾರಗಳನ್ನು ಕಳುಹಿಸಿಕೊಟ್ಟಿರುವರು

ಮುಂಬಾಯಿ ಸರಕಾರದ ಕಾರ್ಯನಿರ್ವಾಹಕ ಸಭೆಯ ಮೆಂಬರಾದ ಬಹುಮಾನಪಟ್ಟ ಸರ್ ಪ್ರಭಾಶಂಕರ ಪಟ್ಟಣಿಯವರು ತಮ್ಮ ಉದ್ಯೋಗದಿಂದ ನಿವೃತ್ತರಾಗುವದರಿಂದ ಇವರ ಸನ್ಮಾನಾರ್ಥವಾಗಿ ಮುಂಬಯಿ ಗವರ್ನರರವರು ಪುನೆಯಲ್ಲಿ ಇವರಿಗೆ ಒಂದು ಔತಣವನ್ನು ಮಾಡಿಸಿದರು ಸರ್ ಪ್ರಭಾಶಂಕರರವರಿಗೆ ಗವರ್ನರ ದೊರೆಗಳವರು ಒಂದು ಬೆಳ್ಳಿಯ ತಟಿಕಿನಲ್ಲಿ ಒಂದು ಘಡಿಯಾರರನ್ನು ಬಹುಮಾನಾರ್ಥವಾಗಿ ಕೊಟ್ಟಿರುತ್ತಾರೆ

ದಕ್ಷಿಣ ಹಿಂದೂಸ್ಥಾನ

ಕ್ರಿಸ್ತ್‌ಮಸ್ ಕಾಲದಲ್ಲಿ ಮದ್ರಾಸಿನಲ್ಲಿ ಸೌತ್ ಇಂಡಿಯನ್ ಎತ್ಲೆಟಿಕ್ ಎಸೋಸಿಯೇಶನಿನವರು ಗರಡಿಸಾಧಕ ಇತ್ಯಾದಿ ಆಟಗಳೂ ಇತರ ದೇಖಾವೆಗಳೂ ಉಳ್ಳ ಪ್ರದರ್ಶನವನ್ನು ಏರ್ಪಡಿಸುವ ವಾಡಿಕೆ ಇರುವದು ಈ ವರುಷ ಈ ಪ್ರದರ್ಶನದಿಂದ ದೊರಕುವ ಹಣವನ್ನು ಮದ್ರಾಸು ಯುದ್ಧ ಫಂಡಿನ ಸಹಾಯಾರ್ಥವಾಗಿ ಕೊಡಬೇಕೆಂತ ಎತ್ಲೆಟಿಕ್ ಎಸೋಸಿಯೇಶನಿನವರು ನಿಶ್ಚಯಿಸಿರುವರು. ಯುದ್ಧ ಫಂಡಿನ ಅಡಳಿತದಾರರು ಎಸೋಸಿಯೇಶನಿನವರ ಈ ಸಹಾಯವನ್ನು ಸ್ವೀಕರಿಸಿರುತ್ತಾರೆ ವ್ಯಾಪಾರಸ್ಥರ ಸಾಮಾಗ್ರಿಗಳ ದೇಖಾವೆಗಳ ಹೊರತು ಇನ್ನೂ ವ್ಯವಸಾಯ, ಕೈಗಾರಿಕೆಗಳಿಗೆ ಸಮ್ಮಂಧಪಟ್ಟ ವಸ್ತುಗಳ ಪ್ರದರ್ಶನವು ಇರುವುದು. ಈ ವಿಷಯದಲ್ಲಿ ಸರಕಾರದ ಸಮ್ಮಂಧಪಟ್ಟ ಅಧಿಕಾರಿಗಳೇ ಬೇಕಾದ ವ್ಯವಸ್ಥೆಯನ್ನು ನಡಿಸುವರು. ಈ ಪ್ರದರ್ಶನದಲ್ಲಿ ಸರ್ಜನ್ ಜನರಲರವರ ಮೇಲ್ವಿಚಾರದಲ್ಲಿ ಆರೋಗ್ಯಪಾಲನೆಯ ಶಾಖೆ, ಗ್ರಾಮ ಮತ್ತು ಮಿಶನ್ ಕೈಗಾರಿಕೆಗಳ ಶಾಖೆ ವಿಕ್ಟೋರಿಯಾ ಟೆಕ್ನಿಕಲ್ ಇನ್ಸ್ಟಿಟ್ಯೂಟ್ ಇದರ ಒಂದು ಶಾಖೆ, ಕೈಗಾರಿಕೆ ಇಲಾಖೆಯ ಒಂದು ಶಾಖೆ, ಮಿಲಿಗಳಿಗೆ ಸಮ್ಮಂಧಪಟ್ಟ ಕೈಗಾರಿಕೆ ಶಾಖೆ, ಇವುಗಳಿಗೆ ಸಮ್ಮಂಧಪಟ್ಟ ಒಡವೆಗಳ ದೇಖಾವೆಗಳಿರುವದರಿಂದ ಈ ಸರ್ತಿಯ ಪ್ರದರ್ಶನವು ಜನರಿಗೆ ಬಹಳ ಮನೋರಂಜಕವೂ ಉಪಯೋಗಕರವೂ ಆಗುವುದು. ಪ್ರದರ್ಶನ ಮೂಲಕ ದೊರಕುವ ಹಣವು ಯುದ್ಧಫಂಡಿಗೆ ಕೊಡೋಣಾಗುವದರಿಂದ ಸರ್ವರೂ ಈ ಸರ್ತಿಯ ಈ ಪ್ರದರ್ಶನವನ್ನು ವಿಶೇಷವಾಗಿ ಪ್ರೋತ್ಸಾಹಿಸಬೇಕಾಗಿರುವದು.

ಮಿಸ್ ತಾರಾಬಾಯಿಯವರಿಗೆ ಮಧುರೆಯಲ್ಲಿ ಅಲ್ಲಿಯ ಮಹಾಜನರು ಸಭೆಕೂಡಿ ಚಿನ್ನದ ಪದಕಗಳನ್ನು ಕೊಟ್ಟು ಸನ್ಮಾನಿಸಿದರು. ಸಭೆಯ ಅಧ್ಯಕ್ಷರು ರಾಮ್ನಾದಿನ ಜಿಲ್ಲಾ ಜಡ್ಜ ರಾವ್‌ಬಹದ್ದೂರ್ ವೆಂಕಟರಮಣಯ್ಯನವರಾಗಿದ್ದರು. ಮಿಸ್ ತಾರಾಬಾಯಿಯವರ ಸಾಹಸವನ್ನೂ, ಆಟಗಳಲ್ಲಿ ತೋರಿಸಿದ ಶಕ್ತಿಯನ್ನೂ ಅಧ್ಯಕ್ಷರು ಕೊಂಡಾಡಿ ತನ್ನ ಆಟಗಳಿಂದ ಹುಟ್ಟಿ ಬಂದ ಉತ್ಪತ್ತಿಯಿಂದ ರೂ ೧೦೦೦ವನ್ನು ಮಧುರೆಯ ವಿದ್ಯಾ ಶಾಲೆಗಳು ಮೊದಲಾದ ಸಾರ್ವಜನಿಕ ಸಂಸ್ಥೆಗಳ ಸಹಾಯಾರ್ಥವಾಗಿ ಕೊಟ್ಟ ತಾರಾಬಾಯಿಯವರ ಔದಾರ್ಯವನ್ನು ಅಧ್ಯಕ್ಷರು ಕೊಂಡಾಡಿದರು.

ಆಭರಣಗಳ ಬಗ್ಗೆ ಮಾಡಿದ ಒಂದು ಕೊಲೆಯ ವೃತ್ತಾಂತವು ತಿನ್ನೆವೆಲ್ಲಿಯಿಂದ ಕೇಳಿಬರುತ್ತದೆ. ಅಂಬಾಸಮುದ್ರಮ್ ಹತ್ತರ ಮಾನ್ನಾರ್ ಕೋಯಿಲ್ ಎಂಬಲ್ಲಿ ಒಬ್ಬ ಹುಡುಗಿಗೂ ಆಕೆಯ ಗಂಡನಿಗೂ ಸ್ವಲ್ಪ ಮನಕ್ಲೇಶವಿತ್ತು. ಗಂಡನ ಹೆದರಿಕೆಯಿಂದ ಈ ಹುಡುಗಿಯು ಒಬ್ಬ ಸೂಳೆಯ ಮನೆಯಲ್ಲಿ ಅವಿತುಕೂತುಕೊಂಡಳು ಇಲ್ಲಿಂದ ಈ ಹುಡುಗಿಯನ್ನು ಆಕೆಯ ತಾಯಿಯ ಮನೆ ಒಳಮಾರ್ಗವಾಗಿ ಕರಕೊಂಡು ಹೋಗುತ್ತೇವೆಂತ ಆ ಸೂಳೆಯನ್ನಿಟ್ಟುಕೊಂಡವರು ಹುಡುಗಿಯೊಡನೆ ಕೆಲವು ಗದ್ದೆಗಳ ಮಾರ್ಗವಾಗಿ ರಾತ್ರೆಕಾಲ ತೆರಳಿದರು. ಸ್ವಲ್ಪ ದೂರ ಹೋದೊಡನೆ ಇವರು ಹುಡುಗಿಯನ್ನು ಕೊಂದು ಅವಳ ಮೈಮೇಲಣ ಆಭರಣಗಳನ್ನು ತೆಗೆದು ಹೆಣವನ್ನು ಒಂದು ಹೊಂಡದೊಳಗೆ ಹಾಕಿಹೋದರು. ಪೋಲಿಸಿನವರು ಈ ಕೊಲೆಯಲ್ಲಿ ತನಿಖಿ ನಡಿಸುತ್ತಿದ್ದಾರೆ. ಸೂಳೆಯು ತನಗೆ ಗೊತ್ತಿರುವ ನಿಜ ವೃತ್ತಾಂತವನ್ನು ಹೇಳಿದ್ದರಿಂದ ಕೊಲೆಗಾರರಗಳಲ್ಲಿ ಒಬ್ಬನನ್ನು ಹಿಡಿದಿರುತ್ತಾರೆ.

ದಕ್ಷಿಣ ಕನ್ನಡ.

ಕುಂಬಳೆ: — ಪುತ್ತೂರು ಡಿವಿಜನಲ್ ಆಫೀಸರರವರು ತಾ. ೨೧ರಲ್ಲು ಸರ್ಕೀಟಿನಲ್ಲಿ ಇಲ್ಲಿಗೆ ಚಿತ್ತೈಸಿದರು ತಾ. ೨೨ರಲ್ಲು ಇಲ್ಲಿ ತಾಲೂಕು ಬೋರ್ಡು ಮೀಟಿಂಗು ಜರಗಿದ ನಂತರ ಸವಾರಿಯು ಬಾಲಿಕಾ ಪಾಠಶಾಲೆಗಾಗಿ ತಯಾರಾದ ಕಟ್ಟೋಣವನ್ನು ಪರಾಂಬರಿಸಿ ಯೋಗ್ಯ ಕಟ್ಟಡವೆಂತ ಸಂತೋಷಪಟ್ಟಿರುವರಾಗಿ ಕೇಳುತ್ತೇನೆ.

ಈ ಮೊದಲು ಈ ಪತ್ರಿಕೆಯಲ್ಲಿ ಒಂದೆರಡು ದಫೆ ಪ್ರಕಟಿಸಿದಂತೆ ಹಾಳು ಬಿದ್ದಿರುವ ಇಲ್ಲಿಯ ಶ್ರೀಗೋಪಾಲಕೃಷ್ಣ ದೇವಸ್ಥಾನದ ಕೆರೆಯನ್ನು ಕುಂಬಳೆ ಅರಸುಗಳವರಿಂದ ದುರುಸ್ತಿ ಮಾಡಿಸುವಂತೆ ಹುಕುಂ ಆಗಬೇಕಾಗಿಯೂ, ಅವರು ಒಪ್ಪದಿದ್ದಲ್ಲಿ ಭಜಕರಾದ ಗ್ರಾಮಸ್ಥರು ಮಾಡಿಸುವರೆಂತ ಮಾನ್ಯ ಡಿವಿಜನಲ್ ಆಫೀಸರರವರಿಗೆ ತಾ. ೨೪ರಲ್ಲು ಅರ್ಜಿ ಒರಕೊಂಡಿರುವದರಿಂದ ಅನಾರೋಗ್ಯಕ್ಕೆ ಆಸ್ಪದವಾದ ಈ ಕೆರೆಯು ಇನ್ನು ಸಾರ್ವಜನೋಪಯೋಗಕ್ಕೆ ಬೀಳುವ ಕಾಲವು ಶೀಘ್ರದಲ್ಲೇ ಬರುವದೆಂಬದು ಖಂಡಿತವಾಗಿರುತ್ತದೆ.

ತಾ. ೨೫ರಲ್ಲು ಡಿವಿಜನಲ್ ಆಫೀಸರರ ಸವಾರಿಯು ಮಂಜೇಶ್ವರ ಮೊಕ್ಕಾಮಿಗೆ ತೆರಳುತ್ತದೆ.

ಶೀತಾಂಗೋಳಿ, ಪುತ್ತಿಗೆ ರಸ್ತೆಯು ಪುತ್ತಿಗೆ ಹೊಳೆಯಲ್ಲಿ ಅಂತ್ಯವಾಡುವದಾಗಿ ತೀರಿ ಒಂದಿರುತ್ತದೆ. ಇದರಿಂದ ಸಾಮಾನುಗಳನ್ನು ದೋಣಿ ಗಾಡಿಗಳಿಗೆ ವೈಯ್ಯುವರೆ ಬಹು ಪ್ರಯಾಸವಾಗುವುದಂದ ಅಲ್ಲಿಂದ ಒರೇ ಸುಮಾರು ೩ ಫರ್ಲಾಂಗುಗಳ ಹೊಳೆ ಕಿನಾರೆವರೇಗೆ ರಸ್ತೆ ಮುಂದರಿಸಿ ಆಮದ ರಫ್ತಿಗೆ ಅನುಕೂಲ ಮಾಡಿಕೊಡುವರೆ ಸಮ್ಮಂಧಪಟ್ಟ ಆಫೀಸರರು ನಿಗಾ ಕೊಡುವರಾಗಿ ನಂಬುತ್ತೇನೆ.

~~~~~~

ಬಂಟವಾಳ. ಶಾಲಾ ಇನ್ಸ್‌ಪೆಕ್ಟರರಾಗಿರುವ ಮೆ. ಏಟ್ಸ್ ದೊರೆಗಳು ಇಲ್ಲಿಯ ಬಾಲಕರ ಶಾಲೆಗಳೆಲ್ಲವನ್ನು ಸಂದರ್ಶಿಸಿ ಪರೀಕ್ಷಿಸಿಕೊಂಡು ಸರ್ಕೀಟು ಬೆಳಸಿರುವರು. ಇವರಲ್ಲಿ ವಿದ್ಯಾಪಕ್ಷಪಾತವೂ ನ್ಯಾಯವೂ ತುಂಬಿದೆ. ಉಪಾಧ್ಯಾಯರು ತಮ್ಮ ಸ್ಥಿತಿಯನ್ನು ಉನ್ನತಿಗೆ ತರುವ ಹಾಗೆ ಅವರಿಗೆ ಯಾವತ್ತು ಸಹಾಯವನ್ನು ಮಾಡಲು ಕಂಕಣಬದ್ಧರಾಗಿರುವ ಇವರು ಈ ಜಿಲ್ಲೆಯಲ್ಲಿ ಇನ್ನು ಅನೇಕ ಕಾಲವಿದ್ದಲ್ಲಿ ಶಾಲೆಗಳ ಸ್ಥಿತಿಯು ಸರಿಯಾಗಲು ಅವಕಾಶ ದೊರೆತು ನಮ್ಮ ಜಿಲ್ಲೆಗೆ ಹೆಚ್ಚಿನ ಪ್ರಯೋಜನವಿರುವುದು.

ಮಾರಿಗೆ ಪೂಜೆ ದೊರಕದ ನಮ್ಮೂರಲ್ಲಿ ಹಲವು ಕುರಿಗಳು ಬಲಿಯಾದುವು. ಇದರಿಂದ ಎಂತಹ ತರಗತಿಯ ಜನಗಳಿಗೆ ಎಷ್ಟೆಷ್ಟು ನಷ್ಟವಾಗಿದೆ ಎಂದು ವಿಮರ್ಶೆ ಮಾಡುವ ಕಾರ್ಯವನ್ನು ಇಲ್ಲಿಯ ಪರಸ್ಪರ ಸಹಾಯಕ ಸಂಘಗಳು ಕೈಕೊಂಡು, ಕುರಿಫಂಡುಗಳನ್ನು ಮತ್ತು ಸಹಕಾರ ಸಂಘಗಳನ್ನು ಹೋಲಿಸಿ ಜನಗಳಿಗೆ ತಿಳಿಯಹೇಳಿದರೆ ವಿಶೇಷ ಉಪಕಾರವಾಗುವುದೆಂದು ಈ ಮೂಲಕ ಸೂಚಿಸಿರುವೆನು.

ನಮ್ಮೂರಲ್ಲಿ ಬ್ರಾಹ್ಮಣರಾದವರ ಶವಸಂಸ್ಕಾರಕ್ಕೆ ಉಪಯುಕ್ತವಾಗಿರುವ ಸ್ಥಳವೇ ಇಲ್ಲವೆನ್ನಬಹುದು. ಊರಲ್ಲಿ ಅಥವಾ ಬಹು ದೂರದ ವರೆಗೂ ಖಾಲಿ ಸ್ಥಳಗಳು ದೊರೆವುದೇ ಕಷ್ಟವಾಗಿದೆ. ಹೀಗಿರುತ್ತ ಈ ತನಕ ಸ್ಮಶಾನವಾಗಿ ಉಪಯೋಗಿಸಿದ ಸ್ಥಳವನ್ನು ಸರಕಾರದಿಂದ ಪರಮಭೋಗಕ್ಕಾಗಿ ಪಡೆದು, ಅದರಲ್ಲಿ ಅಗತ್ಯವಿರುವ ವ್ಯವಸ್ಥೆಯನ್ನು ಮಾಡಲು ಬ್ರಾಹ್ಮಣರ ಮುಂದಾಳುಗಳು ಇನ್ನೂ ಚಟುವಟಿಕೆ ತೋರಿಸದಿರುವುದು ಶೋಚನೀಯವಾಗಿದೆ. ಗ್ರಾಮೋನ್ನತಿಯನ್ನು ಸಾಧಿಸ ತೊಡಗಿರುವ ಯೂನಿಯನಿನ ಮುಖಾಂತರವಾಗಿಯಾದರೂ ಈ ಯೋಗ್ಯ ಕಾರ್ಯವು ಸಾಧಿಸಲ್ಪಡಗುವದೆಂದು ಭರವಸೆ ಇದೆ.

ನಮ್ಮ ಪ್ರಾಂತ್ಯದ ದಾಕ್ಷ್ಯಧಾರರು (ಡಾಕ್ಟರರಲ್ಲ) ಈ ಶೆರ್ಕೆಯಲ್ಲಿ ಮಂಗಳೂರಿನ ಸರಿಸರಿಗಿಂತಲೂ ತಿಂಗಳಿಗೆ ೨೦ರಂತೆ ಹೆಚ್ಚಿಗೆ ಮಕ್ಕಳಿಗೆ ದಕ್ಷಿಣೆ ಹಾಕಿರುವುದು ಸಂತೋಷಕರವಾಗಿದೆ. ಅದಲ್ಲದೆ, ಕಳೆದ ವರ್ಷದಲ್ಲಿ ಇದ್ದ ಜ್ವರಗ್ರಸ್ತರಾದವರ ಸಂಖ್ಯೆಗಿಂತಲೂ ಈ ವರ್ಷ ೩೦೦ ಜನರು ಕಡಿಮೆಯೆಂದು ತಿಳಿದಿರುವುದು ಇಲ್ಲಿಯ ಆಸ್ಪತ್ರೆಯ ಆಫೀಸರರು ಕಳೆದ ವರ್ಷ ಜ್ವರ ಶೀಳಿಸಿದುದನ್ನು ವಿಶದೀಕರಿಸುತ್ತಿದೆ.

ಪತ್ನಿ ಸಮೇತರಾಗಿ ಮೊನ್ನೆ ತಾನೆ ಕಲೆಕ್ಟರರು ಇಲ್ಲಿಯ ಕಚೇರಿ, ಆಸ್ಪತ್ರೆ ಇತ್ಯಾದಿಗಳನ್ನು ಸಂದರ್ಶಿಸಿ ತೆರಳಿರುವರು.

ಮಹಾಲಯದ ಪಿತೃಗಳ ಶುಭಾಗಮನದ ಬಗ್ಗೆ ಈಗ್ಗೆ ಇಲ್ಲಿ ಪೇಟೆಯಲ್ಲಿ ಬೀಳುದೀಪಗಳನ್ನು ಉರಿಸಲಾಗುವುದಿಲ್ಲ.

~~~~~~

ಫರಂಗಿಪೇಟೆ:— ಇಲ್ಲಿಯ ಉಪಾಧ್ಯಾಯ ಸಂಘದ ಸಭೆಯು ಕಳೆದ ತಾ ೨೫ರಲ್ಲು ಬೆಳ್ಮ ಮಿಶ್ಶನ್ ಶಾಲೆಯಲ್ಲಿ ಮ ರಾ ಸೂಪರ್‌ವ್ಯಾಜರವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಂಘಕ್ಕೆ ಸೇರಿದ ಉಪಾಧ್ಯಾಯರೂ, ಇತರ ಗ್ರಾಮಸ್ಥರೂ ಬಂದು ನೆರೆದಿದ್ದರು. ಮಕ್ಕಳು ದೇವಪ್ರಾರ್ಥನೆಯನ್ನು ಹಲವು ವಿಧದಲ್ಲಿ ಹಾಡಿದರು. ಬಳಿಕ ಸೆಕ್ರೆಟರಿಯವರು ಗತ ಮೀಟಿಂಗಿನ ನಮಾಚಾರವನ್ನು ಓದಿ ತಿಳಿಸಿದರು. ಬಾಲಕ ಕ್ಲಾಸಿಗೆ 'ಗುಣಾಕಾರದ ಕೋಷ್ಟಕ' (ಮಗ್ಗಿ) ವಿಷಯ ಮಾದರಿ ಪಾಠವು ಕಳ್ಳಿಗೆ ಬೋರ್ಡು ಶಾಲೆಯ ಹೆಡ್ಮಾಸ್ತರ್ ಲಕ್ಷ್ಮೀನಾರ್ಣಪ್ಪಯ್ಯರವರಿಂದ ಕೊಡಲ್ಪಟ್ಟಿತು. ಸರಸವಾದ ಅಭಿನಯನ ಹಾಡುಗಳನ್ನೂ, ಒಂದು ಕಥೆಯನ್ನೂ ಶಾಲಾ ಮಕ್ಕಳು ಹಾಡಿದರು. ಬೆಳ್ಮ ಶಾಲೆಯವರಿಂದ ಕೊಡಲ್ಪಟ್ಟ ಫಲಹಾರದ ಬಳಿಕ 'ಪ್ರಯತ್ನಿಸಿದರೆ ಎಲ್ಲವೂ ಕೈಗೂಡುವುದು' ಎಂಬದನ್ನು ಸಭಿಕರಿಗೆಲ್ಲಾ ಬೋಧಿಸುತ್ತದೋ ಎಂಬ ಹಾಗೆ ಒರ್ವ ೮ ವರ್ಷದ ಒಂದು ಚಿಕ್ಕ ಹಿಂದೂ ಹುಡುಗಿಯು ಪಿಟೀಲನ್ನು ಬಾರಿಸುತ್ತಾ ಚಲೋ ಗಾಯನವನ್ನು ಮಾಡಿ ಸಭಿಕರನ್ನು ಸಂತೋಷಗೊಳಿಸಿತು. ಬಳಿಕ ಮ. ರಾ. ಕೆ ಪಿ ವೆಂಕಪ್ಪ ಶೆಟ್ರು 'ಸ್ವಾರ್ಥವನ್ನೇ ಹೆಚ್ಚಾಗಿ ಬಯಸುವ ಮನುಷ್ಯ ವರ್ಗದವರು ಸ್ವಾರ್ಥವನ್ನು ವ್ಯರ್ಥಗೊಳಿಸದೆ ಸ್ವಾರ್ಥಕ್ಕೆ ಹಚ್ಚಿಸಬೇಕು' ಎಂಬದನ್ನು ವರ್ಣಿಸಿ ಸರಳವಾದ ಭಾಷೆಯಿಂದ ಒಂದು ಭಾಷಣವನ್ನು ಮಾಡಿದರು.

ಮಕ್ಕಳನ್ನು ಅಗಾಗ್ಯೆ ತಿರುಗಾಟಕ್ಕೆ ತೆಗೆದುಕೊಂಡು ಹೋಗಿ ಅವರು ಕಣ್ಣಿಟ್ಟು ನೋಡಿಕೊಳ್ಳಬೇಕಾದ ಸಂಗತಿಗಳನ್ನು ತಾವೇ ನೋಡಿ ಕಲಿಯುವ ಹಾಗೆ ಉಪಾಧ್ಯಾಯರು ಮಾಡಬೇಕಲ್ಲದೆ, ಕ್ಲಾಸಿನಲ್ಲಿಯೇ ಆ ವಿಷಯಗಳನ್ನು ಬೋಧಿಸುವದು ತಕ್ಕದ್ದಲ್ಲ ಎಂಬ ನಿರ್ಣಯವಾಗುವ ವರೇಗೆ ಆ ಕುರಿತು ಚರ್ಚೆಯು ನಡೆಯಿತು.

ಮ॥ ರಾ॥ ಪಿ ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್, ವ ತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನ್‌ಮೆಂಟ್ ಇವರು ಬರೆದಿರುವುದು ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿದ ಪ್ರಕಾರ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ವೈದ್ಯಶಾಲೆಯಲ್ಲಿ ಅನೇಕ ತರದ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರು ಮಾಡುತ್ತಿರುತ್ತಾರೆ

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ ಕ್ಯಾಟಲಾಗು ಉಚಿತ

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ನೂತನವಾಗಿ ತರಿಸಿದ್ದು! ಜಾಗ್ರತೆ ತರಿಸಿಕೊಳ್ಳಿ!!

ಮಾಜಿಕ್ ಬಾಕ್ಸು ಎಂಬ ಪೆಟ್ಟಿಗೆ.

ರೂ. 0—14—0.

ಈ ಪೆಟ್ಟಿಗೆ ನೂತನವಾಗಿ ಬಂದಿದೆ. ಇದರ ಆಶ್ಚರ್ಯವೇನೆಂದರೆ ಈ ಪೆಟ್ಟಿಗೆಯಲ್ಲಿ ಹಣ ಅಲ್ಲದ್ದು ಚಿಕ್ಕ ವಸ್ತುಗಳು ಇಟ್ಟು ಪೆಟ್ಟಿಗೆಯನ್ನು ಮುಚ್ಚಿಬಿಡಬೇಕು. ಅನಂತರ ಅದನ್ನು ಯಾರಾದರೂ ತೆರದರೆ ಅದರಲ್ಲಿ ಇರುವ ವಸ್ತುಗಳು ಕಾಣುವದಿಲ್ಲ. ಆ ವಸ್ತುಗಳನ್ನು ಇಟ್ಟವರು ತೆರದರೆ ಆ ವಸ್ತುಗಳು ಇರುತ್ತವೆ. ಈ ಪೆಟ್ಟಿಗೆ ನೋಡುವುದಕ್ಕೆ ಬಹು ಸೊಗಸಾಗಿ ಇರುತ್ತೆ. ಇದು ಎಲ್ಲರ ಬಳಿಯಲ್ಲಿ ಇರಬೇಕು. ಜಾಗ್ರತೆ ತರಿಸಿಕೊಳ್ಳಿ. ಇದರ ಕ್ರಯ ರೂ. 0—14—0.

ವಿಳಾಸ:— ಎನ್. ಕೆ. ಲೋಟಸ್ ಎಂಡ್ ಕಂಪೆನಿ,
೮ ಇರುಳಪ್ಪನ್ ಬೀದಿ, ಮದರಾಸು.

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡದಿರುವ ಯಗ್ಜಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರತಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ.

ಊದಬತ್ತಿಗಳು 24 ರೂ. ತೂಕದ ಶೇರು 1ಕ್ಕೆ ರೂ 12-0-0, 5-0-0, 3-0-0 2—8—0, 1—4—0, 1—0—0.
ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0—0, 1—0—0, 0—12—0, 0—6—0,
ಸುಗಂಧಿ ಕಾಡುರ್ 1ಕ್ಕೆ 0—1—0. **ಬಾಲಗ್ರಹ** ದೂಪ ಟಿನ್ 1ಕ್ಕೆ 0—8—0. **ಸುವಾಸನೇ ಸುಣ್ಣ** ಶೀಸೆ 1ಕ್ಕೆ 0—2—0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರಿ, ಮೈಸೂರು.

ಬಹು ಮನೋಹರ! ಅದ್ಭುತ!

ವಸಂತ ಕೋಕಿಲೆ

ಎಂಬ

ನೂತನವಾದ ಹೊಸ ಕಾದಂಬರೀ ಕಥೆ.

ರಸಿಕ ಶಿರೋಮಣಿಗಳೇ,

"ವಸಂತ ಕೋಕಿಲೆ" ಎಂಬ ಇಂದ್ರಜಾಲ ಮಹೇಂದ್ರಜಾಲಗಳನ್ನು ಸ್ಪಷ್ಟವಾಗಿ ತೋರಿಸುವ ಅತ್ಯದ್ಭುತ ಚಮತ್ಕಾರವಾದ ಹೊಸ ಕಾದಂಬರೀ ಕಥೆಯು ಅಚ್ಚಾಗಿ ಈಗ ತಾನೇ ಬೆಳಕಿಗೆ ಸಿದ್ಧವಾಗಿದೆ. ಈ ಗ್ರಂಥದಲ್ಲಿ ಶೃಂಗಾರಾದಿ ನವರಸಗಳು ತುಂಬಿ ತುಳುಕುತ್ತಿವೆ ಈವರೆಗೆ ಪ್ರಚುರವಾಗಿರುವ ಎಲ್ಲಾ ಕಥೆಗಳಿಗಿಂತಲೂ ಮೀರದಷ್ಟು ರಸ್ಯವುಳ್ಳದ್ದಾಗಿದೆ ವರ್ಣನಾಭಾಗಗಳು ಎಲ್ಲರಿಗೂ ತಿಳಿಯುವ ಹಾಗೆಯೂ ಸ್ವಾಭಾವವಾಗಿಯೂ ಇವೆ. ಭಾಷಾಶೈಲಿಯು ಅತ್ಯುತ್ತಮವಾಗಿದೆ. ಓದುವದಕ್ಕಾರಂಭಿಸಿದ ವಾಚಕರ ಮನಸ್ಸನ್ನು ಸಂಪೂರ್ಣವಾಗಿ ಆಕರ್ಷಿಸಿ ಮುಗಿಯುವವರೆಗೂ ಆವೇಶವನ್ನುಂಟುಮಾಡಿ ಉಲ್ಲಾಸಗೊಳಿಸುವ ಹಾಗಿದೆ ತಮ್ಮ ಜ್ಞಾನ, ಭಕ್ತಿ, ವೈರಾಗ್ಯ ಮೊದಲಾದ ವೇದಾಂತ ವಿಷಯಗಳನ್ನೂ ಚೆನ್ನಾಗಿ ತಿಳಿಸುತ್ತದೆ. ಕಥಾ ಸಂವಿಧಾನವು ಹೊಸ ಮಾದರಿಯಾಗಿ ಆಶ್ಚರ್ಯಕರವಾಗಿದೆ. ಪ್ರಕಟವಾಗಿ ಶೃಂಗಾರ ರಸವನ್ನು ವರ್ಣಿಸದೆ ಇರುವುದರಿಂದ ಎಲ್ಲಾ ಸ್ತ್ರೀಜನರಿಗೆ ಓದುವುದಕ್ಕೆ ಅರ್ಹವಾಗಿದೆ. ಇದರಲ್ಲಿ ೯ ಪ್ರಕರಣಗಳೂ ೨೨೬ ಪುಟಗಳೂ ಇವೆ. ಉತ್ತಮವಾದ ಕಾಗದ, ಸುಂದರವಾದ ಅಕ್ಷರ, ತಪ್ಪಿಲ್ಲದೆ ಸುಂದರವಾಗಿ ಮುದ್ರಿಸಿದೆ. ಬೇಕಾದವರೆಲ್ಲರೂ ಕೆಳಗಣ ವಿಳಾಸಕ್ಕೆ ಬರದು ತರಿಸಿಕೊಳ್ಳಬಹುದು. ಕ್ರಯ ರೂ. ೧—೦—೦ ಮಾತ್ರ.

ವಿಳಾಸ:— ಟಿ. ಎ. ಮಾಣಿಕ್ಯಂ ಶೆಟ್ಟಿ,
ಮಾಣಿಕ್ಯಮಂದಿರ ಬುಕ್ ಡಿಪೋ,
ಬಳ್ಳಾರಿ.

ಪ್ರೊಫೆಸರ್ ಜೇಮ್ಸ್‌ರವರ ಎಲೆಕ್ಟ್ರೊ ಟಾನಿಕ್ ಪಿಲ್ಸ್ ಎಂಬುವ

ವಿದ್ಯುತ್‌ಶಕ್ತಿಯ ವಾಜೀಕರಣ ಮಾತ್ರೆಗಳು.



ಇದು ಮುಖ್ಯವಾಗಿ, ಹೆಚ್ಚಾಗಿ ವ್ಯಾಯಾಮವನ್ನು ತೆಗೆದುಕೊಳ್ಳಲಾರದ ಮನುಷ್ಯರಿಗೂ, ಮೆದುಳಿನಲ್ಲಿಯೇ ಕೆಲಸ ಮಾಡುವಂತಹ ವಿದ್ಯಾವಂತರಿಗೂ, ಬೋಧಕರಿಗೂ, ಗುಮಾಸ್ತೆಯರಿಗೂ, ವಿದ್ಯಾರ್ಥಿಗಳಿಗೂ ಮತ್ತು ವ್ಯಾಪಾರಿಗಳಿಗೂ ಅತ್ಯುತ್ತಮವಾದ ಮುಕ್ತಿನೋಪಾದಿಯ ಔಷಧ.

ಈ ಮಾತ್ರೆಗಳು ಕೆಳಗಿನ ವ್ಯಾಧಿಗಳನ್ನು ನಿರ್ಮೂಲ ಮಾಡುತ್ತವೆಂಬುದು ಎಲ್ಲವರ ಅನುಭವಸಿದ್ಧಾಂತ. ಕ್ಷಯರೋಗ, ಅಳವು (ಹಿಸ್ಟೀರಿಯಾ) ವೀರ್ಯದೌರ್ಬಲ್ಯವು, ಮಂದಾಗ್ನಿ, ಕೆಟ್ಟರಕ್ತ, ತಲೆತಿರುಗುವಿಕೆ, ಶಕ್ತಿಹೀನತೆ, ಧಾತ ಕ್ಷೀಣತೆ, ಧಾತು ಸಂಬಂಧವಾದ ವಿಕಾರಗಳು, ಸ್ತ್ರೀಗರ್ಭ ವಿಕಾರಗಳು, ಅಕಾಲದ ಮುಟ್ಟು, ಸೊಂಟದಲ್ಲಿಯ ನೋವು, ಮೂತ್ರದಲ್ಲಿಯ ಬಿಳುಪು, ಮಂದವಾದ ದೃಷ್ಟಿ, ಕೀಲುಗಳ ನೋವು, ಈ ಮೇಲೆ ಹೇಳಿರುವ ಎಲ್ಲಾ ವ್ಯಾಧಿಗಳಲ್ಲಿ ನಿಮಗೆ ಯಾವುದಾದರೂ ಉಂಟಾದರೆ, ಆ ವ್ಯಾಧಿಯು ಆರಂಭಿಸುತ್ತಲೇ, ಬೇರೆ ಚಿಕಿತ್ಸೆಗಳನ್ನು ಮಾಡಿ, ಉಪಯೋಗವಿಲ್ಲದ ಕಷ್ಟಗಳನ್ನು ತಂದುಕೊಳ್ಳದೆ, ತಕ್ಷಣವೇ ಮೇಲೆ ಹೇಳಿರುವ ಪ್ರೊಫೆಸರ್ ಜೇಮ್ಸ್‌ರವರ ವಿದ್ಯುತ್‌ಶಕ್ತಿಯ ವಾಜೀಕರಣ ಮಾತ್ರೆಗಳನ್ನು ತರಿಸಿ ಉಪಯೋಗಿಸಿಕೊಳ್ಳಿರಿ. ಈ ಮಾತ್ರೆಗಳನ್ನು ಉಪಯೋಗಿಸುವುದರಿಂದ ಮೇಲೆ ಹೇಳಿರುವ ವ್ಯಾಧಿಗಳೆಲ್ಲವೂ ನಿರ್ಮೂಲವಾಗಿ ವಾಸಿಯಾಗುವುವು. ಅಲ್ಲದೆ, ನಿಮ್ಮ ಶರೀರಗಳನ್ನು ದೃಢವಾಗಿಯೂ, ಆರೋಗ್ಯವಾಗಿಯೂ, ಕಷ್ಟಪಟ್ಟು ಕೆಲಸಗಳನ್ನು ಮಾಡಲು ಶಕ್ತಿಯನ್ನೂ ಈ ಮಾತ್ರೆಗಳು ನಿಮಗೆ ಮನೋಲ್ಲಾಸವನ್ನೂ ಕೊಡುತ್ತವೆ. ನೀವು ಈ ಮಾತ್ರೆಗಳನ್ನು ಇದುವರೆಗೂ ಉಪಯೋಗಿಸದಿದ್ದರೆ, ಈಗಲಾದರೂ ಒಂದು ಬುದ್ದಿ ತರಿಸಿಕೊಂಡು ಉಪಯೋಗಿಸಿ ನೋಡಿದರೆ, ನಿಮಗೇ ನಂಬಿಕೆಯುಂಟಾಗುವುದು.

25 ಮಾತ್ರೆಗಳುಳ್ಳ ಸೀಸೆ 1ಕ್ಕೆ ರೂ 1—4—0 40 ಮಾತ್ರೆಗಳುಳ್ಳ ಸೀಸೆ 1ಕ್ಕೆ ರೂ. 2—0—0. ಟಪ್ಪಾಲು ಖರ್ಚು ಅಲಾಯಿದ.

ಅಂದವಾಗಿ ಘಳಘಳಿಸುವ ಕೂದಲನ್ನು ಕೊಡುವ

ಕಾಮಿನಿಯಾ ಆಯಿಲ್ (ರಿಜಿಸ್ಟರ್ಡ್).



ಈ ಎಣ್ಣೆಯು ಸುಪ್ರಸಿದ್ಧವಾದ ವನಸ್ಪತಿಗಳ ಮತ್ತು ಸುಗಂಧ ದ್ರವ್ಯಗಳ ಮಿಶ್ರಣದಿಂದ ತಯಾರು ಮಾಡಲ್ಪಟ್ಟಿರುವುದು. ಈ ಎಣ್ಣೆಯನ್ನು ಪ್ರತಿದಿನವೂ ಉಪಯೋಗಿಸುವುದರಿಂದ ಇದು ಕೂದಲುಗಳ ಬೆಳವಣಿಗೆ ಶಕ್ತಿಯನ್ನು ಅಭಿವೃದ್ಧಿ ಮಾಡುತ್ತದೆ. ಇದರ ಮಹಿಮೆಯಿಂದ ಅನೇಕ ದೊಡ್ಡ ಮನುಷ್ಯರೂ, ಹೆಂಗಸರೂ, ಯೌವನಸ್ಥರೂ ಯಾವಾಗಲೂ ಉಪಯೋಗಿಸುತ್ತಿರುತ್ತಾರೆ. ಕಾಮಿನಿಯಾ ಎಣ್ಣೆಯನ್ನು ಉಪಯೋಗಿಸುವುದರಿಂದ ತಲೆಕೂದಲು ಸುವಾಸನೆಯುಳ್ಳ ... ನೋಡಲು ರೇಷ್ಮೆಯಂತೆ ಹೊಳಪುಳ್ಳದ್ದಾಗಿಯೂ ಇರುವುದರಿಂದ ಈಗ ಅಂಗಡಿಗಳಲ್ಲಿ ದೊರಕುವ ಅನೇಕ ಕೀಳು ತರದ ಎಣ್ಣೆಗಳನ್ನು ಕಮ್ಮಿ ಬೆಲೆಗೆ ತೆಗೆದುಕೊಂಡು ಅನ್ಯಾಯವಾಗಿ ತಲೆಯ ಕೂದಲನ್ನು ಹಾಳುಮಾಡಿಕೊಳ್ಳಬೇಡಿರಿ.

ಕ್ರಯ ಸೀಸೆ 1ಕ್ಕೆ ರೂ 1—0—0
,, ,, 3ಕ್ಕೆ ,, 2—10—0
ಅಂಚೆ ಖರ್ಚು ಅಲಾಯಿದ.

N. B.—ಕಾಮಿನಿಯಾ ಎಣ್ಣೆಯನ್ನು ಕೊಳ್ಳುವಾಗ ಕಾಮಿನಿಯಾ (ರಿಜಿಸ್ಟರ್ಡ್) ಎನ್ನುವದನ್ನೇ ತೆಗೆದುಕೊಳ್ಳಿ.

ವಸಂತ, ಗ್ರೀಷ್ಮ, ವರ್ಷ, ಶರತ್ ಈ ನಾಲ್ಕು ಋತುಗಳಲ್ಲಿ ಯಾವಾಗಲೂ ನಿಮ್ಮ ಅಂತಃಕರಣಕ್ಕೆ ಆನಂದವನ್ನು ಕೊಟ್ಟು ಸುಪ್ರಸಿದ್ಧವಾದ ಸುವಾಸನೆಯಿಂದೊಡಗೂಡಿದ ಅನೇಕ ಪುಷ್ಪಗಳಿರುವ ತೋಟದಿಂದ ಈಗಲೇ ಹೊಸದಾಗಿ ತಂದ ಪುಷ್ಪಗಳ ಆನಂದವನ್ನು ಕೊಡುವ

ಆಟೋ ದಿಲ್ಬಹಾರ್.

ಇದು ಲೋಕದಲ್ಲಿ ಅದ್ವಿತೀಯವಾದ ಸುಗಂಧಗಳಲ್ಲಿ ಮೇಲಾದ ಸ್ಥಾನವನ್ನು ಹೊಂದಿರುತ್ತದೆ ಎಂದು ಎಲ್ಲರೂ ಉಪಯೋಗಿಸಿ ನೋಡಿ ಶ್ಲಾಘನೆ ಮಾಡಿರುತ್ತಾರೆ. ಇದನ್ನು ಉಡುಪುಗಳ ಮೇಲೆ ಚಿಮುಕಿಸಿಕೊಂಡರೆ ಯಾವ ವಿಧವಾದ ಚುಕ್ಕೆಯು ಕಾಣದೆ, ಸದಾ ಇರತಕ್ಕ ಪರಿಮಳ ಸುಗಂಧವನ್ನು ಕೊಡುತ್ತದೆ. ಒಂದು ಸಾರಿ ಉಪಯೋಗಿಸುವುದರಿಂದ ಇದರಲ್ಲಿ ನಂಬಿಕೆ ಹುಟ್ಟುತ್ತದೆ. ಇದನ್ನು ಕೊಂಡುಕೊಳ್ಳುವಾಗ ರಿಜಿಸ್ಟರಾಗಿರುವ "ಆಟೋ ದಿಲ್ಬಹಾರ್" ಡಬ್ಬಿಯನ್ನು ಪೇಕಿಂಗ್ ಒಡೆಯದಿರುವುದನ್ನೇ ನೋಡಿ ತೆಗೆದುಕೊಳ್ಳಿರಿ.

ಕ್ರಯ ಸಣ್ಣ ಸೀಸೆ 1ಕ್ಕೆ 0—8—0.
,, ಮಧ್ಯಮ ,, ,, 0—12—0.
,, ½ ಔನ್ಸಿನ ,, ,, 2—0—0.
ಆಟೋ ದಿಲ್ಬಹಾರ್ ಕಾರ್ಡು 1ರ ಬೆಲೆ 0—1—0.
ಪೋಸ್ಟೇಜು ಅಲಾಯಿದ.

ಯಾವಾಗಲೂ ಕುಟುಂಬದಲ್ಲಿ ಅವಶ್ಯವಾಗಿರತಕ್ಕ ಔಷಧವು.

ಆಡ್‌ಮನ್ಸ್ ಸ್ಪೈಪಸ್ ಸಾಲ್ವ್.

ವಾಯುವಿನಿಂದ ಶರೀರದ ಯಾವ ಭಾಗಕ್ಕೆ ಉಂಟಾಗುವ ನೋವು, ನಾವು ಶ್ವಾಸ ಬಿಡುವಾಗಲೂ ಮತ್ತು ತೆಗೆದುಕೊಳ್ಳುವಾಗಲೂ ಉಂಟಾಗುವ ಎದೆನೋವು, ವಾಯುವಿನಿಂದ ಕೀಲುಗಳಲ್ಲಿ ಉಂಟಾಗುವ ನಡುವಿನ ನೋವು, ತಲೆಶೂಲೆ ಮತ್ತು ಕೈಕಾಲು ನೋವು, ಇವುಗಳೆಲ್ಲವೂ ಈ ಮುಲಾಮನ್ನು ಹಚ್ಚುವುದರಿಂದ ಶುದ್ಧಾಂಗವಾಗಿ ನಿವೃತ್ತಿಯಾಗುತ್ತದೆ. ಒಂದು ಸಲ ಉಪಯೋಗಿಸಿ ನೋಡಿರಿ. ಇತರ ಮುಲಾಮುಗಳನ್ನು ಉಪಯೋಗಿಸದೆ ಇದನ್ನೇ ಉಪಯೋಗಿಸುವುದರಿಂದ ನಿಮಗೆ ಹೆಚ್ಚಾದ ಲಾಭ ಉಂಟು. ಕ್ರಯ ಬಾಟ್ಲಿ ಒಂದರ ರೂ 1—0—0 ಟಪ್ಪಾಲು ಖರ್ಚು 4 ಆಣೆ

ಆಡ್‌ಮನ್ಸ್ ಮಲೇರಿಯಸ್ ಪಿಲ್ಸ್.

ಶೀತಜ್ವರ, ಚಳಿಜ್ವರ, ಮೊರೆಜ್ವರ ಮತ್ತು ಸಾಧಾರಣ ಜ್ವರ ಇವುಗಳಿಗೆ ಆಡ್‌ಮನ್ಸ್ ಮಲೇರಿಯಸ್ ಮಾತ್ರೆಗಳು ಬಹು ಆಶ್ಚರ್ಯಕರವಾದ ಗುಣಗಳನ್ನು ಕೊಡುತ್ತವೆ. 30 ಮಾತ್ರೆಗಳ ಡಬ್ಬಿ 1ರ ಬೆಲೆ ರೂ 1—0—0. ಟ. ಖ ಅಲಾಯಿದೆ.

THE ANGLO INDIAN DRUG & CHEMICAL COMPANY, 16 MARKET BOMBAY 2.

ಪ್ರಧಾನ ಏಜಂಟರು: ದಿ ಊಲನ್ ಮಾರ್ಟ್, ಮಂಗಳೂರು ದ. ಕನಡಾ.

Printed & Published by V. S. Kamath at the Mangalore Trading Association's Sharada Press, Mangalore

Registered No. M. 908

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:— ವರುಷ ಒಂದಕ್ಕೆ ರೂ. 1—4—0. ಟಪ್ಪಾಲು ಹಾಸಲು ಸಹಿತ ರೂ. 2—1—0.

ಪುಸ್ತಕ IX | ಮಂಗಳೂರು ತಾ. 9ನೇ ಒಕ್ಟೋಬರ ಶನಿವಾರ 1915. | ಸಂಚಿಕೆ 41

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತಾನ್.

(ರಿಜಿಸ್ಟರ್ಡ)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿಂತಾನದ ಸೇವನೆಯಿಂದುಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

1. [illegible]ಶಕ್ತಿಯನ್ನು ವೃದ್ಧಿಪಡಿಸುವದಲ್ಲದೆ ತಲೆಯಸೋವು, ತಲೆತಿರುಗುವದು, ವಿಕಾರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವದು.

2. [illegible] ಉಲ್ಲಾಸವನ್ನುಂಟುಮಾಡುವದು. ಮತ್ತು [illegible] ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವದು.

3. ಊಟಮಾಡನಂತರ ಅಥವಾ [illegible] ಉಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನು ಉಪಯೋಗಿಸುತ್ತ ಬಂದಲ್ಲಿ ತಿಂದನ್ನವು ಜೀರ್ಣವಾಗುವದಲ್ಲದೆ, ಕಾಲಪ್ರವೃತ್ತಿಯು ಕ್ರಮವಾಗಿ ಆಗುತ್ತದೆ [illegible] ಅವಕಾಶವುಂಟಾಗುವದಿಲ್ಲವು.

4. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವದಲ್ಲದೆ, ಕೆಮ್ಮನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವದು.

5. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ ಎಲ್ಲ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವವು.

6. ಬೇಸಿಗೆ ಮತ್ತು ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.

7. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಆದುಕಾರಣ ಇಂತಹ ಗುಣಕಾರಿಯಾದ ಸೆಶಿಂತಾನದ ಒಂದು ಪೊಟ್ಲವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

45 ಮಾತ್ರೆಗಳ ಪೊಟ್ಲ 1ಕ್ಕೆ	0—2—0	200 ಮಾತ್ರೆಗಳ ಪೊಟ್ಲ 1ಕ್ಕೆ	0—7—0	80 ಮಾತ್ರೆಗಳ ಟಿನ್ 1ಕ್ಕೆ	0—4—0	550 ಮಾತ್ರೆಗಳ ಪೆಟ್ಟಿಗೆ 1ಕ್ಕೆ	1—0—0
95 ,, ,, ,,	0—4—0	200 ,, ಟಿನ್ ,,	0—9—0	100 ,, [illegible] ,,	0—4—6	1200 ,, ,, ,,	2—0—0

1 ರೂಪಾಯಿಗೆ ಕಡಿಮೆಯಾಗಿ ವಿ. ಪಿ. ಮೂಲಕ ಕಳುಹಿಸಲ್ಪಡುವುದಿಲ್ಲವು. ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

☞ ಭರತಖಂಡ, ಬರ್ಮ, ಮತ್ತು ಸಿಲೋನ್ ಈ ಪ್ರಾಂತ್ಯಗಳ ಎಲ್ಲಾ ಭಾಗದಲ್ಲೂ ಏಜಂಟರು ಬೇಕಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಏಜಂಟರು:— ದಿ. ಊಲನ್ ಮಾರ್ಟ, ಮಂಗಳೂರು.

ಸೋಲ್ ಏಜಂಟ್ಸ್:— ಸೆಶಿಂತಾನ್ ಡಿಪೋ, ಪ್ರಿನ್ಸೆಸ್ ಸ್ಟ್ರೀಟ್ ಬೊಂಬಾಯಿ ನಂ. 2.

TOM VICTOR & CO'S
BUSINESS
Shorthand and Typewriting Institution.

Instruction given in Commercial Subjects, French, Shorthand and Typewriting from Oct. 10th to Jan. 10th; Jan. 15th to April 15; June 15th to Sept. 15th.

N. B.—Job work and Typewriter Repairs undertaken at very cheap [illegible]

ವಿನಾಮೂಲ್ಯ! ವಿನಾಮೂಲ್ಯ!! ವಿನಾಮೂಲ್ಯ!!!

ಆರ್ಯಚಿಕಿತ್ಸಾರಹಸ್ಯ

ದೇಶೀಯ ಚಿಕಿತ್ಸೆಯನ್ನು ನಮ್ಮ ಜನಸಮುದಾಯದಲ್ಲಿ ಹ್ಯಾಗೆ ರೂಢಿಗೆ ತರಬೇಕೆಂಬುವದು ಈ ಗ್ರಂಥದಿಂದ ಸಮ್ಯ ವ್ಯಕ್ತವಾಗುವದು. ಕನ್ನಡ ನುಡಿಯ ಒಡನಾಟವಿರುವವರೆಲ್ಲರಿಗೂ ತಿಳಿಯುವಂತೆ ಈ ಗ್ರಂಥವು ಬರೆಯಲ್ಪಟ್ಟಿದೆ.

ಆರ್ಯಮಹಾಶಯರೇ, ಆರ್ಯಚಿಕಿತ್ಸೆಯಲ್ಲಿ ಪೂರ್ಣ ಗೌರವ ಮತ್ತು ಅಭಿಮಾನವನ್ನು ತೋರಿಸಿ ತಮ್ಮ ಆಯುಃಪ್ರಮಾಣದಲ್ಲಿ ಕಾಲುಘಂಟೆ ಸಮಯವನ್ನು ದೇಶಸೇವೆಗೋಸ್ಕರ ಕಳೆಯಿರಿ.

ಈ ಪುಸ್ತಕ ಬೇಕೆಂದಿರುವವರು ತಮ್ಮ ಪೂರ್ಣ ಎಡ್ರೆಸನ್ನು ಅರ್ಧಾಣೆ ಸ್ಟಾಂಪಿನೊಂದಿಗೆ ಈ ಕೆಳಗಣ ವಿಳಾಸಕ್ಕೆ ಕಳುಹಿಸಿಕೊಟ್ಟರೆ ಈ ಪುಸ್ತಕವು ದೊರಿಯುವದು.

ಎಂ. ವಿ. ಶಾಸ್ತ್ರೀ,
ಆಯುರ್ವೇದ [illegible]

ರಮಾಮಾಧವ.

ಮದ್ರಾಸು ಗವರ್ನಮೆಂಟ್ ಕನ್ನಡ ಟ್ರಾನ್ಸಲೇಟರ
ಮ. ರಾ. ಬಿ. ರಾಮರಾವ್ ಎಂ.ಎ.,ಎಲ್.ಎಲ್.
ಇವರಿಂದ

ಈ ಕಾದಂಬರಿಯ ಕಥಾನಕವು ಬಹು ಹೃದಯಂಗಮವಾದದ್ದಾಗಿಯೂ, ಸ್ತ್ರೀಪುರುಷರೂ ಬಾಲ್ಯ ವಯಸ್ಸಿನವರೂ ಓದುವದಕ್ಕೆ ತಕ್ಕುದಾಗಿಯೂ ಇದ್ದು, ಸಂಸಾರಿಕರು ಸುಖಿಗಳಾಗಿ ಬಾಳುವ ಮಾರ್ಗವನ್ನು ಅತ್ಯುತ್ತಮವಾಗಿ ತಿಳಿಸುತ್ತಲಿದೆ.

ಬೆಲೆ ಪ್ರತಿಯೊಂದಕ್ಕೆ 6 ಆಣೆ. [illegible]ಯ ಹಾಸಲು ಬೇರೆ.

ವಿಳಾಸ:— [illegible]

Strong Pocket Railway Regulator Watch.

ಶ್ರೇಷ್ಟವಾದ ವಾಚ್! ನಾಣ್ಯವಾದ ವಾಚ್ ! ಸಂತೋಷಕರವಾದ ವಾಚ್!!!

ಸ್ಪ್ರಾಂಗ್ ಪಾಕೆಟ್ ರೈಲ್ವೇ ರೆಗ್ಯುಲೇಟರ್ ವಾಚ್.

ಇದರ ಕ್ರಯ ಬಹುಮಾನಗಳ ಸಮೇತ ರೂ. 3.

ಘನವಂತರೇ, ಈ ವಾಚ್ 5 ವರುಷಗಳ ವರೆಗೆ ನಿಲ್ಲದೆ ಹೋಗತಕ್ಕಂಥಾದ್ದು ಪುನಃ ಇಂಜಿನ್ ಮಾರ್ಕ ಅಂದರೆ ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಘುತ್ತು ಶ್ರೇಷ್ಟವಾದ ಲೀವರ್ ಕೆಲಸದಿಂದಲೂ, ಬಲಿಷ್ಟವಾದ ಮತ್ತು ನಾಣ್ಯವಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ.

ಸರಕಾರದ ಉದ್ಯೋಗಸ್ಥರಿಗೂ, ವರ್ತಕರಿಗೂ ಮತ್ತು ಇತರ ಜನರಿಗೂ ಸಪ್ಲೈ ಮಾಡುತ್ತೇವೆ ... ರಮಣೀಯವಾದ ವಾಚ್ ... ಮಾತುಗಳಿಂದಲೇನು?

ಬಹುಮಾನಗಳು —(1) ಸುಂದರವಾದ ಸರಪಣಿ, (2) ಉತ್ತರವುಂಖಿ, (3) ಇಂಗ್ಲೀಷು ನಮೂನೆ ಬಾಚಣಿಗೆ, (4) ಜಪಾನ್ ಕನ್ನಡಿ, (5) ಕರವಸ್ತ್ರ, (6) ಸೊಗಸಾದ ರೇಷ್ಮೆ ಕೆಲಸ ಮಾಡಿದ ಪೆಟ್ಟಿಗೆ, (7) ಶರಟು ಗುಂಡಿ ಸೆಟ್, (8) ಸುವಾಸನೆಯುಳ್ಳ ಪರಿಮಳ ಶೀಸೆ (ಸೆಂಟ್) (9) ಆರು ಫೀನ್ಸಿ ಪೋಸ್ಟ್ ಕಾರ್ಡುಗಳು.

ರೈಲ್ವೆ ರೆಗ್ಯುಲೇಟರ್ ಪೇನ್ಸಿ ಡಾಯಲ್ ೧೪ ಬಹುಮಾನಗಳ ಸಮೇತ ರೂ 3 4-0.
ರಾಸ್ಕೋಪ್ ಸಿಸಂ ಪೇಟೆಂಟ್ ಬಹುಮಾನಗಳು ಇಲ್ಲದೆ ರೂ 1-14 0
ಬೊಂಬೆ ಮೈಲ್ ರೆಗ್ಯುಲೇಟರ್ ಬಹುಮಾನಗಳ ಸಮೇತ ರೂ 3-0 0

ರಮಣೀಯವಾದ ಲೇಡಿಸ್ ಅಥವಾ ಜಂಟ್ಲಮನ್ ರಿಸ್ಟ್ ವಾಚು.

ಇದರ ಕ್ರಯ ಸೊಗಸಾದ ಚರ್ಮದ ಪಟ್ಟಿ ಸಹಿತ ರೂ 3—4—0.

ಅಯ್ಯಾ ಈ ಕೈಗಡಿಯಾರವು ಕೈಯ ಲ್ಲಿಟ್ಟುಕೊಳ್ಳುವುದಕ್ಕೆ ಸೊಗಸಾದದ್ದು. ಬಹು ಬಲಿಷ್ಟವಾದ ಸಾಮಾನುಗಳಿಂದಲೂ, ನಾಣ್ಯವಾದಯಂತ್ರದಲ್ಲಿಯೂ ತಯಾರಿಸಲ್ಪಟ್ಟದ್ದು ಇದು ನೋಡುವುದಕ್ಕೆ ಚಿಕ್ಕದಾಗಿಯೂ, ಬಹಳ ಅಂದವಾಗಿಯೂ ಮತ್ತು ಮುಚ್ಚಟವಾಗಿಯೂ ಇರುತ್ತೆ. ಇದು ಇಂಗ್ಲೀಷ ನಮೂನೆ ಕೈಗಡಿಯಾರವು ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು. ನಮ್ಮ ಕಂಪೆನಿ ಹೊಸದಾಗಿರುವುದರಿಂದ ಬಹಳ ಕಡಿಮೆ ಧಾರಣೆಗೆ ವಿಕ್ರಯ ಮಾಡಲ್ಪಡುತ್ತವೆ.



ಗಿರಾಕಿಗಳು ತಮ್ಮ ವಿಳಾಸಗಳನ್ನು ಸ್ಪಷ್ಟವಾಗಿ ಬರೆಯತಕ್ಕದ್ದು ಪತ್ರವ್ಯವಹಾರಗಳನ್ನು ಇಂಗ್ಲೀಷು, ತಮಿಳು, ತೆಲುಗು ಭಾಷೆಗಳಲ್ಲಿ ಬರೆಯಬಹುದು.

ನಮ್ಮ ವಿಳಾಸ —

ಆರ್. ರಾಮಚಂದ್ರ ನಾಯುಡು. R. Ramachandra Naidu,
ಪೋಸ್ಟ್ ಬೋಕ್ಸ್ ನಂ 28 *Post Box No. 28,*
ಮದ್ರಾಸು. MADRAS.

GRAND CLEARANCE SALE RS 1 15 0.

ಯೋಗ್ಯತಾ ಪತ್ರಿಕೆ —ನಾನು ... ಯಿಂದ ಎಲ್ಲರಿಗೂ ತಿಳಿಸ ಪಡೇನಂದರೆ, ನಿಮ್ಮಿಂದ ನಾನು ತಗೊಂಡ ಲೇಡಿಸ್ ಗಡಿಯಾರ ಉಪಯೋಗಕ್ಕೆ ಬಹಳ ಶ್ರೇಷ್ಟವಾಗಿದೆ ... ಇದರಲ್ಲಿ ... ವ್ಯತ್ಯಾಸವೂ ಇಲ್ಲ ಇತರ ಕಂಪನಿಯವರ ... ಗಡಿಯಾರವನ್ನು ಕಳುಹಿಸ ಬೇಡಿ. ಮತ್ತು ೨ ಗಡಿಯಾರಗಳನ್ನು ವಿ. ಪಿ. ಮೂಲಕ ಕಳುಹಿಸಿಕೊಡಿ

ವೆಂಕಟೇಶನ್, ... ಆಫೀಸು. ತಿರುಚಿನಾಪಳ್ಳಿ

ಸುಂದರವಾದ ಲೇಡಿಸ ಸ್ಪ್ರಾಂಗ್ ಪಾಕೆಟ್ ವಾಚ್.

ಅಸಲು ಕ್ರಯ ರೂ 3-14 0, ಈಗ ರೂ 1-15-0.

ಈ ನಕ್ಷೆಯಲ್ಲಿ ತೋರಿಸಿರುವ ಗಡಿಯಾರವು ಕ... ಸಿಂಪನ್ ವ್ಯಾಲಿಡ್ ... ಗಡಿಯಾರ ... ನೋಡುವದಕ್ಕೆ ... ಇರುತ್ತೆ ಇತರ ... ಕ್ರಯದ ... ಗಡಿಯಾರಗಳನ್ನು ಕೊಂಡು ... ಕೊಂಡು ... ೫ ವರ್ಷಗಳ ಗ್ಯಾರಂಟಿ ಇದೇ ಅಕ್ಟೋಬರ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಮಾತ್ರ ರೂಪಾಯಿ 1—15—0 ಕೊಡಬೇಕೆಂದು ನಮ್ಮ ನಿರ್ಧರ ಆಗಿದೆ

ನಮ್ಮ ವಿಳಾಸ —

ವಿ. ಎ. ಎಸ್. ಪಾಣಿ,
3. ಇರುಳಪ್ಪನ ಬೀದಿ, ಮದರಾಸು.

ಉತ್ತಮ ಹೊಸ ನಾವೆಲ್ (ಕಥೆ)ಗಳು.

ಆರಿಸಿ ಆರಿಸಿ ತೆಗೆದಿರುವ ಹೊಸ ಪುಸ್ತಕಗಳೇ.

		ರೂ ಆ ಪೈ			ರೂ. ಆ. ಪೈ.
೧.	ಕಲಿಯುಗ	೦—೫—೦	೧೦.	ಅದ್ಭುತ ರಾಮಾಯಣ	೦—೬—೦
೨.	ಸುಭದ್ರೆ	೦—೫—೦	೧೧.	ಚಮತ್ಕಾರ ಚಿಂತಾಮಣಿ	೦-೧೦—೦
೩.	ಚಂದ್ರಕಳಾ	೦—೭—೦	೧೨.	ನವೀನ ಭರತಖಂಡ ...	೦—೫—೦
೪.	ಶುಕಸಪ್ತತಿ	೧—೮—೦	೧೩.	ವಚನ ಶಿವಪುರಾಣ ...	೨—೦—೦
೫	ಕಲಾನಾಥ	೦—೪—೦	೧೪	ವಚನ ದೇವೀಭಾಗವತ	೨—೦—೦
೬	ಸುಮತಿ	೦—೬—೦	೧೫	ಉತ್ತರ ರಾಮಾಯಣ ಕಥಾ	೦—೫—೦
೭	ಶಕ್ತಿ ..	೦-೧೨—೦	೧೬	ಸುಸೀಯು ಚರಿತ್ರೆ ...	೦-೧೦—೦
೮	ಮಾಧವೀಕಂಕಣ	೧—೮—೦	೧೭.	ಯಯಾತಿ ಚರಿತ್ರೆ ..	೦—೪—೦
೯	ಬೆಕ್ಕೋಜಿ	೦—೪—೦	೧೮	ಕಾದಂಬರಿ ಕಥೆ ...	೦—೮—೦

ವಿದ್ಯಾನಂದ ಮಾಸಪತ್ರಿಕೆ ವಾರ್ಷಿಕ ಚಂದಾ ರೂ. ೨—೪—೦.

ಸಂಸ್ಕೃತ, ಕನ್ನಡ ಭಾಷೆಗಳಲ್ಲಿ ಕಾದಂಬರಿ ವೇದಾಂತ ಜ್ಯೋತಿಷ ವಗೈರೆ ಗ್ರಂಥಗಳು ಯಾವಾಗಲೂ ದೊರೆಯುವುವು.

☞ ಸ್ಕೂಲ್ ಪುಸ್ತಕಗಳೂ ದೊರೆಯುತ್ತವೆ.

(ಕ್ಯಾಟಲಾಗ್‌ಮಾದರಿ ಪತ್ರಿಕೆ ಉಚಿತ.)

ಬಾಣವಾಡಿ ಆದಿನಾರಾಯಣಶಾಸ್ತ್ರಿ,
ವಿದ್ಯಾನಂದ ಆಫೀಸ್,
ಶಂಕರಪುರ, ಬೆಂಗಳೂರು ಸಿಟಿ

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ಕೃಷ್ಟವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.

ಬಲ್ಹಾರ ಮಿಶ್ಶನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಶನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಬೆಬ್ಬ ಎಂಬ ಗುರುಸು ಕಲ್ಲು ಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ, ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ... ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

The Original
BABA
BUDAN-GHIRY

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ :— ಜೆ. ಎಸ್. ಸೋಜ ಎಂಡ್ ಕಂಪೆನಿ, ಹಂಪನ್‌ಕಟ್ಟಾ, ಮಂಗಳೂರು.

ಅಮೃತಾಂಜನ.

ಜಗತ್ಪ್ರಸಿದ್ಧವಾದ ಬೇನೆಹಾರಿ ಮುಲಾಮು

ಇದರ ಉಪಯೋಗದಿಂದ —ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಉಳುಕು, ಎದೆನೋವು ಸೊಂಟದ ನೋವು, ಶೀತ, ಕೆಮ್ಮು ದಂತಶೂಲೆ, ಶೂಲವ್ಯಾಧಿ, ಚೇಳು ಕಡಿತ, ಆನೆಗಾಲು, ಸುಟ್ಟ ಗಾಯ, ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷಧವಾಗಿ ರುತ್ತದೆ ಸಾವಿರಾರು ಡಾಕ್ಟರರೂ, ಇದಕ್ಕೆ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ ಪ್ರತಿ ತಿಂಗಳಲ್ಲೂ 25,000 ಬಾಟ್ಲಿಗಳು ಮಾರಲ್ಪಡುತ್ತವೆ ಬಾಟ್ಲಿ ಒಂದರ ಕಿಮ್ಮತು ಆಣೆ 8 ಡಜನ್ 1ಕ್ಕೆ ರೂ 5—4—0 ವಿ ಪಿ ಖರ್ಚು ಪ್ರತ್ಯೇಕ

ಎಚ್ಚರಿಕೆ —ಅಮೃತಾಂಜನವನ್ನು ಪಡಕೊಳ್ಳುವಾಗ ಸುಂದರವಾದ ಮತ್ತು ಹಲವು ಭಾಷೆಗಳುಳ್ಳ ಕರಡಿಗೆ ಸಮೇತ ಪಡಕೊಳ್ಳಿರಿ

ಗಜಕರ್ಣದ ಮುಲಾಮು.

ಮೂರು ಸರ್ತಿ ಹಾಗಿಸುವದರೊಳಗ ಗಜಕರ್ಣ ನಾಶವಾಗಿ ಹೋಗುವದು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ ಇದುವರೆಗೆ ಒಂದು ಮಿಲಿಯ ಡಬ್ಬಿಗಳು ಮಾರಲ್ಪಟ್ಟವು ರಾಜಾರಾಣಿ ಟ್ರೇಡ್ ಮಾರ್ಕ 0—6—0 12 ಡಬ್ಬಿಗಳಿಗೆ 3—8—0 ವಿ ಪಿ ಪ್ರತ್ಯೇಕ

ದಂತಮಂಜನ.

ರಾಜಾರಾಣಿ ಟ್ರೇಡ್ ಮಾರ್ಕ

ಈ ಮಂಜನದಿಂದ ಹಲ್ಲುಗಳನ್ನು ದಿನಾಗಲೂ ತಿಕ್ಕುವದರಿಂದ ಹಲ್ಲುನೋವು, ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ವಾಸನೆ, ಮುಂತಾದವುಗಳೆಲ್ಲಾ ನಿಲ್ಲುತ್ತವೆ. ಇದರಲ್ಲಿ ಹಲವು ನಮೂನೆಯ ಔಷಧಗಳಿವೆ ಬರೀ ಚೋಕಿನ ಹುಡಿ ಅಲ್ಲ. ಡಬ್ಬಿ 1ಕ್ಕೆ 0—2—0 ವಿ ಪಿ ಪ್ರತ್ಯೇಕ

ಮೋಹಿನಿ ತೈಲ

ಈಗ ಹಲವು ನಮೂನೆಯ ತೈಲಗಳು ಉಪಯೋಗಿಸಿದವರು ಈ ನಮ್ಮ ಸುಗಂಧಮಯವಾದ ಮೋಹಿನಿ ತೈಲವನ್ನು ಒಂದು ಸಾರಿ ಉಪಯೋಗಿಸಿ ನೋಡಿರಿ ಇದರಲ್ಲಿ ಹ್ವೈಟ್ ಒಯಿಲ್ ಇಲ್ಲಾ ಇದು ಗಿಡದ ಔಷಧಿಗಳಿಂದಲೂ ಬದಾಮಿನ ಎಣ್ಣೆಯಿಂದಲೂ ತಯಾರಿಸಲ್ಪಟ್ಟಿದೆ ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ ಬೆಳೆಯುವವು

ಬಾಟ್ಲಿ ಒಂದರ ಕಿಮ್ಮತು ಆಣೆ 0—12—0

ಸುಂದರಿ ಮುಲಾಮು.

ಮೊಡವೆಗಳನ್ನು ನಾಶಪಡಿಸಿ ಮುಖವನ್ನು ಸುಂದರಗೊಳಿಸುವದ ಡಬ್ಬಿ 1ಕ್ಕೆ ರೂ 0—8—0

ವಜ್ರಗುಟಿಕ.

ಧಾತುಪುಷ್ಟಿ, ಧಾತುವೃದ್ಧಿ ಶಕ್ತಿವರ್ಧಕ 20 ಗುಳಿಗೆಗಳ ಡಬ್ಬಿ ಒಂದರ ರೂ 1—0—0

ಕೆ. ನಟರಾಜನ್ ಎಡಿಟರ್, ಇಂಡಿಯನ್ ಸೋಸಿಯಲ್ ರಿಫ್ರೋರ್ಮರ್:—ಅಮೃತಾಂಜನ ಎಲ್ಲಾ ಔಷಧಗಳಿಗಿಂತಲೂ ಬಹಳ ಉತ್ತಮವಾದ ಔಷಧ

ಡಬ್ಲ್ಯು ಮೆಕ್ಸವೆಲ್, ಮೈಸೂರು.—ಅಮೃತಾಂಜನದಿಂದ ಎಂಥಾ ಕಠಿಣವಾದ ವಾತ ನೋವಾದರೂ ನಿಲ್ಲುತ್ತದೆ

ಆರ್ ಆರ್ ಗಂಗೋಲಿ:—ಅಮೃತಾಂಜನ ವಾತ, ತಲೆನೋವುಗಳ ಮೇಲೆ ದಿವ್ಯ ಔಷದ

ಡಾಕ್ಟರ್ ಡಾಂಡೇಕರ್, ಎಲ್ ಎಮ್. ಎಂಡ್ ಎಸ್:—ಅಮೃತಾಂಜನ ಎಲ್ಲಾ ನೋವುಗಳ ಮೇಲೆ ದಿವ್ಯ ಔಷಧ

ನಮ್ಮ ಔಷದಗಳನ್ನು ಪಡಕೊಳ್ಳುವಾಗ ಅಮೃತಾಂಜನ ಡಿಪೊ, ಮುಂಬಯಿ ಎಂಬ ಹೆಸರನ್ನು ಓದಿನೋಡಿ ಪಡಕೊಳ್ಳಿರಿ

ಅಮೃತಾಂಜನ ರಖಮಾಗಿಯೂ, ಚಿಲ್ಲರೆಯಾಗಿಯೂ ಬೇಕಾದವರು ನಮ್ಮ ಮುಂಬಯಿ ಆಫೀಸಿಗೆನೇ ಬರಿಯಬೇಕು ಮದ್ರಾಸು ಆಫೀಸಿನವರು ರಖಮಾಗಿ ಅಮೃತಾಂಜನ ರವಾನಿಸಿ ಕೊಡುವ ಏರ್ಪಾಡು ಮಾಡಲಿಲ್ಲ

ಮಂಗಳೂರಲ್ಲಿ—ಎಲ್ಲಾ ಔಷಧಗಳು ಈ ಕೆಳಗಿನ ಕಂಪೆನಿಗಳಲ್ಲಿ ಶಿಕ್ಕುವವು.

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್, ಪರ್ಲ್ ಎಂಡ್ ಸನ್ಸ್, ದಿ ಊಲನ್ ಮಾರ್ಟ, ಕೊಟ್ಟಿಕಾರ ಬ್ರದರ್ಸ ಉಡ್ಪಿ

ಅಮೃತಾಂಜನ ಡಿಪೊ,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

109 ಫ್ರೇಯರ್ ರೋಡ,
ಮುಂಬಯಿ,

ESTABLISHED JULY 1906.

THE CANARA BANK, LIMITED., MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	...	300,000—0—0
Issued Capital	...	225,000—0—0
Subscribed Capital	...	219,100—0—0
Paid up Capital	...	194,100—0—0
Deposits	...	385,613—4—0
Reserve Fund	...	33,500—0—0

Besides the uncalled capital of Rs. 25,000/- 25% of the net profits are added annually to the Reserve Fund. Rs. 28,485/ have been invested in Government Paper of the face value of Rs. 29,300/-

Dividends of not less than 6% paid during the past years and a bonus of 1% to 2% paid in addition during the last three years.

Fixed Deposits of Rs. 50/-and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee

Short-notice Deposits requiring one weeks notice of withdrawal after one month received @ 2½% per annum at the discretion of the managing committee.

Current Deposit Account opened free of charge.

Savings Bank Account opened for any sum not less than 4 As. and multiples thereof and interest paid @ 4½%.

Loans granted on proper securities and pledges.

Sealed Parcels for safe custody received on a moderate charge.

ನಿಯಮಿತ ಮೂಲ ಧನವು ರೂಪಾಯಿ	...	300,000—0—0
ಹುಟ್ಟಿಬಂದ ಮೂಲ ಧನವು ,,	...	225,000—0—0
ಪ್ರತಿಜ್ಞಾತ ಮೂಲ ಧನವು ,,	...	219,100—0—0
ಅಗತ ಮೂಲ ಧನವು ,,	...	194,100—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು	...	385,613—4—0
ರಕ್ಷಿತ ಧನವು	...	33,500—0—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯು ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 28,485—0—0 ಸರಕಾರದ ರೂ. 29,300ರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಸೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುದಾರರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು.

ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಅಡವಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

Canara Bank Ltd.,
Mangalore, 1st October 1915.

P. Gopal Naik,
Secretary.

ಅತ್ತರು ಮತ್ತು ಸುರಭಿಗಳಲ್ಲಿ ಮುಕುಟವರ್ಧನದಂತಿರುವ

ಒಟ್ಟೊ ಮೋಹಿನಿ

(ರಿಜಿಸ್ಟರ್ಡ್.)

ಅನೇಕ ವಸ್ತುಪ್ರದರ್ಶನಗಳಲ್ಲಿ ಪ್ರದರ್ಶಿಸಲ್ಪಟ್ಟು ಕಡೆಗೆ ಇದರ ರಮ್ಯವಾದ ಅತ್ಯಂತ ಶಾಶ್ವತವಾದ ಪರಿಮಳಕ್ಕಾಗಿ ಚಿನ್ನ ಬೆಳ್ಳಿಯ ಪದಕಗಳನ್ನು ಪಡೆದಿದೆ. ಎಲೆವಸ್ತ್ರದಲ್ಲಿ ನಾಲ್ಕು ತಟಕುಗಳನ್ನು ಹಾಗಿಸುವುದರಿಂದ ಹಿಡಿ ತುಂಬಾ ಮಲ್ಲಿಗೆ ಹೂ ಇದ್ದ ಪರಿಮಳವುಂಟಾಗುವುದು. ಈ ಹೂಗಳು ಕೃತಕವಾದವುಗಳಾದರೂ ನೈಸರ್ಗಿಕ ಹೂವಿನಂತೆ ಪ್ರತಿ ಸಾಯಂಕಾಲ ಬಾಡಿಹೋಗದು. ಆದರೆ ತನ್ನ ಪರಿಮಳವನ್ನು 4 ದಿವಸಗಳಿಗಿಂತಲೂ ಹೆಚ್ಚಿಗೆ ಕೊಡುತ್ತಿರುವದು. ಆದುದರಿಂದ ಒಟ್ಟೊ-ಮೋಹಿನಿಯು ಶಾಶ್ವತವಾದ ಸುರಭಿಯೆಂದು ಕರೆಯಲ್ಪಟ್ಟು ಈ ಕಾಲಕ್ಕೆ ತಕ್ಕುದಾದ ಬಹುಮಾನವಾಗಿ ಕೊಡತಕ್ಕ ದ್ರವ್ಯವಾಗಿದೆ. ಇದರ ಪರಿಮಳವು ಶಾಶ್ವತವಲ್ಲವೆಂದು ದೃಢಮಾಡಿಕೊಡುವವರಿಗೆ 100 ರೂಪಾಯಿಗಳ ಬಹುಮಾನ ಕೊಡಲಾಗುವದು. ಆದುದರಿಂದ ಯಾಕೆ ಈ ಬಹುಮಾನವನ್ನು ಪಡೆಯಲು ಪ್ರಯತ್ನಿಸಲಾಗದು?

ಕ್ರಯ ಅರ್ಧ ಔನ್ಸ್ ಸೀಸೆಗೆ 2—0—0. 1 ಡ್ರಾಮ್ ಸೀಸೆಗೆ 0—12—0. ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0.

Proprietors:—**The Oriental Drug & Chemical Co.**

Sole Agents:—**MOHINI AGENCY,**
3 Fida Building, Jumma Musjid, BOMBAY.

Agents:—**Bhagavandas Choonilal & Co.,**
177 China Bazar Road, MADRAS.

ಪ್ರೊಪ್ರೈಟರರು:—ಒರಿಯಂಟಲ್ ಡ್ರಗ್ ಎಂಡ್ ಕೆಮಿಕಲ್ ಕೋ.

ಪ್ರಾಮುಖ್ಯ ಏಜಂಟರು:—ಮೋಹಿನಿ ಏಜೆನ್ಸಿ,
3 ಫಿಡಾ ಬಿಲ್ಡಿಂಗ್, ಜುಮ್ಮಾ ಮಸೀದ್, ಬೊಂಬೈ.

ಏಜಂಟರು:—ಭಗವಾನ್‌ದಾಸ್ ಚೂನಿಲಾಲ್, ಎಂಡ್ ಕೋ.,
177 ಚೀನಾ ಬಜಾರ ರಸ್ತೆ, ಮದ್ರಾಸು.

ಸ್ವದೇಶಾಭಿಮಾನಿ

ಮಂಗಳೂರು, ಶನಿವಾರ ತಾರೀಖು 9ನೇ ಒಕ್ಟೋಬರ 1915

ಹಿಂದೂ ವಿಶ್ವವಿದ್ಯಾಲಯ.

ಹಿಂದೂ ವಿಶ್ವವಿದ್ಯಾಲಯದ ಸ್ಥಾಪನೆಯ ಮಸೂದೆಯು ಈ ತಿಂಗಳ ತಾ 1ರಲ್ಲಿ ಇಂಡಿಯಾ ಸರಕಾರದ ನ್ಯಾಯವಿಧಾಯಕ ಸಭೆಯಲ್ಲಿ ಮಂಜೂರಾಯಿತೆಂಬದನ್ನು ತಿಳಿದು ಹಿಂದುಗಳೆಲ್ಲರೂ ಸಂತೋಷ ಪಡದೆ ಇರಲಾರರು. ಪ್ರಾಚೀನ ಕಾಲಗಳಲ್ಲಿ ವಿದ್ಯಾಪೀಠಗಳು ಋಷಿಗಳ ಆಶ್ರಮಗಳಾಗಿದ್ದವು. ವಿದ್ಯಾರ್ಥಿಯು ಆ ಋಷಿಗಳ ಆಶ್ರಮಗಳನ್ನು ಬಾಲ್ಯದಲ್ಲಿ ಸೇರಿಕೊಂಡು ಯೌವನವು ತನಗೆ ಪ್ರಾಪ್ತವಾಗುವ ವರೆಗೆ ಅಲ್ಲಿಯೇ ಇದ್ದು ಬ್ರಹ್ಮಚರ್ಯವನ್ನು ಆಚರಿಸುತ್ತ ಶಿಕ್ಷಣ ಅಭ್ಯಾಸವನ್ನು ಮಾಗಿಸುತ್ತಿದ್ದನು. ಲೌಕಿಕ ವ್ಯವಹಾರ, ಸಂಸಾರದ ತೊಂದರೆ ಇತ್ಯಾದಿಗಳ ಸ್ಪರ್ಶವು ಗುರುಕುಲ ವಾಸವನ್ನು ಮುಗಿಸುವ ತನಕ ಅತಗೆ ಇದ್ದಿಲ್ಲ. ತಪೋಬಲ, ವಿದ್ಯಾಬಲ, ಇಂದ್ರಿಯನಿಗ್ರಹ ಶಕ್ತಿಯು ಆತಗೆ ಗುರುಕುಲವಾಸದಲ್ಲಿ ಪ್ರಾಪ್ತವಾಗಿ ಜೀವಿತವನ್ನು ವ್ಯವಸ್ಥೆಗೊಳಿಸುವ ಚೇತನವು ಆತನಲ್ಲಿ ಸ್ವತೇವ ಮೂಡುತ್ತಿತ್ತು. ಇಂಥವನಿಂದ ಕುಟುಂಬಹಿತ, ಸಮಾಜಹಿತ, ದೇಶಹಿತವನ್ನು ಸಂಗ್ರಹಿಸಲು ಸಾಧ್ಯವಾಗುತ್ತಿತ್ತು. ಇಂಥಾ ಗುರುಕುಲವಾಸದ ಶಿಕ್ಷಣ ಪದ್ಧತಿಯು ಹಿಂದೂಸ್ಥಾನದಲ್ಲಿ ಪೂರ್ಣ ಲೋಪವಾಗಿ ಹೋಗಿರುವದು. ಗುರು ಮಠಗಳು, ದೇವಸ್ಥಾನಗಳು, ಋಷ್ಯಾಶ್ರಮಗಳ ಎಡೆಯಲ್ಲಿ ಪ್ರಕೃತ ಇರುವವಾದರೂ ಇವುಗಳ ಮೇಲೆ ಸಮಾಜದ ಶಿಕ್ಷಣ ಜವಾಬ್ದಾರಿಕೆಯನ್ನು ಹೊರಿಸುವದು ತತ್ಕಾಲದಲ್ಲಿ ತಂಬಾ ಅಸಾಧ್ಯವಾಗಿ ಒಂದಿದೆ. ಇಂಥಾ ವಿದ್ಯಮಾನಗಳಲ್ಲಿ ಈಗಿನ ಶಾಲಾ ಕೋಲೇಜುಗಳಲ್ಲಿ ನಾವು ಕಲಿಯುತ್ತಿರುವ ಓದು ಬರಹಗಳನ್ನು ಶಿಕ್ಷಣವೆಂತ ತಿಳಿದಿದ್ದೇವೆ. ಹಿಂದೂ ಸಮಾಜದ ಪ್ರಾಚೀನ ಶಿಕ್ಷಣ ಪದ್ಧತಿಯನ್ನೂ ಈಗ ದೇಶದಲ್ಲಿ ರೂಢಿಯಲ್ಲಿರುವ ಶಿಕ್ಷಣ ಪದ್ಧತಿಯನ್ನೂ ಸರಿಯಾಗಿ ತಿಳಕೊಂಡು ವಿದ್ಯಾರ್ಥಿಗಳಲ್ಲಿ ಪ್ರಕೃತ ವ್ಯರ್ಥವಾಗಿ ಹೋಗುತ್ತಿರುವ ಶಕ್ತಿಯನ್ನು ವ್ಯವಸ್ಥೆಗೊಳಿಸಿ ನಮ್ಮ ಮುಂದಿನ ಪೀಳಿಗೆಯವರನ್ನು ಸಮರ್ಥರನ್ನಾಗಿ ಮಾಡುವ ಉದ್ದೇಶದಿಂದ ಈ ಹಿಂದೂ ವಿದ್ಯಾ ಪೀಠಸ್ಥಾಪನೆಯ ಶ್ರಮವನ್ನು ಕೆಲವು ವರುಷಗಳಿಂದ ಬಹುಮಾನವಟ್ಟ ಮದನಮೋಹನ ಮಾಲವಿಯಾ, ದರ್ಭಂಗದ ಮಹಾರಾಜರು, ಡಾಕ್ಟಾರ್ ಸುಂದರಲಾಲ್ ಮೊದಲಾದ ಹಿಂದೂ ಮುಖಂಡರು ಕೈಕೊಂಡಿರುವರು.

ಈ ವಿದ್ಯಾಪೀಠವನ್ನು ಸ್ಥಾಪಿಸುವ ವಿಚಾರದಲ್ಲಿ ಪ್ರಜಾಭಿಪ್ರಾಯಗಳನ್ನು ಮನ್ನಿಸಿ ಇದಕ್ಕೆ ಬೇಕಾದ ಕಾನೂನು ಮಸೂದೆಗೆ ಅಂಗೀಕಾರವನ್ನು ನ್ಯಾಯವಿಧಾಯಕ ಸಭೆಯವರಿಂದಲೂ ಸ್ಟೇಟ್ ಸೆಕ್ರೆಟರಿಗಳಿಂದಲೂ ಸಂಗ್ರಹಿಸಿಕೊಟ್ಟದ್ದಕ್ಕಾಗಿ ಹಾರ್ಡಿಂಗ್ ಪ್ರಭುಗಳವರಿಗೂ ವಿದ್ಯಾಖಾತೆಯ ಮೆಂಬರರಾದ ಬಹುಮಾನವಟ್ಟ ಸರ್ ಹಾರ್ಕೋರ್ಟ್ ಬಟ್ಲರರಿಗೂ ಹಿಂದೂಗಳು ಸದಾ ಕೃತಜ್ಞರಾಗಿರುವರು. ಕಾನೂನು ಮಸೂದೆಯಲ್ಲಿ ಈ ವಿದ್ಯಾಪೀಠದ ಮೇಲ್ವಿಚಾರದಲ್ಲಿ ಸರಕಾರದವರು ಕೆಲವು ವಿಶೇಷಾಂಶಗಳನ್ನು ತಮ್ಮ ಅಧಿಕಾರದಲ್ಲಿಟ್ಟುಕೊಂಡದ್ದು ವಿಹಿತವಲ್ಲ ಎಂಬ ಅಭಿಪ್ರಾಯವು ಇರುವದು. ಆದರೆ ಇಂಥಾ ಅಭಿಪ್ರಾಯವು ಸರಿಯಾದದ್ದೊ ಏನು ಎಂಬುವ ವಿಷಯವನ್ನು ಪ್ರಕೃತ ವಾದಿಸುವದಕ್ಕಿಂತ ನಾವೆಲ್ಲರೂ ಈ ವಿದ್ಯಾಪೀಠ ಸ್ಥಾಪನೆಯ ಪ್ರಯತ್ನಗಳಲ್ಲಿ ಸೇರಿಕೊಂಡು ಮೇಲಣ ಅಭಿಪ್ರಾಯದ ಯುಕ್ತಾಯುಕ್ತತೆಯನ್ನು ಅನುಭವಪೂರ್ವಕ ನಿರ್ಧರಿಸುವದು ಉಚಿತವೆಂತ ಭಾವಿಸುತ್ತೇವೆ. ಹಿಂದೂ ವಿಶ್ವವಿದ್ಯಾಲಯದ ಕಾನೂನುಮಸೂದೆಗೆ ಸರಕಾರದವರಿಂದ ದೊರಕಬೇಕಾದ ಅಂಗೀಕಾರವು ದೊರಕಿದೆ. ಇವರ ಪ್ರೋತ್ಸಾಹವು ಇದಕ್ಕೆ ಇನ್ನು ಮುಂದಕ್ಕೆ ಇದ್ದೇ ಇರುವದು. ಸರಕಾರದವರೂ ಪ್ರಜಾ ಮುಂದಾಳುಗಳೂ ತಮ್ಮ ಹಸ್ತಗಳನ್ನು ಜೋಡಿಸಿಕೊಂಡು ಈ ವಿದ್ಯಾಪೀಠಸ್ಥಾಪನೆಯ ಮಹತ್ಕಾರ್ಯವನ್ನು ನೆರವೇರಿಸಲು ಈ ರೀತಿ ಪ್ರಯತ್ನಿಸುವಾಗ ಮಹಾ ಜನರು ಈ ಪ್ರಯತ್ನಗಳಲ್ಲಿ ತಮ್ಮ ಕರ್ತವ್ಯವನ್ನು ಅರಿತುಕೊಂಡು ತಮ್ಮಿಂದಾಗುವ ಸಹಾಯವನ್ನು ಮಾಡುವದು ಅಗತ್ಯವಾಗಿರುವದು. ಕಾನೂನುಮಸೂದೆಯು ಮಂಜೂರಾಗುವ ಮೊದಲು ಹಲವು ಲಕ್ಷಗಳ ದ್ರವ್ಯಸಂಗ್ರಹವನ್ನು ಪಂಡಿತ ಮದನಮೋಹನ ಮಾಲವಿಯಾರವರೇ ಮೊದಲಾದವರು ಮಾಡಿರುವರು. ವಿದ್ಯಾಪೀಠವು ರೂಪುಗೊಳ್ಳಬೇಕಾದರೆ ಇನ್ನೂ ಹಲವು ಲಕ್ಷ ರೂಪಾಯಿಗಳು ಬೇಕಾಗಿವೆ. ಈ ಕಷ್ಟಕಾಲದಲ್ಲಿ ದ್ರವ್ಯಸಂಗ್ರಹದ ಕೆಲಸವು ಬಹಳ ಶ್ರಮಮಯವಾಗಿದೆ. ಆದರೆ ಈ ವಿಶ್ವವಿದ್ಯಾಲಯವನ್ನು ರೂಪುಗೊಳಿಸುವ ಕಾರ್ಯವನ್ನು ಮುಂದರಿಸಿಡಲು ಆಗುವದಿಲ್ಲ. ವಾದ್ದರಿಂದ ಸರ್ವರೂ ಈ ಮಹತ್ತಾದ ಸಾಧನೆಯಲ್ಲಿ ಸೇರಿ ಹಿಂದೂ ಸಮಾಜದ ಸಂಘಶಕ್ತಿಯನ್ನು ಕಾರ್ಯತಃ ತೋರಿಸುವರಾಗಿ ನಂಬಿದ್ದೇವೆ.

ದಕ್ಷಿಣಕನ್ನಡ ಜಿಲ್ಲೆಯ ದ್ರಾವಿಡ ಬ್ರಾಹ್ಮಣರ ಸಂಘ.

ಈ ಸಂಘವು ಸ್ಥಾಪಿತವಾಗಿ ಆರು ತಿಂಗಳುಗಳು ಕಳೆದವು. ದ್ರಾವಿಡ ಬ್ರಾಹ್ಮಣರಲ್ಲಿ ಸಾಧ್ಯವಿರುವ ಸಾಧನಗಳಿಂದ ವಿದ್ಯಾ ಪ್ರಸರಣೆಯನ್ನು ಮಾಡುವುದು ಈ ಸಂಘದ ಮುಖ್ಯ ಉದ್ದೇಶವಾಗಿದೆ. ವಿದ್ಯಾರ್ಥಿಗಳ ಒಕ್ಕೆ ವಿದ್ಯಾರ್ಥಿಭವನ, ವಿದ್ಯಾರ್ಥಿವೇತನ ಪುಸ್ತಕಾಲಯಗಳು, ವಿದ್ಯಾಶಾಲೆಗಳು ಮೊದಲಾದವುಗಳನ್ನು ಕ್ರಮೇಣ ಸ್ಥಾಪಿಸಿಕೊಂಡು ಸಂಘದ ಉದ್ದೇಶವನ್ನು ನೆರವೇರಿಸಬೇಕೆಂದು ಇದರ ನಿಯಮಗಳಲ್ಲಿರುವದು. ಸಂಘಕ್ಕೆ ಆಡಳಿತೆಯ ಬೋರ್ಡ ಒಂದು ಇರುವದಾಗಿ ತಿಳಿಯುತ್ತೇವೆ. ಸಂಘದ ಕಾರ್ಯಗಳು ಕಳೆದ ಆರು ತಿಂಗಳುಗಳಲ್ಲಿ ಈ ಆಡಳಿತೆಯ ಬೋರ್ಡಿನವರ ಮೇಲ್ವಿಚಾರದಲ್ಲಿ ನಡೆದಿರುವವು. ಸಂಘಕ್ಕೆ ಬೇಕಾದ ದ್ರವ್ಯ ಸಹಾಯಾರ್ಥವಾಗಿ ಈ ಜಾತಿಯ ಸದ್ಗೃಹಸ್ಥರು ರೂ 0&0—0—0ನ್ನು ಕೊಡುತ್ತೇವೆಂಬದಾಗಿ ವಾಗ್ದಾನ ಮಾಡಿರುವರು. ವಾಗ್ದಾನಗಳ ಪ್ರಕಾರ ರೂ ... ಈ ತನಕ ವಸೂಲಾಗಿರುವದು. ವಸೂಲುಮಾಡುವ ಕೆಲಸವು ಬಹಳ ನಿಧಾನವಾಗಿ ನಡೆಯುತ್ತಿದೆ. ಕಾರಣವೇನೋ ತಿಳಿಯದು. ಹಣ ಸಂಗ್ರಹವಿಲ್ಲದ್ದರಿಂದ ವಿದ್ಯಾರ್ಥಿಭವನದ ಒಗೆ ಬೇಕಾದ ಸ್ಥಳವನ್ನು ಪಡಿಯಲು ಸಾಧ್ಯವಾಗಲಿಲ್ಲವೆಂತ ಸಂಘದ ವೃತ್ತಾಂತದಿಂದ ತೋರುತ್ತದೆ. ಈ ಕಾರಣದಿಂದ ಪ್ರಕೃತ ವಿದ್ಯಾರ್ಥಿಭವನವನ್ನು ಬಾಡಿಗೆಯ ಮನೆಯಲ್ಲಿ ನಡೆಸುತ್ತಿದ್ದಾರೆ. "ಸಂಘದ ಉದ್ದೇಶಗಳ ಪೈಕಿ ಯಾವದನ್ನಾದರೂ ಇದವರೆಗೆ ನೆರವೇರಿಸಲು ಆಗದಿದ್ದರೂ ಸಂಘವು ರಿಜಿಸ್ಟರ್ ಆಗಿ 6 ತಿಂಗಳು ಕಾಲಕಳೆದಿಲ್ಲವಾದ್ದರಿಂದ ಧೈರ್ಯಗುಂದಲು ಕಾರಣವಿಲ್ಲವಾಗಿ" ಸಂಘದ ಬೋರ್ಡಿನವರ ಅಭಿಪ್ರಾಯಪಡುತ್ತಾರೆ. ಹಣ ವಸೂಲು ಮಾಡುವಂಥ ಕೆಲಸವು ಸುಲಭವಲ್ಲ. ಇದಕ್ಕೆ ಬೇಕಾದ ಪ್ರಯತ್ನಗಳನ್ನು ನಿರಂತರವಾಗಿ ಹಟವಿಡಿದು ಮಾಡಿದರೆ ಬೋರ್ಡಿನವರಿಗೆ ಧೈರ್ಯಗುಂದಲು ಆಸ್ಪದವಿರದು. ಈ ಪ್ರಯತ್ನಗಳಿಗೆ ಬೇಕಾದ ಪ್ರೋತ್ಸಾಹವನ್ನೂ ಸಹಕಾರವನ್ನೂ ದ್ರಾವಿಡ ಬ್ರಾಹ್ಮಣ ಸಮಾಜದ ಮಹಾಜನರು ಈ ಸತ್ಕಾರ್ಯವನ್ನು ಕೈಕೊಂಡಿರುವ ತಮ್ಮ ಮುಂದಾಳುಗಳಿಗೆ ಕೊಡುವರಾಗಿ ನಂಬುವೆವು.

ವಾಙ್ಮಯ ಕಲಾಶಾಸ್ತ್ರಗಳ ಅಭಿವೃದ್ಧಿಯ ಸಮಾಚಾರ.

(Progress of Literture, Science aend Art)

ಕೇರಳೀಯ ಸ್ತ್ರೀಯರ ಸಾಹಸವು ಸ್ಪೃಹಣೀಯವಾಗಿದೆ. ತಿರುವಾಂಕೋನಲ್ಲಿ ಸ್ತ್ರೀಕುಲೋನ್ನತಿಗಾಗಿ ಉದ್ದೇಶಿಸಿ 'ಮಹಿಳಾರತ್ನ'ವೆಂಬ ಮಲೆಯಾಳ ಮಾಸಪತ್ರಿಕೆಯನ್ನು ಸಚಿತ್ರವಾಗಿ ಹೊರಡಿಸಿರುವರು. ಇದರ ಚಾಲಕರೆಲ್ಲ ಹನ್ನೆರಡು ಜನ ಸ್ತ್ರೀಯರೇ ಆಗಿರುವರು. ಇವರೊಳಗೆ ಕಿಲಿಮನ್ನೂರು ರಾಜವಂಶಕ್ಕೆ ಸೇರಿದ ಶ್ರೀಮತಿ ಮಂಗಲಾಬಾಯಿ ತಂಬುರಾಟಿಯವರೂ, ಎರ್ನಾಕುಳದ ಶ್ರೀಮತಿ ಕಲ್ಯಾಣಿ ಅಮ್ಮ ಎಮ್ ಆರ್ ಏ. ಎಸ್‌ರವರೂ ಪ್ರಮುಖರಾಗಿರುವರು. ಕೇರಳದಲ್ಲಿ ಸ್ತ್ರೀ ವಿದ್ಯಾಭ್ಯಾಸವು ಬೇರೆ ಯಾವಲ್ಲಿಗಿಂತಲೂ ಅಧಿಕವಾಗಿ ವ್ಯಾಪಿಸಿರುವುದಕ್ಕೆ ಇದೊಂದು ಉತ್ತಮವಾದ ನಿದರ್ಶನವೆನ್ನಬಹುದು. ಇಂಥ ಶುಭಕಾಲವು ಕನ್ನಡಕ್ಕೆಂದು ಬರುವುದೋ!

• •

ಭೌತಿಕ ಶಾಸ್ತ್ರಗಳ ಉನ್ನತಿಗಾಗಿ ಭಾರತ ವರ್ಷದಲ್ಲಿಯೂ ಇತ್ತಲಾಗೆ ಒಂದು ಮಹಾ ಸಂಘವನ್ನೇರ್ಪಡಿಸಿರುವರು. ಇದರ ಮೂರನೆಯ ಸಮ್ಮೇಳನವು ಬರುವ ಜನವರಿ ತಿಂಗಳಲ್ಲಿ ಅಲ್ಲಾಹಾಬಾದಿನಲ್ಲಿ ಕೂಡುವುದೆಂದೂ ಸಂಯುಕ್ತ ಪ್ರಾಂತ್ಯಗಳ ಲೆಫ್ಟಿನೆಂಟ್ ಗವರ್ನರರವರು ಈ ಸಮ್ಮೇಳನದ ಪೋಷಕ ಪದವಿಯನ್ನು ವಹಿಸಿರುವರೆಂದೂ, ಕಲಿಕತ್ತೆಯ ಜಗದ್ವಿಶ್ರುತ ಡಾಕ್ಟರ್ ಜಗದೀಶ ಚಂದ್ರ ಬೋಷರವರು ಮಾಡಿದ ಅಪೂರ್ವವಾದ ಶೋಧನೆಗಳ ವಿಷಯವಾಗಿ ಆಗ ಉಪನ್ಯಸಿಸುವಂತೆ ಆ ಮಹಾಶಯರು ಪ್ರಾರ್ಥಿಸಲ್ಪಟ್ಟಿರುವರೆಂದೂ ತಿಳಿಯಬರುತ್ತಿದೆ.

* * *

ಅಮೇರಿಕವು ವಿಸ್ತಾರದಲ್ಲಿ ಪ್ರಚಂಡವಾಗಿರುವಂತೆಯೇ ಅಲ್ಲಿ ನಡೆಯುವ ಸಮಸ್ತ ಸಂಗತಿಗಳೂ ಪ್ರಚಂಡವಾಗಿವೆ. ಅಮೇರಿಕದ ಪುಸ್ತಕ ಪ್ರಚಾರಕರೊಬ್ಬರು ಪೋರ್ಟರ್ ಎಂಬಾತನಿಂದ ಬರೆಯಲಾದ ಒಂದು ಕಲ್ಪನಾ ಪ್ರಬಂಧದ ಮೊದಲನೆಯ ಮುದ್ರಣವಾಗಿ ಮೂರು ಲಕ್ಷ ಪ್ರತಿಗಳನ್ನು ಅಚ್ಚು ಹಾಕಿಸಿರುವರು. ಮುದ್ರಣ ಕಲಾ ಚರಿತ್ರೆಯಲ್ಲಿ ಇದು ಅಭೂತಪೂರ್ವವೆಂದು ಎಲ್ಲರೂ ಶ್ಲಾಘಿಸುತ್ತಿರುವರು.

* * *

ಜರ್ಮನ್ ಜನರಲ್ಲಿ ಸಂಸ್ಕೃತ ಪಾಂಡಿತ್ಯವು ಪ್ರಬಲವಾಗಿರುವುದೆಂಬ ಭಾವನೆಯಿಂದ ಮೊದಲಲ್ಲಿ ಇಂಡಿಯದ ಯಾವತ್ತು ಕಾಲೇಜುಗಳಲ್ಲಿಯೂ ಆ ಜನರನ್ನೇ ಅಧ್ಯಾಪಕ (Professor) ರಾಗಿ ನಿಯಮಿಸುವುದು ವಾಡಿಕೆಯಾಗಿದ್ದಿತು. ಆದರೆ ಸರ್ ಜೇಮ್ಸ್ ಫರ್ಗ್ಯುಸನ್‌ರವರು ಬೊಂಬಾಯಿಯ ಗವರ್ನರಾಗಿದ್ದ ಕಾಲದಲ್ಲಿ ಸರ್ ನಾರಾಯಣ ಚಂದಾವರಕಾರರವರೂ ಮಿ॥ ತೇಲಂಗರವರೂ ಯಥಾರ್ಥ ಸ್ಥಿತಿಯನ್ನು ಗವರ್ನರರವರ ಗಮನಕ್ಕೆ ತಂದು ಡಾಕ್ಟರ್ ಭಂಡಾರಕರರನ್ನು ಮೊದಲನೆಯ ಬಾರಿಗೆ ಆ ಸ್ಥಾನಕ್ಕೆ ತರಲು ಅನುಕೂಲಪಡಿಸಿಕೊಟ್ಟರು. "ಸಂಸ್ಕೃತ ಉನ್ನತಿಯ ವಿಷಯದಲ್ಲಿ ಜರ್ಮನರಿಂದ ನಮ್ಮ ದೇಶಕ್ಕೆ ಯಾವ ಸಹಾಯವೂ ಆದುದಿಲ್ಲ. ಅವರ ಪಾಂಡಿತ್ಯವು ಅಂಥ ಮಹತ್ತರವಾದುದಲ್ಲ. ಅವರ ಗ್ರಂಥಗಳಲ್ಲಿ ಕಂಡು ಬರುವ ಕೌಶಲವೂ ಪಾಂಡಿತ್ಯವೂ ಬಹು ಸಾಮಾನ್ಯವಾದುದು. ಪಶ್ಚಿಮ ಹಿಂದೂಸ್ಥಾನದವರು ಜರ್ಮನರ ಸಹಾಯವಿಲ್ಲದೆ ಇದುವರೆಗೆ ಭಾಷೆಯನ್ನು ಅಭಿವೃದ್ಧಿಗೆ ತಂದಿರುವರು. ಈ ಮುಂದೆಯೂ ಜರ್ಮನ್ ಪಂಡಿತರ ಸಹಾಯವಿಲ್ಲದೆ ಅವರು ತಮ್ಮ ಸ್ವಪಾಂಡಿತ್ಯವನ್ನು ತೋರಿಸಬಲ್ಲರು" ಎಂದು ಮುಂತಾಗಿ ಮಿ॥ ತೇಲಂಗರವರು ಬರೆದ ಲೇಖನಗಳ ಕೆಲಕೆಲವು ಭಾಗಗಳನ್ನು ಸರ್ ನಾರಾಯಣರಾಯರವರು ಒಂದು ಸಭೆಯಲ್ಲಿ ಓದಿ ತೋರಿಸಿದರು.

* * *

ತಿರುವನಂತಪುರದ ಮೊದಲನೇ ತರಗತಿಯ ಸರಕಾರಿ ಕಾಲೇಜಿನ ಅಧ್ಯಕ್ಷಪದವಿಗೆ ಅದೇ ಕಾಲೇಜಿನ ಸಂಸ್ಕೃತ ಮತ್ತು ದೇಶಭಾಷೆಗಳ ಪ್ರೊಫೆಸರರಾದ ಶ್ರೀಮಾನ್ ರಾಜ ರಾಜವರ್ಮ ಎಮ್. ಎ. ಯವರನ್ನು ತಾತ್ಕಾಲಿಕವಾಗಿ ನಿಯಮಿಸಿರುವ ವಿಷಯವು ಸರ್ವರಿಗೂ ಸಂತೋಷವನ್ನುಂಟುಮಾಡಿದೆ. ಶ್ರೀ॥ ರಾಜ ರಾಜವರ್ಮರವರು ಅನಂತಪುರದ ರಾಜವಂಶಕ್ಕೆ ಸೇರಿದವರಷ್ಟೇ ಅಲ್ಲದೆ ಪ್ರಾಚ್ಯಭಾಷಾ ಪಂಡಿತರಲ್ಲಿ ಅಗ್ರಗಣ್ಯರು. ಮಲೆಯಾಳ ಸಾಹಿತ್ಯವನ್ನು ವರ್ಧಿಸುವಲ್ಲಿ ಬಹು ಸಾಹಸವನ್ನು ಮಾಡಿರುವರು. ಸಂಸ್ಕೃತ ಕಾವ್ಯರಚನೆಯು ಇವರಿಗೆ ಕರತಲಾಮಲಕವಾಗಿರುವುದು. ಇವರು ಸಂಸ್ಕೃತದಲ್ಲಿ ಬರೆದ 'ಆಂಗ್ಲ ಸಾಮ್ರಾಜ್ಯ'ವೆಂಬ ಕಾವ್ಯವು ದಿವ್ಯವಾದ ಶೈಲಿಯಿಂದಲೂ ಕಲ್ಪನೆಯಿಂದಲೂ ಕೂಡಿದುದಾಗಿ, ಕಾಳಿದಾಸ ಮಹಾಕವಿಯ ರಘುವಂಶವನ್ನು ಹೋಲುವುದೆನ್ನುವರು. ಇವರ "ಲಘುಪಾಣಿನೀಯ"ದ ಕೀರ್ತಿಯು ಪಾಶ್ಚಿಮಾತ್ಯ ದೇಶಗಳಿಗೂ ಮುಟ್ಟಿದೆ. 'ಕೇರಳ ಪಾಣಿನೀಯ'ವೆಂಬ ಮಲೆಯಾಳ ವ್ಯಾಕರಣವು ಆ ಭಾಷೆಯಲ್ಲಿ ಪ್ರಮಾಣಭೂತವಾದ ಒಂದೇ ಲಕ್ಷಣ ಗ್ರಂಥವೆಂದು ತಿಳಿಯಲ್ಪಡುತ್ತಿದೆ. ಇವರು ಮದ್ರಾಸು ಯೂನಿವರ್ಸಿಟಿಯ ಸಾಮಾಜಿಕರೂ ಪರೀಕ್ಷಕರೂ ಆಗಿರುವರು. ಅಧ್ಯಕ್ಷಸ್ಥಾನದಲ್ಲಿ ಇವರನ್ನು ಸ್ಥಿರಪಡಿಸುವ ಕಾಲವು ಸನ್ನಿಹಿತವಾಗಿರುವುದೆಂದು ಅನೇಕರು ಇದಿರುನೋಡುತ್ತಿದ್ದಾರೆ.

* * *

ಆಯುರ್ವೇದವನ್ನು ಉಜ್ಜೀವಿಸುವುದಕ್ಕಾಗಿ ಕೊಚ್ಚಿ ರಾಜ್ಯದ ರಾಜಧಾನಿಯಾದ ತ್ರಿಚೂರಿನಲ್ಲಿ 'ಕೇರಳೀಯ ಆಯುರ್ವೇದ ಸಮಾಜ'ವೆಂಬ ಒಂದು ಸಂಸ್ಥಾಪನೆಯು ಏರ್ಪಟ್ಟು 'ರಿಜಿಸ್ಟರು' ಮಾಡಲ್ಪಟ್ಟಿದೆ. ಔಷಧ ಶಾಲೆಗಳನ್ನೂ ಚಿಕಿತ್ಸಾಲಯಗಳನ್ನೂ ಪ್ರಾರಂಭಿಸಿ ಆಯುರ್ವೇದ ರೀತ್ಯಾ ಔಷಧೋಪಚಾರಗಳನ್ನು ಮಾಡುವುದೂ, ಕಾಲೇಜುಗಳನ್ನೂ ಶಾಲೆಗಳನ್ನೂ ಹೊರಡಿಸಿ ಆಯುರ್ವೇದೀಯ ವೈದ್ಯಕ ಮತ್ತು ಶಸ್ತ್ರಕ್ರಿಯೆಯನ್ನು ಅಭ್ಯಸಿಸಲು ಅನುಕೂಲಪಡಿಸಿ ಕೊಡುವುದೂ, ಪ್ರಮಾಣಭೂತಗಳಾದ ವೈದ್ಯಗ್ರಂಥಗಳನ್ನು ಶೇಖರಿಸಿ ಪುಸ್ತಕಾಲಯವನ್ನು ಸ್ಥಾಪಿಸುವುದೂ, ವನೌಷಧಿಗಳ ತೋಟವನ್ನು ಬೆಳೆಯಿಸುವುದೂ, ತಕ್ಕ ಪರೀಕ್ಷೆಗಳಲ್ಲಿ ಜಯಿಸಿದವರಿಗೆ ಪದವಿಗಳನ್ನು ಕೊಡುವುದೂ ಈ ಸಂಸ್ಥಾಪನೆಯ ಉದ್ದೇಶಗಳಾಗಿವೆ. ಕೊಚ್ಚಿಯ ರಾಜವಂಶಕ್ಕೆ ಸೇರಿದ ಹಲವು ಕುಮಾರರೂ ಕೊಲ್ಲೆಂಗೋಡು ರಾಜರೂ ಇನ್ನು ಹಲವು ಶ್ರೀಮಂತರೂ ಪ್ರಸಿದ್ಧ ವೈದ್ಯರೂ ಆಯುರ್ವೇದಾಭಿಮಾನಿಗಳೂ ಈ ಕಾರ್ಯದಲ್ಲಿ ತುಂಬಾ ಉತ್ಸಾಹದಿಂದ ಪ್ರವೃತ್ತರಾಗಿರುವರು. ಸಾಹಿತ್ಯ, ವೈದ್ಯಕ, ಮಂತ್ರ ಮತ್ತು ಜ್ಯೋತಿಶ್ಶಾಸ್ತ್ರಗಳಲ್ಲಿ ಕೇರಳ ದೇಶವು ಬಹು ಕಾಲದಿಂದಲೂ ಪ್ರಸಿದ್ಧವಾಗಿಯೇ ಇರುವುದರಿಂದ, ಕೇರಳ ದೇಶೀಯರು ಈ ಉದ್ದೇಶವನ್ನು ಕೈಕೊಂಡಿರುವುದು ಯುಕ್ತವೇ ಸರಿ.

ಕಳೆದ ಸಪ್ಟೆಂಬರು ೭ನೇ ತಾರೀಖಿನ ದಿನ ಮೈಸೂರಿನ ರೆವರೆಂಡ್ ಥಾಮ್ಸನ್ (Rev. E. W. Thompson) ಸಾಹೇಬರವರು 'ಬೆಂಗಳೂರಿನ ಮುತ್ತಿಗೆ' ಎಂಬ ವಿಷಯವನ್ನು ಕುರಿತು ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಉಪನ್ಯಸಿಸಿದರು. ಆಗ ಮಾತನಾಡುತ್ತ: 'ಜನರಲ್ ಬೇಯರ್ಡ್‌' (General Baird) ಈ (ಬೆಂಗಳೂರು) ಕೋಟೆಯಲ್ಲಿ ಸೆರೆಯಲ್ಲಿದ್ದಾಗ ಸಮೀಪದಲ್ಲಿಯೇ ಇದ್ದ ಟೀಪೂ ಸುಲ್ತಾನನ ಅಂತಃಪುರದ ಸ್ತ್ರೀಯರು ಕಿಟಕಿಗಳಿಂದ ನೋಡಿ ಆನಂದಿಸುವಂತೆ, ಆತನಿಂದ ಬಾವಿಯ ನೀರು ಸೇದಿಸುತ್ತಿದ್ದರೆಂಬ ಒಂದು ಹಳೇ ಕಥೆ ಇರುವುದಾದರೂ ನಾನು ಪರಿಶೋಧಿಸಿದ ಮಟ್ಟಿಗೆ ಇದರಲ್ಲಿ ಕಿಂಚಿತ್ತಾದರೂ ಸತ್ಯಾಂಶವಿಲ್ಲ. ಬೇಯರ್ಡ್‌ ಬೆಂಗಳೂರಿನಲ್ಲಿ ಒಂದು ದಿನಕ್ಕಿಂತ ಹೆಚ್ಚಾಗಿ ನಿಲ್ಲಿಸಲ್ಪಟ್ಟಿದ್ದನೆನ್ನಲು ಯಾವ ಆಧಾರವೂ ಇರುವುದಿಲ್ಲ. ಇದೇ ತೆರನಾದ ಅನೇಕಾನೇಕ ಕಥೆಗಳು ಆ ಕಾಲದಲ್ಲಿ ಜನರೊಳಗೆ ಹಬ್ಬಿಕೊಂಡಿದ್ದು ವಾದರೂ ಮೋಶನ ಕಥೆಯಂತೆಯೇ ಉಳಿದುವುಗಳು ಕೂಡ ಕೇವಲ ನಿರಾಧಾರವಾಗಿವೆ" ಎಂದು ಅಪ್ಪಣೆಕೊಡಿಸಿದರು.

ದನವೂ ಧನವೂ.

ವಾಚಕರೇ! ದನ ಧನ ಈ ಎರಡು ಶಬ್ದಗಳಲ್ಲಿ ವಿಶೇಷ ವ್ಯತ್ಯಾಸವುಂಟೇ? ಇಲ್ಲ. ಸ್ವಲ್ಪ ವ್ಯತ್ಯಾಸವಿರುವುದು. ಅದು ಕೂಡ ಒಂದೇ ಬಾಲದ್ದು! ಈ ಶಬ್ದಗಳಲ್ಲಿ ಒಂದು ಬಾಲದ ಹೊರತು ಬೇರೆ ವಿಶೇಷ ವ್ಯತ್ಯಾಸವಿಲ್ಲದಿದ್ದರೂ ಅರ್ಥದಲ್ಲಿ ತುಂಬಾ ವ್ಯತ್ಯಾಸವಿರುವುದಲ್ಲವೇ? ಅಹುದು. ಧನದ ಆ ಬಾಲವನ್ನು ಕತ್ತರಿಸಿದ ಕೂಡಲೆ ಅದು ಉದ್ದವಾದ ಬಾಲವುಳ್ಳ ನಾಲ್ಕುಕಾಲಿನದೊಂದು ಪ್ರಾಣಿಯಾಗುತ್ತದೆ. ಆ ಪ್ರಾಣಿಯ ತಲೆಯಲ್ಲಿ ಎರಡು ಕೋಡುಗಳು ಕಾಣಿಸುತ್ತವೆ. ಮುದ್ದು ಕರುವು 'ಅಂಬೇ' ಎಂತ ಕೂಗುತ್ತಲೇ ಪ್ರತ್ಯುತ್ತರವೋ ಎಂಬಂತೆ ಅದರ ಕೆಚ್ಚಲಿನಿಂದ ಹಾಲಿನ ಪ್ರವಾಹವು ಸುರಿಯುತ್ತದೆ. ಅದಕ್ಕೆ ಹಸಿವೆಗೆ ತೀನಿಯೂ, ವಾಸಕ್ಕೆ ಮನೆಯೂ ಅವಶ್ಯವಿದೆ. ಇದು ಬಾಲವನ್ನು ಕತ್ತರಿಸಿದ ಧನದ ವ್ಯವಸ್ಥೆಯಾಯಿತು. ಬಾಲವುಳ್ಳ ದನದ ವ್ಯವಸ್ಥೆಯೇ ಬೇರೆ. ಅದು ಬಹಳ ಚಿಕ್ಕದಿರುವುದು. ಅದಕ್ಕೆ ಕೈಕಾಲುಗಳೇನೂ ಇಲ್ಲ; ತೀನಿ ಬೇಡ, ಮನೆ ಬೇಡ. ಅದನ್ನು ಬರೇ ಸೊಂಟದಲ್ಲಿ ಶಿಕ್ಕಿಸಿಕೊಳ್ಳಬಹುದು; ಇಲ್ಲವೇ ಜೇಬಿನಲ್ಲಿಟ್ಟುಕೊಳ್ಳಬಹುದು. ಬಾಲ ಕತ್ತರಿಸಿದ ಧನದಂತೆ ಇದು × × × ಮುದ್ದೆ ಹಾಕುವುದಿಲ್ಲ; × × ಶಂಕೆ ಮಾಡುವುದಿಲ್ಲ. ಇದು ಶಬ್ದ ಮಾಡುವಾಗ ಕಿವುಡನಿಗೂ ಕಿವಿಕೇಳಿಸುತ್ತದೆ! ಕುರುಡನಿಗೂ ಅದರ ಆಕಾರ ಕಾಣಿಸುತ್ತದೆ! ಅರ್ಧಾಂಗ ರೋಗಿಗೂ ಅದು ಸ್ಪರ್ಶಿಸುತ್ತದೆ! ವಾಚಕರೇ! ಶಬ್ದದಲ್ಲಿ ಬಾಲವುಳ್ಳ ಈ ದನದ ಮಹಾತ್ಮ್ಯವೆಷ್ಟೆಂತ ನೋಡಿದಿರಾ!

ಬಾಲವುಳ್ಳ ಧನ ಮತ್ತು ಬಾಲವಿಲ್ಲದ ದನ ಇವುಗಳಲ್ಲಿ ಇನ್ನೂ ವ್ಯತ್ಯಾಸ ತೋರಿಸಬಹುದು. ಆದರೆ ಈ ವ್ಯತ್ಯಾಸದಂತೆಯೇ ಇವುಗಳ ಸಾಮ್ಯವನ್ನೂ ನೋಡುವುದು ಮನೋರಂಜಕವಾಗಿದೆ. ಆದುದರಿಂದ ಆ ಸಾಮ್ಯವನ್ನೇ ಕೊಂಚ ನಿರೀಕ್ಷಿಸುವ- ದನ ಧನ ಇವುಗಳನ್ನು ಸರಿಯಾಗಿ ಕಾಪಾಡಬೇಕಾಗುತ್ತದೆ. ಇವುಗಳನ್ನು ಹೇಗೆ ಹೇಗೆ ರಕ್ಷಿಸುವೆವೋ ಹಾಗೆ ಹಾಗೆ ಇವುಗಳ ಸಂತತಿಯು ಬೆಳೆಯುತ್ತದೆ. ರಕ್ಷಣೆಯಲ್ಲಿ ಸ್ವಲ್ಪವಾದರೂ ಅಜಾಗ್ರತೆಯಾದರೆ ಅವು ಕೈತಪ್ಪಿ ಹೋಗುತ್ತವೆ. ದನದಂತೆ, ಧನಕ್ಕೆ ಕಾಲಿಲ್ಲದಿದ್ದರೂ ಅದು ಬಹು ಬೇಗನೆ ಓಡುತ್ತದೆ. ಧನದ ಬಗ್ಗೆ ವ್ಯವಹಾರದಲ್ಲಿ

ಹೇಗೆ ಮೇಲಿಂದ ಮೇಲೆ ನಾಟಕಗಳು, ಮನಸ್ತಾಪಗಳು, ನಂಬರುಗಳು ಇಲ್ಲವೆ! ಯುದ್ಧಗಳೂ ಕೂಡ ಆಗುತ್ತವೆಯೋ ಹಾಗೆಯೇ ದನಕ್ಕಾಗಿಯೂ ಇವೆಲ್ಲ ಸಂಗತಿಗಳು ನಡೆಯುತ್ತವೆ. ವಿಶ್ವಾಮಿತ್ರನು ವಸಿಷ್ಠನ ದನವನ್ನು ಅಪಹರಿಸಲು ಮಾಡಿದ ಯತ್ನವೂ ಭಾರತದೊಳಗಣ ಉತ್ತರ ಗೋಗ್ರಹಣವೂ ಈ ವಿಷಯದಲ್ಲಿ ತುಂಬಾ ಸಮಾಧಾನದಿಂದ ಸಾಕ್ಷಿ ಕೊಡುತ್ತವಲ್ಲವೇ? ಆದರೆ ವಾಚಕರೇ! ಬಾಲವುಳ್ಳ ದನ ಬಾಲವಿಲ್ಲದ ದನ ಈ ಎರಡೂ ಶಬ್ದಗಳು ಮತ್ತು ಅವುಗಳ ಅರ್ಥಗಳ ಸಾಮ್ಯಕ್ಕಿಂತಲೂ ನಮಗೆ ವೈಷಮ್ಯವನ್ನೇ ಹೇಳುವ ಹೆಚ್ಚಿನ ತಾತ್ಪರ್ಯವಿರುವುದರಿಂದ ಈ ಸಾಮ್ಯದ ಸಮರ್ಥನೆಯನ್ನು ಇಲ್ಲಿಯೇ ಬಿಟ್ಟುಬಿಡುವ ವೈಷಮ್ಯವನ್ನೇ ವಿವರಿಸುವ ತಾತ್ಪರ್ಯವನ್ನಿಟ್ಟುಕೊಳ್ಳುವ ಕಾರಣವೇನೆಂದರೆ ಎಷ್ಟೋ ಜನರು ಬರೆಯುವಾಗ ಧನಕ್ಕೆ ಬದಲಾಗಿ ದನವೆಂಬ ಶಬ್ದವನ್ನು ಪ್ರಯೋಗಿಸುತ್ತಾರೆ "ಕಳ್ಳನು ದನದ ಗಂಟನ್ನು ಹೆಗಲಿನ ಮೇಲೆ ಹಾಕಿಕೊಂಡು ಓಡುವಾಗ ರಾಜದೂತರಿಂದ ಹಿಡಿಯಲ್ಪಟ್ಟನು" ಹೀಗೆ "ದನದ ಗಂಟು" ಈ ಶಬ್ದಗಳಿಗೆ ಬದಲಾಗಿ ಬರೆದರೆ ಅದು ಎಷ್ಟು ವಿಸಂಗತ ಮತ್ತು ಅನರ್ಥಪ್ರದವಾಗಿರುವುದು? ಉಪಾಧ್ಯಾಯರುಗಳಿಗೆ ಈ ವಿಷಯದಲ್ಲಿ ತುಂಬಾ ಅನುಭವವಿರಬಹುದು ಕಾರಣವೇನೆಂದರೆ ಕೆಳಗಿನ ವರ್ಗದವರು ಮಾತ್ರವಲ್ಲ ಶಾಲೆಯನ್ನು ಬಿಟ್ಟು ಹೋಗುವ ವರ್ಗದಲ್ಲಿರುವ ಹುಡುಗರೂ, ಕೋಲೇಜಿಗೆ ಪ್ರವೇಶಿಸಿದ ತರುಣರೂ ಕೂಡ ಎಷ್ಟೋ ಸಾರಿ ದನ ಬದಲು ಧನವೆಂದು ಬರೆಯುವುದುಂಟು. ಹೀಗೆ ಬರೆಯುವುದರಿಂದ ಎಂದರೆ ದನದ ಬಾಲವನ್ನು ಕತ್ತರಿಸುವುದರಿಂದ ಆ ಶಬ್ದವು ಉದ್ದ ಬಾಲವುಳ್ಳ ನಾಲ್ಕು ಕಾಲಿನ ಗೋವು ಎಂಬ ಅರ್ಥವನ್ನು ಹೇಗೆ ಕೊಡತ್ತದೆ? ಇದನ್ನು ತೋರಿಸುವುದಕ್ಕಾಗಿಯೇ ಮೇಲಿನ ಈ ವ್ಯತ್ಯಾಸಗಳನ್ನು ಹೆಚ್ಚಾಗಿ ಹೇಳುವ ತಾತ್ಪರ್ಯವನ್ನಿಟ್ಟುಕೊಳ್ಳಬೇಕಾಯಿತು.

ಹಿಂದೂಸ್ಥಾನದ ಏಳಿಗೆ

ಜಗತ್ತಿನ ವ್ಯವಹಾರವನ್ನೆಲ್ಲ ಲಕ್ಷ್ಯಪೂರ್ವಕ ನೋಡಿದರೆ ಆ ಜಗತ್ತಿನ ಸಂಸ್ಕೃತಿಯು ಒಂದೊಂದು ಹೆಜ್ಜೆ ಮುಂದೆಯೇ ಸರಿಯುತ್ತದೆಂಬುದು ಗೊತ್ತಾಗುತ್ತದೆ. ಶೋಧಕರ ದೀರ್ಘ ಪರಿಶ್ರಮದಿಂದ ಹೊಸ ಹೊಸ ಪ್ರದೇಶಗಳು ಗೋಚರಕ್ಕೆ ಬರುತ್ತವೆ. ಗೋಚರಕ್ಕೆ ಬಂದ ಕಾಡುಪ್ರದೇಶಗಳಲ್ಲಿಯ ಕಾಡುಜನರನ್ನು ಶಿಕ್ಷಣದ ಸಹಾಯದಿಂದ ಮೇಲಿನ ತರಗತಿಗೆ ತರುವ ಯತ್ನವು ನಡೆದಿದೆ. ಮೊದಲೇ ಮೇಲಿನ ತರಗತಿಯಲ್ಲಿದ್ದು ಸಂಸ್ಕೃತಿ ಹೊಂದಿದವರು ಅವರ ಸಾಮರ್ಥ್ಯದಿಂದ ತಮ್ಮ ಐಹಿಕ ಜೀವನವು ಆದಷ್ಟು ಸೌಕರ್ಯದಿಂದ ಸಾಗುವಂತೆ ವ್ಯವಸಾಯ ಮಾಡುತ್ತಲಿದ್ದಾರೆ. ಈ ಐಹಿಕ ಜೀವನವೆಂಬ ಒಂದೇ ಮಾತಿನಲ್ಲಿ ರಾಜಕೀಯ, ಸಾಮಾಜಿಕ, ಔದ್ಯೋಗಿಕ ನೈತಿಕ ಮುಂತಾದ ಎಲ್ಲಾ ಮಾರ್ಗಗಳ ಸಮಾವೇಶವಾದರೂ ಏನೂ ಅಡ್ಡಿಯಿಲ್ಲ. ನೂರು ವರ್ಷಗಳ ಹಿಂದೆ ಇದ್ದ ಜಗತ್ತು ಈಗ ಬೇರೆಯೇ ಆಗಿದೆ. ಈ ಮಾತಿನ ಅರ್ಥವು-ಆಗ ಈಗಿನಂತೆ ನೀರಿನಲ್ಲಿ ದ್ರವತ್ವವಿದ್ದಿಲ್ಲ. ಬೆಂಕಿಯು ಸುಡತ್ತಿದ್ದಿಲ್ಲ, ಕಲ್ಲುಗಳು ಕಠಿಣವಾಗಿದ್ದಿಲ್ಲ,-ಹೀಗಲ್ಲ. ಪಂಚಭೂತಾತ್ಮಕ ಜಡಸೃಷ್ಟಿಯ ಆಯಾ ಧರ್ಮಗಳು ಪೂರ್ವದಂತೆಯೇ ಈಗಲೂ ಇವೆ. ಬೆಂಕಿಯು, ನೂರು ಯಾಕೆ, ಸೃಷ್ಟಿಯ ಆದಿಯಿಂದಲೂ ಸುಡುತ್ತಿದೆ. ಹೀಗಿರಲು ಜಗತ್ತಿನ ಸಂಸ್ಕೃತಿಯು ಹೆಜ್ಜೆಯು ಮುಂದರಿಸುತ್ತಿದೆ. ಈ ಮಾತಿನ ಅರ್ಥವೇನು? ಎಂದರೆ ಪಂಚಭೂತಾತ್ಮಕ ಸೃಷ್ಟಿಯ ಕ್ಲಪ್ತವಾದ ಆಯಾ ಧರ್ಮಗಳ ಮೇಲೆ ಮಾನವರು ತಮ್ಮ ಬೌದ್ಧಿಕ ಸಾಮರ್ಥ್ಯದಿಂದ ಪ್ರಭುತ್ವ ಸಂಪಾದಿಸಿ ಅವುಗಳಿಂದ ತಮ್ಮ ಜೀವನವನ್ನು ಅತಿ ಸುಖಮಯವಾಗಿ ಮಾಡುತ್ತಲಿದ್ದಾರೆ. ಈ ಪ್ರಕಾರ ಮಾನವರ ವ್ಯವಹಾರದಲ್ಲಿ ಸೌಕರ್ಯ ಮತ್ತು ಸೌಲಭ್ಯವನ್ನು ಉಂಟುಮಾಡಿ ಜಗತ್ತಿನ ಸಂಸ್ಕೃತಿಯು ಒಂದೊಂದು ಹೆಜ್ಜೆ ಮುಂದೆ ಹೋಗುತ್ತಿದ್ದರೂ ಆ ಮಾನವರ ಸೌಕರ್ಯದ ಇಚ್ಛೆಯು ಅದಕ್ಕಿಂತಲೂ ಒಂದು ಹೆಜ್ಜೆ ಮುಂದೆಯೇ ಇರುತ್ತದೆ!

ಇರಲಿ, ಈ ವಿಧದಿಂದ ಮುಂದರಿಸುತ್ತಿರುವ—ಆಧಿಭೌತಿಕ ಸುಖಗಳನ್ನು ಸಂಪಾದಿಸಿ ಸುಖಿಯಾಗಿರುವ—ಜಗತ್ತಿನಲ್ಲಿ ಮುಖ್ಯವಾದ ಭೂಪ್ರದೇಶಗಳಾವವೆಂದರೆ ಯುರೋಪ ಮತ್ತು ಅಮೇರಿಕಾ ಖಂಡಗಳು. ಈ ಎರಡು ಖಂಡಗಳಲ್ಲಿಯ ರಾಷ್ಟ್ರಗಳು ವಿದ್ಯೆ, ಕಲೆ, ಯಂತ್ರಸಾಮರ್ಥ್ಯ ಮೊದಲಾದವುಗಳಿಂದ ಏಳಿಗೆಯ ಶಿಖರಕ್ಕೆ ಹೋಗಿದ್ದಾವೆ; ಇನ್ನೂ ಮೇಲೆ ಏರಲು ವಿಶ್ವಪ್ರಯತ್ನಮಾಡುತ್ತಲಿದ್ದಾರೆ. ಜಗತ್ತಿನ ಬೇರೆ ಬೇರೆ ರಾಷ್ಟ್ರಗಳಲ್ಲಿ ಆಯಾ ಜನಾಂಗದವರು ತಮ್ಮ ಏಳಿಗೆಗಾಗಿ ಹಗಲೂ, ಇರುಳೂ ಉದ್ಯೋಗ ನಡಿಸುತ್ತಿರುವಾಗ ನಮ್ಮ ಈ ಹಿಂದೂಸ್ಥಾನವು ಏನುಮಾಡುತ್ತಿದೆ ಎಂಬದೊಂದು ಪ್ರಶ್ನೆಯು ಬರುತ್ತದೆ. ಈ ಪ್ರಶ್ನೆಗೆ ಸರಳವಾದ ಉತ್ತರವು ಯಾವುದೆಂದರೆ ಅನ್ಯ ಜನಾಂಗಗಳಂತೆಯೇ ಹಿಂದೂಸ್ಥಾನವು ಕೂಡಾ ತನ್ನ ಏಳಿಗೆಗಾಗಿ ಕೈಕಾಲುಗಳನ್ನು ಅಲ್ಲಾಡಿಸುತ್ತಿದೆ. ನಮ್ಮ ಅಭ್ಯುದಯದ ಬಗ್ಗೆ ಪ್ರಜಾವತ್ಸಲರಾದ ಸರಕಾರದವರು ಸಹಾನುಭೂತಿಯಿಂದ ಆಯಾಸಪಡುತ್ತಿದ್ದಾರೆ, ನಮ್ಮ ದೇಶದ ಮುಖಂಡರು ಅನೇಕ ವಿಧದಿಂದ ವ್ಯಯಸಾಯಮಾಡುತ್ತಿದ್ದಾರೆ, ಅನ್ಯ ಜನಾಂಗಗಳು ಎಂದರೆ ನಮ್ಮ ಸರಕಾರದ ಮಿತ್ರರಾಷ್ಟ್ರಗಳು ಸದ್ಭಾವನೆಯಿಂದ ನಮ್ಮನ್ನು ಆಶೀರ್ವದಿಸುತ್ತಿದ್ದಾವೆ. ಹಿಂದೂಸ್ಥಾನದ ಏಳಿಗೆಗಾಗಿ ಯಾರ್‍ಯಾರು ಯಾವ ಯಾವ ವಿಧದ ಪ್ರಯತ್ನಗಳನ್ನು ನಡಿಸುತ್ತಾರೆಂಬದನ್ನು ವಿಹಂಗಮ ದೃಷ್ಟಿಯಿಂದ ನೋಡಿದ್ದಲ್ಲಿ ಮೇಲೆ ಹೇಳಿದಂತೆ ಸರಕಾರದವರು, ನಮ್ಮ ಮುಖಂಡರು ಮತ್ತು ಅನ್ಯ ಜನಾಂಗಗಳು ತಂತಮ್ಮ ಆಲೋಚನೆ, ಶಕ್ತಿ, ಅನುಕೂಲತೆಗಳಿಗೆ ಅನುರೂಪವಾಗಿ ಉದ್ಯೋಗಗಳನ್ನು ಮಾಡುತ್ತಿದ್ದಾರೆಂದು ಕಂಡುಬರುವುದು. ಮೂವತ್ತು ಕೋಟಿ! ಜನಸಂಖ್ಯೆಯುಳ್ಳ ಇಷ್ಟು ದೊಡ್ಡ ಹಿಂದೂಸ್ಥಾನದ ಏಳಿಗೆಯು ಬರೇ ಈ ಪ್ರಯತ್ನಗಳಿಂದ ಸಾಧ್ಯವಾಗುವುದು ಕೊಂಚ ಸಂದಿಗ್ಧವೇ. ಆದರೆ ದಯಾಳುಗಳಾದ ಸರಕಾರದವರಾಗಲಿ, ರಾಜಮಾನ್ಯಗಳಾದ ನಮ್ಮ ಮುಖಂಡರುಗಳಾಗಲಿ ಮಾಡುತ್ತಿರುವ ಪ್ರಯತ್ನಗಳ ಕೆಲವು ಅಂಶಗಳನ್ನು ಸಾಮಾನ್ಯ ದೇಶಬಾಂಧವರು ಹಂಚಿಕೊಂಡರೆ ಆ ಕಾರ್ಯವು ಬಹು ಸುಲಭವಾಗುವದು. ಸಾಮಾನ್ಯ ದೇಶಬಾಂಧವರು ತಮ್ಮ ಪಾಲಿಗೆ ವಹಿಸಿಕೊಳ್ಳತಕ್ಕ ಹಿಂದೂಸ್ಥಾನದ ಏಳಿಗೆಯ ಕಾರ್ಯಗಳ ಯಾವವು ಅವುಗಳನ್ನು ಯಾವ ಮಾರ್ಗದಿಂದ ಸಾಧಿಸಿಕೊಳ್ಳಬೇಕು. ಮತ್ತು ಹೀಗೆ ಮಾಡುವುದರಿಂದ ವಿರಾಟ್‌ಸ್ವರೂಪಿಯಾದ ಹಿಂದೂಸ್ಥಾನದ ಏಳಿಗೆಯು ಎಷ್ಟು ಬೇಗನೆ ಸಾಧ್ಯವಾದೀತು.—ಈ ಮೂರು ಪ್ರಶ್ನೆಗಳನ್ನು ಕುರಿತು ಈ ಲೇಖನದಲ್ಲಿ ಸಂಕ್ಷೇಪತಃ ವಿಚಾರಮಾಡುವವರಿದ್ದೇವೆ.

ಸಹಕಾರ.

ಸರ್ಕಿಲಾರು ನಂಬ್ರ ೧೪
ಮರು ಸಾಲಗಳು.

ಒಮ್ಮೆ ಪಡೆದ ಸಾಲವನ್ನು ತೀರಿಸಬೇಕಾದರೆ ಪುನಹಾ ಸಾಲಮಾಡುವ ಆಗತ್ಯವು ಬೀಳದಂತೆ ಸಾಲದ ಶರ್ತಗಳನ್ನು ನಿರ್ಣೈಸಬೇಕೆಂದು ೧೧ನೇ ಸರ್ಕಿಲಾರಿನಲ್ಲಿ ಕೊಟ್ಟ ಸೂಚನೆಗಳನ್ನು ಕೆಲವು ಸಂಘಗಳಲ್ಲಿ ಚೆನ್ನಾಗಿ ಗ್ರಹಿಸದೆ, ಯಾವತ್ತು ಸಾಲಗಳಿಗೂ ಒಂದೇ ತೆರನ ವಾಯಿದೆ ಮುಂತಾದ ಶರ್ತಗಳು ನಿರ್ಣೈಸಲ್ಪಡುತ್ತವೆ. ಹೀಗಾಗಿ ತಂತಮ್ಮ ಸಾಲಗಳನ್ನು ತಂತಮ್ಮ ಸಂಪಾದನೆಯಿಂದಲೇ ಮರುಪಾವತಿ ಮಾಡಲು ಸಾಲಗಾರರಿಗೆ ಸಾಧ್ಯವಾಗದೆ, ಸಾಲದ ವಾಯಿದೆ ಬಂತೆಂದರೆ ಅದಕ್ಕೋಸ್ಕರ ಹಣವನ್ನು ದೊರಕಿಸಿಕೊಳ್ಳಲು ತಂತಮ್ಮ ಸ್ನೇಹಿತರು, ನೆರೆಯವರು, ಸಾಹುಕಾರರೊಡನೆ ಸಾಲ ಪಡೆದು ಕಟ್ಟಬೇಕಾಗುತ್ತದೆ. ಒಂದೆರಡು ಸಂಘಗಳಲ್ಲಿ ಈ ತರದ ವಿದ್ಯಮಾನಗಳು ನಡೆಯುತ್ತಿರುವುದು ವರ್ತಮಾನಪತ್ರಗಳ ಮೂಲಕ ಪ್ರಕಟವಾಗಿಯದೆ.

ಹಲವು ಕಡೆಗಳಲ್ಲಿ ಹಾಗೆ ಸಂಘದ ಸಾಲಗಳನ್ನು ತೀರಿಸುವುದಕ್ಕೆ ಇತರರಿಂದ ಪಡೆದ ಮುಂಗಾಡಿಗಳನ್ನು ಅವರಿಗೆ ಮರುಪಾವತಿ ಮಾಡುವುದಕ್ಕೋಸ್ಕರ ಪುನಹಾ ಸಂಘದಲ್ಲಿ ಸಾಲದ ಅರ್ಜಿಗಳನ್ನು ಕೊಟ್ಟು ಸಾಲಗಳನ್ನು ಪಡೆಯುತ್ತಾರೆ. ಇಂತಹ ಸಾಲಗಳಿಗೆ ಇಂಗ್ಲೀಷಿನಲ್ಲಿ "ರಿ—ಲೋನ್ಸ್" (ಪುನಹಾ ಸಾಲ) ಎನ್ನುತ್ತಾರೆ, ನಾವು "ಮರು ಸಾಲಗಳು" ಅಥವಾ "ಪಡಿ ಸಾಲಗಳು" ಎಂದು ಹೇಳಬಹುದು. ಕೆಲವರು ತಮ್ಮ ಸಾಲದ ವಾಯಿದೆಯು ಬರುವುದಕ್ಕೆ ಮುಂಚಿತವಾಗಿಯೇ ಹೊಸ ಸಾಲವನ್ನು ಸಂಘದಿಂದಲೇ ಪಡೆದು ಅದರ ಹಣದಿಂದಲೇ ಹಳೇ ಸಾಲವನ್ನು ಸಂದಾಯ ಮಾಡುತ್ತಾರೆ. ಇಂತಹ ಸಾಲಗಳೂ "ಮರುಸಾಲ"ಗಳಾಗಿರುತ್ತವೆ. ಸಾಲದ ಅರ್ಜಿಗಳನ್ನು ಆಲೋಚಿಸುವಾಗ ಪಂಚಾಯತರು ಕುಲಾಂಕುಶ ತನಿಖೆಯನ್ನು ನಡೆಸಿ, ಸಂಗತಿ ಸಂದರ್ಭದ ಸಾರಗಳನ್ನು ಚೆನ್ನಾಗಿ ಪರಿಗಣಿಸಿದರೆ, ಅರ್ಜಿದಾರರು ಕೇಳುತ್ತಿರುವ ಸಾಲಗಳು ಮರುಸಾಲಗಳೆಂಬುದು ವಿಶದವಾಗುವುದು.

ಮರುಸಾಲಗಳು ಸಂಘಕ್ಕೆ ವಿಶೇಷ ತರದ ಕೊರತೆಯಾಗಿರುತ್ತದೆ. ಋಣಪೀಡಿತರನ್ನು ಕ್ರಮೇಣ ಋಣಮುಕ್ತರನ್ನಾಗಿ ಮಾಡಿ, ಅವರಲ್ಲಿ ಸಹಕಾರ, ಸ್ವಾವಲಂಬನೆ, ಮಿತವ್ಯಯ, ಮೊದಲಾದ ಗುಣಗಳನ್ನು ಬೆಳೆಯಿಸುವುದೇ ಸಂಘದ ಮುಖ್ಯೋದ್ದೇಶವಾದಲ್ಲಿ, ಒಮ್ಮೆ ಸಂಘದಿಂದ ಪಡೆದ ಸಾಲವನ್ನು ತೀರಿಸುವುದಕ್ಕೆ ಪುನಹಾ ಸಂಘದಿಂದಾಗಲಿ ಇತರರಿಂದಾಗಲಿ ಸಾಲವನ್ನು ಪಡೆಯಲೇ ಬೇಕಾದರೆ ಅವನು ಋಣಮುಕ್ತನಾಗುವ ಸಂಭವವೇ ಇಲ್ಲವಷ್ಟೇ. ಇದು ನಂಬರರಿಗೂ ಸರ್ವಸಾಧಾರಣವಾಗಿ ತಿಳಿದಿರುವ ಸಂಗತಿಯೇ ಆಗಿರುತ್ತದೆ. ಆದುದರಿಂದಲೇ ಮರುಸಾಲಗಳನ್ನು ಪಡೆಯಲೆಳಸುವವರು ತಾವು ಅಪೇಕ್ಷಿಸುವ ಸಾಲಗಳು ಮರುಸಾಲಗಳೆಂಬುದು ಯಾರಿಗೂ ತಿಳಿಯದಂತೆ ಭಗೀರಥ ಪ್ರಯತ್ನಗಳನ್ನು ಮಾಡುತ್ತಾರೆ. ಆದರೆ ಕೆಲವು ಸಂಘಗಳಲ್ಲಿ ತಾವು ಸೆಂಕ್ಷನ್ ಮಾಡುವ ಸಾಲಗಳು ಮರುಸಾಲಗಳೆಂಬುದು ಪಂಚಾಯತರಿಗೆ ಚೆನ್ನಾಗಿ ಗೊತ್ತಿದ್ದು ಕೂಡಾ ಅವುಗಳನ್ನು ನಿರಾತಂಕವಾಗಿ ಸೆಂಕ್ಷನ್ ಮಾಡುತ್ತಾರೆಂದು ಅನೇಕ ದೃಷ್ಟಾಂತಗಳಲ್ಲಿ ತಿಳಿದುಬಂದಿದೆ. ಇದು ಕೇವಲ ಶೋಚನೀಯವಾದ ವಿಷಯವಾಗಿರುತ್ತದೆ. ಒಮ್ಮೆ ಪಡೆದು ಬಾಕಿ ಇರುವ ಸಾಲದ ಮೊಬಲಗನ್ನು ಬಳಸಡಿಸಿ ಪುನಹಾ ಹೆಚ್ಚು ಮೊಬಲಗನ್ನು ಅಪೇಕ್ಷಿಸಿ ಬರಕೊಳ್ಳು

ಸಾಲದ ಅರ್ಜಿಗಳೇ ಇದಕ್ಕೆ ಉದಾಹರಣೆಗಳಾಗಿರುತ್ತವೆ. ಹೀಗೆ ಮಾಡುವುದರಿಂದ ಸಾಲಗಾರನು ಸಂಪೂರ್ಣವಾಗಿ ಅಧೋಗತಿಗೆ ಇಳಿಯುವುದು ನಿಶ್ಚಯವಾಗಿರುತ್ತದೆ. ಮರುಸಾಲಗಳ ಈ ಪರಿಣಾಮವು ಸಂಘದ ಆಡಳಿತೆಯನ್ನು ನಡೆಯಿಸುತ್ತಿರುವ ಹೆಚ್ಚು ಜನರು ಅರಿಯರೆಂಬುದರಿಂದಲೇ ಈ ಸರ್ಕಿಲಾರನ್ನು ಪ್ರಕಟಿಸಿಯದೆ ಮರುಸಾಲಗಳನ್ನು ಎಂದಾದರೂ ಯಾವ ರೀತಿಯಲ್ಲಾದರೂ ಪ್ರೋತ್ಸಾಹಿಸ ಬಾರದೆಂದು ಈ ಮೂಲಕ ಸೂಚಿಸೋಣಾಗುತ್ತದೆ.

ದ. ಕ. ಸೆಂಟ್ರಲ್ ಕೊ-ಒಪರೇಟಿವ್ ಬ್ಯಾಂಕ್, ಲಿಮಿಟೆಡ್. ಪುತ್ತೂರು, ದಕ್ಷಿಣಕನ್ನಡ ತಾ. 4-10-1915

ಎಮ್. ಅನಂತರಾವ್, ಕಾರ್ಯದರ್ಶಿ.

ಪತ್ರವ್ಯವಹಾರ.

ನಮ್ಮ ಜಿಲ್ಲೆಯ ತಹಶೀಲದಾರರ ಅವಲೋಕನದ ಬಗ್ಗೆ ಮೈಸೂರುಸಂಸ್ಥಾನದ ಕೃಷ್ಣರಾಜಪೇಟೆ ತಾಲೂಕಿನ ನಿವಾಸಿಗಳ ಚಟುವಟಿಕೆಯು.

ಹೇಮಾವತಿ ನದಿಯ ಕಿನಾರೆಯಲ್ಲಿರುವ ಹರಿಹರಪುರದಲ್ಲಿ ಸುಮಾರು ೫೦ ವರ್ಷಗಳ ಮೊದಲು ನಿಂತುಹೋಗಿದ್ದ ರೇಶ್ಮೆ ಕೈಗಾರಿಕೆಯನ್ನು ಈಗ ಪುನರುತ್ಥಾನಕ್ಕೆ ತಂದಿದ್ದಾರೆ. ರೇಶ್ಮೆ ಕೈಗಾರಿಕೆಯ ಫಲವಾಗಿ ಮೊದಲು ಸಂಪನ್ನರಾಗಿದ್ದ ಪರಂತು ಅಂದಿನಿಂದ ಒಡಸ್ಥಿತಿಗೆ ಬಂದ ಮುಸಲ್ಮಾನ ನಿವಾಸಿಕರು ಪುನಹ ರೇಶ್ಮೆ ಕೆಲಸವನ್ನು ಸುರುಮಾಡಿದ್ದಾರೆ. ರೇಶ್ಮೆ ಹುಳಗಳನ್ನು ಸಾಕುವ ಉದ್ದೇಶ ಗಿಡಗಳನ್ನು ಬೆಳಸುವುದಕ್ಕೆ ಸರಕಾರದವರು ೫ ವರುಷಗಳ ವರೆಗೆ ತೆರಿಗೆ ವಿನಹ ನೀರು ಕೊಡುವುದಾಗಿ ಅಭಯಕೊಟ್ಟಿದ್ದಾರೆ.

ಕೃಷ್ಣರಾಜಪೇಟೆಯಲ್ಲಿ ಕಬ್ಬಿನರಸ ಬೆಲ್ಲ ತೆಗೆಯುವ ಬಗ್ಗೆಯೂ, ಭತ್ತವನ್ನು ಕುಟ್ಟಿ ಅಕ್ಕಿ ಮಾಡುವ ಬಗ್ಗೆಯೂ ರೂಪಾಯಿ ೩೦,೦೦೦ ಜಮೆಮಾಡಿ ಒಂದು ಕಂಪೆನಿ ಏರ್ಪಡಿಸಿದ್ದಾರೆ. ಈ ಉದ್ದೇಶ ಅಗತ್ಯವಿರುವ ಯಂತ್ರಗಳನ್ನೂ ತರಿಸಿದ್ದಾರೆ.

ರೂ ೧೦,೦೦೦ ಮೂಲಧನದಿಂದ ಕಬ್ಬಿನ ಬೆಲ್ಲಮಾಡುವ ಇನ್ನೊಂದು ಕಂಪೆನಿ ನಿರ್ಮಿಸಿದ್ದಾರೆ. ಬಂಜರು ಜಾಗವನ್ನು ಕೃಷಿಮಾಡುವ ಉದ್ದೇಶ ಇಬ್ಬರು ವರ್ಗದಾರರು ತಗ್ಗು ಸ್ಥಳದಲ್ಲಿರುವ ನೀರನ್ನು ಮೇಲಕ್ಕೆ ಎತ್ತುವ ಯಂತ್ರಗಳನ್ನು ತರಿಸಿದ್ದಾರೆ.

ಲಿಖ್ಯ ನಮ್ಮ ದೇಶಾಭಿವೃದ್ಧಿಗೆ ಹಾನಿಕರವೆಂತಲೂ, ವಿದ್ಯಾ ಶಾಲೆಗಳನ್ನು ಹೆಚ್ಚಿಸುವುದರಿಂದ ದೇಶೋನ್ನತಿ ಲಭಿಸುವುದೆಂತಲೂ ಜನರು ನಂಬಿ ಮೊದಲು ಇದ್ದ ಹಳೇ ಶಾಲೆಗಳ ವಿನಹ ೫೦ ಹೊಸ ಶಾಲೆಗಳನ್ನೂ, ಅನೇಕ ರಾತ್ರಿಶಾಲೆಗಳನ್ನೂ ಒಂದೇ ತಾಲೂಕಿನಲ್ಲಿ ಸ್ಥಾಪಿಸಿದ್ದಾರೆ.

ಇಷ್ಟೆಲ್ಲ ಚಟುವಟಿಕೆಗೆ ಕಾರಣವು ಸರಕಾರ ಕಡೆಯಿಂದ ಮ. ರಾ. ರಾ. ಅಮಲ್ದಾರ ಬಿ. ವೆಂಕಟ್ರಾಮಯ್ಯನವರೂ ರಯತರ ಕಡೆಯಿಂದ ಮ. ರಾ. ರಾ. ಕೃಷ್ಣಶಾಸ್ತ್ರಿಗಳೂ ಆಗಿರುತ್ತಾರೆ.

ಈ ಜಿಲ್ಲೆಯಲ್ಲಿರುವ ಶಾಲಾ ಮೆನೇಜರರುಗಳು ಮತ್ತು ವಿದ್ಯಾಭಿವೃದ್ಧಿ ಪ್ರಯತ್ನಗಳಲ್ಲಿ ಸಹಾನುಭೂತಿಯುಳ್ಳ ಇತರರೂ ಗಮನಿಸಿಕೊಳ್ಳತಕ್ಕ ಬಗ್ಗೆ--

ಕಳೆದ ಆಗೋಸ್ತು ತಿಂಗಳ ತಾ ೧೬ನೇ ಸೋಮವಾರ ಇಲ್ಲಿ ಕೂಡಿದ ಸಭೆಯಲ್ಲಾದ ನಿರ್ಣಯಗಳನ್ನು ನಿಮ್ಮ ಪರ್ಯಾಲೋಚನೆ ಮತ್ತು ಅಭಿಪ್ರಾಯದ ಬಗ್ಗೆ ಈ ಕೆಳಗೆ ಸೂಚಿಸಿದ್ದೇವೆ. ಈ ಜಿಲ್ಲೆಯಲ್ಲಿ ಜನಸಾಮಾನ್ಯರು ವಿದ್ಯೆಯಲ್ಲಿ ಬಹಳ ಹಿಂದುಳಿದಿರುವರ. ಈ ಹೀನ ಸ್ಥಿತಿಯ ನಿವಾರಣೆಯ ಬಗ್ಗೆ ವಿದ್ಯಾಪ್ರಸರಣೆಯ ಪ್ರಯತ್ನಗಳು ಪ್ರಕೃತ ವಿರಳವಾಗಿರುವವಾದರೂ ಇಂಥಾ ಪ್ರಯತ್ನಗಳ ಬಗ್ಗೆ ಬೇಕಾದ ಪರೋಪಕಾರ ಬುದ್ಧಿಯು ಈ ಜಿಲ್ಲೆಯಲ್ಲಿ ಇರುತ್ತದೆಂಬ ಕೋರಿಕೆಯಿಂದ ಸಭೆಯವರು ಮೇಲೆ ನಮೂದಿಸಿದ ನಿರ್ಣಯಗಳನ್ನು ಮಾಡಿದ್ದಾಗಿದೆ.

ಈ ಜಿಲ್ಲೆಯ ಬೇರೆ ಬೇರೆ ಕಡೆಗಳಲ್ಲಿ ಪರೋಪಕಾರ ಬುದ್ಧಿಯುಳ್ಳ ಕೆಲವು ಸದ್ಗೃಹಸ್ಥರು ತಂತಮ್ಮ ಪ್ರಾಂತ್ಯಗಳಲ್ಲಿ ಶಾಲೆಕಾಲೆಗಳನ್ನು ಬಹಳ ಶ್ರಮಪಟ್ಟು ಸ್ಥಾಪಿಸಿ ಅವನ್ನು ಬಹು ಕಷ್ಟಗಳಿಂದ ನಡಿಸುತ್ತಾರೆಂಬ ಸಂಗತಿಯು ತಮಗೆ ಗೊತ್ತಿರಬಹುದು. ಇಂಥಾ ಪ್ರಯತ್ನಗಳ ಶ್ರಮವು ಸುಲಭವಾಗುವಂತೆಯೂ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿ ನಡಿಸಲು ಅಗತ್ಯವುಳ್ಳ ಅನುಭವವನ್ನು ಬೇಕಾದವರಿಗೆ ಕೊಡಲು ಸಾಧ್ಯವಾಗುವಂತೆಯೂ ಮೇಲಣ ನಿರ್ಣಯದಲ್ಲಿ ಸೂಚಿಸೋಣಾದಂತೆ ಒಂದು ಪ್ರಜಾ ಜನರ ಜಿಲ್ಲಾ ಸಂಘವನ್ನು ಏರ್ಪಡಿಸುವುದು ಅಗತ್ಯವೆಂತ ತಮಗೂ ಕಂಡುಬಾರದೆ ಇರದು.

ವಿದ್ಯಾ ವಿಷಯಗಳಲ್ಲಿ ಆಯಾ ಸ್ಥಳೀಕ ವಿದ್ಯಮಾನಗಳಿಗೂ ಭಾರತೀಯ ಜನಾಂಗದ ಬೆಳವಣಿಗೆಗೂ ತಕ್ಕದಾದ ಮಾರ್ಪಾಟಗಳೇನು ಎಂಬುದನ್ನು ಅಧಿಕಾರಿಗಳ ಲಕ್ಷ್ಯಕ್ಕೆ ತರುವ ಪ್ರಯತ್ನಗಳನ್ನು ಒಬ್ಬೊಬ್ಬರು ಪ್ರತ್ಯೇಕವಾಗಿ ಸಾಧಿಸುವುದಕ್ಕಿಂತ ಇಂಥಾ ಸಂಘದ ಮೂಲಕ ಸಾಧಿಸುವುದು ಸುಲಭವೂ ಅನಕೂಲವೂ ಆಗಿದೆ. ಶಿಕ್ಷಣ ಪ್ರಚಾರಕ್ಕೆ ಬೇಕಾದ ಆಸಕ್ತಿಯನ್ನು ಮಹಾಜನರಲ್ಲಿ ಉಂಟುಮಾಡಲಿಕ್ಕೂ ಈ ಸಂಬಂಧವಾಗಿ ಧರ್ಮ ಮತ್ತು ಮತ ಸಂಸ್ಥೆಗಳ ಆಡಳಿತೆದಾರರಲ್ಲಿ ಇರುವ ಅಸಡ್ಡೆಯನ್ನು ಹೋಗಗೊಳಿಸಿ ಅವರು ಈ ವಿಷಯದಲ್ಲಿ ತಮ್ಮ ಕರ್ತವ್ಯವನ್ನು ತಿಳಿದುಕೊಳ್ಳುವಂತೆ ಸಾಧಿಸಲಿಕ್ಕೂ ಇಂಥಾ ಜಿಲ್ಲಾ ಸಂಘಕ್ಕೆ ತುಂಬಾ ಅವಕಾಶವಿದೆ. ಕೆಲವು ಕಡೆ ಪಾಠಶಾಲೆಗಳೊಳಗೆ ಇರಬಹುದಾದ ಪರಸ್ಪರ ದ್ವೇಷಾಸೂಯೆ ಮೊದಲಾದ್ದನ್ನು ಇಂಥಾ ಸಂಘದ ಮೂಲಕ ಕಿತ್ತುಹಾಕಲು ಸಾಧ್ಯವಿಲ್ಲದಿದ್ದರೂ ಕಡಿಮೆ ಮಾಡಲು ಸಾಧ್ಯವಿದೆ.

ಈ ಜಿಲ್ಲಾ ಸಂಘವನ್ನು ಹೇಗೆ ವ್ಯವಸ್ಥೆಗೊಳಿಸಬೇಕು, ಇದರ ರಚನಾಕ್ರಮಗಳೇನು, ಇದರ ಉದ್ದೇಶಗಳನ್ನು ಯಾವ್ಯಾವ ರೀತಿಗಳಲ್ಲಿ ಸಾಧಿಸಬೇಕು, ಈ ಜಿಲ್ಲೆಯಲ್ಲಿ ಇಂಥಾ ಸಂಘದಿಂದ ನೆರವೇರತಕ್ಕ ವಿಶೇಷ ಕಾರ್ಯಗಳು ಯಾವವು ಎಂಬುದಗ್ಗೆ ವಿಷಯ ತಮ್ಮ ಅಭಿಪ್ರಾಯಗಳನ್ನು ತಿಳಿದನಂತರವೇ ಈ ಸಂಘವನ್ನು ವ್ಯವಸ್ಥೆಗೊಳಿಸುವುದು ವಿಹಿತವೆಂದು ತಿಳಿದಿದ್ದೇವೆ.

ಈ ಬಗ್ಗೆ ಇದೇ ಬರುವ ಅಕ್ಟೋಬರ ತಿಂಗಳ ತಾ. ೨೪ನೇ ಶ್ಯಾಮ ಘಂಟೆ ನಾಲ್ಕಕ್ಕೆ ಮಂಗಳೂರಿನ ಮಾರ್ಕೆಟ್ ಒಳಿ ಇರುವ ಕೊಸ್ಮೊಪೊಲಿಟನ್ ಕ್ಲಬ್ಬಿನಲ್ಲಿ ಸಭೆ ಕೂಡಬೇಕೆಂತ ನಿರ್ಣಯಿಸಲುತ್ತದೆ. ಆದ್ದರಿಂದ ತಾವು ಈ ಸಭೆಗೆ ಬಂದು ತಮ್ಮ ಅಭಿಪ್ರಾಯಗಳನ್ನು ಅಲ್ಲಿ ಸೂಚಿಸಬೇಕೆಂತ ವಿಜ್ಞಾಪಿಸಿಕೊಳ್ಳುತ್ತೇವೆ. ಒಂದುವೇಳೆ ಸಭೆಗೆ ತಮಗೆ ಬರಲು ಅನನುಕೂಲವೆಂತ ಕಂಡರೆ ಈ ವಿಷಯ ತಮ್ಮ ಅಭಿಪ್ರಾಯ ವ ಸೂಚನೆಗಳನ್ನು ಈ ಕೆಳಗೆ ದಸ್ಕತು ಮಾಡಿರುವ ಕಾರ್ಯದರ್ಶಿಗಳಿಗೆ ಇದೇ ಬರುವ ಅಕ್ಟೋಬರ ತಿಂಗಳ ತಾ ೧೭ರೊಳಗೆ ತಲ್ಪುವಂತೆ ಬರೆದು ಕಳುಹಿಸಬೇಕೆಂತ ಅಪೇಕ್ಷಿತ್ತೇವೆ.

ಮಂಗಳೂರು ತಾ 30 ಸಪ್ಟಂಬರ 1915.

ಕಾರ್ನಾಡ ಸದಾಶಿವರಾವ್, ವಿ ಶ್ರೀನಿವಾಸ ಕಾಮತ್, ಕಾರ್ಯದರ್ಶಿಗಳು.

ಮೇಲೆ ಸೂಚಿಸಿರುವ ಸಭೆಯ ವಿವರ ಮತ್ತು ನಿರ್ಣಯಗಳು.

ಹಾಜರು. ರಾಜೇಶ್ರೀಗಳಾದ ಯು ಎಸ್ ರಾಘವೇಂದ್ರರಾವ್ ಬಿ. ಎ., ಮಾಜಿ ಅಸಿಸ್ಟಂಟ್ ಶಾಲಾ ಇನ್ಸ್‌ಪೆಕ್ಟರರು, ಅ. ಶ್ರೀನಿವಾಸಪ್ಪೈ, ಬಿ. ಎ., ಬಿ. ಎಲ್, ಹೈಕೋರ್ಟ ವಕೀಲ್, ಪಿ ರಾಮಚಂದ್ರಯ್ಯ, ವರ್ಕಾಡಿ ರಾಮರಾವ್, ಮಾಜಿ ಡಿಪ್ಯುಟಿ ಕಲೆಕ್ಟರ್, ಕೆ. ರಂಗರಾವ್. ಮಂಗಳೂರು ತಾಲೂಕು ಬೋರ್ಡು ಮೆಂಬರರು, ಮತ್ತು ಇತರರು.

ನಿರ್ಣಯಗಳು. ಈ ಜಿಲ್ಲೆಯಲ್ಲಿ ವಿದ್ಯಾ ಪ್ರಸರಣೆಯ ಚಟುವಟಿಕೆಗಳನ್ನು ವ್ಯವಸ್ಥೆಗೊಳಿಸಿ ವಿದ್ಯಾಭಿವೃದ್ಧಿಯನ್ನು ಸಾಧಿಸುವದಕ್ಕೆ ಒಂದು ಸಂಘವನ್ನು ಏರ್ಪಡಿಸುವದು ಅಗತ್ಯವಿದೆ.

ಈ ಜಿಲ್ಲೆಯಲ್ಲಿರುವ ಶಾಲೆಗಳ ಮೆನೇಜರರಿಂದಲೂ ವಿದ್ಯಾಭಿವೃದ್ಧಿಯ ಪ್ರಯತ್ನಗಳಲ್ಲಿ ಆಸಕ್ತರಾಗಿರುವಂಥವರಿಂದಲೂ ಈ ವಿಷಯದಲ್ಲಿ ಅಭಿಪ್ರಾಯಗಳನ್ನು ತರಿಸಿಕೊಳ್ಳಲಿಕ್ಕೆ ಒಂದು ಕಮ್ಮಿಟಿಯನ್ನು ಏರ್ಪಡಿಸುವದು ಅಗತ್ಯ.

ಎರಡನೇ ನಿರ್ಣಯದ ಜಾರಿಯನ್ನು ನಡಿಸಲು ರಾಜೇಶ್ರೀಗಳಾದ ವರ್ಕಾಡಿ ರಾಮರಾವ್—ಅಧ್ಯಕ್ಷ, ಯು. ಎಸ್. ರಾಘವೇಂದ್ರರಾವ್, ಉಪಾಧ್ಯಕ್ಷ, ರಾವ್ ಬಹದ್ದೂರ್ ಎನ್ ಸುಬ್ಬರಾವ್, ಅ. ಶ್ರೀನಿವಾಸಪ್ಪೈ, ಎನ್. ವೆಂಕಟರಾವ್, ಎ. ಬಾಲಕೃಷ್ಣಶೆಟ್ಟಿ, ಎಚ್ ಎಮ್ ಪುತ್ತೂರು ಸಾಹೇಬ್,—ಕಾರ್ನಾಡ ಸದಾಶಿವರಾವ್ ಮತ್ತು ಶ್ರೀನಿವಾಸ ಕಾಮತ್ ಈ ಎರಡು ಜನ ಕಾರ್ಯದರ್ಶಿಗಳು ಕೂಡಿ ಇನ್ನು ೫ ಜನರು —ಇವರ ಒಂದು ಕಮ್ಮಿಟಿಯು ಏರ್ಪಡಿಸಲ್ಪಟ್ಟಿರುವದು.

ಒಂದು ಒಗಟು.

ಎರ್ಮಾಳಿನಿಂದ ಮುಲ್ಕಿಗೆ ಹೋಗುವ ಮಧ್ಯ ದಾರಿಯಲ್ಲಿ ಒಂದು ದೇವಸ್ಥಾನವಿರುವುದು. ಇಲ್ಲಿ ಮಹಾಲಿಂಗೇಶ್ವರ ಮತ್ತು ಗಣಪತಿ ದೇವತೆಗಳು. ಇದಕ್ಕೆ ಒಬ್ಬ ಜೈನ, ಇಬ್ಬರು ನಾಡವರು, ಒಬ್ಬ ಬ್ರಾಹ್ಮಣ ಹೀಗೆ ನಾಲ್ಕು ಮಂದಿ ಮೊಕ್ತೇಸರರು. ಇವರು ಎಲ್ಲವರೂ ಆ ದೇವಸ್ಥಾನದ ಆಡಳಿತೆದಾರರು, ಎಲ್ಲವರೂ ಆಸ್ತಿಯ ಹುಟ್ಟುವಳಿ ವಸೂಲುಮಾಡಬಹುದು. ಆದ ಜಮೆಗೆ ಏನಾದರು ಒಂದು ಖರ್ಚು ಕಾಣಿಸಿದರೆ ಸಾಕು, ಇವರಲ್ಲಿ ಎಣ್ಣೆಗೂ, ಸೀಗೆಕಾಯಿಗೂ ಇದ್ದಷ್ಟು ಪರಸ್ಪರ ಮೈತ್ರಿ, ದೇವಸ್ಥಾನ ಸಂಬಂಧ ದಾವಾ ಆಗಬೇಕಾಗಿದ್ದರೆ ಎಲ್ಲರೂ ವಾದಿಗಳಾಗಬೇಕು, ಇಲ್ಲವೇ ಪ್ರತಿವಾದಿಗಳಾಗಬೇಕು. ಸರಕಾರ ತಸದೀಕು ಪಡೆಯಬೇಕಾದರೆ ಎಲ್ಲರೂ ಸೇರಿ ರಶೀದಿ ಕೊಡಬೇಕು. ಇವರು ಆಯಾ ಜಾತಿ ಕಮ್ಮಿಟಿ ಮೆಂಬರುಗಳಿಂದ ಮೊಕ್ತೆಸರು ಮಾಡಲ್ಪಟ್ಟವರು. ಒಬ್ಬರ ಮೇಲೆ ಒಬ್ಬರಿಗೆ ಅಧಿಕಾರವಿಲ್ಲ. ಹೀಗಿರುವ ದೇವಸ್ಥಾನದಲ್ಲಿ ಕೆಲವು ಕಾಲದಿಂದ ನಿತ್ಯ ಪೂಜೆ ಇಲ್ಲ, ವರ್ಷೋತ್ಸವ ಇಲ್ಲ, ಗೋಪುರ ಛಾವಣಿಯಾಗಿರಲಿಲ್ಲ, ಸರಕಾರ ತಸದೀಕು ಮನ್ನಾ ಆಗಿರುವುದು. ಈ ದೇವಸ್ಥಾನವಾವುದು? ಇಲ್ಲಿ ಸಾಂಗವಾಗಿ ನಿತ್ಯ ಪೂಜೆ ನಡಿಯುವ ಬಗೆ ಹೇಗೆ? ವರ್ಷೋತ್ಸವವಾಗತಕ್ಕ ಮಾರ್ಗವಾವುದು? ತಸದೀಕು ಪಡೆಯುವ ಉಪಾಯವೇನು? ಈ ಒಗಟನ್ನು ಬಿಚ್ಚಿದವರಿಗೆ ಎಂಟು ದಿವಸಗಳ ಪೂಜಾ ಫಲವು ಬಹುಮಾನವಾಗಿ ಇಡಲ್ಪಟ್ಟಿದೆ!!

ಧರ್ಮಾಭಿಮಾನಿ.

ಯುದ್ಧ ಸಮಾಚಾರ.

ಸಪ್ಟೆಂಬರ ತಾ. ೨೯, ೩೦

ಪಶ್ಚಿಮ ರಣರಂಗದಲ್ಲಿ ಮಿತ್ರರ ಸಂಯುಕ್ತ ಸೇನೆಗಳ ಜಯ ದುಂದುಭಿಗಳು ಮೊಳಗಲು ಪ್ರಾರಂಭವಾಗಿರುವದು. ಜರ್ಮನರು ಸುರಕ್ಷಿತಪಡಿಸಿದ ಸೇನಾ ನೆಲೆಗಳನ್ನು ಫ್ರೆಂಚರ ಸ್ವಾಧೀನಪಡಿಸಿಕೊಂಡಿರುವರು. ಈ ಕಾಳಗದಲ್ಲಿ ಜರ್ಮನರ ಮೂರು ಸೇನಾಂಗಗಳು ನಾಶವಾಗಿ ಹೋಗಿವೆ. ೧೨,೦೦೦ ಜರ್ಮನ ಸೈನಿಕರನ್ನು ೩೧೭ ಆಫೀಸರರೊಂದಿಗೆ ಸೆರೆಹಿಡಿದಿರುತ್ತಾರೆ. ಸೆವೇನ್ ಎಂಬವರ ಸಮೀಪದ ಫ್ರೆಂಚರ ಸೇನಾಂಗಗಳಲ್ಲಿ ಕೆಲವು ವೈರಿಗಳ ಮೊದಲನೆಯ ಮತ್ತು ಎರಡನೆಯ ವ್ಯೂಹಗಳನ್ನು ದಾಟಿಹೋಗಿ ಶತ್ರುಗಳು ತಮ್ಮ ಮೇಲೆ ಸುರಿಸುತ್ತಿರುವ ಅಗ್ನಿಯ ವಾಹಗಳನ್ನು ಲೆಕ್ಕಿಸದೆ ಅಲ್ಲಿಯ ನೆಲೆಗಳನ್ನು ಸಹ ಸ್ವಾಧೀನಪಡಿಸಿರುತ್ತಾರೆ. ಫ್ರೆಂಚರ ಆಕಾಶನಾವೆಗಳು ಹವಾ ಲಕ್ಷಣಗಳು ತಮಗೆ ಪ್ರತಿಕೂಲವಾಗಿದ್ದರೂ ಜರ್ಮನ ಯುದ್ಧರಂಗಕ್ಕೆ ಬಲವು ಬರುತ್ತಿರುವ ರೈಲ್ವೆ ಮಾರ್ಗದ ಮೇಲೆ ಬೊಂಬಗಳನ್ನು ಸುರಿದು ಅದನ್ನು ನಾಶಪಡಿಸಿರುವರು.

ಫ್ರೆಂಚರು ಮತ್ತು ಬ್ರಿಟಿಷರು ಪಶ್ಚಿಮ ರಣರಂಗದಲ್ಲಿ ಗೆದ್ದ ಕಾರಣ ಜರ್ಮನ್ ಸೇನಾನಾಯಕರು ಇಬ್ಬರ ಜರ್ಮನರ ಜನರಲ್‌ರವರನ್ನು ಕೆಲಸದಿಂದ ತಳ್ಳಿಹಾಕಿದ್ದಾರೆ.

ಅಕ್ಟೋಬರ ತಾ. ೧, ೨

ಪಶ್ಚಿಮ ರಣರಂಗದಲ್ಲಿ ಆರ್ಟೋಯಿ ಪ್ರಾಂತ್ಯಗಳಲ್ಲಿ ವಿಶೇಷ ಕದನಗಳು ಇದ್ದಿಲ್ಲ. ಫ್ರೆಂಚರು ಚೆಂಪೆನದಲ್ಲಿ ಮುಂದೆ ಸಾಗುತ್ತಿದ್ದಾರೆ. ಆಕಾಶನಾವೆಗಳ ಒಂದು ಪಡೆಯು ೭೩ ಸಿಡಿಮದ್ದಿನ ತೋಟೆಗಳನ್ನು ಶತ್ರುಗಳ ಸ್ಥಾನಗಳಲ್ಲಿ ಎಸೆದು ಸುರಕ್ಷಿತವಾಗಿ ತಿರುಗಿ ಬಂದಿರುವರು.

ಪೂರ್ವ ರಣರಂಗದಲ್ಲಿ ಒಸ್ಟ್ರಿಯನರಿಗೆ ಯುದ್ಧ ಸಾಮಾಗ್ರಿಗಳ ಸರಬರಾಯಿಯು ಕಡಮೆಯಾದ್ದರಿಂದ ಜರ್ಮನಿಯ ಬೇರೆಬೇರೆ ಕಾರ್ಖಾನೆಗಳಿಂದ ಈ ಸಾಮಾಗ್ರಿಗಳು ಒಸ್ಟ್ರಿಯನರಿಗೆ ಕಳಿಸಲ್ಪಡುತ್ತವೆ. ಪಶ್ಚಿಮ ರಣರಂಗದಲ್ಲಿ ಬ್ರಿಟಿಷ ಫ್ರೆಂಚರ ಮುಂದುವರಿಯುತ್ತಿರುವದರಿಂದ ಪೂರ್ವ ರಣರಂಗದ ಡ್ವಿನ್‌ಸ್ಕ ಮತ್ತು ವೆಲಿಯಾನಾ ಪ್ರಾಂತ್ಯಗಳ ಜರ್ಮನ ಸೇನೆಯನ್ನು ಪಶ್ಚಿಮ ರಣರಂಗಕ್ಕೆ ಒಯ್ಯಬಹುದೆಂದು ಕೆಲವರು ಗ್ರಹಿಸುತ್ತಾರೆ. ರಶ್ಯಯನರು ಶತ್ರುಗಳೊಡನೆ ಚಿಕ್ಕ ಚಿಕ್ಕ ಕದನಗಳನ್ನು ನಡಿಸುತ್ತಿದ್ದು ಶತ್ರುಗಳಿಂದ ಹಲವು ಕಂದಕಗಳನ್ನೂ ಗ್ರಾಮಗಳನ್ನೂ ಕೈವಶ ಮಾಡಿಕೊಂಡಿರುವರು.

ಅಕ್ಟೋಬರ ತಾ. ೩, ೪

ಸಪ್ಟೆಂಬರ ತಿಂಗಳ ತಾ. ೨೫ಕ್ಕೆ ಅಂತ್ಯವಾಗುವ ವಾರದಲ್ಲಿ ಜರ್ಮನರ ಜಲಾಂತರ್ಗಾಮಿ ನಾವೆಗಳಿಂದ ೬ ವ್ಯಾಪಾರ ಹಡಗಗಳು ಮುಳುಗಿಸಲ್ಪಟ್ಟಿವೆ.

ಮಿತ್ರರ ಸಂಯುಕ್ತ ಸೇನೆಗಳ ಜಯದ ವೃತ್ತಾಂತವು ಈ ದಿನಗಳ ಸಮಾಚಾರದಲ್ಲಿ ವಿಶೇಷವಾಗಿರುವದು. ಚೆಂಪನ್‌ದಲ್ಲಿ ವೈರಿಗಳ ಮುಖ್ಯವಾದ ಮುಕ್ಕಾಂ ಸೇನಾನೆಲೆಯು ಫ್ರೆಂಚರ ಕೈಸೇರಿರುವುದು. ಸಂಯುಕ್ತ ಸೇನೆಯವರು ಹೀಗೆ ಮುಂದರಿಸುವದನ್ನು ನೋಡಿ ಜರ್ಮನರು ಪೂರ್ವ ರಣರಂಗದಿಂದ ತಮ್ಮ ಸೇನೆಯನ್ನು ಪಶ್ಚಿಮ ರಣರಂಗಕ್ಕೆ ತರಿಸುವರೆಂದು ಗೊತ್ತಾಗಿದೆ. ಆರ್ಟೋಯಿ ಪ್ರಾಂತ್ಯಗಳಲ್ಲಿ ಸಹ ವೈರಿಗಳ ಕೆಲವು ಕಂದಕಗಳು ಹಿಡಿಯಲ್ಪಟ್ಟಿವೆ. ಮಿತ್ರರ ಆಕಾಶನಾವೆಗಳು ಲುಕ್ಸೆಂಬರ್ಗದಲ್ಲಿಯ ಸ್ಟೇಶನು, ರೈಲ್ವೆ ಸಂಕ, ಶತ್ರುಗಳ ಸೇನಾಶಿಬಿರ ಇತ್ಯಾದಿಗಳನ್ನು ನಾಶಮಾಡಿರುವವು.

ಡಿಲ್ಹಾದ ಪೂರ್ವದಲ್ಲಿ ಸರೋವರಗಳಿರುವ ಕೆಲವು ಗ್ರಾಮಗಳನ್ನು ರಶ್ಯಯನರು ಸ್ವಾಧೀನಮಾಡಿಕೊಂಡು ಜರ್ಮನರನ್ನು ವಿಲ್ಕೋಮಿರ್‌ಗಳ ಪಶ್ಚಿಮಕ್ಕೆ ಓಡಿಸಿಬಿಟ್ಟಿರುತ್ತಾರೆ.

ಜರ್ಮನರ ಮತ್ತು ಒಸ್ಟ್ರಿಯಾನರ ಆಫೀಸರರು ಹಲವರು ಬಲ್ಗೇರಿಯಕ್ಕೆ ಬಂದು ಟರ್ಕಿಯಲ್ಲಿ ನಡೆಸಿದ ಯತ್ನಗಳಂತೆಯೇ ಇಲ್ಲಿಯು ಸಹ ನಡೆಸಲು ಪ್ರಯತ್ನಿಸುವರೆಂತ ತಿಳಿದುಬಂದದೆ.

ಅಕ್ಟೋಬರ ತಾ. ೫-೬.

ಚೆಂಪೆನ್ ಪ್ರಾಂತ್ಯಗಳಲ್ಲಿ ಕದನಗಳ ಹೋರಾಟವು ವಿಶೇಷವಾಗಿರದು. ಆರ್ಟೋಯಿ ಪ್ರಾಂತ್ಯಗಳಲ್ಲಿ ಸಂಯುಕ್ತ ಸೇನೆಯವರು ಮುಂದುವರಿಯುತ್ತಿದ್ದಾರೆ. ಜರ್ಮನರ ಸೇನಾವ್ಯೂಹಗಳ ಹಿಂದಿರುವ ರೈಲ್ವೆ ಸ್ಟೇಶನು ಮಾರ್ಗ ಇತ್ಯಾದಿಗಳ ಮೇಲೆ ಬೊಂಬಗಳನ್ನು ಬಡೆದ ಫ್ರೆಂಚ ಆಕಾಶವಿಮಾನಕಾರರು ಇವುಗಳನ್ನು ಹಾಳ ಮಾಡಿರುವರು.

ಡ್ವಿನ್ಸ್ಕ ಮತ್ತು ವಿಲ್ನಾಗಳ ಪೂರ್ವಪ್ರಾಂತ್ಯಗಳಿಂದ ಜರ್ಮನರು ರಶ್ಯಯನರ ಸೇನಾವ್ಯೂಹಗಳನ್ನು ಮುರಿದು ಬಿಡಲು ಯತ್ನಿಸುವರು. ಆದರೆ ಈ ಬಗ್ಗೆ ಕಳ ಹಿಸಿಕೊಟ್ಟ ಜರ್ಮನರ ಸೇನೆಯಲಿ ಸರಿ ಅರ್ಧಾಂಶ ಸೇನೆಯು ನಾಶವಾಗಿ ಹೋಗಿದೆ. ಒಸ್ಟ್ರಿಯನರ ೫ ಸೇನಾಂಗಗಳನ್ನು ರಶ್ಯಯನರು ಸೆರೆಹಿಡಿದಿರುವರು.

ಜರ್ಮನರ ಆಫೀಸರರನ್ನು ಬಲ್ಗೇರಿಯದಿಂದ ಹೊರಕ್ಕೆ ಕಳಹಿಸಿಕೊಡಬೇಕೆಂಬ ಸಂದೇಶವನ್ನು ರಶ್ಯಯನರು ಬಲ್ಗೇರಿಯಕ್ಕೆ ಕಳಹಿಸಿಕೊಟ್ಟಿರುವರು. ಬಲ್ಗೇರಿಯಾದಲ್ಲಿ ಜರ್ಮನರ ಆರು ಆಕಾಶನಾವೆಗಳು ಬಂದಿವೆಂತಲೂ ಜರ್ಮನ ಯಂತ್ರಚಾಲಕರು ಕೊನ್ಸ್ಟಂಟಿನೋಪಲದಿಂದ ಬಲ್ಗೇರಿಯಕ್ಕೆ ಬರುತ್ತಿರುವರೆಂತಲೂ ಲಂಡನಿನ ಒಂದು ತಂತಿ ವಾರ್ತೆಯಿಂದ ತಿಳಿದು ಬರುತ್ತದೆ.

ಪಶ್ಚಿಮ ರಣರಂಗದಲ್ಲಿ ಬ್ರಿಟಿಷರ ಕೈವಶವಾದಿರುವ ಕಂದಕಗಳನ್ನು ಹಿಂದಕ್ಕೆ ಪಡಕೊಳ್ಳಲು ಜರ್ಮನರು ವಿಶೇಷವಾಗಿ ಹೋರಾಡಿದರೂ ಜರ್ಮನರ ಈ ಹೋರಾಟವು ನಿಷ್ಫಲವಾಗಿ ಹೋಯಿತೆಂತ ಸರ್ ಜ್ಹೋನ್ ಫ್ರೆಂಚರವರು ತಿಳಿಸಿದ ಸಮಾಚಾರದಿಂದ ಗೊತ್ತಾಗುತ್ತದೆ. ಆರ್ಗೋನ್ನೆ ಪ್ರಾಂತ್ಯಗಳಲ್ಲಿ ಜರ್ಮನರು ಸಂಗ್ರಾಮಸನ್ನಾಹಗಳನ್ನು ಮಾಡುತ್ತಿರುವರು.

ಉತ್ತರ ಹಿಂದೂಸ್ಥಾನ.

ಹಿಂದೂ ಯುನಿವರ್ಸಿಟಿ ಕಾನೂನು ಮಸೂದೆಯು ಇಂಡಿಯಾ ಸರಕಾರದ ನ್ಯಾಯವಿಧಾಯಕ ಸಭೆಯಲ್ಲಿ ಮಂಜೂರಾಯಿತು. ೨೦ನೆ ಫೆಬ್ರುವರಿ ತಿಂಗಳಲ್ಲಿ ಹಾರ್ಡಿಂಗ್ ಪ್ರಭುಗಳವರು ಈ ವಿಶ್ವವಿದ್ಯಾಲಯದ ಕಟ್ಟಡಗಳ ಶಂಕುಸ್ಥಾಪನೆಯನ್ನು ಮಾಡುವರು.

ಗೋಖಲೆಯವರ ಸ್ಮಾರಕ ಫಂಡನ್ನು ಅಂಗ್ಲಾಂಡದಲ್ಲಿ ಸಹ ಏರ್ಪಡಿಸಲು ಸರ್ ಕೃಷ್ಣಗುಪ್ತಾ ಮತ್ತು ಸರ್ ವಿಲಿಯಮ್ ವೆಡರ್ ಬರ್ನರವರು ಪ್ರಯತ್ನಿಸುತ್ತಿದ್ದಾರೆ. ಶಿಕ್ಷಕ ವೃತ್ತಿಗೆ ಬೇಕಾದ ಶಿಕ್ಷಣವನ್ನು ಪಡೆಯಲು ಅಂಗ್ಲಾಂಡಕ್ಕೆ ಹೋಗುವ ಭಾರತೀಯ ಸ್ತ್ರೀಯರಿಗೆ ಒಂದು ವಿದ್ಯಾರ್ಥಿವೇತನವನ್ನು ಗೋಖಲೆಯವರ ಹೆಸರಲ್ಲಿ ಸ್ಥಾಪಿಸಬೇಕೆಂಬ ಉದ್ದೇಶದಿಂದ ಈ ಸ್ಮಾರಕ ಫಂಡು ಏರ್ಪಡಿಸಲ್ಪಟ್ಟಿರುವದು. ಮೂರು ವರುಷದ ವರೆಗೆ ವರುಷ ಒಂದಕ್ಕೆ ಪವನು ೧೦೦ರ ಪ್ರಕಾರ ಈ ವೇತನವಿರವೇಕೆಂಬ ಅಭಿಮತವಿದೆ. ಮುಂದಿನ ಮೂರು ವರುಷಗಳೊಳಗೆ ಈ ರೀತಿ ವೇತನ ದೊರಕಿಸುವ ಫಂಡನ್ನು ಏರ್ಪಡಿಸಿ ಇದಕ್ಕೆ ಬೇಕಾದ ದ್ರವ್ಯಸಂಗ್ರಹವನ್ನು ಮಾಡಿದರೆ ೨೦೦೦ ಪವನುಗಳನ್ನು ಈ ಫಂಡಿಗೆ ದ್ರವ್ಯಸಹಾಯವಾಗಿ ಕೊಡಬೇಕೆಂತ ಗೋಖಲೆಯವರ ಆಜೀವ ಸ್ನೇಹಿತರಾಗಿದ್ದ ಒಬ್ಬ ಸ್ತ್ರೀಯು ತನ್ನ ವಿಲ್ಲಾಮೆಯಲ್ಲಿ ಬರೆದಿರುವಳು.

ಮತ ಪ್ರಸಂಗಗಳ ಕೆಲಸದ ಮೇಲೆ ರೈಲ್ವೆ ಪ್ರಯಾಣ ಮಾಡುತ್ತಿರುವ ಪಾದ್ರಿಗಳಿಗೆ ರಿಯಾಯತಿ ದರಗಳಿವೆ. ಇಂಥಾ ರಿಯಾಯತಿ ದರಗಳನ್ನು ಇನ್ನು ಮುಂದೆ ಇವರಿಗೆ ಕೊಡುವದು ಅಗತ್ಯವಿಲ್ಲವೆಂತ ರೈಲ್ವೆ ಕನ್ಫರೆನ್ಸದವರು ಇತ್ತಲಾಗೆ ಕೂಡಿದ ತಮ್ಮ ಸಭೆಯಲ್ಲಿ ನಿರ್ಣಯಿಸಿರುವರು.

ಪಂಜಾಬಿನಲ್ಲಿ ಏರ್ಪಡಿಸಲ್ಪಟ್ಟಿರುವ ಹಾರ್ಡಿಂಗ್ ಪ್ರಭುಗಳ ಸ್ವರ್ಗಸ್ಥ ಪತ್ನಿಯರ ಸ್ಮಾರಕ ಫಂಡಿಗೆ ನಭದ ಮಹಾರಾಜರವರು ರೂ ೨೫,೦೦೦ವನ್ನೂ ಭಾವಲಪುರದ ನವಾಬರವರು ರೂ ೧೫,೦೦೦ವನ್ನೂ ಕೊಟ್ಟಿರುವರು.

ಯುದ್ಧ ಪ್ರಾರಂಭವಾದಂದಿನಿಂದ "ಇಂಡಿಯನ್ ಮೆಡಿಕಲ್ ಸರ್ವಿಸ್" ಎಂಬ ವೈದ್ಯಕ ಪದವಿಗಳಲ್ಲಿ ೧೫೦ ಸ್ಥಾನಗಳು ಹಂಗಾಮಿಯಾಗಿ ದೇಶೀಯರಿಗೆ ಕೊಡೋಣವಾಗಿರುವವೆಂತ ತಿಳಿಯುತ್ತೇವೆ.

೧೯೧೪ನೇ ವರುಷದಲ್ಲಿ ಹಾವುಗಳ ಕಡಿತದಿಂದ ಸತ್ತವರ ಸಂಖ್ಯೆಯು ಹಿಂದೂಸ್ಥಾನದಲ್ಲಿ ೨೨,೮೫೪ ಆಗಿತ್ತೆಂದಾಗಿ ತಿಳಿದುಬರುತ್ತದೆ. ಈ ಸಂಖ್ಯೆಯು ೧೯೧೩ರಲ್ಲಿ ೨೧,೭೭೦ ಆಗಿತ್ತು.

ಈ ಸಂವತ್ಸರವು ಹೆಸರಲ್ಲಿ ಮಾತ್ರವಲ್ಲ ಫಲಪ್ರಾಪ್ತಿಯಲ್ಲಿ ಸಹ ರಾಕ್ಷಸ ಸಂವತ್ಸರವಾಗಿ ಪರಿಣಮಿಸುತ್ತಿದೆ. ಯುದ್ಧದಿಂದ ವ್ಯಾಪಾರಸ್ಥರಿಗೆ ಮೊದಲಿನಂತೆ ವ್ಯಾಪಾರಗಳನ್ನು ನಡಿಸಲು ಆಸ್ಪದವಿಲ್ಲದೆ ನಷ್ಟ ಉಂಟಾಗುತ್ತಿರುವದು. ಕೆಲವು ಕಡೆಗಳಲ್ಲಿ ನೆರೆ, ಇನ್ನು ಕೆಲವು ಕಡೆಗಳಲ್ಲಿ ಅತಿವೃಷ್ಟಿ ಮತ್ತು ಕೆಲವು ಕಡೆಗಳಲ್ಲಿ ಅನಾವೃಷ್ಟಿ ಇವುಗಳಿಂದ ಕ್ಷಾಮವು ಅಲ್ಲಲ್ಲಿ ತಲೆದೋರುತ್ತಿರುವದು. ಬಂಗಾಳದಲ್ಲಿ ಅಗಸೆನಾರನ್ನು ಬೆಳಸುವವರಿಗೆ ಭಾರಿ ನಷ್ಟ ಉಂಟಾಗಿರುವುದು. ಮುಂಬಯಿಯಲ್ಲಿ ವಸ್ತ್ರದ ಗಿರಣಿಗಳಲ್ಲಿ ಕೆಲವನ್ನು ಮುಚ್ಚಿಬಿಟ್ಟಿರುವರು. ಮತ್ತು ಕೆಲವು ದಿವಾಳಿ ಅರ್ಜಿಗಳನ್ನು ಕೊಟ್ಟಿರುವವು. ಪೂರ್ವ ಬಂಗಾಳ ಮತ್ತು ಅಸ್ಸಾಮು ಪ್ರಾಂತ್ಯಗಳ ಕೆಲವು ಜಿಲ್ಲೆಗಳಲ್ಲಿ ಈ ಮೊದಲೇ ಬರವು ಪ್ರಾಪ್ತವಾಗಿರುವದು. ತಿರುಹೂತ, ಲಕ್ಷ್ಮೀಪುರ, ಜೋನಪುರ, ಬರೇಲಿ, ಖಾನಪುರ ಈ ಪ್ರಾಂತ್ಯಗಳಲ್ಲಿ ನೆರೆಗಳಿಂದ ಬಹಳ ಹಾವಳಿಯು ಉಂಟಾಗಿರುವದು. ಗುಜರಾತು ಮತ್ತು ಕಾಥ್ಯಾವಾರದಲ್ಲಿಯೂ ಕಾಂಚಿ ಮತ್ತು ಬರೋಡೆ ಸಂಸ್ಥಾನಗಳಲ್ಲಿಯೂ ಮನುಷ್ಯರಿಗೆ ಬೇಕಾದ ದವಸಧಾನ್ಯಗಳಿಗೂ, ಜಾನುವಾರುಗಳಿಗೆ ಬೇಕಾದ ಮೇವಿಗೂ ತುಟ್ಟಿಯುಂಟಾಗಿರುವದು. ಸಿಂಧ ಮತ್ತು ರಾಜಪುತಾನದ ಕೆಲವು ಕಡೆಗಳಲ್ಲಿ ಸಹ ಬರವು ತಲೆದೋರುವ ಸಂಭವವಿರುವದು, ಪಶ್ಚಿಮ ಬಂಗಾಳದಲ್ಲಿ

ಪ್ರಕಟಣೆ.

ಉಟಾಕಮುಂಡ್, ತಾರೀಖು 27ನೇ ಆಗಸ್ಟು 1915ನೇ ಇಸವಿ.

ನಂ. 25 —

ಇಂಡಿಯಾ ಗವರ್ನ್ಮೆಂಟಿನವರ ಕ್ಲುಪ್ತ ವಾಯಿದೆಗೆ ಸಂದಾಯವಾಗುವ ಸಾಲವು.

ಪೋಸ್ಟ್ ಆಫೀಸಿನ ಮುಖಾಂತರ ಜನರು ಚಂದಾದಾರರಾಗುವ ವಿಷಯವಾಗಿ ಏರ್ಪಟ್ಟ ಶರ್ತಗಳ ಕುರಿತು ಪ್ರಕಟಣೆ.

ಗವರ್ನ್ಮೆಂಟಿನವರು ಈ ವರುಷದ ಸಾಲವನ್ನು ಒಂದು ಹೊಸ ವಿಧಾನದಲ್ಲಿ ಸೇಕಡಾ 4ರ ಬಡ್ಡಿಯಲ್ಲಿ ಎತ್ತುತ್ತಾರೆ. ಅದು 1923ನೇ ಇಸವಿಯ ನವಂಬರ್ ತಿಂಗಳೊಳಗಾಗಿ ಸಂಪೂರ್ಣವಾಗಿ ಮರುಪಾವತಿ ಮಾಡಲ್ಪಡುವದು, ಪರಂತು ಗವರ್ನ್ಮೆಂಟಿನವರಿಗೆ ಇಷ್ಟವಿದ್ದರೆ 1920ನೇ ಇಸವಿಯ ಅಕ್ಟೋಬರ್ ತಿಂಗಳ ತರುವಾಯ ಯಾವಕಾಲದಲ್ಲಾದರೂ ಪಾವತಿ ಮಾಡಲ್ಪಡಬಹುದು.

2 ಕಲ್ಕತ್ತಾ, ಮದ್ರಾಸ್, ಬೊಂಬಾಯಿ ಮತ್ತು ಇತರ ದೊಡ್ಡ ಮಧ್ಯಸ್ಥಳಗಳಲ್ಲಿ ವಾಡಿಕೆಯಾದ ರೀತಿಯಲ್ಲಿ ದರಖಾಸ್ತುಗಳನ್ನು ಅಂಗೀಕರಿಸಿ 4½ ಕೋಟಿ ರೂಪಾಯಿ ಈ ಮೊದಲೇ ಎತ್ತಲ್ಪಟ್ಟಿರುವುದು, ಮತ್ತು ಇಷ್ಟರ ಮಟ್ಟಿಗೆ ಸದರೀ ಸಾಲವು ಈಗ ಭರ್ತಿಯಾಗಿದೆ. ಆದರೆ ಅದು ವಿನಾ ಸಾಲವನ್ನು ಸಣ್ಣ ಮೊಬಲಗುಗಳಲ್ಲಿ ಕೊಡಲು ಇಷ್ಟವುಳ್ಳ ಜನರಿಗೆ, ಅವರು ಸೇವಿಂಗ್ಸ್ ಬ್ಯಾಂಕು ಡಿಪಾಜಿಟರರಾಗಿದ್ದರೂ ಅಲ್ಲದಿದ್ದರೂ, ಸೇವಿಂಗ್ಸ್ ಬ್ಯಾಂಕು ಕೆಲಸವನ್ನು ನಿರ್ವಹಿಸುವ ಅತ್ಯಂತ ಸಮೀಪದ ಪೋಸ್ಟ್ ಆಫೀಸಿನ ಮುಖಾಂತರ ಚಂದಾಕೊಡಲು ಒಂದು ವಿಶೇಷ ಸಂದರ್ಭವು ಕೊಡಲ್ಪಟ್ಟಿದೆ.

ಹೇಗೆ ಚಂದಾದಾರರಾಗುವದೆಂಬುದು.

3 ಅಕ್ಟೋಬರ್ 30ನೇ ತಾರೀಖಿನವರೆಗೆ ಯಾವಕಾಲದಲಾದರೂ ಟಪ್ಪಾಲ್ ಆಫೀಸಿನ ಮುಖಾಂತರ ಅರ್ಜಿಗಳನ್ನು ಮಾಡಬಹುದು.

4. ಅರ್ಜಿಗಳು ನೂರು ರೂಪಾಯಿ ಯಾ ಅದರ ಅಪವರ್ತ್ಯಗಳ ಬಗ್ಗೆ (ಎಂದರೆ ರೂ 100, 200, 300 ಈ ಮೇರೆಗೆ) ಮಾಡಲ್ಪಡಬೇಕು ಮತ್ತು ಯಾವನೊಬ್ಬ ಅರ್ಜಿದಾರನ ಸಂಗತಿಯಲಿ 100 ರೂಪಾಯಿಗಳಿಗೆ ಕಡಿಮೆಯಾಗಿ ಮತ್ತು 5,000 ರೂಪಾಯಿಗಳಿಗೆ ಮೀರಿ ಇರಕೂಡದು.

ಷರಾ — ಒಬ್ಬ ಅರ್ಜಿದಾರನು ಟಪ್ಪಾಲ್ ಆಫೀಸಿನ ಮುಖಾಂತರ ಈ ಮೊದಲೇ ಸೇಕಡಾ 3½ ದರದ ಬಡ್ಡಿಯುಳ್ಳ ಪ್ರಾಮಿಸರಿ ನೋಟುಗಳನ್ನು ಪಡೆದಿರುತ್ತಾನಾದರೂ 5,000 ರೂಪಾಯಿಗಳ ವರೆಗೆ ಹೊಸ ಸಾಲಕ್ಕೆ ಅರ್ಜಿಮಾಡಬಹುದು.

5 ಅರ್ಜಿಮಾಡಲು ಅಪೇಕ್ಷಿಸುವ ಒಬ್ಬ ಮನುಷ್ಯನು ಇದರಡಿ ಕೊಟ್ಟಿರುವ ಫಾರ್ಮನ್ನು ಬರಾಯಿಸಬೇಕು, ಸದರೀ ಫಾರ್ಮನ್ನು ಸೇವಿಂಗ್ಸ್ ಬ್ಯಾಂಕು ಕೆಲಸವು ನಿರ್ವಹಿಸಲ್ಪಡುವ ಪ್ರತಿ ಒಂದು ಟಪ್ಪಾಲ್ ಆಫೀಸಿನಿಂದ ಸಹಾ ಪಡೆಯಬಹುದು. ಆತನು ಎಷ್ಟು ಮೊಬಲಗಿಗೆ ಅರ್ಜಿಮಾಡುತಾನೋ ಆ ಪೂರಾ ಮೊಬಲಗನ್ನು ಆಗಲೇ ಪಾವತಿ ಮಾಡಬೇಕು. ಆತನು ಒಬ್ಬ ಸೇವಿಂಗ್ಸ್ ಬ್ಯಾಂಕು ಡಿಪೋಜಿಟರಾಗಿದ್ದ ಪಕ್ಷದಲ್ಲಿ ಆತನು ತನ್ನ ಸೇವಿಂಗ್ಸ್ ಬ್ಯಾಂಕು ಲೆಕ್ಕದಲ್ಲಿರುವ ಮೊಬಲಗನ್ನು ಈ ಬಗ್ಗೆ ಉಪಯೋಗಿಸಬಹುದು, ಅಥವಾ ಆತನು ಹಣವನ್ನು ರೊಕ್ಕವಾಗಿಯೂ ಕೊಡಬಹುದು. ಅರ್ಜಿದಾರನು ಟಪ್ಪಾಲ್ ಆಫೀಸಿಗೆ ಸ್ವತಃ ಹೋಗಬಹುದು ಅಥವಾ ಒಬ್ಬ ನೌಕರನನ್ನು ಕಳುಹಿಸಲೂ ಬಹುದು. ಪಾವತಿ ಮಾಡಲ್ಪಟ್ಟ ಯಾವತ್ತೂ ಮೊಬಲಗುಗಳಿಗೆ ರಸೀದು ಕೊಡಲ್ಪಡುವುದು.

6 ಅರ್ಜಿದಾರನು ಪಾವತಿಮಾಡುವ ಪ್ರತಿ 100 ರೂಪಾಯಿಗಳ ಬಗ್ಗೆ ಅಷ್ಟು ಮೊಬಲಗಿನ ಗವರ್ನ್ಮೆಂಟ್ ಪ್ರಾಮಿಸರಿ ನೋಟುಗಳು ಆತನಿಗೆ ಕೊಡಲ್ಪಡುವುವು.

ಪ್ರಾಮಿಸರಿ ನೋಟುಗಳ ತಾಬೆ

7 ನೋಟುಗಳನ್ನು ಅರ್ಜಿದಾರನು ತನ್ನ ಸ್ವಂತ ತಾಬೆಯಲ್ಲಿ ಇಟ್ಟುಕೊಳ್ಳಬಹುದು ಅಥವಾ ಆತನಿಗೆ ಇಷ್ಟವಿದ್ದರೆ ಆತನ ಬಗ್ಗಾಗಿ ಅವು ಪೋಸ್ಟ್ ಆಫೀಸ್ ಅಧಿಕಾರಿಗಳ ತಾಬೆಯಲಿ ಇಡಲ್ಪಡಬಹುದು. ಯಾವ ರೀತಿಯು ತನಗೆ ಇಷ್ಟವೆಂಬುದನ್ನು ಆತನು ಅರ್ಜಿಯ ಫಾರ್ಮನ್ನು ಬರಾಯಿಸುವಾಗಲೇ ಅದರಲ್ಲಿ ನಮೂದಿಸತಕ್ಕದ್ದು. ಆತನು ನೋಟುಗಳನ್ನು ತಾನೇ ಇಟ್ಟುಕೊಳ್ಳಲು ಅಪೇಕ್ಷಿಸುವದಾದರೆ ಅವು ಬಟವಾಡೆಗೆ ಸಿದ್ಧವಾದಾಗ ಆ ಕುರಿತು ಪೋಸ್ಟ್ ಆಫೀಸಿನವರು ಆತನಿಗೆ ತಿಳಿಯಪಡಿಸುವರು, ಮತ್ತು ಆತನು ಸ್ವತಃ ಹಾಜರಾದಲ್ಲಿ ಅವು ಆತನಿಗೆ ಕೊಡಲ್ಪಡುವವು. ಅವುಗಳನ್ನು ಟಪ್ಪಾಲ್ ಆಫೀಸಿನಲ್ಲಿಯೇ ಇಡಲು ಆತನು ನಿರ್ಣಯಿಸುವ ಪಕ್ಷದಲ್ಲಿ ಆತನು ಪುನಃ ಸ್ವತಃ ಹಾಜರಾಗಬೇಕೆಂದಿಲ್ಲಾ, ಆದರೆ ಟಪ್ಪಾಲ್ ಆಫೀಸಿನವರೇ ಅವು ತಲ್ಪಿರುತ್ತವೆ—ವ ಅವು ಆತನ ಬಗ್ಗಾಗಿ ತಾಬೆಯಲ್ಲಿಟ್ಟುಕೊಳ್ಳಲ್ಪಟ್ಟಿವೆ ಎಂಬುದನ್ನು ಕುರಿತು ಒಂದು ಸಮಾಚಾರ ಪತ್ರವನ್ನು ಸಕಾಲದಲಿ ಆತನಿಗೆ ಕಳುಹಿಸಿಕೊಡುವರು. ಸದರೀ ನೋಟುಗಳನ್ನು ತಾನೇ ಇಟ್ಟುಕೊಳ್ಳಲು ಆತನು ಮುಂದೆ ಯಾವಾಗಲಾದರೂ ಅಪೇಕ್ಷಿಸುವುದಾದರೆ ಆಗ ಅವು ಆತನ ವಶಕ್ಕೆ ಕೊಡಲ್ಪಡುವುವು.

ಬಡ್ಡಿಯನ್ನು ಪಾವತಿಮಾಡೋಣ.

8. ಸಾಲಿಯಾನಾ ಸೇಕಡಾ 4ರ ದರದ ಬಡ್ಡಿಯು ಅರ್ಧ ವರ್ಷಕೊಮ್ಮೆ ಪಾವತಿ ಮಾಡಲ್ಪಡುವದು. ಎಂದರೆ ಪ್ರತಿ ವರ್ಷದ ಮೇ 31ನೇ ತಾರೀಖಿಗೆ ಸೇಕಡಾ 2ರಂತೆಯೂ ನವಂಬರ್ 30ನೇ ತಾರೀಖಿಗೆ ಸೇಕಡಾ 2ರಂತೆಯೂ ಸಲಾಯಿಸಲ್ಪಡುವದು. ಅರ್ಜಿಯ ತಾರೀಖಿನಿಂದ ಬರುವ ನವಂಬರ್ 30ನೇ ತಾರೀಖಿನ ವರೆಗಿನ ಭಿನ್ನಾಂಶದ ಬಗ್ಗೆ ಬಡ್ಡಿಯು ಪ್ರಾಮಿಸರಿ ನೋಟುಗಳನ್ನು ಅರ್ಜಿದಾರನು ಸ್ವತಃ ಇಟ್ಟುಕೊಳ್ಳುವದಾದರೆ ಅವುಗಳನ್ನು ಬಟವಾಡೆಮಾಡುವ ಕಾಲದಲಿ ನಗದಾಗಿ ಕೊಡಲ್ಪಡುವದು, ಅಥವಾ ಆತನು ನೋಟುಗಳನ್ನು ಪೋಸ್ಟ್ ಆಫೀಸ್ ಅಧಿಕಾರಿಗಳ ತಾಬೆಯಲ್ಲಿಯೇ ಇಡುವದಾದರೆ ಮುಂದಿನ ಕಲಮಿನಲ್ಲಿ ನಮೂದಿಸಿರುವ ಸೇವಿಂಗ್ಸ್ ಬ್ಯಾಂಕು ಲೆಕ್ಕದಲ್ಲಿ ಆತನ ಬಗ್ಗೆ ಜಮಾ ದಾಖಲುಮಾಡಲ್ಪಡುವದು.

9. ಅರ್ಜಿದಾರನು ತನ್ನ ಪ್ರಾಮಿಸರಿ ನೋಟುಗಳನ್ನು ಪೋಸ್ಟ್ ಆಫೀಸ್ ಅಧಿಕಾರಿಗಳ ತಾಬೆಯಲ್ಲಿಯೇ ಇಡಲು ನಿರ್ಣಯಿಸಿದ ಪಕ್ಷದಲ್ಲಿ ಪೋಸ್ಟ್ ಆಫೀಸ್ ಅಧಿಕಾರಿಗಳು ಪ್ರತಿ ಅರ್ಧ ವರ್ಷಕೊಮ್ಮೆ ಆತನ ಬಗ್ಗಾಗಿ ಬಡ್ಡಿಯನ್ನು ಪಡಕೊಂಡು ಈ ಬಗ್ಗಾಗಿ ಆತನ ಹೆಸರಲ್ಲಿ ಇಡಲ್ಪಡುವ ಒಂದು ಸೇವಿಂಗ್ಸ್ ಬ್ಯಾಂಕು ಲೆಕ್ಕದಲ್ಲಿ ಜಮಾ ದಾಖಲ್ ಮಾಡುವರು. ಇದಲ್ಲದೆ ಈ ಮೇರೆಗೆ ಬಡ್ಡಿಯನ್ನು ಪಡೆದುಕೊಂಡಾಗಲೆಲ್ಲಾ ಪೋಸ್ಟ್ ಆಫೀಸಿನವರು ಆಯಾಕಾಲದಲ್ಲಿ ಆತನಿಗೆ ಆ ಕುರಿತು ತಿಳಿಯಪಡಿಸುವರು. ಈ ಕೆಲಸದ ಬಗ್ಗೆ ಯಾವ ಫೀಸೂ ಹೊರಿಸಲ್ಪಡಲಿಕ್ಕಿಲ್ಲ ಮತ್ತು, ಅರ್ಧ ವರ್ಷದ ಬಡ್ಡಿಯ ಮೊಬಲಗನ್ನು ಪಾವತಿಮಾಡುವಾಗ ಇನ್‌ಕಮ್‌ಟ್ಯಾಕ್ಸು ಯಾವದೂ ಅದರಿಂದ ವಜಾಮಾಡಲ್ಪಡಲಿಕ್ಕಿಲ್ಲ.

ಆತನು ಪ್ರಾಮಿಸರಿ ನೋಟುಗಳನ್ನು ಸ್ವತಃ ಇಟ್ಟುಕೊಳ್ಳುತ್ತಾನಾದರೆ ಅರ್ಧ ವರ್ಷದ ಬಡ್ಡಿಯ ಮೊಬಲಗು ಪಾವತಿಮಾಡುವ ಕಾಲದಲ್ಲಿ ವಾಡಿಕೆಯಂತೆ, ಬಡ್ಡಿಯ ಮೊಬಲಿಗಿನಿಂದ ಇನ್‌ಕಮ್‌ಟ್ಯಾಕ್ಸು ವಜಾಮಾಡಲ್ಪಡುವದು.

ಪ್ರಾಮಿಸರಿ ನೋಟುಗಳನ್ನು ವಿಕ್ರಯಿಸೋಣ.

10. ಇದರಲ್ಲಿ ವಿವರಿಸೋಣಾದ ನಡವಳಿಕೆಯ ಮೇರೆಗೆ ಪೋಸ್ಟ್ ಆಫೀಸಿನ ಮುಖಾಂತರ ಕೊಂಡುಕೊಳ್ಳಲ್ಪಟ್ಟ ಈ ಹೊಸ ಸಾಲದ ಬಾಬತು ಪ್ರಾಮಿಸರಿ ನೋಟುಗಳನ್ನು ಹೊಂದಿರುವ ಒಬ್ಬ ಸೇವಿಂಗ್ಸ್ ಬ್ಯಾಂಕು ಡಿಪಾಜಿಟರನು ಯಾವ ಕಾಲದಲ್ಲಾದರೂ ಅವುಗಳನ್ನು ಯಾ ಅವುಗಳ ಯಾವದೊಂದು ಭಾಗವನ್ನು ವಿಕ್ರಯಿಸಲಿಕ್ಕೆ ಅಪೇಕ್ಷಿಸುತ್ತಾನಾದರೆ ಆತನ ಬಗ್ಗೆ ಪೋಸ್ಟ್ ಆಫೀಸಿನವರು ದಲಾಲಿ ಯಾ ಇತರ ಫೀಸುಗಳನ್ನು ಹೊರಿಸದೇನೆ ಅದರ ಕುರಿತು ವಿಲೇವಾರಿ ಮಾಡುವರು. ಇದರ ವಿಷಯ ಪೂರ್ಣ ಮಾಹಿತಿಯನ್ನು ಪೋಸ್ಟ್ ಆಫೀಸಿನಿಂದ ಯಾವ ಕಾಲದಲ್ಲಾದರೂ ಹೊಂದಬಹುದು.

ಅರ್ಜಿಯ ಫಾರ್ಮು.

ನಾದ ನಾನು 1915ನೇ ಇಸವಿಯ ಜುಲಾಯಿ 28ನೇ ತಾರೀಖಿನ ಇಂಡಿಯಾ ಗೆಜೇಟಿನ ವಿಶೇಷ (ಎಕ್ಸ್‌ಟ್ರಾರ್ಡಿನೆರಿ) ಸಂಚಿಕೆಯಾಗಿ ಫಾಯಿಷ್‌ಮಾಡಲ್ಪಟ್ಟ ಇಸ್ತಿಹಾರಿನಲ್ಲಿ ಪ್ರಕಟಿಸಲ್ಪಟ್ಟ ಕ್ರಿಸ್ತವಾಯಿದೆಗೆ ಸಂದಾಯವಾಗುವ ಸೇಕಡಾ ನಾಲ್ಕರ ಬಡ್ಡಿಯ ಸಾಲದ ಬಗ್ಗೆ ರೂ. ನ್ನು ಚಂದಾ ಕೊಡಲು ಈ ಮೂಲಕ ಅಪೇಕ್ಷಿಸುತ್ತೇನೆ.

ನಾನು ದರಖಾಸ್ತುಮಾಡಿದ ಸಾಲದ ಮೊಬಲಗು ಆಗಿರುವ ರೂ. ನ್ನು ನೂರಕ್ಕೆ ನೂರರಂತೆ ಪೂರಾ ಇದರೊಡನೆ ರೇವಣಿ ಇಟ್ಟಿರುತ್ತೇನೆ.

ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕಿನಲ್ಲಿ ನನ್ನ ಲೆಕ್ಕದಲ್ಲಿ ಜಮಾ ಇರುವ ಮೊಬಲಗಿನ ಪೈಕಿ ನೂರಕ್ಕೆ ನೂರರಂತೆ ನಾನು ದರಖಾಸ್ತುಮಾಡಿದ ಸಾಲದ ಮೊಬಲಗಿಗೆ ಸರಿಯಾಗಿರುವ ರೂ. ನ್ನು ಈ ಬಗ್ಗಾಗಿ ಉಪಯೋಗಿಸಿಕೊಳ್ಳಬಹುದಾಗಿ ನಾನು ಅಪೇಕ್ಷಿಸುತ್ತೇನೆ.

ನೂರಕ್ಕೆ ನೂರರಂತೆ ನಾನು ದರಖಾಸ್ತುಮಾಡಿದ ಸಾಲದ ಮೊಬಲಿಗಿನ ಪೈಕಿ ರೂ. ಈ ಮೂಲವಾಗಿ ರೇವಣಿ ಇಟ್ಟಿರುತ್ತೇನೆ; ಮತ್ತು ಉಳಿದ ಮೊಬಲಗು ಎಂದರೆ ರೂ. ನ್ನು ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕಿನಲ್ಲಿ ನನ್ನ ಲೆಕ್ಕದಲ್ಲಿ ಜಮೆ ಇರುವ ಮೊಬಲಗಿನಿಂದ ಉಪಯೋಗಿಸಿಕೊಳ್ಳಬೇಕಾಗಿ ಅಪೇಕ್ಷಿಸುತ್ತೇನೆ.

ಅನಾವಶ್ಯಕವಾದ ವಾಕ್ಯಗಳನ್ನು ಹೊಡೆದುಬಿಡತಕ್ಕದ್ದು.

ನನ್ನಿಂದ ಅಂಗೀಕರಿಸಲ್ಪಟ್ಟ ಸಾಲದ ಮೊಬಲಗನ್ನು ನನ್ನ ಬಗ್ಗೆ ಪೋಸ್ಟ್ ಮತ್ತು ಟೆಲಿಗ್ರಾಫ್ ಇಲಾಖೆಯ ಅಕೌಂಟಾಂಟ್ ಜನರಲ್‌ರವರು ಇಟ್ಟುಕೊಳ್ಳಬಹುದಾಗಿ ಮತ್ತು ಆ ಬಾಬತು ಬಡ್ಡಿಯು ನನ್ನ ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕು ಲೆಕ್ಕದಲ್ಲಿ ಆಯಾ ವಾಯಿದೆಗೆ ಜಮಾ ದಾಖಲುಮಾಡಬೇಕಾಗಿ ನಾನು ಅಪೇಕ್ಷಿಸುತ್ತೇನೆ.

ನನ್ನಿಂಗೆ ಅಂಗೀಕರಿಸಲ್ಪಟ್ಟ ಮೊಬಲಗಿನ ಬಗ್ಗೆ ಈ ಕೆಳಗಿನ " ಮೌಲ್ಯಗಳ ಪ್ರಾಮಿಸರಿ ನೋಟುಗಳು ನನಗೆ ಕೊಡಲ್ಪಡಬೇಕಾಗಿ ಅಪೇಕ್ಷಿಸುತ್ತೇನೆ.

ಅನಾವಶ್ಯಕವಾದ ವಾಕ್ಯಗಳನ್ನು ಹೊಡೆದುಬಿಡತಕ್ಕದ್ದು.

ಹೆಸರು

ವಿಳಾಸ

ತಾರೀಖು 1915.

ಅವಶ್ಯವಿದ್ದರೆ ಇಲ್ಲಿ ಕೊಟ್ಟಿರುವ ಫಾರ್ಮನ್ನೇ ಕತ್ತರಿಸಿ ಉಪಯೋಗಿಸಬಹುದು.)

ಎ. ಬಟ್ಟರ್‌ವರ್ತ್,

ಚೀಫ್ ಸೆಕ್ರೆಟರಿ.

ಬಂಕುರಾ ಜಿಲ್ಲೆಯಲ್ಲಿಯೂ, ಮಿಡ್ನಾಪುರಕೆಲವು ಪ್ರಾಂತ್ಯಗಳಲ್ಲಿಯೂ ಆಹಾರ ಸಾಮಾಗ್ರಿಗಳ ಅಡಚಣೆಯು ವಿಶೇಷವಿರುವದು

~~~~~

ಕಲ್ಕತ್ತೆಯ ಸಾಧಾರಣ ಬ್ರಹ್ಮಸಮಾಜದ ಮೆಂಬರರು ಬಂಕುರಾ ಮೊದಲಾದ ಪ್ರಾಂತ್ಯಗಳಲ್ಲಿ ಕ್ಷಾಮ ನಿವಾರಣೆಯ ಕೆಲಸವನ್ನು ಕೈಕೊಂಡಿರುವರು. ಈ ಸಮಾಜದವರು ಪ್ರಾರಂಭಿಸಿರುವ ನಿವಾರಣಾ ಪ್ರಯತ್ನಗಳ ಸಹಾಯಾರ್ಥವಾಗಿ ಹೈದರಾಬಾದಿನ ನಿಜಾಮರವರೂ ಕಾಸಿಂಬಜಾರಿನ ಮಹಾರಾಜರವರೂ ರೂ ೫೦೦ರಂತೆ ಕೊಟ್ಟಿರುವರು.

~~~~~

ಗುಜರಾತು ಮತ್ತು ಕಾಠ್ಯಾವಾಡ ಪ್ರಾಂತ್ಯಗಳ ಹಲವು ಕಡೆಗಳಲ್ಲಿ ಸಕಾಲದಲ್ಲಿ ಮಳೆ ಬಂದಿರುವದಾದರೂ ಕ್ಷಾಮ ಸಂಭವವು ಕಡಮೆತೋರದು. ವ್ಯವಸಾಯಗಾರರ ನೀರಿನ ಅಡಚಣೆಯನ್ನು ನಿವಾರಿಸುವ ಬಗ್ಗೆ ೧೦ ಲಕ್ಷ ರೂಪಾಯಿಗಳ ಬಂಡವಾಳದ ಒಂದು ಕಂಪೆನಿಯನ್ನು ಏರ್ಪಡಿಸಲು ಉದ್ದೇಶಿಸಿರುವರು. ನದಿ, ಕೆರೆ, ಬಾವಿ, ತೋಡು ಮೊದಲಾದವುಗಳಿಂದ ಇಂಜಿನ ಮೋಟಾರ್ ಮೊದಲಾದವುಗಳ ಮೂಲಕ ನೀರನ್ನು ಅತ್ತಿತ್ತ ಮಾಡಬೇಕೆಂತ ನಿಶ್ಚಯಿಸಿರುವರು.

~~~~~

ವೃತ್ತಿಯಿಲ್ಲದ ಪಾರಸಿಗಳವರಿಗೆ ವೃತ್ತಿಯನ್ನು ಕಲ್ಪಿಸಿಕೊಡಲು ಒಂದು ಮಂಡಳಿಯನ್ನು ಪಾರ್ಸಿ ಎಸೋಸಿಯೇಶನ್ ನವರು ಮಾಡಿರುವರು. ಆಶ್ರಿತ ರಾಜರುಗಳ ಸಂಸ್ಥಾನಗಳಲ್ಲಿ ವ್ಯವಸಾಯಕ್ಕೆ ಉಪಯುಕ್ತವಾದ ವಿಸ್ತಾರವಾದ ಸ್ಥಳಗಳನ್ನು ಪಡಕೊಂಡು ಈ ಸ್ಥಳಗಳಲ್ಲಿ ವೃತ್ತಿಯಿಲ್ಲದವರಿಗೆ ವೃತ್ತಿಯನ್ನು ಕೊಡಲು [illegible] ನಿಶ್ಚಯಿಸಿರುವರು.

~~~~~

ದಕ್ಷಿಣ ಹಿಂದೂಸ್ಥಾನ

~~~~~

ಇದೇ ಬರುವ ದಸಂಬರ ತಿಂಗಳಲ್ಲಿ ಮದ್ರಾಸಿನಲ್ಲಿ ಅಖಿಲ ಭಾರತ ವರ್ಷದ ಏಳನೇ ಆಯುರ್ವೇದಿಕ ಮಹಾಸಭೆಯು ಜರಗುವದು. ಇದರೊಂದಿಗೆ ಈ ವೈದ್ಯಕ ವಿದ್ಯೆಗೆ ಸಂಬಂಧಪಟ್ಟ ವಸ್ತುಗಳ ಪ್ರದರ್ಶನವು ಏರ್ಪಡಿಸಲ್ಪಡುವದಾಗಿ ತಿಳಿಯುತ್ತೇವೆ. ಪ್ರದರ್ಶನವು ದಸಂಬರ ತಿಂಗಳ ತಾ ೧೭ರಿಂದ ೩೧ರ ವರೆಗೆ ಇರುವದು. ಆಯುರ್ವೇದ ವಿದ್ಯೆಯ ಪರವಾಗಿ ಜನರಲ್ಲಿ ಆಸಕ್ತಿಯನ್ನೂ, ಅಭಿರುಚಿಯನ್ನೂ ಉಂಟುಮಾಡಿ ಈ ವಿದ್ಯಾಭಿವೃದ್ಧಿಯ ಪ್ರಯತ್ನಗಳಿಗೆ ಪ್ರೋತ್ಸಾಹವನ್ನು ದೊರಕಿಸಿಕೊಡುವದು ಈ ಪ್ರದರ್ಶನದ ಮುಖ್ಯ ಉದ್ದೇಶವಾಗಿರುವದು. ವಿಶೇಷವಾದ ಗಿಡಮೂಲಿಕೆಗಳು, ಪುಷ್ಪಗಳು, ಫಲಗಳು, ಬೀಜಗಳು, ಕೆತ್ತೆ ಇತ್ಯಾದಿಗಳು, ಲೋಹಧಾತುಗಳು, ಖನಿಜಗಳು, ರಸ ಇತ್ಯಾದಿಗಳು—ಕಸ್ತೂರಿ, ಗೋರೋಜನ, ಪುಣುಗು, ಹವಳ, ಮುತ್ತು ಮೊದಲಾದವುಗಳು—ಆಸವ, ಅರಿಷ್ಟ, ಲೇಹ, ಚೂರ್ಣ, ತೈಲ್ಯ, ಘೃತ, ಮೋದಕ ರಸಕ್ರಿಯಾ—ಭಸ್ಮ, ಸಿಂಧೂರ, ಸತ್ವ ಮೊದಲಾದವುಗಳು—ಶಾಸ್ತ್ರೋಪಕರಣಗಳು, ಶಸ್ತ್ರಗಳು, ಪಾತ್ರಗಳು ಇತ್ಯಾದಿ—ಇನ್ನೂ ಹಲವು ಬಗೆಯ ವಸ್ತುಗಳ ದೇಖಾವೆಗಳನ್ನು ಈ ಪ್ರದರ್ಶನದಲ್ಲಿ ಇರಗೊಡಿಸಬೇಕೆಂತ ನಿರ್ಣಯಿಸಿರುತ್ತಾರೆ.

ಆಯುರ್ವೇದ ವಿದ್ಯೆಯಲ್ಲಿ ಅಭಿರುಚಿಯುಳ್ಳವರಿಗೂ ಇದರ ವಿಶೇಷತ್ವವನ್ನು ತಿಳಕೊಳ್ಳಬೇಕೆಂತಿರುವವರಿಗೂ ಇದು ಅನುಕೂಲವಾದ ಸಂದರ್ಭವಾಗಿರುತ್ತದೆ. ಈ ಶಾಸ್ತ್ರೋಕ್ತ ಔಷದಿಗಳನ್ನು ಸಿದ್ಧಪಡಿಸುವವರು ಈ ಪ್ರಾಂತ್ಯಗಳಲ್ಲಿ ಹಲವರಿರುವದರಿಂದ ತಾವು ತಯ್ಯಾರಿಸುವ ಔಷದಿಗಳನ್ನು ಈ ಪ್ರದರ್ಶನಕ್ಕೆ ಕಳುಹಿಸಿಕೊಟ್ಟು ಬಹುಮಾನವನ್ನು ಪಡೆಯಬಹುದು. ಅಥವಾ ಇಂಥಾ ಪ್ರದರ್ಶನವನ್ನು ಹೋಗಿ ಸಂದರ್ಶಿಸುವದರಿಂದ ತಮ್ಮಲ್ಲಿರಬಹುದಾದ ಕುಂದಕಗಳನ್ನು ತಿದ್ದಿಕೊಳ್ಳಬಹುದು. ಈ ಮಹಾಸಭೆಯನ್ನೂ, ಪ್ರದರ್ಶನವನ್ನೂ ಏರ್ಪಡಿಸಿದ ಮದ್ರಾಸಿನ ಮುಂದಾಳುಗಳು ದಕ್ಷಿಣ ಹಿಂದೂಸ್ಥಾನದ ಸರ್ವ ಕಡೆಗಳಿಂದಲೂ ಸಹಕಾರ ಪ್ರೋತ್ಸಾಹಗಳನ್ನು ನಿರೀಕ್ಷಿಸುತ್ತಿರುವರು. ಇಂಥವರ ಶ್ರಮವನ್ನು ನಮ್ಮ ಪ್ರಾಂತ್ಯದವರು ಸಾರ್ಥಕಪಡಿಸಬೇಕೆಂತಲೂ ಮಹಾಸಭೆಯು ಮತ್ತು ಪ್ರದರ್ಶನಗಳ ಪ್ರಯೋಜನದಲ್ಲಿ ಭಾಗಿಗಳಾಗಬೇಕೆಂದೂ ವಿಜ್ಞಾಪಿಸಿಕೊಂಡಿರುತ್ತಾರೆ

~~~~~

ಸರಕಾರದ ಇತರ ಇಲಾಖೆಗಳಲ್ಲಿ ಕಾರ್ಯಕರ್ತರುಗಳ ಸಂಬಳವು ಹೆಚ್ಚಿಸೋಣಾಗಿ ಕೆಲವು ವರುಷಗಳಾಗಿ ಹೋದರೂ ರಜಿಸ್ಟ್ರೇಶನ್ ಇಲಾಖೆಯವರ ಸಂಬಳವು ಇದೇ ರೀತಿ ಹೆಚ್ಚಿಸೋಣಾಗದೆ ಮೊದಲಿನಂತೆಯೇ ಇತ್ತು. ಈ ಇಲಾಖೆಯವರ ಸಂಬಳವನ್ನು ಸಹ ಹೆಚ್ಚಿಸುವ ವಿಷಯದಲ್ಲಿ ಇಂಡಿಯಾ ಸರಕಾರದವರ ಸಂಕನು ದೊರಕಿರುವದಾಗಿ ತಿಳಿಯುತ್ತೇವೆ

ಈ ತಿಂಗಳ ತಾ ೧೭, ೧೮, ೧೯ ಮತ್ತು ೨೦ನೆಯ ತಾರೀಕುಗಳಲ್ಲಿ ಮೈಸೂರಿನ ಶ್ರೀಮನ್ಮಹಾರಾಜರವರ ಆಶ್ರಯದಲ್ಲಿ ಪಕ್ಷಿಗಳ, ಜಟಕಾಗಾಡಿಯ ಕುದುರೆಗಳ ಮತ್ತು ಎತ್ತುಗಳ ಬಗೆಯ ಕತ್ತೆಗಳ, ಪಂದ್ಯದ ಕುದುರೆಗಳ ಪ್ರದರ್ಶನವು ಮೈಸೂರಿನ ಕುದುರೆಗಳ ಜೂಜಿನ ಮೈದಾನದಲ್ಲಿ ನಡೆಸಲ್ಪಡುವದಾಗಿ ತಿಳಿಯುತ್ತೇವೆ

ಛಾಪಖಾನೆಗಳ ಕೆಲಸ ಮಾಹಿತಿಯನ್ನು ಕಲಿಸಿಕೊಡುವದಕ್ಕೆ ಬರುವ ನವಂಬರ ೧ನೆಯ ತಾರೀಕಿನಿಂದ ಬೆಂಗಳೂರಿನ ಸೆಂಟ್ರಲ್ ಪ್ರೆಸ್ಸಿನಲ್ಲಿ ಆರು ತಿಂಗಳ ವರೆಗೆ ಒಂದು ಕ್ಲಾಸನ್ನು ಪರೀಕ್ಷಾರ್ಥವಾಗಿ ನಡಸುವರೆಂತ ತಿಳಿಯುತ್ತೇವೆ

~~~~~

ದಕ್ಷಿಣ ಕನ್ನಡ.

~~~~~

ಹೊಸದುರ್ಗ:— 'ಕರ್ಕಡ ಮಾಸಂ ಕತ್ತಿರ್ [illegible]' ಎಂಬ ಮಲೆಯಾಳಿ ಮಾತು ಇರುತ್ತದೆ. ನಿಜವಾದ ಕರ್ಕಡಮಾಸದಲ್ಲಿ ಮಳೆ ಇದ್ದು ದಿವಸಗಳು ಮೋಡದಿಂದ ಕವಿಯಲ್ಪಡದಿದ್ದರೂ ಈಗ ಕನ್ನಿಮಾಸದಲ್ಲಿ ಮಳೆಯ ಅವಸ್ಥೆ ನೋಡುವಾಗ ಮೇಲಿನ ಮಲೆಯಾಳಿ ಮಾತು ನೆನಪಿಗೆ ಬರುತ್ತದೆ.

ಬೆಳೆಕಟಾವು ಕೆಲಸದ ಜೋರು. ಗದ್ದೆಯಲ್ಲಿ ಪೈರು ಹಣ್ಣಾಗಿ ಕಟಾವಿಗೆ ತಯಾರಾಗಿರುತ್ತೆ. ಆದರೆ ಕಟಾವಿಗೆ ಶುರುಮಾಡುವವರಿಗೆ ಗದ್ದೆಯಲ್ಲಿ ಸೊಂಟಕ್ಕಿಂತಲೂ ಹೆಚ್ಚು ನೀರುನಿಂತ ಸಮ್ಮಂಧ ಬಹಳ ಕಷ್ಟ. ಮೊದಲೆ ಕಟಾವಿಗೆ ಶುರುಮಾಡಿ ಅಂಗಳದಲ್ಲಿ ವೈಯ್ಯೋಣಾದ ಪೈರಿನ ಗತಿಯು ಹೇಳತಕ್ಕದ್ದಲ್ಲಾ. ಮಳೆಸಂಬಂಧ ಭತ್ತದ ಮಣಿಗಳು ತನ್ನಷ್ಟಕ್ಕೆ ಉದುರಿ ಜಾಲಿನಲ್ಲಿಯೇ ಮೊಳಕೆ ಬರುತ್ತದೆ. ಇದು ಹೆಚ್ಚಿನ ನಷ್ಟ. ಕಾಲಕ್ಷೇಪವಾದರೂ ಅತ್ಯಂತ ಸಂಕಷ್ಟಕರದ್ದು. ಇತ್ತಲಾಗೆ ಹಳೇ ಅಕ್ಕಿಯೂ ಇಲ್ಲ. ಹೊಸ ಅಕ್ಕಿ ದೃಷ್ಟಿಗೆ ಕಾಣೆ. ಬಡವರ ಗೋಳು ಹೇಳತಕ್ಕದ್ದಲ್ಲ

ಇಲ್ಲಿಯ ಲೋಕಲ್‌ಫಂಡ ಆಸ್ಪತ್ರೆಯಲ್ಲಿ ಇತ್ತಲಾಗೆ ಹೊಸತಾಗಿ ಒಬ್ಬ ಕಂಪೌಂಡರನನ್ನು ನೇಮಿಸಿದ್ದು ಬಹಳ ಸಂತೋಷಕರವಾದ ಮತ್ತು ಉಪಯೋಗಕರವಾದ ವಾರ್ತೆಯಾಗಿರುತ್ತದೆ

ಇಲ್ಲಿ ಅನೇಕ ಸಾರಿ ಕಳವು ಮಾಡಿ ಕಾರಾಗ್ರಹದ ಅನುಭವವನ್ನು ಪಡೆದು ಚೋರರಲ್ಲಿ ಶಿಖಾಮಣಿ ಎಂದು ಹೆಸರುಪಡೆದ ಬೆಳ್ಳಿಕೊಟ್ಟನೆಂಬೊಬ್ಬ ಬಿಲ್ಲರವನು ಇನ್ನೊಬ್ಬ ಬಿಲ್ಲರವನ ಮನೆಗೆ ಕನ್ನ ಹಾಕಿ ಕೆಲವು ಬಟ್ಟಲುಗಳು ಮೊದಲಾದ ಸಾಮಾನುಗಳನ್ನು ಕಳವು ಮಾಡಿ, ಯಾರು ಅರಿಯದಂತೆ ಅವುಗಳ ಪೈಕಿ ಕೆಲವುಗಳನ್ನು ತನ್ನ ಮನೆಯ ಸಮೀಪ ಹೂಣಿಟ್ಟು, ಬಾಕಿ ಕೆಲವುಗಳನ್ನು ತತ್ಕಾಲದ ಖರ್ಚಿಗೋಸ್ಕರ ತನ್ನ ಆಪ್ತನೊಬ್ಬನ ಕೂಡೆ ಅಡವಿಟ್ಟು ಮುಂದಿನ ಖರ್ಚಿಗೆ ದಾರಿಮಾಡಿಕೊಂಡಿರುತ್ತಿದ್ದ.

ಕೆಲವು ದಿವಸಗಳಲ್ಲಿಯೇ ಪೋಲಿಸಿನವರು ನಿಜವಾದ ವರ್ತಮಾನ ಸಂಗ್ರಹದಿಂದ ಸದರಿ ಕಳ್ಳನನ್ನು ಹಿಡಿದು ಗ್ರಾಮ ಪಟೇಲರ ವ ಬೇರೆ ಗೃಹಸ್ಥರ ಸಮಕ್ಷಮ, ಕಳ್ಳನ ಕಬೂಲಾತಿಯ ಮೇರೆಗೆ ಕಳವು ಬಿಂದಿಗೆಗಳನ್ನು ಪತ್ತೆಮಾಡಿ ಹೊಸದುರ್ಗ ಸಬ್ ಮೆಜಿಸ್ಟ್ರೇಟರ ಮುಂದೆ ನಡಿಸಿದ ಮೊಕದ್ದಮೆಯಲ್ಲಿ ಸದರಿ ಕಳ್ಳನು ಮಂಗಳೂರು ಸೆಶ್ಶನ್ಸ ಕೋರ್ಟಿಗೆ ಕಮಿಟ್‌ಮಾಡಲ್ಪಟ್ಟನು.

ಪತ್ತೆಮಾಡಲ್ಪಟ್ಟ ಸಾಮಾನುಗಳು ಕಳವಿನ ಬಿಂದಿಗೆಗಳೆಂದೂ ಅವುಗಳ ಪೈಕಿ ಕೆಲವುಗಳು ಕಳವಿನ ಅಲ್ಪಕಾಲದಲ್ಲಿಯೇ ಕಳ್ಳನಿಂದ ಅಡವು ಇಡಲ್ಪಟ್ಟವುಗಳೆಂದೂ ಗ್ರಾಮ ಪಟೇಲರ ವ ಬೇರೆ ಮರ್ಯಾದಸ್ಥರಾದ ಸಾಕ್ಷಿಗಳ ಮೂಲಕ ಯೋಗ್ಯ ರೀತಿಯಿಂದ ರುಜುಮಾಡಲ್ಪಟ್ಟಿತು.

ಹೀಗಿರುತ್ತಾ ಸೆಶ್ಶನ್ಸ ಕೋರ್ಟಿನಲ್ಲಿ ಮೊಕದ್ದಮೆಯ ತೀರ್ಪಿಗೆ ನೇಮಿಸಲ್ಪಟ್ಟ ಜೂರಿಯವರು ಕೋರ್ಟಿನವರಿಗೂ ವ ಪೋಲೀಸನವರಿಗೂ ವಿಸ್ಮಯವಾಗುವಂತೆ ಮುದ್ದೆಯಾಳಿಯು ಅಪರಾಧಿಯಲ್ಲವೆಂದು ತಮ್ಮ ತೀರ್ಮಾನವನ್ನು ತಿಳಿಯಪಡಿಸಿದರು

ಜೂರಿಯವರ ತೀರ್ಮಾನವು ಹೆಚ್ಚಾಗಿ ಹ್ಯಾಕೋರ್ಟಿನಲ್ಲಿ ಅಂಗೀಕರಿಸಲ್ಪಡುವದೇ ಅಲ್ಲದೆ ಅದು ತಳ್ಳಲ್ಪಡುವದು ಬಹಳ ಕಡಿಮೆ. ಆದರೆ ಈ ಮೊಕದ್ದಮೆಯಲ್ಲಿ ಅವರ ತೀರ್ಮಾನವು ರುಜುವಾತಿಗೂ ಕಾನೂನಿಗೂ ವಿರೋಧವಾಗಿದೆ ಎಂದು ಸೆಶ್ಶನ್ಸ ಜಡ್ಜರು ಮಾಡಿಕೊಂಡ ಮನವಿಯನ್ನು ಹ್ಯಾಕೋರ್ಟಿನವರು ಪರ್ಯಾಲೋಚಿಸಿ ಜೂರಿಯವರ ತೀರ್ಮಾನವನ್ನು ಪೂರ್ಣವಾಗಿ ತಳ್ಳಿಬಿಟ್ಟು ಮುದ್ದೆಯಾಳಿಗೆ ಐದು ವರ್ಷದ ಕಾರಾಗ್ರಹಕ್ಕೆ ಗುರಿಮಾಡಿದ್ದಾರೆ. ಜೂರಿಯವರ ತೀರ್ಮಾನವನ್ನು ರದ್ದುಪಡಿಸುವರೆ ಹ್ಯಾಕೋರ್ಟಿನವರಿಗೆ ಅಧಿಕಾರವಿಟ್ಟದ್ದು ಈ ಮೊಕದ್ದಮೆಯಲ್ಲಿ ಎಷ್ಟೋ ಉಪಕಾರವಾಯಿತು.

ಚೋರಗತಿಯಾದರೋ ದೇವರು ಕೊಟ್ಟರೂ ಪೂಜಾರಿ ಬಿಡ ಎಂಬಂತೆ ಆಯಿತು. ಅದ್ದರೆ ಊರ ಜನರಿಗೆ ಈ ಚೋರನ ಬಾಧೆಯು ಇನ್ನು ಐದು ವರ್ಷದ ಪರ್ಯಂತರ ಇರಲಾರದೆಂದು ಪೂರ್ಣ ಸಂತೋಷವಾಗಿದೆ.

[illegible] — ಇಲ್ಲಿಯ ರೈಲ್ವೆ ಆಫೀಸಿನಿಂದ [illegible] ಹೋಗಬೇಕಾದರೆ ಮಟಲ್ಯಾ ಎಂಬ ಗುಡ್ಡೆಯಿಂದ ಹೋಗಬೇಕಾಗಿರುತ್ತದೆ. ಮಳೆಗಾಲದಲ್ಲಿ [illegible] ಅಂಥಾದ್ದು ಸಹ ಶರುತ್ತದೆ. ಹಿಂದೆ [illegible] ಮಳೆಗಾಲದಲ್ಲಿ ಈ ದಾರಿಯಿಂದ [illegible] ಮರದತುಂಡು ಮುರಿದು, ತೋಡಿ ನಲ್ಲಿ ಬಿದ್ದು [illegible] ತೊಂದರೆಯಲ್ಲಿ ಬಿದ್ದಿದ್ದಾರೆ; ಆದರೆ [illegible] ಎಂಬದು ನಿಜ. ಅಂಥಾ [illegible] ಮುಂಚೆಯೇ ಸದರಿ ಸಂಕವನ್ನು ಸರಕಾರದವರು ಸರಿಪಡಿಸುವರಾಗಿ ನಂಬುತ್ತೇವೆ.

~~~~~

[illegible] — ಉಪ್ಪಿನಂಗಡಿ ತಾಲೂಕಿನ ಸುಬ್ರಹ್ಮಣ್ಯ ಗ್ರಾಮದ ಕುಲಗುಂದದಲ್ಲಿ ವರುಷಂಪ್ರತಿ ಆಗುವ [illegible] ಸಂತೆಯು ಈ ವರ್ಷದ ನವಂಬರ ತಾರೀಕು [illegible]ಕ್ಕೆ ಶುರುವಾಗಿ ದಶಂಬರ ತಾ. [illegible]ಕ್ಕೆ ಅಂತ್ಯವಾಗುವ ಹಾಗೆ ಪ್ರಕಟಿಸಿರುತ್ತಾರೆ.

[illegible] ಶ್ಯಾನುಭೋಗರಿಗೆ ಮತ್ತು ಶ್ಯಾನುಭೋಗಿ ಉಮೇ[illegible] ತರ್ಬೇತು ಹೊಂದುವ ಒಗ್ಗೆ ಇದೇ ನವಂಬರ [illegible]ರಿಂದ ದಶಂಬರ [illegible] ವರೇಗೆ ಮಂಗಳೂರ [illegible] ತಾ. [illegible]ರಿಂದ ದಶಂಬರ [illegible] ವರೆಗೆ [illegible] ನವಂಬರ [illegible]ರಿಂದ ದಶಂಬರ ತಾ. [illegible] ಕುಂದಾಪುರದಲ್ಲಿಯೂ ಶಾಲೆಗಳು ತೆರೆಯೋ [illegible] ಮಂಗಳೂರಲ್ಲಿ ತೆರೆಯೋಣಾಗುವ ಶಾಲೆಯಲ್ಲಿ ಮಂಗಳೂರು, ಕಾಸರಗೋಡು, ಮತ್ತು ಉಪ್ಪಿನಂಗಡಿ ತಾಲೂಕುಗಳ ಶ್ಯಾನುಭೋಗರೂ, [illegible] ಜನ ಖಾಸಗಿ ಉಮೇದ್ವಾರರೂ, ಉಡುಪಿಯಲ್ಲಿ ತೆರೆಯೋಣಾಗುವ ಶಾಲೆಯಲ್ಲಿ ಕಾರ್ಕಳ ಮತ್ತು ಉಡುಪಿ ತಾಲೂಕುಗಳ ಶ್ಯಾನುಭೋಗರೂ, [illegible] ಖಾಸಗಿ ಉಮೇದ್ವಾರರೂ ಕುಂದಾಪುರದಲ್ಲಿ ತೆರೆಯೋಣಾಗುವ ಶಾಲೆಯಲ್ಲಿ [illegible] ಜನ ಶ್ಯಾನುಭೋಗರೂ, [illegible] ಖಾಸಗಿ ಉಮೇದ್ವಾರರೂ ತರಬೇತು ವಿಹಾಡಲ್ಪಡುವದೆಂತಲೂ ಪ್ರತಿ ಒಬ್ಬ ಖಾಸಗಿ ಉಮೇದ್ವಾರರು [illegible]ಂಡ ರಿಕಾರ್ಡ್ ತಹಸೀಲ್ದಾರರಿಂದ ಗಣಿತ (ಲೆಖ್ಖ)ದಲ್ಲಿ ಪರೀಕ್ಷಿಸಲ್ಪಟ್ಟು ಯೋಗ್ಯನೆಂತ ಕಂಡುಬಂದಲ್ಲಿ ಪ್ರವೇಶ ಫೀಸು ರೂ. [illegible]ನ್ನು ಒಂದು ಖಜಾನೆಗೆ [illegible] ರಶೀದಿಯನ್ನು ಲೇಂಡರಿಕಾರ್ಡ್ ತಹಸೀಲ್ದಾರ [illegible] ಅಥವಾ ಸರ್ವೆ ಕ್ಲಾಸಿನ ಉಪಾಧ್ಯಾಯರ ಮುಂದಾಗಲಿ ಹಾಜರುಪಡಿಸಬೇಕೆಂತ ಪ್ರಕಟಿಸಿರುವರು.

[illegible] — [illegible] ಕೋಲಗೇಟಿನ ಬಳಿಯ ಮಡ್ಕೇರಿ ರಸ್ತೆಯ [illegible] ಗಜದಲ್ಲಿದ್ದು ವಿವಾದಲ್ಲಿದ್ದ ಭಾವಿಗೆ ಈಗಿನ ಟೋಲಗೇಟ್ ಕಂಟ್ರಾಕ್ಟರಾಗಿದ್ದ ರಾ| ಪೆರಾಜೆ ಪುರುಶೋತ್ತಮ [illegible]ಗಳವರು [illegible] ಮುಂತಾದ್ದರಿಂದ ಹಾಕಿದ ಆವರಣವನ್ನು ಸದರಿಯವರು ಸರಕಾರಿ ಹುಕುಂ ಮೇರೆಗೆ ತೆಗೆದು [illegible] ಕೊಡೋಣಾಗಿರುವದು.

[illegible] — [illegible] ಗ್ರಾಮದ ಕೇಪುಳು ಎಂಬಲ್ಲಿರುವ [illegible] (೨೦) ವರುಷ ಪ್ರಾಯದ ಬಿಲ್ಲತ್ತಿ ಕುಕ್ಕೆತಿ ಹೆಂಗಸನ್ನು [illegible] ಗ್ರಾಮದ ಮಂಕುಡೆ ಬಿಲ್ಲವ್ನ್ಬಾಳಿ [illegible]ವನ್ನು ವಿವಾಹಮಾಡಿಕೊಂಡನು. ಈ ಕಾರ್ಯವನ್ನು ಸದರಿ ಕುಕ್ಕೆತ್ತಿ ಹೆಂಗಸಿನ ಮೊಮ್ಮಗ ಕೆ. ಲಿಂಗಪ್ಪ [illegible] ಸದರಿ ಕೇಪುಳ ಎಂಬಲ್ಲಿ ನೆರವೇರಿಸಿಕೊಟ್ಟನು [illegible] ಈಗೂ ನೂರಾರು ಮೊಮ್ಮಕ್ಕಳಿರುವರಂತೆ.

[illegible] ತಹಶೀಲಿ ಕೆಲ್ಸಕ್ಕೆ ನೇಮಕಪಟ್ಟು ಹೋದ [illegible] ಸ್ಟೇಶನರಿ ಮೇಜಿಸ್ಟ್ರೇಟರಾದ ಮ| ರಾ| ರಾ| ಟಿ. ಭವಾನಿಶಂಕರ್‌ರಾಯರ ಬದಲಿಗೆ ಮ| ರಾ| ರಾ| ಕೆ. ಶಿವರಾಯರು ಸ್ಟೇಶನರಿ ಮೇಜಿಸ್ಟ್ರೇಟ ಕೆಲಸದ ಚಾರ್ಜನ್ನು ತಾ. ೨೪ರಲ್ಲು ವಹಿಸಿಕೊಂಡಿರುವರು.

ಇಲ್ಲಿ ಕೆಲವು ದಿವಸಗಳಿಂದ ಮಳೆಬಂದು ಕಟ್ಟುಹುಣಿಗಳು ಕಡದು ಬೇಸಾಯಗಾರರಿಗೆ ಹೆಚ್ಚಿನ ಕಷ್ಟ ಉಂಟಾಗಿಯದೆ. ಬೆಳೆಯಂತೂ ಕೊಳೆಯುತ್ತದೆ. ಅಕ್ಕಿಯ ಧಾರಣೆಯಂತೂ ಇಲ್ಲಿಯ ಸಾಹುಕಾರರು ಏರಿಸುತ್ತಿರುವರು. ಈಗಲೆ ಅಕ್ಕಿಮುಡಿ [illegible] ರೂಪ್ಯಾ [illegible] ವರೆಗೂ ಚಿಲ್ಲರೆಯಾಗಿ ಸೇರಿಗೆ [illegible] ದುಡ್ಡು, ಆದುದರಿಂದ ಬಡಬಗ್ಗರ ಗೋಳು ಹೇಳತಕ್ಕದ್ದಲ್ಲಾ.

~~~~~

ಉಡುಪಿ: — ಶ್ರೀ ಪೇಜಾವರ ಶ್ರೀ ಪಾದಂಗಳವರು ಬದರಿಯಾತ್ರೆಯನ್ನು ತೀರಿಸಿ, ಹೃಷಿಕೇಶ ಕ್ಷೇತ್ರದಲ್ಲಿ ಚಾತುರ್ಮಾಸ ಸಂಕಲ್ಪವನ್ನು ಪೂರೈಸಿಕೊಂಡು, ಕಳದ ತಾರೀಕು [illegible]ರಲ್ಲಿ ಅಲ್ಲಿಂದ ಪರಿವಾರ ಸಹಿತವಾಗಿ ಹೊರಟು ಮಥುರಾ, ಗೋಕುಲ, ವೃಂದಾವನಗಳ ಯಾತ್ರೆ ಮಾಡಿಕೊಂಡು ಬರುವ ಕಾರ್ತಿಕಮಾಸಕ್ಕೆ ಸರಿಯಾಗಿ ಕಾಶಿಕ್ಷೇತ್ರಕ್ಕೆ ದಯಮಾಡಿಸುವರಾಗಿ ತಿಳಿದುಬರುತ್ತದೆ.

ಶ್ರೀ ಉತ್ತರಾದಿ ಮಠದ ಸ್ವಾಮಿಗಳವರು ಬೆಂಗಳೂರು ಬಸವನಗುಡಿಯಲ್ಲಿ ಒಂದು ಪ್ರಾಣದೇವರ ಗುಡಿಯನ್ನು ಪ್ರತಿಷ್ಠಿಸಿ ಅದಕ್ಕೆ ಸಂಬಂಧಿಸಿ ಒಂದು ಸಂಸ್ಕೃತ ಕಾಲೇಜನ್ನು ಸ್ಥಾಪಿಸುವ ಒಗ್ಗೆ ಶಂಕು ಸ್ಥಾಪನೆಮಾಡಿದರಂತೆ. ಇಲ್ಲಿ ದ್ವೈತ ಶಿರೋಮಣಿ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ತಯಾರಿಸುವರಾಗಿ ವದಂತಿ ಇರುವದು. ಇನ್ನು ಇದೊಂದು ದ್ವೈತವೇದಾಂತ ಕಾಲೇಜಿನ ಗತಿಯನ್ನು ನೋಡಬೇಕಾಗಿದೆ.

ವಿಪರೀತವಾಗಿ ಮಳೆಯು ಸುರಿಯುತ್ತಿದೆ. ಅಗತ್ಯವಿರುವ ಸಮಯದಲ್ಲಿ ಮಳೆಯು ಸಾಕಷ್ಟು ಇರಲಿಲ್ಲ. ಈಗ ಕಟಾವಿಗೆ ತಯಾರಾಗಿರುವ ಕಾಲದಲ್ಲಿ ಸುರಿಯುತ್ತದೆ. ಬಡವರ ಗೋಳಿಗೆ ಪಾರವೇ ಇಲ್ಲ.

ಇಲ್ಲಿ ಇತ್ತಲಾಗೆ ಅಶೌಚ ಆಚರಿಸುವ ವಿಷಯದಲ್ಲಿ ಚರ್ಚೆಯು ನಡಿಯುತ್ತಿದೆ. ತಂದೆಯು ತನಗೆ ಸೂತಕವೆಂತ ದೇವಸ್ಥಾನವನ್ನು ಪ್ರವೇಶಿಸುವದಿಲ್ಲ. ಮಗನು ತನಗೆ ಶುದ್ಧವಾಯಿತೆಂತ ಅರ್ಚನೆಮಾಡುತ್ತಾನೆ. ಅಣ್ಣನು ತನಗೆ ಸೂತಕವೆಂತ ತಂದೆಯ ಶ್ರಾದ್ಧಮಾಡುವದಿಲ್ಲ. ತಮ್ಮನು ತನಗೆ ಶುದ್ಧವಾಯಿತೆಂತ ಮಾಡುತ್ತಾನೆ. ವ್ರತಾಚರಣೆಯುಳ್ಳ ಮಗನು ಶಾಖಾವ್ರತ ದ್ವಿದಳವ್ರತಗಳಲ್ಲಿ ಹುಣಸೆ ಹಣ್ಣನ್ನೂ ಮೆಣಸಿನಕಾಯಿಯನ್ನೂ ಸ್ವೀಕಾರ ಮಾಡುತ್ತಾನೆ. ಅಪ್ಪನು ಅದು ಶಾಸ್ತ್ರವಿರೋಧವೆಂತ ಬಿಡುತ್ತಾನೆ. ಈ ಅಸಂಗತಗಳನ್ನೆಲ್ಲ ಕೇಳತಕ್ಕವರೇ ಇಲ್ಲವೋ? ವ್ಯವಸ್ಥೆ ಮಾಡುವದು ಅಗತ್ಯವಲ್ಲವೋ?

~~~~~

ಕಾಪು: — ಉಡುಪಿ ಪೇಟೆಯಲ್ಲಿ ಗಾಡಿ ತಂಗುವ ಸ್ಥಳದಲ್ಲಿದ್ದ ಗಾಡಿಗಳಿಂದ ಮಾತ್ರ ಕಂಟ್ರಾಕ್ಟದಾರನು ತೆರಿಗೆ ವಸೂಲು ಮಾಡಬೇಕೆಂತ ನಿರ್ಣಯಿಸಿದ್ದಾಗ್ಯೂ ಸರ್ವಸಾಧಾರಣವಾಗಿ ಪೇಟೆಯಲ್ಲಿ ಕಂಟ್ರಾಕ್ಟದಾರನ ಕಣ್ಣಿಗೆ ಗೋಚರವಾಗಿ ಎಲ್ಲಿದ್ದಾಗ್ಯೂ ಅಲ್ಲಿರತಕ್ಕ ಗಾಡಿಗಳಿಂದ ತೆರಿಗೆ ವಸೂಲು ಮಾಡುತ್ತಾರಂತೆ. ಇದಕ್ಕೆ ಗಮನ ಕೊಡತಕ್ಕವರ್‍ಯಾರು? ತಕ್ಕ ಸಿಬಂದಿಯವರು ವಿಚಾರಿಸಿಕೊಳ್ಳುವದು ವಿಹಿತವು.

ಪಡುಬಿದ್ರೆಯಲ್ಲಿ ಒಂದು ಮೀನಿನ ಮಾರ್ಕೆಟು [illegible]ಯುವದು ಒಳ್ಳೇದೆಂದು ಜನರ ಅಭಿಪ್ರಾಯವಾಗಿದೆ. ಹೀಗೆ ಮಾಡುವದರಿಂದ ಆರೋಗ್ಯಕ್ಕೆ ಎಡೆಕೊಟ್ಟಂತಾಗುವದು.

ತಾ. ೨—೧೦—೧೫ನೇ ಶನಿವಾರ ಉಚ್ಚಿಲ ಮಿಶನ್ ಶಾಲೆಯಲ್ಲಿ ಉಪಾಧ್ಯಾಯರ ಕೂಟವು ಕಾರ್ಕಳ ಸಬ್‌ರೇಂಜಿನ ಸುಪ್ರವೈಜರವರ ಅಧ್ಯಕ್ಷತೆಯಲ್ಲಿ ಜರುಗಿತು. ಪ್ರಾರಂಭ ಮಿಶನ್ ಬಾಲಕಿಯರು ರಾಜಗೀತವನ್ನು ಹಾಡಿದರು. ನಂತರ ಸುಪ್ರವೈಜರವರು "ಮಾನುಷ ಶರೀರ"ದ ವಿಷಯ ಮಕ್ಕಳಿಗೆ ಕಲಿಸಬೇಕೆಂದಿರುವದನ್ನು ಟಿಪ್ಪಣಿ ಸಮೇತ ಉಪಾಧ್ಯಾಯರಿಗೆ ಬರೆಸಿದರು. ನಂತರ ಕಾಪು ಬೋರ್ಡು ಕನ್ನಡ ಶಾಲಾ ಹೆ. ಮಾಸ್ತರರು ವೃತ್ತದ ವಿಸ್ತೀರ್ಣ ಕಂಡುಕೊಳ್ಳುವುದನ್ನು ಮಕ್ಕಳಿಗೆ ಉಚಿತಪಡಿಸುವದು ಹೇಗೆಂಬುದನ್ನು ನೆರೆದ ಸಭಿಕರಿಗೆ ವಿಶದವಾಗಿ ತಿಳಿಸಿದರು. ಕೊನೆಗೆ ಬರುವ ಸಭೆಯು ಮಲ್ಲಾರು ಬೋರ್ಡು ಹಿಂದೂಸ್ಥಾನಿ ಶಾಲೆಯಲ್ಲಿ ಬರುವ ದಶಂಬರ ತಾ. ೪ರಲ್ಲು ಜರಗುವದೆಂದು ನಿರ್ಣಯಿಸಲ್ಪಟ್ಟು, ಶಾಲಾ ಮಾಸ್ತರರುಗಳಿಂದ ತಯಾರಿಸಿದ ಸೀಯಾಳ, ತಾಂಬೂಲ ಮುಂತಾದ್ದನ್ನು ಸ್ವೀಕರಿಸಿಕೊಳ್ಳೋಣಾಗಿ ಸಭೆಯು ಕೊನೆಗೊಂಡಿತು.

ಮೇಘರಾಜನ ಉಪಟಳವು ಬಡಬಗ್ಗರ ಉದರಪೋಷಣೆಗೆ ಮಾರಿಯಂತಿದೆ. ಊರಲ್ಲಿ ಜನರೆಲ್ಲಾ ಆದ ಬೆಳೆಯನ್ನು ಮನೆಗೆ ಕೊಂಡು ಸೇರಿಸಿದರು. ತಡೆಯಾಗಿದೆಯಲ್ಲಾ ಎಂದು ಮರುಗುತ್ತಿರುವರು. ಊರಲ್ಲಿ ಅಲ್ಲಲ್ಲಿ ಸಾಂಕ್ರಾಮಿಕ ರೋಗಗಳು ಹುಟ್ಟುತ್ತಿವೆ. ಪಡುಬಿದ್ರೆ ಪೇಟೆಯ [illegible] ಸಾಹುಕಾರರ ಸುಮಾರು [illegible] ವರ್ಷ ಪ್ರಾಯದ ಯೋಗ್ಯ ತರುಣನು ಸನ್ನಿಪಾತ ಜ್ವರಕ್ಕೆ ತುತ್ತಾಗಿ ಮೊನ್ನೆ ತೀರಿಹೋದ ವಾರ್ತೆಯು ಬಲು ವಿಷಾದವನ್ನು ಪೇಟೆಯವರಿಗೆಲ್ಲಾ ಹುಟ್ಟಿಸಿರುತ್ತದೆ.

~~~~~

ಮಂಗಳೂರು.

~~~~~

ಮಿ. ಇ. ಯಸ್. ಲ್ಯೋನ್ ದೊರೆಗಳವರು ಈ ತಿಂಗಳ ತಾ. [illegible]ನೇ ಬುಧವಾರ ಆಕ್ಟಿಂಗ್ ಕಲೆಕ್ಟರರಾಗಿದ್ದ ಮಿ| ಕರ್ಗನ್‌ವನ್ ದೊರೆಗಳವರಿಂದ ಜಿಲ್ಲಾ ಕಲೆಕ್ಟರರ ಚಾರ್ಜನ್ನು ವಹಿಸಿಕೊಂಡರು. ಇದೇ ದಿನ ಡಿಸ್ಟ್ರಿಕ್ಟ್ ಜಡ್ಜರವರ ಚಾರ್ಜನ್ನು ಮಿ| ಕರ್ಗನ್‌ವನ್ ದೊರೆಗಳವರು ಮಿ| ಸ್ಮಿತ್ ದೊರೆಗಳವರಿಂದ ವಹಿಸಿಕೊಂಡಿರುವರು.

"ಮಲ್ಯರು" ಎಂಬ ಕ್ಷೌರಿಕ ಜಾತಿಯವರನ್ನು ವಿದ್ಯಾಶಾಲೆಗಳಲ್ಲಿ ಇತರ ಹಿಂದುಳಿದ ಜಾತಿಗಳವರಂತೆಯೇ ಪ್ರೋತ್ಸಾಹಕೊಟ್ಟು ನಡೆಸಬೇಕಾಗಿ ಈ ಜಾತಿಯವರು ವಿದ್ಯಾ ಇಲಾಖೆಯ ಡಿರೆಕ್ಟರರವರಿಗೆ ಮಾಡಿದ ಮನವಿಗೆ ಅನುಗುಣವಾಗಿ 'ಮಲ್ಯರ' ಜಾತಿಯವರಿಗೆ ಇಂಥಾ ಪ್ರೋತ್ಸಾಹವು ಕೊಡೋಣಾಗಬೇಕೆಂಬದಾಗಿ ಡಿರೆಕ್ಟರರ ಆಜ್ಞೆಯು ಬಂದಿದೆ.

ಮಂಗಳೂರು ಬ್ರಹ್ಮಸಮಾಜದವರ [illegible]ನೇ ಮಹೋತ್ಸಹವು ಇದೇ ತಿಂಗಳ ತಾ. [illegible]ನೇ ಬುಧವಾರದಿಂದ ಪ್ರಾರಂಭವಾಗಿ ಈ ತಿಂಗಳ [illegible]ನೇ ಆದಿತ್ಯವಾರ ದಿನ ಮುಗಿಯುತ್ತದೆ. ಎಂದಿನಂತೆ ನಗರ ಸಂಕೀರ್ತನೆ, ದೇವಾರಾಧನೆ, ಉಪನ್ಯಾಸಗಳು ಇತ್ಯಾದಿಗಳು ಈ ದಿನಗಳಲ್ಲಿ ಮಾಡೋಣಾಗುವವು.

ತರಬೇತಿ ಹೊಂದಿದ ಸೂಲಗಿತ್ತಿಗಳ ಸಹಾಯವನ್ನು ಜನರು ವಿಶೇಷವಾಗಿ ಪಡಿಯುವ ವಿಷಯದಲ್ಲಿ ಸರಕಾ[illegible]
~~~~~

ದವರ ಅಜ್ಞೆಯು ಡಿಸ್ಟ್ರಿಕ್ಟ್‌ಬೋರ್ಡಿನವರಿಗೂ, ಮುನ್ಸಿಪಾಲಿಟಿಯವರಿಗೂ ಬಂದಿತ್ತು. ಈ ಆಜ್ಞೆಗೆ ಅನುಗುಣವಾಗಿ ಶಂಕರನಾರಾಯಣ, ಉಪ್ಪಿನಂಗಡಿ, ಸುಳ್ಯ ಮತ್ತು ಬೆಳ್ತಂಗಡಿಗಳಲ್ಲಿರುವ ಡಿಸ್ಟ್ರಿಕ್ಟ್‌ಬೋರ್ಡಿನವರ ಆಸ್ಪತ್ರೆಗಳಲ್ಲಿ ಸೂಲಗಿತ್ತಿಗಳನ್ನು ಇಡಲು ಕಳೆದ ತಿಂಗಳಲ್ಲಿ ಕೂಡಿದ ಡಿಸ್ಟ್ರಿಕ್ಟ್‌ಬೋರ್ಡ ಸಭೆಯವರು ನಿರ್ಣಯಿಸಿರುತ್ತಾರೆ. ಕಾಸರಗೋಡಿನ ಆಸ್ಪತ್ರೆಯ ಡಾಕ್ಟರರಿಗೆ ವಾಸ ಕೊಳ್ಳುವ ಮನೆಯ ಬಗ್ಗೆ ರೂ. [illegible] ಸಂಕ್ಷನು ಆಗಿಯದೆ.

ರೈಲ್ವೆ ಅಧಿಕಾರಿಗಳನ್ನು ಉಲ್ಲಂಘಿಸಿ ನಡೆದ [illegible] ಜನ ಕಂದಾರಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆ [illegible]ವರ್ತಿಸಲ್ಪಟ್ಟು ಇವರೆಲ್ಲರೂ ತಪ್ಪಿತಸ್ಥರೆಂದು ರುಜು ಆದ್ದರಿಂದ ಇವರ ಪೈಕಿ ಇಬ್ಬರಿಗೆ [illegible] ರೂಪಾಯಿಗಳ ಪ್ರಕಾರವೂ, ಬಾಕಿ ಇಬ್ಬರಿಗೆ [illegible] ರೂಪಾಯಿ ಪ್ರಕಾರವೂ ಶಿಕ್ಷೆಯು ವಿಧಿಸಲ್ಪಟ್ಟಿರುವದು.

ಇದೇ ತಿಂಗಳ ತಾ [illegible]ರಿಂದ ಮಿಶನ್ ಹೈಸ್ಕೂಲಿನವರಿಗೂ, ಸೈಂಟ್ ಅಲ್ಲೋಸಿಯಸ್ ಕೋಲೇಜಿನವರಿಗೂ ನಡೆದ ಸೀನಿಯರ್ ಕ್ರಿಕೆಟ್ ಪಂದ್ಯಾಟದಲ್ಲಿ ಕೋಲೇಜಿನವರು ಗದ್ದಿರುತ್ತಾರೆ. ಕೆನರಾಹೈಸ್ಕೂಲ್ ಮತ್ತು ಗವರ್ನಮೆಂಟು ಕೋಲೇಜುಗಳೊಳಗೆ ನಡೆದ ಈ ಪಂದ್ಯದಲ್ಲಿ ಕೆನರಾ ಹೈಸ್ಕೂಲಿನವರು ಗದ್ದಿರುವರು. ನಂತರ ತಾ [illegible]ರಲ್ಲಿ ಸೈಂಟ್ ಅಲ್ಲೋಸಿಯಸ್ ಕೋಲೇಜಿನವರಿಗೂ ಕೆನರಾ ಹೈಸ್ಕೂಲಿನವರಿಗೂ ಪಂದ್ಯವು ನಡೆದು ಕೋಲೇಜಿನವರು ಗದ್ದಿರುತ್ತಾರೆ.

ಜುನಿಯರ್ ಕ್ರಿಕೆಟ್ ಪಂದ್ಯಾಟಗಳಲ್ಲಿ ಗವರ್ನಮೆಂಟ ಕೋಲೇಜಿನ ಸಂಗತದವರು ಕದ್ರಿಶಾಲೆಯ ಸಂಗದವರನ್ನು ಸೋಲಿಸಿಬಿಟ್ಟರು. ಗಣಪತಿ ಸೆಕೆಂಡರಿ ಶಾಲೆಯ ಟೀಮಿನವರು ಸೈಂಟ್ [illegible]ನ್ಸ್ ಸ್ಕೂಲಿನ ಜೂನಿಯರ್ ಟೀಮನ್ನು ಈ ಪಂದ್ಯದಲ್ಲಿ ಗೆದ್ದರು. ನಂತರ ತಾ [illegible]ರಲ್ಲಿ ಗಣಪತಿ ಸೆಕೆಂಡರಿಶಾಲೆ ಮತ್ತು ಗವರ್ನಮೆಂಟು ಕೋಲೇಜಿನ ಸಂಗಡಿಗರೊಳಗೆ ಈ ಪಂದ್ಯವು ನಡೆದು ಕೋಲೇಜಿನವರು ಗದ್ದಿರುತ್ತಾರೆ.

ಸಾರಸ್ವತ ಮತ್ತು ಗೌಡ ಸಾರಸ್ವತರು ಕೂಡಿ ಸಾರಸ್ವತರ ಹೆಸರಲ್ಲಿ ಒಂದು ಕ್ರಿಕೆಟ್ ಆಟಗಳ ಪಂದ್ಯದ ಕಪ್ಪನ್ನು ಪ್ರತಿ ವರುಷದಲ್ಲಿಯೂ ಆಟಗಳಲ್ಲಿ ಗೆದ್ದವರಿಗೆ ಕೊಡುವ ನಿರ್ಧಾರವನ್ನು ಮಾಡಿರುವರಾಗಿ ತಿಳಿಯುತ್ತೇವೆ. 'ಕೊಸ್ಮೊಪೊಲಿಟನ್ ಕ್ಲಬ್ ಕ್ರಿಕೆಟ್ ಕಪ್' ಎಂತ ಇದರ ಹೆಸರಾಗಿರುತ್ತದೆ. ಇದು ಕೊಡಲ್ಪಡುವ ನಿಯಮ ಇತ್ಯಾದಿಗಳನ್ನು ಕೊಸ್ಮೊಪೊಲಿಟನ್ ಕ್ಲಬ್ಬಿನವರು ಮಾಡ ಬೇಕಾಗಿರುವದು. ಈ 'ಕಪ್ಪ' ಪರವಾಗಿ ನಡೆಯುವ ಆಟಗಳಲ್ಲಿ ಅತ್ಯಧಿಕ 'ರನ್ಸ'ಗಳನ್ನು ಪಡೆಯುವರಿಗೆ ಒಂದು ಚಿನ್ನದ ಪದಕವೂ ಸಹ ಕೊಡಲ್ಪಡುವದು.

ದಕ್ಷಿಣ ಕನ್ನಡಾ ಸೆಂಟ್ರಲ್ ಕೊ-ಒಪರೇಟಿವ್ ಬ್ಯಾಂಕ್ ಇವರ ಕಡೆಯಿಂದ ಸರ್ಕ್ಯೂಲಾರು ನಂ. [illegible]—ಮರು ಸಾಲಗಳು—ಇದನ್ನು ಈ ಸಂಚಿಕೆಯ ಪತ್ರವ್ಯವಹಾರ ಭಾಗದಲ್ಲಿ ಪ್ರಕಟಿಸಿರುತ್ತೇವೆ. ಈ ಜಿಲ್ಲೆಯ ಬೇರೆ ಬೇರೆ ಕಡೆಗಳಲ್ಲಿರುವ ಪರಸ್ಪರ ಸಹಾಯ ಸಂಘದವರು ಇದನ್ನು ಓದಿಕೊಳ್ಳುವದು ಅಗತ್ಯವಾಗಿರುವದು.

ಮ| ರಾ| ರಾ| ಕಾರ್ನಾಡ ಸದಾಶಿವರಾವ್ ಮತ್ತು ಎ. ಶ್ರೀನಿವಾಸ ಕಾಮತರವರು ಸಹಿ ಹಾಕಿರುವ ಪತ್ರವೊಂದು ಈ ಸಂಚಿಕೆಯ ಪತ್ರವ್ಯವಹಾರ ಭಾಗದಲ್ಲಿರುವದು. ಈ ಜಿಲ್ಲೆಯಲ್ಲಿರುವ ಎಲಿಮೆಂಟರಿ ಶಾಲೆಗಳ ಮುಖ್ಯ ಕೊರೆಸ್ಪೊಂಡೆಂಟ್‌ರಿಗೂ ಇತರ ಮುಖಂಡರಿಗೂ ಇದರ ಪ್ರತಿಗಳು ಟಪ್ಪಾಲು ಮೂಲಕ ಪ್ರತ್ಯೇಕವಾಗಿ ಕಳುಹಿಸಲ್ಪಟ್ಟಿರುವವು. ಈ ಜಿಲ್ಲೆಯಲ್ಲಿ ವಿದ್ಯಾಪ್ರಸರಣೆಗೆ ಬೇಕಾದ ಜಿಲ್ಲಾ ಬೋರ್ಡನ್ನು ಸ್ಥಾಪಿಸುವ ವಿಷಯದಲ್ಲಿ ಪ್ರಜಾಭಿಪ್ರಾಯವನ್ನು ಈ ಮೂಲಕ ಸಂಗ್ರಹಿಸಲು ಅಪೇಕ್ಷಿಸಿರುವರು. ಈ ಬಗ್ಗೆ ಮಹಾಸಭೆಯು ಇದೇ ತಿಂಗಳ ತಾ [illegible]ರಲ್ಲಿ ಕೂಡುವದರಿಂದ ಇದರ ಮುಂಚಿತವಾಗಿಯೇ ಅಭಿಪ್ರಾಯಗಳು ಕಾರ್ಯದರ್ಶಿಗಳ ಕೈಸೇರಬೇಕಾಗಿದೆ.

ಕುಂದಾಪುರ ರೆವಿನ್ಯು ಡಿವಿಜನಲ್ ಆಫೀಸರರ ಸರ್ಕೀಟು ಕ್ರಮಪಟ್ಟಿ — ತಾ [illegible] ಕುಂದಾಪುರದಿಂದ ಉಪ್ಪಿ, ತಾ [illegible] ಉಪ್ಪಿ, ತಾ [illegible] ಉಪ್ಪಿಯಿಂದ ಕಾರ್ಕಳ, ತಾ. [illegible]ರಿಂದ [illegible] ಕಾರ್ಕಳ, ತಾ [illegible] ಕಾರ್ಕಳದಿಂದ ಮೂಡಬಿದ್ರಿ, ತಾ [illegible] ಮೂಡಬಿದ್ರಿ, ತಾ. [illegible] ಮೂಡಬಿದ್ರಿಯಿಂದ ವೇಣೂರು, ತಾ [illegible] ವೇಣೂರು, ತಾ [illegible] ವೇಣೂರಿನಿಂದ ಕಾರ್ಕಳ, ತಾ [illegible] ಕಾರ್ಕಳ, ತಾ [illegible] ಕಾರ್ಕಳದಿಂದ ಉಪ್ಪಿ, ತಾ [illegible] ಉಪ್ಪಿಯಿಂದ ಕುಂದಾಪುರ.

ಈ ತಿಂಗಳ ತಾ [illegible]ರಿಂದ ಅಥವಾ ಈ ತಾರೀಕಿನ ನಂತರ ಹಜೂರು ಶ್ರಿಸ್ತೆದಾರರಾಗಿರುವ ಮ. ರಾ. ಯ[illegible] ರಾಮನ್ನಾಕರವರಿಗೆ ಒಂದು ತಿಂಗಳ ಹಕ್ಕಿನ ರಜೆಯು ಕೊಡಲ್ಪಟ್ಟಿದೆ.

ಆಕ್ಟಿಂಗ್ ಹೆಡ್ ಗುಮಾಸ್ತರಾಗಿರುವ ಮಿ. ಎಸ್. ಡಿ ಸೋಜರವರು ಆಕ್ಟಿಂಗ್ ಶ್ರಿಸ್ತೆದಾರರಾಗಿ ನೇಮಿಸಲ್ಪಟ್ಟಿರುವರು. ಮಿ. ಸೋಜರವರ ಸ್ಥಾನಕ್ಕೆ ರಾ| [illegible] ದತ್ತಾತ್ರಿಯರಾವರವರೂ, ಇವರ ಬದಲಿಗೆ ರಾ| ಬಿ ಸೋಮಪ್ಪನವರೂ, ಬಿ ಸೋಮಪ್ಪನವರ ಸ್ಥಾನದಲ್ಲಿ ರಾ| ಪಿ ರಾಮರಾವರವರೂ ನೇಮಿಸಲ್ಪಟ್ಟಿರುವರು.

~~~~

ವಿವಿಧ ವಿಷಯ.

~~~~

ಶೃಂಗ ಅಥವಾ ಕೊಂಬಿನಂತೆ ತೋರುವ ಒಂದು ಕೃತಕ ಪದಾರ್ಥವು—ಬೇಯಿಸಿದ ನಿರ್ಮಲವಾದ ನೀರಿನಲ್ಲಿ ಸ್ವಲ್ಪ ಸೋಡಿಯಮ್ ಸಿಲಿಕೇಟ್ (Sodium Silicate) ಹಾಕಿ ಕಲಸಿ ನಯವಾದ ಗೋದಿ ಹುಡಿಯನ್ನು ಕೂಡಿಸಿ ದಪ್ಪವಾಗುವ ವರೆಗೆ ಕಲಕಿಸಿ, ಮೂರು ಹಪ್ತೆ ವರೆಗೆ ಇಟ್ಟರೆ ಪಟ್ಟಿಯಾದ ಕೊಂಬಿನಂತೆ ತೋರುವ ಪದಾರ್ಥವಾಗುವುದು. ಯಾವ ಬಣ್ಣದ ಕೊಂಬಿನಂತೆ ತೋರಬೇಕೆಂಬ ಮನಸ್ಸು ಉಂಟೊ ಅಂತಹ ಬಣ್ಣವನ್ನು ಕಲಕಿಸುವಾಗ ಹಾಕಿದರೆ ಘಟ್ಟಿಯಾದ ನಂತರ ಈ ಪದಾರ್ಥವು ಅಂತಹ ಬಣ್ಣದ ಕೊಂಬಿನಂತೆ ತೋರುವುದು (ಆಗೋಸ್ಟು ತಿಂಗಳ ಇಂಡಸ್ಟ್ರಿ ಪಾನು 122) ಶಾಯಿ ಹುಡಿ ಮಾಡುವುದು—[illegible] ಪಾಲು ಅಣಿಲೆಕಾಯಿಯ ಹುಡಿ, [illegible] ಪಾಲು ಹಿರಾಕಸದ ಹುಡಿ, [illegible] ಪಾಲು ಗೋಂದಿನ ಹುಡಿ ಈ ಮೂರನ್ನು ಬೆರಸಿದರೆ [illegible] ತೊಲೆ ಹುಡಿಗೆ ಒಂದು ಬಾಟ್ಲಿ ಚೆಲುವಾದ ಶಾಯಿಯಾಗುವುದು (ಸದರಿ ಪುಸ್ತಕದ ಪಾನು 124)

ಬಾಯಿಯ ದುರ್ವಾಸನೆ ನಿವಾರಿಸುವ ಉಪಾಯವು ಕೋಳಿಮೊಟ್ಟೆಯ ಬಿಳಿ, ಲಿಂಬೆ ಹಣ್ಣಿನ ರಸ, ಸ್ವಲ್ಪ ಬದಾಮಿ ಎಣ್ಣೆ ಮತ್ತು ಗುಲಾಬಿ ನೀರು ಇವುಗಳನ್ನು ಬೆರಸಿ ಕೆಲವು ಘಂಟೆ ವರೆಗೆ ಚೆನ್ನಾಗಿ ಕಲಕಿಸಿ ಬಾಟ್ಲಿಯಲ್ಲಿ ಹಾಕಿ ಮುಚ್ಚಿಟ್ಟು ಇದರಿಂದ [illegible] ಹನಿಗಳನ್ನು ಸುಮಾರು ಅರ್ಧ ಕುಡ್ತೆ ನೀರಿನಲ್ಲಿ ಹಾಕಿ ಬಾಯಿ ಮುಕ್ಕಳಿಸಿ ಉಗುಳಿದರೆ ಬಾಯಿಯ ದುರ್ವಾಸನೆ ಹೋಗುವದು (ಸದರಿ ಪುಸ್ತಕದ 118ನೆ ಪಾನು)

ಅಮೇರಿಕದ ಕೆಲಿಫೋರ್ನಿಯಾ ದೇಶದಲ್ಲಿ 'ಟೇಲಕತ್ರ' ಎಂಬ ಹೆಸರಿನ ಒಂದು ಲೋಕಪ್ರಸಿದ್ಧ ದನ ಇರುವುದು. ಇದು ಈಗ ಮೂರನೆ ಸರ್ತಿ ಕರು ಹಾಕಿಯದೆ. ಇದು ಒಂದು ವರುಷದಲ್ಲಿ [illegible] ರಾತಲು ಹಾಲು ಕೊಟ್ಟಿತು. ಇದರಷ್ಟು ಹಾಲು ಕೊಡುವ ಇನ್ನೊಂದು ದನವು ಭೂಲೋಕದಲ್ಲಿ ಇರುವುದಿಲ್ಲವೆಂತ ನ್ಯೂಜೇಲೆಂಡ ಜರ್ನಲ್‌ದಿಂದ ತೋರುತ್ತದೆ.

ದೇಶಾಭ್ಯುದಯವನ್ನು ಸಾಧಿಸುವುದಕ್ಕೆ ಅಗತ್ಯವಿರುವ ಜ್ಞಾನಕೊಡುವ ಅರ್ಥಶಾಸ್ತ್ರವನ್ನು (Economics) ಕಲಿತು [illegible]ದಲ್ಲಿ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆ ಪಟ್ಟ ಹುಡುಗರು [illegible]ನೆಯ ಇಸವಿಯಲ್ಲಿ [illegible], [illegible]ನೆ ಇಸವಿಯಲ್ಲಿ [illegible] ಮತ್ತು [illegible]ನೆ ಇಸವಿಯಲ್ಲಿ [illegible] ಆಗಿದ್ದರು. ಅರ್ಥಶಾಸ್ತ್ರವನ್ನು ಕಲಿತು ಪರೀಕ್ಷೆಗೆ ಹೋಗುವ ವಿದ್ಯಾರ್ಥಿಗಳ ಸಂಖ್ಯೆಯು ಬಂಗಾಳದಲ್ಲಿ ದಿನದಿನ ಹೆಚ್ಚುತ್ತಲೇ ಬರುತ್ತದೆ.

ಸತುವಿನ ಪಾತ್ರೆಗಳಿಗೆ ಕಂಚಿನ ಬಣ್ಣವನ್ನು ಬಡಾಸಿವ ಜನರು ಕೊಡುವ ಉಪಾಯವು—ಪ್ರುಸ್ಸಿಯನ್ ಬ್ಲೂ ಎಂಬ ಬಣ್ಣಕ್ಕೆ ಟರ್ಪೆಂಟೈನ್ ಕೂಡಿಸಿ ಒಂಟೆ ಕೂದಲಿನ ಕುಂಚಿಗೆಯಿಂದ (brush) ಬೆಚ್ಚಗೆ ಇರುವ ಕೋಣೆಯಲ್ಲಿ ಸತುವಿನ ತಗಡಿನ ಮೇಲೆ ತೆಳ್ಳಗಾಗಿ ಒರಸಿದರೆ ತಗಡಿಗೆ ಚೆಲುವಾದ ಕಂಚಿನ ಬಣ್ಣ ಬರುವುದು (ಮೈಸೂರು ಇಕೊನೊಮಿಕ್ ಜರ್ನಲ್ ಪಾನು 271 B.)

~~~~

ಜೀನಸು ಧಾರಣೆ. (ರಖಂ)

ಮಸ್ಸೂರಿ ಅಕ್ಕಿ	6— 0—0	6— 8—0
ಗಾಡಿ ರಾಸ ,,	5—10—0	5—14—0
ಗುಡ್ಡು ,,	6— 4—0	6— 8—0
ಅವ್ವಲ್ ಬೆಳ್ತಿಗೆ ,,	6— 8—0	7— 4—0
ಗುಡ್ಡ ಬೆಳ್ತಿಗೆ ,,	5—14—0	6— 2—0
ರಂಗೂನು ಬೆಳ್ತಿಗೆ ಗೋಣಿ ೧ರ	10— 8—0	10—12—0
ಗೋದಿ ಗೋಣಿ ೧ರ	12— 0—0	12— 8—0
ಹುರುಳಿ ಗೋಣಿ ೧ರ	7—12—0	8— 0—0
ಕಡಲೆ ಗೋಣಿ ೧ರ.	9— 0—0	9—12—0
ತೊಗರಿ ಗೋಣಿ ೧ರ	11— 8—0	12— 8—0
ತೊಗರಿ ಬೇಳೆ ಗೋಣಿ ೧ರ.	12— 8—0	15— 8—0
ಉದ್ದು ಗೋಣಿ ೧ರ	10— 0—0	12— 0—0
ಊರುಬೆಲ್ಲ ಖಂಡಿ ೧ರ	...	75— 0—0
ಉಪ್ಪು ಗೋಣಿ ೧ರ	3— 8—0	3—14—0
ಕೊಬ್ಬರಿ ಖಂಡಿ ೧ರ	75— 0—0	82— 8—0
ಕೊಬ್ಬರಿಹಿಂಡಿ ಖಂಡಿ ೧ರ	26 —0—0	28— 0—0
ಎಳ್ಹಿಂಡಿ ಖಂಡಿ ೧ರ	27— 8—0	28—12—0
ಕೊಬ್ಬರಿ ಎಣ್ಣೆ ಮುಡಿ ೧ರ.	6— 6—0	6—14—0
ಎಳ್ಳೆಣ್ಣೆ ಮುಡಿ ೧ರ (ಕುರಾಸನ)	4— 8—0	4—12—0
ಚಿಮಣಿ ಎಣ್ಣೆ ಪೆಟ್ಟಿಗೆ ೧ರ	4— 9—0	5— 0—6
ಮೋರಿಸ್ ಸಕ್ಕರೆ ಮುಡಿ ೧ರ	4— 7—0	4— 8—0
ಕಾಫಿ ಖಂಡಿ ೧ರ	240— 0—0	252— 0—0
ಹೊಸಬೀಗೋಟು ಖಂಡಿ ೧ರ.	94— 0—0	98— 0—0
ಹೊಸ ಗೇರುಬೀಜ ಮುಡಿ ೧ರ		2—12—0
ಕಬ್ಬಿಣ ಖಂಡಿ ೧ರ		50— 0—0
ಕಾಂಟ್ರ ತಗಡು ಮುಡಿ ೧ರ.		20— 0—0
ಕಾಂಟ್ರ ಪಾತ್ರೆಗಳು ಮುಡಿ ೧ರ.		22— 0—0
ಚೀನಿ ಬೆಳ್ಳಿ ಶೇರು ೧ರ.		18—12—0
ಪಚ್ಚೆ ಹೆಸರು ಮುಡಿ ೧ರ	5— 8—0	5—10—0
~~~~

ಪ್ರಿಯರೇ,

ನಾವು ಮದ್ರಾಸಿಗೆ ಹೋದರೆ ಯಾಂಲ್ಲಿ ಉಳಕೊಳ್ಳುವದು? ಎಂಬ ಈ ಚಿಂತೆ ನಮಗೆ ಇನ್ನು ಮೇಲೆ ಬೇಡ. ಯಾಕಂದರೆ, ಅಲ್ಲಿದ್ದ ನಮ್ಮೂರಿನ ಸೋಮೇಶ್ವರ ನರಶಿಂಗರಾಯರು ಮುಂಚಿಗಿಂತ ರೈಲ್ವೆ ಸ್ಟೇಶನಿಗೆ ಇನ್ನೂ ಹತ್ತಿರದಲ್ಲಿ ಇನ್ನೂ ವಿಶಾಲವಾದ ಉಪ್ಪರಿಗೆ ಮನೆ ತಕ್ಕೊಂಡಿದ್ದಾರೆ. ಮುಂದಾಗಿ ಒಂದು ಕಾರ್ಡು ಬರೆದರೆ ಸ್ಟೇಶನಿಗೇ ಜನಕಳುಹಿಸಿ ನಿಮ್ಮನ್ನು ಆಮಂತ್ರಿಸುತ್ತಾರೆ. ಊಟಕ್ಕೂ ವಸತಿಗೂ ಮನೆಯಷ್ಟೇ ಸೌಕರ್ಯ. ಖರ್ಚೇನೂ ವಿಶೇಷವಿಲ್ಲ. ಹೀಗಿರುವಲ್ಲಿ ನಿಮ್ಮ ಕಾರ್ಯವನ್ನು ಸ್ವತಹಾ ಹೋಗಿ ಜಯಿಸಿಕೊಂಡು ಬರಲಿಕ್ಕೆ ಅನುಮಾನಪಡುವದೇಕೆ?

ವಿಳಾಸ:— ಸೋಮೇಶ್ವರ ನರಶಿಂಗರಾವ್,
ಕೋಮಲ ವಿಲಾಸ,
ರಸಪ್ಪಚೆಟ್ಟಿ ಬೀದಿ, ಮದರಾಸು.

ಕೊಡ್‍ಲಿವರ್ ಎಣ್ಣೆ.



ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಯಿಂದ ವಕ್ಕಗೈದುದು. ಇದರಿಂದ ದೊರಕತಕ್ಕ ಲಾಭವಾದರೋ ಇದರಲ್ಲಿಯ ಎಣ್ಣೆಯ ಅಂಶವು ಶರೀರಕ್ಕೆ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ಅವಲಂಬಿಸಿರುತ್ತದೆ. ಅಲ್ಪ ಕೊಡಲೀವರ್ ಎಣ್ಣೆಯೂ ಅದರಿಂದ ವಕ್ಕಗೈದ ಬೇರೆ ಔಷಧಗಳ ಹೊಲಸಾಗಿಯೂ ಕಟ್ಟುತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗವಾದುದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಅನುಸರಿಸುತ್ತದೆ. ಆದರೆ ಅಂತಹ ಅಪಾಯಗಳಿಲ್ಲದರೂ ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ವೋಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತಮ ಫಲವು ಆಶ್ಚರ್ಯಕರವಾಗಿದೆ. ಶ್ವಾಸಕಾಸ, ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಅಗತ್ಯವಿದೆಯೋ ಅಂತಹ ಶ್ವಾಸಕಾಸ ಕ್ಷಯಾದಿ ರೋಗಗಳಲ್ಲಿಯೂ ಇತರ ರೋಗಗಳಲ್ಲಿಯಾದರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಯೆ ವೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೇ ಕೇಳಿಕೊಳ್ಳಿರಿ. ಈ ಮಿಶ್ರಣವು ಸುರಸವಾಗಿರುತ್ತದೆ. ಇದು ಎಲ್ಲಾ ಕಡೆಗಳಲ್ಲಿ ಮಾರಲ್ಪಡುವದು. ಮತ್ತು ಕನ್ನಡ ಬಲ್ಲವರೆಲ್ಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಬಾಟ್ಲಿ 1ಕ್ಕೆ 3—4—0. ಅರ್ಧ ಬಾಟ್ಲಿಗೆ 1—12—0

ದಿ ಊಲನ್ ಮಾರ್ಟ್,
ಮಂಗಳೂರು, ದ. ಕ.

ಔಷಧಗಳು.

ಮಹಾಮದನ ಕಾಮೇಶ್ವರೀ ಲೇಹ್ಯ:—ಬಹಳ ಶ್ರಮಪಟ್ಟು ಕೆಲಸ ಮಾಡುವವರೂ, ಲೇಖಕರೂ, ಮತ್ತು ಇಂದ್ರಿಯ ದೌರ್ಬಲ್ಯ, ಅಜೀರ್ಣ, ಎದೆನೋವು, ಶರೀರಗಳ ಘಳಿತದಿಂದಾದ ನಿಶ್ಶಕ್ತಿ ಮೊದಲಾದ ಪ್ರಕೃತಿಯುಳ್ಳವರೂ ಇದನ್ನು ಸೇವಿಸಿದ್ದಲ್ಲಿ ಧಾತುಪುಷ್ಟಿಯಾಗಿ ಮುಖವು ಕಾಂತಿಗೊಳಿಸುವದು. ಸೇವನಾ ಕ್ರಮ—ಅಭ್ಯಾಸವುಳ್ಳವರು 1 ಪಾವಲಿ ತೂಕ ಯಾ ಗೋಲಗಾತ್ರ. ಅಭ್ಯಾಸಿಸುವವರು 2 ಆಣೆ ತೂಕ. ರಾತ್ರೆ ಊಟಾದ ಮೇಲೆ ಸೇವಿಸಿ ಹಾಲು ಕುಡಿಯತಕ್ಕದ್ದು.

1 ಶೇರಿನ ಡಬ್ಬಿಗೆ ಕ್ರಯ: 2—0—0.

ಚಂದ್ರೋದಯಾವರ್ತಿ:—ಕಣ್ಣಿಗೆ ಅಂಜನ ಮಾಡಿದ್ದಲ್ಲಿ ಬೆಳೆದ ದುರ್ಮಾಂಸ, ತಿಮಿರ, 3 ವರ್ಣದ ಹೂವು, ಇರಳುಕಣ್ಣು, ತಾಪದಿಂದು ಗುಣ.

ಕ್ರಯ: ರೂ. 0—12—0.

ಮಹಾಜ್ವರಾಂಕುಶ:—ದಿವಸಕ್ಕೊಮ್ಮೆ ದ್ವಿತೀಯ, ತೃತೀಯ, ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ. ಡಜನ್ ಕ್ರಯ: 0—8—0;

ಮೇಹಮುದ್ಗರವಟಿ:—20 ನಮೂನೆಯ ಪ್ರಮೇಹ, ಧಾತು ಗತಜ್ವರ ಮೂತ್ರಕೃಚ್ಛ್ರ, ಅಶ್ಮರಿ, ಕಾಮಲೆ, ಪಾಂಡು ಗುಣ. ಡಜನ್ 1ರ ಕ್ರಯ: 1—2—0.

ಕೋಲೆರಾ ಯಾನೆ ವಾಂತಿಭೇದಿ ಗುಟಿಕೆ:—ಒಂದೆರಡು ಗುಟಿಕೆಯಿಂದ ವಾಂತಿಭೇದಿ ಕೂಡಲೇ ಗುಣ. ಡಜನ್ ಗುಟಿಕೆಯ ಕ್ರಯ: 0—12—0.

ಚಂದನಾಸವ:—ಮೇಹ, ಶುಕ್ಲಧಾತು ನಷ್ಟತ್ವ ಗುಣ. ಬಾಟ್ಲಿಗೆ ರೂ. 1.

ನಮ್ಮ ಔಷಧಾಲಯದಲ್ಲಿ ಅನೇಕ ವಿಧದ ಬೇರೆ ಔಷಧಗಳು ದೊರೆಯುತ್ತವೆ. ಅಪೇಕ್ಷೆಯುಳ್ಳವರು ಕೆಟಲಾಗು ತರಿಸಿಕೊಳ್ಳಬಹುದು. ಮೇಲಿನ ಔಷಧಗಳು ಬಹಳವಾಗಿ ಖರ್ಚಾಗುವದರಿಂದ ಕ್ರಯವನ್ನು ಕಡಿಮೆ ಮಾಡಿರುತ್ತದೆ.

ವಿಳಾಸ:— ಮೂಲ್ಕಿ ಗಣಪಯ್ಯ ಎಂಡ್ ಸನ್ಸ್,
ನೇಟಿವ್ ಡಾಕ್ಟರ್ಸ್,
ತೇರಬೀದಿ ಮನೆ ನಂಬ್ರ 268ನೇ, ಮಂಗಳೂರು.

ಕನ್ನಡ ಕಥೆ ಪುಸ್ತಕಗಳು.

ಶುಕಸಪ್ತತಿ ೭೦ ಕಥೆಗಳು ಸಚಿತ್ರ	೨	೦	೦
ಸಚಿತ್ರ ವಿದ್ಯಾಮಂಜರಿ ಕಥೆಗಳು	೧	೮	೦
,, ಭಟ್ಟಿವಿಕ್ರಮಾದಿತ್ಯರಾಯನ ಕಥೆ	೧	೮	೦
ಸಚಿತ್ರ ರಾಮಾಯಣ ಕಥಾಸಂಗ್ರಹ			
ಗ್ಲೇಜ್ ಅವ್ವಲ್	೧	೪	೦
,, ರಫ್ ದುಯ್ಯಂ	೦	೧೨	೦
ಜೈಮಿನಿ ಭಾರತ ಕಥಾಸಂಗ್ರಹ	೦	೧೨	೦
ಕೃಷ್ಣಬೋಧಾಮೃತ	೦	೧೦	೦
ಭಾರತ ಕಥಾಸಂಗ್ರಹ	೦	೬	೦
ಪ್ರಭಾವತಿ ಶುಕಮಂಜರಿ ಕಥೆ	೦	೫	೦
ಬಿಳಾವಳಿ ಕಥೆ	೦	೬	೦
ಮದನಮೋಹನರಾಜ ಚರಿತ್ರೆ	೦	೬	೦
ಚಂಚಲಕುಮಾರಿ ಕಥೆ	೦	೪	೦
ಸಾಧ್ವಿ ಗುಣಮಂಜರಿ ಕಥೆ	೦	೫	೦
ಪತಿವ್ರತಾಮಹಾತ್ಮ್ಯೆ ಕಥೆ	೦	೬	೦
ಹರಿಶ್ಚಂದ್ರನ ಕಥೆ	೦	೪	೦
ನಳದಮಯಂತಿಯರ ಕಥೆ	೦	೬	೦
ಬತ್ತೀಸಪುತ್ಥಳಿ ಕಥೆ	೦	೫	೦
ಹುಚ್ಚುಮುಂಡೆಗಳ ಕಥೆ	೦	೬	೦
ಹಾಸ್ಯಸುಂದರಿ ಸುಕನ್ಯಾ ಕಥೆ	೦	೮	೦
ಮೂಢಘೋಷಾ ಶೃಂಗಾರಾಮೃತಕಥೆ	೦	೧೨	೦
ಹಾತಿಮತಾಯಿ ಕಥೆ	೦	೧೦	೦

ಪುರಾಣಗಳು.

ತೊರವೆರಾಮಾಯಣ ಗ್ಲೇಜಅವ್ವಲ್	೨	೦	೦
,, ದುಯ್ಯಂ	೧	೮	೦
ತೊರವೆ ರಾಮಾಯಣ ಸೀಯಂ	೧	೦	೦
ಜೈಮಿನಿ ಭಾರತ ಗ್ಲೇಜಅವ್ವಲ್	೧	೪	
,, ದುಯ್ಯಂ	೦	೧೦	೦
,, ಸೀಯಂ	೦	೬	೦
೧೮ ಪರ್ವ ಭಾರತ	೨	೮	೦
೧೨ ಸ್ಕಂಧ ಭಾಗವತ ಗ್ಲೇಜ ಅ.	೫	೦	೦
,, ದುಯ್ಯಂ	೪	೦	೦

ಪದಗಳು.

ಪದ್ಯರತ್ನಾಕರ ೧ನೇ ಭಾಗ	೧	೦	೦
ಪುರಂದರದಾಸರ ಕೀರ್ತನೆ ಅ.	೦	೬	೦
,, ಬೆಂಗಳೂರು	೦	೬	೦
ಕನಕದಾಸಕಬೀರದಾಸಕೀರ್ತನೆ	೦	೩	೦
ಗೀತರತ್ನಮಂಜರಿ	೦	೪	೦
ಗೀತಕಲ್ಪಾಂಕುರ	೦	೫	೦
ಗೀತಿಕಾಮಂದಾರಮಾಲಿಕಾ	೦	೩	೦
ಗೀತಿಕಾ ತರಂಗಿಣಿ	೦	೪	೦
ಬಾಗಿಲು ತಡೆಯುವ ಪದ	೦	೦	೬
ಹುವ್ವುಮುಡಿಸಿದ ಹಾಡು	೦	೦	೬
ಕೃಷ್ಣ ವಿವಾಹಮಹೋತ್ಸವ	೦	೬	೦
ದ್ರೋಣಪರ್ವ	೦	೫	೦
ಲಕ್ಷ್ಮೀಶೋಭಾನೆ	೦	೧	೬
ಪಾಂಡವಗೀತೆ		೧	೬
ವಿಷ್ಣುಸಹಸ್ರನಾಮ ಶ್ಲೋಕ	೦	೨	೦
ಹಾಮೋನಿಯಂಸ್ವರಬೋಧಿನಿ	೦	೪	೦

ಇವುಗಳಲ್ಲದೆ ಇನ್ನೂ ಅನೇಕ ತರದ ಕನ್ನಡ, ಮರಾಠಿ, ಸಂಸ್ಕೃತ ಪುಸ್ತಕಗಳೂ ಹೇರಾಯಿಲ್, ಸೆಂಟ್ಸ್, ಅತ್ತರ್‌ಗಳೂ, ಉತ್ತಮ ತರದ ಊದುಬತ್ತಿಗಳೂ, ಅರಗಜ ಪಿತ್ತ, ದಶಾಂಗ, ಗಂಧದಪಿಲ್ಲೆ ಮೊದಲಾದ ಸುಗಂಧದ್ರವ್ಯಗಳೂ ಬಹಳ ಕಮ್ಮಿ ಕ್ರಯಕ್ಕೆ ಮಾರಾಟಕ್ಕೆ ಸಿದ್ಧವಾಗಿವೆ. ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ದೊರೆಯುವದು. ಅರ್ಧಾಣೆ ಸ್ಟಾಂಪು ಕಳುಹಿಸಿದರೆ ದೊಡ್ಡ ಕ್ಯಾಟಲಾಗನ್ನು ಕಳುಹಿಸುತ್ತೇವೆ. ಬೇಕಾದವರು ಈ ಕೆಳಗಣ ವಿಳಾಸಕ್ಕೆ ಬರಕೊಳ್ಳಬಹುದು.

ಶ್ರೀ ರಾಧಾಕೃಷ್ಣ ವಿಲಾಸ,
ರಥಬೀದಿ. ಮಂಗಳೂರು

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,
ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ.

೧. ಕುಟುಂಬಜೀವನಿ—ಎಲ್ಲಾ ರೋಗಗಳನ್ನು ತ್ವರೆಯಾಗಿ ಗುಣಪಡಿಸುವದು. 16 ಔಷಧಗಳ ಸಂಗ್ರಹದ ಪೆಟ್ಟಿಗೆ 1ಕ್ಕೆ 8—0—0.

೨. ಶತಮೂಲಿಕಾ ಅಮರಸಂಜೀವನಿ—ಈ ಟೋನಿಕ್ ದ್ರಾವಕವು ನಿತ್ಯಾಪಗಳಿಗೆ ಜೈಗಸ್ಯ ಉಂಟುಮಾಡಿ ಅಮರತ್ವವನ್ನು ಕೊಡುತ್ತದೆ. ಬಾಟ್ಲಿ 1ಕ್ಕೆ 1—0—0.

೩. ಬಾಲಸಂಜೀವನಿ—ಮಧುರ ಟೋನಿಕ್ ಅಶಕ್ತ ಬಾಲಕರಿಗೆ ಸಶಕ್ತರಾಗಿ ಮಾಡಿ ವರ್ಧಮಾನ ಚಂದ್ರನಂತೆ ಬೆಳಗಿಸುತ್ತದೆ. ಬಾಟ್ಲಿ 1ಕ್ಕೆ 0—12—0.

೪. ವಸಂತ ಕುಸುಮಾಕರ—ಈ ಸುವಾಸಿಕ ತೈಲವು ಕೇಶ ವೃದ್ಧಿಮಾಡಿ ಶಿರೋರೋಗ ನೇತ್ರರೋಗಗಳನ್ನು ಶಮನಮಾಡಿ ಮೆದುಳನ್ನು ತಂಪು ಮಾಡಿ ಜ್ಞಾನಶಕ್ತಿ ಹೆಚ್ಚಿಸಿ, ಬುದ್ಧಿ ಭ್ರಮಣವನ್ನು ಗುಣಮಾಡುತ್ತದೆ. ಬಾಟ್ಲಿ 1ಕ್ಕೆ 1—0—0

೫. ಸುದರ್ಶನಮಾಲಿನಿ—ಈ ಸಿದ್ಧೌಷಧವು ಮೇಹವ್ರಣ ಇತ್ಯಾದಿ ಎಲ್ಲಾ ದುಸಾಧ್ಯ ವ್ರಣಗಳನ್ನು 7-8 ದಿವಸಗಳಲ್ಲಿ ಪೂರ್ಣ ಗುಣಪಡಿಸುವದು. ಕ್ರಯ 4—0—0.

೬. ಗರುಡಧ್ವಜ—ಇದು ಸರ್ಪ ಹುಚ್ಚುನಾಯಿ, ಚೇಳು, ಇಲಿ ಇತ್ಯಾದಿ ಸರ್ವ ಕಠಿಣ ವಿಷಗಳಿಗೆ ಸಂಜೀವನವಾಗಿರುತ್ತದೆ. ಅನುಭವಸಿದ್ಧ 2—0—0.

೭. ಆನಂದವನವಿಲಾಸ—ಇದು ಡ್ಯಾಬಿಟಿಸ ಎಂಬ ಬಹುಮೂತ್ರ ರೋಗವನ್ನು 48 ದಿವಸಗಳಲ್ಲಿ ಪೂರ್ಣ ಗುಣಪಡಿಸುತ್ತದೆ. ಪೂರ್ಣ ಔಷಧಕ್ಕೆ 5—0—0.

ನಮ್ಮ ಡಿಸ್ಪೆನ್ಸರಿಯಲ್ಲಿ ಸಿದ್ಧ ವೈದ್ಯರ ಪ್ರಯೋಗಗಳಿಂದ ತಯಾರಿಸಿದ ಪೌಷ್ಟರ ಮಾತ್ರೆಗಳು, ಲೇಹ ಚೂರ್ಣಗಳು, ತೈಲ ಘೃತಗಳು, ಆಸವಾರಿಷ್ಟಗಳೂ ತುಂಬಾ ಇರುತ್ತವೆ. ಕ್ರಯವಿಲ್ಲದ ನಮ್ಮ ಕೆಟಲಗನ್ನು ತರಿಸಿಕೊಳ್ಳಿರಿ. ಏಜಂಟರು ಬೇಕು. ಹೆಚ್ಚು ಡಿಸ್‌ಕೌಂಟು ಸಿಕ್ಕುವದು.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

ತಿರುಪತಿ ಯಾತ್ರೆ! ತಿರುಪತಿ ಯಾತ್ರೆ!!

ವೇಂಕಟಗಿರಿ ಮಹಾತ್ಮೆ

ಮತ್ತು

ಪದ್ಮಾವತೀ ಕಲ್ಯಾಣವು.

ಚಿತ್ರಮಯ! ವಿಚಿತ್ರಮಯ!!

ಅನೇಕ ಪದ್ಯಗಳಿರುವ ೧೫ ಅಧ್ಯಾಯಗಳು ದಪ್ಪವಾದ ಕಾಗದ ಶಾರದಾ ಛಾಪಖಾನೆಯ ಬಣ್ಣ ಕುಗಳಲ್ಲಿ ಹೊಸದಾಗಿ ತಯಾರಿಸಿದ ನಾಜೂಕಾದ ಕ್ರೈನ

ವೆಂಕಟೇಶನು ಗಿರಿಯಲ್ಲಿ ನಟಿಸಿದ ಅದ್ಭುತ ಕಾರ್ಯಗಳು ವಾಚಕರಿಗೆ ಮನಃ ಪಟಿತವಾಗುವಂತೆ ಸ್ಟೈಲ್ಸ್ ಕಾಗದದಲ್ಲಿ ೧೪ ಹಾಪ್‌ಟೋನ್ ಬ್ಲಾಕಗಳಿಂದ ಕೂಡಿವೆ

ಸಂಸ್ಕೃತ ಭವಿಷ್ಯತ್ಪುರಾಣದಿಂದ ಸ್ವರ್ಗಸ್ಥರಾದ ಕವಿ ಮುಳಿಯ ರಾಮಕೃಷ್ಣಯ್ಯನವರಿಂದ ಭಾಮಿನಿ ಷಟ್ಪದಿಯಲ್ಲಿ ಕನ್ನಡಿಸಲ್ಪಟಿತು. ಶುಲಭಶೈಲಿ ಸರ್ವರಿಗೂ ಅನುಸಿತ್ಯದ ಪಠಣ ಪುಸ್ತಕವಾಗಿರಲು ಉಚಿತವಾಗಿರುವದು ಸ್ಯಾಜು ಡಮಿ ಅಷ್ಟ ಪತ್ರದ 1(೬ ಪುಟಗಳು ಕಿತ್ತಾನಾರಿನ ಬೈಂಡ ಪ್ರತಿಯೊಂದಕ್ಕೆ ರೂ 1—8—0 ಟ ಹಾಸಲು ಬೇರೆ

ವಿಳಾಸ:— ಕವಿ ಎಂಡ್ ಸನ್ಸ್, ಶಾರದಾ ಮುದ್ರಣಾಲಯ, ಜನರಲ್ ಮರ್ಚಂಟ್ಸ್, ಮಂಗಳೂರು, ದ. ಕ.

ಮಂಗಳೂರು, ದ ಕ.

ಹೊಸ ಪುಸ್ತಕಗಳು.

ಸುಭದ್ರೆ.

ನಮ್ಮ ದೇಶದಲ್ಲಿ ಅತೀವ ಪ್ರಬಲವಾಗಿ ಹಬ್ಬುತ್ತಿರುವ "ವರದಕ್ಷಿಣೆ"ಯೆಂಬ ಪಿಶಾಚದ ಪ್ರಭಾವದಿಂದ ಅನೇಕ ಅನರ್ಥಗಳಾಗುತ್ತಿರುವದು ಸರ್ವರಿಗೂ ವಿದಿತವಾದ ಅಂಶವೇ ಆಗಿರುವದು ... ಈ ಹೊಸ ಕಥೆಯು ಬರೆಯಲ್ಪಟ್ಟಿರುವದು. ಇದರಲ್ಲಿ ... ವರದಕ್ಷಿಣೆಯನ್ನು ಕೊಡಲು ಅಸಮರ್ಥನಾದುದರಿಂದ ತನ್ನ ... ಮದುಕನಿಗೆ ಮಾರಲು ಪ್ರಯತ್ನಪಟ್ಟನು. ಈ ವಿವಾಹದಿಂದ ತಪ್ಪಿಸಿ ಒಬ್ಬ ಶ್ರೀಮಂತನ ಮಗನು ಆವಳನ್ನು ಮದುವೆಯಾಗಿಕೊಂಡನು ... ಮುದುಕನ ದೆಸೆಯಿಂದ ... ಪ್ರತಿ ಕುಟುಂಬದಲ್ಲಿಯೂ ಈ ಪುಸ್ತಕದ ... ಇರಬೇಕಾದುದು

ಬೆಲೆ ೫ ಆಣೆ ... ಅಂಚೆ ಕೂಲಿ ೨ ಆಣೆ

ಜಾನ್ ಪಿಯರ್‌ಪಾಂಟ್ ಮಾರ್ಗನ್ ಚರಿತ್ರೆ.

ಈ ಲೋಕವಿಖ್ಯಾತಿಯಾದ ಕೋಟ್ಯಾಧೀಶ ಮಾರ್ಗನ್ನು ಈಗ ಕೆಲವು ದಿನಗಳ ಹಿಂದೆ ... ಮರಣ ಹೊಂದಿದ ... ಈ ವೃತ್ತಾಂತ ಪತ್ರಿಕೆಗಳಲ್ಲೆಲ್ಲಾ ತಿಳಿಸಲ್ಪಟ್ಟಿದ್ದಿತಷ್ಟೆ ಆತನು ಜೀವಿತದಲ್ಲಿ ತನ್ನ ಧನವನ್ನು ವಿನಿಯೋಗ ಮಾಡುತ್ತಿದ್ದನು ... ಉಪಕಾರವಾಗುತ್ತಿದ್ದಿತು ... ಆತನ ಚರಿತ್ರೆಯ ... ಬೆಲೆ ... ಆಣೆ

ಗ್ಲಾಡ್‌ಸ್ಟನ್ನರ ಮಹಿಮೆ.

ಈ ಜಗದ್ವಿಖ್ಯಾತರಾದ ಇಂಗ್ಲಂಡ್ ದೇಶದ ಮಂತ್ರಿಶ್ರೇಷ್ಠರ ಗುಣವರ್ಣನೆಯು ಸರಳವಾದ ಶೈಲಿಯಲ್ಲಿ ಬರೆಯಲ್ಪಟ್ಟಿರುವುದು ಸರ್ವರಿಂದಲೂ ಆದರಣೆಗೆ ಅರ್ಹವಾದ ಪುಸ್ತಕ ಬೆಲೆ ೧ ಆಣೆ

ತೆಲುಗು ಸಂಗೀತ ಕೃತಿಪರ್ಣ ಸ್ವರಸಹಿತ ೧೦೦ ಕೀರ್ತನೆಗಳುಳ್ಳದ್ದು ೨ ೪ ೦.
ಶ್ರೀ ಚಾಮರಾಜೇಂದ್ರ ಒಡೆಯರ ಚರಿತೆ ೧ ೦ ೦
ದೇಶಭಕ್ತಿ ೮ ಆಣೆ ನವೀನ ಭರತಖಂಡ ೫ ಆಣೆ

ವಿಳಾಸ:— ಎಚ್. ಎನ್. ರಾವ್ ಅಂಡ್ ಬ್ರದರ್ಸ್, **ಚಿಕ್ಕಪೇಟೆ, ಬೆಂಗಳೂರು ಸಿಟಿ.**

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿ!

ಪಿ. ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ಮೋಹರಾಜ ತೈಲ:— ಇದನ್ನು ಬಿಳಿ ಬಟ್ಟೆಯಲ್ಲಿ ಹಚ್ಚಿ ವ್ರಣಗಳ ಮೇಲೆ ಹಾಕಿದರೆ, ಮೋಹದಿಂದುಂಟಾಗುವ ಕಂಠಮಾಲೆ, ತೊಡಬಾಲೆ, ಗೆಡ್ಡೆಗಳು, ಕುಸುಮ ರೋಗ ವ್ರಣಗಳು, ಆಸನ ಪವುತ್ರಗಳು, ಲಿಂಗವ್ರಣ, ಯೋನಿ ವ್ರಣ ಮುಂತಾದ ಸಕಲ ವ್ರಣಗಳು ಮತ್ತು ಗಾಯಗಳು ಅವುಗಳಲ್ಲಿ ಹುಟ್ಟುವ ಹುಳುವನ್ನು ಕೊಂದು ಹುಣ್ಣನ್ನು ಆರಿಸಿ ಚರ್ಮದ ಮೇಲಿನ ಹುರುಕನ್ನು ಸರಿಮಾಡಿ ಚೆನ್ನಾಗಿ ಬೆಳೆಯುವಂತೆ ಮಾಡುವದು. ಸೀಸೆ 1ಕ್ಕೆ 8 ಆಣೆ ವಿ ಪಿ ಚಾರ್ಜು 3 ಸೀಸೆವರಿಗೂ 5 ಆಣೆ

ಮಧುರಧ್ವನಿ ಮಾತ್ರೆ:— ಧ್ವನಿಯಲ್ಲಿರುವ ನ್ಯೂನ್ಯತೆಗಳನ್ನು ಸರಿಮಾಡಿ ಮನೋಹರವಾದ ಧ್ವನಿಯನ್ನುಂಟುಮಾಡಿ ಸ್ಫುಟವಾಗಿ ಮಾತನಾಡುವದಕ್ಕೆ ವಿಶೇಷ ಅನುಕೂಲಪಡಿಸಿಕೊಡುವದು ಮುಖ್ಯವಾಗಿ ಸಂಗೀತಗಾರರು, ಉಪನ್ಯಾಸಕರು ಮೊದಲಾದವರಿಗೆ ಬಹಳ ಸಹಕಾರಿಯು ಇದರ ಸೇವನೆಯಿಂದ ಭಾರವಾದ ಧ್ವನಿಯು ಸರಿಯಾಗುವದು ಹಾಡಿದರೆ ಕಿವಿಗಿಂಪಾಗುವಂತೆ ಧ್ವನಿಯು ಹೊರಡುವದು ಸೀಸೆ 1ಕ್ಕೆ ೯ ಆಣೆ ವಿ ಪಿ ಚಾರ್ಜು ೬ ಸೀಸೆವರಿಗೂ 5 ಆಣೆ

ಸ್ನಾನಕ್ಕೆ ಸುವಾಸನಾ ಪುಡಿ:— ಸುವಾಸನೆಯುಳ್ಳ ಈ ಪುಡಿಯನ್ನು ಸ್ನಾನ ಕಾಲದಲ್ಲಿ ಪ್ರಾಯದ ಗಂಡಸರೂ, ಹೆಂಗಸರೂ, ಮುದುಕರೂ, ಸಣ್ಣ ಮಕ್ಕಳೂ ಉಪಯೋಗಿಸುವದಕ್ಕೆ ಅನುಕೂಲವಾಗಿರುವದು ಚರ್ಮಗತವಾದ ಕೊಳೆಯನ್ನೂ, ಬೆವರಿನ ದುರ್ಗಂಧವನ್ನೂ ಹೋಗಲಾಡಿಸಿ, ಚರ್ಮವನ್ನು ಮೃದುಮಾಡಿ, ಮಿಂಚುವಂತೆ ಹೊಳಪು ಹುಟ್ಟಿ, ತಂಪನ್ನುಂಟುಮಾಡುವದು ಅದಲ್ಲದೆ ದೇಹದಲ್ಲಿ ಸರ್ವದಾ ಸುಗಂಧವಿರುವಂತೆ ಮಾಡುವದು ಪ್ರತಿಯೊಬ್ಬರೂ ಉಪಯೋಗಿಸಲಿಕ್ಕೆ ಯೋಗ್ಯವಾಗಿದೆ. ಪೆಟ್ಟಿಗೆ 1ಕ್ಕೆ ೮ ಆಣೆ ವಿ ಪಿ ಚಾರ್ಜುಗಳು 2 ಪೆಟ್ಟಿಗೆಗಳವರಿಗೂ ೫ ಆಣೆ

ಸಂಜೀವನ ಮಾತ್ರೆಗಳು:— ಮಕ್ಕಳಿಗೆ ಜ್ವರ, ನರಗಳ ಸೆಳತ ನಿದ್ರೆಬಾರದಿರುವುದು, ಅಧಿಕವಾಗಿ ಹೊಸುವದು, ಛಳಿ, ಕೆಮ್ಮಲು, ತಲೆನೋವು, ನಗಡಿ, ಇನ್ನೂ ಮಕ್ಕಳಿಗೆ ಬರುವ ಅಜೀರ್ಣ ಸಂಬಂಧ ವಾತರೋಗಗಳಿಗೆ ಒಳ್ಳೇ ಮದ್ದಾಗಿರುವದು. ಇದನ್ನು ದೊಡ್ಡವರು ಸಹ ಉಪಯೋಗಿಸಬಹುದು ಸೀಸೆ 1ಕ್ಕೆ 10 ಆಣೆ. 1 ಮೊದಲು ೬ ಸೀಸೆವರಿಗೆ ವಿ ಪಿ ಚಾರ್ಜು ೫ ಆಣೆ ಪ್ರತ್ಯೇಕವು

ಮಹಾಗೋರೋಜನ ಮಾತ್ರೆ:— ಎಲ್ಲಾ ವಿಧವಾದ ಜ್ವರಗಳಿಗೂ, ವಿಷಮ ಶೀತಜ್ವರ, ಎರಡರ ಜ್ವರ, ಪ್ರತಿದಿನ ಜ್ವರ ಇವುಗಳಿಗೆ ಅದ್ವಿತೀಯವಾದ ಔಷಧವು ಮಲನಾಡು ಜ್ವರ, ಹೊಟ್ಟೆಯಲ್ಲಿ ಗಡ್ಡೆ ಆಗಿದ್ದರೆ ಮಕ್ಕಳಿಗೆ ಬರುವ ಜ್ವರ, ಆಮಶಂಕೆ ಅತಿಸಾರ, ನರಗಳ ಎಳತ, ನಿದ್ರೆಬಾರದಿರೋಣ, ಹೆಚ್ಚಾಗಿ ಹೊಸವದು ಛಳಿ, ಕೆಮ್ಮಲು, ತಲೆನೋವು, ಮಕ್ಕಳಿಗೂ, ದೊಡ್ಡವರಿಗೂ ಅಜೀರ್ಣ ಇವುಗಳನ್ನು ಪರಿಹಾರಮಾಡುವುದು. ಸೀಸೆ 1ಕ್ಕೆ 10 ಆಣೆ ವಿ ಪಿ ೪ ಸೀಸೆವರಿಗೂ 5 ಆಣೆ.

☞ ಈ ಪ್ರಾಂತ್ಯದಲಿ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದ್ದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳಿನಲ್ಲಾಗಲೀ ಸ್ಫುಟವಾಗಿ ತಿಳಿಯುವಂತೆ ಬರಿಯಬೇಕು

MY ADDRESS.
P. SUBBA ROY,
Ayurvedic Pharmacy,
Sri Perumalkoil,
SANNATHY, TANJORE.

ನಮ್ಮ ವಿಳಾಸ:—
ಪಿ. ಸುಬ್ಬರಾಯಿ.
ಆಯುರ್ವೇದ ಔಷಧಶಾಲ,
ಶ್ರೀ ವೆಂಕಟೇಶ ಪೆರುಮಾಳ್ ದೇವಸ್ಥಾನ ಸನ್ನಿಧಿ. ತಂಜಾವೂರ

ಒಂದು ತಿಂಗಳು ಮಾತ್ರ.

ಅರ್ಧ ಕ್ರಯ! ಅರ್ಧ ಕ್ರಯ!

ಭಾರಿ 'ಕ್ಲಿಯರೆನ್ಸ್ ಸೇಲು.'

ಇನ್ನೂ ವಿಧವಿಧದ ಸಾಮಾಗ್ರಿಗಳಿಗೆ ಎಡೆ ದೊರಕುವಂತೆ ಈ ವಿಕ್ರಿತವು ಏರ್ಪಡಿಸಲ್ಪಟ್ಟಿರುತ್ತದೆ



ನಮ್ಮಲ್ಲಿಂದ ತರಿಸೋಣಾಗುವ ಹಾರ್ಮೋನಿಯಮ್‌ಗಳು ತಕ್ಕವುಗಳಲ್ಲವೆಂತ ಕಂಡುಬಂದರೆ ಅವುಗಳು ಗಿರಾಕಿಗಳಿಗೆ ತಲ್ಪಿದ 7 ದಿವಸಗಳಲ್ಲಿ ತಿರಿಗಿ ನಮಗೆನೇ ಕಳುಹಿಸಿ ಕೊಟ್ಟು ಹಣವನ್ನು ಪೆರತು ಪಡಕೊಳ್ಳಬಹುದು

ಸೆಟಿಸ್‌ಫೆಕ್ಷನ್ ಫ್ಲುಟ್ ಗಳೆಂಬ ನಮ್ಮ ಹಾರ್ಮೋನಿಯಮ್‌ಗಳು ಒಳ್ಳೇ ಬೆಳತ ಸಾಗುವಾನಿ ಮರದಿಂದ ತಯ್ಯಾರುಮಾಡಲ್ಪಟ್ಟವುಗಳಾದ್ದರಿಂದ ಯಾವ ಹವೆಯಲ್ಲಾದರೂ ಹಾಳಾಗವು ಯಾವ ವಿಧದ ಗಾಯನ ಸ್ವರಗಳನ್ನಾದರೂ ಇವುಗಳಲ್ಲಿ ಬಾರಿಸಬಹುದಾಗಿದೆ ಇವುಗಳ ಬಾಳುವಿಕೆಯ ವಿಷಯ ಮೂರ ವರುಷಗಳ ಜವಾಬ್ದಾರಿಯ ಗ್ಯಾರಂಟಿಯನ್ನು ಕೊಡುವೆವು ಸಿಂಗಲ್ ರೀಡ್ ಹಾರ್ಮೋನಿಯಮ್ ಪೆಟ್ಟಿಗೆಗಳಿಗೆ ರೂ 3[illegible], 40, 50, ಈಗ ರೂ. 19, 20, 25 ಪ್ರಕಾರ ಕ್ರಯವನ್ನು ತಗ್ಗಿಸಿರುವೆವು.

ಡಬ್ಬಲ್ ರೀಡ್ ಇರುವಂಥವುಗಳಿಗೆ ಕ್ರಯವನ್ನು ರೂ. 60, 70, 80ರಿಂದ ರೂ 30, 35, 40ಕ್ಕೆ ತಗ್ಗಿಸಿರುತ್ತೇವೆ ಹಾರ್ಮೋನಿಯಮ್‌ಗಳನ್ನು ತರಿಸಲಪೇಕ್ಷಿಸುವವರು ರೂ. 5ನ್ನು ಮುಂಗಡವಾಗಿ ಕಳುಹಿಸಿಕೊಡಬೇಕು. ಮತ್ತು ಯಾವ ರೈಲ್ವೆ ಸ್ಟೇಶನಿಗೆ ಕಳುಹಿಸಬೇಕೆಂತ ಸ್ಪಷ್ಟವಾಗಿ ಬರಿಯಬೇಕು

ನೆಶನಲ್ ಹಾರ್ಮೋನಿಯಮ್ ಕಂಪೆನಿ.

ಸಿಮ್ಲಾ, ಪಿ ಒ ಕಲ್ಕತ್ತಾ.

ಡಾಕ್ಟರ್ ನವರತ್ನರ

ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ 5 ನಿಮಿಷದೊಳಗ ಕೂದಲು ಕಪ್ಪಾಗಿ ಮೃದುವಾಗುತ್ತದೆ ಇದಕ್ಕೆ ಸಮಾನವಾಗಿ ಎ[illegible] ಒರುವಂಥಾ ಇತರ ತೈಲಗಳಿಲ್ಲ ಪ್ರಯೋಗಿಸಲು ಸುಲಭವಾಗಿದೆ ಪರಿಮಳ, ಕೆಡದ ಬಣ್ಣ ಬಹಳ ಅಗ್ಗ. ಕಪ್ ಮತ್ತು ಬ್ರಶ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ 1 ಟಪ್ಪಾಲು ರೂ 0—4—0.

Dr. Navaratna & Sons,
Kalbadevi Road BOMBAY.

ಏಜಂಟರು:—ಡಿ. ಲೂಲಸ್ ಮಾರ್ಟ್,
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

ಒಂದು ತಿಂಗಳ ತನಕ ಮಾತ್ರ
ಕಡಿಮೆ ದರ!

ನಮ್ಮ ರೈಲ್ವೆ ರೆಗ್ಯುಲೇಟರ್ ವಾಚು ಸರಿಯಾದ ಸಮಯವನ್ನು ತೋರಿಸುವಂಥಾದ್ದಾಗಿಯೂ ಮಹನಿಯರಿಗೆ ತಕ್ಕುದುದಾಗಿಯೂ ಇದೆ ಈ ವಾಚಿಗೆ [illegible] ವರುಷಗಳ ಗ್ಯಾರಂಟಿ ಇದೆ ಕ್ರಯ ರೂ 12 ಈಗ ಕ್ರಯ ರೂ 4 ಮಾತ್ರ ಲೇಡಿಸ್ [illegible] ಕೆರೆಟ್ ಗೊಲ್ಡ ವಾಚು ಕ್ರಯ ರೂ 4[illegible] ಈಗ ರೂ 1[illegible] ಲೇಡಿಸ್ ಸಿಲ್ವರ್ ವಾಚು ಕ್ರಯ ರೂ 21 ಈಗ ರೂ [illegible] ಬಲಿಷ್ಟವಾಗಿಯೂ [illegible] ಬಿಕೆಗೆ ಯೋಗ್ಯವಾಗಿಯೂ ಇದ [illegible] ದಿವಸಕ್ಕೊಮ್ಮೆ ಕೀ ಕೊಡುವ ವಾಚು ನಿಕ್ಕಲ್ ಕೇಸು ಕ್ರಯ ರೂ 24 ಈಗ ರೂ [illegible] ಬೆಳ್ಳಿ ಕೇಸು ಓಪನ್‌ಫೇಸ್ ರೂ 33 ಈಗ ರೂ 11 ಸಿಲ್ವರ್ ಹ[illegible] ಕೇಸು ರೂ 4[illegible] ಈಗ ರೂ 14 ಉತ್ತಮ ವಾಚ [illegible] ವಾಚ ಚರ್ಮದ ಪಟ್ಟಿ ಸಹಿತ ರೂ 1[illegible] ಈಗ ರೂ [illegible]

ಸೂಚನೆ —[illegible] ವಾಚು ವಿನಹ ಇತರ ಪ್ರತಿ ಒಂದ ವಾಚ ಪಡಕೊಳ್ಳುವವರಿಗೆ ಒಂದ ಚೈನು, ಒಂದು ಚೂರಿ, ಒಂದ [illegible] ವಾಚುಗಳನ್ನು ಒಂದೇ ಸಲ ತರಿಸಿಕೊಳ್ಳುವವರಿಗೆ ಅದೇ ನಮೂನೆಯ ಒಂದ ವಾಚ ಬಹುಮಾನವಾಗಿ ದೊರಿಯುವದು

ವಿಳಾಸ —

ಕಾಂಪಿಟಿಶನ್ ವಾಚ್ ಕೊ,
20 ಮದನ ಮಿತ್ರ ಲೇನ್,
ಕಲ್ಕತ್ತಾ

Address —
Competition Watch Co,
20 Madan Mitra Lane
(S) CALCUTTA

B. Narasimha Prabhu,
Bantval, (SOUTH CANARA).
AGENT FOR
Malabar and South Canara.

ಕನ್ನಡ ಪದ್ಯ ವ ಗದ್ಯ ಗ್ರಂಥಗಳು.

ಶ್ರೀಮದ್ವಿಷ್ಣು ಭಾಗವತ ದ್ವಾದಶಸ್ಕಂದ ಅವ್ವಲ್	5	0	0
ಡಿ. ದುಯ್ಯಂ ಪ್ರತಿ.	3	8	0
ಮಹಾಭಾರತ 18 ಪರ್ವಗಳು	4	8	0
ಡಿ 10 ಡಿ	2	0	0
ಡಿ 8 ಡಿ ಅವ್ವಲ್ ಪ್ರತಿ	1	8	0
ಡಿ ದುಯ್ಯಂ	1	0	0
ಜೈಮಿನಿಭಾರತ ಪ್ರತಿಪದ ಟೀಕಾ ತಾತ್ಪರ್ಯ ಅವ್ವಲ್	5	0	0
ಡಿ ದುಯ್ಯಂ	3	8	0
ಜೈಮಿನಿ ಭಾರತ ಮೂಲ ಅವ್ವಲ್	1	8	0
ಡಿ. ದುಯ್ಯಂ ಡಿ	[illegible]	12	0
ತೊರವೆ ರಾಮಾಯಣ ಅವ್ವಲ್	2	4	0
ಡಿ ದುಯ್ಯಂ	1	0	0
ರಾಜಶೇಖರ ವಿಳಾಸ ಕನ್ನಡ ಟೀಕು ಗ್ರಂಥ	1	[illegible]	0
ವೆಂಕಟಗಿರಿ ಮಹಾತ್ಮೆ ಮತ್ತು ಪದ್ಮಾವತಿ ಕಲ್ಯಾಣ	1	8	0
ಅಧ್ಯಾತ್ಮವಿಚಾರ ವೇದಾಂತ ಗ್ರಂಥ	2	4	0
ವನ ಪಂಕಾವಳಿ	1	0	0
ಚೆನ್ನಬಸವ ಪುರಾಣ	0	12	0
ಸಟೀಕ ವಿಪ್ರ ಕರ್ಮ ಪುರಾಣ ಅವ್ವಲ್	1		0
ಡಿ ದುಯ್ಯಂ	0	12	0
ದೊಡ್ಡ ಶುಕಸಪ್ತತಿ ಇದರಲ್ಲಿ [illegible] ಶಾಸ್ತ್ರೋಕ್ತ ಮತ್ತು ನೀತಿಮಾರ್ಗ ಕಥೆಗಳು ಅಡಗಿದೆ ಅವ್ವಲ್ ಪ್ರತಿ	1	[illegible]	0
ಬ್ರಹತ್ಕಥಾ ವ[illegible]	0	12	
ಶಾಂತಿಮತಿ ಸಚಿತ್ರ ಭಾವ್ಯತ ಕಥೆ	0	14	0
ವಿಷ್ಣುಶರ್ಮ ಪಂಚತಂತ್ರ	0	[illegible]	[illegible]
ಭಾಗವತ ಕಥಾ ಸಂಗ್ರಹ	1	[illegible]	[illegible]
ಭಾರತ ಕಥಾಸಂಗ್ರಹ	[illegible]	[illegible]	0
ಜೈಮಿನಿ ಭಾರತ ಕಥಾಸಂಗ್ರಹ	0	12	0
ರಾಮಾಯಣ ಕಥಾಸಂಗ್ರಹ	0	12	0
ಸೀತಾರಾಮಾಯಣ	1	8	0
ಸೀತಾ ಚರಿತ್ರ	1	2	[illegible]
ದೇವೀಮಹಾತ್ಮೆ ಪದ್ಯ	0	8	[illegible]
ದೇವೀಮಹಾತ್ಮೆ ಗದ್ಯ	0	6	[illegible]
ನಳದಮಯಂತಿ ಚರಿತ್ರೆ	0	4	0

ವಿ ಪಿ ದ್ವಾರಾ ತರಿಸಿಕೊಳ್ಳುವವರಿಗೆ ಅಂಚೆ ಹಾಸಲು ಪ್ರತ್ಯೇಕ ಇರುವುದು

ಈ ಮೇಲಿನ ಗ್ರಂಥಗಳ ವಿನಹ ನಾನಾ ತರಹದ ಕನ್ನಡ, ಸಂಸ್ಕೃತ ಮರಾಠಿ ಇಂಗ್ಲೀಷ ಡಿಕ್ಷನರಿ ಮುಂತಾದ ಪುಸ್ತಕಗಳೂ, ಬರವಣಿಗೆ ಸಾಮಾನುಗಳು ವಗೈರೆ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ

ಕೆ. ಎಮ್. ದಾಸಪ್ರಭು,
ರಥಬೀದಿ, ಮಂಗಳೂರು

ಸ್ವದೇಶಾಭಿಮಾನಿಯ ನೋಟೀಸು

ಚಂದಾದಾರರು ನಮಗೆ ಬರೆಯುವ ಎಲ್ಲಾ ಪತ್ರವ್ಯವಹಾರಗಳಲ್ಲಿ ತಮ್ಮ ತಮ್ಮ ವಿಳಾಸದೊಂದಿಗೆ ಇರುವ ರಿಜಿಸ್ಟರ ನಂಬರನ್ನು ತಪ್ಪದೆ ಬರಿಯತಕ್ಕದ್ದು ರಿಜಿಸ್ಟರು ನಂಬರು ಇಲ್ಲದ ಪತ್ರಗಳಿಗೆ ನಿಗಾ ಕೊಡಲಾರೆವು.

ಪತ್ರಿಕೆಗೆ ಚಂದಾದಾರರಾಗಿ ಸೇರಲಪೇಕ್ಷೆಯುಳ್ಳವರು ವರ್ಷ 1ರ ಚಂದಾ ಹಣ ರೂ. 2—1—0ನ್ನು ಮನಿಯಾರ್ಡರು ಮೂಲಕ ರವಾನಿಸುವದುತ್ತಮ. ವಿ. ಪಿ ಮೂಲಕ ಕಳುಹಿಸಬೇಕೆಂದು ಬರಿಯುವಂಥವರಿಗೆ ಪತ್ರಿಕೆಯ ಹಿಂದಿನ ಸಂಚಿಕೆಯನ್ನು ವಿ. ಪಿ ಮಾಡಿ ಕಳುಹಿಸಲಾಗುವದು ವಿ ಪಿ.ಯ ಹೊಬಲಗು ನಮಗೆ ತಲ್ಪಿದ ಕೂಡಲೇ ಪತ್ರಿಕೆಯನ್ನು ಕಳುಹಿಸಲು ಪ್ರಾರಂಭಿಸುವೆವು.

ಮ್ಯಾನೇಜರ್,
ಸ್ವದೇಶಾಭಿಮಾನಿ ಆಫೀಸ್ಸು,
ಮಂಗಳೂರು

ಮೋಸಹೋಗಬೇಡಿ! ಮೋಸಹೋಗಬೇಡಿ!!

ಕೆಲವರು ನಮ್ಮ ಕಂಪೆನಿಯ ಹೆಸರನ್ನು ಹೇಳಿ ಜನಗಳಿಗೆ ಮೋಸಮಾಡುತ್ತಿರುವರು. ಆದ್ದರಿಂದ ನಮ್ಮಿಂದ ಕಳುಹಿಸುವ ಬಾಂಗಿಯನ್ನು ತೆಗೆದುಕೊಳ್ಳುವಾಗ ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು, 5 ಅವೆನ್ಯು ರೋಡ್, ಬೆಂಗಳೂರು ಸಿಟಿ ಎಂದು ಮುದ್ರಿಸಿರುವ ಲೇಬಲು ಇರುವದನ್ನು ನೋಡಿ ತೆಗೆದುಕೊಳ್ಳಿರಿ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ ಮುರಬ್ಬಾವು "ಸಾಲಾಮಿಸ್ರಿ"ಯಲ್ಲಿ ತಯಾರಿಸಲ್ಪಟ್ಟದ್ದು ಅಲ್ಲವೆಂದು ವ್ಯಕ್ತಪಡಿಸುವವರಿಗೆ

೧೦೦೦ ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದು ಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ!!

ಈ ಸಾಲಾಮಿಸ್ರಿ ಎಂಬದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳುಗಡ್ಡೆ ಶಾವುಗಡ್ಡೆ ಇವುಗಳನ್ನು ನಕ್ಷುಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಹೇಳಿ ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದ್ದಲ್ಲಿ ಇದು ಸಾಲಾಮಿಸ್ರಿಯೋ ಅಥವಾ ಬೇರೆ ತರಹಾ ದ್ದೇ ಎಂಬುವುದು ತಿಳಿದು ಬರುತ್ತೆ

ಈ ಮುರಬ್ಬಾವನ್ನು ಪ್ರತಿಯೊಬ್ಬರು ಸೇವಿಸಬೇಕಾಗಿ
ಹೆಂಗಸರು ಮುಟ್ಟಿನ ಕಾಲದಲ್ಲಿ ಸೇವಿಸಬಹುದು

ಸಾಲಾಮಿಸ್ರಿ ಮುರಬ್ಬಾವು — ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವದು
ಸಾಲಾಮಿಸ್ರಿ ಮುರಬ್ಬಾವು — ಮೂತ್ರದೊಂದಿಗೆ ಧಾತುವುಹೋಗುವುದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು — ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವುದು.
ಸಾಲಾಮಿಸ್ರಿ ಮುರಬ್ಬಾವು — ಕ್ಷಣಕ್ಷಣಕ್ಕೂ ಮೂತ್ರವಾಗುವದನ್ನು ನಿಲ್ಲಿಸುವದು
ಸಾಲಾಮಿಸ್ರಿ ಮುರಬ್ಬಾವು — ನಿದ್ರೆಯಲ್ಲಿ ಧಾತುವು ಹೋಗುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು — ಮೆದುಳಿಗೆ ಬಲವನ್ನು ಕೊಡುವದು.
ಸಾಲಾಮಿಸ್ರಿ ಮುರಬ್ಬಾವು — ರಕ್ತವನ್ನು ವೃದ್ಧಿಪಡಿಸಿ ಧಾತುವನು ರೀಪರಿಸುವದು
ಸಾಲಾಮಿಸ್ರಿ ಮುರಬ್ಬಾವು — ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು.
ಸಾಲಾಮಿಸ್ರಿ ಮುರಬ್ಬಾವು — ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೇಖರಿಸುವದು
ಸಾಲಾಮಿಸ್ರಿ ಮುರಬ್ಬಾವು — ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವದು.
ಸಾಲಾಮಿಸ್ರಿ ಮುರಬ್ಬಾವು — ಉತ್ಸಾಹವು, ಬುದ್ಧಿ ಕುಶಲತೆಯು, ಶರೀರಕಾಂತಿಯು ಕೊಡುವದು.
ಸಾಲಾಮಿಸ್ರಿ ಮುರಬ್ಬಾವು — ತಾಂಬ್ರ ಮತ್ತು ಬಂಗಾರ ಭಸ್ಮಕ್ಕಿಂತಲು ಉತ್ತಮವಾದದ್ದು.
ಸಾಲಾಮಿಸ್ರಿ ಮುರಬ್ಬಾವು — ಸ್ತ್ರೀಸಂಗಕ್ಕೆ ಮೊದಲು ಸ್ಖಲನವಾಗುವುದನ್ನು ನಿಲ್ಲಿಸುವದು.

ಒಂದು ಡಬ್ಬಿ ಮುರಬ್ಬಾವನ್ನು 15 ದಿನಗಳು ಕಾಲ ಉಪಯೋಗಿಸುವದರಿಂದ ಪೂರಾ ಗುಣಕೊಡುತ್ತೆ. 2—3 ಡಬ್ಬಿ ಮುರಬ್ಬಾವನ್ನು ಉಪಯೋಗಿಸುವದರಿಂದ ಶಾಶ್ವತವಾಗಿ ಗುಣಕೊಡುತ್ತೆ.

15 ತೊಲ ಮುರಬ್ಬಾವಿನ ಡಬ್ಬಿ 1ಕ್ಕೆ ರೂ 2. ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿವರೆಗೆ ಆಣೆ 6.

ಡಿ. ಮನ್ನಾಲಾಲ್, ಡಿಲ್ಲೀ ವೈದ್ಯರು,
5 ಹಾಜಿಸಾಹೇಬ್ ಹವುಡಿ ಅವೆನ್ಯುರೋಡ್, ಬೆಂಗಳೂರು ಸಿಟಿ.

FREE! FREE!!
S T A Perpetual Calendar
Beautiful and Artistic
As 10 each Postage Extra
How to get it Free
Apply with Postage

Eucalyptus Oil
(Pure & Best
As 4 per 1 oz bottle
Packing & postage Extra
M. S. RAO & Co.
[illegible] City.

ಕನ್ನಡ ಹೊಸ ಪುಸ್ತಕಗಳು — ಕಾದಂಬರಿಗಳು

ಸಂಗೀತಸಮಯಸಾರ, ಹೊಸ ಪುಸ್ತಕ 1—4
ಪ್ರಬಂಧ ಮತ್ತು ಕನ್ನಡ ವಾಕ್ಯರಚನೆಯ ವಿಧಾನವನ್ನು ಹೊಸ ಮತ್ತು ಸುಲಭವಾದ ರೀತಿಯಲ್ಲಿ ವಿವರಿಸಿದೆ 0—12
ಅರೇಬಿಯನ್ ನೈಟ್ಸ್ ಹೊಸ ಮುದ್ರಣ 2—2
ಮುದ್ರಾಮಂಜೂಷ ಡಿ 1—10
ಭಕ್ತವಿಜಯ, (ವಿಷ್ಣು ಭಕ್ತರ ಕಥೆಗಳು) ಹೊಸ ಮುದ್ರಣ 3—2
ಮೈತ್ರೇಯ, (ಅನೇಕ ರಹಸ್ಯಗಳು ವಿವರಿಸಲ್ಪಟ್ಟಿವೆ) 0—5
ವಾಲ್ಮೀಕಿಯ ಜಯ, ಹೊಸ ಮುದ್ರಣ ?—
ಸ್ತ್ರೀಧರ್ಮನೀತಿ, (ಸ್ತ್ರೀಯರಿಗೆ ಅತ್ಯವಶ್ಯಕವಾದದ್ದು) 1—9
ದುರ್ಗಾದಾಸ (ಬಂಗಾಳಿ ನಾವಿಲ್) 0—12
ಪ್ರಫುಲ್ಲ, ಡಿ (ಪತ್ತೇದಾರ ಕಥೆ) 0—12
ವಿಷವಿವಾಹ, ಹೊಸ ಮುದ್ರಣ 0—4
ಶೋಭನೆ, ಡಿ 0—12
ಚಂದ್ರಪ್ರಭಾ, ಹೊಸ ಕಾದಂಬರಿ 0—12
ಚಂಪಕ 0—4
ಪ್ರಿಂರೋಜ ವಿಜಯ, ಗೋಲ್ಡ್‌ಸ್ಮಿತ್ ಕವಿಯ ವಿಕಾರ್ ಆಫ್ ವೇಕ್ ಫೀಲ್ಡ್‌ನ ಭಾಷಾಂತರ 1—9

ಯಂ. ಯಸ್. ರಾವ್ ಕಂಪೆನಿ.,
ಬುಕ್‌ಸೆಲರ್ಸ್, ಅವಿನ್ಯೂರೋಡ್, ಬೆಂಗಳೂರು ಸಿಟಿ.

ಯಂ ಸುಬ್ಬರಾವ್, ಶಂಕರಪುರಂ, ಬೆಂಗಳೂರು ಸಿಟಿ-ಈ ವಿಳಾಸವನ್ನು ಮೇಲ್ಕಂಡಂತೆ ಬದಲಾಯಿಸಿದೆ

ನಮ್ಮಲ್ಲಿ ಎಲ್ಲಾ ವಿಧವಾದ ಕನ್ನಡ ಕಥೆಗಳೂ, ಬಿ ವೆಂಕಟಾಚಾರ್ಯರ ನಾವಿಲ್‌ಗಳೂ, ಗವರ್ನಮೆಂಟ್ ಸ್ಕೂಲು ಪುಸ್ತಕಗಳೂ ದೊರೆಯುತ್ತವೆ. ಪುಸ್ತಕದ ಪಟ್ಟಿ ಪ್ರಿಂಟಾಗುತ್ತಿದೆ.

ಯಂ. ಯಸ್. ರಾವ್ ಎಂಡ್ ಕೊ.,
ಬೆಂಗಳೂರು ಸಿಟಿ.

ಓಂ ತತ್ಸತ್.

ಯಕ್ಷಗಾನ ಛಂದವಿದ್ದ ಪ್ರೇಮಿಗಳಿಗೂ ತತ್ವ ಪ್ರೇಮಿಗಳಿಗೂ ಸೂಚನೆ.

ಮಾರಾಟಕ್ಕೆ ಸಿದ್ಧವಾಗಿರುವುದು! ತ್ವರೆಮಾಡಿರಿ!!

ಕವಿ ಮು. ಮ. ಶ್ರೀನಿವಾಸ ಹರಿದಾಸ ಶ್ಯಾನಯಿ ಇವರಿಂದ

ಚಲೋಗನ್ನಡದಿಂದ ವಿರಚಿತವಾದ

ಯಕ್ಷಗಾನ

ಸೌಭದ್ರಾ ಪರಿಣಯವು.

ತಪ್ಪು ಬಾರದ ರೀತ್ಯಾ ಬಹಳ ಪರಿಷ್ಕಾರವಾಗಿ ಸುರೇಖ ಅಕ್ಷರಮಾಲಿಕೆಯಿಂದ ಮುದ್ರಿಸಿರುತ್ತದೆ. ಕ್ರಯ ರೂ. 0—6—6. ಟಪ್ಪಾಲು ಖರ್ಚು ಅಲಾಯಿದ.

ಹೆಚ್ಚಿಗೆ ಪ್ರತಿಗಳನ್ನು ಕೊಂಡುಕೊಳ್ಳುವವರಿಗೂ ವ್ಯಾಪಾರಸ್ಥರಿಗೂ ಧಾರಾಳ ಕಮಿಶನ್ ದೊರೆಯುವದು.

ವಿಳಾಸ:—

ಕವಿ ಅಂಡ್ ಸನ್ಸ್, ಮಂಗಳೂರು.

ಎಸ್. ಎ. ಶೀನಪ್ಪ ಹೆಗ್ಡೆ, ಕುಶಲ ಮಂದಿರ, ಪೊಳಲಿ ಪೋಸ್ಟ್ [illegible]

ಯಕ್ಷಗಾನ

ರತಿಕಲ್ಯಾಣವು

ಬೇಗನೇ ತಯ್ಯಾರಾಗುವುದು! ಅಚ್ಚಿನಲ್ಲಿದೆ!!

ಕ್ರಯ 0—6—6. ಟಪ್ಪಾಲು ಖರ್ಚು ಅಲಾಯಿದ.

ಇವುಗಳಲ್ಲದೆ ಪ್ರಣವ ಗಾಯತ್ರಿಗಳ ವಿಷಯ ಒಳ್ಳೇ ಉಪನ್ಯಾಸವನ್ನೊಳಗೊಂಡಿರುವ ಗಾಯತ್ರ್ಯರ್ಥ ಭಾಸ್ಕರವೆಂಬದೊಂದು ಚಿಕ್ಕ ಉತ್ಕೃಷ್ಟವಾದ ಪುಸ್ತಕವೂ ವೇದಾಂತ ಚತುಷ್ಕಾಂಡ ಶ್ರೀಹರಿಭಕ್ತಿಸಾರವೂ ದ್ವಿಗಾನ ಸುಸ್ವರ ಸಂಗೀತ ಶ್ರೀಹರಿಕಥಾರೂಪ ಶ್ರೀ ದ್ರೌಪದಿ (ವಸ್ತ್ರಾಹರಣ) ವಸನಾಕ್ಷಯವೆಂಬುವೂ ಮತ್ತು ಸ್ವಾನುಭವ ತೇಜಸ್ಸೆಂಬ ವೇದಾಂತ ಗ್ರಂಥ ಗದ್ಯರೂಪದಲ್ಲಿ ಸುಲಭ ಭಾಷಾಶೈಲಿಯುಳ್ಳದ್ದಾಗಿ ಎಲ್ಲಾ ತರದ ಬ್ರಹ್ಮಜ್ಞಾನದ ಕುರಿತು ಪ್ರಶ್ನೋತ್ತರ ಸಾಕ್ಷಿಪ್ರಮಾಣಗಳಿಂದ ರಚಿಸಲ್ಪಟ್ಟದ್ದೊಂದು ಸಹ ಮುದ್ರಣಕ್ಕೆ ಸಿದ್ಧವಾಗಿದೆ. ಈ ಮಹತ್ಕಾರ್ಯಕ್ಕೆ ಸರ್ವರೂ ಉದಾರಾಶ್ರಯದಿಂದ ಪ್ರೋತ್ಸಾಹಿಸಬೇಕಾಗಿ ವಿನಂತಿ. ನಿಮ್ಮಗಳೆಲ್ಲರ ಹಿತಕಾಂಕ್ಷಿ,

ಮುಲ್ಕಿ ಮ. ಶ್ರೀನಿವಾಸ ಹರಿದಾಸ ಶಾನಯಿ, ಮಂಗಳೂರು.

ಕರ್ನಾಟಕ ವೃತ್ತ ಮತ್ತು ಧನಂಜಯ.

ಕಳೆದ 25 ವರ್ಷಗಳಿಂದ ಭಾಷಾ ಸೇವೆಯನ್ನೂ ದೇಶ ಸೇವೆಯನ್ನೂ ಮಾಡುತ್ತಿರುವ ಈ ವಾರಪತ್ರಿಕೆಯು ಧಾರವಾಡದಲ್ಲಿ ಪ್ರತಿ ಮಂಗಳವಾರವೂ ಪ್ರಕಟಿಸಲ್ಪಡುವದು

ಲೋಕವ್ಯವಹಾರದ ಉಪಯುಕ್ತ ವಿಷಯಗಳ ಸದಭಿಪ್ರಾಯವನ್ನು ಜನರಲ್ಲಿ ಉಂಟುಮಾಡುವಂಥ ಚಲೋ ಸ್ಫುಟ ಲೇಖಗಳುಳ್ಳ ಮುಂಬಯಿ ಕರ್ನಾಟಕದ ಉತ್ಕೃಷ್ಟ ತರಗತಿಯ ಈ ಪತ್ರವನ್ನು ದಕ್ಷಿಣಕನ್ನಡದವರೂ ಓದುವದು ಅಗತ್ಯ.

ದೊಡ್ಡ ರೊಯಲ್ ಸ್ಯಾಜಿನ ಈ ಪತ್ರಿಕೆಗೆ ವಾರ್ಷಿಕ ಚಂದಾ ಮೊಬಲಗು ಟಪ್ಪಾಲು ಹಾಸಲು ಸೇರಿ ರೂ. ೨—೪—೦ ಆಗಿರುತ್ತದೆ; ಚಂದಾದಾರರಾಗಿ ಸೇರಲಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವದು.

ಮ್ಯಾನೇಜರ್, ಕರ್ನಾಟಕ ವೃತ್ತ ಮತ್ತು ಧನಂಜಯ,
ಮಂಗಳವಾರಪೇಟೆ, ಧಾರವಾಡ.

Vikata Vinodini.

An illustrated Kannada monthly journal, full of humourous stories, witty sayings, comic sketches, moral truths, Etc.

Annual subscription (including postage) Re. 1—0—0 only.

Address:— **Vikata Vinodini Office,**
Cottonpet, Bangalore City.

ಕನ್ನಡ ಮಾಸಪತ್ರಿಕೆ.

ವಿಕಟ ವಿನೋದಿನಿ.

ಹಾಸ್ಯರಸ ಪ್ರಧಾನವಾದ ಮತ್ತು ನೀತಿಪರವಾದ ಹಾಸ್ಯೋಲ್ಲೇಖನಗಳಿಂದ ಕೂಡಿರುವ ಸಚಿತ್ರವೂ ವಿಚಿತ್ರವೂ ಆದ ಮಾಸಪತ್ರಿಕೆಗೆ ಒಂದು ವರುಷದ ಚಂದಾ ಅಂಚೆ ಹಾಸಲು ಸೇರಿ ರೂ. 1 ಮಾತ್ರ.

ನಮ್ಮ ವಿಳಾಸ:— "ವಿಕಟ ವಿನೋದಿನಿ" ಆಫೀಸು,
ಅರಳೆಪೇಟೆ, ಬೆಂಗಳೂರು ಸಿಟಿ.

ಇನಾಂ ಸಾಮಾನು 60! ಇನಾಂ ಸಾಮಾನು 60

ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ ಸಾವಿತ್ರೀ ಹೇರ್ ಆಯಿಲ್.

ಇದರ ಬೆಲೆ 60 ಇನಾಂ ಸಾಮಾನುಗಳೊಡನೆ ಡಬ್ಬಿ 1ಕ್ಕೆ 12 ಆಣೆ. ಯಾವ ಸ್ತ್ರೀಗಳಿಗೆ ಕೂದಲು ಸುಂದರವಾಗಿ ಇರಬೇಕೆಂಬ ಉದ್ದೇಶವಾಗಿಯೂ, ಕೂದಲು ಉದುರುವದನ್ನು ತಡೆದು ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವವರು ಬಜಾರಿನಲ್ಲಿ ದೊರೆಯುವ ಕೀಳು ತರದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ [illegible] ಯನ್ನೂ ಹಾಳುಮಾಡುವದಕ್ಕಿಂತ ನಮ್ಮ [illegible] ತೈಲವನ್ನು ಉಪಯೋಗಿಸಿರಿ. ಈ ಲೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡಾಗ [illegible] ಸುವಾಸನೆ [illegible] ಇರುವ ಮನೆಗೆಲ್ಲ ಪರಿಮಳ ವಾಸನೆ ಹೋಗುವದು. ಇದರ ಪರಿಮಳ ವಾಸನೆ [illegible] ಬರೆಯುವದಕ್ಕೆ ಆಗುವದಿಲ್ಲ. ಇದಲ್ಲದೆ ದೇಹದಲ್ಲಿನ ಉಷ್ಣವನ್ನು ತೆಗೆದು ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿರುವ ಮದುಳನ್ನು [illegible] ಮುಖಕ್ಕೆ ಕಾಂತಿಯನ್ನೂ, ದೇಹಕ್ಕೆ ಆರೋಗ್ಯವನ್ನೂ, ಮನಸ್ಸಿಗೆ ಸಂತೋಷವನ್ನೂ, [illegible] ಆರೋಗ್ಯವನ್ನೂ ಕೊಡುವ ತೈಲ ಇದು ಒಂದಲ್ಲದೆ ಬೇರೊಂದಿಲ್ಲ. ಬರೇ ಮಾತುಗಳಿಂದ ವರ್ಣಿಸುವದರಲ್ಲಿ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿದರೆ ತಿಳಿಯುತ್ತೆ. ಇನಾಂ ಸಾಮಾನುಗಳ [illegible]:— ಸ್ತ್ರೀಯರು [illegible] 1, ಸ್ಟೈಫರ್ 1 [illegible] 4 ದಂತದ ಬಾಚಣಿಗೆ 1, ಸೊಗಸಾದ [illegible] ಪೆಟ್ಟಿಗೆ 1 [illegible] ಕಾರ್ಡು 6, ಸುವಾಸನೆ ಅತ್ತರು ಬಿಲ್ಲೆ 1, ಗಂಧದ ಬಿಲ್ಲೆ 1, ಸ್ತ್ರೀಯರು [illegible] 1, ಒಟ್ಟು 60. ನಮ್ಮ ಕಂಪೆನಿ ಪ್ರಖ್ಯಾತಿ ಹೊಂದುವದಕ್ಕಾಗಿ ಇದೇ ತಿಂಗಳ ಒಳಗಾಗಿ [illegible] ಕೊಳ್ಳುವವರಿಗೆ ಮಾತ್ರ ಈ ಕ್ರಯಕ್ಕೆ ದೊರೆಯುತ್ತದೆ. ಕೂಡಲೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ.— ಪಿ. ಎ. ಎಸ್. ಫಾರ್ಮ ಕಂಪೆನಿ,
3. ಇರುಳಪ್ಪನ್ ಬೀದಿ, ಮದರಾಸು

ಜಯವಿಜಯ
ಅಥವಾ
ತೂಗಾಡುವ ಅಸ್ಥಿಪಂಜರ.

ಇದರಲ್ಲಿ "ದಿಲೀಪಸಿಂಹ ಉರಾರ" ಎಂಬವನು ತನ್ನ ಹಗೆ ತೀರಿಸುವುದಕ್ಕೆ ಎಂಥೆಂಥಾ ಅದ್ಭುತ ಕಾರ್ಯಗಳನ್ನೆಸಗಿ ಕಡೆಗೆ ಹೇಗೆ ಜಯ ಹೊಂದಿ ಸು[illegible]ನ್ನನುಭವಿಸಿದನು?

ಒಬ್ಬ ಸ್ತ್ರೀಯು ತನ್ನ ಪತಿವ್ರತಾ ಧರ್ಮಕ್ಕೋಸ್ಕರ ವಿವಿಧ ಕಠಿಣ ಕಾ[illegible]ಗಳನ್ನು ಕಣ್ಣಾರೆ ಕಂಡರೂ ಎದೆಗುಂದದೆ ಇರಲು ಕಡೆಗೆ ತನ್ನ ಮೂರು ವರ್ಷದ [illegible]ನನ್ನು ತನ್ನ ಸಮಕ್ಷಮದಲ್ಲೇ ತಲೆ ಕೆಳಗಾಗಿ ತೂಗಾಡಿ ಕಟ್ಟಿ ಕಠಾರಿಯಿಂದ ತಿ[illegible] ಅದರ ರಕ್ತದಿಂದ ಅವಳಿಗೆ ಸ್ನಾನಮಾಡಿಸಿ, ಆ ತೂಗಾಡಿಸಿಟ್ಟ ಮಗುವಿನ ಹೆಣವ ನಿರಂತರ ಅಲ್ಲಿಯೇ ಇರಗೊಳಿಸಿ, ಅದರ ರಕ್ತವನ್ನು ಸಹ ಒಂದು ಪಾತ್ರೆಯಲ್ಲಿ ತುಂಬಿ ಒಂದಿಖಾನೆಯಲ್ಲಿ ಅವಳ ಪಕ್ಕದಲ್ಲೇ ಇಟ್ಟು ಅವುಗಳನ್ನು ನೋಡಿಯಾದರೂ [illegible] ಕರಗಿ ವಶಳಾಗುವಂತೆ ಶತಪ್ರಯತ್ನಗೈದರೂ ಪರವಶಳಾಗದೆ ಆ ಸತಿಯು ತನ್ನ [illegible]ವ್ರತಾ ಧರ್ಮದಲ್ಲೇ ದೃಢವಾಗಿದ್ದು ತನ್ನ ಸತಿಧರ್ಮವನ್ನು ಹೇಗೆ ಕಾಪಾಡಿಕೊಂಡ[illegible]

ದಾಸನಾಗಿದ್ದ ನೀಚ ಸೇವಕನೊಬ್ಬನು ತನ್ನ ಅರಸನನ್ನು ಕೊಲ್ಲಿಸಿ ರಾಜ್ಯಾಧಿಕಾರವನ್ನು ತಾನೇ ವಹಿಸಿಕೊಂಡು ನಾನಾಬಗೆಯ ದುಷ್ಕಾರ್ಯಗಳನ್ನು ನಡಿಸಿ, [illegible] ತಾನು ಗೈದ ದುಷ್ಕರ್ಮಗಳಿಗೆ ಹೇಗೆ ತಕ್ಕ ಫಲವನ್ನನುಭವಿಸಿದನು? ಎಂಬ [illegible] ವಿವರವನ್ನು ವ್ಯಕ್ತಪಡಿಸುತ್ತದೆ. ಅದ್ಭುತವಾಗಿಯೂ, ರಸಭರಿತವಾಗಿಯೂ ಇ[illegible] ಈ ಗ್ರಂಥವನ್ನು ಓದುವದರಿಂದ ಪುರುಷರಲ್ಲಿ ಪೌರುಷವೂ ಸ್ತ್ರೀಯರಲ್ಲಿ ಪತಿವ್ರತಾ ಧರ್ಮವೂ ನೆಲೆಗೊಳ್ಳುವದು!

ಕ್ರಯ: 0-12-0 ಪೋಸ್ಟುಖರ್ಚು ಪ್ರತ್ಯೇಕ. ಹನ್ನೆರಡು ಪುಸ್ತಕಗಳನ್ನು ಒಂದೇಸಲ ಪಡಕೊಳ್ಳುವವರಿಗೆ ಒಂದು ಪುಸ್ತಕ ಉಚಿತವಾಗಿ ದೊರಕುವುದು.

ತಾಜ ಕಲಂ:—ಈ ನನ್ನ ಕಾರ್ಯಕ್ಕೆ ಸ್ವಜಾತಿ ಗೃಹಸ್ಥರು ಜಾತಿಯಾಭಿಮಾನದಿಂದಲೂ ವಿಜಾತಿ ಮಹನೀಯರು ಮಿತ್ರಾಭಿಮಾನದಿಂದಲೂ ಪ್ರೋತ್ಸಾಹಕೊಟ್ಟು ಸರ್ವರೂ ಓದಿ ಪ್ರಯೋಜನ ಹೊಂದುವಂತೆ ಕೋರುತ್ತೇನೆ.

ವಿಳಾಸ:— **V. O. Amin**
C/o E. A. Goll Esq
Sirdar Palace, Apollo Street, BOMB

ಚುರುಕಾದ ಏಜಂಟರು ಬೇಕಾಗಿರುವರು! ಧಾರಾಳವಾದ ಕಮಿಶನ್!!

ಮುಂದಿನ ಅಭಿವೃದ್ಧಿಗೆ ತುಂಬಾ ಅವಕಾಶವುಳ್ಳ ವೃತ್ತಿ!!!

ಮುಂಬಾಯಿ ಲೈಫ್ ಎಸ್ಯುರೆನ್ಸ್ ಕಂಪೆನಿ,

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:—ಬಹುಮಾನಪಟ್ಟ ಮಿ। ಲಲ್ಲುಭಾಯಿ ಸಾಮಲ್ ದಾಸರವರು, ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು:—ಫ್ರೆಮ್‌ರೋಜ್ ಆರ್ ಜೋಶೀರವರು, ಜೆ. ಪಿ. ಒನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಚುವೆರಿ:—ಮಿ। ಜೋರ್ಜ್ ಕಿಂಗ್ ಎಫ್. ಎಸ್. ಎ. ಎಫ್. ಐ. ಎ.

ಮೆಡಿಕಲ್ ರಿಫರಿಗಳು:—ಡಾಕ್ಟರ್ ಆರ್. ರಾವ್, ಎಮ್. ಡಿ. ಡಿ. ಎಸ್. ಸಿ. (ಲಂಡನ್)

ಗೌರವಾರ್ಥಕ ಮ್ಯಾನೇಜರ್:—ರಾ। ಕೆ. ಸುಬ್ರಮಣ್ಯಯ್ಯರ್, ಬಿ. ಎ. ಜೆ. ಪಿ. ಎಫ್. ಎಸ್. ಎ. ಎ. (ಲಂಡನ್)

ವಿಮೆದಾರರ ವಿಮೆ ಪತ್ರಗಳ ಶರ್ತಗಳ ಪ್ರಕಾರ ಸಿಕ್ಕುವ ಹಣವು ಈ ಕಂಪೆನಿಯಲ್ಲಿ ಬಹಳ ಭದ್ರವಾಗಿರುವದೆಂತ ಲೆಕ್ಕ ವ್ಯವಸ್ಥಾಪಕರು ಅಭಿಪ್ರಾಯಪಟ್ಟಿರುವರು.

ತರುಣಾವಸ್ಥೆಯಲ್ಲಿರುವ ಈ ಕಂಪೆನಿಯು ಮುಂದಕ್ಕೆ ಇನ್ನೂ ಬಹಳ ಅಭಿವೃದ್ಧಿಯನ್ನು ಹೊಂದುವ ವಿಶೇಷ ಸಂಭವಗಳಿಂದ ಕೂಡಿರುವುದೆಂದು "ಕೊಮರ್ಸ್" ಎಂಬ ಪತ್ರಿಕೆಯ ಅಭಿಪ್ರಾಯವಾಗಿರುವುದು.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 1,55,000ವನ್ನು ಠೇವಣಾತಿಯಾಗಿಟ್ಟಿರುವದು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಗೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೊಟ್ಟಿಕಾರ್ ಬ್ರದರ್ಸ್, ಉಡುಪಿ,

ಕನ್ನಡಾ, ಮಲಬಾರ, ತಿರುವಾಂಕೋಡು, ಮತ್ತು ಕೊಚ್ಚಿ ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು.

ಸೂಚನೆ:—ಮಂಗಳೂರಲ್ಲಿರುವ ಈ ಕಂಪೆನಿಯ ವಿಮೆದಾರರು ತಮ್ಮ ವಿಮೆ ಹೊಬಲಿಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಗೆ ರಶೀದಿಯನ್ನು ಕೊಟ್ಟಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಉಡುಪಿ, 3—7—1914.

ಮಹಾಶಯರೆ!

ಮುಂಬಾಯಿ ಲೈಫ್ ಎಸ್ಯುರೆನ್ಸ್ ಕಂಪೆನಿ ಎಂಬುವ ಜೀವವಿಮೆ ಉತ್ತರಾಯಿಸುವ ಸಂಘದ ಬಗ್ಗೆ ತಾವು ಏನೊಂದೂ ವಿಳಂಬವಿಲ್ಲದೆ, ರೂ. 956—10—0ನ್ನು ನನಗೆ ಪಾವತಿಮಾಡಿದುದಕ್ಕಾಗಿ ಅತೀ ಉಪಕಾರವಾಯಿತು. ಸದರಿ ಪೊಲಿಸಿಯನ್ನು ಕುರಿತಾದ ಅವಶ್ಯವಾದ ಪತ್ರಗಳನ್ನು ಅವರಿಗೆ ಮುಟ್ಟಿಸಿದ ಮೂರೇ ದಿನಗಳೊಳಗಾಗಿ ನನಗೆ ಸಲ್ಲತಕ್ಕ ವಿಮೆಯ ಐವಜನ್ನು ತಮ್ಮ ಕಂಪೆನಿಯ ಡೈರೆಕ್ಟರರುಗಳು ನನಗೆ ಪಾವತಿಮಾಡಿಸಿದುದಕ್ಕೋಸ್ಕರ ನನ್ನ ಧನ್ಯವಾದಗಳನ್ನು ಅವರಿಗೆ ದಯೆಯಿಟ್ಟು ತಿಳಿಸಿ. ಈ ತೆರದಲ್ಲಿ ಪೊಲಿಸಿದಾರರೊಡನೆ ಯಥಾರ್ಥವಾದ ರೀತಿಯಲ್ಲೂ ನಂಬುಗೆಯುಂಟಾಗುವಂತೆಯೂ ವರ್ತಿಸುವ ತಮ್ಮ ವಿಮೆ ಕಂಪೆನಿಯಿಂದ ಪ್ರತಿಯೊಬ್ಬನೂ ಒಂದೊಂದು ಪೊಲಿಸಿಯನ್ನಾದರೂ ಪಡಕೊಳ್ಳುವುದು ಉಚಿತವೆಂದು ನನ್ನ ಅಪೇಕ್ಷೆ.

(ದಸ್ಕತ್ತು) ಹಾರಾಡಿ ಆನಂದರಾಯ ಘಡಿಯಾರನ ರುಜು.

(956ನೇ ಪೊಲಿಸಿಯ ವಿಮಾ ಹಣವನ್ನು ಪಡೆಯಲು ಅಧಿಕಾರವುಳ್ಳವನು.)

ಉಡುಪಿ, ತಾ. 20—8—1914.

ನನ್ನ ಎಳೇ ಪ್ರಾಯದಲ್ಲಿ ಮೃತರಾದ ನನ್ನ ಗಂಡ ಕೆ. ಎಲ್. ಪ್ರಭುಗಳ ವಿಮೆ ಪತ್ರಗಳನ್ನು ನಾನು ಕಳುಹಿಸಿಕೊಟ್ಟ ಕೆಲವೇ ದಿವಸಗಳೊಳಗಾಗಿ ಮುಂಬಾಯಿ ಲೈಫ್ ಎಸ್ಯುರೆನ್ಸ್ ಕಂಪೆನಿಯವರು ನನಗೆ ಅತ್ಯಂತ ಅವಶ್ಯವಾದ ಹಣವನ್ನು ಪಾವತಿಮಾಡಿಸಿದುದಕ್ಕೆ ನಾನು ಕೃತಜ್ಞಳಾಗಿರುವೆನು. ನನ್ನ ಒಬ್ಬನೇ ಬಾಲಕನಿಗೆ ಇದೊಂದೇ ಪಿತ್ರಾರ್ಜಿತವಾದ ಧನವಾಗಿದೆ. ಅಂತಹ ಬಡಹುಡುಗನಿಗೆ ಇದೊಂದು ಅಪೂರ್ವವಾದ ಮಹಾದಾನವನ್ನು ಮಾಡಿಕೊಟ್ಟುದಕ್ಕೆ ಪ್ರತಿಯಾಗಿ ನಿಮ್ಮ ಕಂಪೆನಿಯು ಚಿರಕಾಲವೂ ಸೌಭಾಗ್ಯದಲ್ಲಿರಲಿ!

ಭವಾನೀಬಾಯಿ, Pol. No. 1738.

ಸಾಕ್ಷಿ—ಭವಾನೀಬಾಯಿಯ ಸೋದರ ರಾ। ಕೆ. ರಂಗಪ್ಪ ನಾಗಪ್ಪ.

ಮಂಗಳೂರು, ತಾ. 30—10—1914.

ಸಾಧ್ಯವಾದಷ್ಟು ಕಡಿಮೆ ಸಮಯದೊಳಗಾಗಿ ನನಗೆ ಪಾವತಿಯಾಗತಕ್ಕ ಹಣವನ್ನು ಸಲಾಯಿಸಿದುದಕ್ಕೋಸ್ಕರ ಬೊಂಬೇ ಲೈಫ್ ಎಸ್ಯುರೆನ್ಸ್ ಕಂಪೆನಿಯವರಿಗೆ ನನ್ನ ಧನ್ಯವಾದಗಳನ್ನು ಪ್ರೀತಿಪೂರ್ವಕವಾಗಿ ಮುಟ್ಟಿಸಿರಿ! 'ಕ್ಲೈಮು' ಪ್ರಕಾರ ಎಲ್ಲಿ ಹಣವನ್ನು ಪಡಕೊಳ್ಳುವ ಹಾಗೆ ಕಂಪೆನಿಯ ಏಜಂಟರೇ ತಮ್ಮಿಂದಾಗುವಷ್ಟರ ಸಹಾಯವನ್ನು ಮಾಡುತ್ತಿರುವರಾದುದರಿಂದ ನನಗೆ ಯಾವ ತೊಂದರೆಗಳೂ ಉಂಟಾಗಲಿಲ್ಲ. ಹಣವನ್ನು ನಾವಿದ್ದ ಸ್ಥಳಕ್ಕೆ ಬಂದು ತೆತ್ತರು.—ಇದೊಂದು ತಮ್ಮ ಕಂಪೆನಿಯ ವಿಶೇಷ ಗುಣ. ನಿಮ್ಮ ಸಂಘಕ್ಕೆ ಸದಾ ವಿಜಯವು ಆಗಲಿ.

ಅರ್ಕಳ ರಾಮಚಂದ್ರ ಶ್ಯಾನಭಾಗನ ರುಜು.

(Pol. No. 2319ನೆಯ ವಾರಿಸಿ ಹಕ್ಕಿನ ಆಸಾಮಿ.)

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೊ ದಿಲ್-ಚಮಾನ್

(ರಿಜಿಸ್ಟರ್ಡ್.)

ಸುರಭಗಳಲ್ಲಿ ಮಕುಟವರ್ಧನ!

ಬಹಳ ಸುವಾಸನೆಯುಳ್ಳ ಈ ಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸದಾ ಸುವಾಸನೆಯುಳಿವ ಗುಸಂಧವು. ಒಂದೆರಡು ತಟಕು ಕೈವಸ್ತ್ರದಲ್ಲಿ ತಾಗಿಸಿದ್ದೇ ಆದರೆ 8 ದಿವಸಗಳ ವರೆಗೂ ಪರಿಮಳವಿರುವದು.

	ರೂ.	ಆ.	ಪೈ.
ಕ್ರಯ ½ ಡ್ರಾಮ್ ಟ್ಯೂಬ್ .	0	8	0
1 ,, .	0	12	0
½ ಔನ್ಸ್ ಟ್ಯೂಬ್ . .	2	·0	0
ಒಟ್ಟೊ, ದಿಲ್-ಚಮಾನ್ ಪರಿಮಳದ ಕಾರ್ಡುಗಳು ಡಜನಿಗೆ . .	0	12	0

ವಿ. ಪಿ. ಚಾರ್ಜು 0—4—0 ಬೇರೆ.

ಪ್ರಾಮುಖ್ಯ ಏಜಂಟರು—:

ಎಚ್. ಆರ್. ಮೋಡಿ ಎಂಡ್ ಕೋ,

10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.

H. R. MODY & Co.,

10 Princes Street, BOMBAY.

ವೈಶೇಷ್ಯವು.

ನಾವು ಲೋಕ ಪ್ರಖ್ಯಾತ ಪೇಟೆಂಟ್ ಔಷಧಿಗಳಿಗೂ ಅತ್ತರು ಮೊದಲಾದ ಪರಿಮಳ ದ್ರವ್ಯಗಳಿಗೂ ಪ್ರಾಮುಖ್ಯ ಏಜಂಟರಾಗಿರುತ್ತೇವೆ.

ಎಕ್ಸೆಲ್ಸಿಯರ್ ಸಾರ್ಸಪರಿಲ್ಲಾ.

(ಐಯೋಡೈಸ್ಡ್)

ಎಂಬ

ರಕ್ತಶುದ್ಧಿಯ ದೀಪಕ.

ಕ್ರಯ ಬಾಟ್ಲಿಗೆ ರೂ. 1—4—0 ಮತ್ತು ರೂ. 2—0—0.

ಪಿಯರ್ಸ್ ನರ್ವೈನ್ ಟೊನಿಕ್ ಪಿಲ್ಸ್

(ಆದರ್ಶದೀಪಕ.)

ಆರೋಗ್ಯವನ್ನು ಉಂಟುಮಾಡುವದು, ಅಶಕ್ತಿಯನ್ನು ಹೋಗಗೊಳಿಸುವದು, ಅಶಕ್ತರಾದ ಬಾಲಕರಿಗೂ ಬಾಲಕಿಯರಿಗೂ ಬಹಳ ಪ್ರಯೋಜನಕಾರಿ!

ಕ್ರಯ 30 ಮಾತ್ರೆಗಳ ಶೀಸೆ 1ಕ್ಕೆ ರೂ. 1—8—0.

ರಾಮಬಾಣ ಗಜಕರ್ಣ ಮುಲಾಂ.

ಗಜಕರ್ಣಕ್ಕೆ ಅತ್ಯುತ್ಕೃಷ್ಟವಾದ ಮುಲಾಂ. ಡಬ್ಬಿ 1ಕ್ಕೆ 4 ಆಣೆ.

ಮೋಡಿಯವರ

ತಲೆಶಿಡಿತ ಬಿಲ್ಲೆಗಳು

ಒಂದೇ ನಿಮಿಷದಲ್ಲಿ ಗುಣ.

ಒಂದು ಬಿಲ್ಲೆಯನ್ನು ನೀರಿನಲ್ಲಿ ಹಾಕಿ ಸೇವಿಸಬೇಕು. 25 ಬಿಲ್ಲೆಗಳ ಸೀಸೆ 1ಕ್ಕೆ 0—12—0. ಇತರ ವಿಶೇಷ ಔಷಧಗಳ ಪಟ್ಟಿಗೆ ಬರಕೊಳ್ಳಿರಿ.

H. R. Mody & Co., ಎಚ್. ಆರ್. ಮೋಡಿ ಎಂಡ್ ಕೊ,

Chemist, ಕೆಮಿಸ್ಟ್,

10 PRINCES ST., BOMBAY. 10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.

ನಂಬಿ ಮೋಸಹೋಗಬೇಡಿರಿ! ನಂಬಿ ಮೋಸಹೋಗಬೇಡಿರಿ!!

ಅಸಲ್ ಪಂಜಾಬಿ ಮುರಬ್ಬಾ

ಕೆಲವರು ನಮ್ಮನ್ನು ನೋಡಿ ನಕ್ಕಲ್ ಮುರಬ್ಬಾವನ್ನು ತಯಾರಿಸಿ ನಮ್ಮ ಹೆಸರು ಇಟ್ಟು, ಜನಗಳಿಗೆ ಮೋಸಮಾಡುತ್ತಾರೆ. ಅದನ್ನು ಕಂಡು ಮೋಸಹೋಗಬೇಡಿರಿ. ನಮ್ಮಿಂದ ಕಳುಹಿಸುವ ಬಾಂಗಿಯನ್ನು ತೆಗಿಯುವಾಗ ಧೈರ್ಯಲಕ್ಷ್ಮಿ ಅಂಡು ಕಂಪೆನಿ, 3 ಇರುಳಪ್ಪನ ಬೀದಿ, ಮದರಾಸು ಎಂತ ಮುದ್ರಿಸಿರುವ ಲೇಬಲ್ ನೋಡಿ ತೆಗೆಯಿರಿ.

500 ರೂಪಾಯಿಗಳ ಬಹುಮಾನ!

ಲೋಕಪ್ರಸಿದ್ಧವಾದ "ಪಂಜಾಬಿ ಸಕಲರೋಗ ಸಂಜೀವಿನಿ"ಯನ್ನು ಸೇವಿಸಿ ಚೀವವಿಮೆಯನ್ನೂ ಮಾಡಿಕೊಳ್ಳಿರಿ. ದುರಭ್ಯಾಸಗಳಿಂದ ಧಾತುವನ್ನೂ ನಷ್ಟಪಡಿಸಿಕೊಂಡು ದುಃಖಿಸುವದನ್ನೂ ಬಿಟ್ಟು, ಲೋಕೋಪಕಾರಾರ್ಥವಾಗಿ ತಯಾರಿಸಲ್ಪಟ್ಟ "ಪಂಜಾಬಿ ಸಕಲರೋಗ ಸಂಜೀವಿ"ಯನ್ನು ಸೇವಿಸಿರಿ. ಇದನ್ನು ಪಂಜಾಬು, ಕಾಬೂಲ್ ದೇಶದ ಜನಗಳು ಬಹಳವಾಗಿ ಸೇವಿಸುವರು. ತಾವು ಪಂಜಾಬಿ ದೇಶದ ಜನಗಳನ್ನು ನೋಡಿ ಇರುವಿರಿ. ಅವರು ದಿನದಿನವೂ ಪಂಜಾಬಿ ಸಕಲರೋಗ ಸಂಜೀವಿ ಸೇವಿಸಿ ಬಹಳ ಬಲವೂ ದೃಢವಾಗಿಯೂ ಇರುವರು. ತಾವು ಯಾಕೆ ಹಾಗೆ ಇರಬಾರದು. ಪಂಜಾಬಿ ಸಕಲರೋಗ ಸಂಜೀವಿಯನ್ನು ಸೇವಿಸಿ ದೇಹವನ್ನು ಕಾಪಾಡಿಕೊಳ್ಳಿರಿ. ಇದು ಸಮಸ್ತ ಜನಗಳಿಗೂ ಈಶ್ವರಪ್ರಸಾದವೆಂದು ಸಕಲರು ಒಪ್ಪಿದ್ದಾರೆ. ಇದು ರಕ್ತವನ್ನೂ ವೃದ್ಧಿಪಡಿಸಿ ಪುರುಷರಿಗೆ ಬಲವನ್ನೂ ಕೊಡುವದು. ಕೈಕಾಲು ಸೊಂಟದ ನೋವುಗಳನ್ನೂ ಹೋಗಲಾಡಿಸುವುದು. ಇದರಲ್ಲಿ ಅಪರಂಜಿ ಬೆಳ್ಳಿ, ಅಲುವಂಗಭಸ್ಮ, ಸಫೇದ್‌ಮಿಸ್ರಿ, ಶಾಲಮಿಸ್ರಿ, ಮೊದಲಾದವನ್ನೂ ಮೂಳಿಕೆ 15ನ್ನೂ, ಬಜಾರ್ ಸರಕ 100 ಸೇರಿಸಿ ಬಹಳ ಶುದ್ಧವಾಗಿ ಕೈಯಿಂದ ಮುಟ್ಟದೇ ತಯಾರು ಮಾಡಲ್ಪಟ್ಟಿರುವದು. ಇದು ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟದಲ್ಲವೆಂದು ವ್ಯಕ್ತಪಡಿಸುವವರಿಗೆ 500 ರೂಪಾಯಿಯು ಬಹುಮಾನ.



20 ತೊಲೆ ಡಬ್ಬಿ 1ಕ್ಕೆ ರೂ. 3—0—0. ಒಂದೇ ಸಾರಿ 3 ಡಬ್ಬಿ ತರಿಸಿಕೊಳ್ಳುವವರಿಗೆ ರೂ. 8. ಅನುಪಾನಪತ್ರಿಕೆ ಔಷದ ಸಂಗಡ ಇರುತ್ತೆ.

ಮದರಾಸ್ ಏಜನ್ಸಿ— ಧೈರ್ಯಲಕ್ಷ್ಮಿ ಅಂಡು ಕಂಪೆನಿ,
3 ಇರುಳಪ್ಪನ ಬೀದಿ, ಮದರಾಸ್.

ಮಾರಾಟಕ್ಕೆ ಸಿದ್ಧವಿದೆ! ಪುರಾತನ ಸಂಗ್ರಹ! ನೂತನಗ್ರಂಥ!

ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ

ಮತ್ತು

ಭೂತಾಳಪಾಂಡ್ಯರಾಯನ ಅಳಿಯ ಕಟ್ಟು

ಈ ನವರಾತ್ರಿಯು ಅನುಷ್ಠಾನ ಮತ್ತು ಉಪಯುಕ್ತತೆ ಈ ಎರಡು ಕಾರಣಗಳಿಂದ ವಿಶೇಷವಾಗಿದೆಂದು ಮೇಲೆ ಹೇಳಿದೆ / ಆದರೆ ಅನುಷ್ಠಾನದ ಪ್ರಕಾರಗಳನ್ನು, ವಿಧಿಗಳಾವವು, ಅಧಿಕಾರಿಗಳಾರು, ಫಲಶ್ರುತಿಯೇನು ಮುಂತಾದ ವಿಷಯಗಳನ್ನು ವರ್ತಮಾನ ಪತ್ರಗಳಲ್ಲಿ ಚರ್ಚಿಸುವುದು ಅಷ್ಟೊಂದು ಮನೋರಂಜಕವಾಗಿರದು. ಆದುದರಿಂದ ವೈದಿಕರ ಆ ವಿಷಯಗಳನ್ನು ಬಿಟ್ಟು ಉತ್ಸವದ ಉಪಯುಕ್ತತೆ ವಿಷಯದಲ್ಲಿ ಎರಡು ಮಾತುಗಳನ್ನು ಬರೆಯುತ್ತೇವೆ. ಆಶ್ವಿಜ ಮಾಸದಲ್ಲಿ ಈ ಉತ್ಸವದ ಪ್ರವರ್ತನೆಯಾಗಲಿಕ್ಕೆ ಮುಖ್ಯ ಕಾರಣಗಳು ಮೂರು. ಲಕ್ಷ್ಮಿ, ಪಾರ್ವತೀ, ದುರ್ಗಾ ಈ ದೇವತೆಗಳು ಜಗದಂಬೆಯ ಅಂಶಗಳು. ಲಕ್ಷ್ಮಿಯು ಕಾಂತಿಯ ಅಧಿದೇವತೆಯು. ಕಾಂತಿಯು ಚಂದ್ರನಲ್ಲಿ ನಿರ್ಮಲವಾಗಿರುವುದು ಈ ಶರದೃತುವಿನಲ್ಲಿಯೇ. ಇಂತಹ ನಿರ್ಮಲಕಾಂತಿಯಿಂದ ಆಹ್ಲಾದಕರವಾದ ಶರದೃತುವಿನಲ್ಲಿ-ಆಶ್ವಿಜದಲ್ಲಿ—ಕಾಂತಿಯ ಅಧಿದೇವತೆಯಾದ ಲಕ್ಷ್ಮಿಯ ರೂಪದಿಂದ ಜಗದಂಬೆಯನ್ನು ಅರ್ಚಿಸುವ ಪದ್ಧತಿಯು ಪ್ರಚಾರದಲ್ಲಿ ಬಂತು. ಇದೊಂದು ಕಾರಣವು. ಇನ್ನೊಂದು ಕಾರಣವೇನೆಂದರೆ ಘಟಸ್ಥಾಪನೆ, ಬಲಿಹರಣ ಮುಂತಾದ ಈ ಉತ್ಸವದ ವಿಶಿಷ್ಟ ಅಂಗಗಳನ್ನು ಲಕ್ಷ್ಯೀಕರಿಸಿದರೆ ಹಾಗೆಯೇ ಚಂಡಿಕಾ, ದುರ್ಗಾ ಇವೇ ಮೊದಲಾದ ದೇವಿಯ ವಾಚಕ ಶಬ್ದಗಳ ಅರ್ಥವನ್ನು ಮನಸ್ಸಿನಲ್ಲಿ ತಂದರೆ ಆಪತ್ಪರಿಹಾರಾರ್ಥವಾಗಿಯೇ ಈ ಉತ್ಸವದ ಪ್ರವೃತ್ತಿಯಾಯಿತೆಂದು ಕಂಡುಬರುತ್ತದೆ. ವರ್ಷಾಋತುವಿನಲ್ಲಿ ಯಥೇಷ್ಟ ಮಳೆ ಬಿದ್ದು ಶರದೃತುವಿನಲ್ಲಿ ಹವೆಯು ಬದಲಾಯಿಸುವಾಗ "ವೈದ್ಯಾನಾಂ ಶಾರದೀ ಮಾತಾ" ಎಂಬಂತೆ ರಾಷ್ಟ್ರ ಘಾತಕ ರೋಗಗಳು ಆಗುವ ಸಂಭವವಿರುತ್ತದೆ. ಆದುದರಿಂದ ರೋಗಗಳನ್ನು ತನ್ನ ಕ್ರೋಧ ದೃಷ್ಟಿಯಿಂದ ನಿರ್ಮೂಲಿಸುವ ಚಂಡಿಕೆಯನ್ನೂ, ಸಂಕಟಗಳನ್ನೂ ಪರಿಹರಿಸುವ ದುರ್ಗೆಯನ್ನೂ ಶರದೃತುವಿನ ಪ್ರಥಮ ಭಾಗದಲ್ಲಿ ಆರಾಧಿಸುವುದು ಶ್ರದ್ಧಾವಂತರ ಬುದ್ಧಿಗೆ ಯುಕ್ತವಾಗಿ ತೋರಬಂತು. 'ಮೂರನೇ ಕಾರಣವೇನೆಂದರೆ ವರ್ಷಾಕಾಲದ ಮುಖ್ಯವಾದ ಪೈರು ಏನೂ ಎಡರು ಬರದೆ ಕೈಗೆ ಸಿಗುವಂತೆ ಒಂದು ತಿಂಗಳ ಹಿಂದೆ ವಿಘ್ನೇಶ್ವರನನ್ನು ಪೂಜಿಸಿದ ಶ್ರದ್ಧಾವಂತರು ಧಾನ್ಯಲಕ್ಷ್ಮಿಯು ನಿರ್ವಿಘ್ನವಾಗಿ ಕೈಗೆ ಬರುತ್ತಲೇ ಧಾನ್ಯದ ಅಧಿದೇವತೆಯಾದ ಧನಲಕ್ಷ್ಮಿಯನ್ನು ಸಂತೃಪ್ತಿಪೂರ್ವಕ ಸ್ವಾಗತೀಕರಿಸಿದ್ದಲ್ಲಿ ಅದು ಅವರ ಕೃತಜ್ಞತೆಯ ಸಾಕ್ಷಿಯನ್ನು ಕೊಡುವುದು. (ಧನಲಕ್ಷ್ಮಿಯ ಪೂಜೆಯನ್ನು ಆಶ್ವಿಜ ಬಹುಳ ಅಮಾವಾಸೆ ದಿವಸ ಮಾಡುವ ಸಂಪ್ರದಾಯವುಂಟು. ಈ ಸಂಪ್ರದಾಯವು ವ್ಯಾಪಾರಿ ವರ್ಗದಲ್ಲಿ ಮಾತ್ರ ಉಂಟಲ್ಲದೆ ಸಾರ್ವಜನಿಕವಾಗಿಲ್ಲ. ಸರಸ್ವತಿ, ಧನಲಕ್ಷ್ಮಿ ಮುಂತಾದ ಜಗದಂಬೆಯ ಬೇರೆ ಬೇರೆ ಶಕ್ತಿಗಳನ್ನು ಈ ನವರಾತ್ರಿಯ ದಿವಸಗಳಲ್ಲಿ ಪೂಜಿಸುವರು.)

ಈ ಉತ್ಸವದ ಉಪಯುಕ್ತತೆಯು ಇನ್ನೂ ಒಂದೆರಡು ಮಹತ್ವದ ಕಾರಣಗಳಿಂದ ಸಿದ್ಧವಾಗುತ್ತದೆ. ಈ ಉತ್ಸವದ ಕೊನೆದಿವಸವಾದ ಮಹಾನವಮಿಯ ಮಾರನೇ ದಿವಸ ವಿದ್ಯಾದಶಮಿಯು ಬರುವುದು. ಇದು ವಿದ್ಯೆಯನ್ನು ಪ್ರಾರಂಭಿಸುವ ದಿವಸವು. ವರ್ಷಾಋತುವಿನಲ್ಲಿ ಅಥವಾ ಬೇರೆ ಸಮಯದಲ್ಲಿ ಲೋಪ ಹೊಂದಿದ ಸ್ವಾಧ್ಯಾಯದ ಬಗ್ಗೆ ತಂತಮ್ಮ ಉಪಾಕರ್ಮದಲ್ಲಿ ಲೋಪಪ್ರಾಯಶ್ಚಿತ್ತವನ್ನು ಪಡೆದು ಭಾದ್ರಪದದ ಪಿತೃಪಕ್ಷದಲ್ಲಿ ಪಿತೃಗಳನ್ನು ಆರಾಧಿಸಿ, ಆಶ್ವಿಜದ ಮೊದಲಿನ ೯ ದಿವಸಗಳಲ್ಲಿ ದುರ್ಗಾ ಪೂಜೆಯಿಂದ ಅವಳನ್ನು ಸಂತೋಷಪಡಿಸಿ ಬ್ರಾಹ್ಮಣರು ದಶಮೀ ದಿವಸ ವಿದ್ಯಾರಂಭವನ್ನು ಮಾಡುವುದರಿಂದ ಅದಕ್ಕೆ ವಿದ್ಯಾದಶಮಿಯೆಂದು ಹೆಸರು ಬಂದಿರುವುದು. ಬ್ರಾಹ್ಮಣರು ಈ ದಶಮಿ ತಿಥಿಯ ಉಪಯೋಗವನ್ನು ಈ ರೀತಿಯಿಂದ ಪಡೆಯುವಾಗ ಮೊದಲಿನ ಕ್ಷತ್ರಿಯರು ಅದನ್ನು ಬೇರೆ ವಿಧವಾಗಿ ಉಪಯೋಗಿಸ ಹತ್ತಿದರು. ಶತ್ರುಗಳ ಮೇಲೆ ದಂಡೆತ್ತಿ ಹೋಗಲಿಕ್ಕೆ ವರ್ಷಾಸಮಯವು ಪ್ರತಿಬಂಧಕವಾದುದರಿಂದ ಬ್ರಾಹ್ಮಣರಂತೆಯೇ ಕ್ಷತ್ರಿಯರೂ ಕೂಡ ಪಿತ್ರರ್ಚನೆ, ದುರ್ಗೋಪಾಸನೆಗಳನ್ನು ಮಾಡಿ ಇದೇ ದಶಮಿ ದಿವಸ ಶತ್ರುಗಳ ಮೇಲೆ ದಂಡೆತ್ತಿ ಹೋಗಲು ತಮ್ಮ ಸೀಮೆಗಳನ್ನು ಉಲ್ಲಂಘಿಸುತ್ತಿದ್ದರು. ಈ ಕಾರಣದಿಂದ ಈ ದಶಮಿಗೆ ವಿಜಯಾದಶಮಿಯೆಂದು ಹೆಸರು ಬಂದಿದೆ. ಸಾರಾಂಶ—ಆ ಶು ದಶಮಿಗೆ ಬ್ರಾಹ್ಮಣರ ದೆಸೆಯಿಂದ ವಿದ್ಯಾದಶಮಿ, ಕ್ಷತ್ರಿಯರ ಮೂಲಕ ವಿಜಯಾದಶಮಿ ಹೀಗೆ ಎರಡು ಹೆಸರುಗಳು ಬಂದಿರುವವು. ಅರಸರಾದ ಕ್ಷತ್ರಿಯರು ಸೀಮೋಲ್ಲಂಘನ ಮಾಡುವಾಗ ತಮ್ಮ ಪುರೋಹಿತ ಬ್ರಾಹ್ಮಣರನ್ನು ಸಂಗಡ ತಕ್ಕೊಳ್ಳುತ್ತಿದ್ದುದರಿಂದ ಬ್ರಾಹ್ಮಣ ವರ್ಗದಲ್ಲಿಯೂ ಈ ಆಚಾರವು ರೂಢವಾಯಿತು. ವಿಜಯಾದಶಮಿಯ ದಿವಸ ಮಾಡತಕ್ಕ ಸೀಮೋಲ್ಲಂಘನೆಯ ಪೂರ್ವ ಪರಂಪರೆ ನೋಡಿದರೆ ಉತ್ತರಗೋಗ್ರಹಣಕಾಲದಲ್ಲಿ ಅರ್ಜುನನು ಇದೇ ದಶಮಿಯ ದಿವಸ ಶಮೀ ಪೂಜೆಮಾಡಿ ತನ್ನ ಶಸ್ತ್ರಗಳನ್ನು ಪುನಃ ಸ್ವೀಕರಿಸಿ ಕೌರವರನ್ನು ಬೆನ್ನಟ್ಟಿದ್ದು ಕಂಡು ಬರುತ್ತದೆ. ಈ ಗೋಗ್ರಹಣದಲ್ಲಿ ಅರ್ಜುನನಿಗೆ ಆದ ವಿಜಯ ಲಾಭವು ಮುಂದಿನ ಮಹಾಭಾರತ ಯುದ್ಧದ ಪ್ರಸ್ತಾವನೆ ಇಲ್ಲವೆ ನಾಂದಿಯೆನ್ನಬಹುದು. ಅಸ್ತು ಪೂರ್ವಕಾಲದಿಂದಲೇ ಬ್ರಾಹ್ಮಣರೂ, ಕ್ಷತ್ರಿಯರೂ ಈ ವಿಜಯಾದಶಮಿಯ ದಿವಸ ಸೀಮೋಲ್ಲಂಘನೆ ಮಾಡುತ್ತಿದ್ದರು ಎಂಬದಕ್ಕೆ ಸಂದೇಹವಿಲ್ಲ. ಈಗಿನವರಾದ ನಮಗೂ ಈ ಸೀಮೋಲ್ಲಂಘನೆಯ ವಿಧಿಯನ್ನು ಒಂದು ಮಹತ್ವದ ಕಾರ್ಯದಲ್ಲಿ ಉಪಯೋಗಿಸಿಕೊಳ್ಳಬಹುದಾಗಿದೆ. ಅದೇನೆಂದರೆ, ಅಸೂಯೆ, ಕ್ರೋಧ, ಆಲಸ್ಯ, ಹೇಡಿತನ ಮುಂತಾದ ನಮ್ಮ ಅಂತಃಕರಣದ ವೈರಿಗಳನ್ನು ಜಯಿಸುವುದಕ್ಕಾಗಿ ಸಮಭಾವ, ಪ್ರಸನ್ನತೆ, ಉದ್ಯೋಗ, ದೃಢಚಿತ್ತ, ಧೈರ್ಯ ಮೊದಲಾದ ಸೇನೆಗಳ ಸಹಾಯದಿಂದ ದಂಡೆತ್ತಿ ಹೋಗಿ ಆ ದಿವಸ ಅವುಗಳನ್ನು ಸಂಪೂರ್ಣವಾಗಿ ಸೋಲಿಸತಕ್ಕದ್ದು. ಇದೇ ಈಗಿನವರ ಸೀಮೋಲ್ಲಂಘನೆಯು. ಹೀಗೆ ಮಾಡಿದ್ದಲ್ಲಿ ನಮ್ಮ ಪ್ರಾಚೀನರು ಆಚರಿಸುತ್ತ ಬಂದ ಈ ವಿದ್ಯಾ—ವಿಜಯಾದಶಮಿಯ ಸದುಪಯೋಗವನ್ನು ಈ ಪರಿಸ್ಥಿತಿಯಲ್ಲಿ ಕೂಡ ಪಡೆದುಕೊಂಡ ಶ್ರೇಯಸ್ಸು ನಮಗೆ ಬರದೆ ಇರದು

ವಾಙ್ಮಯ ಕಲಾಶಾಸ್ತ್ರಗಳ ಅಭಿವೃದ್ಧಿಯ ಸಮಾಚಾರ.

(Progress of Literature, Science and Art.)

ಬಂಗಾಳಾ ಸಾಹಿತ್ಯ ಪರಿಶೋಧಕರಲ್ಲಿ ಶ್ರೀಯುತ ರಾಯಸಾಹೇಬ ದಿನೇಶಚಂದ್ರಸೇನರು ಅಗ್ರಗಣ್ಯರು. ಇವರು ಬರೆದ ಬಂಗಾಳಾ ವಾಙ್ಮಯದ ಇತಿಹಾಸ ಪುಸ್ತಕದ ಪ್ರಥಮ ಭಾಗವೇ ಒಂದು ಸಾವಿರ ಪುಟಗಳಿಗೆ ವಿಸ್ತಾರಿದೆ. ಇವರ ಕುಶಲತೆಯನ್ನು ತಿಳಿದು ಇಂಡಿಯಾ ಗವರ್ನ್‌ಮೆಂಟಿನವರು ಇವರಿಗೆ ವರ್ಷಾಶನವನ್ನು ದಯಪಾಲಿಸಿರುವುದು. ಮಾತ್ರವಲ್ಲದೆ ಕಲಕತ್ತಾ ವಿಶ್ವವಿದ್ಯಾಲಯದವರು ಇವರನ್ನು ಉಪನ್ಯಾಸಕರಾಗಿ ನಿಯಮಿಸಿಯೂ ಗೌರವಿಸಿರುವರು. ಈ ಮಹಾಶಯರು ಕಳೆದ ಸಪ್ಟೆಂಬರು ೧೯ನೇ ತಾರೀಖಿನ ದಿನ ಕಲಕತ್ತೆಯ ವಿಶ್ವವಿದ್ಯಾಲಯ ಮಂದಿರದಲ್ಲಿ ರಾಮಾಯಣದ ಕಾಲ ಮೂಲಗಳ ವಿಷಯವಾಗಿ ನೂತನವೂ ಅಪೂರ್ವವೂ ಆದ ಒಂದು ಭಾಷಣವನ್ನು ಮಾಡಿದರು. 'ವಾಲ್ಮೀಕಿಯು ರಾಮಾಯಣವನ್ನು ಬರೆಯುವುದಕ್ಕೆ ಮೊದಲು ದಕ್ಷಿಣದಲ್ಲಿ ಒಂದು, ಆರ್ಯಾವರ್ತದಲ್ಲೊಂದು, ಹೀಗೆ ಪರಸ್ಪರ ಸಂಬಂಧ

ವಿಲ್ಲದ ರಾಮಾಯಣ ವಿಷಯಕವಾದ ಎರಡು ಕಥೆಗಳು ಹಿಂದೂಸ್ಥಾನದಲ್ಲಿ ಪ್ರಚಲಿತವಾಗಿದ್ದುವೆಂದೂ, ಕ್ರಿ. ಪೂರ್ವ ಆರನೆಯ ಶತಮಾನದಲ್ಲಿ ಬರೆಯಲ್ಪಟ್ಟುದಾದರೂ, ಕ್ರಿ. ಪೂ. ಪ್ರಚಾರದಲ್ಲಿದ್ದ 'ದಶರಥ ಜಾತಕ' ಕಥೆಯೇ ಉತ್ತರೇಯ ಕಥಾರೂಪವೆಂದೂ, ಅದರಲ್ಲಿ ರಾವಣನ ವಿಷಯವಾಗಲೀ ರಾಮರಾವಣ ಯುದ್ಧವಾಗಲೀ ಕಂಡುಬರುವುದಿಲ್ಲವೆಂದೂ, 'ಲಂಕಾವತಾರ ಸೂತ್ರ'ವೇ ಮೊದಲಾಗಿ ಕ್ರಿ. ಶ. ದ ಒಂದನೇ ಎರಡನೇ ಶತಮಾನಗಳಲ್ಲಿ ವಿರಚಿತವಾದ ಗ್ರಂಥಗಳಲ್ಲಿ ಕಂಡುಬರುವ ಕಥೆಯೇ ದಾಕ್ಷಿಣಾತ್ಯ ಕಥಾರೂಪವೆಂದೂ, ಈ ಕಥೆಯಲ್ಲಿ ರಾವಣನು ಮೋಕ್ಷಾರ್ಥಿಯಾದ ಮುಮುಕ್ಷುವಾಗಿ ಕಂಡುಬರುವನೆಂದೂ, ಈ ಕಥೆಯಲ್ಲಿಯೂ ಸೀತಾಹರಣ, ರಾಮರಾವಣ ಯುದ್ಧಗಳ ವಿಷಯವು ಹೇಳಲ್ಪಟ್ಟಿರುವುದಿಲ್ಲವೆಂದೂ, ಕ್ರಿ. ಶ. ೧೨ನೇ ಶತಮಾನದಲ್ಲಿ ಹೇಮಚಂದ್ರಾಚಾರ್ಯನಿಂದ ಬರೆಯಲ್ಪಟ್ಟ ಜೈನ ರಾಮಾಯಣದಲ್ಲಿ ರಾವಣ ದಿಗ್ವಿಜಯವು ವಿಸ್ತಾರವಾಗಿ ವರ್ಣಿಸಲ್ಪಟ್ಟು, ರಾವಣನೇ ನಿಜವಾದ ಕಥಾನಾಯಕನೆಂಬಂತೆಯೂ ರಾಮ ಕಥೆಯು ಮುಂದಿನ ಕೆಲವು ಅಧ್ಯಾಯಗಳಲ್ಲಿ ನಿರುಪಾಯವಾಗಿ ಸೇರಿಸಲ್ಪಟ್ಟಿರುವಂತೆಯೂ ಕಾಣಿಸುವುದೆಂದೂ, ಹೀಗಾದುದರಿಂದ ೧೨ನೇ ಶತಮಾನದಲ್ಲಿ ವಾಲ್ಮೀಕಿ ರಾಮಾಯಣವು ಸರ್ವ ವಿಶ್ರುತವಾಗಿದ್ದು ಅದರೊಳಗಣ ಕೆಲಕೆಲವು ಅಂಶಗಳನ್ನು ದಾಕ್ಷಿಣಾತ್ಯ ಕಥೆಯಲ್ಲಿ ನಿರುಪಾಯವಾಗಿ ತೆಗೆದುಕೊಂಡರೆಂಬ ಸಂಗತಿಯು ಸ್ಪಷ್ಟಪಡುತ್ತದೆಂದೂ,'- ಮೊದಲಾದ ಅನೇಕ ವಿಷಯಗಳನ್ನು ವ್ಯಾಖ್ಯಾತರು ಸಾಧಾರಣವಾಗಿ ತೋರಿಸಿಕೊಟ್ಟರು, ಮತ್ತು 'ವಾಲ್ಮೀಕಿಗೆ ಮೊದಲೇ ರಾಮಕಥೆಯೊಂದು ರಾವಣಚರಿತ್ರೆಯೊಂದು, ಹೀಗೆ ಪ್ರತಿ ಪ್ರತ್ಯೇಕವಾದ ಎರಡು ಕಥೆಗಳಿದ್ದುವೆಂದೂ ಕವಿಕುಲತಿಲಕನಾದ ವಾಲ್ಮೀಕಿಯು ಕ್ರಿ. ಶ. ಪೂರ್ವದ ೪ನೇ ಶತಮಾನದ ಸುಮಾರಿಗೆ ಈ ಎರಡು ಕಥೆಗಳನ್ನು ಜೋಡಿಸಿ ವಿಖ್ಯಾತವಾದ ತನ್ನ ಗ್ರಂಥವನ್ನು ರಚಿಸಿದನೆಂದೂ' ಅಪ್ಪಣೆಕೊಟ್ಟರು.

ಹಿಂದೂಸ್ಥಾನದ ಏಳಿಗೆ

(ಕಳೆದ ಸಂಚಿಕೆಯಿಂದ ಮುಂದೆ ಸಾಗಿರುವುದು)

ಸಾರ್ವತ್ರಿಕ ಶಿಕ್ಷಣವೇ ಹಿಂದುಸ್ಥಾನದ ಏಳಿಗೆಯ ಮುಖ್ಯಸಾಧನವು. ವ್ಯಕ್ತಿಗಳಾದರೇನು, ಜನಾಂಗಗಳಾದರೇನು ಯಾರಿಗೆ ಶಿಕ್ಷಣವಿಲ್ಲವೋ ಅವರು ಉನ್ನತಿಯೋನ್ಮುಖಿಗಳಾಗುವುದಿಲ್ಲ. ಸೂರ್ಯಪ್ರಕಾಶವಿಲ್ಲದ ಕಡೆಯಲ್ಲಿ ಕತ್ತಲೆಯು ಸಾಮ್ರಾಜ್ಯವು ಹೇಗೆ ನಿರಂಕುಶವಾಗಿ ಪಸರಿಸುತ್ತಿರುವುದೋ ಹಾಗೆಯೇ ಶಿಕ್ಷಣವಿಲ್ಲದ ಜನಾಂಗದಲ್ಲಿ ಅಜ್ಞಾನ, ಆಲಸ್ಯ, ದಾರಿದ್ರ್ಯ ಇವು ಮುಸುಕಿಕೊಂಡಿರುವವು. ಶಿಕ್ಷಣವೆಂದರೆ ಸೂರ್ಯಪ್ರಕಾಶವೇ ಸರಿ. ಇಂತಹ (ಉದಾರ) ಶಿಕ್ಷಣವನ್ನು ಸರಕಾರದವರು ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿ ತನ್ಮೂಲಕ ನಮ್ಮ ಜನರಿಗೆ ಕೊಡುತ್ತಿದ್ದಾರೆಂಬುವದರಲ್ಲಿ ಸಂದೇಹವಿಲ್ಲ. ಆ ವಿಶ್ವವಿದ್ಯಾಮಂದಿರಗಳು ಮುಕ್ತದ್ವಾರವಾಗಿವೆ, ಯಾವನೂ ವಿದ್ಯಾರ್ಥಕನು ಆ ವಿದ್ಯಾಮಂದಿರದಲ್ಲಿ ಹೊಕ್ಕು ವಿದ್ಯಾದೇವಿಯ ಪ್ರಸಾದವನ್ನು ಪಡೆಯಬಹುದು. ಹೀಗೆ ಪಕ್ಕನೆ ನೋಡುವವರಿಗೆ ಆ ವಿದ್ಯಾಮಂದಿರದ ಸ್ವರೂಪವು ಚನ್ನವಾಗಿ ಕಾಣುತ್ತದೆ. ಮತ್ತು ಪಕ್ಕನೆ ಮಾತ್ರವಲ್ಲ, ವಿಚಾರಪೂರ್ವಕವಾಗಿ ನೋಡಿದರೆ ಆ ಮಂದಿರವು ಚನ್ನವಾಗಿಯೇ ಇದೆ. ಇದು ಸಹಜವು. ಆದರೆ ಎಲ್ಲರಿಗೆ ಅದರಲ್ಲಿ ಪ್ರವೇಶಿಸುವುದು ಮಾತ್ರ ಸುಲಭ ಸಾಧ್ಯವಲ್ಲವು. ಪ್ರಾಥಮಿಕ ಶಿಕ್ಷಣದಿಂದ ಮುಂದೆ ಉತ್ತರೋತ್ತರ ಬಿ. ಎ. ಪರೀಕ್ಷೆಯನ್ನು ಮುಗಿಸಿಕೊಂಡು ಬರುವವರೆಗೆ ಒಬ್ಬನಿಗೆ ಕನಿಷ್ಠಪಕ್ಷಕ್ಕೆ ೪ ಸಾವಿರ ರೂಪಾಯಿಗಳಾದರೂ ಬೇಕು. ಇಷ್ಟು ಭಾರಿ ಕ್ರಯಕೊಟ್ಟು ಬಿ. ಎ. ಪದವಿಯನ್ನು ಪಡೆಯುವವರು ನೂರರಲ್ಲಿ ೫ ಜನರಿದ್ದರೆ ಹೆಚ್ಚಾಯಿತು. ಹೀಗಿದ್ದಲ್ಲಿ ಈ ಮಂದಿರವು ಮುಕ್ತದ್ವಾರವಾಗಿದೆಂದು ಹೇಳುವುದರಲ್ಲಿ ಏನು ಸಾರವಿದೆ? ಯಾವ ವಿದ್ಯೆಯ ಲಾಭವು ನೂರರಲ್ಲಿ ಐದು ಜನರಿಗೆ ಕೂಡ ಆಗುವುದು ಕಷ್ಟಸಾಧ್ಯವಾಗಿರುವುದೋ ಅದರಿಂದ ದೇಶಕ್ಕೆ ಧಾರಾಳವಾಗಿ ಪ್ರಯೋಜನ ಸಿಗುವುದು ಸ್ವಲ್ಪ ಅಶಕ್ಯವೇ ಸರಿ. ಈ ಉಚ್ಚಪ್ರತಿಯ ಶಿಕ್ಷಣವು ೧೦೦ರಲ್ಲಿ ೧೦೦ ಜನರಿಗೆ ಯಾ ೯೦ ಜನರಿಗೆ ದೊರಕಬೇಕು. ಹೀಗೆಂದು ನಮ್ಮ ಅಭಿಪ್ರಾಯವಲ್ಲ. ಇಲ್ಲಿಯ ಸಂಗತಿ ಇರಲಿ, ಇಂಗ್ಲಂಡ್, ಅಮೇರಿಕಾ ಮೊದಲಾದ ಆಧುನಿಕ ವಿದ್ಯಾಪೀಠಗಳ ಮೂಲಸ್ಥಾನವಾದ ದೇಶಗಳಲ್ಲಿ ಕೂಡ ೧೦೦ರಲ್ಲಿ ೯೦ ಜನರು ಉಚ್ಚಶಿಕ್ಷಣವನ್ನು ಪಡೆದದ್ದು ಕಾಣುವುದಿಲ್ಲ. ಇವಲ್ಲದೆ ಸರಕಾರದವರು ಅತಿ ಉದಾರರಾಗಿ ಉಚ್ಚಶಿಕ್ಷಣವು ಬಹು ಅಗ್ಗವಾಗಿ ಸಿಗುವಂತೆ ಏರ್ಪಾಡು ಮಾಡಿದರೆಂದು ನೆನಸುವ. ಹೀಗೆ ಒಂದು ವೇಳೆ ಪರಿಸ್ಥಿತಿ ಬಂದರೆ ೧೦೦ರಲ್ಲಿ ೧೦೦ ಜನರು ಆ ಉಚ್ಚ ಶಿಕ್ಷಣದ ಲಾಭವನ್ನು ಪಡಕೊಳ್ಳುವುದು ಸಾಧ್ಯವುಂಟೇ? ಇಲ್ಲ. ಕಾರಣವೇನೆಂದರೆ ಉಚ್ಚಶಿಕ್ಷಣಕ್ಕೆ ಹಣದಂತೆಯೇ ಮೇಧಾಶಕ್ತಿಯು ಅವಶ್ಯವಾಗಿದೆ. ಅಂತಹ ಮೇಧಾಶಕ್ತಿಯು ೧೦೦ರಲ್ಲಿ ೧೦೦ ಜನರಿಗೆ ಇದ್ದೀತೆಂದು ನೆನಸುವುದು ಅಸ್ವಾಭಾವಿಕವು. ಹೇಗೂ ಇರಲಿ; ಶೇಕಡಾ ೯೦ ಜನರಿಗೆ ಉಚ್ಚಶಿಕ್ಷಣದ ಲಾಭವಾಗುವುದು ಅಸಾಧ್ಯವಿದ್ದರೂ ಶೇಕಡಾ ೫ರ ಪ್ರಮಾಣ ಮಾತ್ರ ಅಷ್ಟೊಂದು ಸಮಾಧಾನಕರವಲ್ಲ. ಇದೇ ನಮ್ಮ ಅಭಿಪ್ರಾಯವು. ಉಚ್ಚಶಿಕ್ಷಣವು ಹಿಮಾಲಯದ ಶಿಖರದಲ್ಲಿದೆ. ಅಲ್ಲಿಗೆ ಎಲ್ಲರಿಂದ ಹೋಗಲು ಸಾಧ್ಯವಿಲ್ಲ. ಆದುದರಿಂದ ಅದರ ಸುದ್ದಿಯನ್ನು ಬಿಟ್ಟು ಮಧ್ಯಮ ತರಗತಿಯ ಶಿಕ್ಷಣವನ್ನು ನೋಡಿದರೆ ಅಲ್ಲಿಯೂ ನಿರಾಶೆಯಲ್ಲದಿದ್ದರೂ ಸಂತೋಷವಾಗುವುದಿಲ್ಲ. ಮಧ್ಯಮ ತರಗತಿಯ ಶಿಕ್ಷಣದ ಮಹತ್ವ ಮತ್ತು ಸಾಮಾನ್ಯಸ್ಥಿತಿಯಲ್ಲಿರುವವನಿಗೆ ಸಹಾ ಅದು ಅಗ್ಗವಾಗಿ ಸಿಗದೆ ಇರುವದು, ಈ ಎರಡು ಸಂಗತಿಗಳನ್ನು ಮನಸ್ಸಿನಲ್ಲಿ ತಂದರೆ ಹಿಂದೂಸ್ಥಾನದ ಏಳಿಗೆಯು ಒಂದೊಂದು ಹೆಜ್ಜೆ ದೂರಕ್ಕೆ ಹೋಗುತ್ತದೆ ಎಂದು ಹೇಳಬೇಕಾಗುತ್ತದೆ. ಕಾರಣವೇನೆಂದರೆ ಉಚ್ಚಶಿಕ್ಷಣವಿಲ್ಲ, ಮಧ್ಯಮಶಿಕ್ಷಣವು ಪ್ರಿಯವಾದದ್ದು. ಇಂತಹ ಸ್ಥಿತಿಯಲ್ಲಿ ಆ ಜನರಿಂದ ತಮ್ಮ ದೇಶದ ಉದ್ಧಾರವೇನಾದೀತು? ಈ ಎರಡು ಬಗೆಯ ಶಿಕ್ಷಣಗಳಿಗೆ ಅವಕಾಶವಾಗಿ ಪ್ರಾಥಮಿಕ ಶಿಕ್ಷಣವು ದ್ರವ್ಯದ ಹೆಚ್ಚಿನ ವ್ಯಯವಿಲ್ಲದೆ ಸಿಗುವಂತಿದೆ. ಆದರೆ ಅಜ್ಞಾನಾವಸ್ಥೆಯಲ್ಲಿದ್ದ ಕೆಳಗಿನ ತರಗತಿಯ ಜನರು ಪಡೆಯಬೇಕಾದಷ್ಟು ಅದರ ಉಪಯೋಗವನ್ನು ಪಡಕೊಳ್ಳುವದಿಲ್ಲ. ಇದು ಮಾತ್ರ ಶೋಚನೀಯವಾದದ್ದು. ಆದುದರಿಂದ ಕೈ. ಗೋಖಲೆಯವರು ಎಲ್ಲರಿಗೆ ಪ್ರಾಥಮಿಕ ಶಿಕ್ಷಣವನ್ನು ಸರಕಾರವು ನಿರ್ಬಂಧದಿಂದ ಕೊಡಿಸಬೇಕೆಂಬಬಗ್ಗೆ ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಬಿಲ್ಲನ್ನು ತಂದಿದ್ದರು. ಪರಂತು ಅದು ಸಾಧ್ಯವಾಗಲಿಲ್ಲ. ಸಾರಾಂಶವೇನೆಂದರೆ- ದಯಾಳುವಾದ ಸರಕಾರವು ಈ ಮೂರು ವಿಧದ ಶಿಕ್ಷಣವನ್ನು ಪಂಕ್ತಿಪ್ರಪಂಚವಿಲ್ಲದೆ ಕೊಡಲಾರಂಭಿಸಿ ಅನೇಕ ವರ್ಷಗಳಾಗಿ ಹೋದರೂ ಹಿಂದೂಸ್ಥಾನದ ಭೂಮಿಯಲ್ಲಿ ಬೀಜ ಈ ಶಿಕ್ಷಣವೃಕ್ಷಕ್ಕೆ ತಕ್ಕ ಫಲವಾಗಲಿಲ್ಲವೆಂತ ನಿರುಪಾಯವಾಗಿ ಹೇಳಬೇಕಾಗುತ್ತದೆ. ಅದು ಯಾರ ದೋಷವೆಂಬುದನ್ನು ಚರ್ಚಿಸುವುದು ಈಗ ನಮ್ಮ ಉದ್ದೇಶವಲ್ಲ. ಪ್ರಕೃತ ಪರಿಸ್ಥಿತಿಯು ಮೇಲೆ ಹೇಳಿದ್ದಂತೆ ಇರುವಾಗ ನಮ್ಮ ಸುಶಿಕ್ಷಿತ ದೇಶಬಾಂಧವರು ಯಾವ ಕಾರ್ಯಭಾಗಗಳನ್ನು ಕೈಕೊಳ್ಳಬೇಕೆಂದರೆ ಅವರು ತಮ್ಮ ಅಜ್ಞ ದೇಶಬಾಂಧವರಿಗೆ ವಿಶೇಷತಃ ಬೇಸಾಯಗಾರರಿಗೆ—ಓದುಬರಹಗಳನ್ನು ಕಲಿಸಿ ಮೆಲ್ಲನೆ ಮೆಲ್ಲನೆ ಶಿಕ್ಷಣದ ಅಭಿರುಚಿಯುಂಟಾಗುವಂತೆ ಮಾಡತಕ್ಕದ್ದು. ಈ ತರದ ಕರ್ತವ್ಯವು ಹಿಂದೂಸ್ಥಾನದ ಅನ್ಯ ಪ್ರಾಂತ್ಯಗಳಲ್ಲಿಯ ಸುಶಿಕ್ಷಿತರಿಂದ ಪ್ರಾರಂಭಿಸಲ್ಪಟ್ಟಿದೆ. ಹಾಗೆಯೇ ನಮ್ಮ ಕನ್ನಡಿಗರು ಈ ಪವಿತ್ರ ಕರ್ತವ್ಯವನ್ನು ಕೈಕೊಂಡರೆ ಸರಕಾರದ ಉದಾರ ಶಿಕ್ಷಣದ ಉದ್ದೇಶವನ್ನು ಪೂರೈಸುವುದರಲ್ಲಿಯೇ ಸಹಾಯ ಮಾಡಿದ್ದಂತಾಗುವುದು. ಇದೇ ನಿರಕ್ಷರರನ್ನು ಕುರಿತು ಸಾಕ್ಷರರು ಮಾಡಬೇಕಾದ ಯತ್ನವು.

ಶಿಕ್ಷಣದ ಅವಸ್ಥೆಯು ಅತೃಪ್ತಿಕರವಿದ್ದಂತೆಯೇ ಔದ್ಯೋಗಿಕ ಪರಿಸ್ಥಿತಿಯೂ ಅಸಮಾಧಾನಕರವಾಗಿದೆ. ಹಿಂದೂಸ್ಥಾನದ ಉಪಯೋಗಕ್ಕೆ ಬೇಕಾದ ಜಿನಸುಗಳನ್ನು ಹಿಂದೂಸ್ಥಾನದಲ್ಲಿಯೇ ತಯಾರಿಸುವುದು ಸಾಂಪತ್ತಿಕ ದೃಷ್ಟಿಯಿಂದ ದೇಶಕ್ಕೆ ಲಾಭಕರವೆಂದು ಸರಕಾರವು ಈಚೆಗೆ ತಿಳಿದುಕೊಂಡಿದೆ. ಪ್ರಕೃತ ಮಹಾಯುದ್ಧದಿಂದಂತೂ ಈ ವಿಷಯದಲ್ಲಿ ಸರಕಾರಕ್ಕೆ ತುಂಬಾ ಖಾತ್ರಿಯಾಗಿದೆ. ಏವಂಚ ಔದ್ಯೋಗಿಕ ಪ್ರಶ್ನದ ಕಡೆಗೆ ಸರಕಾರವು ಈಗ ಸಹಾನುಭೂತಿ ದೃಷ್ಟಿಯಿಂದ ನೋಡುತ್ತಿದೆ. ಇದು ಹಿಂದೂಸ್ಥಾನದ ಔದ್ಯೋಗಿಕ ಪ್ರಗತಿಯ ಸೂಚಕವೆನ್ನಬಹುದು. ಈ ಮೇರೆಗೆ ಔದ್ಯೋಗಿಕ ಪ್ರಗತಿಯೆಂಬ ಹಡಗದ ಕಡೆಗೆ ಅನುಕೂಲವಾಗಿ ಬೀಸುತ್ತಿರುವ ಸರಕಾರದ ಸಹಾನುಭೂತಿಯ ಗಾಳಿಯಿಂದ ನಾವು ಜೀವನಕಲಹವೆಂಬ ಸಮುದ್ರವನ್ನು ದಾಟಿ ಮುಂದೆ ಹೋಗಬಹುದೆಂದು ನೆನಿಸುವಷ್ಟರಲ್ಲಿ ಪರದ್ವೀಪಸ್ಥ ವ್ಯಾಪಾರಿಗಳು ತಮ್ಮ ದುಃಸ್ವಾರ್ಥಸಾಧನೆಗಾಗಿ ಮಾಡುವ ಕೆಲವು ಸಾಹಸಗಳನ್ನು ನೋಡಿದರೆ ಹಿಂದೂಸ್ಥಾನದ ಔದ್ಯೋಗಿಕ ಪ್ರಗತಿಯು ಬಸವನಹುಳದ ಕಾಲಿನಿಂದ ಮುಂದರಿಸುತ್ತಿದೆ, ಕೂಡಲೆ ಬೆಂಕೆಯ ಕಾಲುಗಳನ್ನು ಹಚ್ಚಿ ಕೆಲವರು ಅದನ್ನು ಹಿಂದಕ್ಕೆ ಜಗ್ಗುತ್ತಾರೆಂದು ಹೇಳಬೇಕಾಗುತ್ತದೆ. ಇದೇ ಕಾರಣದಿಂದ ಹಿಂದೂಸ್ಥಾನದ ಔದ್ಯೋಗಿಕ ಪರಿಸ್ಥಿತಿಯು ಸಮಾಧಾನಕರವಿಲ್ಲವೆಂದು ಮೇಲೆ ಹೇಳಿಯದೆ. ಈ ಸ್ಥಿತಿಯನ್ನು ಹೋಗಲಾಡಿಸಿ ಹಿಂದೂಸ್ಥಾನಕ್ಕೆ ನಿಜವಾದ ಔದ್ಯೋಗಿಕ ಪ್ರಗತಿಯನ್ನು ತಂದುಕೊಡಬೇಕಾದರೆ ವ್ಯಾಪಾರಿಗಳು, ಕಾರಖಾನೆದಾರರು, ಸುಶಿಕ್ಷಿತರಾದ ಗಿರಾಕಿಗಳು ತಮ್ಮ ಸಂಘಟಿತ ಪ್ರಯತ್ನದಿಂದ ಹಿಂದೂಸ್ಥಾನದ ಕಲಾಕೌಶಲ್ಯಗಳ ಪುನುರುಜ್ಜೀವನವನ್ನು ಮಾಡಬೇಕು. ಹಿಂದೂಸ್ಥಾನದ ಯಾವ ಯಾವ ಭಾಗಗಳಲ್ಲಿ ಯಾವ ಯಾವ ಜಿನಸುಗಳು ತಯಾರಾಗುವಾತಿವೆಂಬದನ್ನು ನಿರೀಕ್ಷಿಸಿ ಅಲ್ಲಲ್ಲಿ ಆಯಾ ಕಾರಖಾನೆಗಳನ್ನು ಹೊರಡಿಸಿ ಅವುಗಳ ಮುಖಾಂತರ, ಪರದ್ವೀಪಸ್ಥರ ಯಾಂತ್ರಿಕ ಸಹಾಯದಿಂದ ಹೊರಡುವ ನಾಜೂಕಾದ ಮ್ಹಾಲುಗಳೊಂದಿಗೆ ಪ್ರತಿಸ್ಪರ್ಧಿಸುವಷ್ಟು ಯೋಗ್ಯತೆಯ ಮ್ಹಾಲುಗಳನ್ನು ತಯಾರಿಸಬೇಕು. ಈ ದಿಕ್ಕಿನಿಂದ ಪ್ರಯತ್ನ ನಡೆದರೆ ಹೊಟ್ಟೆಗೆ

ಅನ್ನವಿಲ್ಲ, ಮೈಗೆ ಬಟ್ಟೆಯಿಲ್ಲ, ದೀಪಕ್ಕೆ ಎಣ್ಣೆ ಇಲ್ಲ" ಇಂತಹ ಬಡ ಜನರ ಆಕ್ರೋಶಗಳು ಕ್ರಮೇಣ ಶಾಂತವಾಗುವವು.

ಹಿಂದೂಸ್ಥಾನದ ಏಳಿಗೆಗೆ ಶಿಕ್ಷಣ, ಉದ್ಯೋಗ ಇವುಗಳಂತೆ ಅವಶ್ಯಕವಾದ ಮೂರನೇ ಸಾಧನವು ಯಾವುದೆಂದರೆ—ಗದ್ದೆ ಹೊಲಗಳ ಬೇಸಾಯವು. ಹಿಂದೂದೇಶವು ಮುಖ್ಯವಾಗಿ ಈ ಬೇಸಾಯದಿಂದಲೇ ಜೀವಿಸಿಕೊಂಡಿದೆ. ಇದು ಯಾಂತ್ರಿಕ ಯುಗವಾದ್ದರಿಂದ ಬೇಸಾಯ ಕಸಬಿನಲ್ಲಿ ಕೂಡ ಯಂತ್ರಗಳನ್ನು ಉಪಯೋಗಿಸುವದು ಒಳ್ಳೇದು. ಆದರೆ ಒಕ್ಕಲಿಗರಿಗೆ ಅಷ್ಟರಮಟ್ಟಿನ ಶಿಕ್ಷಣ ಮಾತ್ರ ಸಿಗಬೇಕಾದದ್ದು. ಇನ್ನು ಗೊಬ್ಬರಗಳಲ್ಲಿಯೂ ಕೆಲವು ಸುಧಾರಣೆಗಳಾಗಿವೆ. ಈ ವಿಷಯದ ಜ್ಞಾನವು ಅವರಿಗೆ ಅವಶ್ಯವಾದದ್ದು. ಸುಶಿಕ್ಷಿತರು ಬೇಸಾಯಗಾರರನ್ನು ಕೈ ಹಿಡಿದು ಅವರ ಬೇಸಾಯಿಯಲ್ಲಿ ಸುಧಾರಣೆಯಾಗುವಂತೆ ಅವರಿಗೆ ವ್ಯಾವಹಾರಿಕ ಮತ್ತು ಔದ್ಯೋಗಿಕ ಶಿಕ್ಷಣವನ್ನು ಕೊಡಹತ್ತಿದರೆ ಹಿಂದೂಸ್ಥಾನದ ಉಪಜೀವಿಕೆಯ ಮುಖ್ಯ ಸಾಧನವಾದ ಈ ಬೇಸಾಯಿಗೆ ಸಮೃದ್ಧ ದಶೆಯು ಬೇಗನೆ ಬಾರದೆ ಇರದು.

ಹಿಂದೂಸ್ಥಾನದ ಉನ್ನತಿಗೆ ಈ ಮೂರೇ ಸಾಧನಗಳೆಂದು ನಿಷ್ಕರ್ಷವಲ್ಲ. ನಮ್ಮ ದೇಶದ ಉನ್ನತಿಗಾಗಿ ಸರಕಾರದವರು ಮತ್ತು ಅನೇಕ ದೇಶಭಕ್ತರು ಅನೇಕ ದೃಷ್ಟಿಯಿಂದ, ಅನೇಕ ವಿಧವಾಗಿ ಅನೇಕ ಉಪಾಯಗಳನ್ನು ಯೋಚಿಸುತ್ತಿದ್ದಾರೆ, ಸೂಚಿಸುತ್ತಿದ್ದಾರೆ ಮತ್ತು ನೆರವೇರಿಸುತ್ತಿದ್ದಾರೆ. ಇವೆಲ್ಲವು "ಸರ್ವೈರುಪಾಯೈಃ ಫಲಮೇವ ಸಾಧ್ಯಮ್" (ಎಲ್ಲಾ ತರದ ಉಪಾಯಗಳಿಂದ ಫಲವನ್ನೇ ಸಾಧಿಸಬೇಕೆಂದು ಉಪದೇಶಿಸುವ) ಈ ನ್ಯಾಯದಿಂದ ದೇಶಕ್ಕೆ ಲಾಭಕರವೇ ಸರಿ. ಎಲ್ಲರ ಈ ಎಲ್ಲ ಉಪಾಯಗಳು ಏಕೀಕರಣ ಹೊಂದಿ ಅವುಗಳಿಂದ ಬೇಗನೆ ಹಿಂದೂಸ್ಥಾನದ ಏಳಿಗೆಯುಂಟಾಗಲೆಂದು ಆಶಿಸಿ ಈ ಉದ್ದವಾದ ಲೇಖವನ್ನು ಮುಗಿಸುತ್ತೇವೆ.

ತರುಣರ ಸಲುವಾಗಿ ಎರಡು ಶಬ್ದಗಳು.

ಕಾಮವರ್ತನದ ವಿಷಯವಾಗಿ ಎರಡು ಪಕ್ಷಗಳಿರುವವು. ಮೊದಲನೇ ಪಕ್ಷದವರು ಕಾಮವೃತ್ತಿಯು ಸರ್ವಥಾ ತ್ಯಾಜ್ಯವಾದದ್ದೇ ಎಂದು ಹೇಳುವರು. ಎರಡನೆಯ ಪಕ್ಷದವರು ಧರ್ಮಾವಿರುದ್ಧ (ಧರ್ಮ ಅವಿರುದ್ಧ) ಕಾಮವು ತ್ಯಾಜ್ಯವಾದದ್ದಲ್ಲವೆಂದು ಅಭಿಪ್ರಾಯಪಡುವರು. ಮೊದಲನೆಯ ಪಕ್ಷವು ಸನ್ಯಾಸಿಗಳಿಗೂ ವಿರಕ್ತರಿಗೂ ಸಂಬಂಧಿಸುವದು. ಆದ್ದರಿಂದ ಆ ಪಕ್ಷವನ್ನು ಬಿಟ್ಟು ಪ್ರಾಪಂಚಿಕರಿಗೆ ಸಂಬಂಧವಾಗುವ ಎರಡನೇ ಪಕ್ಷದ ವಿಷಯವಾಗಿ ವಿಚಾರಿಸುವಾ. ಕಾಮವು ಪ್ರಜೋತ್ಪಾದನಕ್ಕೆ ಕಾರಣವಾಗಿರುವದರಿಂದ ಅದು ಕೆಲವಂಶದಿಂದ ಉಪಯುಕ್ತವಾಗಿರುವದೆಂದು ಹೇಳಬಹುದು.

ಮನುಷ್ಯನ ಸಾಮರ್ಥ್ಯ, ಕಲ್ಪನಾಶಕ್ತಿ, ಅದ್ಭುತ ಪರಾಕ್ರಮ, ಬಹಳ ಹೇಳುವದೇನು ಪ್ರಾಣಸತ್ವವೆಂದರೂ ಅಡ್ಡಿ ಇಲ್ಲ. ಇವು ಯಾವದರ ಆಶ್ರಯದಿಂದ ನಿಂತಿರುವವೋ ಅಂಥ ವೀರ್ಯದಿಂದಲೇ "ಕಾಮೋತ್ಪತ್ತಿಯಾಗುವದೆಂದು ಬಿಡಿಸಿ ಹೇಳುವ ಕಾರಣವಿಲ್ಲ. ಸ್ತ್ರೀ-ಪುರುಷರು ಧರ್ಮವು ಹಚ್ಚಿದಂತೆ ಈ ಕಾಮವನ್ನು ವಶದಲ್ಲಿಟ್ಟುಕೊಂಡು, ಯೋಗ್ಯ ವಯಸ್ಸಿನಲ್ಲಿ ಲಗ್ನವಾಗಿ ಸಮಾಗಮ ಸುಖದಿಂದ ತಮ್ಮ ಕಾಮವೃತ್ತಿಯನ್ನು ನಡಿಸಬೇಕು. ಆದರೆ ಅದರಲ್ಲಿಯೂ ಅತ್ಯಂತ ತತ್ಪರರಾಗಿರಬಾರದು.

ನಮಗೆ ಸಶಕ್ತರಾದ ಮಕ್ಕಳು ಹುಟ್ಟಬೇಕೆಂಬ ಅಪೇಕ್ಷೆಯು ಎಲ್ಲರಿಗೂ ಸ್ವಾಭಾವಿಕವಾಗಿರುವದು. ಆದ್ದರಿಂದ ಪ್ರತಿಯೊಬ್ಬ ತಂದೆಯು ಮೊದಲೇ ತಮ್ಮ ಮಕ್ಕಳ ಮೇಲೆ ಹೆಚ್ಚು ಜಾಗೃತಿಯನ್ನಿಡಬೇಕಾಗುವದು. ತರುಣ ವಾಚಕರೇ, ಇದರ ಭಾವವು ತಮಗೆ ಗೊತ್ತಾಗಿರಬಹುದು. ನಿಮ್ಮ ಶರೀರದಲ್ಲಿ ಮಕ್ಕಳು ರಸ ರೂಪದಿಂದಿರುವವು. ಅದೇ ರಸದಿಂದಲೇ ಕಾಮೋತ್ಪತ್ತಿಯಾಗುವದು. ದೇಹಶಕ್ತಿ-ಮನಸ್ಸಾಮರ್ಥ್ಯ-ಬುದ್ಧಿತೇಜ ಇವುಗಳೆಲ್ಲವೂ ಕಾಮರಸದ ರಕ್ಷಣೆಯನ್ನವಲಂಬಿಸಿರುವವು. ರಕ್ತ-ಮಾಂಸ-ಮೇದ-ಮಜ್ಜಾ-ಸ್ನಾಯು-ಅಸ್ಥಿ-ಚರ್ಮ ಈ ಸಪ್ತ ಧಾತುಗಳೇ ದೇಹದ ಘಟಕಗಳಾಗಿರುವವು. ಈ ಘಟಕಗಳು ಕಾಮರಸದಿಂದ ಪುಷ್ಟವಾಗಿರುವವು. ಅದು ಎಲ್ಲ ಘಟಕಗಳಲ್ಲಿಯೂ ವ್ಯಾಪಕವಾಗಿರುವದು.

ಕಾಮವು ಮನಸ್ಸಿನಲ್ಲಿ ಚಾಂಚಲ್ಯವನ್ನುಂಟುಮಾಡುವದು. ಯೋಗ್ಯ ಕಾಲದ ವರೆಗೆ ಅದನ್ನು ಬಿಗಿಹಿಡಿಯಬೇಕು. ಈ ಕಾಮದಿಂದ ಹುಚ್ಚರಾಗಿ ಇಂದ್ರಿಯ ದುರುಪಯೋಗ ಮಾಡಿದರೆ ನಿಮ್ಮ ಅತ್ಯುತ್ತಮವಾದ ಶರೀರವೇ ಮಣ್ಣುಪಾಲಾಗುವದು. ಒಂದು ಸಾರೆ ಇಂದ್ರಿಯವು ದೋಷಯುಕ್ತವಾಯಿತೆಂದರೆ ಅದು ಯಾವ ಔಷಧದಿಂದಲೂ ನಿರ್ದೋಷಿಯಾಗಲಾರದು. ಹಾಗಾಯಿತೆಂದರೆ ನಿಮ್ಮ ಇಡೀ ಜನ್ಮವೇ ದುಃಖಮಯವಾಗುವದು. ನಮ್ಮ ಆರೋಗ್ಯ ಸಂಪತ್ತು—ನಮ್ಮ ಮನೋಧೈರ್ಯ—ನಮ್ಮ ಶಾಂತತೆ—ನಮ್ಮ ಬುದ್ಧಿಪಟುತ್ವ ಈ ಮೊದಲಾದ ಸದ್ಗುಣಗಳು ಯಾವದರ ಪ್ರಭಾವದಿಂದ ಈ ಜಗತ್ತಿನಲ್ಲಿ ಮಹತ್ತರವಾದ ಕಾರ್ಯಗಳನ್ನು ಮಾಡುತ್ತವೆಯೋ ಅದೆಲ್ಲವು ಆ ವೀರ್ಯದ ಬಲದಿಂದಲ್ಲವೇನು! ಇಂಥ ಸರ್ವೋತ್ಕೃಷ್ಟವಾದ ಇಂದ್ರಿಯವು ಒಂದಾವರ್ತಿ ದುರುಪಯೋಗವಾಯಿತೆಂದರೆ ಮೇಲೆ ಹೇಳಿದವೆಲ್ಲ ಗುಣಗಳು ಹೇಳ ಹೆಸರಿಲ್ಲದಂತಾಗುವವು; ಆತ್ಮಸಂಯಮನವು ಅಳಿದು ಹೋಗುವದು; ಶೀಲವು ಕೆಡುವದು, ಬುದ್ಧಿಯು ಮಂದವಾಗುವದು; ಮನಸ್ಸು ಅಸ್ಥಿರವಾಗುವದು; ಕಟ್ಟಕಡೆಗೆ ನಮ್ಮ ಕರ್ತೃತ್ವ ಶಕ್ತಿಯು ಲಯವಾಗಿ ಈ ಜಗತ್ತಿನಲ್ಲಿ ನಾವು ಇದ್ದೂ ಇಲ್ಲದಂತೆ ಭೂಭಾರಕರಾಗಿರುವೆವು. ಇಷ್ಟೇ ಅಲ್ಲ. ಇಂಥ ನಿಸ್ಸತ್ವ ಹಾಗೂ ರೋಗಿ ಮನುಷ್ಯನ ಜನನೇಂದ್ರಿಯದಿಂದ ಉತ್ಪನ್ನವಾದ ಕೂಸುಗಳು ಜನ್ಮದಿಂದಲೇ ರಕ್ತದಲ್ಲಿ ತಮ್ಮ ತಾಯಿ-ತಂದೆಗಳ ದೋಷವನ್ನು ತೆಗೆದುಕೊಂಡು ಬಂದಿರುವದರಿಂದ ಅವೂ ಸಹ ರೋಗಿಗಳಾಗಿ, ತಮ್ಮ ಜನ್ಮವನ್ನು ದುಃಖಕ್ಕೆ ಈಡುಮಾಡಿ ಈ ಪ್ರಪಂಚದಲ್ಲಿ ಇದ್ದೂ ಇಲ್ಲದಂತೆ ಭೂಮಿಗೆ ಭಾರವಾಗಿರುತ್ತವೆ. ಇಷ್ಟೆಲ್ಲ ಪಾತಕವೂ, ದುಃಖವೂ ಕಾಮವಿಷಯದ ಅಧರ್ಮದಿಂದ ನಮ್ಮ ಪದರಿನಲ್ಲಿ ಬೀಳುತ್ತವೆ.

ಕಾಮಮೋಹವು ಅತಿ ಭಯಂಕರವಾಗಿರುವದು. ಸದ್ವ್ಯವಸಾಯದಲ್ಲಿ ಮನಸ್ಸನ್ನು ತೊಡಗಿಸಿ ಪವಿತ್ರ ಸ್ಥಲದಲ್ಲಿ ಬಹು ಜಾಗೃತಿಯಿಂದಿರುವದು ಲೇಸು. ಗೃಹಸ್ಥಾಶ್ರಮವನ್ನು ಕೈಕೊಂಡ ಬಳಿಕ ಧರ್ಮಪತ್ನಿಯ ಸಮಾಗಮದಲ್ಲಿ ನಮ್ಮ ಕಾಮಸುಖವನ್ನು ಭೋಗಿಸಬೇಕಾಗಿರುತ್ತದೆ. ಆ ವಿಹಿತ ಕಾಲವು ಬರುವವರೆಗೂ ಬ್ರಹ್ಮಚರ್ಯಾಶ್ರಮವನ್ನು ಉತ್ತಮ ರೀತಿಯಿಂದ ಪಾಲಿಸಲು ಅದರಿಂದಾಗುವ ಲಾಭವನ್ನು ಎಷ್ಟು ಹೇಳಿದರೂ ಸ್ವಲ್ಪವೆ. ಒಂದಾವರ್ತಿ ಮನುಷ್ಯನು ದುರ್ಮಾರ್ಗದಲ್ಲಿ ಪ್ರವೃತ್ತನಾದನೆಂದರೆ ಸನ್ಮಾರ್ಗಕ್ಕೆ ತಿರುಗುವದು ಬಹು ಬಿಗಿಯಾಗಿರುವದು. ಬಳಿಕ "ಮಾಡಿದ್ದುಣ್ಣೊ ಮಹಾರಾಯ" ಎಂಬ ನಾಣ್ಣುಡಿಯಂತೆ ನಾವು ಮಾಡಿದ ದುಷ್ಕರ್ಮದ ಫಲವನ್ನು ನಮ್ಮ ಜನ್ಮದಲ್ಲಿ ಭೋಗಿಸಿಯೇ ತೀರಬೇಕಾಗುತ್ತದೆ. ಆದ್ದರಿಂದ ಮೊದಲೇ ಜಾಣತನದಿಂದ ಸನ್ಮಾರ್ಗವನ್ನು ಹಿಡಿಯಬೇಕು. ಇಂಥಾ ಪವಿತ್ರಾಚರಣೆಯಿಂದಲೂ ನಮ್ಮ ಧರ್ಮಪತ್ನಿಯು ನಮ್ಮನ್ನು ಹೆಚ್ಚು ಪ್ರೀತಿಸುವಳು. ನಮಗೆ ಅನುಪಮ ಸುಖವೂ ದೊರಕುವದು. ನಮ್ಮಿಂದ ಹುಟ್ಟಿದ ಮಕ್ಕಳು ಸಶಕ್ತರೂ, ಕಾಂತಿಯುಕ್ತರೂ ಆಗುವರು. ಅವರನ್ನು ನೋಡುವದರಿಂದ ನಮಗೆ ದಿನಾಲು ಬಹು ಆನಂದವಾಗುವದು. ಅವರು ದೊಡ್ಡವರಾದ ಬಳಿಕ ಅವರಿಂದ ಜಗತ್ತಿನಲ್ಲಿ ಮಹತ್ಕಾರ್ಯಗಳಾಗುವವು. ಇದರಿಂದ ನಮ್ಮ ವಂಶೋದ್ಧಾರವಾಗುವದಲ್ಲದೆ ರಾಷ್ಟ್ರೋದ್ಧಾರ ಮಾಡಿದ ಮಹತ್ಪುಣ್ಯವೂ ನಮಗೆ ಲಭಿಸುವದು.

ಸಾಮಾನ್ಯವಾಗಿ ೧೫-೧೬ ವರ್ಷ ವಯಸ್ಸಿನಲ್ಲಿ ಹುಡುಗರಿಗೆ ಕಾಮವಿಕಾರ ಉತ್ಪನ್ನವಾಗುವದುಂಟು. ಆ ಸಮಯದಲ್ಲಿ ಅವರು ಕೆಡುವ ಸಂಭವವಿರುವದು. ಇಂಥ ಪ್ರಸಂಗದಲ್ಲಿ ಅವರ ತಂದೆಗಳಾಗಲಿ, ಪಾಲಕರಾಗಲಿ ಅವರ ಮೇಲೆ ವಿಶೇಷ ಲಕ್ಷ್ಯವಿಡುವದು ಲೇಸು. ಪ್ರಸಂಗಾನುಸಾರವಾಗಿ ಅವರ ಮನಸಿನ ಮೇಲೆ ಮೂಡುವಂತೆ ಅದರಿಂದಾಗುವ ಹಾನಿಯನ್ನು ಅವರಿಗೆ ಹೇಳುತ್ತಿರಬೇಕು. ನಮ್ಮಲ್ಲಿ ಶ್ರೀಮಂತರು ತಮ್ಮ ಮಕ್ಕಳ ಸಲುವಾಗಿ ತಕ್ಕಷ್ಟು ಎಚ್ಚರಿಕೆಯಿಂದಿರುವದಿಲ್ಲ. ಅವರು ವಸ್ತ್ರಾಲಂಕಾರಗಳಿಂದ ಭೂಷಿತರಾಗಿ ವಿಲಾಸಿಗಳಾಗಿರುವದನ್ನು ನೋಡಿ ಹಿರಿಹಿರಿ ಹಿಗ್ಗುತ್ತಾರೆ. ಅವರಿಗೆ ಮುಂದೆ ಒದಗುವ ಸಂಕಟಗಳನ್ನು ಲಕ್ಷ್ಯಕ್ಕೆ ತರುವದಿಲ್ಲ. ಸಮಾಜ ಸುಧಾರಕರೂ ರಾಷ್ಟ್ರ ಹಿತಚಿಂತಕರೂ ಸಮಾಜ ಹಾಗೂ ರಾಷ್ಟ್ರ ಸುಧಾರಣೆಗಳಲ್ಲಿ ಇದು ಮೊದಲನೆಯ ಉಪಾಯವೆಂದು ಎಣಿಸದಿರಲಾರರು. ಯಾಕಂದರೆ ಈಗಿನ ತರುಣರೇ ಮುಂದೆ ಸಮಾಜ ಮತ್ತು ರಾಷ್ಟ್ರಗಳ ಮುಂದಾಳುಗಳಾಗುವರು. ಈ ಕಾರಣ ಅವರ ನೈತಿಕ ವರ್ತನವು ವಿನಿಪಾತವಾಗದಂತೆ ಪ್ರಯತ್ನಮಾಡಬೇಕೆಂದು ಬೇರೆ ಹೇಳುವ ಅವಶ್ಯವಿಲ್ಲ. ಉಷ್ಣ ಮೊದಲಾದ ರೋಗವುಳ್ಳ ಸ್ತ್ರೀಯರ ಸಂಗ ಮಾಡುವದರಿಂದಲೂ ಕೈಯಿಂದ ವೀರ್ಯವನ್ನು ಕೆಡವುವದರಿಂದಲೂ ಗಾಣದಲ್ಲಿ ತಿರಿದ ಕಬ್ಬಿನಂತೆ ಮನುಷ್ಯನ ಸ್ಥಿತಿಯಾಗುವದು. ಅವರ ಸತ್ವವೇ ಹೊರಟು ಹೋಗುವದು. ಈ ರೀತಿಯಿಂದುಂಟಾಗುವ ಹಾನಿಯನ್ನು ತಿಳಿಸಿ, ಮೇಲಿಂದ ಮೇಲೆ ಅವರಿಗೆ ಸದುಪದೇಶ ಮಾಡುತ್ತಿರಬೇಕು. ಅನೇಕ ತರುಣರು ತಾವು ಮೊದಲು ಉಷ್ಣ ಮುಂತಾದ ರೋಗಕ್ಕೆ ಆಹುತಿಯಾಗುತ್ತಾರೆ, ಬಳಿಕ ತಮ್ಮ ಕ್ಷಣಿಕ ಸುಖದ ಸಲುವಾಗಿ ಉತ್ತಮ ಸ್ತ್ರೀಯರನ್ನು ವಸ್ತ್ರ ಒಡವೆ ಮೊದಲಾದವುಗಳಿಂದ ಮೋಹಗೊಳಿಸಿ ಅವರ ಶರೀರವನ್ನು ಕೆಡಿಸುತ್ತಾರೆ, ಇದರಿಂದ ಎಂಥ ಘೋರಪಾತಕ ಒದಗುವದೆಂಬದನ್ನು ಅವರು ಕನಸು ಮನಸಿನಲ್ಲಿ ತರುವದಿಲ್ಲ. ಇದು ಅತ್ಯಂತ ಲಜ್ಜಾಸ್ಪದ ಮಾತಾಗಿರುವದು. ಹೀಗೆ ವರ್ತಿಸುವದರಿಂದ ನಾವು ಪತಿತ-ವರ್ಗದಲ್ಲಿ ಎಣಿಸಲ್ಪಡುವೆವೆಂಬದು ಅವರ ಲಕ್ಷ್ಯಕ್ಕೆ ಬರುವದಿಲ್ಲ. ವಿಷಯ ಸುಖದ ಮೋಹದಿಂದಲೂ, ಅಜ್ಞಾನದಿಂದಲೂ ಈ ಭಯಂಕರ ಪ್ರಸಂಗವನ್ನು ತಂದುಕೊಳ್ಳುವರು. ತಾಯಿ-ತಂದೆಗಳು ಮಕ್ಕಳನ್ನು ತಮ್ಮ ಅಧೀನದಲ್ಲಿಟ್ಟುಕೊಳ್ಳದೆ ಅವರ ಮೇಲಿನ ಪ್ರೇಮ ಮೂಲಕ ಅವರನ್ನು ಸ್ವತಂತ್ರ ಬಿಡುವದರಿಂದ ಈ ತರದ ಅನರ್ಥಗಳೊದಗುವವೆಂದು ಮೇಲೆ ಹೇಳಿದ್ದೇವೆ.

"ತಾರುಣ್ಯದಲ್ಲಿ ಆರೋಗ್ಯರಕ್ಷಣೆಯು ಸಲುವಾಗಿ ಕಾಮಶಾಂತಿಯನ್ನು ಮಾಡಿಕೊಳ್ಳುವದು ಅವಶ್ಯವಾಗಿರುವದೆಂಬ" ದುರುಪದೇಶ ಮಾಡುವ ಕೆಲ ಕೆಲವು ಪಂಡಿತರು ಈಗಿನ ಮನ್ವಂತರದಲ್ಲಿ ಉದಯವಾಗಿರುವರು. ಅವರ ಮಾತನ್ನು ನಂಬಿ ಬಹುತೇಕ ತರುಣರು ಪತಿತರಾಗುವ ಸಂಭವವುಂಟು. ಈ ತರದ ಕಲ್ಪನೆಯು ಅತ್ಯಂತ ದುಷ್ಟವಾದದ್ದೆಂದು ನಿರ್ವಿವಾದವಾಗಿ ಹೇಳಬಹುದು. "ಇಪ್ಪತ್ತೈದು ವರ್ಷ ವಯಸ್ಸಿನ ವರೆಗೆ ಬ್ರಹ್ಮಚರ್ಯಾಶ್ರಮವನ್ನು ಪಾಲಿಸಬೇಕು, ಅವರೆಗೂ ಗುರುಕುಲವಾಸ ಮಾಡಿ ಒಂದೇ ಮನಸ್ಸಿನಿಂದ ವಿದ್ಯಾಸಂಪಾದನ ಮಾಡಬೇಕು, ಬಳಿಕ ಗುರುಗಳ ಅಪ್ಪಣೆಯನ್ನು ಪಡಕೊಂಡು ಹೋಗಿ ವಿವಾಹಿತನಾಗಿ ಗೃಹಸ್ಥಾಶ್ರಮವನ್ನು ಅಂಗೀಕರಿಸಬೇಕು" ಎಂಬ ನಮ್ಮ ಪೂರ್ವ ಆರ್ಯರ ಉಕ್ತಿಗಳೆಲ್ಲಿ! ಈ ಪಂಡಿತರ ವಿಚಾರಗಳೆಲ್ಲಿ! ಲಂಡನ್ ಮೆಡಿಕಲ್ ಸೊಸಾಯಟಿಯಲ್ಲಿಯ ಶಿಕ್ಷಕರಾದ ಸರ್ ಡಬ್ಲ್ಯು ಆರ್. ಗಾವರ್ಸ, ಎಮ್ ಡೀ ಎಫ್ ಆರ್ ಎಂಬವರು ಬ್ರಹ್ಮಚರ್ಯ ಪಾಲನದಿಂದ ಯಾವನೊಬ್ಬನ ಪ್ರಕೃತಿಯು ಹೆಚ್ಚು ಕಡಿಮೆಯಾಯಿತೆಂದರೆ ಅಥವಾ ಕೆಟ್ಟಿತೆಂದರೆ ಅದು ಸುಧಾರಿಸಿತೆಂಬ ಉದಾಹರಣೆಯು ಒಂದೂ ಇಲ್ಲವೆಂಬ ಅಭಿಪ್ರಾಯಪಟ್ಟಿದ್ದಾರೆ. ಇದರಂತೆ ಎರಡನೇ ಅನೇಕ ವೈದ್ಯವಿಶಾರದರು ಅಭಿಪ್ರಾಯ ಪಡುವರು. ಆದ್ದರಿಂದ ಯಾವ ತರುಣನಾದರೂ ಈ ತರದ ಕುತ್ಸಿತ ಕಲ್ಪನೆಗಳಿಗೆ ಮನ ಒಲಿಸಿ ತಮ್ಮ ಜನ್ಮಕ್ಕೆ ಕಲಂಕ ತಂದುಕೊಳ್ಳಬಾರದೆಂದು ಪೂರ್ವಜರ ಉದಾಹರಣೆಗಳಿಂದಲೂ ಸ್ವಾನುಭವದಿಂದಲೂ ಹೇಳುತ್ತೇವೆ.

ಧರ್ಮಕ್ಕೆ ವಿರುದ್ಧವಾಗದಂತೆ ಕಾಮಸುಖವನ್ನು ಭೋಗಿಸಬೇಕು, ಆ ದಿವಸ ಬರುವ ವರೆಗೂ ಕಾಮನಿಗ್ರಹದಿಂದ ಆತ್ಮಕಲ್ಯಾಣ ಸಾಧಿಸಬೇಕು, ಅದರಿಂದ ಸಮಾಜಕ್ಕೆ ಉಪಯೋಗವಾಗಿ ಮುಂದೆ ಉತ್ಪನ್ನವಾಗುವ ಸಂತತಿಯು ಸಹ ನಿಮ್ಮಂತೆ ಸಮಾಜಕ್ಕೆ ಉಪಯೋಗವಾಗ ವದೆಂದು ಮೇಲೆ ದಿಗ್ದರ್ಶನ ಮಾಡಿರುವೆವು.

ಉಪಸಂಹಾರ.

ಸ್ವಭಾವಗುಣದಿಂದಾಗಲಿ ಒಳ್ಳೆ ಜನರ ಸಹವಾಸದಿಂದಾಗಲಿ ಸನ್ಮಾರ್ಗದಲ್ಲಿರುವ ಹಾಗೂ ಸಂಗದೋಷದಿಂದಾಗಲಿ ಬೇರೆ ಕಾರಣದಿಂದಾಗಲಿ ದುರ್ಮಾರ್ಗಗಾಮಿಗಳಾಗಿರುವ ತರುಣರಿಗೆ ಹೇಳುವದೇನಂದರೆ —ಈ ಕಾಮಬಲಿಯಿಂದ ಪಾರಾಗುವ ಉಪಾಯವು ಇರುವದೊ ಅಥವಾ ಇಲ್ಲವೋ ಎಂದು ಸಂದೇಹಗೊಳ್ಳಬೇಡಿರಿ. ಯಾವ ನಿಮ್ಮ ದೇಹದಲ್ಲಿ ನಿಮ್ಮನ್ನು ಅಧೋಗತಿಗೆ ಒಯ್ಯುವ ಕೆಟ್ಟ ನಡತೆ ಇರುವದೋ ಅದೇ ನಮ್ಮ ದೇಹದಲ್ಲಿ ನಿಮ್ಮನ್ನು ಉದ್ಧಾರಮಾಡುವ ಒಳ್ಳೆ ನಡತೆಯಾದರೂ ಇರುವದು. ಅಂಥಾ ಒಳ್ಳೆ ನಡತೆಯನ್ನು ಹಿಡಿಯಿರಿ. ಕಾಮನು ನಮ್ಮ ಸೇವಕನು, ನಾವು ಕಾಮನ ಸೇವಕರಲ್ಲವೆಂಬದನ್ನು ಮನಸ್ಸಿನಲ್ಲಿ ದೃಢಮಾಡಿರಿ. ಕಾಮವೃತ್ತಿಯು ಒಂದೊಂದು ವೇಳೆ ಪ್ರಬಲವಾಗಿ ನಿಮ್ಮನ್ನು ಬಾಧಿಸಬಹುದು. ಅಂಥ ಪ್ರಸಂಗಗಳಲ್ಲಿ ಕಾಮವಿಷಯದಿಂದ ಯಾರು ಯಾರು ಯಾವ ದುಸ್ಥಿತಿಗೆ ಈಡಾಗಿರುವದೆಂಬದನ್ನು ಲಕ್ಷ್ಯಕ್ಕೆ ತಂದುಕೊಳ್ಳಿರಿ. ಶರೀರ ದೃಷ್ಟಿಯಿಂದಲೂ ನೈತಿಕ ದೃಷ್ಟಿಯಿಂದಲೂ ಕಾಮನಿಗ್ರಹ ಮಾಡಿರಿ. ಅವನ ಕೈಕಾಲುಗಳನ್ನು ಕಟ್ಟಿ ನಿಮ್ಮ ವಶ ಮಾಡಿಕೊಳ್ಳಿರಿ. ಕಾಮಮೋಹದ ಒಂದು ಪ್ರಸಂಗದಲ್ಲಿ 'ಈ ವೇಳೆಗೆ ನೀವು ಜಯಶೀಲರಾದಿರೆಂದರೆ ನಿಮ್ಮ ಪಕ್ಷಕ್ಕೆ ನಿಮಗೆ ವಿಶ್ವಾಸವಾಗುವದು. ನಿಮ್ಮನ್ನು ಉದ್ಧಾರಗೈಯ್ಯುವ ಶಕ್ತಿಯು ನಿಮ್ಮಲ್ಲಿಯೇ ಹುಟ್ಟುವದು. ಎರಡು ಮೂರು ಪ್ರಸಂಗಗಳಲ್ಲಿ ಈ ರೀತಿ ನೀವು ಇಂದ್ರಿಯದಮನ ಮಾಡಿದಿರೆಂದರಾಯಿತು. ಅದರ ಅಭ್ಯಾಸವು ನಿಮಗಾಗಿ ಬರುತ್ತ ಕಾಮನಿಗ್ರಹವು ನಿಮಗೆ ಅತ್ಯಂತ ಸುಲಭ ಮಾರ್ಗವಾಗುವದು. ಅಂದರೆ ನೀವು ಕಾಮನ ವಿಷಯರೋಗದಿಂದ ಮುಕ್ತರಾಗಿ ನಿಮ್ಮ ಹಿತ, ಕುಟುಂಬ ಹಿತ, ಸಮಾಜ ಹಿತ, ಕೊನೆಗೆ ದೇಶಹಿತವನ್ನು ಸಹ ಸಂಪಾದಿಸುವದರಲ್ಲಿ ಸಮರ್ಥರಾಗುವಿರಿ.

ಧ ತ

ಪತ್ರವ್ಯವಹಾರ.

ಅಯ್ಯಾ,

ಅಬ್ಕಾರಿ ಇಲಾಖೆಯ ಕಾನೂನು ಮೇರೆಗೆ ಶೇಂದಿ ಅಂಗಡಿಗಾರರು ಶೇಂದಿ ಮುತ್ತೆಮಾಡುವ ಮರಗಳ ಮರತೆರಿಗೆ ಹಣವನ್ನು ತಾಲೂಕು ಖಜಾನೆಗೆ ಯಾ ಗ್ರಾಮ ಉದ್ಯೋಗಸ್ಥರ ಹತ್ತರ ಕೊಟ್ಟು ಪಡದ ರಶೀದಿಯನ್ನು ಅರ್ಜಿ ಸಹಿತ ಮೊಹರ ಹಾಕಲ್ಪಡುವ ಬಗ್ಗೆ ಅಬ್ಕಾರಿ ಸಬ್ ಇನ್ಸ್ಪೆಕ್ಟರುಗಳ ಕೂಡೆ ಹಾಜರುಪಡಿಸಬೇಕಷ್ಟೆ. ಅಂಥಾ ಪ್ರತಿ ಅರ್ಜಿ ಸಂಗಡ ರೂಪಾಯಿ ಒಂದು ಮೊಹರ ಪೀಸಾಗಿಯೂ, ಅಂಗಡಿಯ ಬಗ್ಗೆ ಗಡಿಪಟ್ಟಿ ಕೊಡುವ ಸಂಬಂಧ ರೂಪಾಯಿ ಒಂದರಂತೆ ವಸೂಲುಮಾಡುವರಷ್ಟೆ. ಈ ಹೊಸ ಕಾಯಿದೆಯು ಯಾವ ಕಾಲದ ಲಾಗಾಯಿತು ಜ್ಯಾರಿಗೆ ಬಂದಿರುವದು. ವಾಚಕರಿಗೆ ತಿಳಿದಿದ್ದರೆ ಈ ಪತ್ರ ಮೂಲಕ ತಿಳಿಸುವಹಾಗಲೆಂದು ಕೋರುವ,

ಗುತ್ತೆದಾರಲ್ಲೊಬ್ಬ.

ಸ್ವಾಮಿ,

ಹೊಸದಾಗಿ ಕಟ್ಟಿಸಿದ ಅಸ್ವಸ್ಥದವರ ಕೋಣೆಗಳಿಗೆ ಅಡಿಗೆ ಮನೆಗಳು ಇಲ್ಲದೆ ಭವನದ ಅಸ್ವಸ್ಥದ ವಿದ್ಯಾರ್ಥಿಗಳ ಆರೈಕೆಗೋಸ್ಕರ ಬರುವ ಅವರ ಸಂಬಂಧಿಕರು ಪಡುವ ಅನಾನುಕೂಲತೆಗಳನ್ನು ಸ್ವತಹಾ ನೋಡಿದ ಮ. ರಾ. ರಾ. ಉಡುಪಿ ತಾಲೂಕು ಬ್ರಹ್ಮಾವರ ತೆಂಕ ಮನೆ ಮಹಾಬಲೇಶ್ವರ ಸೆಟ್ರು ಅಸ್ವಸ್ಥದವರ ಕೋಣೆಗಳಿಗೆ ಎರಡು ಅಡಿಗೆ ಮನೆ ಕಟ್ಟಿಸಬೇಕಾಗಿಯೂ ಆ ಬಗ್ಗೆ ತಗಲಬಹುದಾದ ಖರ್ಚು ತಾನು ಕೊಡುತ್ತೇನಾಗಿಯೂ ಉದಾರ ಮನಸ್ಸಿನಿಂದ ವಾಗ್ದಾನಮಾಡಿರುತ್ತಾರೆ. ಅಂಥಾ ಅಡಿಗೆ ಮನೆಗಳನ್ನು ಕಟ್ಟಿಸುವರೆ ರೂಪಾಯಿ ೫೫೦ ತಗಲುತ್ತದೆಂದು ಅಂದಾಜು ಪಟ್ಟಿಮಾಡಿಸಿದೆ. ಕೆಲಸವನ್ನು ಕೂಡಲೆ ಆರಂಭಿಸಬೇಕೆಂತ ಹೇಳಿ ಆ ಬಗ್ಗೆ ರೂ. ೨೦೦ರನ್ನು ಮುಂದಾಗಿ ವಸೂಲು ಕೊಟ್ಟಿರುತ್ತಾರೆ. ಮತ್ತು ಕಟ್ಟೋಣಕ್ಕೆ ಬೇಕಾದ ಮರ, ಕಪ್ಪಿಣ ವಗೈರೆ ಮತ್ತು ಬಡಿಗೆಯವರ ಮಜೂರಿ ಸಹ ಕೊಡುವದಾಗಿ ವಾಗ್ದಾನ ಮಾಡಿರುತ್ತಾರೆ. ವಿವರವೆಲ್ಲಾ ಈ ಕೆಳಗೆ ತೋರುವ ಅವರ ಕಾಗದದ ಯಥಾ ನಕಲಿನಿಂದ ತೋರಿಬರುವುದು. ಈ ತರದ ಉದಾರ ಮನಸ್ಸಿನವರು ಬಹಳ ಅಪರೂಪವಾಗಿರುವರು.

ಕಳೆದ ೧೯೧೪ನೇ ಇಸವಿಯಲ್ಲಿ ಈ ಮಾನ್ಯಗೃಹಸ್ಥರು ನಮ್ಮ ಸಂಘಕ್ಕೆ ರೂಪಾಯಿ ೫೦೦ ಕೊಟ್ಟಿರುವರೆಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಅಡಿಗೆ ಮನೆಗಳ ಕೆಲಸ ತೀರಿದಲ್ಲಿ ಅವುಗಳನ್ನು ಮಹಾಬಲೇಶ್ವರ ಸೆಟ್ರು ಕಟ್ಟೋಣವೆಂದು ಕರಿಯಬೇಕೆಂಬ ಅಭಿಪ್ರಾಯ.

ಔದಾರ್ಯ ಮನಸ್ಸಿನಿಂದ ಮಾಡಿದ ಈ ಸತ್ಕಾರ್ಯವು ತಕ್ಕದಾದ ಪ್ರಕಟತ್ವಕ್ಕೆ ಒಳಪಡತಕ್ಕದ್ದು ಸರ್ವ ಜನರಿಗೆ ಆಗತ್ಯವಾದದ್ದರಿಂದ ಮಹಾಬಲೇಶ್ವರ ಸೆಟ್ರು ಬರದ ಕಾಗದವನ್ನು ಮತ್ತು ಈ ಕಾಗದವನ್ನು ನಿಮ್ಮ ಪ್ರಖ್ಯಾತಪಟ್ಟ ಪತ್ರಿಕೆಯಲ್ಲಿ ಪ್ರಕಟಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಇಂತಿ ವಂದನೆಗಳು,

ಬಿ. ಮಹಾಬಲ ಹೆಗ್ಗಡೆ.

ತಾರೀಕು 9—10—1915. ಕಾರ್ಯದರ್ಶಿ.

ಮಹಾರಾಜಶ್ರೀ ಪರಮ ಘನವುಳ್ಳ ದಕ್ಷಿಣಕನ್ನಡಾ ಜಿಲ್ಲಾ ಬಂಟರ ಯಾನೆ ನಾಡವರ ಸಂಘದ ಅಧ್ಯಕ್ಷರವರಿಗೆ, ಸೆಕ್ರಟರಿಯವರ ಮುಖಾಂತರ:—

ಸನ್ ೧೯೧೫ನೇ ಇಸವಿ ಸಪ್ಟಂಬರ ತಾರೀಕು ೫ಲ್ಲು ಉಡುಪಿ ತಾಲೂಕು ಬ್ರಹ್ಮಾವರ ಹೋಬಳಿ ಹಂದಾಡಿ ಗ್ರಾಮದ ತೆಂಕು ಮನೆ ನಾಗಪ್ಪ ಹೆಗ್ಗಡೇರ ಅಳಿಯ ಮಹಾಬಲೇಶ್ವರ ಸೆಟ್ಟಿಯು ವಿಜ್ಞಾಪಿಸುವದೇನೆಂದರೆ.

ಸಂಘದ ವಿದ್ಯಾರ್ಥಿಭವನದಲ್ಲಿ ನನ್ನ ಇಬ್ಬರು ಮಕ್ಕಳು ವಿದ್ಯಾರ್ಥಿಗಳಾಗಿರುವಲ್ಲಿ ಕಳೆದ ತಾರೀಕು ೨—೭—೧೫ರಲ್ಲಿ ಒಬ್ಬನ ನಂತರ ಮತ್ತೊಬ್ಬಗೆ ಸನ್ನಿಪಾತ ಜ್ವರವುಂಟಾದ್ದರಿಂದ ಭವನದ ಮೇಲ್ವಿಚಾರಕರ ತಂತಿಯಿಂದ ನಾನು ಕಳೆದ ತಾರೀಕು ೩—೮—೧೫ರಿಂದ ಈವರೆಗೂ ರೋಗಿಯ ಔಷದೋಪಚಾರದಲ್ಲಿ ಇದ್ದು ಈಗ ಸುಮಾರು ತಿಂಗಳು ೧, ದಿವಸ ೨೧ ಆಗುತ್ತಾ ಬಂತು. ನನ್ನ ಇಬ್ಬರು ಮಕ್ಕಳು ಶ್ರೀ ದೇವರ ದಯೆಯಿಂದಲೂ, ಸಂಘದ ಆಡಳಿತೆ ಮೆಂಬರರ ಉಪಕಾರಗಳಿಂದಲೂ ಪೂರ್ಣ ಗುಣಹೊಂದಿರುತ್ತಾರೆಂತ ತಿಳಿಯುವರೆ ಸಂತೋಷಪಡುತ್ತೇನೆ.

ಈ ನನ್ನ ಬವಣೆ ವಾಸ್ತವ್ಯಕಾಲದಲ್ಲಿ ಸಂಘ ಮತ್ತು ಭವನದ ಮೇಲ್ಮೆಯನ್ನು ನೋಡುವಂಥಾ ಗೃಹಸ್ಥರು ಅಸ್ವಸ್ಥದವರ ಅನುಪಾನಕ್ಕೂ ಮತ್ತು ನನಗೂ ವ ನನ್ನ ಬಂಧುಗಳಿಗೂ ಕೂಡಾ ತೋರಿಸಿದ ಸೌಕರ್ಯಕ್ಕೆ ನಾನು ತುಂಬಾ ಕೃತಜ್ಞನಾಗಿ ವಿನಯಪೂರ್ವಕದಿಂದ ವಂದಿಸುತ್ತೇನೆ. ಈ ಶಿವಾಯಿ ಭವನದ ವಿದ್ಯಾರ್ಥಿಗಳ ಪೈಕಿ ಕೆಲವರು ಅಸ್ವಸ್ಥರಾದ ನನ್ನ ಮಕ್ಕಳ ಮೇಲೆ ತೋರಿಸಿದ ಸಹೋದರ ಭಾವಕ್ಕೆ ನಾನು ತುಂಬಾ ಸಂತೋಷಪಡುವದಲ್ಲದೆ ಶ್ರೀದೇವರು ಸದರಿಯವರಿಗೆ ವಿದ್ಯಾಲಾಭವೂ, ಸದ್ಗುಣವೂ ದಯಪಾಲಿಸಲಿ ಎಂದು ಸದಾಕಾಲ ಬೇಡುತ್ತೇನೆ.

ಭವನದಲ್ಲಿ ಅಸ್ವಸ್ಥರಾದ ವಿದ್ಯಾರ್ಥಿಗಳ ವಾರಿಸುದಾರರು ಬಂದಲ್ಲಿ ಅವರ ವಾಸ್ತವ್ಯಕ್ಕೆ ಉಂಟಾದ ಅನಾನುಕೂಲತೆಯಲ್ಲಿ ಪೇಚಾಡುವವರ ಪೈಕಿ ಒಬ್ಬನಾದ ನನ್ನ ಸಂಕಷ್ಟಗಳನ್ನು ನೋಡಿ ಮ ರಾ. ವಕೀಲ್ ಬಿ. ಮಹಾಬಲ ಹೆಗ್ಗಡೇರವರು ತನ್ನ ಬಿಡಾರದಿಂದ ನನ್ನ ವ ನನ್ನ ಬಂಧುಗಳ ಕಷ್ಟವನ್ನು ಪರಿಹರಿಸಿದುಪಕಾರಗಳನ್ನು ಇದರಿಂದ ನಾನು ಬರೆದು ಪೂರೈಸತಕ್ಕದ್ದೇ ಅಲ್ಲ. ಯಾಕಂದರೆ ಅವರ ಅನುಕೂಲತೆಗಳು ಅಲ್ಲದಿದ್ದರೆ ರೋಗಿಯ ಅನುಪಾನ ನೋಡಲಿಕ್ಕೆ ಬಂದ ನಮ್ಮಗಳ ಅನುಪಾನ ನೋಡಲಿಕ್ಕೆ ಇನ್ನು ಅನೇಕ ತರವಾದ ಏರ್ಪಾಡುಗಳು ಬದಗಿಸಿಕೊಳ್ಳುವ ಸಂಭವ ಬೀಳುವುದಲ್ಲದೆ ಅನೇಕ ನಷ್ಟಕಷ್ಟಗಳಿಗೆ ಗುರಿಯಾಗುವದಲ್ಲದೆ ಬೇರೇನು ಯತ್ನ ಇರತಕ್ಕದಲ್ಲ. ಆದ್ದರಿಂದ ಇಂಥ ನಮ್ಮ ಕಷ್ಟವನ್ನು ಬರಗೊಡಿಸಲಿಕ್ಕೆ ಅಡ್ಡಿಮಾಡಿದ ನಮ್ಮ ಪ್ರಿಯರಾದ ಮಹಾಬಲ ಹೆಗ್ಗಡೇರವರನ್ನು ಸ್ತುತಿಸಲಿಕ್ಕೆ ಎಣಿಕೆಯಿಲ್ಲದ್ದಾಗಿರುವುದು.

ಅಸ್ವಸ್ಥತೆಯಲ್ಲಿ ಬೀಳುವ ವಿದ್ಯಾರ್ಥಿಗಳು ವ ಇವರ ವಾರಿಸುದಾರರ ಸಂಕಷ್ಟ ನಿವಾರಣೆ ಮಾಡುವವರ ಬಗ್ಗೆ ಕ್ವಾಲೆಯವರ ಕೋಣೆಗಳಿಗೆ ಸಮೀಪವಾಗಿ ಅಡಿಗೆಯ ಎರಡು ಕೋಣೆಗಳನ್ನು ಕಟ್ಟಿಸುವುದು ಬಹಳ ಉತ್ತಮವೆಂತ ನಾನು ಈ ಮುಂಚೆ ತಮ್ಮಗಳ ಮುಂದೆ ಆತುರಪಟ್ಟದ್ದರ ಸಲುವಾಗಿ ತಯಾರಿಸಿದ ಅಂದಾಜು ಪಟ್ಟಿಯನ್ನು ನೋಡಿ ಪಟ್ಟಿಯಲ್ಲಿ ತೋರುವ ಮೊಬಲಗುಗಳಿಗೆ ಮಿಕ್ಕದೆ ಕಟ್ಟಿಸುವಲ್ಲಿ ಆ ಬಾಬತು ಖರ್ಚಿನ ಪೂರಾ ಮೊಬಲಗುಗಳನ್ನು ನಾನು ಕೊಡುವದೆ ತುಂಬಾ ಸಂತೋಷಪಡುತ್ತೇನೆ.

ಸದರಿ ಕಟ್ಟೋಣದ ಅಂದಾಜು ಪಟ್ಟಿಯಲ್ಲಿ ತೋರುವಂತೆ ಬುನಾದಿ, ಪಂಚಾಂಗ, ಕಲ್ಲು, ಗೋಡೆ, ಹಂಚು, ಸಾರಣೆ ವಗೈರೆ ಬಗ್ಗೆ ರೂಪಾಯಿ ೬೦೪—೯—೦೮ ಪೈಕಿ ರೂಪಾಯಿ ೨೦೦ ಇವುಗಳ ಖರ್ಚಿನ ಬಗ್ಗೆ ಪ್ರಕೃತ ಇವರ ಲಗ್ತು ಇಟ್ಟಿರುತ್ತೇನೆ. ಬಾಕಿ ರೂಪಾಯಿ ೧೦೪—೯—೦ನ್ನು ಕಟ್ಟೋಣದ ಅರ್ಧ ಕೆಲಸ ಆಗುವದರೊಳಗೇನೇ ಸಂಘಕ್ಕೆ ಸಲಾಯಿಸುವೆನು. ಕಟ್ಟೋಣಕ್ಕೆ ಬೇಕಾಗುವ ಎಲ್ಲಾ ಮರಗಳನ್ನು ನಾನು ಊರಿಗೆ ಹೋದ ನಂತರ ಅಲ್ಲಿಂದಲೇ ಕಳುಹಿಸುವೆನು. ಈ ಮರಗಳ ಕೆಲಸ ಮಾಡಿದ ಒಡಿಗೆಯವರ ಲೆಖ್ಖ ಇಡೋಣಾಗಿ ಪಟ್ಟಿ ಕಳುಹಿಸಿದ್ದಲ್ಲಿ ಆ ಬಾಬತು ಮಜೂರಿ ಐವೇಜುಗಳನ್ನು ಸಹಾ ಸಂಘಕ್ಕೆ ಸಲಾಯಿಸಲಿಕ್ಕೆ ನಾನು ಬದ್ಧನಾಗಿದ್ದೇನೆಂತ ಇದರಿಂದ ವಾಗ್ದಾನ ಮಾಡಿದ್ದೇನೆ.

ಅಂದಾಜು ಪಟ್ಟಿಯಲ್ಲಿ ತೋರುವ ಮೊಬಲಗುಗಳಿಗಿಂತ ಹೆಚ್ಚಿಗೆ ಖರ್ಚುಮಾಡಿದರೆ ಅಂಥಾ ಖರ್ಚನ್ನು ನಾನು ತೆರುವದೆಂಬದು ನನ್ನ ಖುಸಿ ಮೇಲೆ ಹೊಂದಿರುತ್ತದೆಂತ ಈ ಮೂಲಕ ತಿಳಿಸಿರುತ್ತೇನೆ.

ಮೇಲೆ ವಿವರಿಸಿಕೊಂಡಿರುವ ಕಟ್ಟೋಣವನ್ನು ಮಹಾ ಸಭೆಯವರ ಅನುಮತಿ ನಿರೀಕ್ಷಣೆ ಮೇಲೆ ಕಟ್ಟೋಣದ ಕೆಲಸವನ್ನು ಪೂರೈಸಿ ಮುಂದೆ ಜರಗಬಹುದಾದ ಮಹಾ ಸಭೆ ಆಗುವದರೊಳಗಾಗಿ ಇದರ ಸಂಪೂರ್ಣ ಕೆಲಸವನ್ನು ದಯಮಾಡಿ ಪೂರೈಸೋಣಾಗಬೇಕಾಗಿ ನನ್ನ ಅಪೇಕ್ಷೆಯಾಗಿರುವುದು

ಈ ವಿಜ್ಞಾಪನಾ ಪತ್ರದಲ್ಲಿ ಕಾಣುವ ಕಟ್ಟೋಣವು ವಿದ್ಯಾರ್ಥಿಗಳಿಗೂ ಮತ್ತು ಅಸ್ವಸ್ಥರಾದ ಹುಡುಗರು ಪೂರ್ಣ ಗುಣಹೊಂದುವ ವರೆಗೆ ಇವರ ವಾರಿಸುದಾರರು ವ ಸೇವಕರಿಗಲ್ಲದೆ ಇತರ ಜನರಿಗೆ ಎಡೆಕೊಡಿಸಲಿಕ್ಕಿಲ್ಲವೆಂದು ನಾನು ಪೂರ್ಣ ನಂಬುತ್ತೇನೆ ಇಂತಿ ಈ ವಿಜ್ಞಾಪನ ಪತ್ರದ ಕರ್ತನಾದ,

ಮಹಾಬಲೇಶ್ವರ ಸೆಟ್ಟಿ ರುಜು.

ಯುದ್ಧ ಸಮಾಚಾರ.

ಗ್ರೀಕ್ ದೇಶದ ಕರಾವಳಿಯ ಸಮೀಪ ಫ್ರೆಂಚರ ಫ್ರೊವಿನ್ಸಿಯಾ ಎಂಬ ಹಡಗವನ್ನು ಒಸ್ಟ್ರಿಯನರ ಒಂದು ಜಲಾಂತರ್ಗಾಮಿ ನಾವೆಯು ಮುಳುಗಿಸಿರುವದು ಕರಾಚಿಯಿಂದ ಬರುತ್ತಿದ್ದ ಹೆಡನ್ ಎಂಬ ಇನ್ನೊಂದು ಹಡಗವನ್ನು ಮುಳುಗಿಸಿರುವರೆಂಬ ವಾರ್ತೆ ಇದೆ. ಬ್ರಿಟಿಸರ ಸಬ್‌ಮೆರ್‍ಯಾನ್ ನಾವೆಯು ಜರ್ಮನರ ಸ್ಪಿಯೋನಿಯಾ ಎಂಬ ಹಡಗವನ್ನು ಮುಳುಗಿಸಿದೆ ಎಂಬ ವಾರ್ತೆಯೂ ಇದೆ.

ಪಶ್ಚಿಮ ರಣರಂಗದಲ್ಲಿ ಫ್ರೆಂಚರು ಶತ್ರುಗಳಿಂದ ಚೆಂಪೆನ್ ಪ್ರಾಂತ್ಯದಲ್ಲಿ ಪಡೆದಿರುವ ಸೇನಾ ನೆಲೆಗಳನ್ನು ವಶಮಾಡಿಕೊಳ್ಳಲು ವಿಷಮಯ ತುಪಾಕಿ ಮೊದಲಾದವುಗಳನ್ನು ಹಾರಿಸಿ ಪ್ರಯತ್ನಿಸಿದರು. ಆದರೆ ಶತ್ರುಗಳ ಮೇಲೆ ತೋಫುಗಳಿಂದ ಗುಂಡುಗಳ ಕಠಿನವಾದ ಮಳೆಗರೆದು ಫ್ರೆಂಚರು ಶತ್ರುಗಳನ್ನು ಸೋಲಿಸಿದರು.

ಮೊರ್ವಿಯ ಥಾಕೋರು ಸಾಹೇಬರವರು ಸಿಂಧ್ಯೆವ್ ಪ್ರಭುಗಳ ಮೂಲಕ ಭಾರತೀಯ ಸೈನಿಕರಲ್ಲಿ ಗಾಯಪಡೆದವರನ್ನು ಒಯ್ಯುವ ಬಗ್ಗೆ ಎರಡು ಮೊಟಾರ್ ಬಂಡಿಗಳನ್ನು ಉಚಿತವಾಗಿ ಕೊಟ್ಟಿರುತ್ತಾರೆ.

ಪೂರ್ವ ರಣರಂಗದಲ್ಲಿ ರುಶ್ಯಯನರು ರೀಗಾ ಜಿಲ್ಲೆಯ ಬರ್ಜೆಲಿನ್ ಪ್ರಾಂತ್ಯದ ಉತ್ತರಕ್ಕಿರುವ ಜರ್ಮನರ ಕಂದಕಗಳನ್ನು ಸ್ವಾಧೀನಮಾಡಿಕೊಂಡಿರುವರು ವಿಲ್ನಾದ ಪೂರ್ವದಿಕ್ಕಿನ ಸರೋವರ ಪ್ರಾಂತ್ಯಗಳಲ್ಲಿ ಇನ್ನೂ ಕೆಲವು ಗ್ರಾಮಗಳು ರುಶ್ಯಯನರ ಕೈಸೇರಿವೆ.

ಕೌಕಾಸ್ಯ ಪ್ರಾಂತ್ಯಗಳ ಫೊ ಕಡೆಗಳಲ್ಲಿ ತುರ್ಕರಿಗೂ ರುಶ್ಯಯನರಿಗೂ ನಡೆದ ಸಂಗ್ರಾಮದಲ್ಲಿ ತುರ್ಕರು ರಣರಂಗವನ್ನು ಬಿಟ್ಟು ಓಡಿಹೋಗಬೇಕಾಯಿತು.

ಮಿತ್ರರ ಸಂದೇಶಗಳಿಗೆ ಬಲ್ಗೇರಿಯವು ಉತ್ತರವನ್ನು ಸಕಾಲದಲ್ಲಿ ಕೊಡದ್ದರಿಂದ ಈ ಸಂದೇಶಗಳಲ್ಲಿ ಮಾಡಿರುವ ಶರ್ತಗಳ ಪ್ರಯೋಜನವು ಇನ್ನೂ ಬಲ್ಗೇರಿಯಕ್ಕೆ ಇರದು. ರುಶ್ಯದ ಸರಕಾರದವರು ಬಲ್ಗೇರಿಯಕ್ಕೆ ಕಳುಹಿಸಿ ಕೊಟ್ಟಿರುವ ಸಂದೇಶಕ್ಕೆ ಸಮರ್ಪಕವಾದ ಉತ್ತರವು ದೊರಯದಿದ್ದರೆ ಮಿತ್ರರ ರಾಯಭಾರಿಗಳು ಬಲ್ಗೇರಿಯದಿಂದ ಹೊರಡುವರೆಂತ ಬಲ್ಗೇರಿಯಾದ ಮಂತ್ರಿಗಳಿಗೆ ಮಿತ್ರರ ಕಡೆಯಿಂದ ತಿಳಿಸೋಣಾಗಿದೆ.

ಬಲ್ಗೇರಿಯಾದ ದಕ್ಷಿಣಕ್ಕಿರುವ ಸೆಲೋನಿಕಾ ಬಂದರದಲ್ಲಿ ಮಿತ್ರರ ಸೇನೆಗಳು ಬಂದು ಇಳಿದಿವೆ ಎಂತ ಗ್ರೀಸು ದೇಶದ ಎಥೆನ್ಸ್ ಪಟ್ಟಣದ ಸಮಾಚಾರದಲ್ಲಿರುವದು ರುಮೇನಿಯದಲ್ಲಿ ಸಹ ಸರಹದ್ದುಗಳನ್ನು ಕಾಪಾಡಿಕೊಳ್ಳುವ ಏರ್ಪಾಡು ನಡಿಯುತ್ತಿದೆ ಎಂತ ತಿಳಿದುಬರುತ್ತದೆ.

ಚೆಂಪೆನ್ ಪ್ರಾಂತ್ಯದಲ್ಲಿ ಫ್ರೆಂಚರು ಮುಂದರಿಸಿ ಟಹೂರೆ ಎಂಬ ಹಳ್ಳಿಯನ್ನು ಕೈವಶಮಾಡಿಕೊಂಡಿರುವರು ಈ ಕಾಳಗದಲ್ಲಿ ಶತ್ರುಗಳ ಸೈನಿಕರಲ್ಲಿ ಒಂದು ಸಾವಿರ ಮಂದಿಯನ್ನು ಸೆರೆ ಹಿಡಿದಿರುತ್ತಾರೆ. ಟಾಹೂರೆ ಎಂಬ ಹಳ್ಳಿಯನ್ನು ಪಡೆದ ನಂತರ ಟ್ರಿಪೆಚೆ ಎಂಬಲ್ಲಿ ಶತ್ರುಗಳಿಂದ ಹಲವು ಕಂದಕಗಳನ್ನೂ ಎರಡು ಕೋಟೆಗಳನ್ನೂ ಫ್ರೆಂಚರು ತಮ್ಮ ವಶಮಾಡಿಕೊಂಡಿರುವರು. ಜರ್ಮನ ಸೇನಾವ್ಯೂಹವು ಎರಡು ಕಡೆಗಳಲ್ಲಿ ಮಿತ್ರರಿಂದ ಭೇದಿಸಲ್ಪಟ್ಟಿರುವುದೆಂತ ಜರ್ಮನ ಯುದ್ಧಸಮಾಚಾರದಿಂದ ತೋರಿಬರುತ್ತ.

ಬ್ರಿಟಿಷ ಮಂತ್ರಿಗಳ ಯುದ್ಧ ಮಂತ್ರಾಲೋಚನಾ ಸಭೆಯು ಕೂಡಿತ್ತು ಫ್ರೆಂಚರ ರಾಯಭಾರಿಯೂ ಫ್ರೆಂಚ ಸರಕಾರದ ಮತ್ತು ಸೇನೆಯ ಪ್ರತಿನಿಧಿಗಳೂ ಈ ಸಭೆಯಲ್ಲಿ ಹಾಜರಿದ್ದರು

ಪೂರ್ವ ರಣರಂಗದಲ್ಲಿ ರಶ್ಯಯನರು ಜರ್ಮನರನ್ನು ಹಿಂದಕ್ಕೆ ಓಡಿಸುತ್ತಿರುವರು ರುಶ್ಯಯನರು ತಮ್ಮ ಕೈಗಳಿಗೆ ತಾವು ಯೋಚಿಸಿದಂತೆ ಬಲಿಬೀಳದೆ ಹೋದ್ದರಿಂದ ಜರ್ಮನರಲ್ಲಿ ವಿಶೇಷವಾದ ನಿರಾಶೆಯುಂಟಾಗಿದೆ ಎಂಬ ದಾಗಿ ಜರ್ಮನ ಸೈನಿಕರು ಬರೆದಿರುವ ಹಲವು ಪತ್ರಗಳಿಂದ ವ್ಯಕ್ತವಾಗುವದು

ಗ್ರೀಸ್ ದೇಶದಲ್ಲಿ ಮಂತ್ರಿಮಂಡಲದಲ್ಲಿ ಬದಲಾವಣೆಯು ಉಂಟಾಗಿ ಆ ದೇಶದಲ್ಲಿ ಸರಕಾರದ ಎರಡು ಪಕ್ಷದವರ ಒಂದು ಸಂಯುಕ್ತ ಮಂತ್ರಿಮಂಡಲವು ಏರ್ಪಡಿಸಲ್ಪಟ್ಟಿರುವದು. ಈ ನೂತನ ಮಂತ್ರಿಮಂಡಲದವರ ಆಲೋಚನೆಯು ತಟಸ್ಥಭಾವವನ್ನು ಚರಿಸ ವದಾಗಿದೆ ಎಂತ ತಿಳಿದುಬರುತ್ತದೆ ಬಲ್ಗೇರಿಯಾದಲ್ಲಿ ಪ್ರಕಟವಾದ -ಜರ್ಮನ ಪಕ್ಷದ ಒಂದು ಪತ್ರದಲ್ಲಿ- ಜರ್ಮನಿ ಮತ್ತು ಬಲ್ಗೇರಿಯಗಳೊಳಗೆ ಈ ಮೊದಲೆ ಒಪ್ಪಂದವು ಆಗಿರುವದ. ಬಲ್ಗೇರಿಯವು ತನ್ನ ದೇಶದ ರೈಲ್ವೆ ಮಾರ್ಗಗಳ ಉಪಯೋಗವನ್ನು ಜರ್ಮನರಿಗೆ ಆತಂಕವಿಲ್ಲದೆ ಮಾಡಲು ಬಿಡಬೇಕು ಮತ್ತು ೩೦೦,೦೦೦ ಜರ್ಮನ ಸೈನಿಕರೊಡನೆ ಬಲ್ಗೇರಿಯಾವು ಸರ್ವಿಯಾದೊಡನೆ ಯುದ್ಧ ಬೆಳೆಸಬೇಕು ರುಮೇನಿಯವು ಬಂದು ಆತಂಕಿಸಿದರೆ ಜರ್ಮನಿಯು ಇನ್ನೂ ಮೂರು ಲಕ್ಷ ಸೇನೆಯನ್ನು ಕಳುಹಿಸಿಕೊಡ ವದು. ಈ ಬಗೆ ಸರ್ವಿಯಾದ ಮೆಸೊಡೋನಿಯ ಪ್ರಾಂತ್ಯಗಳು ಬಲ್ಗೇರಿಯಕ್ಕೆ ಬಿಡಿಸಿಕೊಡೋಣಾಗ ವವು— ಎಂತ ಪ್ರಕಟಿಸಲ್ಪಟ್ಟಿರುವದು. ಫ್ರೆಂಚರ ಮತ್ತು ಬ್ರಿಟಿಷರ ಸೇನೆಗಳು ಸರ್ವಿಯಾದ ಸಹಾಯಾರ್ಥವಾಗಿ ಸೆಲೊನಿಕಾದಿಂದ ಮುಂದರಿಸಿರುವವೆಂತ ತಿಳಿದ ಬರುತ್ತದೆ. ರುಶ್ಯದ ರಾಯಭಾರಿಯು ಬಲ್ಗೇರಿಯಾದ ರಾಜಧಾನಿಯನ್ನು ಬಿಟ್ಟು ಹೊರಟಿರುವನು. ಬಲ್ಗೇರಿಯವು ರುಶ್ಯಕ್ಕೆ ಕೊಟ್ಟ ಉತ್ತರವು ಅತೃಪ್ತಿಕರವಾದ್ದರಿಂದ ಬ್ರಿಟಿಷ, ಫ್ರೆಂಚ ಮತ್ತು ಇಟೆಲಿಯನ್ ರಾಯಭಾರಿಗಳು ಬಲ್ಗೇರಿಯಾದಿಂದ ಹೊರಡಲು ಉದ್ದೇಶಿಸಿರುವರು. ಬಲ್ಗೇರಿಯಾವು ಸರ್ವಿಯಾಕ್ಕೆ ಮೆಸೊಡೋನಿಯವನ್ನು ಬಿಟ್ಟುಕೊಡಬೇಕೆಂಬ ಯುದ್ಧ ಸಂದೇಶವನ್ನು ಕಳಹಿಸಿ ಕೊಟ್ಟಿರುತ್ತದೆ. ೨೪ ತಾಸುಗಳಲ್ಲಿ ಈ ಸಂದೇಶಕ್ಕೆ ಉತ್ತರವನ್ನು ಸರ್ವಿಯಾದಿಂದ ಬಲ್ಗೇರಿಯವು ಅಪೇಕ್ಷಿಸಿರುವದು

ಸರ್ವಿಯಾದ ಮಂತ್ರಿಯು ಬಲ್ಗೇರಿಯದಿಂದ ಹೊರಟಿರುವನು

ರುಶ್ಯಯನರ ಎರಡು ಯುದ್ಧನಾವೆಗಳು ಬಲ್ಗೇರಿಯಾದ ವಾರ್ನಾ ಎಂಬ ಪಟ್ಟಣದ ಮೇಲೆ ತೋಫುಗಳನ್ನು ಹಾರಿಸುತ್ತಿರುವವೆಂತ ಕೊಲೊನ್ ಗಜೆಟ್ ಎಂಬ ಪತ್ರದಲ್ಲಿದೆ. ರುಶ್ಯದ ಮತ್ತು ಗೆಲಿಸಿಯಾ ಪ್ರಾಂತ್ಯಗಳಿಂದ ಜರ್ಮನರು ತಮ್ಮ ಸೇನೆಗಳನ್ನು ಸರ್ವಿಯದ ಮೇಲೆ ದಾಳಿ ಇಡಲು ತರಿಸುತ್ತಿರುವರು.

ಅಕ್ಟೋಬರ ತಾ. ೧೦, ೧೧.

ಜರ್ಮನರ ಜಲಾಂತರ್ಗಾಮಿ ನಾವೆಗಳು ಬ್ರಿಟಿಷರ ಎರಡು ಸಣ್ಣ ಹಡಗಗಳನ್ನು ಮುಣುಗಿಸಿಬಿಟ್ಟವೆ ಬ್ರಿಟಿಷರ ಜಲಾಂತರ್ಗಾಮಿ ನಾವೆಯು ಲುವಿಯಾ ಎಂಬ ಹಡಗವನ್ನು ನಾಶಪಡಿಸಿರುವದೆಂದು ಡೆನ್ಮಾರ್ಕ ಸಮಾಚಾರದಿಂದ ತಿಳಿದುಬರುತ್ತ

ಟಾಹೂರೆದ ಆಗ್ನೇಯದಲ್ಲಿರುವ ಕಂದಕಗಳನ್ನು ಜರ್ಮನರಿಂದ ಫ್ರೆಂಚರು ಕೈವಶಮಾಡಿಕೊಂಡಿರುವರು. ಬ್ರಿಟಿಷ ಸೇನೆಗಳು ಸಹ ಮುಂದರಿಸುತ್ತ ಶತ್ರುಗಳಿಂದ ಕಂದಕಗಳನ್ನು ಪಡಿಯುತ್ತಲಿವೆ.

ಪೂರ್ವ ರಣರಂಗದಲ್ಲಿ ಜರ್ಮನರು ಡ್ವಿನ್ಸ್ಕ್ ಎಂಬ ಪಟ್ಟಣವನ್ನು ಹಿಡಿಯುವಗೋಸ್ಕರ ೭ ಲಕ್ಷ ಸೈನಿಕರ ಸೇನೆಯನ್ನು ಸಿದ್ಧಗೊಳಿಸುತ್ತಿರುವರೆಂತ ತಿಳಿದುಬರುತ್ತದೆ ಆದರೆ ಜರ್ಮನರ ಈ ಪ್ರಯತ್ನಗಳು ನೆರವೇರಲಿಲ್ಲವೆಂತ ಪೆಟ್ರೊಗ್ರೇಡ್ ಸಮಾಚಾರದಲ್ಲಿರುವದ

ಬಲ್ಗೇರಿಯಾದವರು ಟರ್ಕಿಗೆ ಹೋಗುವ ರೈಲ್ವೆ ಮಾರ್ಗವನ್ನು ತಮ್ಮ ಮೇಲ್ವಿಚಾರದಲ್ಲಿರಿಸಿರುವರು ಮುಸ್ತಾಫಾದಿಂದ ಡೆಡೆಗೆಚ್‌ವರೆಗಿನ ಮಾರ್ಗದಲ್ಲಿ ಬಲ್ಗೇರಿಯಾದ ರೈಲ್ವೆ ಬಂಡಿಗಳು ಕೂಡಲೇ ಅತ್ತಿತ್ತ ಓಡಲು ಪ್ರಾರಂಭಿಸಿರುವವು

ಮಿತ್ರರ ರಾಯಬಾರಿಗಳು ಬಲ್ಗೇರಿಯವನ್ನು ಬಿಟ್ಟು ಹೋಗುವ ಮೊದಲು ಅಲ್ಲಿಯ ಅರಸರು ಇವರನ್ನು ಸಂದರ್ಶಿಸಿರುವದಾಗಿ ತಿಳಿದ ಬರುತ್ತದೆ. ಜರ್ಮನರ ಪಕ್ಷವನ್ನು ಬಲ್ಗೇರಿಯಾವು ಸೇರಿದ್ದರಿಂದ ಆ ದೇಶದ ಜನರಲ್ಲಿ ವಿಶೇಷ ಮನಸ್ತಾಪಗಳು ಉಂಟಾಗಿವಂತೆ. ಜನರು ಈ ಮನಸ್ತಾಪದಿಂದ ದಂಗೆ ಏಳದಂತೆ ಸರಕಾರದವರು ಪ್ರಯತ್ನಿಸುತ್ತಿರುವರು

ಜರ್ಮನರ ಮತ್ತು ಒಸ್ಟ್ರಿಯನರ ಸೇನೆಗಳು ಸೇವ್ ಎಂಬ ನದಿಯನ್ನು ದಾಟಿ ಸರ್ವಿಯಾವನ್ನು ಪ್ರವೇಶಿಸಲು ಪ್ರಾರಂಭಿಸಿರುವವು.

ಸೆಲೋನಿಕದಲ್ಲಿ ಸರ್ವಿಯಾದ ಸಹಾಯಾರ್ಥವಾಗಿ ಮಿತ್ರರ ಸೇನೆಗಳು ಇನ್ನೂ ಇಳಿಯುತ್ತಿರುವವು.

ಬಲ್ಗೇರಿಯಾದ ಸೈನಿಕರಲ್ಲಿ ೪೦೦೦ ಜನರು ರುಶ್ಯಯನರ ವಿರೋಧವಾಗಿ ಕಾದಾಡಲಾರವೆಂದ ಸೇನೆಯನ್ನು ಬಿಟ್ಟುಹೋಗಿರುವರು.

ಸರ್ವಿಯಾದ ಬೆಲ್‌ಗ್ರೇಡ ಪಟ್ಟಣದ ಮೇಲೆ ಶತ್ರುಗಳು ದಾಳಿ ಇಟ್ಟಿರುವರು.

ಒಕ್ಟೋಬರ ತಾ. ೧೨.

ಪಶ್ಚಿಮ ರಣರಂಗದಲ್ಲಿ ಜರ್ಮನರು ತಮ್ಮ ಕೈಗಳಿಂದ ಮಿತ್ರರು ಬಿಡಿಸಿಕೊಂಡ ನೆಲೆಗಳನ್ನು ಪಡಿಯಬೇಕೆಂತ ಪಟ್ಟುಹಿಡಿದು ಬಹಳವಾಗಿ ಕಾದಾಡಿದರು. ಜರ್ಮನರು ಈ ಪ್ರಯತ್ನದಲ್ಲಿ ಸೋತು ಹೋಗಿ ಮಿತ್ರರ ಸೈನಿಕರು ಜರ್ಮನರ ೩, ಯಾ ೪ ಸಾವಿರ ಸೈನಿಕರನ್ನು ಸೆರೆಹಿಡಿದಿರುತ್ತಾರೆ.

ಪೂರ್ವ ರಣರಂಗದಲ್ಲಿಯೂ ರುಶ್ಯಯನರ ಜಯದ ವೃತ್ತಾಂತವೇ ಕೇಳಿಸುತ್ತಿದೆ.

ಬಲ್ಗೇರಿಯಾ ಮತ್ತು ಜರ್ಮನಿ ಇವರೊಳಗೆ ಕಳೆದ ಜುಲೈ ತಿಂಗಳ ತಾ. ೧೭ರಲ್ಲಿಯೇ ಒಂದು ಗುಪ್ತ ಒಪ್ಪಂದವು ಆಗಿತ್ತೆಂಬದಾಗಿ ಗ್ರೀಸ್ ದೇಶದ ಒಂದು ಪತ್ರದಲ್ಲಿ ಪ್ರಕಟವಾಗಿರುವದು. ಶತ್ರುಗಳು ಬೆಲ್ಗ್ರೇಡ್ ಪಟ್ಟಣವನ್ನು ಹಿಡಿದಿರುವರು.

ಪ್ರಕಟಣೆ.

ಊಟಾಕಮಂಡ್, ತಾರೀಖು 27ನೇ ಅಗಸ್ಟು 1915ನೇ ಇಸವಿ.

ನಂ. 25.—

ಇಂಡಿಯಾ ಗವರ್ನಮೆಂಟಿನವರ ಕ್ಲಪ್ತ ವಾಯಿದೆಗೆ ಸಂದಾಯವಾಗುವ ಸಾಲವು.

ಪೋಸ್ಟ್ ಆಫೀಸಿನ ಮುಖಾಂತರ ಜನರು ಚಂದಾದಾರರಾಗುವ ವಿಷಯವಾಗಿ ಏರ್ಪಟ್ಟ ಶರ್ತಗಳ ಕುರಿತು ಪ್ರಕಟಣೆ.

ಗವರ್ನಮೆಂಟಿನವರು ಈ ವರುಷದ ಸಾಲವನ್ನು ಒಂದು ಹೊಸ ವಿಧಾನದಲ್ಲಿ ಸೇಕಡಾ 4ರ ಬಡ್ಡಿಯಲ್ಲಿ ಎತ್ತುತ್ತಾರೆ. ಅದು 1923ನೇ ಇಸವಿಯ ನವಂಬರ್ ತಿಂಗಳೊಳಗಾಗಿ ಸಂಪೂರ್ಣವಾಗಿ ಮರುಪಾವತಿ ಮಾಡಲ್ಪಡುವದು, ಪರಂತು ಗವರ್ನಮೆಂಟಿನವರಿಗೆ ಇಷ್ಟವಿದ್ದರೆ 1920ನೇ ಇಸವಿಯ ಅಕ್ಟೋಬರ್ ತಿಂಗಳ ತರುವಾಯ ಯಾವಕಾಲದಲ್ಲಾದರೂ ಪಾವತಿ ಮಾಡಲ್ಪಡಬಹುದು.

2 ಕಲ್ಕತ್ತಾ, ಮದ್ರಾಸ್, ಬೊಂಬಾಯಿ ಮತ್ತು ಇತರ ದೊಡ್ಡ ಮಧ್ಯಸ್ಥಳಗಳಲ್ಲಿ ವಾಡಿಕೆಯಾದ ರೀತಿಯಲ್ಲಿ ದರಖಾಸ್ತುಗಳನ್ನು ಅಂಗೀಕರಿಸಿ 4½ ಕೋಟಿ ರೂಪಾಯಿ ಈ ಮೊದಲೇ ಎತ್ತಲ್ಪಟ್ಟಿರುವುದು, ಮತ್ತು ಇಷ್ಟರ ಮಟ್ಟಿಗೆ ಸದರೀ ಸಾಲವು ಈಗ ಭರ್ತಿಯಾಗಿದೆ ಆದರೆ ಅದು ವಿನಾ ಸಾಲವನ್ನು ಸಣ್ಣ ಮೊಬಲಗುಗಳಲ್ಲಿ ಕೊಡಲು ಇಷ್ಟವುಳ್ಳ ಜನರಿಗೆ, ಅವರು ಸೇವಿಂಗ್ಸ್ ಬ್ಯಾಂಕು ಡಿಪಾಜಿಟರರಾಗಿದ್ದರೂ ಅಲ್ಲದಿದ್ದರೂ, ಸೇವಿಂಗ್ಸ್ ಬ್ಯಾಂಕು ಕೆಲಸವನ್ನು ನಿರ್ವಹಿಸುವ ಅತ್ಯಂತ ಸಮೀಪದ ಪೋಸ್ಟ್ ಆಫೀಸಿನ ಮುಖಾಂತರ ಚಂದಾಕೊಡಲು ಒಂದು ವಿಶೇಷ ಸಂದರ್ಭವು ಕೊಡಲ್ಪಟ್ಟಿದೆ

ಹೇಗೆ ಚಂದಾದಾರರಾಗುವದೆಂಬುದು.

3. ಅಕ್ಟೋಬರ್ 30ನೇ ತಾರೀಖಿನವರೆಗೆ ಯಾವಕಾಲದಲ್ಲಾದರೂ ಟಪ್ಪಾಲ್ ಆಫೀಸಿನ ಮುಖಾಂತರ ಅರ್ಜಿಗಳನ್ನು ಮಾಡಬಹುದು.

4. ಅರ್ಜಿಗಳು ನೂರು ರೂಪಾಯಿ ಯಾ ಅದರ ಅಪವರ್ತ್ಯಗಳ ಬಗ್ಗೆ (ಎಂದರೆ ರೂ. 100, 200, 300 ಈ ಮೇರೆಗೆ) ಮಾಡಲ್ಪಡಬೇಕು ಮತ್ತು ಯಾವನೊಬ್ಬ ಅರ್ಜಿದಾರನ ಸಂಗತಿಯಲ್ಲಿ 100 ರೂಪಾಯಿಗಳಿಗೆ ಕಡಿಮೆಯಾಗಿ ಮತ್ತು 5,000 ರೂಪಾಯಿಗಳಿಗೆ ಮೀರಿ ಇರಕೂಡದು.

ಷರಾ — ಒಬ್ಬ ಅರ್ಜಿದಾರನು ಟಪ್ಪಾಲ್ ಆಫೀಸಿನ ಮುಖಾಂತರ ಈ ಮೊದಲೇ ಸೇಕಡಾ 3½ ದರದ ಬಡ್ಡಿಯುಳ್ಳ ಪ್ರಾಮಿಸರಿ ನೋಟುಗಳನ್ನು ಪಡೆದಿರುತ್ತಾನಾದರೂ 5,000 ರೂಪಾಯಿಗಳವರೆಗೆ ಹೊಸ ಸಾಲಕ್ಕೆ ಅರ್ಜಿಮಾಡಬಹುದು

5 ಅರ್ಜಿಮಾಡಲು ಅಪೇಕ್ಷಿಸುವ ಒಬ್ಬ ಮನುಷ್ಯನು ಇದರಡಿ ಕೊಟ್ಟಿರುವ ಫಾರ್ಮನ್ನು ಬರಾಯಿಸಬೇಕು, ಸದರೀ ಫಾರ್ಮನ್ನು ಸೇವಿಂಗ್ಸ್ ಬ್ಯಾಂಕು ಕೆಲಸವು ನಿರ್ವಹಿಸಲ್ಪಡುವ ಪ್ರತಿ ಒಂದು ಟಪ್ಪಾಲ್ ಆಫೀಸಿನಿಂದ ಸಹಾ ಪಡೆಯಬಹುದು. ಆತನು ಎಷ್ಟು ಮೊಬಲಗಿಗೆ ಅರ್ಜಿಮಾಡುತ್ತಾನೋ ಆ ಪೂರಾ ಮೊಬಲಗನ್ನು ಆಗಲೇ ಪಾವತಿ ಮಾಡಬೇಕು. ಆತನು ಒಬ್ಬ ಸೇವಿಂಗ್ಸ್ ಬ್ಯಾಂಕು ಡಿಪೋಜಿಟರನಾಗಿದ್ದ ಪಕ್ಷದಲ್ಲಿ ಆತನು ತನ್ನ ಸೇವಿಂಗ್ಸ್ ಬ್ಯಾಂಕು ಲೆಕ್ಕದಲ್ಲಿರುವ ಮೊಬಲಗನ್ನು ಈ ಬಗ್ಗೆ ಉಪಯೋಗಿಸಬಹುದು. ಅಥವಾ ಆತನು ಹಣವನ್ನು ರೊಕ್ಕವಾಗಿಯೂ ಕೊಡಬಹುದು. ಅರ್ಜಿದಾರನು ಟಪ್ಪಾಲ್ ಆಫೀಸಿಗೆ ಸ್ವತಃ ಹೋಗಬಹುದು ಅಥವಾ ಒಬ್ಬ ನೌಕರನನ್ನು ಕಳುಹಿಸಲೂ ಬಹುದು ಪಾವತಿ ಮಾಡಲ್ಪಟ್ಟ ಯಾವತ್ತೂ ಮೊಬಲಗಿಗೆ ರಸೀದಿ ಕೊಡಲ್ಪಡುವುದು.

6 ಅರ್ಜಿದಾರನು ಪಾವತಿಮಾಡುವ ಪ್ರತಿ 100 ರೂಪಾಯಿಗೆ ಬಗ್ಗೆ ಅಷ್ಟು ಮೊಬಲಗಿನ ಗವರ್ನಮೆಂಟ್ ಪ್ರಾಮಿಸರಿ ನೋಟುಗಳು ಆತನಿಗೆ ಕೊಡಲ್ಪಡುವುವು.

ಪ್ರಾಮಿಸರಿ ನೋಟುಗಳ ತಾಬೆ

7. ನೋಟುಗಳನ್ನು ಅರ್ಜಿದಾರನು ತನ್ನ ಸ್ವಂತ ತಾಬೆಯಲ್ಲಿ ಇಟ್ಟುಕೊಳ್ಳಬಹುದು ಅಥವಾ ಆತನಿಗೆ ಇಷ್ಟವಿದ್ದರೆ ಆತನ ಬಗ್ಗಾಗಿ ಅವು ಪೋಸ್ಟ್ ಆಫೀಸ್ ಅಧಿಕಾರಿಗಳ ತಾಬೆಯಲ್ಲಿ ಇಡಲ್ಪಡಬಹುದು. ಯಾವ ರೀತಿಯು ತನಗೆ ಇಷ್ಟವೆಂಬುದನ್ನು ಆತನು ಅರ್ಜಿಯ ಫಾರ್ಮನ್ನು ಬರಾಯಿಸುವಾಗಲೇ ಅದರಲ್ಲಿ ನಮೂದಿಸತಕ್ಕದ್ದು ಆತನು ನೋಟುಗಳನ್ನು ತಾನೇ ಇಟ್ಟುಕೊಳ್ಳಲು ಅಪೇಕ್ಷಿಸುವದಾದರೆ ಅವು ಬಟವಾಡೆಗೆ ಸಿದ್ಧವಾದಾಗ ಆ ಕುರಿತು ಪೋಸ್ಟ್ ಆಫೀಸಿನವರು ಆತನಿಗೆ ತಿಳಿಯಪಡಿಸುವರು, ಮತ್ತು ಆತನು ಸ್ವತಃ ಹಾಜರಾದಲ್ಲಿ ಅವು ಆತನಿಗೆ ಕೊಡಲ್ಪಡುವವು. ಅವುಗಳನ್ನು ಟಪ್ಪಾಲ್ ಆಫೀಸಿನಲ್ಲಿಯೇ ಇಡಲು ಆತನು ನಿರ್ಣಯಿಸುವ ಪಕ್ಷದಲ್ಲಿ ಆತನು ಪುನಃ ಸ್ವತಃ ಹಾಜರಾಗಬೇಕೆಂದಿಲ್ಲ, ಆದರೆ ಟಪ್ಪಾಲ್ ಆಫೀಸಿನವರೇ ಅವು ತಪ್ಪುತ್ತವೆ—ವ ಅವು ಆತನ ಬಗ್ಗಾಗಿ ತಾಬೆಯಲ್ಲಿಟ್ಟುಕೊಳ್ಳಲ್ಪಟ್ಟಿವೆ ಎಂಬುದನ್ನು ಕುರಿತು ಒಂದು ಸಮಾಚಾರ ಪತ್ರವನ್ನು ಸಕಾಲದಲ್ಲಿ ಆತನಿಗೆ ಕಳುಹಿಸಿಕೊಡುವರು. ಸದರೀ ನೋಟುಗಳನ್ನು ತಾನೇ ಇಟ್ಟುಕೊಳ್ಳಲು ಆತನು ಮುಂದೆ ಯಾವಾಗಲಾದರೂ ಅಪೇಕ್ಷಿಸುವುದಾದರೆ ಆಗ ಅವು ಆತನ ವಶಕ್ಕೆ ಕೊಡಲ್ಪಡುವುವು

ಬಡ್ಡಿಯನ್ನು ಪಾವತಿಮಾಡೋಣ.

8. ಸಾಲಿಯಾನಾ ಸೇಕಡಾ 4ರ ದರದ ಬಡ್ಡಿಯು ಅರ್ಧ ವರ್ಷಕೊಮ್ಮೆ ಪಾವತಿ ಮಾಡಲ್ಪಡುವದು. ಎಂದರೆ ಪ್ರತಿ ವರ್ಷದ ಮೇ 31ನೇ ತಾರೀಖಿಗೆ ಸೇಕಡಾ 2ರಂತೆಯೂ ನವಂಬರ್ 30ನೇ ತಾರೀಖಿಗೆ ಸೇಕಡಾ 2ರಂತೆಯೂ ಸಲಾಯಿಸಲ್ಪಡುವದು. ಅರ್ಜಿಯ ತಾರೀಖಿನಿಂದ ಬರುವ ನವಂಬರ್ 30ನೇ ತಾರೀಖಿನ ವರೆಗಿನ ಭಿನ್ನಾಂಶದ ಬಗ್ಗೆ ಬಡ್ಡಿಯು ಪ್ರಾಮಿಸರಿ ನೋಟುಗಳನ್ನು ಅರ್ಜಿದಾರನು ಸ್ವತಃ ಇಟ್ಟುಕೊಳ್ಳುವದಾದರೆ ಅವುಗಳನ್ನು ಬಟವಾಡೆಮಾಡುವ ಕಾಲದಲ್ಲಿ ನಗದಾಗಿ ಕೊಡಲ್ಪಡುವದು, ಅಥವಾ ಆತನು ನೋಟುಗಳನ್ನು ಪೋಸ್ಟ್ ಆಫೀಸ್ ಅಧಿಕಾರಿಗಳ ತಾಬೆಯಲ್ಲಿಯೇ ಇಡುವದಾದರೆ ಮುಂದಿನ ಕಲಮಿನಲ್ಲಿ ನಮೂದಿಸಿರುವ ಸೇವಿಂಗ್ಸ್ ಬ್ಯಾಂಕು ಲೆಕ್ಕದಲ್ಲಿ ಆತನ ಬಗ್ಗೆ ಜಮಾ ದಾಖಲುಮಾಡಲ್ಪಡುವದು.

9 ಅರ್ಜಿದಾರನು ತನ್ನ ಪ್ರಾಮಿಸರಿ ನೋಟುಗಳನ್ನು ಪೋಸ್ಟ್ ಆಫೀಸ್ ಅಧಿಕಾರಿಗಳ ತಾಬೆಯಲ್ಲಿಯೇ ಇಡಲು ನಿರ್ಣಯಿಸಿದ ಪಕ್ಷದಲ್ಲಿ ಪೋಸ್ಟ್ ಆಫೀಸ್ ಅಧಿಕಾರಿಗಳು ಪ್ರತಿ ಅರ್ಧ ವರ್ಷಕೊಮ್ಮೆ ಆತನ ಬಗ್ಗಾಗಿ ಬಡ್ಡಿಯನ್ನು ಪಡಕೊಂಡು ಈ ಬಗ್ಗಾಗಿ ಆತನ ಹೆಸರಲ್ಲಿ ಇಡಲ್ಪಡುವ ಒಂದು ಸೇವಿಂಗ್ಸ್ ಬ್ಯಾಂಕು ಲೆಕ್ಕದಲ್ಲಿ ಜಮಾ ದಾಖಲ್ ಮಾಡುವರು. ಇದಲ್ಲದೆ ಈ ಮೇರೆಗೆ ಬಡ್ಡಿಯನ್ನು ಪಡೆದುಕೊಂಡಾಗ್ಗೆಲ್ಲಾ ಪೋಸ್ಟ್ ಆಫೀಸಿನವರು ಆಯಾಕಾಲದಲ್ಲಿ ಆತನಿಗೆ ಆ ಕುರಿತು ತಿಳಿಯಪಡಿಸುವರು. ಈ ಕೆಲಸದ ಬಗ್ಗೆ ಯಾವ ಫೀಸೂ ಹೊರಿಸಲ್ಪಡಲಿಕ್ಕಿಲ್ಲ ಮತ್ತು, ಅರ್ಧ ವರ್ಷದ ಬಡ್ಡಿಯ ಮೊಬಲಗನ್ನು ಪಾವತಿಮಾಡುವಾಗ ಇನ್‌ಕಮ್‌ಟ್ಯಾಕ್ಸು ಯಾವದೂ ಅದರಿಂದ ವಜಾಮಾಡಲ್ಪಡಲಿಕ್ಕಿಲ್ಲ.

ಆತನು ಪ್ರಾಮಿಸರಿ ನೋಟುಗಳನ್ನು ಸ್ವತಃ ಇಟ್ಟುಕೊಳ್ಳುತ್ತಾನಾದರೆ ಅರ್ಧ ವರ್ಷದ ಬಡ್ಡಿಯ ಮೊಬಲಗು ಪಾವತಿಮಾಡುವ ಕಾಲದಲ್ಲಿ ವಾಡಿಕೆಯಂತೆ ಬಡ್ಡಿಯ ಮೊಬಲಿಗಿನಿಂದ ಇನ್‌ಕಮ್‌ಟ್ಯಾಕ್ಸು ವಜಾಮಾಡಲ್ಪಡುವದು

ಪ್ರಾಮಿಸರಿ ನೋಟುಗಳನ್ನು ವಿಕ್ರಯಿಸೋಣ.

10. ಇದರಲ್ಲಿ ವಿವರಿಸೋಣಾದ ನಡವಳಿತೆಯ ಮೇರೆಗೆ ಪೋಸ್ಟ್ ಆಫೀಸಿನ ಮುಖಾಂತರ ಕೊಂಡುಕೊಳ್ಳಲ್ಪಟ್ಟ ಈ ಹೊಸ ಸಾಲದ ಬಾಬತು ಪ್ರಾಮಿಸರಿ ನೋಟುಗಳನ್ನು ಹೊಂದಿರುವ ಒಬ್ಬ ಸೇವಿಂಗ್ಸ್ ಬ್ಯಾಂಕು ಡಿಪಾಜಿಟರನು ಯಾವ ಕಾಲದಲ್ಲಾದರೂ ಅವುಗಳನ್ನು ಯಾ ಅವುಗಳ ಯಾವದೊಂದು ಭಾಗವನ್ನು ವಿಕ್ರಯಿಸಲಿಕ್ಕೆ ಅಪೇಕ್ಷಿಸುತ್ತಾನಾದರೆ ಆತನ ಬಗ್ಗೆ ಪೋಸ್ಟ್ ಆಫೀಸಿನವರು ದಲಾಲಿ ಯಾ ಇತರ ಫೀಸುಗಳನ್ನು ಹೊರಿಸದೇನೆ ಅದರ ಕುರಿತು ವಿಲೇವಾರಿ ಮಾಡುವರು ಇದರ ವಿಷಯ ಪೂರ್ಣ ಮಾಹಿತಿಯನ್ನು ಪೋಸ್ಟ್ ಆಫೀಸಿನಿಂದ ಯಾವ ಕಾಲದಲ್ಲಾದರೂ ಹೊಂದಬಹುದು.

ಅರ್ಜಿಯ ಫಾರ್ಮು.

ನಾದ ನಾನು 1915ನೇ ಇಸವಿಯ ಜುಲಾಯಿ 28ನೇ ತಾರೀಖಿನ ಇಂಡಿಯಾ ಗಜೇಟಿನ ವಿಶೇಷ (ಎಕ್ಸ್‌ಟ್ರಾರ್ಡಿನರಿ) ಸಂಚಿಕೆಯಾಗಿ ಪ್ರಾಯಿಷ್‌ಮಾಡಲ್ಪಟ್ಟ ಇಸ್ತಿಹಾರಿನಲ್ಲಿ ಪ್ರಕಟಿಸಲ್ಪಟ್ಟ ಕ್ಲಪ್ತವಾಯಿದೆಗೆ ಸಂದಾಯವಾಗುವ ಸೇಕಡಾ ನಾಲ್ಕರ ಬಡ್ಡಿಯ ಸಾಲದ ಒಗ್ಗೆ ರೂ. ನ್ನು ಚಂದಾ ಕೊಡಲು ಈ ಮೂಲಕ ಅಪೇಕ್ಷಿಸುತ್ತೇನೆ

ನಾನು ದರಖಾಸ್ತುಮಾಡಿದ ಸಾಲದ ಮೊಬಲಗು ಆಗಿರುವ ರೂ ನ್ನು ನೂರಕ್ಕೆ ನೂರರಂತೆ ಪೂರಾ ಇದರೊಡನೆ ಲೇವಣಿ ಇಟ್ಟಿರುತ್ತೇನೆ.

ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕಿನಲ್ಲಿ ನನ್ನ ಲೆಕ್ಕದಲ್ಲಿ ಜಮಾ ಇರುವ ಮೊಬಲಗಿನ ಪೈಕಿ ನೂರಕ್ಕೆ ನೂರರಂತೆ ನಾನು ದರಖಾಸ್ತುಮಾಡಿದ ಸಾಲದ ಮೊಬಲಗಿಗೆ ಸರಿಯಾಗಿರುವ ರೂ ನ್ನು ಈ ಬಗ್ಗಾಗಿ ಉಪಯೋಗಿಸಿಕೊಳ್ಳಬಹುದಾಗಿ ನಾನು ಅಪೇಕ್ಷಿಸುತ್ತೇನೆ

ನೂರಕ್ಕೆ ನೂರರಂತೆ ನಾನು ದರಖಾಸ್ತುಮಾಡಿದ ಸಾಲದ ಮೊಬಲಿಗಿನ ಪೈಕಿ ರೂ ಈ ಮೂಲವಾಗಿ ಲೇವಣಿ ಇಟ್ಟಿರುತ್ತೇನೆ; ಮತ್ತು ಉಳಿದ್ದ ಮೊಬಲಗು ಎಂದರೆ ರೂ. ನ್ನು ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕಿನಲ್ಲಿ ನನ್ನ ಲೆಕ್ಕದಲ್ಲಿ ಜಮೆ ಇರುವ ಮೊಬಲಗಿನಿಂದ ಉಪಯೋಗಿಸಿಕೊಳ್ಳಬೇಕಾಗಿ ಅಪೇಕ್ಷಿಸುತ್ತೇನೆ.

(ಅನಾವಶ್ಯಕವಾದ ವಾಕ್ಯಗಳನ್ನು ಹೊಡೆದುಬಿಡತಕ್ಕದ್ದು)

ನನ್ನಿಂದ ಅಂಗೀಕರಿಸಲ್ಪಟ್ಟ ಸಾಲದ ಮೊಬಲಗನ್ನು ನನ್ನ ಒಗ್ಗೆ ಪೋಸ್ಟ್ ವ ತು ಟೆಲಿಗ್ರಾಫ್ ಇಲಾಖೆಯ ಅಕೌಂಟಾಂಟ್ ಜನರಲ್ ರವರು ಇಟ್ಟುಕೊಳ್ಳಬಹುದಾಗಿ ಮತ್ತು ಆ ಬಾಬತು ಬಡ್ಡಿಯು ನನ್ನ ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕು ಲೆಕ್ಕದಲ್ಲಿ ಆಯಾ ವಾಯಿದೆಗೆ ಜಮಾ ದಾಖಲುಮಾಡಬೇಕಾಗಿ ನಾನು ಅಪೇಕ್ಷಿಸುತ್ತೇನೆ

ನನ್ನಿಂದ ಅಂಗೀಕರಿಸಲ್ಪಟ್ಟ ಮೊಬಲಗಿನ ಬಗ್ಗೆ ಈ ಕೆಳಗಿನ * ಮೌಲ್ಯಗಳ ಪ್ರಾಮಿಸರಿ ನೋಟುಗಳು ನನಗೆ ಕೊಡಲ್ಪಡಬೇಕಾಗಿ ಅಪೇಕ್ಷಿಸುತ್ತೇನೆ.

(ಅನಾವಶ್ಯಕವಾದ ವಾಕ್ಯಗಳನ್ನು ಹೊಡೆದುಬಿಡತಕ್ಕದ್ದು)

ಹೆಸರು

ವಿಳಾಸ

ತಾರೀಖು 1915.

(ಅವಶ್ಯವಿದ್ದರೆ ಇಲ್ಲಿ ಕೊಟ್ಟಿರುವ ಫಾರ್ಮನ್ನೇ ಕತ್ತರಿಸಿ ಉಪಯೋಗಿಸಬಹುದು.)

ವಿ. ಬಟ್ಲರ್‌ವರ್ತ್,

ಚೀಫ್-ಸೆಕ್ರೆಟರಿ.

ಉತ್ತರ ಹಿಂದೂಸ್ಥಾನ.

ಬ್ರಿಟಿಷ ಪೂರ್ವ ಆಫ್ರಿಕದಲ್ಲಿರುವ ಹಿಂದೂಸ್ಥಾನದ ಸಾವಕಾರ ಆಲಿಭಾಯಿ ಮುಲ್ಲಾ ಜೀವಾಂಜಿಯವರು ೩೪ ಜನ ರೋಗಿಗಳ ಚಿಕಿತ್ಸೆಗೆ ಸಾಕಾದಷ್ಟು ಸ್ಥಳವುಳ್ಳ ಡೇರೆಗಳ ಒಂದು ಆಸ್ಪತ್ರೆಯನ್ನು ಸೇನಿಕರ ಉಪಯೋಗಾರ್ಥವಾಗಿ ಕೊಟ್ಟಿರುವರು. ಇದಕ್ಕೆ ಜೀವಾಂಜಿವಾರ್ಡ ಎಂತ ಕರೆಯುವರು. ಇದೇ ರೀತಿ ಸ್ವರ್ಗಸ್ಥ ಗೋಖಲೆಯವರ ಹೆಸರಲ್ಲಿ ೩೪ ಜನ ರೋಗಿಗಳ ಚಿಕಿತ್ಸೆಗೆ ಬೇಕಾದಷ್ಟು ಸ್ಥಳವುಳ್ಳ ಆಸ್ಪತ್ರೆಯನ್ನು ಬ್ರಿಟಿಷ ಆಫ್ರಿಕದಲ್ಲಿರುವ ಇತರ ಭಾರತೀಯ ಸಾವಕಾರರು ಕೊಟ್ಟಿರುತ್ತಾರೆ

ಪೂನೆಯಲ್ಲಿಯ ಭಾರತ ಸೇನಾ ಸಂಘದ ಅಧ್ಯಕ್ಷರಾದ ಬಹುಮಾನಪಟ್ಟ ವಿ. ಯಸ್ ಶ್ರೀನಿವಾಸ ಶಾಸ್ತ್ರಿಗಳವರಿಗೆ ಮೈಸೂರುಸಂಸ್ಥಾನದ ಯುವರಾಜರವರಿಂದ ಮೈಸೂರಿಗೆ ತಾ. ೧೮ಕ್ಕೆ ಬರಲು ಆಮಂತ್ರಣ ಬಂದಿರುವದಾಗಿ ತಿಳಿಯುತ್ತೇವೆ

ವಸುಮತಿ ಒಕ್ಟಿ ಎಂಬ ಹುಡುಗಿಯು ಲುದಿಯಾನ ಎಂಬಲ್ಲಿರುವ ಅಮೇರಿಕನ್ ಕ್ರೈಸ್ತ ಮಿಶನ್ ಶಾಲೆಯಲ್ಲಿ ಕೆಲವು ಸಮಯ ಮಿಸ್ ವಿಲ್ಸಿಸ್ ಮತ್ತು ಮಿಸ್ ಗ್ರೀನ್‌ಫೀಲ್ಡ್ ಈ ಇಬ್ಬರು ಉಪಾಧ್ಯಾಯಿನಿಯರ ಕೈಕೆಳಗೆ ಕಲಿಯುತ್ತಿದ್ದಳು ಈ ಹುಡುಗಿಯು ತನ್ನ ಸಹೋದರನ ಮನೆಯಿಂದ ಬಿನೋದು ಸಮಾಚಾರವನ್ನು ಹೇಳದೆ ಹೊರಟುಕೊಂಡು ಹೋದಳು ಕೆಲವು ದಿವಸದ ಮೇಲೆ ಆಕೆಯು ಈ ಮಿಶನರಿ ಉಪಾಧ್ಯಾಯಿಯರಲ್ಲಿರುವಳಾಗಿ ತಿಳಿದುಬಂದದ್ದರಿಂದ ಈ ಹುಡುಗಿಯ ಗಂಡನು ಉಪಾಧ್ಯಾಯಿಯರನ್ನು ಪ್ರತಿವಾದಿಗಳನ್ನಾಗಿ ಮಾಡಿ ಹುಡುಗಿಯ ಸ್ವಾಧೀನತೆ ಬಗ್ಗೆ ಒಂದು ದಾವೆಯನ್ನು ಅಲ್ಲಿಯ ಸಬ್ ಜಡ್ಜರಲ್ಲಿ ದಾಖಲುಮಾಡಿರುವನು. ವಾದಿಯ ಅಪೇಕ್ಷೆ ಪ್ರಕಾರ ಹುಡುಗಿಯನ್ನು ವಾರಂಟಿನ ಮೇಲೆ ಹಿಡಿದು ರೂ ೫೦೦ರ ಜಾಮೀನಿನ ಮೇಲೆ ಬಿಟ್ಟಿರುತ್ತಾರೆ ಈ ದಾವೆಯ ತನಿಖೆಯು ನಡೆಯುತ್ತಿರುವಾಗ ಪ್ರತಿನಿತ್ಯದಲ್ಲಿಯೂ ಈ ಹುಡುಗಿಯು ಹಾಜರು ಇರಬೇಕೆಂದು ಸಬ್ ಜಡ್ಜರವರು ಆಜ್ಞಾಪಿಸಿರುವರು

ಕೆಲವು ದಿವಸಗಳ ಹಿಂದೆ ಮಂಗಳೂರಿನ ರೋಮನ್ ಕೆಥೋಲಿಕ ಬಿಶೋಪರವರ ಮನೆ ಹೊಕ್ಕು ಪೋಲೀಸ ಪ್ರಭುಗಳು ಮಂಗಳೂರಿನ ಕೆಲವು ಜೆಸುಯಿಟ್ ಪಾದ್ರಿಗಳ ಸಹಿತ ಮುಂಬಯಿಗೆ ಹೋಗಿ ಆರ್ಚ ಬಿಶೋಪ ಪದವಿಯ ಚಾರ್ಜನ್ನು ವಹಿಸಿಕೊಳ್ಳುವರಂತೆಯೂ ಆ ಪ್ರಾಂತ್ಯದಲ್ಲಿರುವ ಜರ್ಮನ್ ಜನಾಂಗದ ಗುರುಗಳ ಬದಲು ಮಂಗಳೂರಿನ ಗುರುಗಳನ್ನು ಅಲ್ಲಿ ನೇಮಿಸುವರಂತೆಯೂ ವರ್ತಮಾನವಿತ್ತು ಈ ವರ್ತಮಾನವು ಸುಳ್ಳಾದ್ದೆಂತ ಅಲ್ಲಿಯ ಆರ್ಚ ಬಿಶೋಪರವರ ಹೇಳಿಕೆಯಿಂದ ತಿಳಿದುಬರುತ್ತದೆ. ಮುಂಬಯಿ ಸರಕಾರದವರು ಆರ್ಚ ಬಿಶೋಪರನ್ನು ಮುಂಬಯಿಯಲ್ಲಿರಬಹುದೆಂದು ಅಪ್ಪಣೆ ಕೊಟ್ಟದ್ದರಿಂದ ಇವರ ಬದಲಿಗೆ ಬಿಶೋಪ ಪೆರಿನಿ ಪ್ರಭುಗಳು ಮುಂಬಯಿಗೆ ಹೋಗುವ ಅಗತ್ಯವು ಇರದೆಂಬುದಾಗಿ ತಿಳಿಯುತ್ತೇವೆ

ಕಳೆದ ವಾರದಲ್ಲಿ ಇಡಿ ಹಿಂದೂಸ್ಥಾನದಲ್ಲಿ ೬೨೩೩ ಮಂದಿ ಪ್ಲೇಗುತಗಲಿದವರಲ್ಲಿ ೪೬೧೧ ಜನರು ಮೃತಪಟ್ಟಿರುವರು.

ಮದ್ರಾಸು ಸಂಸ್ಥಾನದಲ್ಲಿ ಯಾತ್ರಿಕರಿಗೆ ಇರುವ ಅಡಚಣೆಗಳನ್ನು ಶೋಧಿಸಿಕೊಂಡು, ಅವುಗಳ ನಿವಾರಣೆ ಬಗ್ಗೆ ಎಂಥಾ ಏರ್ಪಾಡುಗಳನ್ನು ಮಾಡಬಹುದೆಂಬ ವಿಚಾರವನ್ನು ನಡಿಸಲು ಏರ್ಪಡಿಸಲ್ಪಟ್ಟ ಪಿಲ್ಗ್ರಿಮ್ಸ್ ಕಮಿಟಿಯಂತೆಯೇ ಮುಂಬಯಿ ಸಂಸ್ಥಾನದಲ್ಲಿ ಸಹಾ ಇಂಥಾದ್ದೊಂದು ಕಮ್ಮಿಟಿಯು ಏರ್ಪಡಿಸಲ್ಪಟ್ಟಿರುವದು. ಈ ತಿಂಗಳ ತಾ. ೧೧ರಲ್ಲಿ ಈ ಕಮ್ಮಿಟಿಯವರು ಪೂನೆಯಿಂದ ಹೊರಟಿರುವರು.

ಈ ತಿಂಗಳ ತಾ ೧೧ರಲ್ಲಿ ಮುಂಬಾಯಿಯಿಂದ ಹೊರಟ 'ಅರೆಬಿಯಾ' ಎಂಬ ಹಡಗದಲ್ಲಿ ಬಂಗಾಳ ಗವರ್ನರ ದೊರೆಗಳವರ ಪತ್ನಿ ಲೇಡಿಕಾರ್ಮಿಕೆಲ್‌ರವರು ವಿಲಾಯತಿಗ ತೆರಳಿರುವರು

ಮೈಮಾನಸಿಂಗದಲ್ಲಿ ಡೆಪ್ಯುಟಿ ಪೋಲೀಸ ಸುಪರಿಂಟೆಂಡೆಂಟರಾದ ಯತೀಂದ್ರ ಮೋಹನ ಘೋಷರವರನ್ನು ಯಾರೋ ಘಾತಕರಿಗಳು ಗುಂಡು ಹೊಡೆದು ಕೊಂದು ಓಡಿ ಹೋಗಿರುವರು ಸಾಯಂಕಾಲ ಇವರು ಸುಮಾರು ೭ ಘಂಟೆ ಸಮಯಕ್ಕೆ ತಮ್ಮ ಮನೆಯ ಚಾವಡಿಗೆ ತಾಗಿರುವ ಕೋಣೆಯಲ್ಲಿ ತನ್ನ ಹೆಂಡತಿಯ ಕೂಡೆ ಮಾತಾಡುತ್ತಾ ಕೂತುಕೊಂಡಿದ್ದರು ಹೊರಗಿನ ಚಾವಡಿಯಿಂದ ಕೋಣೆಗೆ ಯಾರೋ ಬರುವ ಶಬ್ದವನ್ನು ಕೇಳಿಕೊಂಡು ತನ್ನನ್ನು ಕಾಣಲು ಬರುತ್ತಿದ್ದಾರೆಂತ ಬಗೆದು ಕೋಣೆಯಿಂದ ಹೆಂಡತಿಯನ್ನು ಕಳುಹಿಸಿಕೊಟ್ಟಿದ್ದರು ಕೂಡಲೆ ಘಾತುಕರು ಕೋಣೆಯೊಳಗೆ ಪ್ರವೇಶಿಸಿ ಯತೀಂದ್ರ ಮೋಹನ ಘೋಷರವರ ಮೇಲೆ ನಾಲ್ಕೈದು ಗುಂಡುಗಳನ್ನು ಹಾರಿಸಿ, ಅವರನ್ನು ಕೊಂದರು. ಅವರ ಹತ್ತಿರ ನಿದ್ದ ೧೩ ವರುಷ ಪ್ರಾಯದ ಮಗುವನ್ನು ಸಹ ಇದೇ ರೀತಿ ಕೊಂದಿರುವರೆಂತ ತಿಳಿಯುತ್ತದೆ ಅಪರಾಧಿಗಳು ತಲೆತಪ್ಪಿಸಿಕೊಂಡು ಓಡಿರುವರು

ಬಂಕಿಪುರದಲ್ಲಿ ಬಾಬು ಹರಿನಾರಾಯಣ ಸಿಂಹ ಎಂಬ ವಕೀಲರೊಬ್ಬರು ಬಹಳ ಕಾಲದಿಂದ ಅಸ್ವಸ್ಥದಲ್ಲಿದ್ದು ಕಳೆದ ಸೋಮವಾರ ಮೃತಪಟ್ಟರು ಗಂಡನು ಮೃತಪಟ್ಟದ್ದನ್ನು ನೋಡಿ ಇವರ ಹೆಂಡತಿಯು ಮನೆಯ ಒಂದು ಕೋಣೆಗೆ ಹೋಗಿ ತನ್ನ ವಸ್ತ್ರಗಳಿಗೆ ಬೆಂಕಿ ಇಟ್ಟುಕೊಂಡು ಆತ್ಮಘಾತವನ್ನು ಮಾಡಿಕೊಂಡಳೆಂಬುದಾಗಿ ತಿಳಿಯುತ್ತೇವೆ

ದಕ್ಷಿಣ ಮಹಾರಾಷ್ಟ್ರದಲ್ಲಿ ಔಂಧ ಸಂಸ್ಥಾನದ ಶ್ರೀಮಂತ ಬಾಲಾಸಾಹೇಬ ಪಂತ ಪ್ರತಿನಿಧಿಗಳವರು ತಮ್ಮ ರಾಜಧಾನಿಯಲ್ಲಿ ಇದೇ ವಿಜಯದಶಮಿಯ ದಿನದಿಂದ ಪ್ರಾಥಮಿಕ ಶಿಕ್ಷಣವನ್ನು ಉಚಿತವಾಗಿಯೂ, ಕಡ್ಡಾಯವಾಗಿಯೂ ಕೊಡುವ ಏರ್ಪಾಡನ್ನು ಜಾರಿಗೆ ತರುವರೆಂಬದಾಗಿ ತಿಳಿಯುತ್ತೇವೆ. ರಾಜಧಾನಿಯಲ್ಲಿ ಈ ಏರ್ಪಾಡಿನ ಕಾರ್ಯಗಳು ಸಮರ್ಪಕವಾಗಿ ನಡಿಯುತ್ತದೋ ಎಂಬದನ್ನು ತಿಳಿದ ನಂತರ ತಮ್ಮ ಸಂಸ್ಥಾನದಲ್ಲೆಲ್ಲಾ ಪ್ರಾಥಮಿಕ ಶಿಕ್ಷಣವನ್ನು ಉಚಿತವಾಗಿಯೂ, ಕಡ್ಡಾಯವಾಗಿಯೂ ಕೊಡುವರೆಂಬದಾಗಿ ತಿಳಿಯುತ್ತದೆ

ಮುಂಬಯಿಯಲ್ಲಿ ಇದೇ ಡಿಶಂಬರ ತಿಂಗಳಲ್ಲಿ ಜರಗುವ ಮುಸಲ್ಮಾನರ ಸಂಘ ಕೊಂಗ್ರೆಸ್ಸು ಸಭೆಯು ಸಾಂಗವಾಗಿ ನೆರವೇರುವಂತೆ ನಡಿಸಲು ಬೇಕಾದ ಪ್ರಯತ್ನಗಳನ್ನು ಈಗಲೆ ಪ್ರಾರಂಭಿಸಿರುವರು ಗುಜರಾತ, ದಕ್ಷಿಣ, ಕರ್ನಾಟಕ, ಮಾಂಡ್ವಿ ಮೊದಲಾದ ಮುಂಬಯಿ ಇಲಾಖೆಯ ಬೇರೆ ಬೇರೆ ಪ್ರಾಂತ್ಯಗಳಲ್ಲಿ ಜಿಲ್ಲಾ ಕಮ್ಮಿಟಿಗಳು ಏರ್ಪಡಿಸಲ್ಪಟ್ಟಿರುವವು. ಮಾಂಡ್ವಿಯಲ್ಲಿ ಏರ್ಪಡಿಸಿದ ಈ ಕಮ್ಮಿಟಿಯಲ್ಲಿ ೧೮೦ ಜನ ಮೆಂಬರರಲ್ಲಿ ೬೪ ಜನರು ಮಹಮ್ಮದೀಯರಾಗಿರುವರು ನ್ಯಾಶನಲ್ ಸಭೆಯ ಚಳವಳದಲ್ಲಿ ಮಹಮ್ಮದೀಯರು ದಿನೆ ದಿನೆ ಹೆಚ್ಚಾಗಿ ಕೂಡುವದನ್ನು ನೋಡಿ ಸರ್ವರೂ ಸಂತೋಷಪಡಲು ಕಾರಣವಿದೆ

ಮುಂಬಯಿಯಲ್ಲಿ ಈ ಮೊದಲು ನಾಲ್ಕು ವಸ್ತ್ರದ ಕಾರ್ಖಾನೆಗಳು ದಿವಾಳಿ- ಅರ್ಜಿಗಳನ್ನು ಕೊಟ್ಟಿರುವವು ಇನ್ನು ಎರಡು ಗಿರಣಿಗಳು ಇಂದೋ ನಾಳೆಯೋ ಈ ಅರ್ಜಿಗಳನ್ನು ಕೊಡುವ ತಯಾರಿಯಲಿ ರುವವು

ದಕ್ಷಿಣ ಹಿಂದೂಸ್ಥಾನ

ಬೆಂಗಳೂರು ಕೆನ್‌ಟೋನ್ಮೆಂಟಿಗೆ ದಕ್ಷಿಣ ದೇಶದಿಂದ ಯೋಗಿನಿಯೊಬ್ಬಳು ಒಂದಿದ್ದು ಕಳೆದ ಭಾನುವಾರ ಕಂಚಿಗೆ ಪ್ರಯಾಣಮಾಡಿದಳು. ಇನ್ನು ಎರಡು ವಾರಗಳಲ್ಲಿ ಆಕೆಯು, ಪುನಃ ಬೆಂಗಳೂರಿಗೆ ಬಂದು ಚಾಮರಾಜ ಪೇಟೆಯಲ್ಲಿಳಿಯುವಳಂತಲೂ ಈಕೆಯು ಕ್ಷುತ್ಪಿಪಾಸೆಗಳನ್ನು ಜಯಿಸಿರುವಳೆಂತಲೂ ಯೋಗ ಸಾಧನೆಯಲ್ಲಿ ಅಸಾಧಾರಣವಾದ ಸಿದ್ಧಿಯನ್ನು ಪಡೆದಿರುವಳೆಂತಲೂ ಉಬ್ಬಸ ಮೊದಲಾದ ಕಠಿನ ವ್ಯಾಧಿಗಳನ್ನು ತೀರ್ಥ ಪ್ರಸಾದಗಳನ್ನು ಅನುಗ್ರಹಿಸುವುದರ ಮೂಲಕವೇ ಗುಣಪಡಿಸುವಳೆಂತಲೂ ಕೇಳುತ್ತೇವೆ. ಎಂಬೀ ವರ್ತಮಾನವು ಬೆಂಗಳೂರಿನ ಒಕ್ಕಲಿಗರ ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಬರೋಡೆಯಲ್ಲಿ ಪ್ರಕೃತ ದಿವಾನ್‌ರಾಗಿರುವ ಮ॥ ರಾ॥ ರಾ॥ ವಿ ಪಿ ಮಾಧವರಾವ್, ಸಿ ಐ. ಇ. ರವರು ಬರೋಡಾ ಸಂಸ್ಥಾನದ ಕಾರ್ಯನಿರ್ವಾಹದಲ್ಲಿ ತೋರಿಸಿದ ನೈಪುಣ್ಯದ ಜ್ಞಾಪನಾರ್ಥವಾಗಿ ಅಲ್ಲಿಯ ಅರಮನೆಯ ಸಭಾ ಮಂದಿರದಲ್ಲಿ ಮಾಧವರಾವ್‌ರವರ ಒಂದು ಪ್ರತಿಮೆಯನ್ನು ಇಡಬೇಕೆಂತ ಬರೋಡೆಯ ಮಹಾರಾಜರವರು ಅಪ್ಪಣೆ ಮಾಡಿರುವರಾಗಿ ತಿಳಿದುಬರುತ್ತದೆ ಎಡಿನ್‌ಬರೋ ಪಟ್ಟಣದ ಒಬ್ಬ ಶಿಲ್ಪಿಯು ಈ ಪ್ರತಿಮೆಯನ್ನು ತಯ್ಯಾರು ಮಾಡುತ್ತಿರುವನಂತೆ

ಈ ತಿಂಗಳ ತಾ ೧೦ರಲ್ಲಿ ರಂಗಾಚಾರ್ಲು ಮೆಮೋರಿಯಲ್ ಭವನದಲ್ಲಿ ಬಹುಮಾನಪಟ್ಟ ಲಲ್ಲುಬಾಯಿ ಸಮಲ್‌ದಾಸ ಮೇಥಾ ಸಿ ಐ. ಇ ರವರ ಅಧ್ಯಕ್ಷತೆಯಲ್ಲಿ ಮೈಸೂರಿನ ಕೋಓಪರೇಟಿವ್ ಮಹಾ ಸಭೆಯು ಜರಗಿತು ಶ್ರೀಮದ್ಯುವರಾಜರವರೂ, ಸರ್ ಹ್ಯೂಡ್ಯಾಲಿಯವರೂ, ಸರ್ ಎಂ ವಿಶ್ವೇಶ್ವರಯ್ಯನವರೂ ಮೊದಲಾದ ಮಹನೀಯರು ಸಭೆಯಲ್ಲಿ ಹಾಜರಿದ್ದರು

'ಮದ್ರಾಸು' ಹೊಸ್ಪಿಟಲ್ ಹಡಗದ ತಿಂಗಳು ಕಟ್ಟಳೆಯ ಖರ್ಚಿಗೆ ವೆಂಕಟಗಿರಿ ಮಹಾರಾಜರವರು ರೂ ೫೦೦ರ ಪ್ರಕಾರ ಕೊಡುತ್ತಿದ್ದರು. ಇನ್ನು ಮುಂದಕ್ಕೆ ಈ ಮೊಬಲಗಿನ ಬದಲಿಗೆ ರೂ ೧೦೦೦ವನ್ನು ಪ್ರತಿ ತಿಂಗಳಲ್ಲಿಯೂ ಮಹಾರಾಜರವರು ಕೊಡಲು ನಿಶ್ಚಯಿಸಿರುವರಾಗಿ ತಿಳಿಯುತ್ತೇವೆ

ಪಟ್ಟಣ ರಚನೆಯ ಮಾಹಿತಿಯುಳ್ಳ ಮಿ॥ ಲೆಂಚಸ್ಟರ್ ಎಂಬವರನ್ನು ಮದ್ರಾಸು ಸರಕಾರದವರು ಈ ಸಂಸ್ಥಾನದ ಬಗ್ಗೆ ನೇಮಿಸಿದ್ದಾರೆ ಈ ಸಂಸ್ಥಾನದಲ್ಲಿ ಇವರ ಕೆಲಸದ ಅವಧಿಯು ಆರು ತಿಂಗಳುಗಳಾಗಿದೆ.

ವಿವಿಧ ವಿಷಯ.

ಅರಬಿಯರಲ್ಲಿ ಹುಡುಗಿಯರಿಗೆ ೧೭, ೧೮, ಅಥವಾ ೧೯ ವರುಷಗಳ ಪ್ರಾಯವಾದ ನಂತರ ವಿವಾಹವಾಗುವದು. ಪ್ರಾಯಭರಿತವಾದ ಕನ್ಯೆಯು ವಿವಾಹಕ್ಕೆ ಇರುವಳೆಂಬ ಸಮಾಚಾರವು ನೆರೆಯವರಿಂದ ಗೊತ್ತಾಗುವದು. ಒಬ್ಬ ಯುವಕನಿಗೆ ವಿವಾಹವಾಗಬೇಕೆಂದಿದ್ದರೆ ಆತನು ತನ್ನ ತಾಯಿ ಮತ್ತು ಸಹೋದರಿಯನ್ನು ಹುಡುಗಿಯನ್ನು ನೋಡಿ ಬರಲು ಕಳುಹಿಸುವನು. ವರನು ವಧುವನ್ನು ವಿವಾಹವಾಗುವ ತನಕ ನೋಡಕೂಡದು. ಹುಡುಗಿಯನ್ನು ನೋಡಿದ ನಂತರ ವಧುವಿನ ರೂಪಲಾವಣ್ಯಕ್ಕೆ ಅನುಸಾರವಾಗಿ ಕ್ರಯವೇನು ಕೊಡಬೇಕೆಂತ ನಿಶ್ಚಯಿಸಲ್ಪಡುವದು. ವಧುವು ಸೌಂದರ್ಯವತಿಯೂ ನಿಪುಣಳೂ ಆದರೆ ಕ್ರಯದ ದರವು ಹೆಚ್ಚಾಗಿದೆ. ಅಲ್ಜೀರಿಯಾ ಪ್ರಾಂತ್ಯಗಳಲ್ಲಿ ವಧುವಿನ ಕ್ರಯವು ಸಾಧಾರಣವಾಗಿ ೩೪ ಪವನು

ಗಳಿಗೆ ವಿುಕ್ಕಿರುವದು. ವಧುವಿನ ಕ್ರಯವು ಎಷ್ಟೆಂಬದು ನಿರ್ಣಯಿಸೋಣಾದ ನಂತರ ಗುರುವಿನ ಬಳಿಗೆ ಹೋಗಿ ಈ ಬಗ್ಯೆ ಬರಹಮೂಲಕ ಕರಾರು ಮಾಡಿಕೊಳ್ಳುವರು ಕ್ರಯದಲ್ಲಿ ಮುಕ್ಕಾಲು ಪಾಲು ವಧುವಿನ ತಂದೆಗೆ ಕೊಡೋಣಾಗುತ್ತದೆ. ಬಾಕಿ ಉಳಿಯುವ ಐವಜಿನ ಆಭರಣಗಳನ್ನು ವರನು ವಧುವಿಗೆ ಕೊಡುವನು ಕರಾರು ಈ ರೀತಿ ಆದನಂತರ ವಧುಪಕ್ಷದವರೂ ವರಪಕ್ಷದವರೂ ತಂತಮ್ಮ ಮನೆಗಳಿಗೆ ಹೋಗಿ ಊಟಉಪಚಾರಗಳಿಗೆ ಬೇಕಾದ ಸನ್ನಾಹಗಳನ್ನು ಮಾಡುವರು. ವಧುವಿನ ಮನೆಯಲ್ಲಿಯೂ ವರನ ಮನೆಯಲ್ಲಿಯೂ ವಧುವರರನ್ನು ಎರಡು ಯಾ ಮೂರು ದಿವಸಗಳ ತನಕ ತಮ್ಮ ನೆಂಟರಿಷ್ಟರೊಡನೆ ಉಪಚರಿಸುವರು. ಈ ಉಪಚಾರಗಳ ನಂತರ ವಿವಾಹವು ತೀರುವದು. ಹುಡುಗಿಗೆ ಎಂಥಾ ವರನು ಬೇಕಾಗುವನು, ಅವಳ ಅಪೇಕ್ಷೆ ಈ ವಿಷಯದಲ್ಲಿ ಏನು ಎಂಬದನ್ನು ತಿಳಕೊಳ್ಳುವ ಪದ್ಧತಿಯು ಅವರಿಯರಲ್ಲಿಲ್ಲ

~~~~~

ಅಮೇರಿಕದ ಒಬ್ಬ ಶಾಸ್ತ್ರಜ್ಞನು ಒಂದು ವಿಚಿತ್ರವಾದ ಅಡಿಗೆ ಪಾತ್ರವನ್ನು ರಚಿಸಿರುವನು. ಈ ಪಾತ್ರದಲ್ಲಿ ಮೂರು ವಿಧಗಳ ಅಡಿಗೆಯನ್ನು ಒಂದೇ ಸಲ ಸಿದ್ಧಗೊಳಿಸಲು ಅನುಕೂಲವಿರುವದು ಕಟ್ಟಿಗೆಯ ಖರ್ಚು ಇಂಥಾ ಪಾತ್ರದ ಉಪಯೋಗದಿಂದ ಉಳಿಯುತ್ತದಲ್ಲದೆ ಶ್ರಮವೂ ಸಮಯವೂ ಅಡಿಗೆ ಕೆಲಸದಲ್ಲಿ ವಿಶೇಷವಾಗಿ ಉಳಿಯುವದು

~~~~~

ಪುತ್ತೂರು:— ಪುತ್ತೂರು ಕಸಬೆಯಲ್ಲಿರುವ ಶಿಪ್ರಿ ಯಾನೆ ಸಾಲ್ವದೋರ ರೇಗರ ಮಗ ಹೆನ್ರಿರೇಗರು ಇದೇ ಕಳದ ಜನವರಿ ತಾ. ೧೫ರಲ್ಲು ಆದ ತನ್ನ ಮದುವೆಗೆ ಪುತ್ತೂರು ಇಗರ್ಜಿಗೆ ಕೂಡಿದ ಜನರು ಹೋಗದಂತೆ ಇಗರ್ಜಿ ಗುರುಗಳವರು ಆತಂಕಿಸಿದ್ದರಿಂದ ತನಗೆ ಮಾನನಷ್ಟ ಆದದ್ದಾಗಿ ಇಲ್ಲಿಯ ಇಗರ್ಜಿ ಗುರುಗಳವರ ಮೇಲೆ ಇಲ್ಲಿಯ ಡಿವಿಜನ ಡಿಪ್ಯೂಟ ಮೇಜಿಸ್ಟ್ರೇಟ ಕೋರ್ಟಿನಲ್ಲಿ ದಾಖಲುಮಾಡಿದ ಫಿರ್ಯಾದಿಯು ಇದ್ದೇ ತಾ. ೪ ೫ ೬ರಲ್ಲು ತನಿಕೆ ನಡದು ಮೊಕದಮೆಯನ್ನು ಇದೇ ತಾ ೧೯ರಲ್ಲು ಡಿಸ್ಚಾರ್ಜ ಮಾಡಿದ್ದಾಗಿ ತೀರ್ಮಾನಿಸಿದರು. ಪ್ರೊಸಿಕ್ಯೂಶನ್ ಕಡೆಯಿಂದ ವ್ಯವಹರಿಸುವ ಬಗ್ಯೆ ವಕೀಲ ಮ| ರಾ| ರಾ| ನಾರಾಯಣರಾವ', ಮೊಳಹಳ್ಳಿ ಶಿವರಾವ್ ನೆಟ್ಟಾರ ನರಸಿಂಗರಾವ್, ಹೊಸದುರ್ಗ ಗಣಪತಿರಾವ್ ಡಿಫನ್ಸ ಕಡೆಯಿಂದ ವಕೀಲ ಮ| ರಾ| ರಾ| ಗೊಲ್ಲರಕೇರಿ ಕೃಷ್ಣರಾವ್, ಮೆ| ಗೊನ್ಸಾಲ್ವಿಸ್ ಮತ್ತು ಮ| ರಾ| ರಾ| ಬೆಳ್ತಂಗಡಿ ಮಂಗೇಶರಾವ್ ವ್ಯವಹರಿಸಿದರು.

ಇಲ್ಲಿಯ ನಿವಾಸಿಕರು ರೆವಿನ್ಯೂ ಕಾಡಿನಿಂದಾಗಲಿ, ಕುಮ್ಕಿಯಿಂದಾಗಲಿ ಕಟ್ಟಿಗೆ ಕಡಿಯುವರೆ ಪರ್ಮಿಟ ಅಪೇಕ್ಷಿಸಿದ್ದಲ್ಲಿ ತಾಲೂಕು ಖಚೇಂದರವರು ಪರ್ಮಿಟ್ ಶಿಕ್ಕದೆಂದು ನಿರಾಕರಿಸಿ ಹುಕುಂ ಕೊಡೋಣಾಗುವದರಿಂದ ನಿವಾಸಿಕರಿಗೆ ಕಟ್ಟಿಗೆಯ ತೊಂದರೆ ಉಂಟಾಗಿಯದೆಂದು ಬೊಬ್ಬೆ ಹಬ್ಬಿರುವದು. ಆಕ್ರಯ ಕ್ರಯವೆಂತೂ ಏರುತ್ತಲೆ ಹೋಗುವಾಗ ಕಟ್ಟಿಗೆ ಕ್ರಯ ಏರಿದರೆ ಬಡಬಗ್ಗರ ಗೋಳು ಹೇಳತಕ್ಕದ್ದಲ್ಲ.

ಇಲ್ಲಿಯ ಫಾಯರಊಡ (ಕಟ್ಟಿಗೆ) ಕಂಟ್ರೆಕ್ಟರ ಮೆ| ಬಿ. ಮಸ್ಕರೇಂಞರವರು ತನ್ನ ಗುತ್ತಿಗೆ ರೆವಿನ್ಯೂ ಕಾಡಿನಿಂದಾಗಲಿ ಕುಮ್ಕಿಯಿಂದಾಗಲಿ ಕಟ್ಟಿಗೆ ಕಡಿಯುವರೆ ಮತ್ತು ಟೌನಿಗೆ ತರುವರೆ ಪರ್ಮಿಟ್ ಅಪೇಕ್ಷಿಸಿದವರಿಗೆ ತಾಲೂಕು ತಹಶೀಲದಾರವರು ನಿರಾಕರಿಸಿರುವದರಿಂದಲೂ ಅಂಥಾ ಕಾನೂನು ತನ್ನ ಗುತ್ತೆ ಊರ್ಜಿತದ ಮಧ್ಯಕಾಲದಲ್ಲಿ ಜ್ಯಾರಿಗೆ ತಂದದ್ದರಿಂದ ಅಂಥಾ ಸ್ಥಳಗಳಿಂದ ಕಟ್ಟಿಗೆ ಟೌನಿಗೆ ಬಾರದೆ ತನ್ನ ಗುತ್ತೆಮೊಬಲಗು ಚರ್ತಿಮಾಡಿಕೊಳ್ಳಲಿಕ್ಕೆ ಆಗದೆ ನಷ್ಟವುಂಟಾದ್ದರಿಂದ ಆ ನಷ್ಟದ ಕುರಿತು ಶಿವಿಲ್ ದಾವಾ ಮಾಡುವರೆ ಹುಕುಂ ಆಗಬೇಕಾಗಿ ಜಿಲ್ಲಾ ಕಲೆಕ್ಟರ ದೊರೆಗಳವರಿಗೆ ಮನವಿ ಮಾಡಿಕೊಂಡಿರುವರು

ಇತ್ತಕಡೆ ೩-೪ ದಿವಸಗಳಿಂದ ಮಳೆ ಶಾಂತವಾಗಿರುವದರಿಂದ ಒಕ್ಕಲಿಗರೆಲ್ಲರು ಬೆಳೆಕಟಾವಿಗೆ ಆರಂಭಿಸಿರುವರು

~~~~~

ವಿಟ್ಲ:— ಇಲ್ಲಿಯ ಟಪ್ಪಾಲ ಆಫೀಸಿನಲ್ಲಿ ಮಂಗಳೂರು ಪತ್ತಕಡ ಟಪ್ಪಾಲು ೩ ದಿವಸಕ್ಕೊಮ್ಮೆ ಸಿಕ್ಕುತ್ತದೆ ಒಂದೊಂದು ದಿವಸ ಇಡೀ ೬, ೭ ಕಾಗದಗಳು ಇರುತ್ತವೆ. ಒಂದೊಂದು ದಿವಸ ೭೦, ೮೦ ಕಾಗದಗಳು ಇರುತ್ತವೆ ಈ ವಿಷಯ ಮೇಲಾಪೀಸರರು ತಕ್ಕ ನಿಗಾಕೊಟ್ಟು ನಡಿಸಬೇಕಾಗಿ ಅಪೇಕ್ಷಿಸುತ್ತೇವೆ

ಇಲ್ಲಿಯ ಬ್ರೆಂಚ್ ಪೋಸ್ಟಾಪೀಸಿನಲ್ಲಿ ದಿನೇ ದಿನೇ ಕಾಗದಗಳು, ಪಾರ್ಸೆಲುಗಳು ವ ನಿಯಾಪರ್ರು ವಿಶೇಷವಾಗಿ ಹೆಚ್ಚುತ್ತಾ ಬರುತ್ತಿವೆ ಸದರಿ ಕಾಗದ ವಗೈರೆಗಳನ್ನು ಒಟ್ಟಾಪ ಮಾತ ಪರೆಬ್ಬ ವ್ಯಾದೆಯಿಲ್ಲದೆ ಬಹಳ ಮೇಹನತ ಪಡುತ್ತಾರೆ. ಅಲ್ಪ ಸಂಬಳದಲ್ಲಿ ಸದರಿ ಪೋಸ್ಟಮಾಸ್ಟರರು ಎಲ್ಲಾ ಕೆಲಸಗಳನ್ನು ಅವರ್ಹೇ ಮಾಡಬೇಕಾಗುತ್ತದೆ ಆದದರಿಂದ ಸದರಿ ಇಲಾಖೆಯವರು ಇಲ್ಲಿ ಒಬ್ಬ ಜವಾನನ ಪೇದೆಯನ್ನು ನೇಮಿಸುವದು ಅಗತ್ಯವಾಗಿದೆ

~~~~~

ಕಾಪು:— ತಾ ೧೧-೧೦ ೧೫ನೇ ದಿನ ಇಲ್ಲಿಯ ಬೋರ್ಡು ಕನ್ನಡ ಶಾಲೆಯನ್ನು ಶಾಲೆಗಳ ಅಸಿಸ್ಟೆಂಟು ಇನ್ಸ್‌ಪೆಕ್ಟರವರು ಮತ್ತು ೯ನೇ ಸರ್ಕಲು ಇನ್ಸ್‌ಪೆಕ್ಟರವರು ಸಂದರ್ಶಿಸಿ ಶಾಲಾಸ್ಥಿತಿಯನ್ನು ಮತ್ತು ಮಕ್ಕಳು ಆಡುವ ಆಟಗಳನ್ನು ನೋಡಿ ತುಂಬಾ ಸಂತೋಷಪಟ್ಟು ಮೂಲ್ಕಿ ಪತ್ತಕಡೆ ತೆರಳಿರುವರು.

~~~~~

ಕಟಪಾಡಿ:— ಇಲ್ಲಿ ನೂತನವಾಗಿ ಕಟ್ಟಲ್ಪಡುವ ಶ್ರೀವೆಂಕಟರಮಣ ಸ್ವಾಮಿ ಎಲಿಮೆಂಟರಿ ಶಾಲೆಯ ಕಟ್ಟೋಣದ ಕೆಲಸ ನೋಡುವರೆ ಸದರಿ ಶಾಲೆಯ ಮೆನೇಜಿಂಗ್ ಕಮಿಟಿಯವರ ಅಪೇಕ್ಷೆಯಂತೆ ತಾ. ೧೧ ೧೦-೧೫ರಲ್ಲು ೯ನೇ ಸರ್ಕಲ್ ಶಾಲೆಗಳ ಇನ್ಸ್‌ಪೆಕ್ಟರವರಾದ ಮಿ| ಯೇಟ್ಸ ದೊರೆಗಳವರೂ ಈ ಜಿಲ್ಲೆಯ ಅಸಿಸ್ಟೆಂಟ ಇನ್ಸ್‌ಪೆಕ್ಟರವರೂ ಸಬ್ ಅಸಿಸ್ಟೆಂಟ್ ಇನ್ಸ್‌ಪೆಕ್ಟರವರೂ ಕಾರ್ಕಳ ರೇಂಜ ಸುಪರವೈಜರವರೂ ದಯಮಾಡಿ ಒಂದಿದ್ದರು ದೊರೆಗಳವರ ಆಗಮನದ ಬಗ್ಯೆ ತೋರಣ ಧ್ವಜ ಪತಾಕೆಗಳಿಂದ ಅಲಂಕೃತವಾದ ಮಂಟಪವು ಸಿದ್ಧಗೊಳಿಸಲ್ಪಟ್ಟಿತ್ತು ಸದರಿ ಶಾಲೆಯ ಹುಡುಗರೂ ಬಾಲಿಕಾ ಪಾಠಶಾಲೆಯ ಹುಡುಗಿಯರೂ ೨ ಸಾಲಿನಿಂದ ನಿಂತು ದೊರೆಗಳವರು ಶುಮಾರು ಗಂಟೆ ೪-೩೦ಕ್ಕೆ ಚಿತ್ತೈಸುತ್ತಲೇ ಬಾಲಕ ಬಾಲಕಿಯರು ಸ್ವಾಗತ ಹಾಡುಗಳನ್ನು ಹಾಡಿ ಪುಷ್ಪಗಳನ್ನು ಚಲ್ಲಿದರು. ದೊರೆಗಳವರು ಆಸನರೂಢರಾಗುತ್ತಲೇ ಶಾಲೆಯ ಕಮಿಟಿ ಮೆಂಬರರ ಕಡೆಯಿಂದ ಶಾಲೆಯ ಪ್ಲೇನು ಮಾಡಿಕೊಟ್ಟು ಆಗಾಗ್ಯೆ ಇಲ್ಲಿ ದಯಮಾಡಿ ಬಂದು ಕಟ್ಟೋಣದ ಕುರಿತು ಬೇಕಾದ ಸಲಹೆಗಳನ್ನು ಕೊಡುತ್ತಿರುವ ಮಾಜಿ ಲೋಕಲ್‌ಫಂಡ್ ಸುಪರ್‌ವೈಜರವರಾದ ಮ| ರಾ| ರಾ| ಬಿ. ವೈಕುಂಟ ಬಾಳಿಗರು ಶಾಲೆಯ ಸಂಕ್ಷೇಪ ಚರಿತ್ರೆಯನ್ನೂ ಶಾಲಾ ಕಟ್ಟೋಣದ ಕೆಲಸವನ್ನೂ ಆ ಬಗ್ಯೆ ತಯಾರಿಸಿದ ಪ್ಲೇನು ಎಸ್ಟಿಮೇಟ್ ಪಟ್ಟಿಯನ್ನು ಸಹ ಕ್ರಮಪ್ರಕಾರ ತೋರಿಸಿದರು ಶಾಲಾ ಕಟ್ಟೋಣದ ಮುಹೂರ್ತ ಮಹೋತ್ಸವವು ದೊರೆಗಳವರ ಸ್ವಹಸ್ತದಿಂದ ಜರಗಬೇಕಾಗಿ ಕಮಿಟಿ ಮೆಂಬರರ ಅಪೇಕ್ಷೆಯನ್ನು ತಿಳಿಸಿದರು ದೊರೆಗಳವರು ಬರುವ ಫೇಬ್ರುವರಿ ತಿಂಗಳಲ್ಲಿ ತಾನು ಇತ್ತಕಡೆ ಬರುವೆನು, ಆ ಸಮಯದಲ್ಲಿ ನಿಮ್ಮ ಈ ಅಪೇಕ್ಷೆಯನ್ನು ನೆರವೇರಿಸುವೆನು ಎಂತ ಅಪ್ಪಣೆ ಕೊಟ್ಟರು ಕಮಿಟಿಯವರ ಕಡೆಯಿಂದ ಶಾ ಬಾಳಿಗರವರು ಕಟ್ಟೋಣದ ಗ್ರೇಂಟಿನ ವಿಷಯ ಪ್ರಸ್ತಾಪಿಸಲು ದೊರೆಗಳವರು ಉದಾರಚಿತ್ತದಿಂದ ತಾನು ಗ್ರೇಂಟು ಕೊಡುವ ವಿಲೆವಾರಿ ಮಾಡಿಸುತ್ತೇನೆಂತ ಅಭಯ ಕೊಟ್ಟರು ನಂತರ ಕಾಫಿ ಚಾ ಮುಂತಾದ ಫಲಾಹಾರಗಳು ಆದೊಡನೆ ದೊರೆಗಳವರಿಗೂ ಒಂದ ಅತಿಥಿಗಳಿಗೂ ಶಾಲೆಯ ಮೆನೇಜರ್ ರಾ| ಪಾಂಗಾಳ ಶ್ರೀನಿವಾಸ ನಾಯಕರವರು ಹೂಮಾಲೆಗಳನ್ನು ಕೊರಳಿಗೆ ಹಾಕಿ ಪನ್ನೀರು ಮುಂತಾದ ಪರಿಮಳ ದ್ರವ್ಯಗಳಿಂದ ಉಪಚರಿಸಿದರು ದೊರೆಗಳವರು ಆನಂದಪಟ್ಟರು. ದೇವರಪ್ರಾರ್ಥನೆಯು ನಂತರ ಬ್ರಿಟಿಷ್ ಪಕ್ಷಕ್ಕೆ ಜಯವು ಯುದ್ಧದಲ್ಲಿ ಜಯ ಸಿಕ್ಕಬೇಕಾಗಿ ಜಯ ಘೋಷದೊಡನೆ ಮಕ್ಕಳು ಪ್ರಾರ್ಥನೆಯನ್ನು ಹಾಡಿದರು ದೊರೆಗಳವರು ಸಂತೋಷಪಟ್ಟು ನೀವು ಕೈಕೊಂಡಿರುವ ಈ ಕೆಲಸವು ದೇಶೋದ್ಧಾರಕವಾದ್ದು ಎಂತ ಶ್ಲಾಘಿಸಿದರು ಆ ಮೇಲೆ ದೊರೆಗಳವರು ಮೂಲ್ಕಿ ಪತ್ತಕಡೆಗೆ ಸರ್ಕೀಟು ಬೆಳೆಸುವವರಾದರು ಹೋಗುತ್ತಾ ಇಲ್ಲಿ ಸಮೀಪವಿರುವ ಪಾಂಗಾಳ ಶಾಲೆಯನ್ನು ವ ಶಾಲೆಯ ತೋಟದ ಅಂದವನ್ನು ನೋಡಿ ಸಂತೋಷಪಟ್ಟು ಉಪಾಧ್ಯಾಯರು ಶಾಲೆಯಲ್ಲಿ ಕಲಿಸಬೇಕಾದ ಕೆಲವು ಸಂಗತಿಗಳನ್ನು ಹೇಳಿ ಮುಂದಕ್ಕೆ ಪಯಣ ಬೆಳಸಿದರಾಗಿ ತಿಳಿಯುತ್ತೇನೆ.

~~~~~

ಉಡುಪಿ:— ಇಲ್ಲಿಯ ಶ್ರೀ ಕೃಷ್ಣಸೂಕ್ತಿ ಮಾಸಪತ್ರಿಕೆಯು ಸುಮಾರು ಎಂಟೊಂಭತ್ತು ತಿಂಗಳಿಂದಲೂ ಹೊರಟಿರುವಂತೆ ತೋರಲಿಲ್ಲ. ಇದು ಮಂಗಳೂರಲ್ಲಿ ಛಾಪೆಯಾಗುತ್ತಲಿರುವಾಗ್ಯೆ ಹೀಗೆಯೇ ಕೆಲವು ದಿವಸ ನಿಂತುಹೋಗುದಕ್ಕೆ ತಮಗೆ ಸ್ವಂತಮುದ್ರಾಯಂತ್ರವಿಲ್ಲದುದು ಕಾರಣವೆಂತ ಹೇಳುತ್ತಾ ಇದ್ದರು. ಈಗ ಸ್ವಂತ ಛಾಪಖಾನೆಯಾದರೂ ತಿಂಗಳು ತಿಂಗಳು ಹೊರಡುತ್ತಿದ್ದವಕ್ಕೆ ಅಭ್ಯಂತರವೇನೋ ತಿಳಿಯಲಿಲ್ಲ ಒಟ್ಟಾರೆ "ವಿಚಿತ್ರ ಮೂರ್ತಿ"ಯ ವ್ಯಾಪಾರವು ಅತಿ ವಿಚಿತ್ರವಾಗಿದೆ" ಭೋಧಿನಿ! ನೀನಾದರೂ ಒಮ್ಮೆ ಬಾರವ್ವಾ.

ಇಲ್ಲಿಯ ಸಂಸ್ಕೃತ ಬಾಲಿಕಾ ಪಾಠಶಾಲೆಯ ಆಡಳಿತೆಯನ್ನೂ ಸಂಸ್ಕೃತ ಶಾಲೆಯ ಆಡಳಿತೆ ಕಮ್ಮಿಟಿಯವರೇ ವಹಿಸಿಕೊಳ್ಳುವರೆಂಬ ವದಂತಿ ಇರುವುದು. ಹಾಗಾದರೆ ಬಹಳ ಚನ್ನಾಗಿ ನಡೆಯುವುದು.

ಉಡುಪಿ ಸಂಸ್ಕೃತ ಪಾಠಶಾಲೆಯ ವಿದ್ಯಾರ್ಥಿಗಳು ಈ ತಾ. ೭ನೇ ಗುರುವಾರ ರಾತ್ರಿ ವೇಣೀಸಂಹಾರವೆಂಬ ಸಂಸ್ಕೃತ ನಾಟಕವನ್ನು ಬಹು ಅಂದವಾಗಿ ಆಡಿತೋರಿಸಿದರು. ಇದಕ್ಕೆ ಶ್ರೀ ಅದಮ್ಮಾರು, ಕೃಷ್ಣಾಪುರ, ಸೋದೆ,

ಫಲಿಮಾರು ಶ್ರೀ ಪಾದಂಗಳವರು ದಯಮಾಡಿಸಿದ್ದದಲ್ಲದೆ ಸ್ವ. ಮ. ಸಂ. ಸಾಬಾಜಿ ರಾಜಾಚಾರ್ಯರೇ ಮೊದಲಾಗಿ ಬಹುಮಂದಿ ಪಂಡಿತರೂ ವಿದ್ಯಾರ್ಥಿಗಳೂ ಬಂದು ಪ್ರೋತ್ಸಾಹಿಸಿದ್ದು ಸಂತೋಷಕರವು. ಮೃತಭಾಷೆಗಳ ಪಟ್ಟಿಯಲ್ಲಿ ದಾಖಲುಮಾಡಲ್ಪಟ್ಟಿದ್ದ ಗೀರ್ವಾಣಭಾಷೆಯ ಪುನರುಜ್ಜೀವನದ ಪ್ರಯತ್ನಕ್ಕೆ ಇಂತಹ ಸ್ಥಳಗಳಲ್ಲಿ ಪ್ರೋತ್ಸಾಹ ದೊರಿಯದಿದ್ದರೆ ಇನ್ನು ಎಲ್ಲಿತಾನೆ ದೊರಕುವದು? ಇವರು ಈ ಮೊದಲು ಆಡಿದ್ದ ಶಾಕುಂತಲ, ವಿಕ್ರಮೋರ್ವಶೀಯ, ರತ್ನಾವಳಿನಾಟಕಗಳಲ್ಲಿ ಈ ಸಲ ಆಡಿದ ವೀರರಸಪೂರಿತವಾದ ವೇಣೀಸಂಹಾರ ನಾಟಕವೇ ಸರ್ವೋತ್ಕೃಷ್ಟವಾಗಿದ್ದಿತು. ಇವರು ಇದಕ್ಕೆ ಮಧ್ಯೆ ಮಧ್ಯೆ ಕೆಲವು ಸಂಸ್ಕೃತ ಪದ್ಯಗಳನ್ನು ರಚಿಸಿ ಸೇರಿಸಿದುದರಿಂದ ಮತ್ತಷ್ಟು ಸ್ವಾರಸ್ಯವಾಗಿದ್ದಿತು. ಭೀಮಸೇನನ ಭಾಗವನ್ನು ಅಭಿನಯಿಸಿದ ಸಕ್ರೆ ವ್ಯಾಸಾಚಾರ್ಯರ ಮಟ್ಟು ಬಹಳ ಮಾಡಿ ಶ್ರೀಯುತ ವರದಾಚಾರ್ಯರ ಮಟ್ಟಿಗೆ ಸೇರಿಹೋಗುತ್ತಿತ್ತು. ಮೈಸೂರು ತಿರುಪತಿ ಮೊದಲಾದ ಪ್ರಾಂತ್ಯಗಳಿಂದ ದೊಡ್ಡ ದೊಡ್ಡ ನಾಟಕಮಂಡಳಿಯವರು ಬಂದು ಅತ್ಯದ್ಭುತವಾದ ವೇಷಾದಿಗಳನ್ನೂ ನಾನಾ ಚಮತ್ಕಾರಗಳನ್ನೂ ತೋರಿಸುತ್ತಿದ್ದರು. ಅವುಗಳನ್ನು ನೋಡಿದ್ದುದರಿಂದ ಎಷ್ಟು ಸಂತೋಷವೋ ಸಂಸ್ಕೃತ ಕಾವ್ಯಗಳ ಸ್ವಾರಸ್ಯವನ್ನು ಗ್ರಹಿಸತಕ್ಕವರಿಗೆ ಅಷ್ಟೇ ಸಂತೋಷವು ಇದರಿಂದಲೂ ಆಯಿತೆಂತ ಆಬಾಲ್ಯರೆಲ್ಲರೂ ಏಕಕಂಠವಾಗಿ ಅಭಿಪ್ರಾಯಪಟ್ಟರು. ಆದರೆ ಸಂಸ್ಕೃತ ಭಾಷಾಜ್ಞರಿಗೂ ತಿಳಿಯುವಂತೆ ಇವರು ಆ ಕಥೆಯ ತಾತ್ಪರ್ಯವನ್ನು ಸಂಕ್ಷೇಪವಾಗಿ ಕನ್ನಡ ಭಾಷೆಯಲ್ಲಿ ವಿವರಿಸಿ ಪ್ರೇಕ್ಷಕರಿಗೆ ಕೊಡುತ್ತಿದ್ದರೂ ಅಥವಾ ಒಬ್ಬನು ರಂಗದಲ್ಲಿಯೇ ನಿಂತುಕೊಂಡು ಪ್ರತಿಯೊಂದು ಸಂದರ್ಭವನ್ನು ಜನರಿಗೆ ತಿಳಿಯುವಂತೆ ಹೇಳುತ್ತಿದ್ದರೂ ಇನ್ನಷ್ಟು ಸ್ವಾರಸ್ಯವಾಗುತ್ತಿತ್ತು. ಇನ್ನು ಮುಂದೆಯಾದರೂ ಹೀಗೆ ಮಾಡುವದು ಒಳ್ಳೆಯದೆಂತ ತೋರುತ್ತೆ. ಇವರಿಗೆ ಯೋಗ್ಯವಾದ ಫರದೆಗಳನ್ನೂ, ಉಡುಪುಗಳನ್ನೂ, ಆಭರಣಗಳು ಮೊದಲಾದವನ್ನೂ ಒದಗಿಸಿಕೊಟ್ಟು ಪ್ರೋತ್ಸಾಹಿಸುವುದು ನಮ್ಮೆಲ್ಲರ ಹಂಗಾಗಿರುವುದು.

ಮಂಗಳೂರು.

ಲೋಕಲ್‌ಫಂಡ ಸುಪರವೈಜರರಾದ ವಿ. ಎಂ. ಎಫ್. ಡಿ. ರುಜಾರಿಯೊಯವರ ಕೆಲಸಕ್ಕೆ ಮ. ರಾ. ರಾ. ಯು. ಶ್ರೀನಿವಾಸರಾವ್ ಬಿ. ಎ. ಪಿ. ಸಿ. ಇ. ಯವರು ಉಡುಪಿ ಡಿವಿಜನಿಗೆ ಅಸಿಸ್ಟಾಂಟ ಇಂಜಿನಿಯರರಾಗಿ ನೇಮಕಪಟ್ಟಿರುವರು.

ಇಲ್ಲಿಯ ಡಿಸ್ಟ್ರಿಕ್ಟ್ ಕೋರ್ಟಿನ ಟ್ರಾನ್ಸ್‌ಲೇಟರ ಕೆಲಸಕ್ಕೆ ೩ ತಿಂಗಳಿಗೋಸ್ಕರ ಇಲ್ಲಿಯ ಅಪೀಲು ಬೆಂಚ್ ಕ್ಲಾರ್ಕರಾಗಿದ್ದ ಮ. ರಾ. ಯು. ಗುಡ್ಡಪ್ಪನವರಿಗೂ, ಮತ್ತು ಮೂರು ತಿಂಗಳಿಗೆ ಮುನ್ಸಿಫ್‌ಕೋರ್ಟಿನಲ್ಲಿ ಗುಮಾಸ್ತರಾಗಿದ್ದ ಮ. ರಾ. ರಾ. ಡಿ. ಆನಂದರಾಯರಿಗೂ ನೇಮಕಮಾಡಿದ್ದಾರೆ. ಇವರಿಬ್ಬರಲ್ಲಿ ದೊರೆಯವರು ಯಾರನ್ನು ಹೆಚ್ಚು ಶಿಫಾರಸು ಮಾಡುವರೋ ಅವರನ್ನು ಕಾಯಮ್ಮಾಗಿ ನೇಮಿಸುವರು.

ಜಿಲ್ಲಾ ಕಲೆಕ್ಟರ ದೊರೆಗಳವರ ಸರ್ಕೀಟು ಕ್ರಮಪಟ್ಟಿ:—ತಾ. ೧೭ ಮೂಡಬಿದ್ರಿ; ತಾ. ೧೮-೧೯ ಕಾರ್ಕಳ; ತಾ. ೨೦, ೨೧, ೨೨ ಉಡುಪಿ; ತಾ. ೨೩, ೨೪ ಕಾಪು; ತಾ. ೨೫, ೨೬ ಮುಲ್ಕಿ; ತಾ. ೨೭; ೨೮ ಸುರತ್ಕಲ್, ತಾ. ೨೯ ಮಂಗಳೂರು.

ಗವರ್ನರ ದೊರೆಗಳವರ ಪತ್ನಿ ಲೇಡಿ ಪೆಂಟ್‌ಲೆಂಡರವರಿಂದ ಸೇನಿಕರ ಸಹಾಯಾರ್ಥವಾಗಿ ಏರ್ಪಡಿಸಲ್ಪಟ್ಟಿರುವ "ಲೆಡಿಸ್ ಡಿಪೊ" ಈ ಬಗ್ಗೆ ಇಲ್ಲಿ ಕಲೆಕ್ಟರ ದೊರೆಗಳವರ ಬಂಗ್ಲೆಯಲ್ಲಿ ಕುಲಸ್ತ್ರೀಯರ ಒಂದು ಸಭೆಯನ್ನು ಕಲೆಕ್ಟರ ದೊರೆಗಳವರ ಪತ್ನಿ ಮಿಸಿಸ್ ಲ್ಲೋಯ್ಡ್‌ರವರು ಏರ್ಪಡಿಸಿದ್ದರು.

"ವಸಂತ ಕೋಕಿಲೆ" ಎಂಬ ಇಂದ್ರಜಾಲ ಮಹೇಂದ್ರಜಾಲಗಳನ್ನು ಸ್ಪಷ್ಟವಾ ತೋರಿಸುವ ಅತ್ಯದ್ಭುತ ಚಮತ್ಕಾರವಾದ ಹೊಸ ಕಾದಂಬರೀ ಕಥೆಯು ಅಚ್ಚಾಗಿ ಈ ಕಾನೇ ಬಿಕರಿಗೆ ಸಿದ್ಧವಾಗಿದೆ. ಈ ಗ್ರಂಥದಲ್ಲಿ ಶೃಂಗಾರಾದಿ ನವರಸಗಳು ತುಂಬುತ್ತಿವೆ ಈವರೆಗೆ ಪ್ರಚುರವಾಗಿರುವ ಎಲ್ಲಾ ಕಥೆಗಳಿಗಿಂತಲೂ ಮೀರದಷ್ಟು ರಸ್ಯವುಳ್ಳದ್ದಾಗಿದೆ. ವರ್ಣನಾಭಾಗಗಳು ಎಲ್ಲರಿಗೂ ತಿಳಿಯುವ ಹಾಗೆಯೂ ಸ್ವಾಧವವಾಗಿಯೂ ಇವೆ. ಭಾಷಾಶೈಲಿಯು ಅತ್ಯುತ್ತಮವಾಗಿದೆ ಓದುವದಕ್ಕಾರಂಭಿಸಿ ವಾಚಕರ ಮನಸ್ಸನ್ನು ಸಂಪೂರ್ಣವಾಗಿ ಆಕರ್ಷಿಸಿ ಮುಗಿಯುವವರಿಗೂ ಆವೇಶನ್ನುಂಟುಮಾಡಿ ಉಲ್ಲಾಸಗೊಳಿಸುವ ಹಾಗಿದೆ ತಮ್ಮ ಜ್ಞಾನ, ಭಕ್ತಿ, ವೈರಾಗ್ಯ ಮೊದಲಾದ ವೇದಾಂತ ವಿಷಯಗಳನ್ನೂ ಚೆನ್ನಾಗಿ ತಿಳಿಸುತ್ತದೆ. ಕಥಾ ಸಂವಿಧಾನವು ಹೊಸಮಾದರಿಯಾಗಿ ಆಶ್ಚರ್ಯಕರವಾಗಿದೆ. ಪ್ರಕಟವಾಗಿ ಶೃಂಗಾರ ರಸವನ್ನು ವರ್ಣಿಸದಿರುವುದರಿಂದ ಎಲ್ಲಾ ಸ್ತ್ರೀಜನರಿಗೆ ಓದುವುದಕ್ಕೆ ಅರ್ಹವಾಗಿದೆ. ಇದರಲ್ಲಿ ೯ ಪ್ರಕರಣಗಳೂ ೨೩೬ ಪುಟಗಳೂ ಇವೆ ಉತ್ತಮವಾದ ಕಾಗದ, ಸುಂದರವಾದ ಅಕ್ಷರ ತಪ್ಪಿಲ್ಲದೆ ಸುಂದರವಾಗಿ ಮುದ್ರಿಸಿದೆ ಬೇಕಾದವರೆಲ್ಲರೂ ಕೆಳಗಣ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಕ್ರಯ ರೂ. ೧—೦—೦ ಮಾತ್ರ.

ವಿಳಾಸ:— ಟಿ. ಎ. ಮಾಣಿಕ್ಯಂ ಶೆಟ್ಟಿ,
ಮಾಣಿಕ್ಯಮಂದಿರ ಬುಕ್ ಡಿಪೋ,
ಬಳ್ಳಾರಿ.

ಪ್ರೊಫೆಸರ್ ಜೇಮ್ಸ್‌ರವರ ಎಲೆಕ್ಟ್ರೊ ಟಾನಿಕ್-ಪಿಲ್ಸ್ ಎಂಬುವ

ವಿದ್ಯುತ್‌ಶಕ್ತಿಯ ವಾಜೀಕರಣ ಮಾತ್ರೆಗಳು.

ಇದು ಮುಖ್ಯವಾಗಿ, ಹೆಚ್ಚಾಗಿ ವ್ಯಾಯಾಮವನ್ನು ತೆಗೆದುಕೊಳ್ಳಲಾರದ ಮನುಷ್ಯರಿಗೂ, ಮೆದುಳಿನಲ್ಲಿಯೇ ಕೆಲಸ ಮಾಡುವಂತಹ ವಿದ್ಯಾವಂತರಿಗೂ, ಬೋಧಕರಿಗೂ, ಗುಮಾಸ್ತೆಯರಿಗೂ, ವಿದ್ಯಾರ್ಥಿಗಳಿಗೂ ಮತ್ತು ವ್ಯಾಪಾರಿಗಳಿಗೂ ಅತ್ಯುತ್ತಮವಾದ ಮುತ್ತಿನೋಪಾದಿಯ ಔಷಧ.

ಈ ಮಾತ್ರೆಗಳು ಕೆಳಗಿನ ವ್ಯಾಧಿಗಳನ್ನು ನಿರ್ಮೂಲ ಮಾಡುತ್ತದೆಂಬುದು ಎಲ್ಲವರ ಅನುಭವಸಿದ್ಧಾಂತವು. ಕ್ಷಯರೋಗ, ಎಳವು (ಹಿಸ್ಟೀರಿಯಾ) ವೀರ್ಯದೌರ್ಲಭ್ಯವು, ಮಂದಾಗ್ನಿ, ಕೆಟ್ಟರಕ್ತ, ತಲೆತಿರುಗುವಿಕೆ, ಶಕ್ತಿಹೀನತೆ, ಧಾತುಕ್ಷೀಣತೆ, ಧಾತು ಸಂಬಂಧವಾದ ವಿಕಾರಗಳು, ಸ್ತ್ರೀಗರ್ಭ ವಿಕಾರಗಳು, ಅಕಾಲದ ಮುಟ್ಟು, ಸೊಂಟದಲ್ಲಿಯ ನೋವು, ಮುಖದಲ್ಲಿಯ ಬಿಳುಪು, ಮಂದವಾದ ದೃಷ್ಟಿ, ಕೀಲುಗಳ ನೋವು, ಈ ಮೇಲೆ ಹೇಳಿರುವ ಎಲ್ಲಾ ವ್ಯಾಧಿಗಳಲ್ಲಿ ನಿಮಗೆ ಯಾವುದಾದರೂ ಉಂಟಾದರೆ, ಆ ವ್ಯಾಧಿಯು ಆರಂಭಿಸುತ್ತಲೇ, ಬೇರೆ ಚಿಕಿತ್ಸೆಗಳನ್ನು ಮಾಡಿ, ಉಪಯೋಗವಿಲ್ಲದ ಕಷ್ಟಗಳನ್ನು ತಂದುಕೊಳ್ಳದೆ, ತಕ್ಷಣವೇ ಮೇಲೆ ಹೇಳಿರುವ ಪ್ರೊಫೆಸರ್ ಜೇಮ್ಸ್‌ರವರ ವಿದ್ಯುತ್‌ಶಕ್ತಿಯ ವಾಜೀಕರಣ ಮಾತ್ರೆಗಳನ್ನು ತರಿಸಿ ಉಪಯೋಗಿಸಿಕೊಳ್ಳಿರಿ. ಈ ಮಾತ್ರೆಗಳನ್ನು ಉಪಯೋಗಿಸುವುದರಿಂದ ಮೇಲೆ ಹೇಳಿರುವ ವ್ಯಾಧಿಗಳೆಲ್ಲವೂ ನಿರ್ಮೂಲವಾಗಿ ವಾಸಿಯಾಗುವುದು. ಅಲ್ಲದೆ, ನಿಮ್ಮ ಶರೀರಗಳನ್ನು ದೃಢವಾಗಿಯೂ, ಅಂದವಾಗಿಯೂ, ಕಷ್ಟಪಟ್ಟು ಕೆಲಸಗಳನ್ನು ಮಾಡಲು ಸರಿಗೈದೂ ಈ ಮಾತ್ರೆಗಳು ನಿಮಗೆ ಮನೋಲ್ಲಾಸವನ್ನೂ ಕೊಡುತ್ತವೆ. ನೀವು ಈ ಮಾತ್ರೆಗಳನ್ನು ಇದುವರೆಗೂ ಉಪಯೋಗಿಸದಿದ್ದರೆ, ಈಗಲಾದರೂ ಒಂದು ಡಬ್ಬಿ ತರಿಸಿಕೊಂಡು ಉಪಯೋಗಿಸಿ ನೋಡಿದರೆ, ನಿಮಗೇನೇ ನಂಬಿಕೆಯುಂಟಾಗುವುದು.

25 ಮಾತ್ರೆಗಳುಳ್ಳ ಸೀಸೆ 1ಕ್ಕೆ ರೂ. 1—4—0. 40 ಮಾತ್ರೆಗಳುಳ್ಳ ಸೀಸೆ 1ಕ್ಕೆ ರೂ. 2—0—0. ಟಪ್ಪಾಲು ಖರ್ಚು ಅಲಾಯಿದ.

ಅಂದವಾಗಿ ಥಳಥಳಿಸುವ ಕೂದಲನ್ನು ಕೊಡುವ

ಕಾಮಿನಿಯಾ ಆಯಿಲ್ (ರಿಜಿಸ್ಟರ್ಡ್).



ಈ ಎಣ್ಣೆಯು ಸುಪ್ರಸಿದ್ಧವಾದ ವನಸ್ಪತಿಗಳ ಮತ್ತು ಸುಗಂಧ ದ್ರವ್ಯಗಳ ಮಿಶ್ರಣದಿಂದ ತಯಾರು ಮಾಡಲ್ಪಟ್ಟಿರುವುದು. ಈ ಎಣ್ಣೆಯನ್ನು ಪ್ರತಿದಿನವೂ ಉಪಯೋಗಿಸುವುದರಿಂದ ಇದು ಮೆದುಳನ್ನು ತಣ್ಣಗೆ ಇಟ್ಟು ಜ್ಞಾಪಕಶಕ್ತಿಯನ್ನು ಅಭಿವೃದ್ಧಿ ಮಾಡುತ್ತದೆ. ಇದರ ಮಹಿಮೆಯಿಂದ ಅನೇಕ ದೊಡ್ಡ ಮನುಷ್ಯರೂ, ಹೆಂಗಸರೂ, ಯೌವನಸ್ಥರೂ ಯಾವಾಗಲೂ ಉಪಯೋಗಿಸುತ್ತಿರುತ್ತಾರೆ. ಕಾಮಿನಿಯಾ ಎಣ್ಣೆಯನ್ನು ಉಪಯೋಗಿಸುವುದರಿಂದ ತಲೆಕೂದಲು ನುಣುಪಾಗಿಯೂ ಒಲವುಳ್ಳದ್ದಾಗಿಯೂ, ನೋಡಲು ರೇಷ್ಮೆಯಂತೆ ಹೊಳಪುಳ್ಳದ್ದಾಗಿಯೂ ಆಗುವುದರಿಂದ ಈಗ ಅಂಗಡಿಗಳಲ್ಲಿ ದೊರಕುವ ಅನೇಕ ಕೀಳು ತರದ ಎಣ್ಣೆಗಳನ್ನು ಕಮ್ಮಿ ಬೆಲೆಗೆ ತೆಗೆದುಕೊಂಡು ಅನ್ಯಾಯವಾಗಿ ತಲೆಯ ಕೂದಲನ್ನು ಹಾಳುಮಾಡಿಕೊಳ್ಳಬೇಡಿರಿ

ಕ್ರಯ ಸೀಸೆ 1ಕ್ಕೆ ರೂ 1—0—0.

,, 3ಕ್ಕೆ ,, 2-10—0

ವಿ. ಪಿ. ಚಾರ್ಜು ಅಲಾಯಿದ

N B — ಕಾಮಿನಿಯಾ ಎಣ್ಣೆಯನ್ನು ತೆಗೆದುಕೊಳ್ಳುವಾಗ ಕಾಮಿನಿಯಾ [illegible] ವದನ್ನೇ ತೆಗೆದುಕೊಳ್ಳಿರಿ

ವಸಂತ, ಗ್ರೀಷ್ಮ, ವರ್ಷ, ಶರತ್ ಈ ನಾಲ್ಕು ಋತುಗಳಲ್ಲಿ ಯಾವಾಗಲೂ ನಿಮ್ಮ ಅಂತಃಕರಣಕ್ಕೆ ಆನಂದವನ್ನು ಕೊಟ್ಟು ಸುಪ್ರಸಿದ್ಧವಾದ ಸುವಾಸನೆಯಿಂದೊಡಗೂಡಿದ ಅನೇಕ ಪುಷ್ಪಗಳಿರುವ ತೋಟದಿಂದ ಈಗಲೇ ಹೊಸದಾಗಿ ತಂದ ಪುಷ್ಪಗಳ ಆನಂದವನ್ನು ಕೊಡುವ

ಆಟೋ ದಿಲ್ಬಹಾರ್.

ಇದು ಲೋಕದಲ್ಲಿ ಅದ್ವಿತೀಯವಾದ ಸುಗಂಧಗಳಲ್ಲಿ ಮೇಲಾದ ಸ್ಥಾನವನ್ನು ಹೊಂದಿರುತ್ತದೆ ಎಂದು ಎಲ್ಲರೂ ಉಪಯೋಗಿಸಿ ನೋಡಿ ಶ್ಲಾಘನೆ ಮಾಡಿರುತ್ತಾರೆ. ಇದನ್ನು ಉಡುಪುಗಳ ಮೇಲೆ ಚಿಮುಕಿಸಿಕೊಂಡರೆ ಯಾವ ವಿಧವಾದ ಚುಕ್ಕೆಯು ಕಾಣದೆ ಸದಾ ಇರತಕ್ಕ ಪರಿಮಳ ಸುಗಂಧವನ್ನು ಕೊಡುತ್ತದೆ. ಒಂದು ಸಾರಿ ಉಪಯೋಗಿಸುವುದರಿಂದ ಇದರಲ್ಲಿ ನಂಬಿಕೆ ಹುಟ್ಟುತ್ತದೆ. ಇದನ್ನು ಕೊಂಡುಕೊಳ್ಳುವಾಗ ರಿಜಿಸ್ಟರಾಗಿರುವ "ಆಟೋ ದಿಲ್ಬಹಾರ್" ಡಬ್ಬಿಯನ್ನು ಪೇಕಿಂಗ್ ಒಡೆಯದಿರುವುದನ್ನೇ ನೋಡಿ ತೆಗೆದುಕೊಳ್ಳಿರಿ

ಕ್ರಯ ಸಣ್ಣ ಸೀಸೆ 1ಕ್ಕೆ 0—8—0.

,, ಮಿಡಿಯಂ ,, ,, 0-12—0.

,, ½ ಔನ್ಸಿನ ,, ,, 2—0—0.

ಆಟೋ ದಿಲ್ಬಹಾರ್ ಕಾರ್ಡು 1ರ ಬೆಲೆ 0—1—0.

ಪೋಸ್ಟೇಜು ಅಲಾಯಿದ.

ಯಾವಾಗಲೂ ಕುಟುಂಬದಲ್ಲಿ ಅವಶ್ಯವಾಗಿರತಕ್ಕ ಔಷಧವು.

ಆಡ್‌ಮನ್ಸ್ ಸ್ಪೈಸ್ ಸಾಲ್ಟ್.

ವಾಯುವಿನಿಂದ ಶರೀರದ ಯಾವ ಭಾಗಕ್ಕೆ ಉಂಟಾಗುವ ನೋವು ನಾವು ಶ್ವಾಸ ಬಿಡುವಾಗಲೂ ಮತ್ತು ತೆಗೆದುಕೊಳ್ಳುವಾಗಲೂ ಉಂಟಾಗುವ ಎದೆನೋವು, ವಾಯುವಿನಿಂದ ಕೀಲುಗಳಲ್ಲಿ ಉಂಟಾಗುವ ಸಡುವಿನ ನೋವು, ತಲೆಶೂಲೆ ಮತ್ತು ಕೈಕಾಲು ನೋವು, ಇವುಗಳೆಲ್ಲವೂ ಈ ಮುಲಾಮನ್ನು ಹಚ್ಚುವುದರಿಂದ ಶುದ್ಧಾಂಗವಾಗಿ ನಿವೃತ್ತಿಯಾಗುತ್ತದೆ. ಒಂದು ಸಲ ಉಪಯೋಗಿಸಿ ನೋಡಿರಿ ಇತರ ಮುಲಾಮುಗಳನ್ನು ಉಪಯೋಗಿಸದೆ ಇದನ್ನು ಉಪಯೋಗಿಸುವುದರಿಂದ ನಿಮಗೆ ಹೆಚ್ಚಾದ ಲಾಭ ಉಂಟು. ಕ್ರಯ ಬಾಟ್ಲಿ ಒಂದರ ರೂ 1—0—0 ಟಪ್ಪಾಲು ಖರ್ಚು 4 ಆಣೆ

ಆಡ್‌ಮನ್ಸ್ ಮಲೇರಿಯಸ್ ಪಿಲ್ಸ್.

ಶೀತಜ್ವರ, ಚಳಿಜ್ವರ, ಮೊರೆಜ್ವರ ಮತ್ತು ಸಾಧಾರಣ ಜ್ವರ ಇವುಗಳಿಗೆ ಆಡ್‌ಮನ್ಸ್ ಮಲೇರಿಯಸ್ ಮಾತ್ರೆಗಳು ಬಹು ಆಶ್ಚರ್ಯಕರವಾದ ಗುಣಗಳನ್ನು ಕೊಡುತ್ತವೆ. 30 ಮಾತ್ರೆಗಳ ಡಬ್ಬಿ 1ರ ಬೆಲೆ ರೂ. 1—0—0. ಟ. ಖ. ಅಲಾಯಿದ

THE ANGLO INDIAN DRUG & CHEMICAL COMPANY, 16 MARKET BOMBAY.

ಪ್ರಧಾನ ಏಜಂಟರು: ದಿ ಯೂಲನ್ ಮಾರ್ಟ್, ಮಂಗಳೂರು ದ. ಕನಡಾ.

Printed & Published by V. S. Kamath at the Mangalore Trading Association's Sharada Press, Mangalore

Registered No. M. 498

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ — ವರುಷ ಒಂದಕ್ಕೆ ರೂ 1—4—0. ಟಪ್ಪಾಲು ಹಾಸಲು ಸೇರಿ ರೂ. 2—1—0.

ಪುಸ್ತಕ IX | ಮಂಗಳೂರು ತಾ. ೨೨ನೇ ಒಕ್ಟೋಬರ ಶುಕ್ರವಾರ 1915. | ಸಂಚಿಕೆ 43

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತಾನ್.

(ರಜಿಸ್ಟರ್ಡ)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿಂತಾನದ ಸೇವನೆಯಿಂದುಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟದೆ.

1 ಇದರ ಸೇವನೆಯಿಂದ ವೃದ್ಧಿಯಾಗುವ ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.

2 ದುರ್ವಾಸನೆಯಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತು ಹೆಚ್ಚಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು

3. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸ ಬೇಕಾದಲ್ಲಿ ಈ ಮಾತ್ರೆಗಳನ್ನುಪಯೋಗಿಸತಕ್ಕ ಒಂದಕ್ಕೆ ತಿಂದನ್ನವು ಜೀರ್ಣವಾಗುವದಲ್ಲದೆ, ಕಾಲಪ್ರವೃತ್ತಿಯು ಕ್ರಮವಾಗಿ ಆಗುತ್ತದೆ ಸಂಗ್ರಹರೋಗಗಳೂ ಉಪಶಮನವಾಗುತ್ತವೆ.

4. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು.

5. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ ಎಲ್ಲ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವವು.

6. ಬೇಸಿಗೆ ಮತ್ತು ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು

7 ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು

ಅದುಕಾರಣ್ಯಿಂತಹ ಗುಣಕಾರಿಯಾದ ಸೆಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ

4೫ ಮಾತ್ರೆಗಳ ಪೊಟ್ಟ 1ಕ್ಕೆ 0—2—0 200 ಮಾತ್ರೆಗಳ ಪೊಟ್ಟ 1ಕ್ಕೆ 0—7—0 50 ಮಾತ್ರೆಗಳ ಟಿನ್ 1ಕ್ಕೆ 0—4—0 550 ಮಾತ್ರೆಗಳ ಪುರಡಪೆಟ್ಟಿಗೆ 1ಕ್ಕೆ 1—0—0

95 „ „ „ 0—4—0 200 „ ಟಿನ್ „ 0—9—0 100 „ ಶೀಶೆ „ 0—4—6 1200 „ „ „ 2—0—0

1 ರೂಪಾಯಿಗೆ ಕಡಿಮೆಯಾಗಿ ವಿ ಪಿ ಮೂಲಕ ಕಳುಹಿಸಲ್ಪಡುವುದಿಲ್ಲವು ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು

☞ ಭರತಖಂಡ, ಬರ್ಮ, ಮತ್ತು ಸಿಲೋನ್ ಈ ಪ್ರಾಂತ್ಯಗಳ ಎಲ್ಲಾ ಭಾಗದಲ್ಲೂ ಏಜಂಟರು ಬೇಕಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಏಜಂಟರು — ಡಿ. ಊಲನ್‍ಮಾರ್ಟ, ಮಂಗಳೂರು.

ಸೋಲ್ ಏಜಂಟ್ಸ್ — ಸೆಶಿಂತಾನ್ ಡಿಪೋ,
ಪ್ರಿನ್ಸೆಸ್ ಸ್ಟ್ರೀಟ್ ಬೊಂಬಾಯಿ ನಂ. 2.

TOM VICTOR & CO'S
BUSINESS
Shorthand and Typewriting Institution.

Instruction given in Commercial Subjects, French, Shorthand, and Typewriting from Oct. 10th to Jan 10th; Jan 15th to April 15; June 15th to Sept. 15th.

N. B. JOB-WORK and Typewriter Repairs undertaken at very cheap rates.

MILAGRES, Mangalore.

ವಿನಾಮೂಲ್ಯ! ವಿನಾಮೂಲ್ಯ!! ವಿನಾಮೂಲ್ಯ!!!

ಆರ್ಯಚಿಕಿತ್ಸಾರಹಸ್ಯ

ದೇಶೀಯ ಚಿಕಿತ್ಸೆಯನ್ನು ನಮ್ಮ ಜನಸಮುದಾಯದಲ್ಲಿ ಹ್ಯಾಗೆ ರೂಢಿಗೆ ತರಬೇಕೆಂಬುವದು ಈ ಗ್ರಂಥದಿಂದ ಸನು ವ್ಯಕ್ತವಾಗುವದು. ಕನ್ನಡ ನುಡಿಯು ಒಡನಾಟವಿರುವವರೆಲ್ಲರಿಗೂ ತಿಳಿಯುವಂತೆ ಈ ಗ್ರಂಥವು ಬರೆಯಲ್ಪಟ್ಟಿದೆ.

ಆರ್ಯಮಹಾಶಯರೇ, ಆರ್ಯಚಿಕಿತ್ಸೆಯಲ್ಲಿ ಪೂರ್ಣ ಗೌರವ ಮತ್ತು ಅಭಿಮಾನವನ್ನು ತೋರಿಸಿ ತಮ್ಮ ಆಯುಃಪ್ರಮಾಣದಲ್ಲಿ ಕಾಲುಘಂಟೆ ಸಮಯವನ್ನು ದೇಶಸೇವೆಗೋಸ್ಕರ ಕಳೆಯಿರಿ.

ಈ ಪುಸ್ತಕ ಬೇಕೆಂದಿರುವವರು ತಮ್ಮ ಪೂರ್ಣ ಎಡ್ರೆಸನ್ನು ಅರ್ಧಾಣೆ ಸ್ಟಾಂಪಿನೊಂದಿಗೆ ಈ ಕೆಳಗಣ ವಿಳಾಸಕ್ಕೆ ಕಳುಹಿಸಿಕೊಟ್ಟರೆ ಈ ಪುಸ್ತಕವು ದೊರೆಯುವದು.

ಎಂ. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು.

ರಮಾಮಾಧವ.

ಮದ್ರಾಸು ಗವರ್ನಮೆಂಟ್ ಕನ್ನಡ ಟ್ರಾನ್ಸ್‌ಲೇಟರ್ ಮ. ರಾ. ಬಿ. ರಾಮರಾವ್ ಎಂ.ಎ.,ಎಲ್.ಎಲ್.ಬಿ. ಅವರಿಂದ

ಈ ಕಾದಂಬರಿಯ ಕಥಾನಕವು ಬಹು ಹೃದಯಂಗಮವಾದದ್ದಾಗಿಯೂ, ಸ್ತ್ರೀಪುರುಷರೂ ಬಾಲ್ಯ ವಯಸ್ಸಿನವರೂ ಓದುವುದಕ್ಕೆ ತಕ್ಕುದಾಗಿಯೂ ಇದ್ದು, ಸಂಸಾರಿಕರು ಸುಖಿಗಳಾಗಿ ಬಾಳುವ ಮಾರ್ಗವನ್ನು ಅತ್ಯುತ್ತಮವಾಗಿ ತಿಳಿಸುತ್ತಲಿದೆ.

ಬೆಲೆ ಪ್ರತಿಯೊಂದಕ್ಕೆ 6 ಆಣೆ. ಅಂಚೆಯ ಹಾಸಲು ಬೇರೆ.

ವಿಳಾಸ:— ಮ್ಯಾನೇಜರ್,
ಶಾರದಾ ಪ್ರೆಸ್, ಮಂಗಳೂರು. ದ. ಕ.

ಹುಳಬಿದ್ದ ಹುಣ್ಣುಗಳು.

ವೆಡುಬಿದ್ರೆ ಕಾಡಿಪಟ್ಣ ಮೊಗೇರ ಶೀಪ್ರು ಹೆಂಗಸು ಬರಿಯುವದು —ನನಗೆ ಸುಮಾರು ಆರು ವರ್ಷಗಳಿಂದ ಎರಡು ಕಾಲುಗಳಲ್ಲಿ ಬೊಕ್ಕೆಗಳು ಹುಟ್ಟಿ ಅದರಲ್ಲಿ ಕೀವು ಸುರಿಯುತ್ತ ಕೆಲವು ಸಣ್ಣ ಛಿದ್ರಗಳುಂಟಾಗಿ ಆ ಛಿದ್ರದಲ್ಲಿ ಹುಳಗಳು ತುಳುಕುತಿತ್ತಲ್ಲದೆ ಸ ರಿ ವ್ರಣಗಳು ಕರಗಿ ಅರ್ಧಾಣೆ ಗಾತ್ರವಾಗಿತ್ತು ಇವರಿಂದ ನಡಿಯುಲಾರದೆ ಕಾಲಿಗೆ ವಸ್ತ್ರ ಕಟ್ಟಿ ವ ಲಗಿಟ್ಟಲ್ಲಿಯೇ ಇದ್ದೆನ ದೈವವಶಾತ್ ತವ್ಮ ಸಬ್ ಏಜಂಟರ ಭೇಟಿಯಾಗಿ ಪರೀಕ್ಷಾರ್ಥವಾಗಿ ಎರಡು ಸೀಸೆ ತವ್ಮ ಯುಕಲಿಪ್ಟಸ್ ತೈಲವನ್ನ ಕೊ ಡುಕೊಂಡು ಹೊಟ್ಟೆಗೂ ತಕ್ಕೊಂಡು ಹ ಣ್ಣಿಗೂ ಹಚ್ಚಿದೆ ಎರಡು ಸಿ ಸೆ ವ ಗಿವ ವಷ್ಟರಲ್ಲಿ ನನ್ನ ಹುಣ್ಣುಗಳ ಣಾಗಿ ನಡಿಯ ಲು ಅನ ಕೂಲವಾಗಿ ದೆ ಎಂ ದನ್ನು ತಿಳಿಸಲು ಸಂತೋಷಪಡುತೇನೆ

ಒಂದೇ ಸಲ ಕೊಡುವದರಲ್ಲಿ ಗುಣ'

ರಾ ವೆಂಕಟಕೃಷ್ಣ ಆಚಾರಿ, ಶಂಕರನಾರಾಯಣ —ನಿಮ್ಮಲಿಂದ ತರಿಸಿದ ಯುಕಲಿಪ್ಟಸ್ ತೈಲವನ್ನು ಕೆಲವು ಕಾಲದಿಂದ ಕ ೦ ಹೊಟ್ಟೆನೋವಿನಿಂ ನರಳ ತ್ತಿದ್ದ ನನ್ನ ತಾಯಿಗೆ ಒಂದು ಸಲ ಕೊಡ ವಷ್ಟರಲ್ಲಿ ಗ ಣ ಟಾವಕಾರಣ ಮನಸ್ಸಿಗೆ ಭಾರಿ ಖುಷಿಯಾಗಿದೆ ಅದ ನ್ ಸೀಸೆ ಪಿ ಪಿ ಸಾವಿ ಕಳ ಸಿರಿ

ಇದು ಸಂಜೀವಿನಿಯೇ ಸರಿ''

ಮ ರಾ ತುಕ್ರಪ್ಪ ಟಿ ಎವರ್ಶಾಳಕಾರ್, ಮುಂಬೈ —ಕೆಲವು ಸಮಯದಿಂದ ಕೆಮ್ಮ ದಿ ಪೆ ತಾತ ತ್ತಿ ಹ ತ ಗಿಯೊ ಹಲವು ಕಾಲದಿಂ ಹೊಟ್ಟೆನೋವಿಂದ ನರಳುತ್ತಿದ್ದ ಮುದುಕಿಯೊ ಳಿಗೂ ನಿಮ್ಮಲ್ಲಿ ದೊರೆಯುತ್ತ ಯುಕಲಿಪ್ಟಸ್ ತೈಲವನ್ನು ನನ್ನ ಸ್ನೇಹಿತರಾದ ವೈ ಕೊರಗಪ್ಪನವರಿಂದ ಪಡಕೊಂಡು ಕೊಟ್ಟಲ್ಲಿ ಇ ರೂ ಗುಣಹೊಂದಿರುತ್ತಾರೆ ಕೆಮ್ಮು ಉಬ್ಬಸ, ಹೊಟ್ಟೆನೋವು ಸರ್ವ ತರದ ವಾಯುರೋಗಗಳಿಗೆ ಇದು ಸಂಜೀವಿನಿಯಂತೆ ಇದೆ ಆದುದರಿಂದ 2 ಡಜನ್ ಪಿ ಪಿ ಪಾವಿ ಕಳ ಸಿರಿ ಔನ್ಸ್ ಸೀಸೆ 1ಕ್ಕೆ 0—5—0 ಡಜನ್ ಸೀಸಗಳಿಗೆ ಪಿ ಸಹಿತ ರೂ 3—12—0 ಅನುಪಾನ ಪತ್ರಿಕೆ ಸೀಸೆಯೊಂದಿಗೆ

☞ ನಮ್ಮ ಹೊಮಿಯೋಪತಿ ಔಷಧಿಗಳು ದೊರೆಯುತ್ತವೆ

ವಿಳಾಸ — ಏಜಂಟರು —

ಇಕ್ವಿನ್ಸ್ ಏಜನ್ಸಿ, ಮಂಗಳೂರು

ಸುಗಂಧವಿಲಾಸ, ರಥಬೀದಿ ಮಂಗಳೂರು

GRAND CLEARANCE SALE RS 1 15 0

ಯೋಗ್ಯತಾ ಪತ್ರಿಕೆ —ನಾನೆ ಎಂತ್ರಿಯಿಂದ ಎಲ್ಲವರಿಗೂ ತಿಳಿಸ ಪಡೆಂನಂದರೆ ನಿಮ್ಮ ವ ನಃ ನು ತ ಕೊ ಡ ಡಿ ಗಡಿಯಾರ ಉಪಯೋಗಕ್ಕೆ ಬಹಳ ಶ್ರೇಷ್ಟವಾಗಿದೆ ಗ ಟೆ ತೋರಿಸ ವದರಲ್ಲಿ ಒ ವ ಸೆಕೆಂಡಿನ ವ್ಯತ್ಯಾಸ್ತೂ ಇಲ್ಲ ಇತರ ಕಂಪನಿಯವರು ಇ ಧ ಗಡಿಯಾರವನ್ನು ಕಳ ಹಿಸ ವದಿಲ್ಲ ವ ತ್ತ ಗಡಿಯಾರಗಳನ್ನು ವಿ ಪಿ ವ ಮೂಲಕ ಕಳ ಹಿಸಿಕೊಡಿ

ವ್ಯಾನೇಜರ್ ಾಯ ದೊತನ ಆಸೀಸ ತಿರ ಚಿನಾಪಳ್ಳಿ

ಸುಂದರವಾದ ಲೇಡಿಸ್ ಸ್ಪ್ರಾಂಗ್ ಪಾಕೆಟ್ ವಾಚ್

ಅಸಲ ಕ್ರಯ ರೂ 3-14-0 ಈಗ ರೂ 1 15 0



ಈ ನಕ್ಷೆ ಯಲ್ಲಿ ತೋರಿಸಿದ ವ ಗಡಿಯಾರ ವ ಕ ವ ಸೆ ಪನ್ ಪ್ಯಾಲಿಸ್ ಎಹ ಸೊಗ ಪ ಗಡಿ ಎರ ಡವ ನೋಡುವದಕ್ಕೆ ವ ಚ್ಚಟವಾಗಿ ಇರುತ್ತೆ ಇತರ ಚಿಲ್ಲ ಎರಡು ಮೂರು ರೂಪಾಯಿ ಕ್ರಯ ದ್ದೊ ಯ ಗಡಿಯಾರಗಳನ್ನು ಕೊ ಡು ಹಣ ಕಳಕೊ ಡು ನ ಬೆ ಮೋಸಹೋಗ ಬೇಡಿರಿ ವರ್ಷಗಳ ಗಾ ದ ಟಿ ಇದೇ ಅಕ್ಟೋಬರ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಮಾತ್ರ ರೂಪಾಯಿ 1—15—0 ಕೊಡಬೇಕೆಂದು ನಮ್ಮ ಏರ್ಪಾಡು ಆಗಿದೆ

ನಮ್ಮ ವಿಳಾಸ —

ವಿ. ಎ. ಎಸ್. ಪಾಣಿ,
3. ಇರುಳಪ್ಪನ ಬೀದಿ, ಮದರಾಸು.

NOTICE.

In the Court of the District Munsif of Kundapur.

O P. No $\frac{52}{1915}$

Seethalama and others—*Petitioners*

Sanjava Bhatta —*Respondent.*

Where is the above named petitioners have applied for a succession certificate to collect Rs 476—8—0 due to the l sed Puttu shwara Bhatta of Balkudru Village U lipi Taluk and the petition is posted for the 26th inst for hearing Any intending objectors may do the same on or before that date

Kundapur)
15—10—1915)

N Subbannaya,
Pleader

ಹೊಸ ಪತ್ರಿಕೆ' **ಭಾರತಿ.** ಹೊಸ ಸಮಾಚಾರ'

ಬಳ್ಳಾರಿಯಲ್ಲಿ ಹೊರಡುವ ಶ್ರೇಷ್ಟವಾದ ವಾರಪತ್ರಿಕೆ

ಒಕ್ಕಲಿಗರಿಗೂ, ವರ್ತಕರಿಗೂ ಉಪಾಧ್ಯಾಯರಿಗೂ, ಸಂಘಗಳಿಗೂ, ವಿದ್ಯಾನಿಲಯಗಳಿಗೂ ಆವಶ್ಯಕವಾದ ನೈತಿಕ ಧಾರ್ಮಿಕ ರಾಜಕೀಯ ವಿಷಯಗಳು, ಸದ್ಯದ ಯುದ್ಧ ಸಮಾಚಾರಗಳು, ವಿದೇಶ ವೃತ್ತಾಂತಗಳು ಪಂಡಿತರಿಂದ ಬರೆಯಲ್ಪಡ ವ ವ ನೋರಂಜಕ ಲೇಖಗಳು, ಕನ್ನಡಿಗರಿ ಸುಲಭವ ಗಿ ತಿಳಿಯುವಂತೆ ಪ್ರಕಟಿಸಲ್ಪಡುವು ಪ ದರವಾದ ಪ್ರೈಸು, ಉತ್ತಮವಾದ ಗ್ಲೇಜ ಕಾಗದ ಡೆವಿ ಎ ಟು ಪುಟಗಳ ಪತ್ರಿಕೆ ವಾರ್ಷಿಕ ವರ್ಗಣೆ ಅಂಚೆ ವೆಚ್ಚ ಸೇರಿ ರೂ. 2—4

1 1 ನೇ ಅಕ್ಟೋಬರು ನೇ ತಾರೀಕಿನೊಳಗೆ

1 ಚ ದಾರರನ್ನು ಕೂಡಿಸಿ ಕೊಟ್ಟ ಏಜಂಟರಿಗೆ ರೂ	25
	10
	5.

ಹೆಚ್ಚಿನ ವಿಷಯ ಬರೆದು ತಿಳಕೊಳ್ಳಬಹುದು

ನಮ್ಮ ಅಡ್ರೆಸ್ — ಮ್ಯಾನೇಜರ್, ಭಾರತಿ,
ಬಳ್ಳಾರಿ.

ಓದಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು

ಬಲ್ಮರ ಮಿಶ್ಯನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ನಮೂಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಕೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಬಲ್ ಎಂಬ ಗುರುಸು ಕಲ್ಲು ಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಆರ ಣಿ ರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಭಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ —

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ.— ಜೆ. ಎಸ್. ಸೋಜ ಎಂಡ್ ಕಂಪೆನಿ,
ಹಂಪನ್‌ಕಟ್ಟಾ, ಮಂಗಳೂರು,

ಅಮೃತಾಂಜನ.

ಜಗತ್ಪ್ರಸಿದ್ಧವಾದ ಬೇನೆಹಾರಿ ಮುಲಾಮು

ಇದರ ಉಪಯೋಗದಿಂದ—ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಉಳುಕು, ಎದೆ ನೋವು, ಸೊಂಟದ ನೋವು, ಶೀತ, ಕೆಮ್ಮು, ದಂತಶೂಲೆ, ಮೂಲವ್ಯಾಧಿ. ಚೇಳು ಕಡಿತ, ಆನೆಗಾಲು, ಸುಟ್ಟ ಘಾಯ, ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷಧವಾಗಿ ರುತ್ತದೆ ಸಾವಿರಾರು ಡಾಕ್ಟರರೂ, ಇದಕ್ಕೆ ಸರ್ಟಿಫಿಕೇಟುಗಳನ್ನು ಕೊಟ್ಟು ದ್ದಾರೆ ಪ್ರತಿ ತಿಂಗಳಲ್ಲೂ 25,000 ಬಾಟ್ಲಿಗಳು ಮಾರಲ್ಪಡುತ್ತವೆ ಬಾಟ್ಲಿ ಒಂದರ ಕಿಮ್ಮತ್ತು ಆಣೆ 8 ಡಜನ್ 1ಕ್ಕೆ ರೂ 5—4—0 ವಿ. ಪಿ. ಖರ್ಚು ಪ್ರತ್ಯೇಕ

ಎಚ್ಚರಿಕೆ:—ಅಮೃತಾಂಜನವನ್ನು ಪಡಕೊಳ್ಳುವಾಗ ಸುಂದರವಾದ ಮತ್ತು ಹಲವು ಭಾಷೆಗಳುಳ್ಳ ಕರಡಿಗೆ ಸಮೇತ ಪಡಕೊಳ್ಳಿರಿ

ಗಜಕರ್ಣದ ಮುಲಾಮು.

ಮೂರು ಸರ್ತಿ ಹಾಗಿಸುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು ಇದರಿಂದ ಉರಿಯು ಒರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ ಇದುವರೆಗೆ ಒಂದು ಮಿಲಿಯ ಡಬ್ಬಿಗಳು ಮಾರಲ್ಪಟ್ಟವು. ರಾಜಾರಾಣಿ ಟ್ರೇಡ್ ಮಾರ್ಕ್ 0—6—0. 12 ಡಬ್ಬಿಗಳಿಗೆ 3—8—0 ವಿ ಪಿ ಪ್ರತ್ಯೇಕ

ದಂತಮಂಜನ.

ರಾಜಾರಾಣಿ ಟ್ರೇಡ್ ಮಾರ್ಕ್

ಈ ಮಂಜನದಿಂದ ಹಲ್ಲುಗಳನ್ನು ದಿನಾಗಲೂ ತಿಕ್ಕುವದರಿಂದ ಹಲ್ಲುನೋವು, ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ವಾಸನೆ, ಮುಂತಾದವುಗಳೆಲ್ಲಾ ನಿಲ್ಲುತ್ತವೆ. ಇದರಲ್ಲಿ ಹಲವು ನಮೂನೆಯ ಔಷಧಗಳಿವೆ ಬರೀ ಚೋಕಿನ ಹುಡಿ ಅಲ್ಲ. ಡಬ್ಬಿ 1ಕ್ಕೆ 0—2—0 ವಿ. ಪಿ. ಪ್ರತ್ಯೇಕ.

ಮೋಹಿನಿ ತೈಲ.

ಈಗ ಹಲವು ನಮೂನೆಯ ತೈಲಗಳು ಉಪಯೋಗಿಸಿದವರು ಈ ನಮ್ಮ ಸುಗಂಧಮಯವಾದ ಮೋಹಿನಿ ತೈಲವನ್ನು ಒಂದು ಸಾರಿ ಉಪಯೋಗಿಸಿ ನೋಡಿರಿ. ಇದರಲ್ಲಿ ಹ್ವೈಟ್ ಒಯಿಲ್ ಇಲ್ಲಾ: ಇದು ಗಿಡಮೂಲಿಕೆಗಳಿಂದಲೂ ಬದಾಮಿನ ಎಣ್ಣೆಯಿಂದಲೂ ತಯಾರಿಸಲ್ಪಟ್ಟಿದೆ. ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ ಬೆಳೆಯುವವು.

ಬಾಟ್ಲಿ ಒಂದರ ಕಿಮ್ಮತ್ತು ಆಣೆ 0—12—0

ಸುಂದರಿ ಮುಲಾಮು.

ಮುರ್ದಣಗಳನ್ನು ನಾಶಪಡಿಸಿ ಮುಖವನ್ನು ಸುಂದರಗೊಳಿಸುವದು. ಡಬ್ಬಿ 1ಕ್ಕೆ ರೂ 0—8—0

ವಜ್ರಗುಟಿಕ.

ಧಾತುಪುಷ್ಟಿ, ಧಾತುವೃದ್ಧಿ, ಶಕ್ತಿವರ್ಧಕ 20 ಗುಳಿಗೆಗಳ ಡಬ್ಬಿ ಒಂದರ ರೂ 1—0—0

ಕೆ. ನಟರಾಜನ್ ಎಡಿಟರ್, ಇಂಡಿಯನ್ ಸೋಶಿಯಲ್ ರಿಫ್ರೋರ್ಮರ್:—ಅಮೃತಾಂಜನ ಎಲ್ಲಾ ಔಷದಗಳಿಗಿಂತಲೂ ಬಹಳ ಉತ್ತಮವಾದ ಔಷಧ.

ಡಬ್ಲ್ಯು ಮೆಕ್ಸ್ವೆಲ್, ಮೈಸೂರು:—ಅಮೃತಾಂಜನದಿಂದ ಎಂಥಾ ಕಠಿಣವಾದ ವಾತ ನೋವಾದರೂ ನಿಲ್ಲುತ್ತದೆ.

ಆರ್. ಆರ್. ಗಂಗೋಲಿ:—ಅಮೃತಾಂಜನ ವಾತ, ತಲೆನೋವುಗಳ ಮೇಲೆ ದಿವ್ಯ ಔಷಧ.

ಡಾಕ್ಟರ್ ಡಾಂಡೇಕರ್, ಎಲ್. ಎಮ್. ಎಂಡ್ ಎಸ್:—ಅಮೃತಾಂಜನ ಎಲ್ಲಾ ನೋವುಗಳ ಮೇಲೆ ದಿವ್ಯ ಔಷಧ.

ನಮ್ಮ ಔಷಧಗಳನ್ನು ಪಡಕೊಳ್ಳುವಾಗ ಅಮೃತಾಂಜನ ಡಿಪ್ಪೊ, ಮುಂಬಯಿ ಎಂಬ ಹೆಸರನ್ನು ಓದಿನೋಡಿ ಪಡಕೊಳ್ಳಿರಿ.

ಅಮೃತಾಂಜನ ರಖಮಾಗಿಯೂ, ಚಿಲ್ಲರೆಯಾಗಿಯೂ ಬೇಕಾದವರು ನಮ್ಮ ಮುಂಬಯಿ ಆಫೀಸಿಗನೇ ಬರಿಯಬೇಕು. ಮದ್ರಾಸು ಆಫೀಸಿನವರು ರಖಮಾಗಿ ಅಮೃತಾಂಜನ ರವಾನಿಸಿ ಕೊಡುವ ಏರ್ಪಾಡು ಮಾಡಲಿಲ್ಲ.

ಮಂಗಳೂರಲ್ಲಿ—ಎಲ್ಲಾ ಔಷಧಗಳು ಈ ಕೆಳಗಿನ ಕಂಪೆನಿಗಳಲ್ಲಿ ತಿಕ್ಕುವವು.

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್, ಪರ್ಲ್ ಎಂಡ್ ಸನ್ಸ್, ದಿ ಊಲನ್ ಮಾರ್ಟ, ಕೊಟ್ಟಿಕಾರ ಬ್ರದರ್ಸ್ ಉಡ್ಪಿ

ಅಮೃತಾಂಜನ ಡಿಪ್ಪೊ,

6, 7. ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್ ಮದ್ರಾಸು.

109 ಫ್ರೇಯರ್ ರೋಡ,
ಮುಂಬಯಿ,

ESTABLISHED JULY 1906.

THE CANARA BANK, LIMITED., MANGALORE.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0
Issued Capital ...	225,000—0—0
Subscribed Capital ...	219,100—0—0
Paid up Capital ...	194,100—0—0
Deposits ...	385,613—4—0
Reserve Fund ...	33,500—0—0

Besides the uncalled capital of Rs. 25,000/- 25% of the net profits are added annually to the Reserve Fund. Rs. 28,485/ have been invested in Government Paper of the face value of Rs. 29,300/-

Dividends of not less than 6% paid during the past years and a bonus of 1% to 2% paid in addition during the last three years.

Fixed Deposits of Rs 50/ and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee

Short-notice Deposits requiring one weeks notice of withdrawal after one month received @ 2½%. per annum at the discretion of the managing committee

Current Deposit Account opened free of charge.

Savings Bank Account opened for any sum not less than 4 As and multiples thereof and interest paid @ 4⅛%.

Loans granted on proper securities and pledges

Sealed Parcels for safe custody received on a moderate charge

Canara Bank Ltd,
Mangalore, 1st October 1915.

ನಿಯಮಿತ ಮೂಲ ಧನವು ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು „	225,000—0—0
ಪ್ರತಿಜ್ಞಾತ ಮೂಲ ಧನವು „	219,100—0—0
ಆಗತ ಮೂಲ ಧನವು „	194,100—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು ..	385,613—4—0
ರಕ್ಷಿತ ಧನವು	33,500—0—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ ರಕ್ಷಿತ ಧನದ ಪೈಕಿ ರೂ. 28,485—0—0 ಸರಕಾರದ ರೂ. 29,300ರ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಸೇಕಡಾ 6ಕ್ಕೆ ಕಡಿಮೆಯಾಗದಂತೆ ಲಾಭವು ಪಾಲುದಾರರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಅಧಿಕೋಚಿತವು ಸಹ ಕೊಡಲ್ಪಟ್ಟಿರುತ್ತದೆ

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ತೆರೆಯಲ್ಪಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4⅛ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯು ಮೇಲೆ ವ ತು, ಆಧಿನ ಮೇಲೆ ಸಾಲಗಳು ಕೊಡೋಣಾಗುತ್ತವೆ

ಮೊಹರು ಮಾಡಲ್ಪಟ್ಟ ಪಪ್ಪು ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

P. Gopal Naik,
Secretary.

ಅತ್ತರು ಮತ್ತು ಸುರಭಿಗಳಲ್ಲಿ ಮಕುಟವರ್ಧನದಂತಿರುವ

ಒಟ್ಟೋ ಮೋಹಿನಿ.



(ರಿಜಿಸ್ಟರ್ಡ.)

ಅನೇಕ ವಸ್ತುಪ್ರದರ್ಶನಗಳಲ್ಲಿ ಪ್ರದರ್ಶಿಸಲ್ಪಟ್ಟು ಕಡೆಗೆ ಅದರ ರಮ್ಯವಾದ ಅತ್ಯಂತ ಶಾಶ್ವತವಾದ ಪರಿಮಳಕ್ಕಾಗಿ ಚಿನ್ನ ಬೆಳ್ಳಿಯ ಪದಕಗಳನ್ನು ಪಡೆದಿದೆ. ಎಲವಸ್ತ್ರದಲ್ಲಿ ನಾಲ್ಕು ತಟಕುಗಳನ್ನು ತಾಗಿಸುವುದರಿಂದ ಹಿಡಿ ತುಂಬಾ ಮಲ್ಲಿಗೆ ಹೂ ಇದ್ದ ಪರಿಮಳವುಂಟಾಗುವುದು. ಈ ಹೂಗಳು ಕೃತಕವಾದವುಗಳಾದರೂ ನೈಸರ್ಗಿಕ ಹೂವಿನಂತೆ ಪ್ರತಿ ಸಾಯಂಕಾಲ ಬಾಡಿಹೋಗದು. ಆದರೆ ತನ್ನ ಪರಿಮಳವನ್ನು 4 ದಿವಸಗಳಿಗಿಂತಲೂ ಹೆಚ್ಚಿಗೆ ಕೊಡುತ್ತಿರುವದು. ಆದುದರಿಂದ ಒಟ್ಟೋ-ಮೋಹಿನಿಯು ಶಾಶ್ವತವಾದ ಸುರಭಿಯೆಂದು ಕರೆಯಲ್ಪಟ್ಟು ಈ ಕಾಲಕ್ಕೆ ತಕ್ಕುದಾದ ಬಹುಮಾನವಾಗಿ ಕೊಡತಕ್ಕ ದ್ರವ್ಯವಾಗಿದೆ, ಇದರ ಪರಿಮಳವು ಶಾಶ್ವತವಲ್ಲವೆಂದು ದೃಢಮಾಡಿಕೊಡುವವರಿಗೆ 100 ರೂಪಾಯಿಗಳ ಬಹುಮಾನ ಕೊಡಲಾಗುವದು. ಆದುದರಿಂದ ಯಾಕೆ ಈ ಬಹುಮಾನವನ್ನು ಪಡೆಯಲು ಪ್ರಯತ್ನಿಸಲಾಗದು?

ಕ್ರಯ ಅರ್ಧ ಔನ್ಸ್ ಸೀಸೆಗೆ 2—0—0. 1 ಡ್ರಾಮ್ ಸೀಸೆಗೆ 0—12—0. ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0.

Proprietors;—The Oriental Drug & Chemical Co.
Sole Agents:—MOHINI AGENCY,
3 Fida Building, Jumma Musjid, BOMBAY.
Agents:—Bhagavandas Choonilal & Co.,
177 China Bazar Road, MADRAS.

ಪ್ರೊಪ್ರೈಟರರು:—ಓರಿಯಂಟಲ್ ಡ್ರಗ್ ಎಂಡ್ ಕೆಮಿಕಲ್ ಕೋ
ಪ್ರಾಮುಖ್ಯ ಏಜಂಟರು:—ಮೋಹಿನಿ ಏಜೆನ್ಸಿ,
3 ಫಿಡಾ ಬಿಲ್ಡಿಂಗ್, ಜುಮ್ಮಾ ಮಸೀದ್, ಬೊಂಬೈ.
ಏಜಂಟರು:—ಭಗವಾನ್‌ದಾಸ್ ಚೂನಿಲಾಲ್ ಎಂಡ್ ಕೋ,
177 ಚೀನಾ ಬಜಾರ ರಸ್ತೆ ಮದ್ರಾಸು.

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಕು 22ನೇ ಒಕ್ಟೋಬರ 1915

ಮದ್ರಾಸು ಸಂಸ್ಥಾನದಲ್ಲಿ ಗ್ರಾಮಪಂಚಾಯತಗಳು.

ಇದೇ ತಿಂಗಳ ತಾ ೨೦ಲ್ಲಿ ಈ ಸಂಸ್ಥಾನದ ಸರಕಾರದವರು ಗ್ರಾಮಪಂಚಾಯತಗಳನ್ನು ಸ್ಥಾಪಿಸುವ ವಿಷಯ ಒಂದು ವಿಶೇಷವಾದ ಹುಕುಮನ್ನು ಪ್ರಕಟಿಸಿರುತ್ತಾರೆ. ಈ ಹುಕುಮಿನಲ್ಲಿ ಪಂಚಾಯತಗಳ ರಚನಾಕ್ರಮವೂ ಅವುಗಳ ಅಧಿಕಾರವೂ ಹೇಗಿರಬೇಕೆಂಬುದನ್ನು ಸರಕಾರದವರು ಸೂಚಿಸಿರುವರು. ಇಂಥಾ ಪಂಚಾಯತಗಳನ್ನು ಸ್ಥಾಪಿಸಲು ಅವಕಾಶವುಳ್ಳ ಗ್ರಾಮಗಳ ಹೆಸರು ಪಟ್ಟಿಯನ್ನೂ ಇಂಥಾ ಪಂಚಾಯತಗಳನ್ನು ಸ್ಥಾಪಿಸುವ ವಿಷಯದಲ್ಲಿ ಬೇರೆ ಬೇರೆ ಗ್ರಾಮಗಳ ನಿವಾಸಿಕರ ಅಭಿಪ್ರಾಯವನ್ನೂ ನಿಶ್ಚಯಿಸಿಕೊಂಡು ಜಿಲ್ಲಾ ಕಲೆಕ್ಟರುಗಳು ಸರಕಾರದವರಿಗೆ ಒದಗಿಸಿಕೊಳ್ಳಬೇಕೆಂದು ಸರಕಾರದವರ ಈ ಆಜ್ಞೆಯಲ್ಲಿರುವುದು. ಜನರ ಅಭಿಪ್ರಾಯಗಳನ್ನು ತಾಲೂಕು ಬೋರ್ಡು ಪ್ರೆಸಿಡೆಂಟರ ಮೂಲಕ ತಿಳಕೊಳ್ಳಬಹುದೆಂದೂ ಸಹ ಇದೆ.

ದೇಶಾಭಿವೃದ್ಧಿಯ ಪ್ರಯತ್ನಗಳು ಹಿಂದೂಸ್ಥಾನದಲ್ಲಿ ಗ್ರಾಮಗಳ ಉದ್ಧರಣೆಯಲ್ಲಿ ಪ್ರಾರಂಭವಾಗಬೇಕೆಂಬುದು ಅಧಿಕಾರಿಗಳಿಂದಲೂ ಪ್ರಜಾಮುಖಂಡರುಗಳಿಂದಲೂ ಸಮ್ಮತಿಸಲ್ಪಟ್ಟ ಸಿದ್ಧಾಂತವಾಗಿರುವುದು. ಹಿಂದೂಸ್ಥಾನದ ಸ್ಟೇಟ್ ಸೆಕ್ರೆಟರಿಗಳಾಗಿದ್ದ ಮೋರ್ಲೆ ಪ್ರಭುಗಳೂ ಡಿಸೆಂಟ್ರಲೈಜೇಶನ್ ಕಮ್ಮಿಶನ್ ಅಂದರೆ ಸರಕಾರದ ಅಧಿಕಾರ ವಿಭಜನೆಯ ಕಮ್ಮಿಟಿಯವರೂ ಸಹ ಈ ಸಿದ್ಧಾಂತವನ್ನು ಈ ದೇಶದ ಸರಕಾರದವರಿಗೆ ತೋರಿಸಿಕೊಟ್ಟಿರುತ್ತಾರೆ. ಮೈಸೂರು, ಬರೋಡಾ ಸಂಸ್ಥಾನಗಳ ಸರಕಾರದವರು ಈ ಸಿದ್ಧಾಂತದ ವಿಶೇಷತ್ವವನ್ನು ತಿಳಕೊಂಡು ತಮ್ಮ ರಾಜ್ಯಗಳಲ್ಲಿ ಗ್ರಾಮೋನ್ನತಿಗೆ ಬೇಕಾದ ಸಾಧನಗಳನ್ನು ಬಹಳ ಉತ್ಸಾಹದಿಂದ ಕೈಕೊಂಡಿರುವರು. ನಮ್ಮ ಸಂಸ್ಥಾನದಲ್ಲಿ ಇಂಥಾ ಏರ್ಪಾಡನ್ನು ಏಕೆ ಜ್ಯಾರಿಗೆ ತರಕೂಡದೆಂತ ಪದೇ ಪದೇ ಪ್ರಜಾಪ್ರತಿನಿಧಿಗಳು ಸರಕಾರದವರನ್ನು ಕೇಳುತ್ತಿದ್ದರು. ಕೆಲವು ವರುಷಗಳಿಂದ ಪ್ರಜಾಜನರು ನಿರೀಕ್ಷಿಸುತ್ತಿರುವ ಪಂಚಾಯತರ ಸ್ಥಾಪನೆಯ ವಿವರವನ್ನು ಸರಕಾರದವರು ಹೊರಪಡಿಸಿರುವರು. ಮೋರ್ಲೆ ಪ್ರಭುಗಳಿಂದಲೂ ಅಧಿಕಾರ ವಿಭಜನೆಯ ಕಮ್ಮಿಶನಿನವರಿಂದಲೂ ಸೂಚಿಸೋಣಾದ ಪಂಚಾಯತರ ಸ್ಥಾಪನೆಗೂ ನಮ್ಮ ಸರಕಾರದವರು ಪ್ರಕೃತ ಪ್ರಕಟಿಸಿರುವ ಈ ಏರ್ಪಾಡಿನ ಕ್ರಮಕ್ಕೂ ಇರುವ ಭೇದವನ್ನರಿತುಕೊಂಡು ಈ ಸಂದರ್ಭದಲ್ಲಿ ಇಂಥಾ ಭೇದವನ್ನು ಪ್ರಜೆಗಳ ಮತ್ತು ಸರಕಾರದವರ ಲಕ್ಷ್ಯಕ್ಕೆ ತರುವದು ಅಗತ್ಯವಾಗಿರುವದು.

ಸರಕಾರದವರ ಹುಕುಮಿನ ಪ್ರಾರಂಭದಲ್ಲಿ ಅಧಿಕಾರ ವಿಭಜನೆಯ ಕಮ್ಮಿಶನಿನವರು ಸೂಚನೆಗಳೇನೆಂತ ಸಂಕ್ಷೇಪವಾಗಿ ಹೇಳಿರುವರು. ಚಿಕ್ಕ ಚಿಕ್ಕ ಕ್ರಿಮಿನಲ್ ಮತ್ತು ಸಿವಿಲ್ ಮೊಕದ್ದಮೆಗಳನ್ನು ತೀರ್ಮಾನಿಸುವ ಅಧಿಕಾರವು ಪಂಚಾಯತರಿಗೆ ಕೊಡೋಣಾಗಬೇಕು. ಮಾರ್ಗಗಳು, ಬಾವಿಗಳು, ಸಂತೆಗಳು, ಪಾಠಶಾಲೆಗಳು, ಆರೋಗ್ಯರಕ್ಷಣೆಯ ಏರ್ಪಾಡುಗಳು ಇವುಗಳನ್ನು ತಯ್ಯಾರಿಸುವುದು, ಇವುಗಳ ಮೇಲ್ವಿಚಾರ ಮೊದಲಾದದ್ದು ಪಂಚಾಯತರು ವಹಿಸಿಕೊಳ್ಳಬೇಕು, ಎಂತ ಅಧಿಕಾರ ವಿಭಜನೆಯ ಕಮಿಶನಿನವರು ಸೂಚಿಸಿದ್ದರು. ನವೀನ ತೆರಿಗೆಗಳನ್ನು ಗ್ರಾಮಗಳಲ್ಲಿ ಇವರ ಮೂಲಕ ವಿಧಿಸಕೂಡದು. ಪಂಚಾಯತರಿಗೆ ಬೇಕಾಗಿರುವ ಹಣವನ್ನು ಆಯಾ ಗ್ರಾಮಗಳ ಲೆಂಡ್ ಸೆಸ್, ಸಂತೆಗಳ ಫೀಸು, ಸಿವಿಲ್ ಮೊಕದ್ದಮೆಗಳಲ್ಲಿ ವಸೂಲಾಗುವ ಫೀಸು ಮತ್ತು ಲೋಕಲ್ ಬೋರ್ಡುಗಳಿಂದ ಕೊಡೋಣಾಗುವ ಗ್ರೇಂಟು—ಈ ಮೂಲಕ ಸಂಗ್ರಹಿಸಬೇಕೆಂದು ಅಧಿಕಾರ ವಿಭಜನೆಯ ಕಮಿಶನಿನವರು ಹೇಳಿರುವರು. ಈ ಪಂಚಾಯತಗಳನ್ನು ಪ್ರಕೃತ ಇರುವ ತಾಲೂಕು ಯಾ ಡಿಸ್ಟ್ರಿಕ್ಟ್ ಬೋರ್ಡುಗಳ ಕೈಕೆಳಗೆ ಒಳಪಡಿಸಬಾರದೆಂಬುದು ಕಮಿಶನಿನವರು ಮಾಡಿದ ಮತ್ತೊಂದು ಮುಖ್ಯ ಸೂಚನೆಯಾಗಿದೆ. ಇದರ ಬದಲಿಗೆ ಪ್ರಕೃತ ಇರುವ ಲೋಕಲ್ ಫಂಡು ಯುನಿಯನ್ ಪಂಚಾಯತಗಳನ್ನು ತೆಗದುಹಾಕಿ ಗ್ರಾಮಪಂಚಾಯತಗಳನ್ನು ಅವುಗಳ ಎಡೆಯಲ್ಲಿ ಸ್ಥಾಪಿಸಬೇಕೆಂದು ಸೂಚಿಸಿರುವರು. ಹಿಂದೂಸ್ಥಾನದಲ್ಲಿ ಜನಹಿತೈಷಿಭಾವದ ಜೀವಿತವು ಜನರಲ್ಲಿ ದೃಢಮೂಲವಾಗಿ ಬೆಳೆಯಬೇಕಾದರೆ ಇಂಥಾ ಜೀವಿತಕ್ಕೆ ಬೇಕಾದ ಆಸ್ಪದವು ಗ್ರಾಮಗಳಲ್ಲಿ ದೊರಕಬೇಕು. ದೇಶದ ಆಡಳಿತೆಯಲ್ಲಿ ಪ್ರವೇಶವು ದೇಶೀಯರಿಗೆ ದೊರಕುವ ಮೂಲಕ ಜನಹಿತೈಷಿಭಾವದ ಜೀವಿತಕ್ಕೆ ಆಸ್ಪದವು ದೊರಿಯುವು. ಆದರಿಂದ ಇಂಥಾ ಆಡಳಿತೆಯಲ್ಲಿ ಪ್ರವೇಶವು ಜನರಿಗೆ ಗ್ರಾಮಗಳಲ್ಲಿಯೇ ಸಾಧ್ಯವಾಗುವಂತೆ ಮಾಡಬೇಕಾಗಿ ನ್ಯಾಯವಿಧಾಯಕ ಸಭೆಗಳ ಬದಲಾವಣೆಗಳಲ್ಲಿ ಮೋರ್ಲೆ ಪ್ರಭುಗಳು ಸೂಚಿಸಿದ್ದರು. ಮೋರ್ಲೆ ಪ್ರಭುಗಳ ಸೂಚನೆಯೂ ಅಧಿಕಾರ ವಿಭಜನೆಯವರ ಕಮ್ಮಿಶನಿನವರ ಅಭಿಪ್ರಾಯವೂ ಈ ಸ್ಥಿತಿ ಒಂದೇ ವಿಧವಾಗಿದ್ದವು. ಅಧಿಕಾರ ವಿಭಜನೆ ಕಮ್ಮಿಶನಿನವರ ರಿಪೋರ್ಟಿನ ಪರಿಶೀಲನೆಯಲ್ಲಿ ಇಂಡಿಯಾ ಸರಕಾರದವರು ಈ ವಿಷಯದಲ್ಲಿ ಹೆಚ್ಚಿನ ಸ್ವತಂತ್ರವನ್ನು ಸಂಸ್ಥಾನಿಕ ಸರಕಾರಗಳಿಗೆ ಇಟ್ಟು ದೇಶದ ಬೇರೆ ಬೇರೆ ಪ್ರಾಂತ್ಯಗಳ ವಿದ್ಯಮಾನಗಳಿಗೆ ಅನುಸಾರವಾಗಿ ಪಂಚಾಯತಗಳ ಸ್ಥಾಪನೆಯನ್ನು ಮಾಡಬಹುದೆಂದು ಸೂಚಿಸಿರುತ್ತಾರೆ.

ಈ ಸೂಚನೆಗಳನ್ನೆಲ್ಲಾ ಪರ್ಯಾಲೋಚಿಸಿಕೊಂಡು ಮದ್ರಾಸು ಲೋಕಲ್ ಬೋರ್ಡುಗಳ ಆಕ್ಟಿನ ೫ನೇ ಸಂಧಿಯ ನಿಯಮಗಳ ಪ್ರಕಾರ ಗ್ರಾಮಪಂಚಾಯತಗಳನ್ನು ಸ್ಥಾಪಿಸಿ ಅವುಗಳಿಗೆ ಮೇಲಣ ನಿಯಮಗಳಲ್ಲಿ ಕಾಣಬರುವ ಅಧಿಕಾರಗಳನ್ನು ಕೊಟ್ಟರೆ ಸಾಕೆಂದಾಗಿ ಮದ್ರಾಸು ಸರಕಾರದವರು ಅಭಿಪ್ರಾಯಪಟ್ಟಿರುವರು. ಮಾರ್ಗದ ಕಿನಾರೆಗಳಲ್ಲಿ ದೀಪಸ್ತಂಭಗಳನ್ನು ನೆಟ್ಟು ರಾತ್ರಿಕಾಲದಲ್ಲಿ ಬೇಕಾದ ಬೆಳಕಿನ ಸರಬರಾಯಿ, ಮಾರ್ಗಗಳನ್ನು ಮತ್ತು ಮಾರ್ಗಗಳ ಬದಿಯಲ್ಲಿರುವ ಚರಂಡಿಗಳು, ಬಾವಿಗಳು, ಕೆರೆಗಳು ಇತ್ಯಾದಿಗಳನ್ನು ಶುದ್ಧವಾಗಿ ಇಡುವುದು, ಶಾಲೆಗಳನ್ನೂ ಆಸ್ಪತ್ರೆಗಳನ್ನೂ ಸ್ಥಾಪಿಸಿ, ಅವುಗಳನ್ನು ನಡಿಸುವುದು, ಮಾರ್ಗಗಳನ್ನು ಹಾಕಿಸುವುದು ಮತ್ತು ಅವುಗಳ ದುರುಸ್ತಿ, ನೀರು ಸರಬರಾಯಿಗೆ ಸಂಬಂಧಪಟ್ಟ ಕೆರೆ ಬಾವಿಗಳನ್ನು ತೋಡಿಸುವುದು ಮತ್ತು ಇವುಗಳ ದುರುಸ್ತಿ, ಜನರ ಆರೋಗ್ಯಪಾಲನೆಗೆ ಬೇಕಾದ ಇನ್ನು ಯಾವದಾದರೂ ಕೆಲಸವನ್ನು ಕೈಕೊಳ್ಳುವುದು—ಈ ಅಧಿಕಾರಗಳು ಲೋಕಲ್ ಬೋರ್ಡು ಆಕ್ಟು ಪ್ರಕಾರ ಪಂಚಾಯತರಿಗೆ ದೊರಕುತ್ತವೆ. ಗ್ರಾಮಗಳ ಕ್ಷೇಮವೃದ್ಧಿಗೆ ಬೇಕಾಗಿರುವ ಅಧಿಕಾರಗಳು ಈ ಆಕ್ಟು ಪ್ರಕಾರ ಗ್ರಾಮಸ್ಥರಿಗೆ ದೊರಕುವುದರಿಂದ ಇದಕ್ಕೆ ಮೀರಿದ ಅಧಿಕಾರಗಳು ಪಂಚಾಯತರಿಗೆ ಅಗತ್ಯವಿಲ್ಲವು ಎಂದು ನಮ್ಮ ಸರಕಾರದವರು ಅಭಿಪ್ರಾಯಪಟ್ಟಿರುವರು. ಲೋಕಲ್ ಬೋರ್ಡ ಆಕ್ಟು ಪ್ರಕಾರ ಈ ಮೊದಲೇ ಏರ್ಪಡಿಸಲ್ಪಟ್ಟು ಕಳೆದ ೩೦ ವರುಷಗಳಿಂದ ಆಡಳಿತೆಯನ್ನು ನಡಿಸುತ್ತಿರುವ ಯುನಿಯನ್‌ಗಳನ್ನು ಅಧಿಕಾರ ವಿಭಜನೆಯ ಕಮ್ಮಿಶನಿನವರ ಅಭಿಪ್ರಾಯದ ಮೇರೆಗೆ ತೆಗದುಹಾಕುವದು ಉಚಿತವಲ್ಲವೆಂತ ಸರಕಾರದವರು ಹೇಳುವರು.

ಲೋಕಲ್ ಬೋರ್ಡು ಯುನಿಯನುಗಳಲ್ಲಿ ಸಾಮಾನ್ಯವಾಗಿ ಮೆಂಬರುಗಳು ಸರಕಾರದವರಿಂದ ನೇಮಿಸಲ್ಪಡುವರಲ್ಲದೆ ಜನರಿಂದ ಈ ಮೆಂಬರರು ಚುನಾಯಿಸಲ್ಪಡುವುದಿಲ್ಲ. ಪ್ರತಿಯೊಂದು ವಿಷಯದಲ್ಲಿಯೂ ಯುನಿಯನ್ ಸಭೆಗೆ ಸ್ವತಂತ್ರವಿರದು. ಸಭೆಯ ಸಾಮಾನ್ಯ ವಿಷಯಗಳಲ್ಲಿ ಸಹ ಮೇಲಾಧಿಕಾರರ ಆಜ್ಞಾಪನೆ. ಲೋಕಲ್ ಬೋರ್ಡುಗಳಿಗೆ ಯುನಿಯನುಗಳ ಮೇಲೆ ಪೂರ್ಣ ಅಧಿಕಾರವಿರುವುದು. ಆಡಳಿತೆಯ ವಿಷಯಗಳಲ್ಲಿ ಇಂಥಾ ಲೋಕಲ್ ಬೋರ್ಡುಗಳಿಗೆ ಇನ್ನೂ ತಕ್ಕದಾದ ಸ್ವತಂತ್ರವು ಇಲ್ಲದ್ದರಿಂದ ಇಂಥಾ ಬೋರ್ಡುಗಳಿಗೆ ಒಳಪಟ್ಟ ಪಂಚಾಯತಗಳು ಜನರಿಗೆ ಪ್ರಿಯಕರವಾಗವು. ಯುನಿಯನ್ ಪಂಚಾಯತಗಳಲ್ಲಿರುವ ಕುಂದಕಗಳನ್ನು ನೋಡಿಕೊಂಡು ಸರಕಾರದವರು ಗ್ರಾಮಪಂಚಾಯತಗಳಲ್ಲಿ ಇವುಗಳಿಗೆ ಆಸ್ಪದ ದೊರಕದಂತೆ ಕೆಲವು ಬದಲಾವಣೆಗಳನ್ನು ಸೂಚಿಸಿರುವರು. ಅವುಗಳೇನೆಂಬುದನ್ನೂ ಪಂಚಾಯತಗಳ ಸ್ಥಾಪನೆಯ ಇತರ ವಿವರವನ್ನೂ ಮುಂದಿನ ಸಂಚಿಕೆಯಲ್ಲಿ ಪ್ರಸ್ತಾಪಿಸುವೆವು.

ಬ್ಯುರೋಕ್ರಸಿಗೆ ವ್ಯಾಸರಾಯ ದೊರೆಗಳ ಉಪದೇಶವು.

ಕೆಲದಿವಸಗಳ ಹಿಂದೆ ಸಿಮಲದಲ್ಲಿ ಯುನ್ಯಾಟೆಡ್ ಕ್ಲಬ್ಬಿನ ಮುಖಾಂತರ ನಮ್ಮ ವ್ಯಾಸರಾಯರಾದ ಲೊರ್ಡ ಹಾರ್ಡಿಂಜ ದೊರೆಗಳು ತಮ್ಮ ಪ್ರಸ್ಥಾನ ಸಮಾರಂಭದಲ್ಲಿ ಕೊಟ್ಟ ಭಾಷಣವು ಎಂದಿನಂತೆ ಅವರ ಉದಾರವಾದ ಮತ್ತು ಘನವಾದ ರಾಜ್ಯ ಧೋರಣವನ್ನೇ ವ್ಯಕ್ತಪಡಿಸುವಂಥಾದ್ದಾಗಿತ್ತು. ಅವರು ಸಿವಿಲ್ ಮತ್ತು ಮಿಲಿಟೆರಿ ಅಧಿಕಾರಿಗಳಿಗೆ ಹಿಂದೂಸ್ಥಾನದ ಭಾವಿ ಸ್ಥಿತಿಯನ್ನು ಕುರಿತು ಅತ್ಯಂತ ಪ್ರೇಮಪೂರ್ವಕ

ಕವಾಗಿ ಮಾಡಿದ ಉಪದೇಶದ ಸಾರಾಂಶವನ್ನು ಇಲ್ಲಿ ಕೊಟ್ಟಿರುತ್ತೇವೆ. ಸ್ವಾತಂತ್ರ್ಯದ ಮತ್ತು ಸ್ವಾಭಿಮಾನದ ಕಲ್ಪನೆಯನ್ನೂ ಪಾಶ್ಚಾತ್ಯ ಸಂಸ್ಕೃತಿಯನ್ನೂ ಹಿಂದೂಸ್ಥಾನದ ಮನೋಭೂಮಿಯಲ್ಲಿ ಬಿತ್ತಿದ್ದು ಇಂಗ್ಲಾಂಡ ದೇಶವೇ. ಆದುದರಿಂದ ಇನ್ನು ಮುಂದೆ ನಮ್ಮ ಅಧಿಕಾರಿಗಳು ಹಿಂದೂಸ್ಥಾನದ ಸಾಂಪತ್ತಿಕ ಉನ್ನತಿಯು ಎಷ್ಟಾಯಿತು, ಇಲ್ಲವೆ ಆಗುತ್ತಿದೆ ಎಂಬದನ್ನು ಮಾತ್ರ ನೋಡಿದರೆ ಸಾಲದು ಇಂಗ್ಲಿಷ್ ಅಧಿಕಾರಿಗಳು ಹಿಂದೂಸ್ಥಾನದಲ್ಲಿ ತಾವಾಗಿ ಬಿತ್ತಿರುವ ರಾಜಕೀಯ ಆಕಾಂಕ್ಷೆಗಳಿಗೆ ಗೊಬ್ಬರ ನೀರು ಹಾಕಿ ಅವನ್ನು ಬೆಳಸಬೇಕು. ಮೊದಲಿನ ಇಂಗ್ಲಿಷ್ ಅಧಿಕಾರಿಗಳ ಕಾರ್ಯವಾಗಲಿ, ಹೇತುವಾಗಲಿ ಇವೆರಡು ಉಚ್ಚವಾಗಿಯೂ ಉದಾರವಾಗಿಯೂ ಇದ್ದವೆಂಬುದರಲ್ಲಿ ಸಂದೇಹವೇ ಇಲ್ಲ. ಆದರೆ ವರ್ತಮಾನ ಮತ್ತು ಭವಿಷ್ಯತ್ಕಾಲದಲ್ಲಿ ಗಟ್ಟಿಬಿಡುತ್ತಿದ್ದ ಹಿಂದೀ ಬಾಲರಾಷ್ಟ್ರದ ಚೆಜ್ಜೆಗಳು ರಾಜಕೀಯ ಪ್ರಗತಿಯು ಸ್ವಚ್ಛವಾಗಿ ಸುರಕ್ಷಿತವಾಗಿರುವ ಮಾರ್ಗದಲ್ಲಿಯೇ ಬೀಳುವಂತೆ ಉದ್ಯೋಗ ಮಾಡುವುದು ಅದಕ್ಕಿಂತಲೂ ಉದಾತ್ತವಾದ ಧ್ಯೇಯವಾಗಿರುವುದು. ಈ ಕಾರ್ಯದಲ್ಲಿ ಅಧಿಕಾರಿಗಳಾದ ನೀವು ಮಾಡಿದ ಪರಿಶ್ರಮವೆಲ್ಲಾ ಕೊಂಚವಾಗಿಯೇ ಪರಿಣಮಿಸುತ್ತದೆ. ಹಿಂದೀ ಜನತೆಯ ವಿಷಯದಲ್ಲಿ ನಿಮ್ಮಲ್ಲಿ ಬರೇ ಸಹಾನುಭೂತಿ ಇದ್ದರೆ ಸಾಲದು, ಆದರೆ ಅವರಂತೆಯೇ ನಿಮ್ಮ ಕಲ್ಪನಾಶಕ್ತಿಯು ವಿಸ್ತೃತವಾಗಿರಬೇಕು. ಇದಲ್ಲದೆ ನೀವು ಸ್ವಾರ್ಥತ್ಯಾಗ ಮಾಡುವುದಕ್ಕೂ ಸಿದ್ಧರಾಗಿರಬೇಕು. ಕಾರಣವೇನೆಂದರೆ ನೀವು ಇದುವರೆಗೆ ಅನುಭವಿಸಿದ ಅಧಿಕಾರಗಳು (ಮೆಲ್ಲಮೆಲ್ಲನೆ ಏಕಾಗಲೊಲ್ಲದು) ಹಿಂದೀ ಜನರ ಕೈವಶವಾಗುವವು. ಈ ಸಂಗತಿಯು ಈಗ ಅಪರಿಹಾರ್ಯವಾಗಿದೆ. ಹಿಂದೂಸ್ಥಾನದ ರಾಜಕೀಯ ಧ್ಯೇಯದ ಆಳತೆಯು ಪೂರಾ ತುಂಬಿ ಈ ಹೊತ್ತೇ ಅವರ ಕೈಗಿನಲ್ಲಿ ಬೀಳುವುದು ಸಾಧ್ಯವಿಲ್ಲವು, ಇದಕ್ಕೆ ಎಷ್ಟೋ ಸಮಯ ಇದೆ ಎಂದು ಹೇಳಿದರೂ ಜನತೆಯ ಕಡೆಗೆ ಸ್ವಾತಂತ್ರ್ಯ ಮತ್ತು ಸ್ವಾಭಿಮಾನ ಹಾಗೂ ಸರಕಾರದ ಕಡೆಗೆ ಪ್ರೇಮ ಮತ್ತು ಕೃತಜ್ಞತೆ ಇವು ದಿನೇ ದಿನೇ ವೃದ್ಧಿಯಾಗಿ, ಹಿಂದೂಸ್ಥಾನವು ಈ ಹೊತ್ತಿನ 'ವಿಶ್ವಾಸಿಯಾದರೂ ಸೇವಕ' ಎಂಬ ಹೆಸರು ಹೋಗಿ ಅದಕ್ಕೆ 'ಸಾಮ್ರಾಜ್ಯದ ನಿಜವಾದ ಸ್ನೇಹಿತ' ಎಂಬ ಉನ್ನತ ಪದವಿಯನ್ನು ಹೊಂದುವ ಸಮಯ ಬರುವುದೆಂದು ನನಗೆ ಪೂರ್ಣ ಭರವಸೆ ಇದೆ. ಆದ್ದರಿಂದ ದೂರದಲ್ಲಿಯಾದರೂ ಸ್ಪಷ್ಟವಾಗಿ ಕಾಣುತ್ತಿರುವ ಈ ನೋಟದ ಕಡೆಗೆ ದೃಷ್ಟಿಯನ್ನಿಟ್ಟು ಅಧಿಕಾರಿಗಳು ಮುಂದಿನ ತಮ್ಮ ಧೋರಣಗಳನ್ನಿಟ್ಟುಕೊಳ್ಳಬೇಕಾಗಿದೆ. ಇನ್ನು ಮುಂದೆ ಈ ಜಗತ್ತು ಇಂಗ್ಲಿಷ ಸರಕಾರದ ಮರ್ಯಾದೆಯ ಕಡೆಗೂ, ಕಾರ್ಯಕ್ಷಮತೆಯ ಕಡೆಗೂ ಬೇರೆ ದೃಷ್ಟಿಯಿಂದಲೇ ನೋಡೀತ. ಮತ್ತು ಆ ದೃಷ್ಟಿ ಯಾವುದೆಂದರೆ ಇಂಗ್ಲಿಷ ಅಧಿಕಾರಿಗಳು ತಮ್ಮ ಕೈಯಲ್ಲಿ ಎಷ್ಟು ಅಧಿಕಾರವನ್ನಿಟ್ಟುಕೊಂಡಿದ್ದಾರೆಂಬುವುದಲ್ಲ, ಆದರೆ ಅವರು ತಮ್ಮ ಕೈಯೊಳಗಿನ ಎಷ್ಟು ಅಧಿಕಾರಗಳನ್ನು ಜನತೆಯ ಸ್ವಾಧೀನಮಾಡಿದರೆಂಬುವುದೇ.

ಜ್ಞಾನದ ಮಿಠಾಯಿ

(೨ನೇ ಪೊಟ್ಟಣ)

ಸ್ವಜನ ಮತ್ತು ಶ್ವಜನ.

ವಾಚಕರೇ, ಕಳೆದ ಹದಿನೈದು ದಿವಸಗಳ ಹಿಂದೆ ತಮಗೆ ಗೊತ್ತಾಗದ ಹಾಗೆ "ಜ್ಞಾನದ ಮಿಠಾಯಿ"ಯ ಒಂದು ಪೊಟ್ಟಣವನ್ನು ಕೊಟ್ಟಿರುವೆವು. ಮಾರ್ಗದಲ್ಲಿಯ ಧೂಳನ್ನು ಯಥೇಷ್ಟವಾಗಿ ಸೇವಿಸುತ್ತಿರುವ ಅಂಗಡಿಯೊಳಗಿನ ಸಕ್ಕರೆಯ ಮಿಠಾಯಿಯನ್ನು ತಿಂದು ಬೇಸರಬರುವಾಗ ಸ್ವದೇಶಾಭಿಮಾನಿಯೊಳಗಿನ ಈ "ಜ್ಞಾನದ ಮಿಠಾಯಿ"ಯನ್ನು ಸ್ವಲ್ಪ ಸ್ವಲ್ಪ ಸ್ವಾದಿಸುತ್ತ ಹೋದರೆ ಅದರಿಂದ ಮನಸ್ಸಿಗೆ ರಂಜನೆಯೂ ಜ್ಞಾನದ ಅಭಿವೃದ್ಧಿಯೂ ಆಗಿ ಮಾತಿನಲ್ಲಿ ಚಾತುರ್ಯ, ಲೇಖನದಲ್ಲಿ ನೈಪುಣ್ಯ ಇವು ಉಂಟಾಗುವವು. ಇದಲ್ಲದೆ ಈ ಮಿಠಾಯಿಗೆ ದುಡ್ಡುಕಾಸು ಕೊಡಬೇಕಾದ್ದಿಲ್ಲ. ತಮ್ಮ ಅಮೂಲ್ಯವಾದ ಸ್ವಲ್ಪ ಸಮಯವನ್ನು ಖರ್ಚುಮಾಡಿದರೆ ಸಾಕು. ಇದರ ರುಚಿಯು ತಮ್ಮಗೆ ಗೊತ್ತಾಗುವುದು. ಇರಲಿ 'ಸ್ವಜನ'ದಲ್ಲಿ ಆತ್ಮಶ್ಲಾಘೆ ಏಕೆ? ಹಾಗಾದರೆ ಪರರಲ್ಲಿ ಆತ್ಮಶ್ಲಾಘೆಯು ಶ್ಲಾಘ್ಯವೇ? ಶ್ಲಾಘ್ಯವಲ್ಲದು. ಎಂದರೂ, ಹಜೂರು ಕಚೇರಿಯಲ್ಲಿ ಕ್ಲಾರ್ಕನಾಗಲು ಇಚ್ಛಿಸುವವನು ಕಲೆಕ್ಟರ ದೊರೆಗಳಿಗೆ ಆತ್ಮಶ್ಲಾಘಾಸೂಚಕವಾದ ತನ್ನ ಸರ್ಟಿಫಿಕೇಟನ್ನೂ, ಬೇರೆ ಬೇರೆ ಉಪಾಧ್ಯಾಯರ, ದೊಡ್ಡ ದೊಡ್ಡ ಮನುಷ್ಯರ ಮಾನ್ಯತೆಯ ಪತ್ರಗಳನ್ನೂ ತೋರಿಸುವನು; ಆದರೆ ತಾನು ಕಲಿತ ಶಾಲೆಯಲ್ಲಿಯೇ ಉಪಾಧ್ಯಾಯನಾಗಬಿಚ್ಛಿಸಿದರೆ ಅವನಿಗೆ ಇನ್ನೊಂದು ಆತ್ಮಶ್ಲಾಘೆಯ [illegible] ಈ ನ್ಯಾಯದಂತೆ 'ಸ್ವಜನ'ರಲ್ಲಿ ಆತ್ಮಶ್ಲಾಘೆಯು ನಿರರ್ಥಕವಾದುದ್ದು. ಆತ್ಮಶ್ಲಾಘೆಯ ಈ ಅಧ್ಯಾಯವು ಉದ್ದವಾಯಿತು. ಆತ್ಮಶ್ಲಾಘೆಯು ನಿರರ್ಥಕವಾದರೇನು, ಸಾರ್ಥಕವಾದರೇನು, ಸ್ವಜನರು ಸ್ವಜನರೇ. ಅವರು ನಮ್ಮ ಸ್ವಂತ ಜನರಾದ ಕಾರಣ ಮತ್ತು ನಮ್ಮ ಮಾನಾಪಮಾನ, ಉಚ್ಚನೀಚತ್ವ, ಹಿತಾಹಿತ ಮುಂತಾದ್ದನ್ನು ಆದಿನಿಂದ ಪೂರಾ ತಿಳಿದವರಾದ ಕಾರಣ ನಮ್ಮ ಮಾತಿನಲ್ಲಿ ಕೋಶ ಹುಡುಕುವರೇ? ಹೀಗೆ ಕೋಶ ಹುಡುಕಲು ಅವರು ಕೋಶರಕ್ಷಕರಾದ 'ಶ್ವಜನ'ರಲ್ಲ. ಪ್ರಿಯ ವಾಚಕರೇ, ಇಲ್ಲಿ ಸ್ವಜನ ಮತ್ತು ಶ್ವಜನ ಇವುಗಳ ಭೇದವೇನೆಂಬದನ್ನು ಹೇಳಬೇಕಾಗಿ ಬಂತು. ಅಲ್ಲವೇ? ಏಕೆಂದರೆ ಎಷ್ಟೊ ಅಭಿಯುಕ್ತರೂ ಕೂಡ ಮಾತಿನಲ್ಲಿಯೂ ಬರಹದಲ್ಲಿಯೂ "ಕುಮಾರು ಶಮಯದ ಹಿಂದೆ ಶಂತೆಯಲ್ಲಿ ಶವತೆಕಾಯಿ ಬಹು ಶುಲಭವಾಗಿ ಶಿಗುತ್ತಿತ್ತು" ಎಂದು ಹೇಳುವ ಶಕಾರ ಶುಬ್ರಾಯ ಭಟ್ಟರನ್ನು ಅನುಕರಿಸುವರು. ಈ ಅನುಕರಣೆಯು ಕೆಲವು ಮಟ್ಟಿಗೆ ಮನೋರಂಜಕವಾಗಿದ್ದರೂ ಎಷ್ಟೋ ಸಂಗತಿಗಳಲ್ಲಿ ಅನರ್ಥಸ್ಪದವಾಗಿರುವದು. ದೃಷ್ಟಾಂತಕ್ಕಾಗಿ ಸ್ವಜನ, ಶ್ವಜನ ಇವೇ ಎರಡು ಶಬ್ದಗಳನ್ನು ತಕೊಳ್ಳಬಹುದು. ಸ್ವಜನವೆಂದರೆ ತನ್ನ ಜನವು, ತನ್ನ ಕುಟುಂಬದಲ್ಲಿ, ತನ್ನ ಜಾತಿಮತಗಳಲ್ಲಿ, ತನ್ನ ದೇಶದಲ್ಲಿ ಹುಟ್ಟಿದ ಜನವು; ತನ್ನ ಕಷ್ಟಸುಖಗಳಲ್ಲಿ ಸಮಭಾಗಿಯಾಗಿರುವ ಜನವು. ಈ ಸ್ವಜನವು ನಮ್ಮನ್ನು ಎಷ್ಟೋ ಸಲ ಊಟ ಮಾಡಿಸಿದೆ, ಆರೈಕೆ ಮಾಡಿದೆ, ಬುದ್ಧಿ ಹೇಳಿದೆ. ಇಂತಹ ಸ್ವಜನಕ್ಕೆ ಶ್ವಜನವೆಂತ ಹೇಳಬಹುದೇ? ಶ್ವಜನವು ಮನೆಕಾಯುತ್ತಿರುವುದು ಸ್ವಾಭಾವಿಕವಾಗಿಯೇ ಡೊಂಕಾಗಿರುವ ತನ್ನ ಬಾಲವನ್ನು ಮೆಲ್ಲನೆ ಅಲ್ಲಾಡಿಸುತ್ತ, ಚನ್ನಾಗಿ ಕಾಸಿದ ಕಬ್ಬಿಣದ ಎಲೆಯಂತೆ ಕೆಂಪಗಾದ ತನ್ನ ಉದ್ದವಾದ ನಾಲಗೆಯನ್ನು ತೆರೆದುಕೊಂಡು ಮನೆಯ ಮುಂದಿನ ಅಂಗಳದಲ್ಲಿ ಯಜಮಾನನ ಕಡೆಗೆ ಹಿಂಡದ ಆಶೆಯಿಂದ ನೋಡುತ್ತ ಬಿದ್ದಿರುವುದು. ಇದು ಈಗ ಶ್ವಜನವು. ಈ ಶ್ವಜನಕ್ಕೂ ಆ ಸ್ವಜನಕ್ಕೂ ಸರಿಹೋಲಿಸಬಹುದೇ? ಆದರೆ ಕೆಲವರಿಗೆ ಒಂದು ದೃಷ್ಟಿಯಿಂದ ಇದು ತಪ್ಪೆಂದು ಕಂಡುಬರಬಹುದು. ಬಹುತರವಾಗಿ ಎಲ್ಲ ದೊರೆಗಳೂ, ನಮ್ಮೊಳಗಿನ ಕೆಲಕೆಲವು ದೊಡ್ಡಮನುಷ್ಯರೂ ಸಾರಟು, ಜಟಕ ಮುಂತಾದ ಯಾನಾರೂಢರಾಗಿ ತಮ್ಮ ವಾಮಾಂಕದಲ್ಲಿ (ಎಡತೊಡೆಯ ಮೇಲೆ) ಈ ಪ್ರೀತಿಯ ಶ್ವಜನವನ್ನು ಕುಳ್ಳಿರಿಸಿಕೊಂಡು ಸವಾರಿ ಮಾಡುವಾಗ ಕಾಣುತ್ತಾರೆ. ಎಂದ ಮೇಲೆ ಶ್ವಜನವನ್ನು ಸ್ವಜನದಿಂದ ಏಕೆ ಬಹಿಷ್ಕರಿಸಬೇಕು? ಹೀಗೆ ಕೆಲವರಿಗೆ ಆಕ್ಷೇಪ ಬರಬಹುದು. ಮತ್ತು ಈ ಆಕ್ಷೇಪರ ಸಂತೋಷಕ್ಕಾಗಿ ಶ್ವಜನಕ್ಕೆ ಸ್ವಜನವೆಂತ ಹೇಳುವ! ಆದರೆ ಸ್ವಜನಕ್ಕೆ ಮಾತ್ರ ಶ್ವಜನವೆಂತ ಹೇಳುವುದು ಹೇಗೆ!

ಶ ಸಕಾರಗಳನ್ನು ಎಚ್ಚರದಿಂದ ಉಚ್ಚರಿಸಬೇಕು, ಬರಿಯಬೇಕು ಎಂಬುದಕ್ಕೆ ಇನ್ನೊಂದು ದೃಷ್ಟಾಂತವಿದೆ —'ಸಕಲ' ಮತ್ತು 'ಶಕಲ'. ಸಕಲವೆಂದರೆ ಎಲ್ಲವೆಂಬರ್ಥವು. ಶಕಲವೆಂದರೆ ಚೂರು, ಪುಡಿ, ತುಂಡು ಮುಂತಾದ ಅರ್ಥಗಳು. "ಅರಸರ ಆಗಮನದಿಂದ ಶಕಲ ದೇಶಸ್ಥರೂ ಸಂತೋಷಪಟ್ಟರು" ಎಂದು ಹೇಳಿದರೆ ಅಥವಾ ಬರೆದರೆ ಅದರಿಂದ ವಿವಕ್ಷಿತಾರ್ಥವೇ ಕೆಟ್ಟುಹೋಗುವದಲ್ಲವೇ?

ಹೀಗೆ ಅನೇಕ ದೃಷ್ಟಾಂತಗಳಿವೆ. ಆದರೆ ಕನ್ನಡಿಗರ ಇದೊಂದು ದುರ್ದೈವವೇ ಎಂದು ನೆನಿಸಬೇಕು. ಅದೇನೆಂದರೆ ಶಕಾರಾದಿ-ಮಧ್ಯಾಂತ್ಯ ಶಬ್ದಗಳು ಕನ್ನಡದಲ್ಲಿ ತೀರ ಕಡಿಮೆ ಎಂದರೂ ಕೆಲವರು ಅಭ್ಯಾಸದಿಂದ, ಕೆಲವರು ಅಷ್ಟೊಂದು ಆಲೋಚನೆ ಮಾಡದೆ ಇನ್ನೂ ಕೆಲವರು ಗ್ರಾಮ್ಯ ಪದ್ಧತಿಯಿಂದ ಸಕ್ಕೆ ಶ ಅನ್ನುವರು. ಇದು ಮಾತ್ರ ಸ್ವಲ್ಪ ವಿಚಾರಣೀಯವಾದದ್ದು.

ಪತ್ರವ್ಯವಹಾರ.

ಮ। ರಾ। ಪಿ. ರಾಮಚಂದ್ರಯ್ಯನವರ ಧರ್ಮಕಾರ್ಯ:—

ಶ್ರೀಯುತ ಪತ್ರಿಕಾಕರ್ತರೆ,

ತಮ್ಮ ಭ್ರಾತೃವರ್ಗಕೊಪ್ಪಿದವನಾದ ನಾನು ಪತ್ರಿಕಾ ಪ್ರಸಂಗವನ್ನು ಬಿಟ್ಟು ಬಹುಕಾಲವಾದುದು. ಆದರೆ ಇನ್ನೂ ಅವಧಿಬಾಧಕ ತಪ್ಪಿದಂತಿಲ್ಲ. "ಚಿಕ್ಕ ಚಿಕ್ಕ ಮಕ್ಕಳು ಹುಟ್ಟಿ ಆಚಾರಭ್ರಷ್ಟವಾಯಿತು" ಎಂಬಂತೆ ಇತ್ತೀಚೆಗಾಗಿ ಎಲ್ಲಿ ನೋಡಿದರೂ ನವನಾಗರಿಕತೆ, ಭಿನ್ನಾಭಿಪ್ರಾಯ, ನಿರಂಕುಶ ಪ್ರವರ್ತನ, ಸ್ವೇಚ್ಛಾವಿಹಾರ ಇವುಗಳೇ ಅತಿ ವ್ಯಾಪ್ತಿಯಾಗುತ್ತಿವೆ. ಬೂಟುವಿಚಾರ, ಹ್ಯಾಟ್‌ಕಾಲರ್, ಸೋಡಾಲೆಮ್ನೇಡ್, ಕ್ರಾಪ್ ಸಿಗರೆಟ್, ಮುಂತಾದ ಬಾಹ್ಯಬೆಡಗಿಗೇ ಬಹುಮಾನವಲ್ಲದೆ, ಪೂರ್ವಪದ್ಧತಿಯ ಪುಣ್ಯಪುರುಷರಿಗೆ ಪ್ರಕೃತದಲ್ಲಿ ಪ್ರಾಶಸ್ತ್ಯವಿಲ್ಲ. ಪ್ರಯುಕ್ತ "ತನಗೆ ಮನ್ನಣೆ ದೊರೆಯದಲಿಗೆ ವೇಷವನು ಕಡುಮೂರ್ಖನೆನಿಸುವನು" ಎಂಬ ಮೂಲಾಧಾರದ

ಮೇಲೆ ನಿರರ್ಥಕವಾದ ಪತ್ರಿಕಾ ಪ್ರಸಂಗದಲ್ಲಿ ವಿರಕ್ತನಾಗಿರುವೆನು. ಆದರೂ ಆಚಾರವೂ ಆನಂದವೂ ಏಕಕಾಲದಲ್ಲಿ ಆಗುತ್ತಿರುವ ಕೃಷಿಕಾರ್ಯನಿರತನಾದ ನನ್ನನ್ನು ಸಾಮಾನ್ಯವಾಗಿ ಎಲ್ಲರೂ ಬಲ್ಲರು. ಪರಂತು ನನ್ನಂತೆಯೆ ಹಣ್ಣುಗಡ್ಡದವರಾದ ಮ| ರಾ| ಪಿ. ರಾಮಚಂದ್ರಯ್ಯನವರ ಸದ್ಧರ್ಮಕಾರ್ಯ ಪ್ರವರ್ತನದ ಪ್ರಸ್ತಾಪವನ್ನು ತಮ್ಮ ಪತ್ರವ್ಯವಹಾರದಲ್ಲಿ ಪರಿಶೀಲಿಸಿ, ಆ ವಿಷಯವಾಗಿ ನನ್ನ ಜೀರ್ಣಬುದ್ಧಿಗೆ ತೋರಿದ ಸದಭಿಪ್ರಾಯವನ್ನು ವಾಚಕರ ಗೋಚರಕ್ಕೆ ತರಬೇಕೆಂಬ ಕುತೂಹಲದಿಂದ ಥಟ್ಟನೆ ಈ ಲೇಖನಕ್ಕೆ ಕೈಯಿಕ್ಕಿರುವೆನು.

ಮ| ರಾ| ರಾಮಚಂದ್ರಯ್ಯನವರು ತಮ್ಮ ಸರ್ವಸ್ವವನ್ನು ಲೋಕೋಪಕಾರಾರ್ಥವಾಗಿ ಧರ್ಮಸಾಧನಮಾಡಿ ಕೊಟ್ಟು, ಉದ್ದಿಷ್ಟಕಾರ್ಯಸಾಧನೆಯ ಧರ್ಮಾಧಿಕಾರವನ್ನು ಸದ್ಗೃಹಸ್ಥರಿಗಿತ್ತು, ತನ್ಮೂಲಕ ಪುಣ್ಯಕೀರ್ತಿಗಳನ್ನು ಗಳಿಸುತ್ತಿರುವುದು ಕೇವಲ ಸ್ತುತ್ಯಾರ್ಹವೇ ಸರಿ. ಆದರೆ 'ಒಬ್ಬ ಹಿಂದು' ಎಂಬ ಅಜ್ಞಾತ ನಾಮಧಾರಿಗಳಾದ ತಮ್ಮ ಲೇಖಕರು ಸೂಚಿಸುವಂತೆ ಇಂತಹ ಸತ್ಕಾರ್ಯನಿರ್ವಾಹ ಶಕ್ತಿಯು ಹಿಂದು ಸಮಾಜದಲ್ಲಿ ಶೂನ್ಯವೆಂಬ ನಿಜತ್ವವನ್ನೂ, ತನ್ಮೂಲಕ, ಹಿಂದು ಜನಾಂಗಕ್ಕೆ ಒಂದೊದಗಿರುವ ಇಂದಿನ ಕುಂದುಕೊರತೆಗಳನ್ನೂ ಕುರಿತು ಎಷ್ಟು ಪಶ್ಚಾತ್ತಾಪಪಟ್ಟರೂ ತೀರದು. ಪರಂತು ಈ ಅರಣ್ಯರೋದನವು ಇಂದಿನ ಲೇಖನಕ್ಕೆ ಸಂಬಂಧಿಸಿದುದಲ್ಲ ಆ ಮಾತಂತಿರಲಿ!

ಪ್ರಕೃತ ನಮ್ಮ ಸನ್ಮಿತ್ರರು ಮಾಡಿದ ಪುಣ್ಯಸಾಧನೆಯಲ್ಲಿ 'ಅನಾಥಾಲಯ, ವಿಧವಾಲಯ, ರಾತ್ರಿಶಾಲಾ, ಗೋರಕ್ಷಣಸಭಾ' ಎಂಬ ಚತುರ್ವಿಧ ಸಾಧನೆಗಳನ್ನು ಶಾಶ್ವತಗೊಳಿಸಬೇಕೆಂಬುದೇ ಮುಖ್ಯೋದ್ದೇಶವಾಗಿ ತೋರಿಬರುವುದು. ಕೇವಲ ಶ್ಲಾಘನೀಯಗಳಾದ ಇವುಗಳಲ್ಲಿ ಒಂದೊಂದೇ ಶ್ರಮಸಾಧ್ಯವಾಗಿರುವುದರಿಂದ "ಏಕೈಕಮಪ್ಯನರ್ಥಾಯ ಕಿಮುತತ್ರ ಚತುಷ್ಟಯಂ" ಎಂಬಂತೆ ಎಲ್ಲವನ್ನೂ ಏಕತ್ರವಾಗಿ, ಏಕಕಾಲದಲ್ಲಿ ಏಳು ಮಂದಿಯ ಏಕಮನಸ್ಸಿನಿಂದ ಆಚರಿಸುವುದು ಅಸಾಧ್ಯವೆಂದೇ ಹೇಳಬೇಕು. ಧಾತೃಗಳ ಯೋಗ್ಯತೆಯ ಮೇಲೆ ಮೂಲಧನವು ಮಹತ್ತರವಾಗಿ ಕಂಡರೂ ಮಹತ್ಕಾರ್ಯ ಚತುಷ್ಟಯ ನಿರ್ವಾಹಕ್ಕೆ ಮಾತ್ರ ಯತ್ಕಿಂಚಿತ್ತಾಗಿಯೇ ಪರಿಣಮಿಸಬಹುದು. ಪ್ರಯುಕ್ತ ಹಾಸಿಗೆಯನ್ನರಿತು ಕಾಲುನೀಡುವಂತೆ ಇವುಗಳಲ್ಲಿ ಮುಖ್ಯವಾದ ಯಾವುದಾದರೊಂದು ಉದ್ದೇಶಕ್ಕೆ ಮಾತ್ರ ಈ ಮೂಲಧನವನ್ನು ಉಪಯೋಗಿಸುವುದು ಅತ್ಯುತ್ತಮವೆಂದು ತೋರುತ್ತಿದೆ

ಈ ನಾಲ್ಕು ಉದ್ದೇಶಗಳಲ್ಲಿ ಮೂರನ್ನು ಮನುಷ್ಯವರ್ಗಕ್ಕೊಪ್ಪಿದುದಾಗಿಯೂ, ಒಂದನ್ನು ಪಶುವರ್ಗಕ್ಕೊಪ್ಪಿದುದಾಗಿಯೂ ವಿಭಾಗಿಸಬಹುದು. ಆದರೆ ಮನುಷ್ಯರನ್ನು ಮನುಷ್ಯರು ಕೊಂದು ತಿಂದುದು, ನಮ್ಮ ಪುಣ್ಯ ಭೂಮಿಯಲ್ಲಿ ಇದುವರೆಗೂ ಕಣ್ಣಿಗೆ ಕಂಡಿಲ್ಲ. ತಂದೆತಾಯಿಗಳೊ ಅಣ್ಣತಮ್ಮಂದಿರೊ ಗಂಡಹೆಂಡಂದಿರೊ ಹುಡುಗರುಮಕ್ಕಳೊ ನೆಂಟರಿಷ್ಟರೊ ಒಬ್ಬರನ್ನೊಬ್ಬರು ಎಡೆಬಿಡದೆ ಕಾಪಾಡಿಯೇ ತೀರುವರು. "ಹುಟ್ಟಿಸಿದ ದೇವರು ಹುಲ್ಲುಮೇಯಿಸಿಯಾರೆ" ಎಂಬಂತೆ ಹೊಟ್ಟೆಗಿಲ್ಲದೆ ಸತ್ತವರು ಅತಿವಿರಳ. ಇದಲ್ಲದೆ ಅನಾಥರು ವಿಧವೆಯರು ಬಡವರು ಮೊದಲಾದವರ ಉದ್ಧರಣಕ್ಕಾಗಿ ಎಲ್ಲೆಲ್ಲಿಯೂ ಘನಪ್ರಯತ್ನವು ನಡೆಯುತ್ತಿದೆ ಇದೊಂದು ನವೀನ ವಿಷಯವಲ್ಲ. ಪ್ರಯುಕ್ತ ಮುಖ್ಯವಾಗಿ ಗಟ್ಟಿಮುಟ್ಟಾಗಿರುವಾಗ ಕಷ್ಟಕಾರ್ಯಕ್ಕೊದಗಿ ಕುಗ್ಗಿ ಕೊರಗಿದಾಗ ಕಟುಕರ ಪಾಲಾಗುತ್ತಿರುವ ಪಶುಪ್ರಾಣಿಗಳ ಪ್ರಾಣರಕ್ಷಣ ಮಾಡುವ ಅನಂತ ಪುಣ್ಯ ಸಾಧನೆಯಲ್ಲಿ ಮಾತ್ರ ಈ ಮೂಲಧನವನ್ನು ವಿನಿಯೋಗಿಸುವುದು ಅತ್ಯಂತ ಸಾರ್ಥಕವೆಂದು ಸಾರಿ ಹೇಳಬಹುದು. ಭೂವ್ಯವಸಾಯದಲ್ಲಿ (Land farming) ನಿರತನಾದ ನಾನು ಗೋವ್ಯವಸಾಯದಲ್ಲಿಯೂ (Cattle farming) ಕೇವಲ ಉತ್ಸಾಹಶಾಲಿಯಾಗಿರುವುದರಿಂದ ಈ ವಿಷಯವನ್ನು ಇನ್ನೂ ಹೇಳತಕ್ಕುದಿದೆ.

ಮಾತನಾಡುವ ಮನುಷ್ಯರು ಸಾರವತ್ತಾದ ನೆಲ್ಲನ್ನು ತಿಂದು ಮೂಕವಾದ ಪಶುಗಳಿಗೆ ನಿಸ್ಸಾರವಾದ ಹುಲ್ಲನ್ನು ಹಾಕುತ್ತಿದ್ದರೂ ಅವುಗಳಿಂದುಂಟಾಗುವ ಉಪಕಾರಗಳು ಅನಂತವಾಗಿವೆ. ಅನಾದರಣೆಯಿಂದಿಕ್ಕಿದ ತೃಣವನ್ನು ತಿಂದೂ ಅಮೃತಪ್ರಾಯವಾದ ಕ್ಷೀರವನ್ನು ಕರೆಯುವುವು; ಕಸಕಡ್ಡಿಗಳೊಂದಿಗೆ ಮಲಮೂತ್ರವನ್ನು ಬೆರಸಿ ತುಳಿದು ಸಸಿಗಳ ಪೋಷಣೆಗೆ ವಿಶೇಷವಾದ ಗೊಬ್ಬರವನ್ನಾಗಿಸುವುವು, ಗದ್ದೆ ಹೊಲಗಳನ್ನು ಉತ್ತು, ಹುಲ್ಲು ನೆಲ್ಲನ್ನು ಒಕ್ಕಿ, ಯಾತವನ್ನೆಳೆದು ಕೃಷಿಕಾರ್ಯಕ್ಕೊದಗುವುವು; ಗಾಣ ಆಲೆಗಾರೆ ಮುಂತಾದವುಗಳನ್ನು ಹೂಡಿ ಕೈಗಾರಿಕೆಯ ಕೆಲಸಕ್ಕೆ ಸಹಕಾರಿಯಾಗುವುವು; ಪಶುಪಾಲಕರು ಧನಿಕರಾಗುವಂತೆ ಕರುಮರಿಗಳನ್ನು ಹಾಕಿ ಸಂತಾನಾಭಿವೃದ್ಧಿಯನ್ನುಂಟು ಮಾಡುವುವು; ವೈದ್ಯ ಸಾಮಗ್ರಿಗಾಗಿ ಉಪಯುಕ್ತವಾಗುವ ಗೋರೋಜನವನ್ನು ಕೂಡ ಸಂಗ್ರಹಿಸಿ ಕೊಡುವುವು; ಗಾಡಿ ಸಾರೋಟುಗಳನ್ನು ಎಳೆಯುವುದರಿಂದ ಆಢ್ಯರ ಭಾಗ್ಯಕ್ಕೂ ಭೋಗ್ಯಕ್ಕೂ ಭಾಗಿಗಳಾಗುವುವು; ಕೇವಲ ಹೊಟ್ಟೆಬಾಕರಾದ ನರರಾಕ್ಷಸರ ಬಾಯಿರುಚಿಗಾಗಿ ಎಳೆಪ್ರಾಯದಲ್ಲಿಯೇ ಬಲಿಬೀಳುವುವು; ಸ್ವಾಭಾವಿಕವಾಗಿ ಸತ್ತಮೇಲೂ ಅಸ್ಥಿಚರ್ಮಗಳನ್ನು ಕೃಷಿಕಲಾವಾಣಿಜ್ಯಾದಿಗಳ ಉಪಯೋಗಾರ್ಥವಾಗಿ ಕಿತ್ತುಬಿಡುವುವು ಯತ್ಕಿಂಚಿತ್ತು ಮಾಂಸಖಂಡಗಳನ್ನೂ ಅಂತ್ಯಜರ ಆಹಾರಕ್ಕಾಗಿ ಒಪ್ಪಿಸಿಕೊಡುವುವು, ಅವರಿವರು ತಿಂದುಳಿದ ಅವಶಿಷ್ಟವನ್ನೂ ನಾಯಿನರಿಗಳ ಪಾಲಿಗಾಗಿ ಬಿಟ್ಟುಬಿಡುವುವು, ಹೀಗೆ ಜೀವವನ್ನು ಧರಿಸಿರುವಾಗಲೂ ತ್ಯಜಿಸಿದ ಮೇಲೆಯೂ ಏಕಪ್ರಕಾರವಾಗಿ ಲೋಕೋಪಕಾರಕ್ಕೆ ಬೀಳುವ ಈ ಪಶುಪ್ರಾಣಿಗಳ ದಿಗಂತವಿಶ್ರಾಂತ ದಿವ್ಯಕೀರ್ತಿಯನ್ನು ಢಕ್ಕೆ ಡಮರು, ಭೇರಿ, ನಗಾರಿ, ತಮ್ಮಟೆ, ಮೃದಂಗ, ಮುಂತಾದ ಚರ್ಮವಾದ್ಯಗಳು ಢಣಢಣಾಯಮಾನವಾಗಿ ಉದ್ಘೋಷಿಸುತ್ತಿರುವುವು. ಮನುಷ್ಯರ ಚರ್ಮಚಕ್ಷುಸ್ಸಿಗೆ ಮಾತ್ರ ಕೇವಲ ವಾದ್ಯವಿಶೇಷದಂತೆ ಗೋಚರಿಸುವ ಈ ಘನಘೋಷವು ಬಡಪಾಪಿಗಳಾದ ಪಶುಪ್ರಾಣಿಗಳ ನಿಶ್ವಾಸವೆಂದು ಜ್ಞಾನಿಗಳ ದಿವ್ಯ ದೃಷ್ಟಿಗೆ ಸ್ಪಷ್ಟವಾಗದೇ ಇರದು ಅಂತಹ ದಿವ್ಯದೃಷ್ಟಿಯಿಂದ ದೃಷ್ಟಿಸಿ ನೋಡಿ, ಅಧೋಗತಿಗಿಳಿದವುಗಳೆಂದು ತಿಳಿದ ಮೇಲೂ ನಮ್ಮನ್ನು ಉದ್ಧರಿಸದವರು "ಹೆಣದತ್ತಂ, ಹೆಣದತ್ತಂ. ಹೆಣದತ್ತಂ" ಎಂದು ಮೃದಂಗದ (ಮೃತ್ + ಅಂಗ) ಸತ್ತ ಚರ್ಮವು ಮೂರು ಮುಖಗಳಿಂದ ಸಾರುತ್ತಿರುವುದು ಅಸಾರ್ಥಕವಲ್ಲ.

ಇಷ್ಟು ಮಹಿಮೆಯ ಪ್ರಾಶಸ್ತ್ಯವುಳ್ಳ ಗೋಸಂರಕ್ಷಣೆಯ ಪ್ರಸಕ್ತಿಯು ಈಗಾಗಲೇ ಅಧಿಕ ಪ್ರಸಂಗವಾಗುತ್ತಾ ಬಂದಿರುವ ಪ್ರಯುಕ್ತ ಪ್ರಕೃತ ಪತ್ರಬಾಹುಳ್ಯಕ್ಕಂಜಿ ಇಂದಿನ ಲೇಖನವನ್ನು ಇಲ್ಲಿಯೇ ನಿಲ್ಲಿಸಬೇಕಾಗಿದೆ ದೈವಿಯ ವಿಘ್ನವಾಗದಂತೆ ಇನ್ನೊಮ್ಮೆ ಎಡೆಗೊಡುವುದಾದರೆ ಈ ಧರ್ಮ ಸಂಸ್ಥೆಯ ಕಾರ್ಯಕ್ರಮ, ಆಯವ್ಯಯಗಳ ವಿಧಾನ, ಚಿರಸ್ಥಾಯಿತ್ವದ ಮೂಲಮಂತ್ರ, ಈ ಧರ್ಮದಂಪತಿಗಳ ಕರ್ತವ್ಯ ಇವೇ ಮೊದಲಾದ ಸದಭಿಪ್ರಾಯಗಳನ್ನು ಸೂಚಿಸಬೇಕೆಂದಿರುವ ಸಜ್ಜನವಿಧೇಯ.

ಸೂಕ್ತಿಕರ್ತ ಸುಬ್ಬರಾವ್.

ಅಯ್ಯಾ,

ಈಗ ಕುಮಾರು ೬ ಯಾ ೭ ವರುಷಗಳ ಲಾಗಾಯತು ಕಾರ್ತಿ ಪೈರು ಹಾಳು ಮಾಡುವ ಒಂದು ಹಸುರುಬಣ್ಣವುಳ್ಳ ಮಿಡಿತೆಯು ಪೈರಿನ ಕದಿರಿನಲ್ಲಿ ಕೂತು ತನ್ನ ಹರಿತವಾದ ಹಲ್ಲುಗಳಿಂದ ಕದಿರನ್ನು ಕಡಿದು ಹಾಕಿ ಬೇಸಾಯಗಾರರಿಗೆ ಹೆಚ್ಚು ನಷ್ಟಗೊಳಿಸಿ ಬರೇ ದಂಟನ್ನೇ ಮನೆಗೆ ತೆಗೆದುಕೊಂಡು ಹೋಗುವ ಹಾಗೆ ಮಾಡುವ ಸಂಗತಿ ಎಲ್ಲರಿಗೂ ಮನವರಿತವಾದ್ದೇ ಆದ್ದರಿಂದ ಹೆಚ್ಚಿಗೆ ಬರಿಯಬೇಕೆಂತಿಲ್ಲ.

ಈ ಹಸರು ಮಿಡಿತೆಯ ಉಪದ್ರವು ೬ ಯಾ ೭ ವರುಷಗಳ ಮೊದಲು ನನಗೆ ಸಹಾ ಸಂಭವಿಸಿದ್ದರಿಂದ ಇದನ್ನು ಹ್ಯಾಗಾದರೂ ನಾಶಮಾಡುವ ಉಪಾಯ ಕಂಡು ಹಿಡಿದು ಬೇಸಾಯಗಾರರನ್ನು ಈ ಉಪದ್ರದಿಂದ ವಿಮೋಚನೆ ಮಾಡಿಸಬೇಕೆಂದು ಯೋಚಿಸಿಕೊಂಡು ೬ ಯಾ ೭ ವರ್ಷಗಳ ಲಾಗಾಯತು ಅದೇ ಕೆಲಸದಲ್ಲಿ ನಿರತನಾಗಿದ್ದುಕೊಂಡು ಈ ವರುಷ ಅದನ್ನು ನಾಶಪಡಿಸುವ ವಿಧಾನವನ್ನು ಕಂಡುಕೊಂಡಿರುತ್ತೇನೆ ಈ ನನ್ನ ಕೆಳಗಿನ ಅನುಭವವನ್ನು ಎಲ್ಲಾ ಬೇಸಾಯಗಾರರು ತಿಳಿಯುವ ಹಾಗೆ ತಮ್ಮ ಅಮೂಲ್ಯವಾದ ಪತ್ರಿಕೆಯಲ್ಲಿ ಪ್ರಕಟಿಸುವಂತೆ ಅತಿ ನೈಚ್ಯಭಾವದಿಂದ ಪ್ರಾರ್ಥಿಸುತ್ತೇನೆ.

ಕಾರ್ತಿ ಪೈರಿನ ಮೇಲೆ ಕೂತು ಕದಿರನ್ನು ಹರಿತವಾದ ಹಲ್ಲುಗಳಿಂದ ಕತ್ತರಿಸಿಹಾಕುವ ಪಚ್ಚೆತರದ ಮಿಡಿತೆ (ತುಳುವಿನಲ್ಲಿ ಪಚ್ಚೆ ಮುಟ್ಟೆ ಅಥವಾ ಪಚ್ಚೆ ಪಾಂತೆ) ಎಂತ ಕರೆಯಲ್ಪಡುವ ಮಿಡಿತೆಗಳನ್ನು ನಾಶ ಮಾಡುವ ಉಪಾಯ—ರಾತ್ರಿ ೮ ಯಾ ೯ ಘಂಟೆ ಸಮಯಕ್ಕೆ ಮಿಡಿತೆ ಇರುವ ಗದ್ದೆಯ ೪ ಅಂಚಿನಲ್ಲಿಯೂ ಒಣ ಹುಡಿಹುಲ್ಲನ್ನಾಗಲಿ ಕರಿಮುಳಿಯನ್ನಾಗಲಿ ಹಾಕಿ ಬೆಂಕಿ ಕೊಟ್ಟು ಪೈರಿಗೆ ಆ ಬೆಂಕಿ ತಗಲದಂತೆ ಕಾಲು ಘಂಟೆ ಅಂದರೆ ಬೆಂಕಿ ಆರಿಹೋಗುವವರೆಗೆ ಜಾಗ್ರತೆ ಮಾಡಿ ನಿಂತರೆ ೨೦ ಯಾ ೩೦ ಗಜದವರೇಗೆ ಇರುವ ಮಿಡಿತೆಗಳು ವ ಮರಿಗಳು ಕೂಡಾ ಪ್ರಜ್ವಲಿಸುವ ಬೆಂಕಿಗೆ ಒಂದು ಬಿದ್ದು ನಾಶಹೊಂದುತ್ತವೆ.

ಉಳಿಯಾರಗೋಳಿ.
ತಾರೀಕು 16—10—1615.

ಬಿ. ಹೊನ್ನಯ್ಯ ಸೆಟ್ಟಿ.

ಅಯ್ಯಾ ಪತ್ರಿಕಾಕರ್ತರೇ,

ಫೋರೆಸ್ಟ್ ಇಲಾಖೆಯ ಉದ್ದೇಶವೇನೆಂದು ತಿಳಿಯಪಡಿಸುವ ೧೯೧೫ನೇ ಇಸವಿ ಜನವರಿ ೧೫ನೇ ತಾರೀಕಿನ ಜಿಲ್ಲಾ ಗಜೇಟಿನಲ್ಲಿ ಪ್ರಕಟವಾದ ಜಿಲ್ಲಾ ಕಲೆಕ್ಟರ ದೊರೆ

...ಗಳವರ ಸರ್ಕಿಲರನ್ನು ಇದರ ಅಡಿಯಲ್ಲಿ ಬರೆದು ಕಳುಹಿಸಿರುತ್ತೇನೆ. ಅದನ್ನು ಇದ್ದಂತೆಯೇ ಪ್ರಕಟಗೊಳಿಸಿರಿ. ಈ ಸರ್ಕಿಲಾರು ಮೂಲಕ ಜನರಿಗೆ ಆ ಕಾಲದಲ್ಲಿ ತಿಳಿಯಹೇಳಿದ ಮಾತುಗಳನ್ನು ವಾಚಕರು, ಮುಖ್ಯವಾಗಿ ಸರಕಾರದವರೂ ನಮ್ಮ ಪ್ರಜಾಮುಂದಾಳುಗಳೂ ಚನ್ನಾಗಿ ಜ್ಞಾಪಕಕ್ಕೆ ತಂದುಕೊಳ್ಳಬೇಕು. ಮತ್ತು ಈಗ ಜನರು ಫೋರೆಸ್ಟ ಇಲಾಖೆಯವರಿಂದ ಅನುಭವಿಸುತ್ತಿರುವ ಸಂಕಷ್ಟಗಳೇನು ಎಂಬುದನ್ನು ಪ್ರತ್ಯಕ್ಷ ನೋಡಿಕೊಂಡು ಸರ್ಕಿಲಾರಿನ ಉದ್ದೇಶವು ಎಲ್ಲಿ, ಇಲಾಖೆಯವರ ಕಾರ್ಯಸಾಧನವು ಎಲ್ಲಿ ಎಂಬುದನ್ನು ನಿಶ್ಚಯಿಸಬೇಕಾಗಿ ವಿಜ್ಞಾಪಿಸಿಕೊಳ್ಳುತ್ತೇನೆ

ಜನರ ಒಳ್ಳಿತಕ್ಕಾಗಿ, ರೈತರ ಪ್ರಯೋಜನಕ್ಕಾಗಿ ಕಾಡುಗಳನ್ನು ಸಂರಕ್ಷಿತಪಡಿಸಿರುವರು ನಿಜ. ಆದರೆ ಹೀಗೆ ಕಾಡುಗಳನ್ನು ಸಂರಕ್ಷಿತಪಡಿಸುವಾಗ ಆಯಾ ಸಕ್ಯ ವಾಗಣೆಗಳಲ್ಲಿ ರಿಜರ್ವಗಳನ್ನು ವರ್ಗದ ಕಿನಾರೆಯ ತನಕ ವಿಸರಿಸಲು ಕಾರಣವೇನು? ಹಟ್ಟಿಯಿಂದ ಬಿಟ್ಟ ಜಾನುವಾರುಗಳು ಈಗಿನ ವಿದ್ಯಮಾನಗಳಲ್ಲಿ ರಿಜರ್ವವನ್ನು ಪ್ರವೇಶಿಸದೆ ಉಪಾಯವಿರದು. ಬ್ಲೋಕಿನೊಳಗೆ ಜಾನುವಾರುಗಳನ್ನು ಬಿಡುವ ಆಗತ್ಯವಿರದು ಎಂಬುವ ಸರ್ಕಿಲಾರಿನಲ್ಲಿರುವ ಮಾತುಗಳ ತಾತ್ಪರ್ಯವೇನು? ರಿಜರ್ವಗಳನ್ನು ಮಾಡುವಾಗ ರೈತರ ಉಪಯೋಗಕ್ಕೆ ಬಿಡೋಣಾದ ಸ್ಥಳಗಳಿಗೆ ಜಾನುವಾರುಗಳು ಹೋಗಲು ಮಾರ್ಗವಿರದು. ಮುಳ್ಳುಗಿಡಗಳು ದಾರಾಳವಾಗಿ ಬೆಳೆಯುವುದರಿಂದ ಜಾನುವಾರುಗಳಿಗೆ ಬೇಕಾದ ಹುಲ್ಲೂ ಸಿಕ್ಕಲು ಸಾಧ್ಯವಿರದು. ಆ ಮಾತು ಹಾಗಿರಲಿ. ರಿಜರ್ವ ಕಾಡುಗಳಿಂದಾಗಲಿ ಬ್ಲೋಕುಗಳಿಂದಾಗಲಿ ಯಾವ ತರದ ಉತ್ಪತ್ತಿಯಾದರೂ ಕತ್ತಿಕಾಣಿಕೆ ತೆತ್ತರೂ ಸಿಕ್ಕಲಾರದೆಂಬ ಹುಕುಮು ಇತ್ತೀಚೆ ಹೊರಡುತ್ತಿರುವದು. ಇದರ ಕಾರಣವೇನು? ಜನರ ಉಪಯೋಗಕ್ಕೆ ಸೊಪ್ಪು, ಕಟ್ಟಿಗೆ ವಗೈರೆಗಳು ಸರ್ವದಾ ಸಿಕ್ಕುವಂತೆ ಕಾಡುಗಳು ಸಂರಕ್ಷಿತಪಡಿಸೋಣಾಗುವವೆಂಬುವ ಸರ್ಕಿಲಾರಿನ ಮಾತಿಗೆ ಈ ಹುಕುಮುಗಳು ಅನುಕೂಲವೋ ಪ್ರತಿಕೂಲವೋ?

ಇತ್ತಲಾಗೆ ನಮಗೆ ಕೊಡೋಣಾದ ಫೋರೆಸ್ಟ ಖಾತೆಯ ಹುಕುಮುಗಳು ಇನ್ನೂ ಹಲವಿರುವವು. ಇವುಗಳ ವಿಷಯ ಪ್ರಕಟವಾಗಲಿಕ್ಕಿರುವ ಸಂಗತಿಗಳನ್ನು ನಿಮ್ಮ ಮುಂದಿನ ವಾರದ ಸಂಚಿಕೆಗೆ ಬರೆದು ಕಳುಹಿಸುತ್ತೇನೆ

ಪುತ್ತೂರು ತಾ 1[illegible]-10-1915 ರೈತ

೧೮೯೫ನೇ ಇಸವಿ ಜನವರಿ ೧[illegible]ನೇ ತಾರೀಕಿನ ಡಿಸ್ಟ್ರಿಕ್ಟ ಗಜೇಟಿನಿಂದ— ಪ್ರಕಟಣೆ — ಈ ಜಿಲ್ಲೆಯಲ್ಲಿ ಬೆಟ್ಟಗಳನ್ನೂ ಕಾಡುಗಳನ್ನೂ ಸಂರಕ್ಷಿತಪಡಿಸುವ ವಿಷಯದಲ್ಲಿ ದೊಡ್ಡ ಬೊಬ್ಬೆ ಮಾಡೋಣಾಗುತ್ತದೆ. ಇದರಿಂದ ಫೋರೆಸ್ಟ ಇಲಾಖೆಯವರ ಇರಾದೆಗಳ ಕುರಿತು ಸರ್ವಸಾಧಾರಣವಾಗಿ ತಪ್ಪು ಗ್ರಹಿಕೆ ಇರಬೇಕೆಂತ ನಾವು ತಿಳಕೊಳ್ಳುತ್ತೇವೆ. ಆದ್ದರಿಂದ ಜನರ ಪ್ರಯೋಜನಕ್ಕಾಗಿಯೇ ಮೋಪಿನ ಮರ ವ ಕಟ್ಟಿಗೆ ಹೆಚ್ಚು ದೊರಕುವಂತೆ ಮಾಡುವದು ಮತ್ತು ಗೋಚರಾವಿನ ಸ್ಥಿತಿಯನ್ನು ವೃದ್ಧಿಪಡಿಸುವಂಥಾದ್ದು ಈ ಇಲಾಖೆಯವರ ಉದ್ದಿಷ್ಟವಾಗಿರುತ್ತದೆಂತ ನಾವು ತಿಳಿಯಪಡಿಸುತ್ತೇವೆ

2. ತಮ್ಮ ಕೃತ್ಯಗಳಿಂದ ಕಾಡುಗಳಿಗೆ ಆಗುವ ಹಾನಿಗೂ ಮುಂದಿನವರ ಅವಶ್ಯಕತ್ವಕ್ಕೂ ತಾತ್ಪರ್ಯ ವ ಲಕ್ಷ ಕೊಡದೆ ಈ ಜಿಲ್ಲೆಯ ಜನರು ತತ್ಕಾಲಕ್ಕೆ ತಮಗೆ ಬೇಕಾದ ಕಾಡೊತ್ಪತ್ತಿಯನ್ನು ಮನಸ್ಸು ಬಂದಂತೆ ಉಪಯೋಗಿಸುವ ವಾಡಿಕೆ ಇರುತ್ತದೆ. ಒಮ್ಮೆ ಪ್ರಖ್ಯಾತಿಗೊಂಡ ಕನರಾ ಜಿಲ್ಲೆಯ ಕಾಡುಗಳಲ್ಲಿ ಈಗ ಜನರಿಗೆ ಬೇಕಾದಷ್ಟು ಮೋಪಿನ ಮರಗಳು ಸಿಕ್ಕುವದಿಲ್ಲ. ಶಹರುಗಳ ಆಸ್‌ಪಾಸಿನಲ್ಲಿ ಕಟ್ಟಿಗೆ ಸಿಕ್ಕುವದು ದುರ್ಲಭ ಮತ್ತು ಅದಕ್ಕೆ ಬಹಳ ಕ್ರಯವು ಇರುತ್ತದೆ. ಚರಾವಿನ ಸ್ಥಿತಿ ಕೆಟ್ಟುಹೋಗುತ್ತದೆ ಎಂಬುದಕ್ಕೆ ಅದನ್ನು ತಿಂದು ಜೀವಿಸುವ ಸಣ್ಣದಾದ ದುರ್ಬಲ ಜಾನುವಾರುಗಳೇ ದೃಷ್ಟಾಂತವಾಗಿರುತ್ತದೆ.

3 ಈ ಜಿಲ್ಲೆಯಲ್ಲಿ ಒಮ್ಮೆ ರಮಣೀಯವಾಗಿದ್ದ ಕಾಡುಗಳು ಈಗ ಎಲ್ಲಾ ಹೋಗಿ ಅವುಗಳ ಬದಲಿಗೆ ಕೆಲವು ಇಂಚುಗಳು ಮಾತ್ರ ಎತ್ತರವಾಗಿರುವ ಸಣ್ಣ ಗಿಡಗಳು ಇರುವಂಥಾದ್ದನ್ನು ನೋಡಿ ಡಿಸ್ಟ್ರಿಕ್ಟ ಫೋರೆಸ್ಟ ಆಫೀಸರರು ದುಃಖಪಡುತ್ತಾರೆ. ತಮ್ಮ ಕಣ್ಣೆದುರಿಗೆ ಬೀಳುವ ಪ್ರತಿ ಸೊಪ್ಪು ವ ಅಡರುಗಳನ್ನು ನಾಶಮಾಡುವಂಥಾ ಮತ್ತು ಕಟ್ಟಿಗೆ ಬಗ್ಗೆ ಬೇರುಗಳನ್ನು ಸಹ ಅಗೆಯುವಂಥಾ ಕೆಲಸದಲ್ಲಿ ಜನರು ಈಗ ಕೂಡ ಅಮರಿ ಇರುವ ಸಂಗತಿಯಿಂದ ಅಂಥಾ ಸಣ್ಣ ಗಿಡಗಳು ಕೂಡಾ ಇನ್ನು ಕೆಲವು ವರುಷಗಳಲ್ಲಿ ಪೂರ್ಣವಾಗಿ ಅದೃಶ್ಯವಾಗುವವು. ಪೊದೆಗಳು ವ ಮರಗಳ ಬಾಬತು ತಕ್ಕ ಹೊದಿಕೆಯನ್ನು ಕಳಕೊಂಡಂಥಾ ಭೂಮಿಯು ಮಳೆಯ ನೆರೆ ನೀರಿನ ಹೊಯಿಲಿಗೆ ಒಳಪಟ್ಟು, ಅದರಲ್ಲಿ ಇದ್ದಂಥ ಸ್ವಲ್ಪವಾದ ಮಣ್ಣು ಕರಗಿ ಹೋಗಿ ಮುರಕಲ್ಲಿನಿಂದಲೂ ಹರಳು ಕಲ್ಲಿನಿಂದಲೂ ಮುಚ್ಚಿಕೊಂಡಿರುತ್ತದೆ. ಇದರ ಮೇಲೆ ಏನೊಂದು ಬೆಳೆಯದೆ ಮನುಷ್ಯ ಮೃಗಗಳಿಗೆ ಕೂಡಾ ನಿಷ್ಪ್ರಯೋಜನದ್ದಾಗಿರುತ್ತದೆ.

4 ಕೋಳಿ ಮರಿಗಳನ್ನು ಮನುಷ್ಯರೂ ಗಿಡಗಗಳೂ ಸಹ ತಿನ್ನುತ್ತಾರೆಂದು ಒಬ್ಬ ಗ್ರಂಥಕರ್ತನು ಬರೆಯುತ್ತಾನೆ. ಆದರೆ ಕೋಳಿ ಮರಿಗಳನ್ನು ಗಿಡಗಗಳು ತಮ್ಮ ಸುಪರ್ದಿಗೆ ತೆಗೆದುಕೊಂಡದ್ದಾದರೆ ಕೋಳಿಗಳ ಕುಲವೇ ಬೇಗನೆ ಅಳಿದು ಹೋದೀತು. ಪರಂತು ಮನುಷ್ಯರು ಅವುಗಳನ್ನು ತಮ್ಮ ಸಂರಕ್ಷಣೆಯೊಳಗೆ ತೆಗೆದುಕೊಳ್ಳುವದರಿಂದ ಕೋಳಿಗಳ ಜಾತಿಯು ಅವಶ್ಯಕತ್ವಕ್ಕೆ ಅನುಸರಿಸಿ ವೃದ್ಧಿಯಾಗುತ್ತದೆ. ತದ್ರೀತಿಯಾಗಿ ಈ ಜಿಲ್ಲೆಯ ನಿವಾಸಿಕರು ಕಾಡೊತ್ಪತ್ತಿಯ ವಿಷಯದಲ್ಲಿ ಈ ವರೆಗೆ ಗಿಡಗಗಳ ಮೇರೆಗೆ ನಡೆಯುತ್ತಿದ್ದಾರೆ. ಆದ ಪ್ರಯುಕ್ತ ಫೋರೆಸ್ಟ ಇಲಾಖೆಯವರು ಇದಕ್ಕೆ ಲಕ್ಷ್ಯಕೊಟ್ಟು ಈ ವಿಷಯದಲ್ಲಿ ಮನುಷ್ಯರೋಪಾದಿಯಲ್ಲಿ ನಡೆಯುವದು ಅವಶ್ಯವಾಗಿರುತ್ತದೆ

5 ಫೋರೆಸ್ಟ ಇಲಾಖೆಯವರು ತಮ್ಮ ಏರ್ಪಾಡುಗಳನ್ನು ಜ್ಯಾರಿಯಲ್ಲಿ ತರುವಾಗ್ಯೆ ಜನರ ಹಕ್ಕುಗಳನ್ನು ಉಲ್ಲಂಘಿಸುವದು ಅವರ ಇರಾದೆಯಾಗಿರುವದಿಲ್ಲ. ಆದ್ದರಿಂದ ಎಲ್ಲಾ ಕುಮುಕಿ ಸ್ಥಳಗಳನ್ನೂ ವ ಬಾಣೆಗಳನ್ನೂ ಸುರಕ್ಷಿತಪಡಿಸಿದ ಕಾಡುಗಳಿಂದ ವಿರಹಿತಪಡಿಸೋಣಾಗುತ್ತದೆ. ಅನುಕೂಲ ಇರುವಲ್ಲಿ ಎಲ್ಲಾ ರೈತರ ಉಪಯೋಗದ ಬಗ್ಗೆ ಸಾಕಷ್ಟು ಖಾಲಿ ಸ್ಥಳ ಬಿಡೋಣಾಗುವ ವಿಷಯವು ಪರ್ಯಾಲೋಚಿಸಲ್ಪಡುವದು. ಸಂರಕ್ಷಿತಪಡಿಸಿದ ಸ್ಥಳಗಳಲ್ಲಿ ಜಾನುವಾರುಗಳನ್ನು ಸಾಧಾರಣವಾಗಿ ಮೇಯಿಸಲಿಕ್ಕೆ ಬಿಡುವ ಆಗತ್ಯವು ರೈತರಿಗೆ ಬೀಳಲಿಕ್ಕಿಲ್ಲ. ಕಿಂಚಿತ್ ಫೀಸು ಕೊಡುವದರಿಂದ ಒಳ್ಳೇ ಮೇವು ದೊರಕುತ್ತದೆಂಬುದು ಅವರಿಗೆ ತಿಳಿದಾಗ್ಯೆ ಅವರು ತಮ್ಮ ಜಾನುವಾರುಗಳನ್ನು ಸ್ವೇಚ್ಛೆಯಿಂದ ಅವುಗಳಲ್ಲಿ ಬಿಟ್ಟಾರೆಂತ ನಾವು ಕೋರುತ್ತೇವೆ. ಕೆಲವು ಸಂಗತಿಗಳಲ್ಲಿ ಒಂದು ಗ್ರಾಮದ ರೈತರು ಕೂಡಿ ತಮ್ಮ ಉಪಯೋಗದ ಬಗ್ಗೆ ಒಂದು ಹಾಡಿಯನ್ನು ಸುರಕ್ಷಿಸುತ್ತಾರೆ. ಇಂಥಾ ಸಂಗತಿಗಳಲ್ಲಿ ಫೋರೆಸ್ಟ ಇಲಾಖೆಯವರು ಪ್ರವೇಶಿಸುವದು ಸಾಧಾರಣವಾಗಿ ಅನಾವಶ್ಯಕವಾಗಿರುತ್ತದೆ. ಮತ್ತು ಇಂಥಾ ಹಾಡಿಗಳನ್ನು ಮನಾ ರಜಿಸ್ಟ್ರಿಯಲ್ಲಿ ದಾಖಲುಮಾಡಿ ರೈತರ ಉಪಯೋಗದ ಬಗ್ಗೆ ಬಿಟ್ಟುಬಿಡಲಾದೀತು.

6. ನಾಟಿ ಸಂರಕ್ಷಿತ ಕಾಡುಗಳ ಬ್ಲೋಕ್ ಯಾನೆ ಅಂಶಗಳನ್ನು ಸುರಕ್ಷಿತಪಡಿಸುವ ಉದ್ದೇಶವು ಮುಖ್ಯವಾಗಿ ಅಂಥಾ ಕಾಡುಗಳಲ್ಲಿ ಮೋಪಿನ ದೊಡ್ಡ ಮರಗಳನ್ನು ಬೆಳೆಸುವಂಥಾದ್ದು ಮತ್ತು ವ್ಯಾಪಾರ ಯಾನೆ ಚಿಲ್ಲರೆ ಉತ್ಪತ್ತಿಗಳನ್ನು ಹುಟ್ಟಿಸುವಂಥಾದ್ದು ಆಗಿರುತ್ತದೆ. ಜಿಲ್ಲೆಯ ಪೈಕಿ ಹೆಚ್ಚು ಬೈಲಾಗಿರುವ ಮತ್ತು ಹೆಚ್ಚು ನಿವಾಸಿಕರು ಇರುವ ಅಂಶಗಳಲ್ಲಿ ಬ್ಲೋಕುಗಳನ್ನು ಸುರಕ್ಷಿತ ಪಡಿಸುವದರ ಉದ್ದೇಶವು ರೈತರಿಗೆ ವ್ಯವಸಾಯದ ಬಗ್ಗೆ ಮೋಪಿನ ಚಿಲ್ಲರೆ ಮರಗಳು ಗೊಬ್ಬರದ ಬಗ್ಗೆ, ಸೊಪ್ಪು ಮನೆವಾರ್ತೆ ಖರ್ಚಿನ ಬಗ್ಗೆ ಬಿದಿರು ವ ಜಲಾವಣೆ ಕಟ್ಟಿಗೆ, ಜಾನುವಾರುಗಳ ಸಂರಕ್ಷಣೆ ಬಗ್ಗೆ ಹುಲ್ಲು ಸಹಾ ಸಿಕ್ಕುವಂತೆ ಮಾಡುವದೇ ಆಗಿರುತ್ತದೆ. ಸಣ್ಣ ವಿಸ್ತೀರ್ಣದವುಗಳಾಗಿದ್ದು ಮುಖ್ಯವಾಗಿ ನದಿತೀರದ ಸಮೀಪ ಬೀರಿಕೊಂಡು ಇರುವ ಸುರಕ್ಷಿತಪಡಿಸಿರುವ ಈ ಕಾಡುಗಳು ರೈತರ ಉಪಯೋಗ ವ ಪ್ರಯೋಜನಕ್ಕಾಗಿಯೇ ಸಂರಕ್ಷಿಸಲ್ಪಡುವವು. ಇಂಥಾ ಉತ್ಪತ್ತಿಗಳು ರೈತರಿಗೆ ಹೆಚ್ಚಿಗೆಯಾಗಿ ಬೇಕಾದಾಗ್ಯೆ ಇವರಿಗೆ ಕಾಲಕ್ರಮದಲ್ಲಿ ಇವುಗಳಿಂದ ಹೆಚ್ಚು ಪ್ರಯೋಜನ ಸಿಕ್ಕುವದು. ಹೆಚ್ಚಿನ ಉತ್ಪತ್ತಿ ಸಿಕ್ಕಬೇಕಾದರೆ ಅವುಗಳನ್ನು ಜಾಗ್ರತೆಯಿಂದಲೂ ಹೆಚ್ಚಿನ ವೆಚ್ಚದಿಂದಲೂ ಸಂರಕ್ಷಿಸಬೇಕಾಗುತ್ತದೆ.

7 ತಹಸಿಲದಾರರು ವ ರೆವಿನ್ಯೂ ಇನ್ಸಪೆಕ್ಟರರು ತಮ್ಮ ಸಂಚರಣೆ ಕಾಲದಲ್ಲಿ ಮತ್ತು ಗ್ರಾಮ ಉದ್ಯೋಗಸ್ಥರು ಸಹಾ ಈ ಸರ್ಕಿಲಾರ್ ಹುಕುಮಿನ ಸಂಗತಿಯನ್ನು ಕೂಡಿದಷ್ಟರ ಮಟ್ಟಿಗೆ ಪ್ರಾಹಿಸುಮಾಡತಕ್ಕದ್ದು. ಮೇಲೆ ಹೇಳಿದ ಸಂಗತಿಗಳೆಲ್ಲ ತಿಳಿದು, ಫೋರೆಸ್ಟ ಇಲಾಖೆಯವರ ಮುಖ್ಯ ಉದ್ದೇಶವು ಜನರ ಪ್ರಯೋಜನದ್ದು ಎಂತ ಆದಮೇಲೆ ಮೂಢರಾದ ಜನರು ಅಪ್ರಬುದ್ಧಿಯಿಂದ ತಂದೊಡ್ಡುವ ಅಭ್ಯಂತರಗಳನ್ನು ಇನ್ನು ಮುಂದೆ ತರಲಾರರೆಂತ ನಾವು ನಂಬುತ್ತೇವೆ.

ಮಂಗಳೂರು,
ತಾ. 30ನೇ ಅಕ್ಟೋಬರ 1894.

(ದಸ್ಕತು.) ಜೆ. ವ್ಹಿ. ಡಾನ್ಸ್
ಆಕ್ಟಿಂಗ್ ಕಲೆಕ್ಟರ್.

ಯುದ್ಧ ಸಮಾಚಾರ.

ಅಕ್ಟೋಬರ ತಾ. ೧೪, ೧೫.

ಕಾಂಟ್ರ ಮತ್ತು ಕಬ್ಬಿಣ ತುಂಬಿರುವ ಜರ್ಮನರ ಎರಡು ಹಡಗಗಳನ್ನು ಸ್ವೀಡನದ ದಕ್ಷಿಣ ಪ್ರಾಂತ್ಯದಲ್ಲಿ ಜಲಾಂತರ್ಗಾಮಿ ನಾವೆಗಳ ಮೂಲಕ ನಾಶಪಡಿಸಿರುವರು

ಫ್ರೆಂಚರ ಆಕಾಶನಾವೆಗಳು ಜರ್ಮನರ ಸೇನೆಗಳು ಬರುವ ರೈಲ್ವೆ ಭಂಡಿಗಳ ಮೇಲೆ ತೋಟೆಗಳನ್ನು ಹಾಕಿ ಬಹಳ ಹಾನಿಯನ್ನು ಉಂಟುಮಾಡುತ್ತಲಿವೆ.

ಫ್ಲೆಂಡರ್ಸದಲ್ಲಿ ಜರ್ಮನರು ತಮ್ಮ ಸೇನೆಗಳನ್ನು ಅತ್ತಿತ್ತ ಒಯ್ಯುವಾಗ ರೈಲ್ವೆ ಮಾರ್ಗದಲ್ಲಿ ಉಂಟಾದ ಅಪಘಡದಿಂದ ಅನೇಕ ಸೇನಿಕರು ನಾಶವಾಗಿ ಹೋಗಿರುವರೆಂತ ತಿಳಿದುಬರುತ್ತದೆ

ಫ್ರೆಂಚ ಸರಕಾರದ ವಿದೇಶ ಖಾತೆಯ ಮಂತ್ರಿಗಳಾದ ಡೆಲ್ ಕಾಸ್ಸೆಯವರು ತಮ್ಮ ಮಂತ್ರಿಪದಕ್ಕೆ ರಾಜಿನಾಮೆಯನ್ನು ಕೊಟ್ಟಿರುವುದರಿಂದ ಪ್ರಧಾನ ಮಂತ್ರಿಗಳಾದ ವಿವಾನಿಯವರು ವಿದೇಶ ಮಂತ್ರಿಗಳ ಕೆಲಸವನ್ನು ವಹಿಸಿರುತ್ತಾರೆ

೫೦ ವರುಷ ಪ್ರಾಯದವರೂ ಸಹ ಸಮರಸಿದ್ಧರಾಗಬೇಕೆಂದು ಜರ್ಮನ ಸರಕಾರದವರು ತಮ್ಮ ಪ್ರಜಾವರ್ಗಕ್ಕೆ ಆಜ್ಞೆ ಕೊಟ್ಟಿರುವದಾಗಿ ತಿಳಿದುಬರುತ್ತದೆ.

ಚಿನ್ನ ಬೆಳ್ಳಿಯ ಆಭರಣ ಪಾತ್ರೆ ಇತ್ಯಾದಿಗಳನ್ನು ಟಂಕಶಾಲೆಗೆ ತಂದುಕೊಡಬೇಕೆಂಬ ವಿಜ್ಞಾಪನೆಯನ್ನು ಓಸ್ಟ್ರಿಯ ಸರಕಾರದವರು ತಮ್ಮ ಪ್ರಜಾವರ್ಗಕ್ಕೆ ಕೊಟ್ಟಿರುವರಾಗಿ ತಿಳಿಯುತ್ತೇವೆ ಜನರಿಗೆ ಇವುಗಳ ಕ್ರಯವು ಬೇಂಕಿನ ನೋಟುಗಳ ರೂಪದಲ್ಲಿ ಕೊಡಲಾಗುತ್ತದೆ.

ಪಶ್ಚಿಮ ಮತ್ತು ಪೂರ್ವರಣರಂಗಗಳ ಸಂಯುಕ್ತ ಸೇನೆಯವರು ಶತ್ರುಗಳನ್ನು ಸೋಲಿಸಿ ಮುಂದರಿಸುತ್ತಿರುವ ವೃತ್ತಾಂತಗಳು ಕೇಳಿಸುತ್ತಿರುವವು

ರಣರಂಗದ ವಿಸ್ತಾರದಲ್ಲಿ ಬಲ್ಕಾನ್ ಸಂಸ್ಥಾನಗಳು ಸಹ ಸೇರಿಹೋದದ್ದರಿಂದ ಯುದ್ಧದ ಪರಿಣಾಮವು ಆ ಪ್ರಾಂತ್ಯಗಳಲ್ಲಿ ಸಹ ಭಯಂಕರವಾಗಿ ಬರುತ್ತಿದೆ ಫ್ರೆಂಚರ ಮತ್ತು ಬ್ರಿಟಿಷರ ಸೇನೆಗಳು ರಾಶಿ ರಾಶಿಯಲ್ಲಿ ಸೆಲೊನಿಕಾದಲ್ಲಿ ಇಳಿದ ಸರ್ವಿಯಾದ ಸಹಾಯಕ್ಕೆ ಬರುತ್ತಿರುವವು.

ಬಲ್ಗೇರಿಯಾದ ಎರಡು ಸೇನಾಂಗಗಳು ನಿಶ್‌ದ ಆಗ್ನೇಯ ದಿಕ್ಕಿನಲ್ಲಿ ಸರ್ವಿಯನರೊಂದಿಗೆ ಕಾದಾಡುತ್ತಿರುವರೆಂತ ಗ್ರೀಸ್‌ನಿಂದ ಲಂಡನಿಗೆ ಬಂದ ತಂತೀವರ್ತಮಾನದಿಂದ ತಿಳಿದುಬರುತ್ತದೆ

ಫ್ರೆಂಚರ ಮತ್ತು ಇಂಗ್ಲಿಷರ ಸೇನೆಗಳು ಸರ್ವಿಯನರಿಗೆ ಬೆಲ್‌ಗ್ರೇಡ್ ಯುದ್ಧದಲ್ಲಿ ಸಹಾಯಮಾಡಿದ ವೃತ್ತಾಂತವು ನಿಶ್‌ದಿಂದ ಬಂದ ತಂತೀ ವರ್ತಮಾನದಲ್ಲಿರುವದು. ಶತ್ರುಗಳು ಬೆಲ್‌ಗ್ರೇಡ್ ಪಟ್ಟಣದಲ್ಲಿರುವ ಆಸ್ಪತ್ರೆಗಳು ದೇವಾಲಯಗಳನ್ನು ಸಹ ಲಕ್ಷ್ಯಕ್ಕೆ ತಾರದೆ ಪಟ್ಟಣದ ಮೇಲೆ ಸುಮಾರು ೫೦,೦೦೦ ಸಿಡಿಮದ್ದಿನ ತೋಟೆಗಳನ್ನು ಹಾಕಿರುವರು, ಹೀಗೆಯೆ ಸಮರವು ನಡಿಯುತ್ತಿದ್ದಾಗ ಫ್ರೆಂಚರು ಮತ್ತು ಇಂಗ್ಲಿಷರು ಸಹಾಯಕ್ಕೆ ಬಂದು ತಲ್ಪಿರುವರು. ಮಿತ್ರಕಡೆಯಿಂದ ಮೂರು ಲಕ್ಷ ಸೇನಿಕರ ಸೆಲೋನಿಕಕ್ಕೆ ಬಂದಿಳಿದಿರುವರಾಗಿ ವರ್ತಮಾನವಿರುವುದು.

ಅಕ್ಟೋಬರ ತಾ. ೧೫-೧೬.

ಪಶ್ಚಿಮ ರಣರಂಗದಲ್ಲಿ ಜರ್ಮನರು ಫ್ರೆಂಚರೊಡನೆ ಬಹಳ ಕಠಿಣವಾಗಿ ಕಾದಾಡಿ ಗಿವೆಂಚಿ ಎಂಬ ಕಾಡಿನ ಪ್ರಾಂತ್ಯಗಳಲ್ಲಿ ಒಂದೆರಡು ಕಂದಕಗಳ ಕೆಲವು ಅಂಶಗಳನ್ನು ಪಡದಿರುತ್ತಾರೆ ಇತರ ಕಡೆಗಳಲ್ಲಿ ಶತ್ರುಗಳಿಂದ ಮಿಸುಕಾಡಲು ಆಗಲಿಲ್ಲ

ಶತ್ರುಗಳ ಜೆಪಲಿನ್ ಆಕಾಶನಾವೆಗಳು ಲಂಡನಿನ ಮೇಲೆ ಹೋಗಿ ಬೊಂಬುಗಳನ್ನು ಎಸೆದರು

ಪೂರ್ವ ರಣರಂಗದಲ್ಲಿ ಸ್ಟ್ರೀಪಾ ನದಿಯ ಮೇಲೆ ಶತ್ರುಗಳ ಮೂರು ಸೇನಾಂಗಗಳು ಸೋಲಿಸಲ್ಪಟ್ಟಿವೆ. ಡ್ವಿನ್ಸ್ಕ್‌ದಿಂದ ಜರ್ಮನರನ್ನು ಹಿಂಧಕ್ಕೆ ಓಡಿಸಿರುವರು. ಜರ್ಮನರ ಸೇನೆಯಲ್ಲಿ ಬಹಳ ನಷ್ಟವುಂಟಾದ್ದರಿಂದ ತಮ್ಮ ಕೈತಪ್ಪಿ ಹೋದ ಸ್ಥಳಗಳನ್ನು ಹಿಂದಕ್ಕೆ ಪಡೆಯಲು ಬೇಕಾದ ಪ್ರಯತ್ನಗಳನ್ನು ಸಹ ಮಾಡಲು ಅಶಕ್ತರಾಗಿರುವರು.

ಸರ್ವಿಯದ ರಣರಂಗದಲ್ಲಿ ಓಸ್ಟ್ರಿಯನರ ಮತ್ತು ಜರ್ಮನರ ಸೇನೆಗಳಿರುವ ಸೇನಾನಿಕರಲ್ಲಿ ಕೈಸರರವರು ಬಂದಿರುವರು.

ರುಮೇನಿಯಾದವರು ಬಂದು ತಮ್ಮ ರಾಜ್ಯಕ್ಕೆ ಮುತ್ತಿಗೆ ಹಾಕದಂತೆ ಬಲ್ಗೇರಿಯದವರು ರುಮೇನಿಯಾ ಪ್ರಾಂತ್ಯದಲ್ಲಿರುವ ಡೆನ್ಯುಬ ನದಿಯ ತೀರದಲ್ಲಿ ಕಂದಕಗಳನ್ನು ಅಗಿಯುತ್ತಿರುವರಲ್ಲದೆ ನದಿಯಲ್ಲಿ ಮದ್ದಿನ ಸುರಂಗಗಳನ್ನು ಹಾಕಿಟ್ಟಿರುವರೆಂಬ ವರ್ತಮಾನವಿರುವದು

ಫ್ರಾನ್ಸಿನಲ್ಲಿ ಫ್ರೆಂಚ ಸರಕಾರದ ಮಂತ್ರಿಗಳ ಕೂಟವೂ, ಲಂಡನಿನಲ್ಲಿ ಬ್ರಿಟಿಷ ಸರಕಾರದ ಮಂತ್ರಿಗಳ ಕೂಟವೂ ಕೂಡಿದ್ದವು ಬಲ್ಕಾನ್ ಸಂಸ್ಥಾನಗಳಲ್ಲಿ ನಡೆಸತಕ್ಕ ಯುದ್ಧ ತಂತ್ರದ ವಿಚಾರವು ಈ ಸಭೆಗಳಲ್ಲಿ ಪರ್ಯಾಲೋಚಿಸಲ್ಪಟ್ಟಿತೆಂಬ ದಾಗಿ ತಿಳಿದುಬರುತ್ತದೆ.

ಅಕ್ಟೋಬರ ತಾ. ೧೬, ೧೭.

ಬೋಲ್ಟಿಕ್ ಸಮುದ್ರದಲ್ಲಿ ಬ್ರಿಟಿಷರ ಜಲಂತರ್ಗಾಮಿ ನಾವೆಯು ಜರ್ಮನರ ಎರಡು ಡಿಸ್ಟ್ರೊಯರ ನಾವೆಗಳನ್ನು ನಾಶಮಾಡಿ ಎರಡೆರಡು ಸಲ ಜರ್ಮನ ನೌಕಾಬಲವನ್ನು ಓಡಿಸಿಬಿಟ್ಟದೆ ಬ್ರಿಟಿಷ ಜಲಾಂತರ್ಗಾಮಿ ನಾವೆಗಳ ಜರ್ಮನರ ೫ ಹಡಗಗಳನ್ನು ಮುಳುಗಿಸಿಬಿಟ್ಟಿವೆ ಎಂತ, ಪೆಟ್ರೊಗ್ರೇಡ್ ಯುದ್ಧ ಸಮಾಚಾರದಲ್ಲಿರುವದು. ಜರ್ಮನಿಗೆ ಸ್ವಿಡನಿನಿಂದ ಲೋಹದ ಕಲ್ಲು ಇತ್ಯಾದಿಗಳನ್ನು ಒಯ್ಯುವ ಹಡಗಗಳು ಈ ರೀತಿ ನಾಶವಾಗಿ ಹೋಗುವದರಿಂದ ಸ್ವಿಡನಿನಿಂದ ಬರತಕ್ಕ ಹಡಗಗಳೆಲ್ಲವೂ ಅಂಜಿಕೆಯಿಂದ ಉಲಿಯಾ ರೇವಿನಲ್ಲಿ ನಿಂತ ಬಿಟ್ಟಿರುವವು ಬ್ರಿಟಿಷರ ಜಲಂತರ್ಗಾಮಿ ನಾವೆಗಳ ಈ ಉಪಟಳದಿಂದ ಜರ್ಮನಿಗೆ ವಿಶೇಷ ನಷ್ಟ ಉಂಟಾಗ ಬರೆಂತ ತೋರಿಬರುತ್ತದೆ

ಫ್ರೆಂಚರೂ, ಬ್ರಿಟಿಷರೂ ಪಶ್ಚಿಮ ರಣರಂಗದಲ್ಲಿ ಶತ್ರುಗಳನ್ನು ಹಿಮ್ಮೆಟ್ಟಿ ಮುಂದರಿಸುತ್ತಿರುವರು ಸಂಯುಕ್ತ ಸೇನೆಯವರು ಕೈವಶಮಾಡಿಕೊಂಡ ನೆಲೆಗಳನ್ನು ಹಿಂದಕ್ಕೆ ಪಡಿಯಲು ಪ್ರಯತ್ನಿಸುತ್ತಿರುವರು ಇಂಥಾ ಪ್ರಯತ್ನಗಳಲ್ಲಿ ಶತ್ರುಗಳು ಪ್ರತಿನಿತ್ಯವಲ್ಲ ಎಂಬಂತೆ ಒಂದೊಂದ ಸೇನಾಂಗವನ್ನು ಕಳಕೊಂಡು ಅಪಜಯವನ್ನು ಹೊಂದತ್ತಿದ್ದಾರೆ

ಇಂಗ್ಲಾಂಡದ ಪೂರ್ವ ಕರಾವಳಿಯ ಮೇಲೂ ಮತ್ತು ಲಂಡನ್ ಪಟ್ಟಣದ ಕೆಲವು ಭಾಗದ ಮೇಲೂ ಜೆಪಲಿನ್ ನಾವೆಗಳು ತೋಟೆಗಳನ್ನು ಹಾಕಿದ್ದರಿಂದ ಕೆಲವು ಮನೆಗಳು ನಾಶವಾಗಿ ಹೋಗಿವೆ. ಸಿವಿಲ್ ಮತ್ತು ಮಿಲಿಟರಿಯವರು ಕೂಡಿ ೪೦ ಜನರು ಸತ್ತು ಹೋಗಿರುವರು ಬಾಕಿ ಕೆಲವರು ಘಾಯಪಡೆದಿರುವರು.

ಬ್ರುಸೆಲ್ಸ್‌ದಲ್ಲಿ ಟ್ರೈನಿಂಗ್ ಶಾಲೆ ಉಪಧ್ಯಾಯಿಯಾಗಿದ ಮಿಸ್ ಎಡಿತ್‌ಕೆವಲ್ ಎಂಬವಳನ್ನು ಮೃತ್ಯುದಂಡನೆಯ ಶಿಕ್ಷೆಗೆ ಗುರಿಪಡಿಸಿ ಇದೇ ತಿಂಗಳ ತಾ ೧೩ಕ್ಕೆ ಈಕೆಯನ್ನು ಜರ್ಮನರು ಗಲ್ಲಿಕ್ಕೆ ಹಾಕಿ ಕೊಂದಿರುವರು ಫ್ರೆಂಚ ಮತ್ತು ಬ್ರಿಟಿಷರಲ್ಲಿ ಕೆಲವರಿಗೆ ಆಶ್ರಯ ಕೊಟ್ಟದ್ದೇ ಇವಳ ತಪ್ಪಾಗಿತ್ತು.

ಬಲ್ಕಾನ್ ಸಂಸ್ಥಾನದಲ್ಲಿ ಶತ್ರುಗಳು ಬೆಲ್‌ಗ್ರೇಡ್‌ನ್ನು ಹಿಡಿದಿರುವರೆಂತ ಕೆಲವು ತಂತೀವಾರ್ತೆಗಳಿಂದ ತಿಳಿದು ಬರುತ್ತದೆ ಬಲ್ಗೇರಿಯದ ಯೋಜಿಯನ್ ಸಮುದ್ರದ ಕರಾವಳಿಯನ್ನು ಬಿಟ್ಟು ತಟಸ್ಥ ದೇಶಗಳ ನಾವೆಗಳು ಹೊರಡಬೇಕೆಂದು ಮಿತ್ರರ ಕಡೆಯ ನೌಕಾ ದಳವಾಯಿಯಿಂದ ಅಪ್ಪಣೆ ಕೊಡಲಾಗಿರುವದು. ಬಲ್ಗೇರಿಯಾದ ಕರಾವಳಿಗೆ ಯಾರನ್ನೂ ಬರಲು ಬಿಡದ ಶಾಸನೆಯು ನಡಿಯುತ್ತದೆಂಬದಾಗಿ ತೋರಿಬರುತ್ತದೆ.

ಅಕ್ಟೋಬರ ತಾ. ೧೮-೧೯-೨೦.

ಬ್ರಿಟಿಷ ನೌಕಾಸೇನೆಯು ಬಲ್ಗೇರಿಯನ ಕರಾವಳಿಯನ್ನು ಮುತ್ತಿರವದು

ಸರ್ವಿಯದಲ್ಲಿ ರೈಲ್ವೆಗಳು ಶತ್ರುಗಳ ಕೈಸೇರದಂತೆ ಮಿತ್ರರ ಸೇನೆಗಳು ಸರ್ವಿಯನರ ಸೇನೆಯೊಂದಿಗೆ ಸ್ಕುಪಿ ವ್ಹಿಟ್ಹಾ ಮೊದಲಾದ ರಾಜ್ಯಗಳನ್ನು ಕಾಪಾಡುತ್ತಲಿರುವವು ಸಂಯುಕ್ತ ಸೇನೆಯವರು ಸರ್ವಿಯನರ ಬೆಂಬಲಕ್ಕೆ ಬಂದದ್ದರಿಂದ ಅಲ್ಲಿಯ ಸೇನಿಕರಲ್ಲಿ ವಿಶೇಷ ಉತ್ಸಾಹ ಉಂಟಾಗಿರುವದು.

ಇಟಲಿಯು ಬಲ್ಗೇರಿಯಾಕ್ಕೆ ವಿರೋಧವಾಗಿ ಯುದ್ಧವನ್ನು ಸಾರಿರುವದು.

ಉತ್ತರ ಹಿಂದೂಸ್ಥಾನ.

ಪ್ರೋ. ರಾಮಮೂರ್ತಿಯವರ ಅದ್ಭುತ ಶಕ್ತಿಯ ಆಟಗಳು ಈಚೆಗೆ ಪೂನಾ ಪಟ್ಟಣದಲ್ಲಿ ನಡಿಯುತ್ತಿವೆ. ಕಳೆದ ತಾ ೮ ಶುಕ್ರವಾರ ಅಲ್ಲಿಯ ಕ್ರೀಡದೊಳಗಿನ ಮಿ. ಎಲ್. ಮಾರ್ಕ್ವೆಟಿಸ್ ಎಂಬ ಇಂಜಿನಿಯರರು ೧೨ ಹೋರ್ಸ್ ಪೊವರಿನ ಮೋಟಾರನ್ನು ನಿಲ್ಲಿಸಿದರೆ ೨೦೦ ರೂ. ಕೊಡುವೆವು, ನಿಲ್ಲಿಸದಿದ್ದರೆ ಪ್ರೊ. ರವರು ೪೦೦ ರೂ. ಕೊಡಬೇಕೆಂದು ಪಂಥಕಟ್ಟಿದರು. ಆಟದ ಸಮಯದಲ್ಲಿ ಮಿ. ಇಂಜಿನಿಯರರು ಮೋಟಾರನ್ನು ತಂದರು. ಅದು ೧೨ಕ್ಕಿಂತಲೂ ಹೆಚ್ಚು ಹೋರ್ಸ್ ಪೊವರಿದ್ದಿತ್ತು. ಆದರೂ ಪ್ರೊ. ರವರು ಅದನ್ನು ನಿಲ್ಲಿಸಿದರು. ಆಗ ಮಿ. ಮಾರ್ಕ್ವೆಟಿಸರವರು ಪಂಥದ ೨೦೦ ರೂ. ಕೊಟ್ಟದಲ್ಲದೆ ಪ್ರೇಕ್ಷಕರಾಗಿ ಒಂದ ಬೇರೆ ಯೂರೋಪಿಯನ್ ಸದ್ಗೃಹಸ್ಥರೂ ಕೂಡ ಪ್ರೋ ರಾಮಮೂರ್ತಿಯವರ ಶಕ್ತಿಯನ್ನಭಿನಂದಿಸಿ ಬೇರೆ ಬೇರೆ ಇನಾಮುಗಳನ್ನು ಕೊಟ್ಟರು.

ಹಿಂದೂಸ್ಥಾನದ ವ್ಯಾಸರಾಯಗಳ ಪದವಿಗೆ ಲೋರ್ಡ್ ಬಿಕೆಂಪ್ ಮತ್ತು ಲೋರ್ಡ್ ಮರ್ರೆಯವರೊಂದಿಗೆ ಲೋರ್ಡ್ ಡರ್ಬಿಯವರು ಸಹ ಉಮೇದ್ವಾರರಾಗಿರಬಹುದೆಂಬದಾಗಿ ಮುಂಬಯಿಯಲ್ಲಿಯ ಒಂದು ವರ್ತಮಾನ ಪತ್ರಕ್ಕೆ ಲಂಡನಿನ ಬಾತ್ಮಿದಾರರೊಬ್ಬರು ಬರೆದಿರುವರು

ಈ ಯುದ್ಧಕಾಲದಲ್ಲಿಯೂ ಯುದ್ಧವು ಮುಗಿದ ಎರಡು ವರ್ಷಗಳ ನಂತರವೂ ಇಂಡಿಯನ್ ಸಿವಿಲ್ ಸರ್ವಿಸು ಪರೀಕ್ಷೆ ಮಾಡದೆ ಹಿಂದೂಸ್ಥಾನದಲ್ಲಿ ಸರಕಾರದ ಆಡಳಿತೆ ನಡಿಸುವ ಕಲೆಕ್ಟರ್ ಮೊದಲಾದ ಉದ್ಯೋಗದಾರರನ್ನು ವಿಲಾಯತಿಯಲ್ಲಿ ಆರಿಸಿ ಕಳುಹಿಸಿಕೊಡಲು ಅನುಕೂಲಕ್ಕೆ ಕಾನೂನು ಮಸೂದೆಯು ಹಿಂದೂಸ್ಥಾನದ ಅಂಡರ ಸೆಕ್ರೆಟರಿಗಳವರಿಂದ ಪಾರ್ಲಿಮೆಂಟ ಸಭೆಯ ಪ್ರಬೋಧನದ ಮುಂದೆ ಇಡಲಾಗಿರುವದು ಈ ಏರ್ಪಾಡನ್ನು ಜಾರಿಗೆ ತರುವುದರಿಂದ ಹೆಚ್ಚಿನ ಸಾಮರ್ಥ್ಯವಿಲ್ಲದವರು ಅಧಿಕಾರಿಗಳಾಗಿ ಹಿಂದೂಸ್ಥಾನಕ್ಕೆ ಬರುವ ಸಂಭವವು ಹೆಚ್ಚುವುದು ಮತ್ತು ವಿಲಾಯತಿಯಲ್ಲಿ ಆಗುವ ಇಂಥಾ ಚುನಾವಣೆ ಕ್ರಮದಿಂದ ದೇಶಿಯರಿಗೆ ಈ ಹುದ್ದೆಗಳು ದೊರಕುವ ಸಂಭವಗಳು ತೀರಾ ಕಡಮೆಯಾಗುವದು ಇಂಥಾ ಕಾಲದಲ್ಲಿ ಈ ಬದಲಾವಣೆಯನ್ನು ಮಾಡುವದಕ್ಕಿಂತ ಹಿಂದೂಸ್ಥಾನದಲ್ಲಿ ಸಿವಿಲ್ ಸರ್ವಿಸ್ ಪರೀಕ್ಷೆಯನ್ನು ಏರ್ಪಡಿಸಿ ಯೋಗ್ಯರಾದವರನ್ನು ಈ ಹುದ್ದೆಗಳ ಬಗ್ಗೆ ಈ ಮೂಲಕ ಚುನಾಯಿಸುವದು ಉಚಿತವೆಂತ ದೇಶಿಯ ಪ್ರಜಾವರ್ಗದ ಅಭಿಪ್ರಾಯವಾಗಿರುವದು ಆದ್ದರಿಂದ ಪ್ರಬೋಧನದಲ್ಲಿ ಮಂಜೂರಾತಿಗೆ ಬಂದಿರುವ ಕಾನೂನು ಮಸೂದೆಯನ್ನು ಹಾಗೆಯೇ ಬಿಟ್ಟುಬಿಡುವುದು ಉಚಿತವೆಂತ ಪ್ರಜಾ ಮುಂದಾಳುಗಳವರ ಅಭಿಪ್ರಾಯವಾಗಿರುವದು

ವ್ಯಾಸರಾಯಿ ಪ್ರಭುಗಳ ಕಾರ್ಯನಿರ್ವಾಹಕ ಸಭೆಯ ದೇಶೀಯ ಮೆಂಬರರಾದ ಬಹುಮಾನಪಟ್ಟ ಸರ್ ಆಲಿ ಇಮಾಮರವರು ತಮ್ಮ ಅಧಿಕಾರದ ಅವಧಿಯು ಮುಗಿದ ನಂತರ ಇದೇ ಡಿಸೆಂಬರ ತಿಂಗಳ ತಾ ೧೮ರಲ್ಲಿ ವಿಲಾಯತಿಗೆ ತೆರಳುವರು ವಿಲಾಯತಿಯಲ್ಲಿ ಆರು ಹಪ್ತೆಗಳವರೆಗೆ ಇದ್ದು ನಂತರ ಬರುವ ಫೆಬ್ರುವರಿ ತಿಂಗಳಲ್ಲಿ ಬಂಕಿಪುರಕ್ಕೆ ಬರುವರಾಗಿ ತಿಳಿದುಬರುತ್ತದೆ

ಹಿಂದೂ ವಿಶ್ವವಿದ್ಯಾಲಯದ ಪ್ರಾರಂಭವನ್ನು ಬನಾರಿಸದಲ್ಲಿಯ ಸೆಂಟ್ರಲ್ ಹಿಂದೂ ಕೋಲೇಜಿನಲ್ಲಿ ಮಾಡಲು ಬೇಕಾದ ಸ್ಥಳವು ಇರುವದೋ ಎಂಬುದನ್ನು ನೋಡಲಿಕ್ಕೆ ಬಹುಮಾನಪಟ್ಟ ಸರ್ ಹಾರ್ಕೋಟ್ ಬಟ್ಲರರವರು ಬನಾರಿಸಿಗೆ ಹೋಗಿದ್ದರು ಸ್ಥಳವು ಸಾಕಾಗದೆಂತ ಇವರು ಅಭಿಪ್ರಾಯಪಟ್ಟದ್ದರಿಂದ ನಾಗ್ವಾ ಎಂಬಲ್ಲಿ ಕಟ್ಟಡಗಳನ್ನು ಕಟ್ಟಿಸಿ ಮುಗಿಸಿದ ನಂತರ ೧೯೨೦ರಲ್ಲಿ ಈ ವಿದ್ಯಾಲಯವನ್ನು ಪ್ರಾರಂಭಿಸಬೇಕೆಂಬದಾಗಿ ನಿರ್ಣಯಿಸಿರುವರೆಂದು ತಿಳಿದು ಬರುತ್ತದೆ. ಸರ್. ಹಾರ್ಕೋಟ್ ಬಟ್ಲರರವರು ರೂ. ೨೦೦ನ್ನೂ ಮತ್ತು ಬಹುಮಾನಪಟ್ಟ ಶಾರ್ಪರವರು ರೂ. ೫೦೦ ಹಿಂದೂ ವಿಶ್ವವಿದ್ಯಾಲಯದ ಫಂಡಿನ ಸಹಾಯಾರ್ಥವಾಗಿ ಕೊಟ್ಟಿರುತ್ತಾರೆ.

ಪ್ರಕಟಣೆ.

ಉಟಾಕಮಂಡ್, ತಾರೀಖು 27ನೇ ಆಗಸ್ಟು 1915ನೇ ಇಸವಿ.

ನಂ. 25.—

ಇಂಡಿಯಾ ಗವರ್ನಮೆಂಟಿನವರ ಕ್ಲಪ್ತ ವಾಯಿದೆಗೆ ಸಂದಾಯವಾಗುವ ಸಾಲವು.

ಪೋಸ್ಟ್ ಆಫೀಸಿನ ಮುಖಾಂತರ ಜನರು ಚಂದಾದಾರರಾಗುವ ವಿಷಯವಾಗಿ ಏರ್ಪಟ್ಟ ಶರ್ತಗಳ ಕುರಿತು ಪ್ರಕಟಣೆ.

ಗವರ್ನಮೆಂಟಿನವರು ಈ ವರುಷದ ಸಾಲವನ್ನು ಒಂದು ಹೊಸ ವಿಧಾನದಲ್ಲಿ ಸೇಕಡಾ 4ರ ಬಡ್ಡಿಯಲ್ಲಿ ಎತ್ತುತ್ತಾರೆ. ಅದು 1923ನೇ ಇಸವಿಯ ನವಂಬರ್ ತಿಂಗಳೊಳಗಾಗಿ ಸಂಪೂರ್ಣವಾಗಿ ಮರುಪಾವತಿ ಮಾಡಲ್ಪಡುವದು, ಪರಂತು ಗವರ್ನಮೆಂಟಿನವರಿಗೆ ಇಷ್ಟವಿದ್ದರೆ 1920ನೇ ಇಸವಿಯ ಅಕ್ಟೋಬರ್ ತಿಂಗಳ ತರುವಾಯ ಯಾವಕಾಲದಲ್ಲಾದರೂ ಪಾವತಿ ಮಾಡಲ್ಪಡಬಹುದು.

2. ಕಲ್ಕತ್ತಾ, ಮದ್ರಾಸ್, ಬೊಂಬಾಯಿ ಮತ್ತು ಇತರ ದೊಡ್ಡ ಮಧ್ಯಸ್ಥಳಗಳಲ್ಲಿ ವಾಡಿಕೆಯಾದ ರೀತಿಯಲ್ಲಿ ದರಖಾಸ್ತುಗಳನ್ನು ಅಂಗೀಕರಿಸಿ 4½ ಕೋಟಿ ರೂಪಾಯಿ ಈ ಮೊದಲೇ ಎತ್ತಲ್ಪಟ್ಟಿರುವುದು, ಮತ್ತು ಇಷ್ಟರ ಮಟ್ಟಿಗೆ ಸದರೀ ಸಾಲವು ಈಗ ಭರ್ತಿಯಾಗಿದೆ. ಆದರೆ ಅದು ವಿನಾ ಸಾಲವನ್ನು ಸಣ್ಣ ಮೊಬಲಗುಗಳಲ್ಲಿ ಕೊಡಲು ಇಷ್ಟವುಳ್ಳ ಜನರಿಗೆ, ಅವರು ಸೇವಿಂಗ್ಸ್ ಬ್ಯಾಂಕು ಡಿಪಾಜಿಟರರಾಗಿದ್ದರೂ ಅಲ್ಲದಿದ್ದರೂ, ಸೇವಿಂಗ್ಸ್ ಬ್ಯಾಂಕು ಕೆಲಸವನ್ನು ನಿರ್ವಹಿಸುವ ಅತ್ಯಂತ ಸಮೀಪದ ಪೋಸ್ಟ್ ಆಫೀಸಿನ ಮುಖಾಂತರ ಚಂದಾಕೊಡಲು ಒಂದು ವಿಶೇಷ ಸಂದರ್ಭವು ಕೊಡಲ್ಪಟ್ಟಿದೆ.

ಹೇಗೆ ಚಂದಾದಾರರಾಗುವದೆಂಬುದು.

3. ಅಕ್ಟೋಬರ್ 30ನೇ ತಾರೀಖಿನವರೆಗೆ ಯಾವಕಾಲದಲ್ಲಾದರೂ ಟಪ್ಪಾಲ್ ಆಫೀಸಿನ ಮುಖಾಂತರ ಅರ್ಜಿಗಳನ್ನು ಮಾಡಬಹುದು.

4. ಅರ್ಜಿಗಳು ನೂರು ರೂಪಾಯಿ ಯಾ ಅದರ ಅಪವರ್ತ್ಯಗಳ ಬಗ್ಗೆ (ಎಂದರೆ ರೂ 100, 200, 300 ಈ ಮೇರೆಗೆ) ಮಾಡಲ್ಪಡಬೇಕು ಮತ್ತು ಯಾವನೊಬ್ಬ ಅರ್ಜಿದಾರನ ಸಂಗತಿಯಲ್ಲಿ 100 ರೂಪಾಯಿಗಳಿಗೆ ಕಡಿಮೆಯಾಗಿ ಮತ್ತು 5,000 ರೂಪಾಯಿಗಳಿಗೆ ಮೀರಿ ಇರಕೂಡದು.

ಸೂಚನಾ —ಒಬ್ಬ ಅರ್ಜಿದಾರನು ಟಪ್ಪಾಲ್ ಆಫೀಸಿನ ಮುಖಾಂತರ ಈ ಮೊದಲೇ ಸೇಕಡಾ 3½ ದರದ ಬಡ್ಡಿಯುಳ್ಳ ಪ್ರಾಮಿಸರಿ ನೋಟುಗಳನ್ನು ಪಡೆದಿರುತ್ತಾನಾದರೂ 5,000 ರೂಪಾಯಿಗಳವರೆಗೆ ಹೊಸ ಸಾಲಕ್ಕೆ ಅರ್ಜಿಮಾಡಬಹುದು.

5. ಅರ್ಜಿಮಾಡಲು ಅಪೇಕ್ಷಿಸುವ ಒಬ್ಬ ಮನುಷ್ಯನು ಇದರಡಿ ಕೊಟ್ಟಿರುವ ಫಾರ್ಮನ್ನು ಬರಾಯಿಸಬೇಕು, ಸದರೀ ಫಾರ್ಮನ್ನು ಸೇವಿಂಗ್ಸ್ ಬ್ಯಾಂಕು ಕೆಲಸವು ನಿರ್ವಹಿಸಲ್ಪಡುವ ಪ್ರತಿ ಒಂದು ಟಪ್ಪಾಲ್ ಆಫೀಸಿನಿಂದ ಸಹಾ ಪಡೆಯಬಹುದು. ಆತನು ಎಷ್ಟು ಮೊಬಲಗಿಗೆ ಅರ್ಜಿಮಾಡುತಾನೋ ಆ ಪೂರಾ ಮೊಬಲಗನ್ನು ಆಗಲೇ ಪಾವತಿ ಮಾಡಬೇಕು. ಆತನು ಒಬ್ಬ ಸೇವಿಂಗ್ಸ್ ಬ್ಯಾಂಕು ಡಿಪೋಜಿಟರಾಗಿದ್ದ ಪಕ್ಷದಲ್ಲಿ ಆತನು ತನ್ನ ಸೇವಿಂಗ್ಸ್ ಬ್ಯಾಂಕು ಲೆಕ್ಕದಲ್ಲಿರುವ ಮೊಬಲಗನ್ನು ಈ ಬಗ್ಗೆ ಉಪಯೋಗಿಸಬಹುದು, ಅಥವಾ ಆತನು ಹಣವನ್ನು ರೊಕ್ಕವಾಗಿಯೂ ಕೊಡಬಹುದು. ಅರ್ಜಿದಾರನು ಟಪ್ಪಾಲ್ ಆಫೀಸಿಗೆ ಸ್ವತಃ ಹೋಗಬಹುದು ಅಥವಾ ಒಬ್ಬ ನೌಕರನನ್ನು ಕಳುಹಿಸಲೂಬಹುದು. ಪಾವತಿ ಮಾಡಲ್ಪಟ್ಟ ಯಾವತ್ತೂ ಮೊಬಲಗುಗಳಿಗೆ ರಸೀದಿ ಕೊಡಲ್ಪಡುವುದು.

6. ಅರ್ಜಿದಾರನು ಪಾವತಿಮಾಡುವ ಪ್ರತಿ 100 ರೂಪಾಯಿಗಳ ಬಗ್ಗೆ ಅಷ್ಟು ಮೊಬಲಗಿನ ಗವರ್ನಮೆಂಟ್ ಪ್ರಾಮಿಸರಿ ನೋಟುಗಳು ಆತನಿಗೆ ಕೊಡಲ್ಪಡುವುವು.

ಪ್ರಾಮಿಸರಿ ನೋಟುಗಳ ತಾಬೆ

7. ನೋಟುಗಳನ್ನು ಅರ್ಜಿದಾರನು ತನ್ನ ಸ್ವಂತ ತಾಬೆಯಲ್ಲಿ ಇಟ್ಟುಕೊಳ್ಳಬಹುದು. ಅಥವಾ ಆತನಿಗೆ ಇಷ್ಟವಿದ್ದರೆ ಆತನ ಬಗ್ಗಾಗಿ ಅವು ಪೋಸ್ಟ್ ಆಫೀಸ್ ಅಧಿಕಾರಿಗಳ ತಾಬೆಯಲ್ಲಿ ಇಡಲ್ಪಡಬಹುದು. ಯಾವ ರೀತಿಯು ತನಗೆ ಇಷ್ಟವೆಂಬುದನ್ನು ಆತನು ಅರ್ಜಿಯ ಫಾರ್ಮನ್ನು ಬರಾಯಿಸುವಾಗಲೇ ಅದರಲ್ಲಿ ನಮೂದಿಸತಕ್ಕದ್ದು. ಆತನು ನೋಟುಗಳನ್ನು ತಾನೇ ಇಟ್ಟುಕೊಳ್ಳಲು ಅಪೇಕ್ಷಿಸುವದಾದರೆ ಅವು ಬಟವಾಡೆಗೆ ಸಿದ್ಧವಾದಾಗ ಆ ಕುರಿತು ಪೋಸ್ಟ್ ಆಫೀಸಿನವರು ಆತನಿಗೆ ತಿಳಿಯಪಡಿಸುವರು, ಮತ್ತು ಆತನು ಸ್ವತಃ ಹಾಜರಾದಲ್ಲಿ ಅವು ಆತನಿಗೆ ಕೊಡಲ್ಪಡುವವು. ಅವುಗಳನ್ನು ಟಪ್ಪಾಲ್ ಆಫೀಸಿನಲ್ಲಿಯೇ ಇಡಲು ಆತನು ನಿರ್ಣಯಿಸುವ ಪಕ್ಷದಲ್ಲಿ ಆತನು ಪುನಃ ಸ್ವತಃ ಹಾಜರಾಗಬೇಕೆಂದಿಲ್ಲಾ, ಆದರೆ ಟಪ್ಪಾಲ್ ಆಫೀಸಿನವರು ಅವು ತಕ್ಸೀರುತ್ತವೆ—ವ ಅವು ಆತನ ಬಗ್ಗಾಗಿ ತಾಬೆಯಲ್ಲಿಟ್ಟುಕೊಳ್ಳಲ್ಪಟ್ಟಿವೆ ಎಂಬುದನ್ನು ಕುರಿತು ಒಂದು ಸಮಾಚಾರ ಪತ್ರವನ್ನು ಸಕಾಲದಲ್ಲಿ ಆತನಿಗೆ ಕಳುಹಿಸಿಕೊಡುವರು. ಸದರೀ ನೋಟುಗಳನ್ನು ತಾನೇ ಇಟ್ಟುಕೊಳ್ಳಲು ಆತನು ಮುಂದೆ ಯಾವಾಗಲಾದರೂ ಅಪೇಕ್ಷಿಸುವುದಾದರೆ ಆಗ ಅವು ಆತನ ವಶಕ್ಕೆ ಕೊಡಲ್ಪಡುವುವು.

ಬಡ್ಡಿಯನ್ನು ಪಾವತಿಮಾಡೋಣ.

8. ಸಾಲಿಯಾನಾ ಸೇಕಡಾ 4ರ ದರದ ಬಡ್ಡಿಯು ಅರ್ಧ ವರ್ಷಕೊಮ್ಮೆ ಪಾವತಿ ಮಾಡಲ್ಪಡುವದು. ಎಂದರೆ ಪ್ರತಿ ವರ್ಷದ ಮೇ 31ನೇ ತಾರೀಖಿಗೆ ಸೇಕಡಾ 2ರಂತೆಯೂ ನವಂಬರ್ 30ನೇ ತಾರೀಖಿಗೆ ಸೇಕಡಾ 2ರಂತೆಯೂ ಸಲಾಯಿಸಲ್ಪಡುವದು. ಅರ್ಜಿಯ ತಾರೀಖಿನಿಂದ ಬರುವ ನವಂಬರ್ 30ನೇ ತಾರೀಖಿನ ವರೆಗಿನ ಭಿನ್ನಾಂಶದ ಬಗ್ಗೆ ಬಡ್ಡಿಯು ಪ್ರಾಮಿಸರಿ ನೋಟುಗಳನ್ನು ಅರ್ಜಿದಾರನು ಸ್ವತಃ ಇಟ್ಟುಕೊಳ್ಳುವದಾದರೆ ಅವುಗಳನ್ನು ಬಟವಾಡೆಮಾಡುವ ಕಾಲದಲಿ ನಗದಾಗಿ ಕೊಡಲ್ಪಡುವದು, ಅಥವಾ ಆತನು ನೋಟುಗಳನ್ನು ಪೋಸ್ಟ್ ಆಫೀಸ್ ಅಧಿಕಾರಿಗಳ ತಾಬೆಯಲ್ಲಿಯೇ ಇಡುವದಾದರೆ ಮುಂದಿನ ಕಲಮಿನಲ್ಲಿ ನಮೂದಿಸಿರುವ ಸೇವಿಂಗ್ಸ್ ಬ್ಯಾಂಕು ಲೆಕ್ಕದಲ್ಲಿ ಆತನ ಬಗ್ಗೆ ಜಮಾ ದಾಖಲುಮಾಡಲ್ಪಡುವದು.

ಉಡುಪಿ: — ಈ ತಾ. ೨೩ರಲ್ಲು ಕಾಡುಬೆಟ್ಟಿನಲ್ಲಿ ಒಬ್ಬ ಕೆಥೊಲಿಕ ಕ್ರೈಸ್ತರವಳು ತನ್ನ ಮನೆ ವಠಾರಕ್ಕೆ ಮೇವಿನ ಆಶೆಯಿಂದ ಬಂದಿದ್ದ ಕಾಡುಬೆಟ್ಟು ಸೀನಪ್ಪಯ್ಯ ಎಂಬವರ ಮನೆಯ ದನವನ್ನು ಗುದ್ದಲಿ (ಪಿಕ್ಕಾಸು) ಯಿಂದ ತಿವಿದಳಂತೆ. ದನವು ರಕ್ತವನ್ನು ಸುರಿಸುತ್ತಾ ಗುದ್ದಲಿ ನಾಟಿಕೊಂಡಿದ್ದಂತೆಯೇ ಓಡಿಬಂತು. ಇಷ್ಟು ಬರಿಯುವಾಗ ಕೈಕಂಪಿಸಲಿಕ್ಕೆ ಹತ್ತಿರುವದರಿಂದ ಆ ವಿಷಯವನ್ನು ಇಷ್ಟರಲ್ಲಿಯೇ ಬಿಟ್ಟುಬಿಡುತ್ತೇನೆ.

ಈ ತಾ ೧೬ನೇ ಶನಿವಾರ ಇಲ್ಲಿಯ ಶಾರದಾ ವಿಲಾಸ ಬಾಲಿಕಾ ಪಾಠಶಾಲೆಯಲ್ಲಿ ಶಾರದಾ ಪೂಜೆಯನ್ನೂ ನಾಲ್ಕನೇ ವಾರ್ಷಿಕೋತ್ಸವವನ್ನೂ ಬಹು ವಿಜೃಂಭಣೆಯಿಂದ ಆಚರಿಸಿದರು. ಇಲ್ಲಿಯ ಮಾನ್ಯ ಮುನ್ಸೀಫರವರೂ ತಹಸಿಲ್ದಾರರವರೂ, ಮೆಜಿಸ್ಟ್ರೇಟರವರೂ ಮ. ರಾ. ಪಿ ಶ್ರೀನಿವಾಸರಾವ್ ಬಿ. ಎ ಬಿ ಎಲ್, ರವರೂ ಮ. ರಾ ಕುಂಜೂರು ವ್ಯಾಸರಾಯರವರೇ ಮೊದಲಾದ ಸದ್ಗೃಹಸ್ಥರೂ ದಯಮಾಡಿದ್ದರು. ಮ. ಶ್ರೀನಿವಾಸರಾಯರು ಅಗ್ರಾಸನವನ್ನು ವಹಿಸಿದ್ದರು. ಬಾಲಿಕೆಯರು ಅನೇಕ ಗೀತೆಗಳನ್ನು ಹಾಡಿದರು. ಶಾಲಾ ರಿಪೋರ್ಟು ಓದಲ್ಪಟ್ಟಿತು. ಯಥೋಚಿತ ಭಾಷಣಗಳಾದ ತರುವಾಯ ಸದಸ್ಯರಿಗೆ ಫಲಪುಷ್ಪಾಹಾರಾದಿಗಳು ಹಂಚಲ್ಪಟ್ಟ ಮೇಲೆ ಸಭೆಯು ಮುಕ್ತಾಯವಾಯಿತು. ಈ ದಿವಸ ಓದಿದ ರಿಪೋರ್ಟಿನಿಂದ ಈಗ ಮೂರು ವರುಷಗಳಿಂದಲೂ ಮ. ಪಿ. ಶ್ರೀನಿವಾಸ ಶಾಸ್ತ್ರಿಗಳು ತನ್ನ ತನುಮನಧನವನ್ನರ್ಪಿಸಿ ನಡಿಸುತ್ತಾ ಬಂದಿದ್ದ ಈ ಪಾಠಶಾಲೆಯನ್ನು ೬೦ನೆ ಕಮಿಟಿಯ ಆಡಳ್ತೆಗೆ ಒಪ್ಪಿಸಿದ ವಿನಾ ಇದರ ಗ್ರಾಂಟು ನಿಲ್ಲಿಸಲ್ಪಡುವದಾಗಿ ನಿಷ್ಕಾರಣವಾಗಿ ಸರಕಾರದವರು ಅಭಿಪ್ರಾಯಪಟ್ಟದ್ದರಿಂದ ಉಪಾಯಾಂತರವಿಲ್ಲದೆ ಇಲ್ಲಿಯ ಸಂಸ್ಕೃತ ಶಾಲೆಯ ಆಡಳಿತೆ ಕಮಿಟಿಯವರಿಗೆ ಒಪ್ಪಿಸಿ ಕೊಡುವದೆಂತ ನಿಶ್ಚಯ ಮಾಡಿದ ಮೇಲೆ ಶಾಸ್ತ್ರಿಗಳು ವಾಸವಾಗಿರುವ ಮನೆಯನ್ನೇ ಬಿಟ್ಟುಕೊಡುವ ಪಕ್ಷಕ್ಕೆ ಶಾಲೆಯ ಆಡಳಿತೆ ವಹಿಸಿಕೊಳ್ಳುವದಾಗಿ ಸಭೆಯ ಕಡೆಯಿಂದ ಅಪ್ಪಣೆ ಕೊಡಿಸಿದರಂತೆ. ಇದು ನಿಜವಾಗಿದ್ದರೆ ನೂರಾರು ರೂಪಾಯಿ ಬೆಲೆ ಬಾಳುವ ಸಾಮಾನುಗಳ ಸಮೇತ ಏನೊಂದು ಪ್ರತಿಫಲವಿಲ್ಲದೆ, ಶಾಲೆಯನ್ನು ಒಪ್ಪಿಸಿ ಕೊಡುತ್ತೇನೆ, ನಡಿಸಬೇಕೆಂತ ಕೇಳಿಕೊಳ್ಳುವಾಗ, ವಾಸವಾಗಿದ್ದ ಮನೆಯನ್ನೇ ಬಿಟ್ಟುಹೋಗಬೇಕೆಂತ ಹೇಳಿದ್ದು ಯಾವ ನ್ಯಾಯವೆಂಬದು ತಿಳಿಯುದಿಲ್ಲ. ಸಂದರ್ಭಾನುಸಾರಗಳನ್ನು ನೋಡುವಾಗ ಶಾರದಾ ವಿಲಾಸ ಪಾಠಶಾಲೆಯು ಶಾರದಾಪೂಜಾ (ನವರಾತ್ರಿ) ಕಾಲದಲ್ಲಿ ಶಾರದಾ ಪೂಜೆಯನ್ನು ಮಾಡಿ, ಒಬ್ಬಳ ಮಗಳಾಗಿ, ಒಬ್ಬನ ಆರೈಕೆಯಲ್ಲಿದ್ದು, ಹೀಗಂತಳೆಂತ ಅನ್ನಿಸಿಕೊಂಡು, ಇನ್ನು ಬಹು ನಾಯಕರ ಅಧೀನಳಾಗಿ, ಹಲವು ತರದ ಬವಣೆಗಳನ್ನನುಭವಿಸುವದಕ್ಕಿಂತ ಶಾರದೆಯ ಪದವನ್ನೆ ಪ್ರಾಪ್ತಿಸಿದಳೆಂತ ತೋರುತ್ತದೆ. ಕಾಲಗತಿ, ಯಾರೇನು ಮಾಡಬಹುದು.

ಇದೇ ೨೨ನೇ ತಾರೀಕಿನ ಸ್ವದೇಶಾಭಿಮಾನಿಯ ಉಡುಪಿ ಬಾತಮಿಯಲ್ಲಿ ತೋರುವ "ವ್ಯಾಸಪೀಠದಲ್ಲಿ" ಎಂತ ಇರುವದನ್ನು "ಮಂಟಪದ" ಎಂತ ಓದಬೇಕು. ಮತ್ತು ಸದರಿ ಬಾತಮಿಯಲ್ಲಿ ನವರಾತ್ರಿ ಮಂಟಪದಲ್ಲಿ ಇರಿಸಿದ ವೇಣುಗೋಪಾಲಕೃಷ್ಣ ಪ್ರತಿಮೆ ಮೊದಲಾದ ಮಣ್ಣಿನ ಗೊಂಬೆಗಳನ್ನು ಮಂಟಪವನ್ನು ತಯಾರಿಸಿದ ವೃದ್ಧಪ್ರಾಯ ಗೋಪಾಲಭಟ್ಟ ಇವರು ತಯಾರಿಸಿದ್ದಲ್ಲವಾಗಿಯೂ ಮಠದ ಕಡೆ ಬೇರೆ ಜನರು ತಯಾರಿಸಿದ್ದಾಗಿಯೂ, ದ್ವಾರಪಾಲಕಸ್ಥಾನದಲ್ಲಿ ಇರಿಸಿದ್ದ ಎರಡು ವಿಜಾತಿಯ ಪರಗಳನ್ನು ಮಠಾಧಿಕಾರಿಗಳ ಅನುಮತಿಗೆ ವಿರೋಧವಾಗಿ ಮಂಟಪ ತಯ್ಯಾರಿಸಿದವರೇ ಇರಿಸಿದ್ದಾಗಿಯೂ ತಿಳಿದು ಬರುತ್ತದೆ.

ಶ್ರೀ ಕೃಷ್ಣಸೂಕ್ತಿಯು ಈ ತಿಂಗಳಲ್ಲಿ ತಿರಿಗಿ ಹೊರಟಿರುವದಾಗಿ ತಿಳಿದು ಬರುತ್ತದೆ. ಇನ್ನಾದರೂ ಇದು ಪ್ರತಿ ತಿಂಗಳಲ್ಲಿಯೂ ಕ್ರಮವಾಗಿ ಹೊರಟಿದ್ದರೆ ಚನ್ನಾಗಿತ್ತು.

ಮಂಗಳೂರು.

ತಿದ್ದುಪಡಿ ಕಳೆದ ಸಂಚಿಕೆಯಲ್ಲಿ ಪ್ರಕಟವಾದ ಮಂಗಳೂರು ವೃತ್ತಾಂತದಲ್ಲಿ "ಇಲ್ಲಿಯ ಗಣಪತಿ ಸೆಕೆಂಡರಿ ಶಾಲೆಯಲ್ಲಿ ಮಹಿಳಾ ಸಭೆಯವರ ಒಗ್ಗ" ಎಂಬದರ ನಂತರ ಮೈಸೂರಿನ ಮಹಾರಾಣಿ ಕೊಲೇಜಿನ ಸುಪರಿಂಟೆಂಡೆಂಟರಾದ ಮಿಸೆಸ್ ಶ್ರೀರಂಗಮ್ಮ ಎಂಬವರು ಒಂದು ಉಪನ್ಯಾಸವನ್ನು ಕೊಟ್ಟರು — ಎಂಬದನ್ನು ಸೇರಿಸಿಕೊಂಡು ಓದತಕ್ಕದ್ದು. ನಂತರ ಶಾಲೆಯ ವರ್ಧಂತಿಯು ಎಂಬದರ ಬದಲಾಗಿ ವಿಜಯಾದಶಮಿಯ ಉತ್ಸವ — ಎಂತ ತಿದ್ದಿ ಓದಬೇಕಾಗಿದೆ. ಈ ದಿನ ಶಾಲಾ ಮಕ್ಕಳು ಆಡಿದ ನಾಟಕದ ಅಂಕಗಳು ದುರ್ಗಾದಾಸ ನಾಟಕದಿಂದುಗಳ ಗಸಾಫಕೃತ ಕ್ಷತ್ರತೇಜಸಿಂದ ಪ್ರಸ್ತುತ ಆದಾದ ಮೇಲೆ ಶಾಲಾ ಉಪಾಧ್ಯಾಯರಿಂದ ಬರೆಯಲ್ಪಟ್ಟ "ಸ್ವಾಮಿ ಭಕ್ತಿ" ಎಂಬ ನಾಟಕವಾಗಿರುತ್ತದೆಂಬದಾಗಿ ತಿಳಿಸುತ್ತೇನೆ.

ಸರ್ಕಿಂಟಿನ ಮೇಲೆ ಹೋದ ಜಿಲ್ಲಾ ಕಲೆಕ್ಟರ ದೊರೆಗಳವರು ಈ ದಿನ ಬೆಳಿಗ್ಗೆ ಇಲ್ಲಿಗೆ ಬಂದು ತಲ್ಪಿದರು.

ಸ್ವರ್ಗಸ್ಥ ಅಮ್ಮೆಂಬಳ ಸುಬ್ರಾವ್ ಪೈಗಳವರ ಸ್ಮಾರಕ ದಿನವು ಇದೇ ನವೆಂಬರ ತಿಂಗಳ ತಾ ೧೯ರಲ್ಲಿ ಗಂಟೆಗೆ ಕೆನರಾ ಹೈಸ್ಕೂಲಿನಲ್ಲಿ ಆಚರಿಸಲ್ಪಡುವದು.

ಪುತ್ತೂರು ಫಿರ್ಕದ ರೆವಿನ್ಯೂ ಇನ್ಸ್‌ಪೆಕ್ಟರರಾಗಿರುವ ಪಿ. ಸಿ ವ್ಯಾಸರಾಯರು ಕಾಸರಗೋಡು ತಾಲೋಕಿನ ಕೆಲವು ಸ್ಥಳಗಳ ತನಖೆಯ ಸ್ಪೆಶ್ಯಲ್ ರೆವಿನ್ಯೂ ಇನ್ಸ್‌ಪೆಕ್ಟರರಾಗಿ ನೇಮಿಸಲ್ಪಟ್ಟಿರುತ್ತಾರೆ. ರಾ ಜಿ. ಶೇಷಗಿರಿ ಪ್ರಭುಗಳವರು ಪುತ್ತೂರು ಫಿರ್ಕಾ ರೆವಿನ್ಯೂ ಇನ್ಸ್‌ಪೆಕ್ಟರರಾಗಿ ನೇಮಿಸಲ್ಪಟ್ಟಿರುತ್ತಾರೆ.

ಪುತ್ತೂರಿನಲ್ಲಿರುವ ದಕ್ಷಿಣ ಕನ್ನಡದ ಸೆಂಟ್ರಲ್ ಕೊಓಪರೇಟಿವ್ ಬೇಂಕಿನ ವರುಷಾವಧಿ ಸಭೆಯು ಇಲ್ಲಿಯ ಕೊಸ್ಮೊಪೊಲಿಟನ್ ಕ್ಲಬ್ಬಿನಲ್ಲಿ ಕಳೆದ ಆದಿತ್ಯವಾರ ಬೆಳಿಗ್ಗೆ ಗಂಟೆ ೯ಕ್ಕೆ ಕೂಡಿತ್ತು.

ಆದಿತ್ಯವಾರ ದಿನವೇ ದಕ್ಷಿಣ ಕನ್ನಡ ಜಿಲ್ಲಾ ವಿದ್ಯಾಭಿವೃದ್ಧಿ ಸಂಘದ ಪರವಾಗಿ ಉಪಾಧ್ಯಾಯರ ಮತ್ತು ಇತರರ ಮಹಾ ಸಭೆಯು ಕೂಡಿತ್ತು. ಇಂಥಾದೊಂದು ಸಂಘವನ್ನು ನಿರ್ಮಿಸಬೇಕೆಂತ ಈ ಸಭೆಯಲ್ಲಿ ನಿರ್ಣಯಿಸಲ್ಪಟ್ಟಿರುತ್ತದೆ. ಸಂಘದ ರಚನೆಗೆ ಬೇಕಾದ ಕ್ರಮ ಇತ್ಯಾದಿಗಳನ್ನು ಮಾಡಲು ಒಂದು ಕಮ್ಮಿಟಿಯು ಈ ಸಭೆಯಲ್ಲಿ ಚುನಾಯಿಸಲ್ಪಟ್ಟಿದೆ.

ಈ ತಿಂಗಳ ತಾರೀಕು ೨೬ರಲ್ಲಿ ಕೂಡಿದ ಮುನ್ಸಿಪಲ್ ಕೌನ್ಸಿಲಿನ ಸಭೆಯಲ್ಲಿ ಈ ಪಟ್ಟಣದಲ್ಲಿ ರಾತ್ರಿ ಕಾಲ ಉರಿಸೋಣಾಗುವ ದೀಪಸ್ತಂಭಗಳಲ್ಲಿರುವ ಲಾಟೀನುಗಳನ್ನು ಕಂಟ್ರಾಕ್ಟದಾರರು ಸರಿಯಾಗಿ ಉರಿಸುತ್ತಾರೋ ಎಂಬುದನ್ನು ನೋಡಲಿಕ್ಕೆ ಮೂರು ತಿಂಗಳ ಅವಧಿಗೆ ಒಬ್ಬ ಇನ್ಸ್‌ಪೆಕ್ಟರನನ್ನು ನೇಮಿಸಿರುತ್ತಾರೆ. ಇದೇ ಸಭೆಯಲ್ಲಿ ಬೋಧಿನಿ ಎಂಬ ಮಾಸ ಪತ್ರಿಕೆಯ ಎರಡು ಪ್ರತಿಗಳನ್ನು ಮುನ್ಸಿಪಲ್ ಎಲಿಮೆಂಟರಿ ಶಾಲೆಗಳ ಉಪಯೋಗದ ಬಗ್ಗೆ ತರಿಸಬಹುದೆಂಬದಾಗಿ ನಿರ್ಣಯಿಸಲ್ಪಟ್ಟಿದೆ. ತಾಲೂಕು ಬೋರ್ಡಿನಲ್ಲಿ ಈ ಮಾಸ ಪತ್ರಿಕೆಯು ಅದರ ಕಷ್ಟವಾದ ಭಾಷಾ ಶೈಲಿಯ ಕಾರಣ ಎಲಿಮೆಂಟರಿ ಶಾಲೆಗಳ ಉಪಯೋಗಕ್ಕೆ ಉಪಯುಕ್ತವಲ್ಲವೆಂತಲೂ ಒಂದು ವೇಳೆ ಹಾಯರ್ ಎಲಿಮೆಂಟರಿ ಶಾಲೆಗಳಿಗೆ ಉಪಯುಕ್ತವಾಗಿದೆ ಎಂತ ಹೇಳಿದರೂ ಅಂಥಾ ಶಾಲೆಗಳು ಬೋರ್ಡಿನ ಆಡಳಿತೆಯಲ್ಲಿ ಒಂದೇ ಒಂದು ಇರುವದೆಂತಲೂ ಚರ್ಚೆ ನಡೆದು ಈ ವಿಷಯವನ್ನು ಇತ್ಯರ್ಥದ ಬಗ್ಗೆ ಮುಂದಿನ ಸಭೆಯಲ್ಲಿ ಇಟ್ಟಿದ್ದಾರೆಂಬದಾಗಿ ಕೇಳುತ್ತೇನೆ.

ಕುಂದಾಪುರ ತಾಲೂಕಿನಲ್ಲಿ ಆಲೂರಿನಿಂದ ಗುಜ್ಜಾಡಿಗೆ ಒಂದು ಮಾರ್ಗವನ್ನು ಹಾಕಿಸುವರೆ ರೂ. ೨೭೭೦ ಡಿಸ್ಟ್ರಿಕ್ಟ್ ಬೋರ್ಡಿನವರಿಂದ ಸೇಂಕ್ಷನ್ ಆಗಿಯದೆ.

ಕಕ್ಕೆಪದವಿನಿಂದ ಕುದ್ಮಲಮಜಲಿನ ವರೆಗೆ ಹಾಕಿಸೋಣಾಗ ಮಣ್ಣಿನ ಮಾರ್ಗದ ಕುರಿತು ಪುತ್ತೂರು ತಾಲೂಕ ಬೋರ್ಡಿನ ಪ್ರೆಸಿಡೆಂಟರು ರೂ 29 ರ ಅಂದಾಜು ಡಿಸ್ಟ್ರಿಕ್ಟ್ ಬೋರ್ಡ ಸಭೆಯಲ್ಲಿ ಮಂಜೂರಾಗಿರುವದು.

ಕಾರ್ಕಳ ಮತ್ತು ನಾರಾವಿ ರಸ್ತೆಗೆ ದಕ್ಷಿಣ ದಿಕ್ಕಿನಲ್ಲಿ ಸ್ಟೋನನ್ನು ಹಾಕಿಸುವರೆ ಬೇಕಾದ ಮೊಬಲಗಿನ ಅಂದಾಜು ಪಟ್ಟಿಯು ಸದರಿ ಡಿಸ್ಟ್ರಿಕ್ಟ್ ಬೋರ್ಡಿನ ಸಭೆಯಲ್ಲಿ ಮಂಜೂರು ಮಾಡೋಣಾಗಿದೆ.

ಪುತ್ತೂರಿನಲ್ಲಿ ಒಂದು ಸೆಕೆಂಡರಿ ಶಾಲೆಯನ್ನು ಸ್ಥಾಪಿಸುವ ವಿಷಯದಲ್ಲಿ ಉಪ್ಪಿನಂಗಡಿ ತಾಲೂಕಿನ ರಾಜಶ್ರೀಗಳಾದ ರವಿವರ್ಮ ನರಸಿಂಹರಾಜು, ಪರ್ಮಸ್ಥಳ ಚಂದಯ್ಯ ಹೆಗ್ಗಡೆ, ಬೈಂದೂರ ರಾಮರಾವ್, ಮೊಳಹಳ್ಳಿ ಶಿವರಾವ್ ಮೊದಲಾಗ ಗಣಪತಿರಾವ್ ಮೊದಲಾದ 34 ಜನ ಪ್ರಮುಖ ನಿವಾಸಿಕರು ದಸ್ತಕತ ಹಾಕಿರುವ ಕೆಳಗಿನ ಆಮಂತ್ರಣ ಪತ್ರವನ್ನು ಪ್ರಕಟಣೆಗೆ ಕಳುಹಿಸಿ ಕೊಟ್ಟಿರುವರು—

ಈಗಿನ ಕಾಲಸ್ಥಿತಿಯಲ್ಲಿ ಇಂಗ್ಲೀಷು ಭಾಷಾಜ್ಞಾನವು ಎಲ್ಲರಿಗೂ ಅತ್ಯಗತ್ಯವಾಗಿದೆಯಷ್ಟೆ. ಮುಂಚಿನ ಕ್ರಮಗಳ ಮೇರೆಗೆ ಹಳ್ಳಿಯ ಶಾಲೆಗಳಲ್ಲಿ ಇಂಗ್ಲೀಷು ಓದಬರಹವು ಸ್ವಲ್ಪಮಟ್ಟಿಗಾದರೂ ಮಕ್ಕಳಿಗೆ ಕಲಿಸಲ್ಪಡುತ್ತಿತ್ತು. ಆದರೆ ಇತ್ತಲಾಗೆ ಕ್ರಮಗಳನ್ನು ಬದಲಾಯಿಸಿದ ದೆಸೆಯಿಂದ ಕನ್ನಡ ಮತ್ತು ಇಂಗ್ಲೀಷು ಕಲಿಯುವುದೇ ಮೂಲಪಾಠಶಾಲೆಗಳು ಮತ್ತು ಸೆಕಂಡರಿ ಶಾಲೆಗಳೆಂ ಪ್ರತ್ಯೇಕವಾಗಿ ಏರ್ಪಾಡು ಮಾಡಿಯದೆ. ಮೂಲಪಾಠಶಾಲೆಗಳಲ್ಲಿ ಈಗ ಇಂಗ್ಲೀಷು ಕಲಿಸುವಂಥಾ ಕ್ರಮವಿಲ್ಲ. ಒಂದು ವೇಳೆ ಉಪಾಧ್ಯಾಯರು ಸ್ವಲ್ಪಸ್ವಲ್ಪ ಹೇಳಿಕೊಟ್ಟರೂ ಅದು ಕ್ರಮದಂತೆ ಅಲ್ಲ. ಮಕ್ಕಳ ಹೆತ್ತವರ ಸಮಾಧಾನಪಡಿಸುವುದಕ್ಕೋಸ್ಕರವಲ್ಲದೆ ಮುಂದಿನ ವಿದ್ಯೆಗೆ ಏನೇನೂ ಪ್ರಯೋಜನವಿಲ್ಲ. ಮೊದಲು ಪುತ್ತೂರಿನ ಏಳನೆಯ ದರ್ಜೆಯವರೆಗೆ ಇಂಗ್ಲೀಷು ಅಭ್ಯಾಸಮಾಡಿ ಆನಂತರ ಮಕ್ಕಳನ್ನು ಮಂಗಳೂರಿಗೆ ಕಳುಹಿಸಿ ವಿದ್ಯೆಯನ್ನು ಮುಂದರಿಸಬಹುದಿತ್ತು. ಆದರೆ ಈಗ ಪುತ್ತೂರಿನ ಶಾಲೆಯು ಕೂಡಾ ಹಳ್ಳಿಯ ಶಾಲೆಯಂತೆ ಮೂಲಪಾಠಶಾಲೆಯಾಗಿಯೇ ಇರಗೊಡಿಸಲ್ಪಟ್ಟದ್ದರಿಂದ ಮಕ್ಕಳು ಇಂಗ್ಲೀಷು ಪರೀಕ್ಷೆ ಪಾಸಾಗಬೇಕೆಂತ ಮನಸ್ಸು ಇದ್ದವರು ಅವರನ್ನು ನಾಲ್ಕನೆಯ ದರ್ಜೆಯಿಂದಲೇ ಮಂಗಳೂ

ಸೆಕೆಂಡರಿ ಶಾಲೆಗೆ ಕಳುಹಿಸಬೇಕಾಗುತ್ತದೆ. ಹೀಗಾಗಿ ಸಾಧಾರಣವಾಗಿ 8 ಯಾ 9 ವರ್ಷ ಪ್ರಾಯದ ಚಿಕ್ಕ ಮಕ್ಕಳನ್ನು ಮಂಗಳೂರಿಗೆ ಕಳುಹಿಸಿ ಅವರ ಕುರಿತು ಎಲ್ಲರೂ ಯೋಚನೆಪಡಬೇಕಾಗಿದೆ. ಮಂಗಳೂರಿನ ಆರೋಗ್ಯಸ್ಥಿತಿಯು ಯಾವಾಗಲೂ ಎಷ್ಟು ಕೆಟ್ಟದೆಂಬುದು ಎಲ್ಲರಿಗೂ ಗೊತ್ತಿದೆ. ಈಗ ಸಾಧಾರಣವಾಗಿ 25 ಮಂದಿ ಹುಡುಗರು ಈ ತಾಲೂಕಿನಿಂದ ಮಂಗಳೂರಲ್ಲಿ ಕಲಿಯುತ್ತಾ ಇದ್ದಾರೆ. ಇವರಲ್ಲಿ ಯಾರಿಗಾದರೂ ಸ್ವಲ್ಪ ಅಸ್ವಸ್ಥವೆಂತಾದರೆ ಗಾಬರಿಯಿಂದ ಹೆತ್ತವರು ಅಲ್ಲಿಗೆ ಓಡಬೇಕು. ಅಸ್ವಸ್ಥವೆಂದು ಅಲ್ಲಿ ಇರಗೊಡಿಸಲಿಕ್ಕೂ ಆಗುವುದಿಲ್ಲ. ಹಿಂದಿರುಗಿ ಕರತರಲಿಕ್ಕೂ ಆಗುವುದಿಲ್ಲ. ಈ ರೀತಿ ಅನೇಕ ತರದ ನಷ್ಟಕಷ್ಟಗಳನ್ನು ಅನುಭವಿಸಬೇಕಾಗುತ್ತದೆ. ಈ ಅವಸ್ಥೆಯನ್ನು ಚೆನ್ನಾಗಿ ಯೋಚಿಸಿದರೆ ಪುತ್ತೂರಿನಲ್ಲಿಯೇ ಒಂದು ಸೆಕೆಂಡರಿ ಶಾಲೆಯನ್ನು ಸ್ಥಾಪಿಸಿದರೆ ಈ ತಾಲೂಕಿನ ಎಲ್ಲಾ ಜನರಿಗೂ ಬಹಳ ಅನುಕೂಲವೆಂಬುದು ಸಿದ್ಧವಾಗುತ್ತದೆ. ಈ ಜಿಲ್ಲೆಯ ಇತರ ಪ್ರತಿಯೊಂದು ತಾಲೂಕಿನಲ್ಲಿಯೂ ಒಂದೊಂದು ಸೆಕೆಂಡರಿ ಶಾಲೆಯಾದರೂ ಇದೆ. ನಮ್ಮ ತಾಲೂಕಿನಲ್ಲಿ ಮಾತ್ರ ಒಂದಾದರೂ ಸೆಕೆಂಡರಿ ಶಾಲೆ ಕೂಡಾ ಇಲ್ಲದಿರುವಂಥಾದ್ದು ನಮಗೆ ಹೆಚ್ಚಿನ ಕುಂದಕವಾಗಿರುತ್ತದೆ. ಅಷ್ಟು ಮಾತ್ರವಲ್ಲ, ಆದರಿಂದಲೇ ನಾವು ಇಷ್ಟು ಕಷ್ಟಗಳನ್ನೆಲ್ಲಾ ಅನುಭವಿಸಬೇಕಾಗಿಯದೆ. ಶಾಲಾಸ್ಥಾಪನೆಯ ಬಗ್ಗೆ ನಾವೆಲ್ಲರೂ ಒಟ್ಟುಕೂಡಿ ನಮ್ಮಿಂದ ಕೂಡುವಷ್ಟು ಪ್ರಯತ್ನಗಳನ್ನು ಈಗಲೇ ಮಾಡದೇ ಇದ್ದರೆ ಇನ್ನು ಮುಂದಕ್ಕೆ ಒಂದಾದರೂ ಶಾಲೆಯಾಗುವ ಹಾಗಿಲ್ಲ ಮತ್ತು ಇಂಗ್ಲೀಷು ವಿದ್ಯೆಯು ಇಲ್ಲಿ ಕಡಿಮೆಯಾಗುತ್ತ ಒಂದು ಬಹಳ ಕಷ್ಟಕ್ಕೆ ಗುರಿಯಾಗುವುದರಲ್ಲಿ ಸಂದೇಹವಿಲ್ಲ. ಆದುದರಿಂದ ಈ ಕುರಿತು ತಕ್ಕ ಏರ್ಪಾಡುಗಳನ್ನು ಮಾಡುವುದಕ್ಕೆ ಆಲೋಚಿಸುವದು ಈ ತಾಲೂಕಿನ ಪ್ರಮುಖರಾದ ನಿವಾಸಿಕರ ಒಂದು ಸಭೆಯು ಪುತ್ತೂರು "ಟೌನ್ ಹಾಲ್" ಕಟ್ಟಡದಲ್ಲಿ ಬರುವ ನವೆಂಬರ ತಿಂಗಳ ತಾ. 14ನೇ ಆದಿತ್ಯವಾರ ಅಪರಾಹ್ನ 3 ಘಂಟೆಗೆ ಕೂಡುವುದೆಂತ ಆಲೋಚಿಸಿದ್ದೇನೆ. ಈ ಮಹಾಸಭೆಗೆ ನೀವು ನಿಮ್ಮ ಸ್ನೇಹಿತರನ್ನೊಡಗೂಡಿ ತಪ್ಪದೆ ಬಂದು ಈ ಕಾರ್ಯವು ಕೈಗೂಡುವಂತೆ ಸಹಾಯ ಮಾಡಬೇಕಾಗಿ ಅಪೇಕ್ಷಿಸುತ್ತೇವೆ. ಮ. ರಾ. ರಾ. ಪಪ್ಪು ಸೀತಾರಾಮಯ್ಯ ಅವರ್ಗಳವರು (ಡೆಪ್ಯುಟಿ ಕಲೆಕ್ಟರವರು) ಈ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸುವರೆ ಸಮ್ಮತಿಸಿರುತ್ತಾರೆ.

ಕಳೆದ ಹಪ್ತೆಯಲ್ಲಿ ಇಲ್ಲಿಯ ಡಿಸ್ಟ್ರಿಕ್ಟ ಪೋಲೀಸು ಸುಪರಿಂಟೆಂಡೆಂಟರವರ ಬಂಗಲೆಯಲ್ಲಿ ಸುಮಾರು ೬೦೦ ರೂಪಾಯಿ ಕ್ರಯ ಬಾಳುವ ಒಂದು ಪದಕವು ಕಳವಾಗಿರುವದಾಗಿ ತಿಳಿಯುತ್ತೇವೆ.

ಬಿಜೈಯಲ್ಲಿರುವ ರಿಚ್ಚಾರ್ಡ ಎಂಬವನು ತನ್ನ ಸಹೋದರಿಯ ಸುಮಾರು ೮ ರೂಪಾಯಿ ಕ್ರಯಬಾಳುವ ಶೀರೆಯನ್ನು ಕಳವು ಮಾಡಿ ಬಜಾರಿನಲ್ಲಿ ವಿಕ್ರಯಮಾಡುವಾಗ್ಯೆ ಪೋಲೀಸಿನವರು ಅನುಮಾನದ ಮೇಲೆ ಈತನನ್ನು ಕೈದುಮಾಡಿದರು. ಈ ಮೊಕದ್ದಮೆಯು ಇದೇ ತಿಂಗಳು ತಾ. ೨೫ರಲ್ಲು ಟೌನ್ ಮೇಜಿಸ್ಟ್ರೇಟ್ ಕೋರ್ಟಿನಲ್ಲಿ ತನಿಖೆಯಾಗಿ ತಪ್ಪು ಸಾಬೀತಾದ್ದರಿಂದ ಆತನಿಗೆ ೬ ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸಿದರು.

ಅನಾರ್ಕುಲದಿಂದ ಬಂದಿದ್ದ ಗಿರಿಯನ್ ಶೆಟ್ಟಿ ಎಂಬವನು ಮಂಗಳೂರು ಶ್ಯಾಹಾರ ಕಂಪನಿಕಚ್ಚೆಯಲ್ಲಿ ಒಂದು ಚಂಬು ಕಳವುಮಾಡಿದ್ದಾನಾಗಿ ಪೋಲೀಸಿನವರಿಂದ ಆಪಾದಿಸಲ್ಪಟ್ಟಿದ್ದನು. ಸದರಿ ಮೊಕದ್ದಮೆಯು ಇದೇ ತಿಂಗಳ ತಾರೀಕು ೨೧ಕ್ಕೆ ಟೌನ್ ಮೇಜಿಸ್ಟ್ರೇಟ್ ಕೋರ್ಟಿನಲ್ಲಿ ತನಿಕೆ ನಡೆದು ತಕ್ಕ ರುಜುವಾತು ಇಲ್ಲದ ಕಾರಣ ಮುದ್ದೆಯಾಲೆಯನ್ನು ಖುಲಾಸು ಪಡಿಸಿದರು.

ಕಾಪ್ರಿಗುಡ್ಡೆ ಬಳಿ ಜಾಕೋಬ್ ಬರ್ಬೋಜಾ ಎಂಬವನಿಗೆ ಸೋಡ ಫ್ಯಾಕ್ಟರ ಕೆಲಸದ ಜೋನ್ ಡಿ'ಸೋಜ, ಜುವಾಂವ್ ಸೋಜ ಮತ್ತು ಮರಿಯನ್ ಸೋಜ ಈ ಮೂವರು ಕೂಡಿ ಹೊಡೆದ ತಕ್ಸೀರಿನ ಮೊಕದ್ದಮೆಯಲ್ಲಿ ೨ನೇ ಕ್ಲಾಸ್ ಬೆಂಚ್ ಮೇಜಿಸ್ಟ್ರೇಟರವರು ೧ನೇಯವನಿಗೆ ೧೫ ರೂಪಾಯಿ ಜುರುಮಾನೆಯನ್ನೂ ೨ ಮತ್ತು ೩ನೇಯವನಿಗೆ ರೂಪಾಯಿ ೫ರಂತೆ ಜುರುಮಾನೆಯನ್ನೂ ವಿಧಿಸಿದಲ್ಲದೆ ಸದರಿ ಜುರುಮಾನೆಯಿಂದ ಮುದ್ದೈಗೆ ಕಂಪನ್ಸೇಶನ್ ಆಗಿ ರೂ ೧೦ನ್ನು ಕೊಡುವಂತೆ ಹುಕುಂ ಮಾಡಿರುತ್ತಾರೆ.

ಮಂಜಿ ಕಲಾಸಿ ಕುದ್ರೋಳಿ ಇದ್ದಿನಬ್ಬ ಎಂಬವನು ಕಲ್ಲಿಕೋಟೆ ಹಾಜಿ ಅಬ್ದುಲ್ ಕದೀರ ಎಂಡ್ ಬ್ರದರ್ಸ್ ರವರ ಬಾಬತು ಬೊಂಬಾಯಿಗೆ ಕಳುಹಿಸುವ ವಸ್ತ್ರದ ಗಂಟ್ರಿಗಳನ್ನು ಬಿ. ಐ. ಎಸ್. ಎನ್. ಕಂಪೆನಿಯ ಮೂಲಕ ಮಂಜೀ ಮೇಲೆ ಹಾಕಿ ಸ್ಟೀಮರಿಗೆ ತೆಗೆದುಕೊಂಡು ಹೋಗುವಾಗ್ಗೆ ಕಳವು ಮಾಡಿದ್ದನ್ನು ಸಬ್ ಇನ್ಸ್‌ಪೆಕ್ಟರರಾದ ಬಿ. ಪದ್ಮಪ್ಪನವರು ನೋಡಿ ಗಂಟ್ರಿಗಳ ಸಮೇತ ಆತನನ್ನು ಹಿಡಿದು ರಿಮಾಂಡಿನಲ್ಲಿ ಇಟ್ಟಿರುವರು.

ಮ. ರಾ. ರಾ. ಎ. ಸುಬ್ಬರಾವ್ ಡಿಸ್ಟ್ರಿಕ್ಟ್ ಪೋಲೀಸು ಸುಪರಿಂಟೆಂಡೆಂಟ್ ರೂ ೬, ಮ. ರಾ. ರಾ. ರಾವ್ ಸಾಹೇಬ ಕೃಷ್ಣನ್ನಾಯರ್ ರೂ. ೫, ಮ. ರಾ. ರಾ. ಎಮ್. ಗೋವಿಂದನ್ನಾಯರ್ ಡಿಪ್ಯುಟಿ ಸುಪರಿಂಟೆಂಡೆಂಟ್ ರೂ ೩, ಮ. ರಾ. ರಾ. ರಾವಬಹದ್ದೂರ್ ಸಿ. ಗೋಪಾಲನ್ನಾಯರ್ ರೂ ೫, ಮ. ರಾ. ರಾ. ಎಮ್. ಮುಕುಂದರಾವ್ ಮತ್ತು ನರಸಿಂಹಪ್ರಭು ರೂ ೩, ಮ. ರಾ. ರಾ. ಎಮ್. ನೌರೋಜಿ ರೂ. ೨, ಈ ಪ್ರಕಾರ ತಿಂಗಳು ಕಟ್ಟಿ ಚಂದಾ ಹಣವನ್ನು ಯುದ್ಧ ಫಂಡಿಗೆ ಕೊಡುತ್ತಿರುವರು.

ಕಳೆದ ವಾರ ಮುನಿಸಿಪಾಲಿಟಿಯಲ್ಲಿ 9 ಪ್ಲೇಗು ಮರಣಗಳಿದ್ದವು.

ಉಪಕಾರ ಸ್ಮರಣೆ:—ಮುಂಬಯಿಯಲ್ಲಿ ಇರುವ ಡಾಕ್ಟರ್ ಎ. ಎಲ್. ನಾಯರ್ ರವರು ಮೆಸ್ಸರ್ಸ್ ಪೊವೆಲ್ ಕಂಪೆನಿಯಲ್ಲಿ ಇರುವ ರಾ| ಕೆ. ಟಿ. ಆಳ್ವರ ಮುಖಾಂತರ ಶ್ರೀಜ್ಞಾನೋದಯ ಸಮಾಜದ ಭಂಡಾರಕ್ಕೆ ರೂಪಾಯಿ ೨೫ ದಾನವಾಗಿ ಕಳುಹಿಸಿರುತ್ತಾರೆ. ಇದಕ್ಕಾಗಿ ಸಮಾಜದವರು ಅತ್ಯಂತ ಕೃತಜ್ಞತೆಯಿಂದ ದಾತರನ್ನು ಈ ಮೂಲಕ ವಂದಿಸುತ್ತಾರೆ.

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟಿನಲ್ಲಿ.

ಒ. ಪಿ. ಅರ್ಜಿ ನಂಬ್ರ 51/1915

ಮಂಜಮ್ಮ ಶೆಟ್ಟಿ—ಅರ್ಜಿದಾರಳು.

1. ಅಂತಮ್ಮ ಶೆಟ್ಟಿ
2. ಶೇಷಿ ಶೆಟ್ಟಿ

} ಎದ್ರಿ ಅರ್ಜಿದಾರರು.

ಈ ಅರ್ಜಿ ಬಾಬಿನಲ್ಲಿ ಸರ್ವ ಜನರಿಗೆ ತಿಳಿಯಪಡಿಸುವದೇನಂದರೆ.—೧೯೧೫ನೇ ಇಸವಿ ಜನವರಿ ತಿಂಗಳಲ್ಲಿ ಕುಂದಾಪುರ ಕೋರ್ಟ ಚಕ್‌ಬಂದಿ ಒಳಗೆ ಬೇಲಿಸಿದ್ದ ಮೃತಪಟ್ಟ ಅರ್ಜಿದಾರಳ ಅಣ್ಣ ನಾಗ್ಯಶೆಟ್ಟಿಗೆ ಹೊರಗಿನಿಂದ ಬರತಕ್ಕ ಸಾಲದ ರೂಪಾಯಿ ೩೩೩—೬—೦ ವಸೂಲು ಮಾಡಲಿಕ್ಕೆ ತನಗೆ ವಾರಿಸ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರಳು ಕುಂದಾಪುರದ ಮುನ್ಸಿಫ ಕೋರ್ಟಿನಲ್ಲಿ ಸದರಿ ನಂಬ್ರಕ್ಕೆ ಅರ್ಜಿ ಕೊಟ್ಟಿರುತ್ತಾಳೆ. ಮತ್ತು ಆ ಅರ್ಜಿಯನ್ನು ೧೯೧೫ನೇ ಇಸವಿ ನವೆಂಬರ ತಾ. ೯ಕ್ಕೆ ತನಿಕೆಗೆ ಇಟ್ಟಿರುತ್ತದೆ. ಈ ಬಾಬಿನಲ್ಲಿ ಯಾರದ್ದಾದರೂ ಆಕ್ಷೇಪಣೆ ಇದ್ದರೆ ಹಾಜರು ಮಾಡಬಹುದು ಎಂತ ಈ ಮೂಲಕ ತಿಳಿಸಲಾಗುತ್ತದೆ.

ಕುಂದಾಪುರ, ತಾ 27-10-15 } **G. Manjunathaya.** *Pleader for Petitioner.*

ಡಾಕ್ಟರ್ ಪಿ. ಡಿ'ಲಿಮಾ.

ಎಂಬ

ದಂತ ವೈದ್ಯರು

ಇನ್ನು ಇಲ್ಲಿ ಸ್ವಲ್ಪ ಸಮಯದವರೆಗಿರುವರು. ಬಿದ್ದು ಹೋದ ಅಥವಾ ಹುಳು ಹಿಡಿದು ಹಾಳಾದ ಹಲ್ಲುಗಳ ಸ್ಥಳಗಳಲ್ಲಿ ಏನೂ ಕುಂದು ಕೊರತೆಗಳಿಲ್ಲದಂತೆ ಕೃತಕ ದಂತಗಳನ್ನು ತಯ್ಯಾರಿಸಿಡುವರು.

ದರಗಳು ಸುಲಭ.

ಮೈದಾನಿನ ಇದಿರುಗಡೆಯಲ್ಲಿರುವ ಮೆ| ಪರ್ಲ್‌ರ ಶೋಪಿನ ಮಾಳಿಗೆಯಲ್ಲಿ ದಂತ ಚಿಕಿತ್ಸೆಯು ಮಾಡೋಣಾಗುವದು.

ವಿಳಾಸ —

ಡಾಕ್ಟರ್ ಪಿ. ಡಿ'ಲಿಮಾ,
ದಂತ ವೈದ್ಯ,
ಪರ್ಲ್‌ರ ಶೋಪು, ಮಂಗಳೂರು.

ಜೀನಸು ಧಾರಣೆ. (ರಖಂ)

ಮುಷ್ಕಿ ಅಕ್ಕಿ	6—0—0	6—8—0
ಗಾಡಿ ರಾಸಿ ,,	5—4—0	5—6—0
ಗುಡ್ಡು ,,	5—10—0	5—14—0
ಅನ್ವಲ್ ಬೆಳ್ತಿಗೆ ,,	6—8—0	7—4—0
ಗುಡ್ಡು ಬೆಳ್ತಿಗೆ ,,	5—14—0	6—2—0
ರಂಗೂನು ಬೆಳ್ತಿಗೆ ಗೋಣಿ ೧ರ	10—8—0	10—12—0
ಗೋದಿ ಗೋಣಿ ೧ರ	13—0—0	13—8—0
ಹುರುಳಿ ಗೋಣಿ ೧ರ	6—6—0	7—12—0
ಕಡಲೆ ಗೋಣಿ ೧ರ ಬೊಂಬ್ಯ	9—4—0	9—12—0
ತೊಗರಿ ಗೋಣಿ ೧ರ	12—8—0	13—12—0
ತೊಗರಿ ಬೇಳೆ ಗೋಣಿ ೧ರ	12—8—0	15—8—0
ಉದ್ದು ಗೋಣಿ ೧ರ	11—8—0	12—0—0
ಊರುಬೆಲ್ಲ ಖಂಡಿ ೧ರ	...	75—0—0
ಉಪ್ಪು ಗೋಣಿ ೧ರ	3—6—0	3—8—0
ಕೊಬ್ರಿ ಖಂಡಿ ೧ರ	75—0—0	82—8—0
ಕೊಬ್ರಿಹಿಂಡಿ ಖಂಡಿ ೧ರ	20—0—0	21—0—0
ಎಳ್ಳಿಂಡಿ ಖಂಡಿ ೧ರ ಬೊಂಬ್ಯ	20—0—0	31—4—0
ಕೊಬ್ರಿ ಎಣ್ಣೆ ಮುಡ ೧ರ	6—7—0	6—14—0
ಎಳ್ಳೆಣ್ಣೆ ಮುಡ ೧ರ(ಕುರಾಸನ)	4—8—0	4—12—0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ರ	4—9—0	5—0—6
ಮೋರಿಸ್ ಸಕ್ಕರೆ ಮುಡ ೧ರ	4—7—0	4—8—0
ಕಾಫಿ ಖಂಡಿ ೧ರ	240—0—0	252—0—0
ಹೊಸಅಡಿಕೆಗೋಟು ಖಂಡಿ೧ರ	94—0—0	98—0—0
ಹೊಸ ಗೇರುಬೀಜ ಮುಡಿ ೧ರ		3—0—0
ಕಬ್ಬಿಣ ಖಂಡಿ ೧ರ		50—0—0
ತಾಂಬ್ರ ತಗಡು ಮುಣ ೧ರ		20—0—0
ತಾಂಬ್ರ ಪಾತ್ರಗಳು ಮುಣ ೧ರ		22—0—0
ಚೀನ ಬೆಳ್ಳಿ ಶೇರು ೧ರ		18—12—0
ಪಚ್ಚೆ ಹೆಸರು ಮುಡಿ ೧ರ	5—10—0	5—12—0

9. ಅರ್ಜಿದಾರನು ತನ್ನ ಪ್ರಾಮಿಸರಿ ನೋಟುಗಳನ್ನು ಪೋಸ್ಟ್ ಆಫೀಸ್ ಅಧಿಕಾರಿಗಳ ತಾಬೆಯಲ್ಲಿಯೇ ಇಡಲು ನಿರ್ಣಯಿಸಿದ ಪಕ್ಷದಲ್ಲಿ ಪೋಸ್ಟ್ ಆಫೀಸ್ ಅಧಿಕಾರಿಗಳು ಪ್ರತಿ ಅರ್ಧ ವರ್ಷಕೊಮ್ಮೆ ಆತನ ಬಗ್ಗಾಗಿ ಬಡ್ಡಿಯನ್ನು ಪಡಕೊಂಡು ಈ ಬಗ್ಗಾಗಿ ಆತನ ಹೆಸರಲ್ಲಿ ಇಡಲ್ಪಡುವ ಒಂದು ಸೇವಿಂಗ್ಸ್ ಬ್ಯಾಂಕು ಲೆಕ್ಕದಲ್ಲಿ ಜಮಾ ದಾಖಲ್ ಮಾಡುವರು. ಇದಲ್ಲದೆ ಈ ಮೇರೆಗೆ ಬಡ್ಡಿಯನ್ನು ಪಡೆದುಕೊಂಡಾಗಲೆಲ್ಲಾ ಪೋಸ್ಟ್ ಆಫೀಸಿನವರು ಆಯಾಕಾಲದಲ್ಲಿ ಆತನಿಗೆ ಆ ಕುರಿತು ತಿಳಿಯಪಡಿಸುವರು. ಈ ಕೆಲಸದ ಬಗ್ಗೆ ಯಾವ ಫೀಸೂ ಹೊರಿಸಲ್ಪಡಲಿಕ್ಕಿಲ್ಲ ಮತ್ತು, ಅರ್ಧ ವರ್ಷದ ಬಡ್ಡಿಯ ಮೊಬಲಗನ್ನು ಪಾವತಿಮಾಡುವಾಗ ಇನ್‌ಕಮ್‌ಟ್ಯಾಕ್ಸು ಯಾವದೂ ಅದರಿಂದ ವಜಾಮಾಡಲ್ಪಡಲಿಕ್ಕಿಲ್ಲ.

ಆತನು ಪ್ರಾಮಿಸರಿ ನೋಟುಗಳನ್ನು ಸ್ವತಃ ಇಟ್ಟುಕೊಳ್ಳುತ್ತಾನಾದರೆ ಅರ್ಧ ವರ್ಷದ ಬಡ್ಡಿಯ ಮೊಬಲಗು ಪಾವತಿಮಾಡುವ ಕಾಲದಲ್ಲಿ ವಾಡಿಕೆಯಂತೆ ಬಡ್ಡಿಯ ಮೊಬಲಿಗಿನಿಂದ ಇನ್‌ಕಮ್‌ಟ್ಯಾಕ್ಸು ವಜಾಮಾಡಲ್ಪಡುವದು.

ಪ್ರಾಮಿಸರಿ ನೋಟುಗಳನ್ನು ವಿಕ್ರಯಿಸೋಣ.

10. ಇದರಲ್ಲಿ ವಿವರಿಸೋಣಾದ ನಡವಳಿಕೆಯ ಮೇರೆಗೆ ಪೋಸ್ಟ್ ಆಫೀಸಿನ ಮುಖಾಂತರ ಕೊಂಡುಕೊಳ್ಳಲ್ಪಟ್ಟ ಈ ಹೊಸ ಸಾಲದ ಬಾಬತು ಪ್ರಾಮಿಸರಿ ನೋಟುಗಳನ್ನು ಹೊಂದಿರುವ ಒಬ್ಬ ಸೇವಿಂಗ್ಸ್ ಬ್ಯಾಂಕು ಡಿಪಾಜಿಟರನು ಯಾವ ಕಾಲದಲ್ಲಾದರೂ ಅವುಗಳನ್ನು ಯಾ ಅವುಗಳ ಯಾವದೊಂದು ಭಾಗವನ್ನು ವಿಕ್ರಯಿಸಲಿಕ್ಕೆ ಅಪೇಕ್ಷಿಸುತ್ತಾನಾದರೆ ಆತನ ಒಗ್ಗೆ ಪೋಸ್ಟ್ ಆಫೀಸಿನವರು ದಲಾಲಿ ಯಾ ಇತರ ಫೀಸುಗಳನ್ನು ಹೊರಿಸದೇನೆ ಅದರ ಕುರಿತು ವಿಲೇವಾರಿ ಮಾಡುವರು. ಇದರ ವಿಷಯ ಪೂರ್ಣ ಮಾಹಿತಿಯನ್ನು ಪೋಸ್ಟ್ ಆಫೀಸಿನಿಂದ ಯಾವ ಕಾಲದಲ್ಲಾದರೂ ಹೊಂದಬಹುದು.

ಅರ್ಜಿಯ ಫಾರ್ಮು.

ನಾದ ನಾನು 1915ನೇ ಇಸವಿಯ ಜುಲಾಯಿ 29ನೇ ತಾರೀಖಿನ ಇಂಡಿಯಾ ಗಜೇಟಿನ ವಿಶೇಷ (ಎಕ್ಸ್‌ಟ್ರಾರ್ಡಿನೆರಿ) ಸಂಚಿಕೆಯಾಗಿ ಪ್ರಾಯಿಷ್‌ಮಾಡಲ್ಪಟ್ಟ ಇಸ್ತಿಹಾರಿನಲ್ಲಿ ಪ್ರಕಟಿಸಲ್ಪಟ್ಟ ಕ್ಲಪ್ತವಾಯಿದೆಗೆ ಸಂದಾಯವಾಗುವ ಶೇಕಡಾ ನಾಲ್ಕರ ಬಡ್ಡಿಯ ಸಾಲದ ಬಗ್ಗೆ ರೂ ನ್ನು ಚಂದಾ ಕೊಡಲು ಈ ಮೂಲಕ ಅಪೇಕ್ಷಿಸುತ್ತೇನೆ.

ನಾನು ದರಖಾಸ್ತುಮಾಡಿದ ಸಾಲದ ಮೊಬಲಗು ಆಗಿರುವ ರೂ ನ್ನು ನೂರಕ್ಕೆ ನೂರರಂತೆ ಪೂರಾ ಇದರೊಡನೆ ವಣಿ ಇಟ್ಟಿರುತ್ತೇನೆ.

ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕಿನಲ್ಲಿ ನನ್ನ ಲೆಕ್ಕದಲ್ಲಿ ಜಮಾ ಇರುವ ಮೊಬಲಗಿನ ಪೈಕಿ ನೂರಕ್ಕೆ ನೂರರಂತೆ ನಾನು ದರಖಾಸ್ತುಮಾಡಿದ ಸಾಲದ ಮೊಬಲಗಿಗೆ ಸರಿಯಾಗಿರುವ ರೂ. ನ್ನು ಈ ಬಗ್ಗಾಗಿ ಉಪಯೋಗಿಸಿಕೊಳ್ಳಬಹುದಾಗಿ ನಾನು ಅಪೇಕ್ಷಿಸುತ್ತೇನೆ.

ನೂರಕ್ಕೆ ನೂರರಂತೆ ನಾನು ದರಖಾಸ್ತುಮಾಡಿದ ಸಾಲದ ಮೊಬಲಗಿನ ಪೈಕಿ ರೂ ಈ ಮೂಲವಾಗಿ ರೊಕ್ಕ ಇಟ್ಟಿರುತ್ತೇನೆ; ಮತ್ತು ಉಳಿದ ಮೊಬಲಗು ಎಂದರೆ ರೂ. ನ್ನು ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕಿನಲ್ಲಿ ನನ್ನ ಲೆಕ್ಕದಲ್ಲಿ ಜಮೆ ಇರುವ ಮೊಬಲಗಿನಿಂದ ಉಪಯೋಗಿಸಿಕೊಳ್ಳಬೇಕಾಗಿ ಅಪೇಕ್ಷಿಸುತ್ತೇನೆ.

(ಅನಾವಶ್ಯಕವಾದ ವಾಕ್ಯಗಳನ್ನು ಹೊಡೆದುಬಿಡತಕ್ಕದ್ದು.)

ನನ್ನಿಂದ ಅಂಗೀಕರಿಸಲ್ಪಟ್ಟ ಸಾಲದ ಮೊಬಲಗನ್ನು ನನ್ನ ಒಗ್ಗೆ ಪೋಸ್ಟ್ ಮತ್ತು ಟೆಲಿಗ್ರಾಫ್ ಇಲಾಖೆಯ ಅಕೌಂಟಂಟ್ ಜನರಲ್‌ರವರು ಇಟ್ಟುಕೊಳ್ಳಬಹುದಾಗಿ ಮತ್ತು ಆ ಬಾಬತು ಬಡ್ಡಿಯು ನನ್ನ ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕು ಲೆಕ್ಕದಲ್ಲಿ ಆಯಾ ವಾಯಿದೆಗೆ ಜಮಾ ದಾಖಲುಮಾಡಬೇಕಾಗಿ ನಾನು ಅಪೇಕ್ಷಿಸುತ್ತೇನೆ.

ನನ್ನಿಂದ ಅಂಗೀಕರಿಸಲ್ಪಟ್ಟ ಮೊಬಲಗಿನ ಒಗ್ಗೆ ಈ ಕೆಳಗಿನ * ಮೌಲ್ಯಗಳ ಪ್ರಾಮಿಸರಿ ನೋಟುಗಳು ನನಗೆ ಕೊಡಲ್ಪಡಬೇಕಾಗಿ ಅಪೇಕ್ಷಿಸುತ್ತೇನೆ.

(ಅನಾವಶ್ಯಕವಾದ ವಾಕ್ಯಗಳನ್ನು ಹೊಡೆದುಬಿಡತಕ್ಕದ್ದು.)

ಹೆಸರು

ವಿಳಾಸ

ರೀಖು 1915.

(ಅವಶ್ಯವಿದ್ದರೆ ಇಲ್ಲಿ ಕೊಟ್ಟಿರುವ ಫಾರ್ಮನ್ನೇ ಕತ್ತರಿಸಿ ಉಪಯೋಗಿಸಬಹುದು.)

ಏ. ಬಟ್ಟರ್‌ವರ್ತ್,

ಚೀಫ್ ಸೆಕ್ರೆಟರಿ.

ವ್ಯಾಸರಾಯ್ಯ ಪ್ರಭುಗಳ ಕಾರ್ಯನಿರ್ವಾಹಕ ಸಭೆಯ ಮೆಂಬರುತನದ ಚಾರ್ಜನ್ನು ಬಹುಮಾನಪಟ್ಟ ಸರ್ ಶಂಕರನ್ನಾಯರರವರು ಬರುವ ನವಂಬರ ತಿಂಗಳ ತಾ. ೨೦ರಲ್ಲಿ ವಹಿಸಿಕೊಳ್ಳುವರು.

~~~~~

ಮುಂಬಾಯಿಯಲ್ಲಿ ಇತ್ಯರ್ಥವಾದ ಒಂದು ದಾವೆಯಲ್ಲಿ ೧೨ ಲಕ್ಷ ರೂಪಾಯಿಗಳು ಧರ್ಮಕಾರ್ಯಗಳ ಬಗ್ಗೆ ವಿನಿಯೋಗಿಸಲ್ಪಡಬೇಕಾಗಿರುವದರಿಂದ ಈ ದಾವೆಯ ಡಿಕ್ರಿ ಪ್ರಕಾರ ಆ ಧರ್ಮಕಾರ್ಯಗಳ ಟ್ರಸ್ಟಿಗಳು ಮುಂಬಾಯಿಯಲ್ಲಿ ಇನ್ನೊಂದು ಮೆಡಿಕಲ್ ಕಾಲೇಜನ್ನು ಸ್ಥಾಪಿಸಬೇಕೆಂದು ಸೂಚಿಸಿರುವರು. ಮುಂಬಾಯಿ ಮುನ್ಸಿಪಾಲಿಟಿಯವರು ಆ ೧೨ ಲಕ್ಷ ರೂಪಾಯಿಗಳನ್ನು ತಕೊಂಡು ಎಡ್ವರ್ಡ ಚಕ್ರವರ್ತಿಗಳ ಹೆಸರ ಆಸ್ಪತ್ರೆಗೆ ತಾಗಿ ಒಂದು ಕಾಲೇಜನ್ನು ಏರ್ಪಡಿಸಬೇಕು. ಕಾಲೇಜನ್ನು ನಡೆಸಲು ಬೇಕಾಗಿರುವ ಖರ್ಚನ್ನು ಮುನ್ಸಿಪಾಲಿಟಿಯವರು ವಹಿಸಿಕೊಳ್ಳಬೇಕು. ಕಾಲೇಜಿನ ಪಂಡಿತರನ್ನಾಗಿ ಸರಕಾರದ ನೌಕರರಲ್ಲದ ಯೋಗ್ಯರಾದ ದೇಶೀಯ ಪಂಡಿತರನ್ನು ನೇಮಿಸಬೇಕು ಮತ್ತು ಸೇಟ್ ಗೋವರ್ಧನದಾಸ ಸುಂದರದಾಸ ಕಾಲೇಜು ಎಂಬ ಹೆಸರಿನಿಂದ ಈ ಸಂಸ್ಥೆಯನ್ನು ಕರೆಯಬೇಕು. ಟ್ರಸ್ಟಿಗಳು ತಮ್ಮ ಈ ಸೂಚನೆಗಳನ್ನು ನಗರದ ಮುನ್ಸಿಪಾಲಿಟಿಯವರಿಗೆ ತಿಳಿಸಿರುತ್ತಾರೆ.

~~~~~

ಈ ತಿಂಗಳ ತಾ. ೯ರಲ್ಲಿ ಅಂತ್ಯವಾಗುವ ವಾರದಲ್ಲಿ ಇಡೀ ಹಿಂದೂಸ್ಥಾನದಲ್ಲಿ ಪ್ಲೇಗು ಮಗಲಿದ ಒಟ್ಟು ರೋಗಿಗಳಲ್ಲಿ ೨೨೭೪ ಜನರು ಮೃತಪಟ್ಟಿರುವರು.

~~~~~

ದಕ್ಷಿಣ ಹಿಂದೂಸ್ಥಾನ.

~~~~~

ತಿರುವಾಂಕೂರು ಸಂಸ್ಥಾನದ ಮಹಾರಾಜರವರ ೫೦ನೇ ವರ್ಧಂತಿ ದಿನವು ಈ ತಿಂಗಳ ತಾ ೧೯ರಲ್ಲಿ ಆಚರಿಸಲ್ಪಟ್ಟಿತು. ಸಂಸ್ಥಾನದಲ್ಲಿರುವ ದೇವಸ್ಥಾನಗಳಲ್ಲಿ ರಾಜರವರಿಗೆ ದೀರ್ಘಾಯುಷ್ಯವನ್ನು ಬಯಸಿ ಪ್ರಾರ್ಥನೆಗಳು ನಡೆದುವು. ಅನೇಕ ಸಭೆಕೂಡಿ ಮಹಾರಾಜರವರನ್ನು ವಿನಯ ಪತ್ರಗಳಿಂದ ವಂದಿಸಿದರು. ಬಡಬಗ್ಗರಿಗೆ ಅನ್ನದಾನವು ಕೊಡಲ್ಪಟ್ಟಿತು. ಬ್ರಾಹ್ಮಣರನ್ನು ದಕ್ಷಿಣೆಗಳಿಂದ ತೃಪ್ತಿಗೊಳಿಸಿದರು.

~~~~~

ಪೂನಾದ ಫ್ರೊಫೆಸರ ಕರ್ವೆ ಯವರು ತೆರೆದ ಒಳಿತ ವಿಧವಾ ಮಂದಿರಕ್ಕೆ ಆದಾರ ಕೊಡುವುದಕ್ಕೆ ಪ್ರೋಫೆಸರ ಕರ್ವೆ ಬೆಳಗಿನ ಗಾಡಿಯಿಂದ ಮದ್ರಾಸಿಗೆ ಬಂದು ಅದೇ ದಿನ ರಾತ್ರಿ ಗಂಟೆ ೯ಕ್ಕೆ ಬಿಟ್ಟು ಹೋಗುವರು. ಮೈಸೂರು ಸಂಸ್ಥಾನದಿಂದ ಸಹಾಯ ದೊರೆಯುವ ಬಗ್ಗೆ ಅಲ್ಲಿಗೆ ಹೋಗುವರೆಂದು ತಿಳಿಯುತ್ತದೆ.

~~~~~

ಮದ್ರಾಸಿನ ಹಿಂದೂ ವರ್ತಮಾನ ಪತ್ರದ ಸಂಪಾದಕರಾದ ಮ. ರಾ. ರಾ. ಕಸ್ತೂರಿ ರಂಗಯ್ಯಂಗಾರರವರು ಬಹುಮಾನಪಟ್ಟ ಸರ್ ಶಂಕರನ್ನಾಯರರವರನ್ನು ಕಳೆದ ಶನಿವಾರ ರಾತ್ರೆ ಊಟಕ್ಕೆ ಆಮಂತ್ರಿಸಿ ಉಪಚರಿಸಿದರು. ಮದ್ರಾಸಿನ ಪತ್ರಗಳ ಮತ್ತು ಮಾಸಪತ್ರಿಕೆಗಳ ದೇಶೀಯ ಪ್ರತಿನಿಧಿಗಳೆಲ್ಲರಿಗೂ ಈ ಔತಣಕ್ಕೆ ಆಮಂತ್ರಣವಿತ್ತು. ಪತ್ರಪ್ರತಿನಿಧಿಗಳ ಮತ್ತು ಹಿಂದೂಸ್ಥಾನದ ಶ್ರೇಷ್ಠ ಸರಕಾರದಲ್ಲಿ ಮಹತ್ತಾದ ಪದವಿಯನ್ನು ವಹಿಸಿಕೊಳ್ಳುವ ಶಂಕರನ್ನಾಯರರವರ ಸಮ್ಮೇಳನದಂಥಾ ಕೂಟಗಳು ಬಹಳ ಅಪರೂಪವಾದವುಗಳು. ಹಿಂದೂ ಪತ್ರದ ಸಂಪಾದಕರಾದ ಕಸ್ತೂರಿ ರಂಗಯ್ಯಂಗಾರರವರು ಕಳೆದ ೩೦ ವರುಷಗಳಿಂದ ಸರ್ ಶಂಕರನ್ನಾಯರರವರ ಸ್ನೇಹಿತರಾಗಿರುವುದರಿಂದ ಅಪರೂಪ ಈ ಸಮ್ಮೇಳನವು ಸಾಧ್ಯವಾಯಿತೆಂಬುದಾಗಿ ತೋರುತ್ತದೆ.

~~~~~

ದಕ್ಷಿಣ ಕನ್ನಡ.

ಅರ್ಕುಳ. ಈ ತಿಂಗಳ ತಾ ೧೪ರಲ್ಲಿ ಇಲ್ಲಿಯ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ವಿದ್ಯಾರ್ಥಿಗಳ ರಕ್ಷಕರು ನೆರೆ ಗ್ರಾಮಗಳ ರೈತರು, ಸಮೀಪದ ಶಾಲೆಗಳ ಉಪಾಧ್ಯಾಯರು ಮೊದಲಾದವರ ಒಂದು ಸಭೆಯು ಸೇರಿತ್ತು. ಸಭೆಯ ಅಧ್ಯಕ್ಷಸ್ಥಾನವನ್ನು ಮ. ರಾ| ರಾ ಗುಣಪಾಲ ಸೆಟ್ಟರವರು ವಹಿಸಿಕೊಂಡಿದ್ದರು. ಶಾಲೆಯ ಹೆಡ್ ಮಾಸ್ತರರಾದ ರಾ. ಪಿ ನಾರಾಯಣ ಬಾಳಿಗರವರು ವಿದ್ಯೆಯ ವಿಶೇಷತ್ವವನ್ನು ಕುರಿತು ಮಾತಾಡಿ ಶಾಲೆಗೆ ಮಕ್ಕಳನ್ನು ಹೆತ್ತವರು ಕಳುಹಿಸಿ ಕೊಡುವದು ಅಗತ್ಯವೆಂತ ಸೂಚಿಸಿದರು. ತರುವಾಯ ಶಾಲೆಯ ಒಂದನೇ ಅಸಿಸ್ಟಾಂಟ ಮಾಸ್ತರರಾದ ಗುಂಡರಾಯರು, ಸ್ವರ್ಗಸ್ಥ ಗುಮ್ಮಣ್ಣ ಸೆಟ್ಟರು ರೂ ೫೦೦೦ವನ್ನು ಖರ್ಚುಮಾಡಿ ಈ ಶಾಲೆಯನ್ನು ಸ್ಥಾಪಿಸಿದ ವಿಷಯವನ್ನೂ ಈಗಿನ ಶಾಲಾ ಮೆನೇಜರರವರು ಮಹನ್ಮದಿ ಮತ್ಸರಿಗೂ ಬಡವರಿಗೂ ೬ನೇ ಕ್ಲಾಸಿನ ವರೆಗೆ ಸಂಬಳ ಮಾಫಿಯಿಂದ ಕಲಿಸಲು ಬಿಡುವ ಔದಾರ್ಯವನ್ನೂ ಸಭಿಕರಿಗೆ ತಿಳಿಯ ಹೇಳಿ ಗ್ರಾಮಸ್ಥರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಿ ಕೊಟ್ಟು ಶಾಲಾ ಸ್ಥಾಪಕರ ಮತ್ತು ಮೆನೇಜರರ ಔದಾರ್ಯವು ವ್ಯರ್ಥವಾಗಿ ಹೋಗದಂತೆ ನೋಡಿಕೊಳ್ಳಬೇಕಾಗಿ ಹೇಳಿದರು. ನಂತರ ಸಭೆಯು ಮುಗಿಯಿತು.

~~~~~

ವಿಟ್ಲ. ಇಲ್ಲಿಯ ಬೋರ್ಡ ಎಲಿಮೆಂಟರಿ ಶಾಲೆಯಲ್ಲಿ ಇದೇ ಕಳೆದ ತಾ ೬ನೇ ರವಿವಾರ ಮಧ್ಯಾಹ್ನ ಸುಮಾರು ೧೧ ಘಂಟೆಗೆ ವಿದ್ಯಾರ್ಥಿಗಳಿಂದಲೂ ಶಾಲಾ ಮಾಸ್ತರುಗಳಿಂದಲೂ ಶ್ರೀ ಸರಸ್ವತಿ ಪ್ರಾರ್ಥನೆಯನ್ನು ಗಾಯನ ಕೀರ್ತನದಿಂದಲೂ, ಉಪನ್ಯಾಸಗಳಿಂದಲೂ ನಡೆಸಿ ಈಗ ನಡೆಯುವ ಯುದ್ಧದಲ್ಲಿ ನಮ್ಮ ಸಾಮ್ರಾಜ್ಯ ಸರಕಾರಕ್ಕೆ ಜಯವು ಸಿಕ್ಕುವ ಹಾಗೆ ಪ್ರಾರ್ಥನೆ ಮಾಡಿದ್ದಾಯಿತು.

ಇಲ್ಲಿ ಹುಚ್ಚುನಾಯಿಗಳ ಉಪದ್ರವು ಬಹಳ ವಿಶೇಷವಾಗಿಯದೆ. ಈ ವಿಷಯ ಪೋಲಿಸರು ಸಿಗಾ ಕೊಡುವದು ಅಗತ್ಯವಾಗಿಯದೆ.

~~~~~

ಪುತ್ತೂರು:—ಇಲ್ಲಿಯ ಟೌನಿನ ನಿವಾಸಿಕರಿಗೆ ಟೌನಿನ ಕಟ್ಟಿಗೆ ಬಾರದೆ ಅಕ್ಕಿಯ ಕ್ರಯ ಏರುತ್ತಿರುವ ಹಾಗೆ ಕಟ್ಟಿಗೆ ಕ್ರಯ ಏರಿಹೋಗಿ ಸಂಕಷ್ಟಪಡುತ್ತಾರೆ ರೆವಿನ್ಯ ಕಾಡುಗಳಿಂದಾಗಲಿ, ಕುಮ್ಕಿಯಿಂದಾಗಲಿ, ಕಟ್ಟಿಗೆ ಕಡಿಯುವರೆ ಪರ್ಮಿಟ್ ಅಪೇಕ್ಷಿಸಿದಲ್ಲಿ ಇಲ್ಲಿಯ ತಾಲೂಕು ಖಾವಂದರವರು ನಿರಾಕರಿಸುವದರಿಂದ ತಮಗೆ ಅವರವರ ಮನೆ ಉಪಯೋಗಕ್ಕೆ ರೆವನ್ಯು ಕಾಡಿನಿಂದ ಕಟ್ಟಿಗೆ ಕಡಿದು ತರುವರೆ ಪರ್ಮಿಟ್ ಕೊಡಿಸಬೇಕಾಗಿ ಇಲ್ಲಿಯ ಟೌನಿನ ನಿವಾಸಿಕರು ಕೋರ್ಟು ವಕೀಲರು ಬೇಸಾಯಗಾರರು ಮುಂತಾಗಿ ಇಲ್ಲಿಯ ರೆವನ್ಯು ಡಿವಿಜನಲ್ ಆಫೀಸರವರಿಗೆ ಮನವಿಮಾಡಿಕೊಂಡಿರುವರು.

ಮೆ| ಸಿ. ಡಿ. ಹಟ್ ದೊರೆಗಳವರು ಪೊರೆಷ್ಟ ಎಕ್ಸಸ್ಟ್ರಾ ಅಸಿಸ್ಟಾಂಟ ಕನ್ಸರವೇಟರಾಗಿ ನೇಮಕಪಟ್ಟು ಇಲ್ಲಿಗೆ ಬಂದಿರುತ್ತಾರೆ.

ಇಲ್ಲಿ ಕೆಲವು ದಿವಸಗಳಿಂದ ಬಿಟ್ಟ ಮಳೆಯು ಪುನಹ ಆಕಾಶದಲ್ಲಿ ಮೋಡಗಳು ಕಾಣಲಿಕ್ಕೆ ಆರಂಭಿಸಿ ಮಳೆ ಪ್ರಾರಂಭಕ್ಕೆ ತೊಡಗಿಯದೆ. ಬೆಳೆ ಕಟಾವಿನ ಕೆಲಸ ಮುಗಿಯುವಷ್ಟರೊಳಗೆ ಮಳೆ ಆರಂಭಿಸಿದರಿಂದ ಸಾವಕಾರರಿಗೆ ಅಕ್ಕಿಯ ಕ್ರಯ ಏರಿಸಲಿಕ್ಕೆ ಆಸ್ಪದ ಉಂಟಾಯಿತು.

ಪುತ್ತೂರು ಶ್ರೀ ಶಾರದಾ ವಾಚಕ ಮಂದಿರದ ಅಷ್ಟಮ ವರ್ಷದ ವರ್ಧಂತಿ ಸಮಾರಂಭವು ಇಲ್ಲಿಯ ಟೌನ ಹೋಲಿನಲ್ಲಿ ಇದೇ ತಿಂಗಳ ತಾ. ೧೩ನೇ ಆದಿತ್ಯವಾರ ಸಾಯಂಕಾಲ ಘಂಟೆ ೩ಕ್ಕೆ ಪ್ರಾರಂಭವಾಯಿತು. ಮಾಜೀ ಶಾಲಾ ಅಸಿಸ್ಟೆಂಟ್ ಇನ್ಸ್‌ಪೆಕ್ಟರವರಾದ ರಾಯ ಬಹದೂರ ಎಮ್ ರಘುನಾಥರಾವ್‌ರವರು ಸಭಾಧ್ಯಕ್ಷಸ್ಥಾನವನ್ನಲಂಕರಿಸಿದ್ದರು. ಸಭೆಗೆ ಇಲ್ಲಿಯ ಡಿಪ್ಯುಟಿ ಕಲೆಕ್ಟರ್‌ರವರೂ, ಡಿಸ್ಟ್ರಿಕ್ಟ ಮುನ್ಸೀಫರೂ, ಇನ್ನೂ ಅನೇಕ ಮಾನ್ಯ ಗೃಹಸ್ಥರೂ ದಯಮಾಡಿಸಿದ್ದರು. ಕಾರ್ಯದರ್ಶಿಯು ಮಂದಿರದ ಅಷ್ಟಮ ವರ್ಷದ ವೃತ್ತಾಂತವನ್ನು ಸಭೆಯಲ್ಲಿ ಓದಿ ಹೇಳಿದರು. ಅನಂತರ ಬೋಧಿನಿಯ ಸಂಪಾದಕರಾದ ಶ್ರೀಯುತ್. ಎಮ್. ಎನ್ ಕಾಮತರವರು ಸರ್ ರವೀಂದ್ರನಾಥ ಠಾಕೂರರವರ ಲೋಕಪ್ರಸಿದ್ಧವಾದ "ಗೀತಾಂಜಲಿಯು" ಕುರಿತು ಬಹಳ ಚಲೋದಾಗಿ ಭಾಷಣಮಾಡಿದರು.

ಶ್ರೀಯುತ್ ಕಾಮತರವರ ಭಾಷಣವು ಮುಗಿದನಂತರ ಸಭಾಧ್ಯಕ್ಷರು "ವಾಚಕ ಮಂದಿರಗಳು, ಅವುಗಳ ಉಪಯೋಗ" ಎಂಬುದರ ಕುರಿತು ಬಹಳ ಸುರಸವಾಗಿ ಭಾಷಣ ಮಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮುಖ್ಯವಾಗಿ—ಪುತ್ತೂರಲ್ಲಿ ಸ್ಥಾಪಿತವಾದ ಈ ವಾಚಕ ಮಂದಿರದಂತೆಯೇ ನಮ್ಮ ಜಿಲ್ಲೆಯ ಹಳ್ಳಿಪಳ್ಳಿಗಳಲ್ಲಿ ವಾಚನಾಲಯಗಳನ್ನು ಸ್ಥಾಪಿಸಿ ಜನರು ಏಕೀಭಾವದಿಂದ, ಪುಸ್ತಕಗಳನ್ನೂ, ವರ್ತಮಾನ ಪತ್ರಗಳನ್ನೂ ತರಿಸಿ ಓದಿ, ಓದಿದ್ದನ್ನು ಆಗಾಗ್ಗೆ ಉಪನ್ಯಾಸಗಳ ಮೂಲಕ ವೃದ್ಧಿಯಾಗುವಂತೆ ಪ್ರಯತ್ನಿಸಿದರೆ ಮುಂದೆ ಸಾಮಾಜಿಕ ಕಾರ್ಯಗಳನ್ನು ಅವಲಂಭಿಸುವುದರಲ್ಲಿ ನಾವೂ ಸಹಾ ಮುಂದಾಳುಗಳಾಗಿ ನಿಲ್ಲುವೆವೆಂಬುದಕ್ಕೆ ಲೇಶಮಾತ್ರವೂ ಅನುಮಾನವಿಲ್ಲ" ಎಂದು ಮುಂತಾಗಿ ಅಪ್ಪಣೆ ಕೊಡಿಸಿದರು. ಅಲ್ಲದೆ ಮಂದಿರಕ್ಕೆ ಒಂದು ಯೋಗ್ಯವಾದ ಕಟ್ಟಡವು ಅಗತ್ಯವೆಂದೂ, ಈ ಜನೋಪಕಾರವಾದ ಕಾರ್ಯಕ್ಕೆ ಉದಾರ ಮನಸ್ಸಿನ ಮಹನೀಯರೆಲ್ಲರೂ ಮುಂದರಿಸಿ ಒಂದು ಸಹಾಯಮಾಡಬೇಕೆಂಬುದಾಗಿಯೂ ಹೇಳಿದರು. ಅನಂತರ ಅಧ್ಯಕ್ಷರ ಹಾಗೂ ಭಾಷಣಕರ್ತರ ಶ್ರಮದ ಬಗ್ಗೆ ಸಭೆಯ ಕಡೆಯಿಂದ ಮ| ರಾ| ರಾ| ಬಿ. ಆನಂದರಾಯರವರು ವಂದನೆಗಳನ್ನು ತಿಳುಹಿಸಿದರು. ಗಾಯನ ನಡೆದು, ಪುಷ್ಪ, ತಾಂಬೂಲ ಹಂಚಿದನಂತರ ಸಭೆಯು ಮುಕ್ತಾಯವಾಯಿತು.

~~~~~

ಉಡುಪಿ:— ನವರಾತ್ರಿ ಕಾಲದಲ್ಲಿ ಶ್ರೀ ಕೃಷ್ಣ ಮಠದಲ್ಲಿ ಶಾರದಾ ಪೂಜಾ ಉದ್ದಿಶ್ಯ ಬಹು ಸೊಗಸಾಗಿ ಮಂಟಪವನ್ನು ಮಾಡಿಸಿದ್ದರು. ಇದನ್ನು ತಯಾರು ಮಾಡಿದ ಪುತ್ತೂರಿಯ ಗೋಪಾಳಭಟ್ಟ ಎಂಬವರೂ ಅಲ್ಲಿ ಮಣ್ಣಿನಿಂದ ಮಾಡಿ ಇಟ್ಟಿದ್ದ ಗೊಂಬೆಗಳಲ್ಲಿ ವೇಣುಗೋಪಾಲ ಕೃಷ್ಣ ಪ್ರತಿಮೆ, ಬ್ಯಾಂಡು ಆಕಳು, ಕರು, ಮತ್ತೊಂದು ಸರ್ಪ ಇಷ್ಟು ಬಹು ಅಂದವಾಗಿದ್ದವು. ಇವನ್ನು

ಒಂದು ಪ್ರದರ್ಶನಕ್ಕೆ ಕಳುಹಿಸುತ್ತಿದ್ದರೆ ನಿಶ್ಚಯವಾಗಿಯೂ ಬಹುಮಾನವು ದೊರಕುತ್ತಿತ್ತು. ವ್ಯಾಸಪೀಠದಲ್ಲಿ ಇಕ್ಕಡೆಗಳಲ್ಲಿ ದ್ವಾರಪಾಲಕಸ್ಥಾನದಲ್ಲಿ ಎರಡು ಮ್ಲೇಂಛ ಪರಗಳನ್ನು ಮಾಡಿ ಇರಿಸಿದ್ದರು. ನಮ್ಮ ದೇವಸ್ಥಾನಗಳಲ್ಲಿ ನಮ್ಮ ದೇವರ ಮುಂದೆ ವಿಜಾತಿಯವರ ಪರಗಳನ್ನು ತಂದಿಡುವುದರ ಉದ್ದೇಶವೇನೋ ತಿಳಿಯಲಿಲ್ಲ. ದೇವರಲ್ಲಿ ಭಕ್ತಿಶ್ರದ್ಧೆ ಹುಟ್ಟಿಸುವದಕ್ಕೆ ಇದೊಂದು ನೂತನ ಕ್ರಮವನ್ನು ಕಂಡುಹಿಡಿದಿರುವರೋ ಏನೊ!

ಶ್ರೀ ಅದಮಾರು ಶ್ರೀ ಪಾದಂಗಳವರು, ಸುಧಾ ಜಿಜ್ಞಾಸಾಧಿಕರಣವನ್ನು ಪುಸ್ತಕಾನಪೇಕ್ಷೆ ಯಾ ಪ್ರತಿ ಪಂಜ್ತಿ ಬಾಯಿಯಿಂದ ಹೇಳಿ ಸಮರ್ಪಕವಾಗಿ ವಿಷಯಾನುವಾದ ಮಾಡಿದವರಿಗೆ ಚಿನ್ನದ ತೋಡಾಗಳನ್ನು ಬಹುಮಾನವಾಗಿ ಕೊಡುವದಾಗಿ ಕೊಟ್ಟಿದ್ದ ಜಾಹೀರಾತು ಪ್ರಕಾರ ಕಳೆದ ಆಷಾಢಮಾಸದಲ್ಲಿ ನಡೆದ ಪರೀಕ್ಷೆಯಲ್ಲಿ ರ. ವ. ಸಂ. ಕೆ. ರಾಮಾಚಾರ್ಯರು, ಕ. ಶ್ರೀನಿವಾಸಾಚಾರ್ಯರು, ಪ. ಕುಪ್ಪಣ್ಣಾಚಾರ್ಯರು ಈ ಮೂವರು ಮಂದಿ ಸಮರ್ಪಕವಾಗಿ ಪರೀಕ್ಷೆ ಕೊಟ್ಟು, ಆ ತಾ. ೧೬ನೆ ಶನಿವಾರ ಸಂಸ್ಕೃತ ಪಾಠಶಾಲೆಯಲ್ಲಿ ನಡೆದ ಶಾರದಾಪೂಜಾ ಸಮಾರಂಭ ಮಹಾಸಭೆಯ ಮುಂದೆ ಶ್ರೀಗಳವರಿಂದ ಸುಮಾರು ೧೦—೧೦ ಪವನಿಗೆ ತಯಾರಿಸಿದ್ದ ಚಿನ್ನದ ತೋಡೆಜೋಡುಗಳನ್ನು ಬಹುಮಾನ ಹೊಂದಿದರೆಂಬುದು ಬಹು ಸಂತೋಷಕಾರ್ಯವಾಗಿದೆ. ಇವರಲ್ಲಿ ಕೆ. ರಾಮಾಚಾರ್ಯರು ಈ ಮೊದಲು ಯುಕ್ತಿಮಲ್ಲಿಕಾ ಎಂಬ ೧ ಸಹಸ್ರ ಗ್ರಂಥವಿರುವ ಗ್ರಂಥವನ್ನು ಬಾಯಿಯಿಂದ ಹೇಳಿ ವಿಶೇಷ ಬಹುಮಾನ ಹೊಂದಿದ್ದರು. ಅದೇ ಸಭೆಯಲ್ಲಿ ಶ್ರೀ ಅದಮಾರು ಶ್ರೀ ಪಾದಂಗಳವರೇ ಸಂಸ್ಕೃತ ಪಾಠಶಾಲೆಯ ಸುಮಾರು ೨೦೦ ಮಂದಿ ವಿದ್ಯಾರ್ಥಿಗಳಿಗೆ ಅವರವರ ತರಗತಿ ಪ್ರಕಾರ ೮ ಆಣೆ ಲಾಗಾಯಿತು ೮ ರೂಪಾಯಿಗಳ ವರೆಗೂ ಸಂಭಾವನೆ ಕೊಡುವವರಾದರು.

ಇದನ್ನೆಲ್ಲ ನೋಡುವಾಗ ಸದ್ವಿದ್ಯೆಗೆ ತಕ್ಕ ಪ್ರೋತ್ಸಾಹವಿಲ್ಲವೆಂಬ ಜನಾಪವಾದವು ನಿರರ್ಥಕವಾಗಿಲ್ಲವಾಗಿ ತೋರುತ್ತೆ. ಪ್ರತಿ ಗೃಹೀತೃಗಳ ಯೋಗ್ಯತೆಯೇ ಕಡಿಮೆಯಾಗುತ್ತಿರುವುದಲ್ಲದೆ ಉದಾರಿಗಳಾದ ದಾತೃಗಳು ಈ ಕಾಲದಲ್ಲಿಯೂ ಕಡಿಮೆಯಾಗಿಲ್ಲ. ಇದು ಕಲಿಯುಗವಾದರೂ ಕೃತಯುಗಾಲಂಕಾರಭೂತರಾದ ಮಹನೀಯರು ಇದ್ದೇ ಇರುವರು.

~~~

ಸುರತ್ಕಲ್:— ಇಲ್ಲಿಯ ಟಪ್ಪಾಲ ಆಫೀಸಿನಲ್ಲಿ ಪ್ರತಿನಿತ್ಯವೂ ಮನಿಯಾರ್ಡರುಗಳು, ರಿಜಿಸ್ಟ್ರಿಗಳು, ಪಾರ್ಸೆಲುಗಳು, ಕಾಗದಗಳು ಬಹಳ ಹೆಚ್ಚು ಹೆಚ್ಚಾಗಿ ಬರುತ್ತಿವೆ. ಮನಿಯಾರ್ಡರು ವಗೈರೆಗಳನ್ನು ಬಟವಾಡೆ ಮಾಡಲು ಇಲ್ಲಿ ಒಬ್ಬನೇ ಪ್ಯಾದೆ ಮಾತ್ರ ಇರುವುದರಿಂದ ಜನರಿಗೆ ತಮ್ಮ ತಮ್ಮ ಅನುಪತ್ಯ, ಅಡಚಣೆಗಳ ನಿವಾರಣೆಗೆ ಕೂಡಲೇ ಶಿಕ್ಕಬೇಕಾದ ಮನಿಯಾರ್ಡರುಗಳು ಹೆಚ್ಚು ಕಾಲ ವಿಳಂಬವಾಗಿ ಶಿಕ್ಕಿ, ಬಹಳ ಕಷ್ಟನಷ್ಟಗಳಿಂದ ಪೇಚಾಟಪಡುತ್ತಿರುವರು. ಆದುದರಿಂದ ಸದರೀ ಇಲಾಖೆಯವರು ಇಲ್ಲಿನ ಬಡಜನರ ಸಂಕಷ್ಟಗಳನ್ನು ನಿವಾರಿಸಿ, ಈಗ ಇರುವ ಪೇದೆಗೆ ಸಹಾಯಕಾರಿಯಾಗಿ ಇನ್ನೂ ಒಬ್ಬ ಪೇದೆಯನ್ನು ಕೂಡಾ ನೇಮಿಸಬೇಕಾಗಿ ಪ್ರಾರ್ಥಿಸುತ್ತೇವೆ.

~~~

ಬಂಟವಾಳ. ನವರಾತ್ರಿಯ ದಿನಗಳಲ್ಲಿ ಇಲ್ಲಿಯ ಯೂನಿಯನ್ನದಲ್ಲಿ ಅನುನಿತ್ಯವೂ ಸದಾಚಾರ, ಮನುಷ್ಯನ ಕರ್ತವ್ಯ. ಗೀತಾತತ್ವ ಇತ್ಯಾದಿ ವಿಷಯಗಳನ್ನು ಕುರಿತು ಸಂಘದ ಸದಸ್ಯರುಗಳಿಗೂ, ಸರ್ವ ಸಾಮಾನ್ಯರಿಗೂ ಆಮಂತ್ರಣೆಯನ್ನು ಕೊಟ್ಟು ಭಾಷಣಗಳು ಉಪಯುಕ್ತವಾದ ರೀತಿಯಲ್ಲಿ ನಡೆದುವು. ಶ್ರೀ ಮಹಾಮಾಯಿಯ ದೇವಸ್ಥಾನದಲ್ಲಿ ನವರಾತ್ರಿಯಲ್ಲಿ ವಿಶೇಷ ಸಮಾರಂಭದೊಡನೆ ಪೂಜೆಯು ನಡೆಯಿತು. ಕಡೆಯ ದಿನ, ದೇವಳ ಸೆಕೆಂಡರಿ ಶಾಲೆಯಲ್ಲಿ ಸದರಿ ಶಾಲೆಯ ಮಕ್ಕಳು ಆದವರನ್ನು ಕರೆಸಿಕೊಂಡು, ಇಷ್ಟು ದಿನಗಳೂ ಜರಗಿದುದಕ್ಕಿಂತಲೂ ಮಿಗಿಲಾಗಿ ಈಗಣ ಹೊಸ ಕಟ್ಟಡದಲ್ಲಿ ಶ್ರೀ ಶಾರದಾಂಬೆಯ ಪೂಜೆಯನ್ನು ನೆರವೇರಿಸಿದರು. ಈ ಮೂಲಕವಾಗಿ ಈ ವರ್ಷದ ದಸರಾ ಅವಕಾಶವು ಬಲು ಚೆನ್ನಾಗಿ ದೈವಿಕ ಸಂಪತ್ತಿಗೆ ಅನುಕೂಲವಾಯಿತೆಂದು ಸರ್ವಸಾಮಾನ್ಯರೂ ಸಂತಸಗೊಂಡಿರುವರು.

ಬಾಂಬಿಲಪತ್ತ ಗಾಡಿಗಳಲ್ಲಿ ಜಿನಸುಗಳನ್ನು ಹೇರಿಕೊಂಡು ಬರುವ ಬಂಡಿಯಾಳುಗಳೆಲ್ಲರೂ ಕಳ್ಳರ ಕಾಟವು ಹೆಚ್ಚುತ್ತಿದೆಯೆಂದು ದೂರು ತರುತ್ತಲಿದ್ದಾರೆ. ಊರವರು ಈ ಕುರಿತು ಎಲ್ಲೂ ಮಾತನಾಡುತ್ತಲಿದ್ದರೂ ಪೋಲೀಸಿನವರು ಲಕ್ಷ್ಯಕೊಡುವಂತೆ ತಮ್ಮ ಪತ್ರದ ಮೂಲಕ ವಿಜ್ಞಾಪಿಸಿಕೊಳ್ಳುವದು ವಿಹಿತವೆಂದು ತಿಳಿದು ಬರೆದುಕೊಂಡಿರುವೆನು.

ನಮ್ಮ ಪಟ್ಟಣವು ವಿಸ್ತಾರಗೊಳ್ಳುವ ಹಾಗೆ ಸರಕಾರವು ದಯೆಯಿಂದ ಬದಗಿಸಿಕೊಟ್ಟ ತುಂಬೇಗುಡ್ಡದ ಬಳಿಯಲ್ಲಿ ಇರುವ ಬೆಟ್ಟು ಗದ್ದೆಗಳ ಅಂಶಗಳನ್ನು ಗೌಡಸಾರಸ್ವತ ಜಾತಿಯ ಜನಗಳಿಗೆ ದೊರೆಯುವ ಹಾಗೆ ಶ್ರೀ ದೇವಳದ ಮೊಕ್ತೇಸರರು ಕ್ರಮಗೊಳಿಸುವರಾಗಿ ತಿಳಿಯುತ್ತೇವೆ. ಇದರಿಂದ ಈಗ ಇಕ್ಕಟ್ಟಾಗಿ ಇರುವ ದೆಸೆಯಿಂದುಂಟಾಗುವ ಅನಾರೋಗ್ಯವು ದೂರವಾಗಿ, ಜಾತಿಬಂಧುಗಳಿಗೆ ನಿವಾಸಕ್ಕೆ ಸ್ಥಳ ದೊರೆಕಂತಾಯಿತು. ಮಾತ್ರವಲ್ಲದೆ ಪಟ್ಟಣ ವಿಸ್ತಾರಕ್ಕೆ ಕಾರಣವಾಯಿತು. ದೇವಳದವರಿಗೆ ಇದರಿಂದ ಪುಣ್ಯವುಂಟಾಗಲೆಂದು ಕೋರುತ್ತೇವೆ. ಈ ಏರ್ಪಾಡು ನಿಜವಾಗಿಯೂ ಈಗಣ ಸುಧಾರಣೆಯ ದೃಷ್ಟಿಯಿಂದ ಶ್ಲಾಘನೀಯವಾದುದಾಗಿದೆ.

~~~

ಮಂಗಳೂರು.

~~~

ಕಳೆದ ವಾರ ಮುನಿಸಿಪಾಲಿಟಿಯಲ್ಲಿ 7 ಪ್ಲೇಗು ಮರಣಗಳಿದ್ದುವು.

ಇಲ್ಲಿಯ ಗವರ್ನಮೆಂಟ ಕೊಲೇಜದ ವಾರ್ಷಿಕ ಮಹೋತ್ಸವವು ಈ ತಿಂಗಳ ತಾ ೨೮ರಲ್ಲಿ ನಡೆಯುವುದು.

ಕಲ್ಲಮುಂಡ್ಕೂರಿನ ಮ। ರಾ। ರಾ। ನೇಮಿರಾಜಯ್ಯನವರು ಜೈನ ವಿದ್ಯಾರ್ಥಿಗಳ ಒಳ್ಳೆ ಇಲ್ಲಿಯ ಗವರ್ನಮೆಂಟ್ ಟ್ರೈನಿಂಗ್ ಶಾಲೆಯ ಬಳಿ ಕಟ್ಟಿಸುವ ವಿದ್ಯಾರ್ಥಿಭವನದ ಶಂಕುಸ್ಥಾಪನೆಯನ್ನು ಸ್ವಸ್ತಿ ಶ್ರೀ ನೇಮಿಸಾಗರ ಸ್ವಾಮಿಯವರು ಈ ತಿಂಗಳ ತಾ ೨೧ನೇ ಗುರುವಾರ ಪ್ರಾತಃಕಾಲ ಘಂಟೆ ೭ಕ್ಕೆ ನೆರವೇರಿಸಿಕೊಟ್ಟರು. ಮ। ರಾ। ರಾ। ರಾವ್‌ಬಹದ್ದೂರ್ ನಯಂಪಳ್ಳಿ ಸುಬ್ಬರಾವ್, ಮ। ರಾ। ರಾ। ಅತ್ತಾವರ ಬಾಲಕೃಷ್ಣ ಶೆಟ್ಟಿ, ಮ। ರಾ। ರಾ। ಬಿ ಮಹಾಬಲ ಹೆಗ್ಗಡೆ, ಮ। ರಾ। ರಾ। ಅಮ್ಮೆಂಬಳ ಶ್ರೀನಿವಾಸಪೈ, ಮ। ರಾ। ರಾ। ಟಿ ಮಂಗೇಶರಾವ್, ಮ। ರಾ। ರಾ। ಪಿ ಮಂಗೇಶರಾವ್ ಮೊದಲಾದ ಗ್ರಹಸ್ಥರು ಈ ಸಂದರ್ಭದಲ್ಲಿ ದಯಮಾಡಿ ಬಂದಿದ್ದರು. ನೇಮಿಸಾಗರ ಸ್ವಾಮಿಯವರು ಅಂದವಾದ ಭಾಷಣದಲ್ಲಿ ಜೈನರ ವಿದ್ಯಾಪ್ರಸರಣೆಯ ಪ್ರಯತ್ನಗಳಲ್ಲಿ ಈ ಪ್ರಾಂತ್ಯಗಳ ಎಲ್ಲಾ ಜಾತಿಮತಸ್ಥರ ಸಹಕಾರವನ್ನು ಕೋರಿ ಶಂಕುಸ್ಥಾಪನೆಯನ್ನು ಮಾಡಿದರು. ರಾ। ನೇಮಿರಾಜಯ್ಯನವರೊಬ್ಬರೇ ಈ ವಿದ್ಯಾರ್ಥಿಭವನವನ್ನು ತಮ್ಮ ಜಾತಿಯ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಕಟ್ಟಿಸುತ್ತಿರುವರೆಂಬದಾಗಿ ತಿಳಿಯುತ್ತೇವೆ. ಬಸ್ತಿಗಳ ಜೀರ್ಣೋದ್ಧಾರವನ್ನು ಪಂಚ ಕಲ್ಯಾಣಗಳ ಮೂಲಕ ಪೂರೈಸುವಷ್ಟೆ ಪುಣ್ಯಕರವೂ, ಈಗಿನ ಕಾಲದಲ್ಲಿ ಅಗತ್ಯವೂ ಆದ ವಿದ್ಯಾಭಿವೃದ್ಧಿ ಸಾಧನ ಕಾರ್ಯಗಳ ಪ್ರಯತ್ನಗಳನ್ನು ಜೈನರಲ್ಲಿ ಸಂಪನ್ನ ಗ್ರಹಸ್ಥರಾದ ನೇಮಿರಾಜಯ್ಯನವರು ಕೈಕೊಂಡದ್ದನ್ನು ನೋಡಿ ಬಹಳ ಸಂತೋಷಪಡುತ್ತೇವೆ.

ಇಲ್ಲಿಯ ಗಣಪತಿ ಸೆಕೆಂಡರಿ ಶಾಲೆಯಲ್ಲಿ ಮಹಿಳಾಸಭೆಯವರ ಒಳ್ಳೆ ಗಣಪತಿ ಸೆಕೆಂಡರಿ ಶಾಲೆಯ ವರ್ಷಂತಿಯು ವಿಜಯದಶಮಿಯ ದಿನ ಬಹಳ ಸಂಭ್ರಮದಿಂದ ಆಚರಿಸಲ್ಪಟ್ಟಿತು. ಶಾಲಾ ಇನ್ಸ್‌ಪೆಕ್ಟರರಾದ ಮಿ। ಯೋಜ್ಸ್‌ರವರು ಈ ಸಂದರ್ಭದಲ್ಲಿ ಕೂಡಿದ ಸಭೆಯ ಅಧ್ಯಕ್ಷರಾಗಿದ್ದರು. ಸರಸ್ವತಿ ಪ್ರಾರ್ಥನೆಯನ್ನು ಶಾಲಾ ಮಕ್ಕಳು ಸಭಾ ಕಾರ್ಯಗಳ ಪ್ರಾರಂಭದಲ್ಲಿ ಮಾಡಿದರು. ನಂತರ ದೇಶೀಯ ಅಂಗಸಾಧನೆಯ ಅಭ್ಯಾಸವು ಹುಡುಗರಿಂದ ಸಭಿಕರಿಗೆ ಚಟೋರೀತಿಯಲ್ಲಿ ತೋರಿಸೋಣಾಯಿತು. ಶಾಲೆಯ ಹೆಡ್ ಮಾಸ್ತರರು ಶಾಲಾ ವೃತ್ತಾಂತವನ್ನು ಓದಿ ಸಭಿಕರಿಗೆ ತಿಳಿಸಿದ ಬಳಿಕ ಆಟಪಾಠಗಳಲ್ಲಿ ತಮ್ಮ ಸಹಪಾಠಿಗಳಿಗಿಂತಲೂ ಅಧಿಕವಾದ ಸ್ಥಿರಪ್ರಯತ್ನವನ್ನು ತೋರಿಸಿದವರಿಗೆ ಇನಾಮುಗಳು ಅಧ್ಯಕ್ಷರಿಂದ ಕೊಡಿಸೋಣಾದವು. ಶಾಲೆಯ ಉತ್ತಮಸ್ಥಿತಿಯನ್ನು ಕೊಂಡಾಡಿ ಅಧ್ಯಕ್ಷರು ಭಾಷಣಮಾಡಿದರು. ನಂತರ ಶಾಲಾ ಮಕ್ಕಳು ರಜಪೂತರ ಚರಿತ್ರೆಯಲ್ಲಿಯ ದುರ್ಗಾದಾಸ ನಾಟಕದ ಕೆಲವು ಅಂಕಗಳನ್ನು ಆಡಿತೋರಿಸಿ ಸಭಿಕರನ್ನು ವಿನೋದಗೊಳಿಸಿದರು.

ಈ ತಿಂಗಳ ತಾ ೧೮ರಿಂದ ಕಲೆಕ್ಟರರ ಆಫೀಸಿನ ಹೆಡ್ ಎಕೌಂಟಾಂಟರಾದ ಮ। ರಾ। ರಾ। ಮರ್ತುಕಿಣಿಯವರಿಗೆ ಒಂದು ತಿಂಗಳ ಹಕ್ಕಿನ ರಜೆಯು ಕೊಡೋಣಾಗಿರುವದು.

ಮ। ರಾ। ಪಿ ರಘುನಾಥ ಭಂಡಾರಿಗಳವರು ಆಕ್ಟಿಂಗ್ ಹೆಡ್ ಎಕೌಂಟಾಂಟರಾಗಿ ನೇಮಿಸಲ್ಪಟ್ಟಿರುತ್ತಾರೆ. ಮ। ರಾ। ರಾ। ಜಿ ಮಾಧವ ಪ್ರಭುಗಳವರು ರಾ। ರಘುನಾಥ ಭಂಡಾರಿಗಳವರ ರೂ ೭೦ರ ತಲಪಿನ ಫಸ್ಟ್ ಕೊರೆಸ್ಪೋಂಡೆನ್ಸ್ ಕ್ಲಾರ್ಕರ ಕೆಲಸವನ್ನು ನೋಡುವರು. ಮ। ರಾ। ರಾ। ಎಚ್ ಅನಂತಯ್ಯನವರು ರೂ. ೬೦ರ ತಲಪಿನ ಮೇಲೆ ಸೆಕೆಂಡ್ ಕರೆಸ್ಪೋಂಡೆಂಟ್ ಕ್ಲಾರ್ಕರಾಗಿ ನೇಮಿಸಲ್ಪಟ್ಟಿರುತ್ತಾರೆ. ಮ। ರಾ। ರಾ। ಎಮ್. ಸುಬ್ಬರಾವ್‌ರವರು ರೂ ೫೦ರ ತಲಪಿನ ಮೇಲೆ ೩ನೇ ಕರೆಸ್ಪೋಂಡೆನ್ಸ್ ಕ್ಲಾರ್ಕರಾಗಿರುವರು. ಸುಬ್ಬರಾವರ ಬದಲಿಗೆ ರಾ। ಪಿ. ಸೋಮಪ್ಪನವರು ರೂ. ೫೦ರ ತಲಪಿನ ಮೇಲೆ ಆಕ್ಟಿಂಗ್ ಸೆಕೆಂಡ್ ಎಕೌಂಟಾಂಟರಾಗಿರುವರು.

ಪದವು ಕೃಷ್ಣಾತ್ರಮದ ಪಾಠಶಾಲೆ.

ಪದವು ಅಂದರೆ ಬಿಕ್ರನ್ಯಾಕನಕಟ್ಟೆಯ ಪೇಟೆಯ ತೆಂಕು ದಿಕ್ಕಿನಲ್ಲಿರುವ ಮರೋಳಿಯ ತಗ್ಗಿನಲ್ಲಿ ಒಜ್ರೋಡಿ ಎಂಬ ಒಂದು ನೀರು ಬೀಳುವ ಸ್ಥಳವಿದೆ. ಈ ಸ್ಥಳವು ಹಜೂರಿನಿಂದ ೩ ಮೈಲಿನ ದೂರದಲ್ಲಿದೆ. ಇಲ್ಲಿ ಒಂದು ಸಣ್ಣ ಪೇಟೆ ಉಂಟು. ಈ ಪೇಟೆಯ ತೆಂಕುಕಡೆಯಲ್ಲಿ ಈ ನೀರು ಮಸ್ಥಳವಿದೆ. ರಸ್ತೆಗೂ ನೀರು ಬೀಳುವ ಇಳಿಜಾರು ಸ್ಥಳಕ್ಕೂ ಮಧ್ಯ ಸ್ವಲ್ಪ ಸಮತಟ್ಟಿನ ಸ್ಥಳವುಂಟು. ಈ ಸ್ಥಳದಲ್ಲಿ ನಿಂತರೆ ಪಶ್ಚಿಮಕ್ಕೆ ಮರೋಳಿ ಕಂಕನಾಡಿ

ಬೈಲುಗಳು ಕಾಣುತ್ತವೆ. ಮತ್ತು ಪಶ್ಚಿಮಕ್ಕೆ ಸೆಮಿನೆರಿ, ಸಮುದ್ರ, ಜಪ್ಪು ಕಾರ್ಖಾನೆಗಳು ಕಾಣುತ್ತವೆ. ಉಳ್ಳಾಲ ಸೋಮೇಶ್ವರದ ವರೇಗೆ ನೋಟವು ಹರಿಯುತ್ತದೆ. ಈ ವೇಳೆಯಲ್ಲಿ ಮುಂಡಪ್ಪ ಬೆಲ್ಚಡರು ಒಂದು ಶಾಲೆಯನ್ನು ನಡಿಸುತ್ತಿದ್ದರು. ಆ ಶಾಲೆಯ ಆಡಳಿತೆಯು ಕುಲಶೇಕರ ಶಾಲೆಯ ಹೆಡ್ ಮಾಸ್ತರಾದ ಮಸ್ಕರೇಞಸರ ಕೈಯಲ್ಲಿ ಇತ್ತು. ಮುಂಡಪ್ಪ ಮಾಸ್ತರು ಒಂದು ಒಂಡ ಸಾಲೆ ಕೋಣೆಯಲ್ಲಿ ಶಾಲೆಯನ್ನು ಮಾಡುತ್ತಿದ್ದರು. ಆ ಕೋಣೆಯು ಶಾಲೆಗೆ ಯೋಗ್ಯವಲ್ಲದ್ದರಿಂದಲೂ ಶಾಲಾ ಇಲಾಖೆಯವರು ಅದು ತಕ್ಕದಾದ ಕಟ್ಟೋಣವಲ್ಲವೆಂತಲೂ ಪದೆಪದೇ ಹೇಳಿದ್ದರಿಂದ ಮುಂಡಪ್ಪ ಮಾಸ್ತರು ರಸ್ತೆಗೂ ನೀರು ಬೀಳುವ ಸ್ಥಳಕ್ಕೂ ಮಧ್ಯದಲ್ಲಿರುವ ಸಮತಟ್ಟಿನ ಸ್ಥಳದಲ್ಲಿ ಶಾಲಾ ಕಟ್ಟೋಣವನ್ನು ಕಟ್ಟಲಿಕ್ಕೆ ಶುರುಮಾಡಿ ಕಟ್ಟೋಣವನ್ನು ಅರ್ಧ ಮುಗಿಸುವಲ್ಲಿ ಮೃತಪಟ್ಟರು. ಈ ಕಟ್ಟೋಣವನ್ನು ೨೦೦ ರೂಪಾಯಿಗೆ ಕ್ರಯಕ್ಕೆ ಪಡಕೊಂಡು ಕಟ್ಟೋಣವಿರುವ ಆದಿ ಸ್ಥಳ ಸೆಂಟ್ಸು ೧೪ಕ್ಕೆ ವರುಷ ೧ಕ್ಕೆ ೧— ರೂಪಾಯಿ ಮೂಲಗೇಣಿಗೆ ಮಾಡಿಕೊಂಡು ಶಾಲೆಯ ಆಡಳಿತೆಯನ್ನು ಮಸ್ಕರೇಞಸರಿಂದ ಪಡಕೊಂಡು ರಾಮಚಂದ್ರಯ್ಯರು ಶಾಲೆಯ ಕಟ್ಟೋಣವನ್ನು ದುರುಸ್ತುಮಾಡಿಸಲಿಕ್ಕೆ ಏರ್ಪಾಡು ಮಾಡುವ ಮೊದಲು ಊರಿನ ಗೃಹಸ್ಥರ ಒಂದು ಸಭೆಯನ್ನು ಕೂಡಿಸಿ ಅವರಲ್ಲಿ ಒಂದು ಜನರಲ್ ಕಮ್ಮಿಟಿಯನ್ನೂ, ಒಂದು ಕಾರ್ಯನಿರ್ವಾಹಕ ಸಭೆಯನ್ನೂ ಏರ್ಪಡಿಸಲಾಯಿತು. ಈ ಕಾರ್ಯನಿರ್ವಾಹಕ ಸಭೆಯವರು ಶಾಲಾ ಸಂಬಂಧವಾದ ಸರ್ವ ಕೆಲಸವನ್ನು ನಡಿಸುತ್ತಾರೆ. ಕಟ್ಟೋಣವು ಸುಮಾರು ೫೦ ಫೂಟು ಉದ್ದವು, ೧೪ ಫೂಟ್ ಅಗಲವು ಉಳ್ಳದ್ದಾಗಿ ೭ ಸಿಡಿಪಿನ ಜಗಲಿ ಉಳ್ಳದ್ದಾಗಿದೆ. ಕಟ್ಟೋಣದ ಎದುರು ಉತ್ತರದಲ್ಲಿ ಮಂಗಳೂರಿನಿಂದ ಗುರುಪುರಕ್ಕೆ ಹೋಗುವ ರಸ್ತೆ ಇದೆ. ಕಳೆದ ೧೪ನೇ ತಾರೀಕಿನ ಗುರುವಾರ ಮೂಲನಕ್ಷತ್ರ ದಿವಸ ಶಾರದಾ ಪೂಜೆಗೆ ಹೊಸ ಕಟ್ಟೋಣವನ್ನು ಪ್ರವೇಶಮಾಡಿದ್ದಾಯಿತು. ಮಧ್ಯಾಹ್ನ ೧ ಘಂಟೆಗೆ ಪ್ರವೇಶ, ಸಾಯಂ ೪-೩೦ಕ್ಕೆ ಗೃಹಸ್ಥರ ಸಭೆಯು ಜರಗಿತು. ಮಕ್ಕಳು ಶಾರದಾ ಸ್ತುತಿಗೀತವನ್ನು ಹಾಡಿದರು. ಹಾಜರು:— ಮ. ಪಾಂಡುರಂಗ ಶೆಣೆಯವರು ಅಧ್ಯಕ್ಷ, ಎನ್ ಸುಬ್ಬರಾಯರು, ಮ. ಅತ್ತಾವರ ರಾಮರಾಯರು, ಮ. ಸಂಜೀವರಾಯರು ವ ಅವರ ಹೆಂಡತಿ ಡಾಕ್ಟರ್ ಚಂಪಾಬಾಯಿ, ಮ. ಕಾರ್ನಾಡ ಸದಾಶಿವರಾಯರು, ಮ. ಪಂಡಿತ ಪರಮೇಶ್ವರಯ್ಯ, ಮ. ಕುದುಮಲ ರಂಗರಾಯರು, ಮ। ಗಂಗೊಳ್ಳಿ ಕೃಷ್ಣರಾಯರು, ಕು. ಉಭಯ ಗೋಪಾಲಕೃಷ್ಣರಾಯರು ಬಾಕಿ ಅನೇಕ ಗೃಹಸ್ಥರು. ಮ., ಪಾಂಡುರಂಗ ಶೆಣೆಯವರು ಮಕ್ಕಳಿಗೂ, ಉಪಾಧ್ಯಾಯರಿಗೂ ತಕ್ಕ ಬುದ್ಧಿಮಾತುಗಳನ್ನು ಹೇಳಿದ ನಂತರ ಕಮಿಟಿಯವರಿಗೆ ಹೇಳಿದ ಮಾತು ಏನಂದರೆ:—ನಾವು ಪ್ರಾರಂಭ ಶೂರರು ಮಾತ್ರವಾಗಬಾರದು. ನಮ್ಮ ಕೆಲಸವನ್ನು ವೃದ್ಧಿ ಮಾಡುತ್ತಾ ಇರಬೇಕು. ಕೈಗಾರಿಕೆಯನ್ನು ಸ್ವಲ್ಪ ಕಲಿಸಬೇಕು. ಶಾಲೆಯ ಕಟ್ಟೋಣದ ಆಸ್ತಿತ್ತ ಕಪ್ಪಿಣದ ಕೆಲಸದ ಕೊಟ್ಟಿಗೆಯೂ, ಬಡಾಯಿ ಕೆಲಸದ ಕೊಟ್ಟಿಗೆಯೂ ಉಂಟೆಂದು ಕೇಳಿ ಸಂತೋಷಪಟ್ಟರು. ಸಂದರ್ಶಕರ ಪುಸ್ತಕದಲ್ಲಿ ಆಶೀರ್ವಚನವನ್ನು ಬರೆದು ಗೃಹಸ್ಥರು ತೆರಳಿದರು.

ವಿವಿಧ ವಿಷಯಗಳು.

ನಮ್ಮ ಜಿಲ್ಲೆಯ ಕರಾವಳಿಯ ಹಲವು ಕಡೆಗಳಲ್ಲಿ ಕೆಲವು ವರ್ಷಗಳಿಂದೀಚೆಗೆ ಏರ್ಪಡಿಸಲ್ಪಟ್ಟ ಮೀನು ಗೊಬ್ಬರ ಕಾರ್ಖಾನೆಗಳನ್ನು (Fish Guano Factories) ನೋಡಿದರೆ, ರೈತರು ಈ ಗೊಬ್ಬರದ ವಿಶೇಷ ಪ್ರಯೋಜನವನ್ನು ಅರಿತವರಾಗಿ ತಿಳಿಯಬಹುದು. ಆದುದರಿಂದಲೇ ಕಾರ್ಖಾನೆಯವರು ಕೂಡಾ ಮೀನುಗೊಬ್ಬರವನ್ನು ಕೈಲಾದಷ್ಟು ಮಟ್ಟಿಗೆ ಯೋಗ್ಯ ರೀತಿಯಲ್ಲಿ ತಯ್ಯಾರಿಸುವದೂ ಅವರ ಕರ್ತವ್ಯವಾಗಿದೆ. ವ್ಯವಸಾಯದಲ್ಲಿ ಮೀನುಗೊಬ್ಬರದ ಉದ್ದೇಶವು ಅದರಲ್ಲಿನ ಸಸ್ಯಾಹಾರ ಪದಾರ್ಥಗಳಾದ ಸಾರಜನಕ ಮತ್ತು ರಂಜಕಗಳಿಗೋಸ್ಕರ ಮಾತ್ರವಲ್ಲ, ಏಕೆಂದರೆ ಈ ಪದಾರ್ಥಗಳು ಮೀನುಗೊಬ್ಬರದಲ್ಲಿನಕ್ಕಿಂತಲೂ ಎಷ್ಟೋ ಹೆಚ್ಚಿನ ಪರಿಮಾಣದಲ್ಲಿ ಬೆರತಿರುವ ನ್ಯಾಟ್ರೇಟ್ ಆಫ ಸೋಡಾ, ಸೂಪರ್ ಫೋಸ್ಫೇಟ್ ಮೊದಲಾದ ರಸಾಯನ ಕಲ್ಪಿತ ಗೊಬ್ಬರಗಳು ಅಗ್ಗದಲ್ಲಿಯೇ ದೊರೆಯುವವು. ಮೀನುಗೊಬ್ಬರದ ವಿಶೇಷ ಯೋಗ್ಯತೆಯು ಅದರಲ್ಲಿನ ಸೇಂದ್ರಿಯ (ಆರ್ಗೆನಿಕ್) ಪದಾರ್ಥದಲ್ಲಿದೆ. ಈ ಪದಾರ್ಥವು ಕೊಳೆತು ಉಂಟಾಗುವ ಸಾರಾಂಶ ಪದಾರ್ಥವು (ಹ್ಯೂಮಸ್) ನೆಲವನ್ನು ಹದಗೊಳಿಸುವುದಲ್ಲದೆ ಜಮೀನಿನ ಅಂಗರಚನೆಯನ್ನೂ ಸುಧಾರಿಸುವುದು. ಈ ಉದ್ದೇಶ ನೆರವೇರಬೇಕಾದರೆ ಮೀನುಗೊಬ್ಬರದಲ್ಲಿ ನಿರರ್ಥ್ಯ ಅಂದರೆ ಕರಗದ ಪದಾರ್ಥಗಳು 5 ಕ್ಕೆ ಮೀರಬಾರದು. "ಆದರೆ ತಾನು ಶೋಧಿಸಿ ಪರೀಕ್ಷಿಸಿದ ಹಲವು ಮೀನುಗೊಬ್ಬರಗಳ ಮಾದರಿಗಳಲ್ಲಿ ಸೇಕಡ ೩೦ರಷ್ಟು ಮರಳು ಮೊದಲಾದ ನಿರರ್ಥ್ಯ ಪದಾರ್ಥಗಳು ಸೇರಿರುತ್ತಾವೆಂತಲೂ, ಹೀಗಿರುವುದರಿಂದ ಅದರಲ್ಲಿ ಅಗತ್ಯವಿರುವ ಸೇಂದ್ರಿಯ ಪದಾರ್ಥಗಳು ಕಡಿಮೆಯಾಗಿರಲಿಕ್ಕೆ ಕಾರಣ ಉಂಟು" ಎಂತಲೂ ಬೆಂಗಳೂರಿನಲ್ಲಿ ಇತ್ತಲಾಗೆ ನಡೆದ ಯುನೈಟೆಡ್ ಪ್ಲಂಟರ್ಸ್ ಎಸ್ಸೋಸಿಯೇಶನಿನ ಸಭೆಯ ಮುಂದೆ ಕೃಷಿ ರಸಾಯನ ಶಾಸ್ತ್ರಜ್ಞರಾದ ಮಿ ಆರ್. ಐಸ್ಕತರವರು ಮಾಡಿದ ಭಾಷಣದಿಂದ ತಿಳಿದುಬರುತ್ತದೆ.

ನೋಟೀಸು.

ನಾನು ಪ್ರತಿವಾದಿಯಾಗಿ ವಾದಿ ಕೂಸಪ್ಪಯ್ಯನು ಸಬ್ ಕೋರ್ಟ ಸ್ಮಾಲ್ ನಂ 291/15 ನೇಗೆ ದಾಕಲು ಮಾಡಿದ ವ್ಯಾಜ್ಯವು ತಾ. 18 10 15ಕ್ಕೆ ತನಿಖೆ ಇಟ್ಟಿತ್ತು. ವಾದಿಗೆ ಕೊಡಸಿಗೆ ಅಗತ್ಯವಿರುವ ಕೆಲವು ರಶೀದಿಗಳು, ಕೈಕಾಗದಗಳು, ರಿಜಿಸ್ಟ್ರಿ ನೋಟೀಸುಗಳು, ಬಾಡಿಗೆ ಪಾವತಿ ರಶೀದಿಗಳು ವಗೈರೆಯ ಕಟ್ಟು ನನ್ನ ಅಂಗಿ ಕಿಶೆಯಲ್ಲಿಟ್ಟು ಕೋರ್ಟಿಗೆ ಹೋಗಿದ್ದೆ. ಅಲ್ಲಿ ನನಗೆ ಉಂಟಾದ ಜ್ವರದ ಹತಿಯಿಂದ ಮಲಗಿಕೊಂಡವನು ಎಚ್ಚರಿತು ನೋಡುವಾಗ್ಯೆ ಸದರಿ ರಿಕಾರ್ಡುಗಳ ಕಟ್ಟು ನನ್ನ ಅಂಗಿ ಕಿಶೆಯಲ್ಲಿ ಇಲ್ಲದೆ ಇದ್ದದರಿಂದ ಹುಡುಕಿದಲ್ಲಿಯೂ ಶಿಕ್ಕಲಿಲ್ಲ. ಈ ಸಂಗತಿ ಪೋಲೀಸು ಆಫೀಸಿಗೂ ಕೂಡಾ ತಿಳಿಸಿದ್ದೇನೆ. ಆ ಕಟ್ಟು ಶಿಕ್ಕಿದವರು ತಂದುಕೊಟ್ಟಲ್ಲಿ ವ ಪೋಲೀಸು ಆಫೀಸಿಗೆ ಹಾಜರುಪಡಿಸಿದ್ದಲ್ಲಿ ನಾನು ಆ ಕುರಿತು 5 ರೂಪಾಯಿ ಇನಾಮು ಕೊಡುತ್ತೇನೆ

ತಾ. 19—10—15

ನಡಿಗುತ್ತು ವೆಂಕಪ್ಪಯ್ಯನ ರುಜು.

ಮಾರಾಟಕ್ಕೆ ಸಿದ್ಧವಾಗಿವೆ! ಮಾರಾಟಕ್ಕೆಸಿದ್ಧವಾಗಿವೆ!!

1916ನೇ ಇಸವಿಯ

ಪ್ರೊಕೆಟ್ ಡ್ಯೆರಿಗಳು.

ನೋಟು ಬೂಕು ಸೈಜು 0—8—0.
ಸಣ್ಣ ಸೈಜು .... 0—4—0.

ಹೆಚ್ಚಿಗೆ ಪ್ರತಿಗಳನ್ನು ಕೊಂಡುಕೊಳ್ಳುವ ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನ್ ದೊರಕುವದು.

ವಿಳಾಸ:— ವ್ಯಾನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ನೋಟೀಸು.

ಮಂಗಳೂರು ಕ್ಯಾಹಾರ ಪೈಕಿ ಜಪ್ಪು ಗುಜ್ಜರಕೆರೆ ಸಮೀಪ ವ್ಯಾಪಾರಕ್ಕೆ ಯೋಗ್ಯವಾದ ಅಂಗಡಿಗಳೂ ಬಿಡಾರಕ್ಕೆ ಅನುಕೂಲವಾದ ಮನೆಗಳೂ ಆಫೀಸು ವಗೈರೆ ಬೈಠಿಗೆಗೆ ಯೋಗ್ಯವಾದ ಮಾಳಿಗೆಗಳು ಸಹಾ ಕೂಡಿರುವ ಹೊಸತಾಗಿ ತಯಾರಾದ "ಅಲೆಕ್ಸಂಡ್ರೀನ ಕೊಟ್ಟೇಜ್" ಎಂಬ ಕಟ್ಟೋಣವೂ, ತೆಂಗು ಅಡಿಕೆ ಮತ್ತು ಇತರ ಫಲ ಮರಗಳಿರುವ ತೋಟವೂ ಕಡಿಮೆ ದರದಲ್ಲಿ ಬಾಡಿಗೆಗೆ ಕೊಡುವದೆ ಸಿದ್ಧವಾಗಿರುವದರಿಂದ ಖ್ಯಾಸು ಇರುವವರು ಇದೇ ತಿಂಗಳ ತಾ ೩೧ರ ಒಳಗೆ ಈ ಕೆಳಗೆ ದಸ್ಕತುಮಾಡಿರುವ ಕಟ್ಟೋಣದ ಮಾಲೀಕರಿಗೆ ಮೊಕ್ತಾ ಸಿಕ್ಕಿ ಬಾಡಿಗೆಗೆ ಪೈಸಿಕೊಳ್ಳಬಹುದು. ಅಂಗಡಿಗಳು ಮನೆಗಳು ಅವರವರಿಗೆ ಬೇಕಾದ ರೀತಿಯಲ್ಲಿ ಅನುಕೂಲಿಸಿ ಕೊಡಬಹುದು.

ಸಿ ಎಸ್ ವೇದಮುತ್ತು,
ಜಪ್ಪು ಮಿಶ್ಯನ್ ಕಂಪೌಂಡು,
ಮಂಗಳೂರು.

ಜೀನಸು ಧಾರಣೆ. (ರಖಂ)

ಮಸ್ಕತಿ ಅಕ್ಕಿ	6— 0—0	6— 8—0
ಗಾಡಿ ರಾಶಿ ,,	5— 4—0	5— 6—0
ಗುಡ್ಡು ,,	5—12—0	6— 4—0
ಅವ್ವಲ್ ಬೆಳ್ತಿಗೆ ,,	6— 8—0	7— 4—0
ಗುಡ್ಡು ಬೆಳ್ತಿಗೆ ,,	5—14—0	6— 2—0
ರಂಗೂನು ಬೆಳ್ತಿಗೆ ಗೋಣಿ ೧ರ	10— 8—0	10—12—0
ಗೋದಿ ಗೋಣಿ ೧ರ	13— 0—0	13— 8—0
ಹುರುಳಿ ಗೋಣಿ ೧ರ	7—12—0	8— 0—0
ಕಡಲೆ ಗೋಣಿ ೧ರ ಬೊಂಬೈ	9— 4—0	9—12—0
ತೊಗರಿ ಗೋಣಿ ೧ರ	12— 8—0	13— 0—0
ತೊಗರಿ ಬೇಳೆ ಗೋಣಿ ೧ರ	12— 8—0	15— 8—0
ಉದ್ದು ಗೋಣಿ ೧ರ	11— 8—0	12— 0—0
ಊರುಬೆಲ್ಲ ಖಂಡಿ ೧ರ	..	75— 0—0
ಉಪ್ಪು ಗೋಣಿ ೧ರ	3— 8—0	3—14—0
ಕೊಬ್ರಿ ಖಂಡಿ ೧ರ	75— 0—0	82— 8—0
ಕೊಬ್ರಿಹಿಂಡಿ ಖಂಡಿ ೧ರ	23—0—0	23— 8—0
ಎಳ್ಳಿಂಡಿ ಖಂಡಿ ೧ರ ಬೊಂಬೈ	30— 8—0	31—12—0
ಕೊಬ್ರಿ ಎಣ್ಣೆ ಮುಡಿ ೧ರ	6— 7—0	6—14—0
ಎಳ್ಳೆಣ್ಣೆ ಮುಡಿ ೧ರ(ಕುರಾಸನ)	4— 8—0	4—12—0
ಚಿಮಣಿ ಎಣ್ಣೆ ಪೆಟ್ಟಿಗೆ ೧ರ	4— 9—0	5— 0—6
ಮೋರಿಸ್ ಸಕ್ಕರೆ ಮುಡಿ ೧ರ	4— 7—0	4— 8—0
ಕಾಫಿ ಖಂಡಿ ೧ರ	240— 0—0	252— 0—0
ಹೊಸಬೆಳಗೋಟು ಖಂಡಿ೧ರ.	94— 0—0	98— 0—0
ಹೊಸ ಗೇರುಬೀಜ ಮುಡಿ ೧ರ		3— 0—0
ಕಪ್ಪಿಣ ಖಂಡಿ ೧ರ		50— 0—0
ಕಾಂಬ್ರ ತಗಡು ಮುಡಿ ೧ರ.		20— 0—0
ಕಾಂಬ್ರ ಪಾತ್ರೆಗಳು ಮುಡಿ ೧ರ.		22— 0—0
ಚೀನಿ ಬೆಳ್ಳಿ ಕೇಜು ೧ರ.		18—12—0
ಪಚ್ಚೆ ಹೆಸರು ಮುಡಿ ೧ರ	5— 8—0	5—10—0

ಪ್ರಿಯರೇ,

ನಾವು ಮದ್ರಾಸಿಗೆ ಹೋದರೆ ಯಾರಲ್ಲಿ ಉಳಕೊಳ್ಳುವದು? ಎಂಬ ಈ ಚಿಂತೆ ನಮಗೆ ಇನ್ನು ಮೇಲೆ ಬೇಡ. ಯಾಕಂದರೆ, ಅಲ್ಲಿದ್ದ ನಮ್ಮೂರಿನ ಸೋಮೇಶ್ವರ ನರಶಿಂಗರಾಯರು ಮುಂಚೆಗಿಂತ ರೈಲ್ವೆ ಸ್ಟೇಶನಿಗೆ ಇನ್ನೂ ಹತ್ತಿರದಲ್ಲಿ ಇನ್ನೂ ವಿಶಾಲವಾದ ಉಪ್ಪರಿಗೆ ಮನೆ ತಕ್ಕೊಂಡಿದ್ದಾರೆ. ಮುಂದಾಗಿ ಒಂದು ಕಾರ್ಡು ಬರೆದರೆ ಸ್ಟೇಶನಿಗೇ ಜನಕಳುಹಿಸಿ ನಿಮ್ಮನ್ನು ಆಮಂತ್ರಿಸುತ್ತಾರೆ. ಊಟಕ್ಕೂ ವಸತಿಗೂ ಮನೆಯಷ್ಟೇ ಸೌಕರ್ಯ. ಖರ್ಚೇನೂ ವಿಶೇಷವಿಲ್ಲ. ಹೀಗಿರುವಲ್ಲಿ ನಿಮ್ಮ ಕಾರ್ಯವನ್ನು ಸ್ವತಹಾ ಹೋಗಿ ಜಯಿಸಿಕೊಂಡು. ಒರಲಿಕ್ಕೆ ಅನುಮಾನಪಡ ವದೇಕೆ?

ವಿಳಾಸ.— ಸೋಮೇಶ್ವರ ನರಶಿಂಗರಾವ್,
ಕೋಮಲ ವಿಲಾಸ,
ರಸಪ್ಪಚೆಟ್ಟಿ ಬೀದಿ, ಮದರಾಸು

ಕೊಡ್‌ಲಿವರ್ ಎಣ್ಣೆ.



ಈ ಎಣ್ಣೆಯ [illegible] ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಯಿಂದ ಪಕ್ವಗೈದುದ. ಇದರಿಂದ ದೊರಕತಕ್ಕ ಲಾಭವಾದರೋ ಇದರಲ್ಲಿಯ ಎಷ್ಟನೆಯ [illegible] ಅನ್ನು ಅವಲಂಬಿಸಿರುತ್ತದೆ. ಅಲ್ಲ ಕೊಡಲೀವರ್ ಎಣ್ಣೆಯ [illegible] ಜೀರ್ಣವಾಗದ [illegible] ಅಪಾಯಗಳಿಂದ [illegible] ಕೊಡಲೀವರ್ ಎಣ್ಣೆ [illegible] ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತಮ ಫಲವು ಆಶ್ಚರ್ಯಕರವಾಗಿದೆ. ಶ್ವಾಸ ಕಾಸ, ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಅಗತ್ಯವಿದೆಯೋ ಅಂತಹ ಶ್ವಾಸಕಾಸ ಕ್ಷಯಾದಿ ರೋಗಗಳಲ್ಲಿಯೂ ಇತರ ರೋಗಗಳಲ್ಲಿಯೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಬೇಕಾದರೆ [illegible] ಫೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೇ ಕೇಳಿಕೊಳ್ಳಿರಿ. ಈ ಮಿಶ್ರಣವು [illegible] ತ್ತದೆ. ಇದು ಎಲ್ಲಾ ಕಡೆಗಳಲ್ಲಿ ಮಾರಲ್ಪಡುವದು. ಇತ್ತ ಕನ್ನಡ ಬಲ್ಲವರೆಲ್ಲರೂ ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಬಾಟ್ಲಿ 1ಕ್ಕೆ 1—4—0 ಅರ್ಧ ಬಾಟ್ಲಿಗೆ 1—12—0

ದಿ ಊಲನ್ ಮಾರ್ಟ್,
ಮಂಗಳೂರು, ದ. ಕ.

ಔಷಧಗಳು.

ಮಹಾಮದನ ಕಾಮೇಶ್ವರೀ ಲೇಹ್ಯ:—ಬಹಳ ಶ್ರಮಪಟ್ಟು ಕೆಲಸ ಮಾಡುವವರೂ, ಲೇಖಕರೂ, ಮತ್ತು ಇಂದ್ರಿಯ ದೌರ್ಬಲ್ಯ ಅಜೀರ್ಣ, ಎದೆನೋವು, ಶರೀರ್ಭಗಳ ಘಳಿತದಿಂದಾದ ನಿಶ್ಶಕ್ತಿ ಮೊದಲಾದ ಪ್ರಕೃತಿಯುಳ್ಳವರೂ ಇದನ್ನು ಸೇವಿಸಿದ್ದಲ್ಲಿ ಧಾತುಪುಷ್ಟಿಯಾಗಿ ಮುಖವು ಕಾಂತಿಗೊಳಿಸುವದು. ಸೇವನಾ ಕ್ರಮ—ಅಭ್ಯಾಸವುಳ್ಳವರು 1 ಪಾವಲಿ ತೂಕ ಯಾ ಗೋಲಗಾತ್ರ, ಅಭ್ಯಾಸಿಸುವವರು 2 ಆಣೆ ತೂಕ ರಾತ್ರೆ ಊಟಾದ ಮೇಲೆ ಸೇವಿಸಿ ಹಾಲು ಕುಡಿಯತಕ್ಕದ್ದು.

1 ಶೇರಿನ ಡಬ್ಬಿಗೆ ಕ್ರಯ 2—0—0

ಚಂದ್ರೋದಯಾವರ್ತಿ:—ಕಣ್ಣಿಗೆ ಅಂಜನ ಮಾಡಿದ್ದಲ್ಲಿ ಬೆಳೆದ ಮಾಂಸ, ತಿಮಿರ, 3 ವರ್ಷದ ಹೂವು, ಇರಳುಕಣ್ಣು, ತಾಜವಿಂದು ಗುಣ

ಕ್ರಯ ರೂ 0—12—0

ಮಹಾಜ್ವರಾಂಕುಶ:—ದಿವಸಕ್ಕೊಮ್ಮೆ ದ್ವಿತೀಯ, ತೃತೀಯ, ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ. ಡಜನ್ ಕ್ರಯ 0—8—0,

ಮೇಹಮುದ್ಗರವಟಿ:—20 ನಮೂನೆಯ ಪ್ರಮೇಹ, ಧಾತು ಗತಜ್ವರ ಮೂತ್ರಕೃಚ್ಛ್ರ, ಅಶ್ಮರಿ, ಕಾಮಲೆ, ಪಾಂಡು ಗುಣ. ಡಜನ್ 1ರ ಕ್ರಯ 1—2—0

ಕೋಲೆರಾ ಯಾನೆ ವಾಂತಿಭೇದಿ ಗುಟಿಕೆ.—ಒಂದೆರಡು ಗುಟಿಕೆಯಿಂದ ವಾಂತಿಭೇದಿ ಕೂಡಲೇ ಗುಣ. ಡಜನ್ ಗುಟಿಕೆಯ ಕ್ರಯ 0—12—0

ಚಂದನಾಸವ:—ಮೇಹ, ಶುಕ್ಲಧಾತು ನಷ್ಟತ್ವ ಗುಣ. ಬಾಟ್ಲಿಗೆ ರೂ 1

ನಮ್ಮ ಔಷಧಾಲಯದಲ್ಲಿ ಅನೇಕ ವಿಧದ ಬೇರೆ ಔಷಧಗಳು ದೊರೆಯುತ್ತವೆ. ಅಪೇಕ್ಷೆಯುಳ್ಳವರು ಕೆಟಲಾಗು ತರಿಸಿಕೊಳ್ಳಬಹುದು. ಮೊಲಿನ ಔಷಧಗಳು ಬಹಳವಾಗಿ ಖರ್ಚಾಗುವದರಿಂದ ಕ್ರಯವನ್ನು ಕಡಿಮೆ ಮಾಡಿರುತ್ತದೆ.

ವಿಳಾಸ:— ಮೂಲ್ಕಿ ಗಣಪಯ್ಯ ಎಂಡ್ ಸನ್ಸ್,
ನೇಟಿವ್ ಡಾಕ್ಟರ್ಸ್,
ತೇರಬೀದಿ ಮನೆ ನಂಬ್ರ 268ನೇ, ಮಂಗಳೂರು

ಕನ್ನಡ ಕಥಾ ಪುಸ್ತಕಗಳು.

ಶುಕಸಪ್ತತಿ ೭೦ ಕಥೆಗಳು ಸಚಿತ್ರ	೩	೦	೦
ಸಚಿತ್ರ ವಿದ್ಯಾಮಂಜರಿ ಕಥೆಗಳು	೧	೮	೦
,, ಭಟ್ಟಿವಿಕ್ರಮಾದಿತ್ಯರಾಯನ ಕಥೆ	೧	೮	೦
ಸಚಿತ್ರ ರಾಮಾಯಣ ಕಥಾಸಂಗ್ರಹ			
ಗ್ಲೇಜ್ ಅವ್ವಲ್	೧	೪	೦
,, ರಫ್ ದುಯ್ಯಂ	೦	೧೩	೦
ಜೈಮಿನಿ ಭಾರತ ಕಥಾಸಂಗ್ರಹ	೦	೧೩	೦
ಕೃಷ್ಣಬೋಧಾಮೃತ	೦	೧೦	೦
ಭಾರತ ಕಥಾಸಂಗ್ರಹ	೦	೬	೦
ಪ್ರಭಾವತಿ ಶುಕಮಂಜರಿ ಕಥೆ	೦	೫	೦
ಬಕಾವಳಿ ಕಥೆ	೦	೬	೦
ಮದನಮೋಹನರಾಜ ಚರಿತ್ರೆ	೦	೬	೦
ಚಂಚಲಕುಮಾರಿ ಕಥೆ	೦	೪	೦
ಸಾವಿತ್ರಿ [illegible] ಕಥೆ	೦	೫	೦
ಪತಿವ್ರತಾ ಮಹಾತ್ಮ್ಯ ಕಥೆ	೦	೬	೦
ಹರಿಶ್ಚಂದ್ರನ ಕಥೆ	೦	೪	೦
ನಳದಮಯಂತಿಯರ ಕಥೆ	೦	೬	೦
ಬತ್ತೀಸಪುತ್ಥಳಿ ಕಥೆ	೦	೫	೦
[illegible]ದೆಗಳ ಕಥೆ	೦	೬	೦
ಹಂಸಸುಂದರಿ ಸುಕನ್ಯಾ ಕಥೆ	೦	೮	೦
ವಜ್ರಮೋಹಾಶೃಂಗಾರಾದ್ಭುತ ಕಥೆ	೦	೧೩	೦
ಹಾತಿಂತಾಯಿ ಕಥೆ	೦	೧೦	೦

ಪುರಾಣಗಳು.

ತೊರವೆ ರಾಮಾಯಣ ಗ್ಲೇಜ ಅವ್ವಲ್	೩	[illegible]	೦
,, ದುಯ್ಯಂ	೧	೮	೦
ತೊರವೆ ರಾಮಾಯಣ ಸೀಯಂ	[illegible]	೪	೪
ಜೈಮಿನಿ ಭಾರತ ಗ್ಲೇಜ ಅವ್ವಲ್	೧	೪	
,, ದುಯ್ಯಂ	೦	೧೦	೦
,, ಸೀಯಂ	೦	೬	೦
೧೮ ಪರ್ವ ಭಾರತ	೩	೮	೦
೧೩ ಸ್ಕಂಧ ಭಾಗವತ ಗ್ಲೇಜ ಅ	೫	೦	೦
,, ದುಯ್ಯಂ	೪	೦	೦

ಪದಗಳು.

ಪದ್ಯರತ್ನಾಕರ ೧ನೇ ಭಾಗ	೧	೦	೦
ಪುರಂದರದಾಸರ ಕೀರ್ತನೆ ಅ	೦	೬	೦
ಬೆಂಗಳೂರು	೦	೬	೦
ಕನಕದಾಸರ ಬೇರೆದಾಸರ ಕೀರ್ತನೆ	೦	೩	೦
ಗೀತರತ್ನಮಂಜರಿ	೦	೪	೦
ಗೀತಕಲ್ಪಾಂಕುರ	೦	೫	೦
ಗೀತಿಕಾವ್ಯ ಪದ್ಯಮಾಲಿಕಾ	೦	೩	೦
ಗಿ ತಿಲ ತರಂಗಿಣಿ	೦	೪	೦
ಬಾಗಲು ತಡಿಯುವ ಪದ	೦	೦	೬
ಹಪ್ಪ ವಡಿಸಿದ ಹಾಡು	೦	೨	೬
ಕೃಷ್ಣ ದಿನಾಷ್ಟಮೋಪ		೬	೦
ದ್ರೋಣಪರ್ವ	೦	೫	೦
ಲಕ್ಷ್ಮೀಶೋಭಾನೆ	೦	೧	೬
ಪಾಂಡವಗೀತೆ		೧	೬
ವಿಷ್ಣುಸಹಸ್ರನಾಮ ಶ್ಲೋಕ	೦	೩	೦
ಹಾರ್ಮೋನಿಯಂ ಸ್ವರ ಬೋಧಿನಿ	೦	೪	೦

ಇವುಗಳಲ್ಲದೆ ಇನ್ನೂ ಅನೇಕ ತರದ ಕನ್ನಡ, ಮರಾಠಿ, ಸಂಸ್ಕೃತ ಪುಸ್ತಕಗಳೂ, ಹೋಲ್ಡರ್, ಪೆನ್ಸಿಲ್, ಅತ್ತರ್‌ಗಳೂ, ಉತ್ತಮ ತರದ ಊದುಬತ್ತಿಗಳೂ, ಅರಗಜ, ಪಿತ್ಥ ದಶಾಂಗ, ಗಂಧದಪಿಲ್ಲಿ ಮೊದಲಾದ ಸುಗಂಧದ್ರವ್ಯಗಳೂ ಬಹಳ ಕಮ್ಮಿ ಕ್ರಯಕ್ಕೆ ಮಾರಾಟಕ್ಕೆ ಸಿದ್ಧವಾಗಿವೆ. ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ದೊರಿಯುವದು. ಅರ್ಧಾಣೆ ಸ್ಟಾಂಪು ಕಳುಹಿಸಿದರೆ ದೊಡ್ಡ ಕ್ಯಾಟಲಾಗನ್ನು ಕಳುಹಿಸುತ್ತೇವೆ. ಬೇಕಾದವರು ಈ ಕೆಳಗಣ ವಿಳಾಸಕ್ಕೆ ಬರೆಕೊಳ್ಳಬಹುದು.

ಶ್ರೀ ರಾಧಾಕೃಷ್ಣ ವಿಲಾಸ,
ರಥಬೀದಿ ಮಂಗಳೂರು

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,
ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ

೧ ಕುಟುಂಬಜೀವನಿ—ಎಲ್ಲಾ ರೋಗಗಳನ್ನು ತ್ವರೆಯಾಗಿ ಗುಣಪಡಿಸುವದು 16 ಔಷಧಗಳ ಸಂಗ್ರಹದ ಪೆಟ್ಟಿಗೆ 1ಕ್ಕೆ 8—0—0

೨ ಶತಮೂಲಿಕಾ ಅಮರಸಂಜೀವನಿ—ಈ ಟೋನಿಕ್ ದ್ರಾವಕವು ವಿಕ್ರಾಂಗರಿಗೆ ಚೈತನ್ಯ ಉಂಟುಮಾಡಿ ಅಮರತ್ವವನ್ನು ಕೊಡುತ್ತದೆ. ಬಾಟ್ಲಿ 1ಕ್ಕೆ 1—0—0

೩ ಬಾಲಸಂಜೀವನಿ—ಮಧುರ ಟೋನಿಕ್ ಅಶಕ್ತ ಬಾಲಕರಿಗೆ ಸಶಕ್ತರಾಗ ಮಾಡಿ ವಧ ಮಾನ ಚಂದ್ರನಂತೆ ಬೆಳಗಿಸುತ್ತದೆ. ಬಾಟ್ಲಿ 1ಕ್ಕೆ 0—12—0

೪ ವಸಂತ ಕುಸುಮಾಕರ—ಈ ಸುವಾಸಿಕ ತೈಲವು ಶೀತ ವೃದ್ಧಿಮಾಡಿ ಶಿರೋರೋಗ ನೇತ್ರರೋಗಗಳನ್ನು ಶಮನಮಾಡಿ ಮೆದುಳನ್ನು ತಂಪು ಮಾಡಿ ಜ್ಞಾನಶಕ್ತಿ ಹೆಚ್ಚಿಸಿ, ಬುದ್ಧಿ ಭ್ರಮಣವನ್ನು ಗುಣಮಾಡುತ್ತದೆ. ಬಾಟ್ಲಿ 1ಕ್ಕೆ 1—0—0

೫ ಸುದರ್ಶನಮಾಲಿನಿ—ಈ ಸಿದ್ಧೌಷಧವು ಮೇಹವ್ರಣ ಇತ್ಯಾದಿ ಎಲ್ಲಾ ದುಸಾಧ್ಯ ವ್ರಣಗಳನ್ನು 7 8 ದಿವಸಗಳಲ್ಲಿ ಪೂರ್ಣ ಗುಣಪಡಿಸುವದು. ಕ್ರಯ 4—0—0.

೬ ಗರುಡಧ್ವಜ—ಇದು ಸರ್ಪ ಹುಚ್ಚುನಾಯಿ, ಚೇಳು ಇಲಿ ಇತ್ಯಾದಿ ಸರ್ವ ಕಡಿತ ವಿಷಗಳಿಗೆ ಸಂಜೀವನವಾಗಿರುತ್ತದೆ. ಅನುಭವಸಿದ್ಧ 2—0—0

೭ ಆನಂದವನವಿಲಾಸ—ಇದು ಮ್ಯಾಟಿಕ ಎಂಬ ಬಹುಮೂತ್ರ ರೋಗವನ್ನು 48 ದಿವಸಗಳಲ್ಲಿ ಪೂರ್ಣ ಗುಣಪಡಿಸುತ್ತದೆ. ಪೂರ್ಣ ಔಷಧಕ್ಕೆ 5—0—0.

ನಮ್ಮ ಡಿಸ್ಪೆನ್ಸರಿಯಲ್ಲಿ ಸಿದ್ಧ ಕಲ್ಪ ಭೈರಾಗಿ ಪ್ರಯೋಗಗಳಿಂದ ತಯಾರಿಸಿದ ಪೌಡರ ಮಾತ್ರೆಗಳು, ಲೇಹ ಚೂರ್ಣಗಳು, ತೈಲ ಘೃತಗಳು, ಆಸವಾರಿಷ್ಟಗಳೂ ತುಂಬಾ ಇರುತ್ತವೆ. ಕ್ರಯವಿಲ್ಲದ ನಮ್ಮ ಕೆಟಲಾಗನ್ನು ತರಿಸಿಕೊಳ್ಳಿರಿ. ಏಜಂಟರು ಬೇಕು. ಹೆಚ್ಚು ಡಿಸ್‌ಕೌಂಟ್ ಸಿಕ್ಕುವದು.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

ಬ್ಯಾಸೆಲ್ ಮಿಶನ್ ಬುಕ್ ಎಂಡ್ ಟ್ರೇಕ್ಟ್ ಡಿಪೊಜಿಟರಿ.

ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ.

ಲೋಕವ್ಯವಹಾರ ಬೋಧಿನಿ	೧	೦	೦
ನಾನಾರ್ಥ ಶಬ್ದಾವಳಿ ..	೦	೧೦	೦
ಗದ್ಯ ಸಂಗ್ರಹ ...	೦	೬	೦
ಪದ್ಯ ,, ...	೦	೧	೬
ಪದಾರ್ಥ ವಿಜ್ಞಾನ ಶಾಸ್ತ್ರ	೦	೧೨	೬
ಕನ್ನಡ ನುಡಿಹಿಡಿ (ಸಂಕ್ಷಿಪ್ತ ಲಿಪಿ)	೧	೦	೦
ಕನ್ನಡ ಮತ್ತು ಇಂಗ್ಲಿಷ್ ಗಾದೆಗಳು	೦	೪	೦
ಇಂಗ್ಲಿಷು ಭಾಷಾಮಂಜರಿ	೧	೦	೦
ಇಂಗ್ಲಿಷು ಕನ್ನಡ ಸಂಭಾಷಣ ವಾಕ್ಯಗಳು	೦	೧೦	೦
ಕನ್ನಡ ಇಂಗ್ಲಿಷು ನಿಘಂಟು (ದೊಡ್ಡದು)	೩	೦	೦
ಇಂಗ್ಲಿಷ್ ಕನ್ನಡ ,, (ದೊಡ್ಡದು)	೩	೦	೦
,, ,, , (ಸಣ್ಣದು)	೧	೮	೦
ಸಂಸ್ಕೃತ ಬಾಲವ್ಯಾಕರಣ	೧	೦	೦
ತಿದ್ದುವಿಕೆಯೂ ಶಿಕ್ಷಣವೂ, ಪೌಲರ್ ದೊರೆಗಳು ಮಾಡಿದ್ದು	೦	೧೪	೦
ಹಿಂದು ದೇಶದ ಚರಿತ್ರೆ ಸಂಪೂರ್ಣ	೧	೦	೦
ಕೃಷಿ ಶಾಸ್ತ್ರದ ಮೊದಲನೇ ಪುಸ್ತಕ	೦	೬	೦
ಮೊದಲನೇ ಪದ್ಯ ಪುಸ್ತಕ	೦	೧	೬
ವಿಕೀರ್ಣ ಸುಭಾಷಿತ ಪ್ರಸಂಗ ಶತಕ	೦	೧	೦
ರಾಜರ ಗೀತ (ಚಿತ್ರ ಸಹಿತ)	೦	೦	೬
ಕನ್ನಡ ಹಿಂದುಸ್ತಾನಿ ಭಾಷಾಮಂಜರಿ	೦	೪	೬
ಇಸೋಪನ ನೀತಿಕಥೆಗಳು (ಚಿತ್ರ ಸಹಿತ)	೦	೮	೦
ಆರೋಗ್ಯ ಭಾಗ್ಯ	೦	೪	೦
ವ್ಯಾಯಾಮ ಬೋಧಿನಿ	೦	೪	೦
ರೋಗ ಚಿಕಿತ್ಸೆ	೧	೭	೦
ಜೀವರಸಾಯನಿ ವೈದ್ಯಸಾರ	೧	೦	೦
ಮಸ್ಸೀಹ ವಿಷಯ	೦	೪	೦
ಅಲಿಬಾಬನ ಕಥೆ	೦	೨	೦

ಕನ್ನಡ ಕ್ರಿಮಿನಲ್ ಪ್ರೊಸೀಜರ್ ಕೋಡು

[illegible] ಪುಟಗಳುಳ್ಳದು

ಬೊಂಬಾಯಿ, ಮದ್ರಾಸ್, ಕಲ್ಕತ್ತಾ [illegible] ಅನೇಕ ಜಿಲ್ಲೆಗಳಲ್ಲಿ ಜಾರಿ [illegible] ಹೊಸದಾಗಿ [illegible] ಬರೆದಿ [illegible] ಒದಗಿದೆ

ಇದರಿಂದ ಪ್ರಪಂಚ [illegible] ಸೌಲಭ್ಯ ಉಂಟಾಗಿದೆ ಈ ಸೌಲಭ್ಯಗಳನ್ನು ಸಾಧ್ಯವಾದ [illegible] ಕನ್ನಡಿಗರಿಗೆ ಕಲ್ಪಿಸಿಕೊಡಲು ಅಂಗ್ಲಭಾಷಾ ಟಿಪ್ಪಣಿಗಳು ಭಾಷಾಂತರ ಮಾಡಲ್ಪಟ್ಟಿವೆ

ಕೋರ್ಟಿಗೆ [illegible] ಉಪಯೋಗವಾದ ಪುಸ್ತಕ ಈ ಪುಸ್ತಕವನ್ನು ಒಂದು ಸಲ [illegible] ಮೊಕದ್ದಮೆಗಳನ್ನೂ ಲಾಯರುಗಳ ಸಹಾಯವಿಲ್ಲದೇನೆ [illegible] ಸಾಧ್ಯವಾ [illegible]

ಕ್ರಯ [illegible] ೦ ೦ [illegible] ಟಪಾಲು [illegible] ಆಣೆ

ಸುಭದ್ರೆ.

[illegible] ಕಥೆ, (ನಾವೆಲ್)

ಈ ನವರಸಭರಿತವಾದ ಕಥೆಯ ವಿಚಾರದಲ್ಲಿ ಅನೇಕ ದೊಡ್ಡ ಮನುಷ್ಯರಿಂದ ಬಹಳ [illegible] ಅಭಿಪ್ರಾಯಗಳು [illegible] ಅವುಗಳಲ್ಲಿ [illegible] ಇದರಡಿ ತಿಳಿಸಿರುತ್ತೇವೆ —

ಮೈಸೂರ ದೇಶದ ವಿದ್ಯಾಭ್ಯಾಸ ಇಲಾಖೆಯ ಇನ್ಸ್‌ಪೆಕ್ಟರ ಜನರಲರವರು—"ನಿಮ್ಮ ಸುಭದ್ರೆ [illegible] ಪುಸ್ತಕ [illegible] ಪ್ರತಿಗಳನ್ನು ಈ ಇಲಾಖೆಯ ಉಪಯೋಗಕ್ಕಾಗಿ ಕಳುಹಿಸಿಕೊಡಿ"

ಮ।। ರಾ।। ಬಿ ರಾಮರಾವ್ ಎಂ ಎ, ಎಲ್ ಎಲ್ ಬಿ, ಗವರ್ನಮೆಂಟ ಟ್ರಾನ್ಸ್‌ಲೇಟರ್ ಮದ್ರಾಸ್, ಇವರು—"ಕಥೆಯು ಬಹಳ ಸಾರಸ್ಯವಾಗಿದೆ * * * * ಇದರಂತೆಯೇ ನಮ್ಮ ಸಮಾಜದಲ್ಲಿರುವ ನ್ಯೂನತೆಗಳನ್ನು ತಿಳಿಯಪಡಿಸಿ ಇನ್ನೂ ಕೆಲವು ಪುಸ್ತಕಗಳನ್ನು ಬರೆಯುತ್ತೀರೆಂತ ನಂಬಿರುತ್ತೇನೆ"

ವಿಳಾಸ:— ಎಚ್. ಎನ್. ರಾವ್ ಅಂಡ್ ಬ್ರದರ್ಸ್,
ಚಿಕ್ಕಪೇಟೆ, ಬೆಂಗಳೂರು ಸಿಟಿ.

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ಸುಗಂಧನಾಸಿಕಾಚೂರ್ಣ:— ಈ ನಾಸಿಕಾಚೂರ್ಣವು ಅತ್ಯುತ್ತಮವಾದ ಸುಗಂಧವಸ್ತುಗಳಿಂದ ತಯಾರಿಸಿದ್ದು ಇದನ್ನು ಸಾಧಾರಣ ನಸ್ಯದೊಡನೇ ಕೊಂಚ ಸೇರಿಸಿ ಉಪಯೋಗಿಸಿದರೆ ಹೊಗೆಸೊಪ್ಪಿನ ದುರ್ವಾಸನೆ ಮೂಲಕವಾಗಿ ಹೋಗುವದಲ್ಲದೆ ಮನಸ್ಸಿಗೆ ಸಂತೋಷವಾದ ಸುವಾಸನೆಯನ್ನು ಕೊಡುವದು. ಇದು ತಲೆನೋವು, ಪಿತ್ತದಿಂದ ತಲೆ ತಿರುಗುವದು, ಪೀನಸ ಮುಂತಾದ ರೋಗಗಳನ್ನು ನಿವೃತ್ತಿಮಾಡಿ ಕ್ರಮೇಣ ನಸ್ಯದ ದುರಭ್ಯಾಸವನ್ನು ಹೋಗಲಾಡಿಸುವದು ಒಂದು ಸೀಸೆ ಒಂದು ತಿಂಗಳಿಗೆ ಸಾಕು. ಸೀಸೆ 1ಕ್ಕೆ 4 ಆಣೆ ಟಪ್ಪಾಲ್ ಚಾರ್ಜು 1 ಸೀಸೆಯಿಂದ 3 ಸೀಸೆವರಿಗೆ 3 ಆಣೆ 4 ಸೀಸೆಯಿಂದ ೬ ಸೀಸೆವರಿಗೆ 5 ಆಣೆ 7 ಸೀಸೆಯಿಂದ 12 ಸೀಸೆವರಿಗೆ 7 ಆಣೆ.

ಅಶೋಕಘೃತ.— ಸ್ತ್ರೀಗಳು ಕ್ರಮತಪ್ಪಿ ಬಹಿಷ್ಟೆಯಾಗೋಣ, ಮುಟ್ಟಾದ ಕಾಲದಲ್ಲಿ ಬಹು ನೋವುಂಟಾಗುವಿಕೆ, ಮುಟ್ಟು ಕಳೆಯುವವರೆಗೂ ತೊಡೆಯಸಂದಿನಲ್ಲಿ ವಿಪರೀತವಾಗಿ ಬಾಧೆಯಾಗುವುದು, ಹೊತ್ತು ಗೊತ್ತಿಲ್ಲದೆ ಮುಟ್ಟಾಗೋಣ, ಅತ್ಯಲ್ಪವಾಗಿಯಾಗಲಿ ಅಥವಾ ಅತ್ಯಧಿಕವಾಗಿಯಾಗಲಿ ರಜಸ್ಸು ಸುರಿಯುವುದು, ಮಕ್ಕಳಿಲ್ಲದೆ ಬಹು ಕಾಲ ಬಂಜೆಯಾಗಿರುವುದ, ವಾಡಿಕೆಯಾಗಿ ಗರ್ಭಸ್ರಾವವಾಗುವಿಕೆ, ಇವೇ ಮೊದಲಾಗಿ ನಾನಾತರದ ವ್ಯಾದಿಗಳಿಗೂ ಅತ್ಯುತಮವಾದ ಔಷಧವು. ಆರೋಗ್ಯ ಮತ್ತು ಅಂದವಾಗಿಯೂ ಇರತಕ್ಕ ಮಕ್ಕಳನ್ನು ಪಡೆಯಬೇಕೆಂದು ಬಯಸುವ ಪ್ರತಿಯೊಬ್ಬ ಸ್ತ್ರೀಯು ನಮ್ಮ ಅಶೋಕಘೃತವನ್ನು ಅತ್ಯವಶ್ಯವಾಗಿ ಉಪಯೋಗಿಸಬೇಕು. ಸೀಸೆ 1ಕ್ಕೆ 1 ರೂ, ಎರಡು ಸೀಸೆವರಿಗೆ ವಿ ಪಿ ಚಾರ್ಜು 5 ಆಣೆ.

ಬೃಹತ್‌ಚಂದ್ರೋದಯ ಮಕರಧ್ವಜ. ನರಗಳ ದುರ್ಬಲತೆಗೂ, ಸತ್ವ ಕುಂದಿರುವುದಕ್ಕೂ, ಪಠ ಶಂಪ್ರಿಯ [illegible] ಕ್ಷೀಣಿಸಿರುವುದಕ್ಕೂ, ಜ್ಞಾಪಕಶಕ್ತಿಯು ಕಡಿಮೆಯಾಗಿರುವುದಕ್ಕೂ ಮತ್ತು ಸ್ವಪ್ನಸ್ಖಲನಗಳಿಗೂ ಇದು ಅಮೂಲ್ಯವಾದ ಸಂಜೀವನವು "ಮತ್ತು ಕುಡಿಯುತ್ತಲೆ ಎದ್ದು ಕುಳಿತುಕೊಂಡರು" ಎಂಬುದು ಮತ್ಯಾವ ಔಷದಿಗಳಿಗೆ ಅಲ್ಲದಿದ್ದರೂ ನಮ್ಮ ಬೃಹತ್‌ಚಂದ್ರೋದಯ ಮಕರಧ್ವಜಕ್ಕೆ ಮಾತ್ರ ಸಲ್ಲುತ್ತದೆ ಇಂದ್ರಜಾಲ ವಿದ್ಯೆಯೋ ಎಂಬಂತೆ ಇದನ್ನು ಸೇವನೆಮಾಡುತ್ತ [illegible] ದಿನದಿನಕ್ಕೂ ವ್ಯಾದಿಯನ್ನು ನೀಗಿ ಪಟುತ್ವವನ್ನು ಕೊಡುವ ವಿಷಯವು ಬಹು ಸ್ಪಷ್ಟವಾಗಿ ತಿಳಿಯುವುದರಿಂದ ನಾವೇ ವಿಶೇಷವಾಗಿ ಹೇಳಿಪ್ರಯೋಜನವಿಲ್ಲವು. ಚಿಕ್ಕಂದಿನಲ್ಲಿ ದುರ್ವ್ಯಾಪಾರಕ್ಕೆ ಸಿಕ್ಕು ಪುರುಷಶಕ್ತಿಯನ್ನೇ ಕೆಡಿಸಿಕೊಂಡಿರುವವರು ಇದನ್ನು ಉಪಯೋಗಮಾಡಿದಲ್ಲದೆ ಇದರ ಸರ್ವೋತ್ಕೃಷ್ಟತೆಯು ತಿಳಿಯುವುದು? ಬಹುಸ್ವಲ್ಪ ಕಾಲದಲ್ಲಿಯೆ ಇಂದ್ರಿಯ ಪಟುತ್ವವರನ್ನಾಗಿಮಾಡಿ ಸಂಪೂರ್ಣ ಪುರುಷಶಕ್ತಿಯನ್ನು ಕೊಡುವುದೆಂದು ನಾವು ಖಂಡಿತವಾಗಿ ಹೇಳುತ್ತೇವೆ ಒಂದು ವಾರದ ಮಟ್ಟಿಗೆ ಉಪಯೋಗವಾಗುವ ಔಷದಕ್ಕೆ ೩ ರೂ, ವಿ ಪಿ ಚಾರ್ಜು 5 ಆಣೆ

☞ ಈ ಪ್ರಾಂತ್ಯದಲಿ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳುನಲ್ಲಾಗಲೀ ಸ್ಪುಟವಾಗಿ ತಿಳಿಯುವಂತೆ ಬರಿಯಬೇಕು

MY ADDRESS.

P. SUBBA ROY,
Ayurvedic Pharmacy,
Sri Perumalkoil,
SANNATHY, TANJORE.

ನಮ್ಮ ವಿಳಾಸ:—

ಪಿ. ಸುಬ್ಬರಾಯ್
ಆಯುರ್ವೇದ ಔಷಧಶಾಲೆ,
ಶ್ರೀ ವೆಂಕಟೇಶ ಪೆರುಮಾಳ್ ದೇವಸ್ಥಾನ,
[illegible]

ಒಂದು ತಿಂಗಳು ಮಾತ್ರ.

ಅರ್ಧ ಕ್ರಯ! ಅರ್ಧ ಕ್ರಯ!

ಭಾರಿ 'ಕ್ಲಿಯರೆನ್ಸ್ ಸೇಲು.'

ಇನ್ನೂ ವಿಧವಿಧದ ಸಾಮಾಗ್ರಿಗಳಿಗೆ ಎಡೆ ದೊರಕುವಂತೆ ಈ ವಿಕ್ರಿತವು ಏರ್ಪಡಿಸಲ್ಪಟ್ಟಿರುತ್ತದೆ



ನಮ್ಮಲ್ಲಿಂದ ತರಿಸೋಣಾಗುವ ಹಾರ್ಮೋನಿಯಮ್‌ಗಳು ತಕ್ಕವುಗಳಲ್ಲವೆಂತ ಕಂಡುಬಂದರೆ ಇವುಗಳು ಗಿರಾಕಿಗಳಿಗೆ ತಲ್ಪಿದ 7 ದಿವಗಳಲ್ಲಿ ತಿರಿಗಿ ನಮಗೆನೇ ಕಳುಹಿಸಿಕೊಟ್ಟು ಹಣವನ್ನು ಮರಳಿ ಪಡಕೊಳ್ಳಬಹುದು

ಸೆಟಿಸ್‌ಫೆಕ್ಷನ್ ಘ್ಲುಟ್‌ಗಳಿಂದ ನಮ್ಮ ಹಾರ್ಮೋನಿಯಮ್‌ಗಳು ಒಳ್ಳೇ ಬೆಳತ ಸಾಗುವಾನಿ ಮರದಿಂದ ತಯ್ಯಾರುಮಾಡಲ್ಪಟ್ಟವುಗಳಾದ್ದರಿಂದ ಎಂಥಾ ಹವೆಯಲ್ಲಾದರೂ ಹಾಳಾಗವು ಯಾವ ವಿಧದ ಗಾಯನ ಸ್ವರಗಳನ್ನಾದರೂ ಇವುಗಳಲ್ಲಿ ಬಾರಿಸಬಹುದಾಗಿದೆ ಇವುಗಳ ಬಾಳುವಿಕೆಯ ವಿಷಯ ಮೂರು ವರುಷಗಳ ಜವಾಬ್ದಾರಿಯ ಗ್ಯಾರಂಟಿಯನ್ನು ಕೊಡುವೆವು ಸಿಂಗಲ್ ರೀಡ್ ಹಾರ್ಮೋನಿಯಮ್ ಪೆಟ್ಟಿಗೆಗಳಿಗೆ ರೂ 38, 40 50, ಈಗ ರೂ. 19, 20, 25 ಪ್ರಕಾರ ಕ್ರಯವನ್ನು ತಗ್ಗಿಸಿರುವೆವು

ಡಬ್ಬಲ್ ರೀಡ್ ಇರುವಂಥವುಗಳಿಗೆ ಕ್ರಯವನ್ನು ರೂ. 60, 70, 80ರಿಂದ ರೂ 30, 35, 40ಕ್ಕೆ ತಗ್ಗಿಸಿರುತ್ತೇವೆ. ಹಾರ್ಮೋನಿಯಮ್‌ಗಳನ್ನು ತರಿಸಲಪೇಕ್ಷಿಸುವವರು ರೂ. 5ನ್ನು ಮುಂಗಡವಾಗಿ ಕಳುಹಿಸಿಕೊಡಬೇಕು ಮತ್ತು ಯಾವ ರೈಲ್ವೆ ಸ್ಟೇಶನಿಗೆ ಕಳುಹಿಸಬೇಕೆಂತ ಸ್ಪಷ್ಟವಾಗಿ ಬರಿಯಬೇಕು

ನೆಶನಲ್ ಹಾರ್ಮೋನಿಯಮ್ ಕಂಪೆನಿ,
ಸಿಮ್ಲಾ. ಪಿ. ಒ. ಕಲ್ಕತ್ತಾ

ಡಾಕ್ಟರ್ ನವರತ್ನರ

ಘಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ ಪ್ರಯೋಗಿಸಲು ಸುಲಭವಾಗಿದೆ ಪರಿಮಳ, ಕೆಡದ ಒಣ್ಣ ಬಹಳ ಅಗ್ಗ. ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ 1 ಟಪ್ಪಾಲು ಚಾರ್ಜು 0—4—0.

Dr. Navaratna & Sons,
Kalbadevi Road, BOMBAY

ಏಜಂಟರು:—ಡಿ. ಊಲನ್ ಮಾರ್ಟ್,
ನಾಥವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು

ಒಂದು ತಿಂಗಳ ತನಕ ಮಾತ್ರ ಕಡಿಮೆ ದರ!

ನಮ್ಮ ರೈಲ್ವೆ ರೆಗ್ಯುಲೇಟರ್ ವಾಚು ಸರಿಯಾದ ಸಮಯವನ್ನು ತೋರಿಸುವಂಥಾದ್ದಾಗಿಯೂ ಮಹನೀಯರಿಗೆ ತಕ್ಕುದುದಾಗಿಯೂ ಇದೆ. ಈ ವಾಚಿಗೆ 3 ವರುಷಗಳ ಗ್ಯಾರಂಟಿ ಇದೆ. ಕ್ರಯ ರೂ. 12. ಈಗ ಕ್ರಯ ರೂ 4 ಮಾತ್ರ ಲೇಡಿಸ್ 9 ಕೆರೆಟ್ ಗೋಲ್ಡ ವಾಚು ಕ್ರಯ ರೂ 48 ಈಗ ರೂ 16 ಲೇಡಿಸ್ ಸಿಲ್ವರ್ ವಾಚು ಕ್ರಯ ರೂ 21 ಈಗ ರೂ 7 ಬಲಿಷ್ಟವಾಗಿಯೂ ಸಬಳಿಕೆಗೆ ಯೋಗ್ಯವಾಗಿಯೂ ಇದ್ದು 8 ದಿವಸಕ್ಕೊಮ್ಮೆ ಕೀ ಕೊಡುವ ವಾಚು ನಿಕ್ಕಲ್ ಕೇಸ ಕ್ರಯ ರೂ 24 ಈಗ ರೂ 8 ಬೆಳ್ಳಿ ಕೇಜು ಓಪನ್‌ಫೇಸ್ ರೂ 33 ಈಗ ರೂ 11 ಸಿಲ್ವರ್ ಹಂಟಿಂಗ್ ಕೇಜು ರೂ 42 ಈಗ ರೂ 14 ಉತ್ತಮವಾದ ರಿಸ್ಟ ವಾಚ ಚರ್ಮದ ಪಟ್ಟಿ ಸಹಿತ ರೂ 15 ಈಗ ರೂ 5

ಸೂಚನೆ —ರಿಸ್ಟ ವಾಚು ವಿನಹ ಇತರ ಪ್ರತಿ ಒಂದ ವಾಚು ಪಡಕೊಳ್ಳುವವರಿಗೆ ಒಂದು ಚೈನು, ಒಂದು ಚೂರಿ, ಒಂದು ಉಂಗುರ ಸಹ 6 ವಾಚುಗಳನ್ನು ಒಂದೇ ಸಲ ತರಿಸಿಕೊಳ್ಳುವವರಿಗೆ ಅದೇ ನಮೂನೆಯ ಒಂದ ವಾಚ ಬಹುಮಾನವಾಗಿ ದೊರಿಯುವದು

ವಿಳಾಸ —

ಕಾಂಪಿಟಿಶನ್ ವಾಚ್ ಕೊ,
20 ಮದನ ಮಿತ್ರ ಲೇನ್,
ಕಲ್ಕತ್ತಾ

Address —

Competition Watch Co.
20 Madan Mitra Lane
(S) CALCUTTA

B. Narasimha Prabhu,
Bantval, (SOUTH CANARA).
AGENT FOR
Malabar and South Canara.

ಕನ್ನಡ ಪದ್ಯ ವ ಗದ್ಯ ಗ್ರಂಥಗಳು.

ಶ್ರೀಮದ್ವಿಷ್ಣು ಭಾಗವತ ದ್ವಾದಶಸ್ಕಂಧ ಅವ್ವಲ್	5	0	0
ಡಿ. ದುಯ್ಯಂ ಪ್ರತಿ.	3	8	0
ಮಹಾಭಾರತ 18 ಪರ್ವಗಳು	4	8	0
ಡಿ 10 ಡಿ	2	0	0
ಡಿ 8 ಡಿ. ಅವ್ವಲ್ ಪ್ರತಿ	1	8	0
ಡಿ. ದುಯ್ಯಂ	1	0	0
ಜೈಮಿನಿಭಾರತ ಪ್ರತಿಪದ ಟೀಕಾ ತಾತ್ಪರ್ಯ ಅವ್ವಲ್	5	0	0
ಡಿ ದುಯ್ಯಂ	3	8	0
ಜೈಮಿನಿ ಭಾರತ ಮೂಲ ಅವ್ವಲ್	1	8	0
ಡಿ. ದುಯ್ಯಂ ಡಿ	0	12	0
ತೊರವೆ ರಾಮಾಯಣ ಅವ್ವಲ್	2	4	0
ಡಿ ದುಯ್ಯಂ	1	0	0
ರಾಜಶೇಖರ ವಿಲಾಸ ಕನ್ನಡ ಟೀಕು ಗ್ರಂಥ	1	8	0
ವೇಂಕಟಗಿರಿ ಮಹಾತ್ಮೆ ಮತ್ತು ಪದ್ಮಾವತಿ ಕಲ್ಯಾಣ	1	8	0
ಅಧ್ಯಾತ್ಮವಿಚಾರ ವೇದಾಂತ ಗ್ರಂಥ	2	4	0
ಮನುವಂಶಾವಳಿ	1	0	0
ಚೆನ್ನಬಸವ ಪುರಾಣ	0	12	0
ಸಟೀಕ ವಿಶ್ವಕರ್ಮ ಪುರಾಣ ಅವ್ವಲ್	1	8	0
ಡಿ ದುಯ್ಯಂ	0	12	0
ದೊಡ್ಡ ಬಕಸಪ್ರತಿ ಇದರಲ್ಲಿ ಶಾಸ್ತ್ರೋಕ್ತ ಮತ್ತು ನೀತಿಮಾರ್ಗ ಕಥೆಗಳು ಅಡಗಿದೆ ಅವ್ವಲ್ ಪ್ರತಿ	1	8	0
ಬ್ರಹತ್ಕಥಾ ಮಂಜರಿ	0	12	0
ಶ್ರೀ ತಿರುತಿ ಸಟೋಧಾವೃತ ಕಥೆ	0	14	0
ವಿಷ್ಣುಶರ್ಮ ಪಂಚತಂತ್ರ	0	8	0
ಭಾಗವತ ಕಥಾ ಸಂಗ್ರಹ	1	8	0
ಭಾರತ ಕಥಾಸಂಗ್ರಹ	0	6	0
ಜೈಮಿನಿ ಭಾರತ ಕಥಾಸಂಗ್ರಹ	0	12	0
ರಾಮಾಯಣ ಕಥಾಸಂಗ್ರಹ	0	12	0
ಸೀತಾರಾಮಾಯಣ	1	8	0
ಸೀತಾ ಚರಿತ್ರ	1	2	0
ದೇವೀಮಹಾತ್ಮೆ ಪದ್ಯ	0	8	0
ದೇವೀಮಹಾತ್ಮೆ ಗದ್ಯ	0	6	0
ನಳದಮಯಂತಿ ಚರಿತ್ರೆ	0	4	0

ವಿ ಪಿ ದ್ವಾರಾ ತರಿಸಿಕೊಳ್ಳುವವರಿಗೆ ಅಂಚೆ ಹಾಸಲು ಪ್ರತ್ಯೇಕ ಇರುವುದು

ಈ ಮೇಲಿನ ಗ್ರಂಥಗಳ ವಿನಹ ನಾನಾ ತರಹದ ಕನ್ನಡ, ಸಂಸ್ಕೃತ ಮರಾಠಿ ಇಂಗ್ಲೀಷ ಡಿಕ್ಷನರಿ ಮುಂತಾದ ಪುಸ್ತಕಗಳೂ ಬರವರಿಗೆ ಸಾಮಾನುಗಳ ಮತ್ತೆ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ

ಕೆ. ಎಮ್. ದಾಸಪ್ರಭು,
ರಥಬೀದಿ, ಮಂಗಳೂರು

ಸ್ವದೇಶಾಭಿಮಾನಿಯ ನೋಟೀಸು

ಚಂದಾದಾರರು ನಮಗೆ ಬರೆಯುವ ಎಲ್ಲಾ ಪತ್ರವ್ಯವಹಾರಗಳಲ್ಲಿ ತಮ್ಮ ತಮ್ಮ ವಿಳಾಸದೊಂದಿಗೆ ಇರುವ ರಿಜಿಸ್ಟರ ನಂಬರನ್ನು ತಪ್ಪದೆ ಬರಿಯತಕ್ಕದ್ದು ರಿಜಿಸ್ಟರು ನಂಬರು ಇಲ್ಲದ ಪತ್ರಗಳಿಗೆ ನಿಗಾ ಕೊಡಲಾರೆವು.

ಪತ್ರಿಕೆಗೆ ಚಂದಾದಾರರಾಗಿ ಸೇರಬೇಕೆನ್ನುವವರು ವರ್ಷ 1ರ ಚಂದಾ ಹಣ ರೂ. 2—1—0ನ್ನು ಮನಿಯಾರ್ಡರು ಮೂಲಕ ರವಾನಿಸುವದುತ್ತಮ. ವಿ. ಪಿ. ಮೂಲಕ ಕಳುಹಿಸಬೇಕೆಂದು ಬರಿಯುವಂಥವರಿಗೆ ಪತ್ರಿಕೆಯ ಹಿಂದಿನ ಸಂಚಿಕೆಯನ್ನು ವಿ ಪಿ. ಮಾಡಿ ಕಳುಹಿಸಲಾಗುವದು. ವಿ ಪಿ.ಯ ಮೊಬಲಗು ನಮಗೆ ತಲ್ಪಿದ ನಂತರವೇ ಪತ್ರಿಕೆಯನ್ನು ಕಳುಹಿಸಲು ಪ್ರಾರಂಭಿಸುವೆವು.

ಮ್ಯಾನೇಜರ್,
ಸ್ವದೇಶಾಭಿಮಾನಿ ಆಫೀಸು,
ಮಂಗಳೂರು ದ. ಕ.

ಮೋಸಹೋಗಬೇಡಿ! ಮೋಸಹೋಗಬೇಡಿ!!

ಕೆಲವರು ನಮ್ಮ ಕಂಪೆನಿಯ ಹೆಸರನ್ನು ಹೇಳಿ ಜನಗಳಿಗೆ ಮೋಸಮಾಡುತ್ತಿರುವರು. ಆದ್ದರಿಂದ ನಮ್ಮಿಂದ ಕಳುಹಿಸುವ ಬಾಂಗಿಯನ್ನು ತೆಗೆದುಕೊಳ್ಳುವಾಗ ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು, 5 ಅವೆನ್ಯು ರೋಡ್, ಬೆಂಗಳೂರು ಸಿಟಿ ಎಂದು, ಮುದ್ರಿಸಿರುವ ಲೇಬಲು ಇರುವದನ್ನು, ನೋಡಿ ತೆಗೆದುಕೊಳ್ಳಿರಿ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ ಮುರಬ್ಬಾವು "ಸಾಲಾಮಿಸ್ರಿ"ಯಲ್ಲಿ ತಯಾರಿಸಲ್ಪಟ್ಟದ್ದು ಅಲ್ಲವೆಂದು ವ್ಯಕ್ತಪಡಿಸುವವರಿಗೆ

೧೦೦೦ ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ಮರುಗುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ 'ಸಾಲಾಮಿಸ್ರೀ ಮುರಬ್ಬಾವನ್ನು' ಸೇವಿಸಿರಿ' ಸೇವಿಸಿರಿ!!

ಈ ಸಾಲಾಮಿಸ್ರೀ ಎಂಬದು ಒಂದು ಗಿಡದ ಹಣ್ಣಾಗಿರುತ್ತದೆ ಕಾಬೂಲು ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳುಗಡ್ಡೆ, ಶಾವುಗಡ್ಡೆ ಇವುಗಳನ್ನು ಸಕ್ಕರೆಪಾಕಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಹೇಳಿ ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಸಾಲಾಮಿಸ್ರಿಯೋ ಅಥವಾ ಬೇರೆ ತರಹಾದ್ದೋ ಎಂಬುವುದು ತಿಳಿದು ಬರುತ್ತೆ

ಈ ಮುರಬ್ಬಾವನ್ನು ಪ್ರತಿಯೊಬ್ಬರು ಸೇವಿಸುವ ಹಾಗೆ

ಸಾಲಾಮಿಸ್ರಿ ಮುರಬ್ಬಾವು — ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವದು.
ಮಂಗಳೂರು, ಶುಕ್ರವಾರ ತಾರೀಕು 29ನೇ ಒಕ್ಟೋಬರ 1915

ಮದ್ರಾಸು ಸಂಸ್ಥಾನದಲ್ಲಿ ಗ್ರಾಮ ಪಂಚಾಯತಗಳು.

ಲೋಕಲ್‌ಬೋರ್ಡುಗಳು ಸ್ಥಾಪಿಸಲ್ಪಟ್ಟು ಹಲವು ವರುಷಗಳಾದರೂ ಅವುಗಳಲ್ಲಿ ಜನರಿಗಿರಬೇಕಾದ ಅಭಿಮಾನ ಅಥವಾ ಪ್ರೀತಿಯು ಇನ್ನೂ ಸರಿಯಾಗಿ ಉಂಟಾಗಿದೆ ಎಂದು ಹೇಳಲು ಆಸ್ಪದವಿರದು. ಇಷ್ಟು ವರುಷಗಳ ಕಾಲದಿಂದಿದ್ದ ಈ ಸಂಸ್ಥೆಗಳು ಈಗಿನಕ್ಕಿಂತಲೂ ಹೆಚ್ಚಾಗಿ ಲೋಕಪ್ರಿಯವಾದವುಗಳಾಗಿ ಬೆಳೆಯಬೇಕಿತ್ತು. ಆದರೆ ಪ್ರಜಾ ಕಡೆಯವರ ಮೇಲೆ ಇವುಗಳ ಆಡಳಿತೆಯ ಭಾರವು ಇರದೆ ಸರಕಾರದ ಅಧಿಕಾರಿಗಳ ಮೇಲೆ ಇದು ಬಹುವಾಗಿರುವದರಿಂದ ಇವುಗಳ ಮೂಲಕ ಆಡಳಿತೆಯು ಸರಿಯಾಗಿ ನಡೆಯುತ್ತದೆ ಎಂತಾದರೂ ಪ್ರಜಾದೃಷ್ಟಿಯಲ್ಲಿ ಇವುಗಳು ಇನ್ನೂ ನಿರ್ಜೀವಾವಸ್ಥೆಯಲ್ಲಿರುವವು. ಗ್ರಾಮಪಂಚಾಯತಗಳ ಸ್ಥಾಪನೆಯ ವಿಚಾರವನ್ನು ಪರಿಶೀಲಿಸಿ ನೋಡಿದರೆ ಲೋಕಲ್‌ಬೋರ್ಡುಗಳ ಆಡಳಿತೆಯಲ್ಲಿಯೇ ಇವುಗಳು ರಚಿಸಲ್ಪಡುವವೆಂತ ತೋರಿಬರುವುದರಿಂದ ಲೋಕಲ್‌ಬೋರ್ಡುಗಳ ಸ್ಥಿತಿಗೆ ಅನುರೂಪವಾದ ಸ್ಥಿತಿಯೇ ಇವುಗಳಿಗೆ ಸಹ ಪ್ರಾಪ್ತಿಸಬಹುದಾಗಿ ತೋರಿಬರುತ್ತದೆ. ಆದರೂ ಸರಕಾರದವರು ಸೂಚಿಸಿರುವ ಗ್ರಾಮಪಂಚಾಯತಗಳ ರಚನೆಯು ಹೇಗೆ ಪರಿಣಮಿಸುವುದೆಂಬುದನ್ನು ಕಾರ್ಯತಃ ಪರೀಕ್ಷಿಸಿಕೊಂಡ ನಂತರ ಇವುಗಳಲ್ಲಿ ಬೇಕಾದ ಬದಲಾವಣೆಯನ್ನು ಅನುಭವ ಮೂಲಕ ಸರಕಾರದವರಿಗೆ ತೋರಿಸಿಕೊಡುವ ಉಪಾಯದ ಹೊರತು ಯಾವುದಾದರೂ ಯುಕ್ತವಾದ ಗತ್ಯಂತರವು ಪ್ರಕೃತ ಇರದ್ದರಿಂದ ಸರಕಾರದ ಹುಕುಮಿನಲ್ಲಿ ಸೂಚಿಸಲಾದ ಪಂಚಾಯತಗಳ ಸ್ಥಾಪನೆಗೆ ಗ್ರಾಮಸ್ಥರೆಲ್ಲರೂ ನೆರವಾಗುವುದು ಕರ್ತವ್ಯವಾಗಿರುವುದು. ಏಕೆಂದರೆ ಸ್ವರಾಜ್ಯಭಾರದ ಮೂಲಪಾಠಕವನ್ನು ಇಂಥಾ ಪಂಚಾಯತಗಳಲ್ಲಿಯೇ ಕಲಿಯಬೇಕಾಗಿರುವುದು.

ಲೋಕಲ್‌ಬೋರ್ಡು ಆಕ್ಟು ಪ್ರಕಾರ ಸ್ಥಾಪಿತವಾಗುವ ಯೂನಿಯನ್‌ಗಳಲ್ಲಿರುವ ಕುಂದುಕಗಳು ಪಂಚಾಯತಗಳಲ್ಲಿರದಂತೆ ಕೆಲವು ತೃಪ್ತಿಕರವಾದ ಬದಲಾವಣೆಗಳನ್ನು ಸರಕಾರದವರು ಸೂಚಿಸಿರುತ್ತಾರೆ. ಎರಡು ಯಾ ಮೂರು ಗ್ರಾಮಗಳನ್ನು ಒಟ್ಟು ಸೇರಿಸಿಕೊಂಡು ಯೂನಿಯನ್‌ಗಳನ್ನು ಸ್ಥಾಪಿಸುವಂತೆ ಪಂಚಾಯತಗಳನ್ನು ಸ್ಥಾಪಿಸದೆ ಒಂದೊಂದು ಗ್ರಾಮ ಅಥವಾ ಅದಕ್ಕೆ ಹತ್ತರವಿರುವ ಸ್ಥಳಗಳನ್ನು ಕೂಡಿಸಿಕೊಂಡು ಪ್ರತ್ಯೇಕವಾಗಿ ಒಂದೊಂದು ಪಂಚಾಯತವನ್ನು ರಚಿಸುವುದು ಉಚಿತವೆಂತ ಸೂಚಿಸಿರುವರು. ಈ ಬದಲಾವಣೆಯಿಂದ ಆಯಾ ಗ್ರಾಮಗಳ ವಿಶೇಷತ್ವಕ್ಕೆ ತಕ್ಕದಾದ ಲಕ್ಷ್ಯವನ್ನು ಅವವುಗಳ ಪಂಚಾಯತಗಳಿಂದ ಕೊಡಲು ಸಾಧ್ಯವಾಗುವುದು. ಪಂಚಾಯತಗಳಿಗೆ ತೆರಿಗೆಗಳನ್ನು ವಿಧಿಸುವುದರಲ್ಲಿಯೂ, ಪಂಚಾಯತಗಳ ಹುಟ್ಟುವಳಿಯನ್ನು ಅವುಗಳು ಖರ್ಚು ಮಾಡುವುದರಲ್ಲಿಯೂ ನಿರ್ಬಂಧವಿರಕೂಡದೆಂಬ ಸರಕಾರದವರ ಮತ್ತೊಂದು ಸೂಚನೆಯು ಸಹ ಉಪಯುಕ್ತವಾಗಿರುವುದು. ಪಂಚಾಯತಗಳು ತಮ್ಮ ಕೆಲಸಗಳನ್ನು ಸರಿಯಾಗಿ ಮಾಡದೆ ಅವುಗಳ ಆದಾಯವು ನಿರರ್ಥಕವಾಗಿ ವೆಚ್ಚವಾಗಿ ಹೋಗುವ ಸಂದರ್ಭಗಳಲ್ಲಿ ಮಾತ್ರ ಇವುಗಳನ್ನು ಅಂಕೆಯಲ್ಲಿಡುವ ಅಧಿಕಾರವು ತಾಲೂಕು ಬೋರ್ಡಿನವರಿಗೆ ಇರುವುದು.

ಪಂಚಾಯತಗಳ ಮೆಂಬರರ ಸಂಖ್ಯೆಯು ಆಯಾ ಗ್ರಾಮಗಳ ಜನಸಂಖ್ಯೆಗೆ ಅನುಸಾರವಾಗಿ ಐದರಿಂದ ಹದಿನಾರರ ವರೆಗೆ ಇರಬಹುದಾಗಿದೆ. ಗ್ರಾಮದ ಪಟೇಲನು ಈ ಪಂಚಾಯತದ 'ಎಕ್ಸ್ ಆಫಿಸಿಯೊ' ಮೆಂಬರನಾಗಿರುವನು. ಇತರ ಮೆಂಬರರನ್ನು ಗ್ರಾಮಸ್ಥರು ತಮ್ಮೊಳಗಿಂದ ಚುನಾವಣೆಯಿಂದ ಆರಿಸಬೇಕಾಗಿದೆ. ತಾಲೂಕು ಬೋರ್ಡು ಪ್ರೆಸಿಡೆಂಟರು ಆಯಾ ಗ್ರಾಮಗಳಲ್ಲಿ ಸಭೆಗಳನ್ನು ಕೂಡಿಸಿ ಸಭೆಯಲ್ಲಿ ಕೂಡಿದ ಸಭಿಕರಿಂದ ಮೆಂಬರರನ್ನು ಚುನಾಯಿಸಿ ತೆಗಿಯುವರು. ಪಂಚಾಯತದ ಅಧ್ಯಕ್ಷರನ್ನು ಇದೇ ರೀತಿ ಆರಿಸಿತೆಗಿಯಬೇಕಾಗಿರುವುದು. ಮೂರು ಸಾವಿರ ಅಥವಾ ಹೆಚ್ಚಿಗೆ ಜನಸಂಖ್ಯೆಯುಳ್ಳರುವ ಗ್ರಾಮಗಳಲ್ಲಿ ಲೋಕಲ್‌ಬೋರ್ಡು ಆಕ್ಟು ಪ್ರಕಾರ ಮೇಲೆ ವಿವರಿಸಿದ್ದ ರಚನೆಯ ಪಂಚಾಯತಗಳನ್ನು ಸ್ಥಾಪಿಸಬಹುದೆಂದು ಸರಕಾರದವರು ತಮ್ಮ ಹುಕುಮಿನಲ್ಲಿ ಸೂಚಿಸಿರುತ್ತಾರೆ.

ಮೂರು ಸಾವಿರಕ್ಕೆ ತಗ್ಗಿದ ಜನಸಂಖ್ಯೆಯುಳ್ಳ ಹಳ್ಳಿಗಳಲ್ಲಿ ಆಕ್ಟುಗಳ ಅಥವಾ ಶಾಸನ ಸಮ್ಬಂಧವಿಲ್ಲದ ಪಂಚಾಯತಗಳನ್ನು ರೆವಿನ್ಯು ಡಿವಿಜನಲ್ ಆಫೀಸರರ ಅಥವಾ ತಹಸೀಲ್ದಾರರ ಮೂಲಕ ಹಳ್ಳಿಗಳಲ್ಲಿ ಸಭೆಕೂಡಿಸಿ ಚುನಾಯಿಸಬಹುದೆಂದು ಸರಕಾರದವರು ಹೇಳಿರುವರು. ಆದರೆ ಆಕ್ಟುಗಳ ಅಥವಾ ಶಾಸನಗಳ ಬಲವಿಲ್ಲದ ಈ ಪಂಚಾಯತಗಳ ಗೌರವವು ಹೇಗಾದೀತೆಂಬುದು ಚರ್ಚಾಸ್ಪದವಾಗಿರುವುದು. ಇಂಥಾ ಪಂಚಾಯತಗಳ ಒಗ್ಗೆ ಸಹ ಬೇಕಾದ ಶಾಸನವನ್ನು ರಚಿಸುವುದು ಉಚಿತವೆಂತ ಅಭಿಪ್ರಾಯಪಡುತ್ತೇವೆ.

ಗತಿಸಿದ ಸರ್. ಹೆನ್ರಿ ಕೊಟನ್‌ರವರು.

ಕಳೆದ ಶನಿವಾರ ಇಂಗ್ಲಾಂಡದಲ್ಲಿ ಸಂಭವಿಸಿದ ಸರ್ ಹೆನ್ರಿ ಕೊಟನ್‌ರವರ ಮರಣದಿಂದ ಭಾರತೀಯ ಪ್ರಜಾವರ್ಗಕ್ಕೆ ಅಗಾಧವಾದ ವಿಷಾದವು ಮತ್ತೊಮ್ಮೆ ಪ್ರಾಪ್ತಿಸಿರುವುದು. ಸಿವಿಲ್ ಸರ್ವಿಸ್ ಹುದ್ದೆಯ ಪದವಿಯನ್ನು ಪಡೆದು ಹಿಂದೂಸ್ಥಾನಕ್ಕೆ ಬಂದು ಸರಕಾರದ ಸೇವೆಯನ್ನು ಮಾಡುತ್ತಿದ್ದಾಗಲೂ ಈ ಹುದ್ದೆಯಿಂದ ನಿವೃತ್ತರಾದ ನಂತರವೂ ಈ ಮಹನೀಯರು ಈ ದೇಶದ ಸೇವಾತತ್ಪರರಾಗಿದ್ದರು. ಹಿಂದೂಸ್ಥಾನದ ಮೇಲೆ ಇವರಿಗಿದ್ದ ಮಮಕಾರವೇ ಕರ್ಜನ್ ಪ್ರಭೃತಿಗಳ ಕಾಲದಲ್ಲಿ ಇವರಿಗೆ ಸಿಕ್ಕಬೇಕಾಗಿದ್ದ ಲೆಪ್ಟಿನೆಂಟ ಗವರ್ನರರ ಪದವಿಗೆ ಮುಖ್ಯ ಅಭ್ಯಂತರವಾಗಿ ಪರಿಣಮಿಸಿತು. ಇವರ ಆತ್ಮಕ್ಕೆ ದೇವರು ಶಾಂತಿಯನ್ನು ದಯಪಾಲಿಸಬಹುದಾಗಿ ಪ್ರಾರ್ಥಿಸುತ್ತೇವೆ. ಇವರ ಜೀವನ ಚರಿತ್ರವನ್ನು ಸಂಕ್ಷೇಪವಾಗಿ ಇನ್ನೊಂದು ಸಂಚಿಕೆಯಲ್ಲಿ ಪ್ರಕಟಿಸುವೆವು.

ಸಾರ್ವಜನಿಕ ಕರ್ತವ್ಯಗಳು.

ಲೇಖಾಂಕ ೧

ಸಾರ್ವಜನಿಕ ಕರ್ತವ್ಯಗಳೆಂದರೇನು?

ಮನುಷ್ಯನು ತನ್ನ ಜೀವಿತದಲ್ಲಿ ಮುಖ್ಯವಾಗಿ ಸಾಧಿಸಬೇಕಾದದ್ದು ಆತ್ಮಹಿತವೆಂದು ಕೆಲವರು ಅಭಿಪ್ರಾಯಪಡುವರು. ಆತ್ಮಹಿತವೆಂದರೆ ವೇದಾಂತಿಗಳು ಹೇಳುವ ಆತ್ಮಹಿತವಲ್ಲ, ಇದು "ಸಂಸಾರದಲ್ಲಿ ಮನುಷ್ಯನು ಈ ಲೋಕದ ತನ್ನ ಹಿತವನ್ನು ಸಾಧಿಸಿಕೊಳ್ಳಬೇಕು" ಎಂಬೀ ಅರ್ಥವನ್ನು ಕೊಡುತ್ತದೆ. ಈ ಆತ್ಮಹಿತವೆಂಬ ಶಬ್ದಕ್ಕೆ "ಸ್ವಾರ್ಥ"ವೆಂದು ಚಿಕ್ಕ ಪರ್ಯಾಯ ಶಬ್ದವಿದೆ. ಇದನ್ನೇ ಮುಂದಿನ ಸಂದರ್ಭದಲ್ಲಿ ಉಪಯೋಗಿಸುವ. ಸ್ವಾರ್ಥವನ್ನು ಸಾಧಿಸುವುದು ಮನುಷ್ಯನ ಮುಖ್ಯ ಉದ್ದೇಶವೆಂದು ಕೆಲವರ ಮತವನ್ನು ಮೇಲೆ ಹೇಳಿದೆ. ಈ ಮತದ ಸಾರಾಂಶವೇನೆಂಬುದನ್ನು ಪ್ರಥಮತಃ ಸಂಕ್ಷೇಪದಿಂದ ಹೇಳಿ ಅನಂತರ ಪ್ರಕೃತ ವಿಷಯವನ್ನು ವಿವರಿಸುತ್ತೇವೆ. ಮನುಷ್ಯನು ಯಾವುದೇ ಕೆಲಸವನ್ನು ಮಾಡಲಿ, ಅದರಲ್ಲಿ ಅವನ ಸ್ವಾರ್ಥ ಬುದ್ಧಿಯು ಈಷನ್ಮಾತ್ರವಾದರೂ ಇದ್ದೇ ಇರುವುದು. ಸ್ವಾರ್ಥವನ್ನು ಮನುಷ್ಯನು ಮಾತ್ರ ಸಾಧಿಸುತ್ತಾನೆಂತಲ್ಲ, ಮನುಷ್ಯೇತರ ಪ್ರಾಣಿಗಳೂ ಕೂಡ ಅದನ್ನು ಸಾಧಿಸುವವು. ಕೆಲವು ಪ್ರಾಣಿಶಾಸ್ತ್ರಜ್ಞರು ಹೇಳುವುದೇನೆಂದರೆ ಕೆಳಗಿನ ತರಗತಿಯ ಪ್ರಾಣಿಗಳ ಎಲ್ಲ ವ್ಯಾಪಾರಗಳು ಬರೇ ಅವುಗಳ ಸ್ವಾರ್ಥಸಾಧನೆಗಾಗಿಯೇ ಇವೆ. ಇನ್ನೂ ಕೆಳಗಿನ ಪ್ರಾಣಿಗಳ ಶರೀರ ರಚನೆ, ಅವಯವಸನ್ನಿವೇಶ ಇವುಗಳನ್ನು ಚನ್ನಾಗಿ ಪರಿಶೀಲಿಸಿದರೆ ಬರೆ ಆಯಾ ವ್ಯಕ್ತಿಯ ಅಸ್ತಿತ್ವವನ್ನು ಕಾಪಾಡಲಿಕ್ಕೆ ತಕ್ಕಷ್ಟು ಮಾತ್ರ ಆ ಶರೀರ ರಚನೆಯಾಗಲಿ, ಅವಯವಸನ್ನಿವೇಶವಾಗಲೀ ಇರುವವೆಂದು ಕಂಡುಬರುವುದು. ಅಂತಹಗಳು ಕೇವಲ ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುವವು. ಇದು ಸೃಷ್ಟಿಯ ನಿಯಮಕ್ಕೆ ಅನುಗುಣವಾಗಿಯೇ ಇರುವುದು. ಕೊಂಚ ಮೇಲಿನ ತರಗತಿಯ ಪ್ರಾಣಿಗಳ ಜೀವನಕ್ರಮವನ್ನು ನೋಡಿದರೆ ಶರೀರ ಮತ್ತು ಇಂದ್ರಿಯ ಇವುಗಳ ಸೌಷ್ಟವವನ್ನು ಪಡೆದ ಆ ಪ್ರಾಣಿಗಳು ತಮ್ಮ ಸ್ವಾರ್ಥ ಬುದ್ಧಿಯ ಕ್ಷೇತ್ರವನ್ನು ತಾನು, ತನ್ನ ಅರಸಿ, ತನ್ನ ಸಂತತಿ ಮುಂತಾದ ರೀತಿಯಲ್ಲಿ ಹೆಚ್ಚಿಸಿದ್ದು ಕಂಡುಬರುತ್ತದೆ. ಇದೇ ರೀತಿಯಿಂದ ಮೇಲ್ಮೇಲಿನ ತರಗತಿಯ ಪ್ರಾಣಿಗಳನ್ನು ನೋಡಿದರೆ ಅವುಗಳ ಎಷ್ಟೋ ವ್ಯಾಪಾರಗಳು ಅನ್ಯರ ಸಲುವಾಗಿ ಇರುವುದು ಸ್ಪಷ್ಟವಾಗುತ್ತದೆ. ಈ ಪ್ರಾಣಿಗಳ ವ್ಯಾಪಾರಾವಲೋಕನದಿಂದ ಕೆಲವು ವಿದ್ವಾಂಸರು Evolution ಎಂದರೆ ಗುಣವಿಕಾಸದಿಂದ ಸೃಷ್ಟಿಯು

ಉತ್ತರೋತ್ತರ ಪೂರ್ಣಾವಸ್ಥೆಗೆ ಬರುತ್ತದೆಂದು ಹೇಳುತ್ತಾರೆ. ಅಸ್ತು, ಈ ಗುಣವಿಕಾಸ ತತ್ವದ ದೃಷ್ಟಿಯಿಂದ ವಿಚಾರ ಮಾಡಲು ಸ್ವಾರ್ಥಸಾಧನೆಯನ್ನು ಪ್ರಾಣಿಯು ನಿಕೃಷ್ಟಾವಸ್ಥೆಯಲ್ಲಿಯೇ ಸಂಪಾದಿಸಿದ್ದೆಂತ ಹೇಳಲು ಏನೂ ಅಡ್ಡಿ ಇಲ್ಲ. ಹೀಗಿರಲು ಈ ಲೇಖದ ಆದಿಯಲ್ಲಿ ಹೇಳಿದ "ಮನುಷ್ಯನ ಮಾಡಬೇಕಾದ ಕರ್ತವ್ಯವು ಸ್ವಾರ್ಥಸಾಧನವೇ" ಎಂಬೀ ಮತವು ವಿಚಾರಾಂತ್ಯದಲ್ಲಿ ಅಷ್ಟೊಂದು ಪ್ರಶಸ್ತವಲ್ಲವೆಂದು ಯಾರೂ ಹೇಳಬಲ್ಲರು. [illegible] ಸಾಧಿಸುವರು. ಆದರೆ ಇದು ಪುರುಷಾರ್ಥವೇ? ಈ ಸಂಗತಿಯನ್ನು ಮಾತ್ರ ಅಲಕ್ಷಿಸತಕ್ಕದ್ದು. ಮನುಷ್ಯೇತರ ಪ್ರಾಣಿಗಳಿಗೆ [illegible] ಕರ್ತವ್ಯಗಳನ್ನು ಮಾಡುವುದಕ್ಕಾಗಿ ಮನುಷ್ಯ ಸಮಾಜವು ಈ ಸೃಷ್ಟಿಯಲ್ಲಿ [illegible], ಮನುಷ್ಯ ವ್ಯಕ್ತಿಗೆ ಇರುವ ಇಂದ್ರಿಯಾನುಕೂಲತೆ [illegible] ಸ್ವಾರ್ಥಕ್ಕಾಗಿರುವುದಲ್ಲ. ಆ ವಿಚಾರ ಸಾರ್ವತ್ರಿಕ [illegible] ಮನುಷ್ಯನು ತನ್ನ ಈ ಜನ್ಮವು ತನ್ನ ದೇಶಬಂಧುಗಳ ಉಪಯೋಗಕ್ಕಾಗಿದೆ [illegible] ಧನೆಗಾಗಿದೆ ಎಂದು ನೆನೆಸತಕ್ಕದ್ದು. ಈ ತಿಳಿವು ಮನುಷ್ಯನಲ್ಲಿ ಯಾವಾಗ ಬೇರೂರುವುದೋ ಆಗ "ಮನುಷ್ಯ" ಎಂಬ ಸಂಜ್ಞೆಗೆ ಅವನು ಪಾತ್ರನಾದಾನು.

ಮನುಷ್ಯನಲ್ಲಿ ಈ ತಿಳಿವು ಹುಟ್ಟುವುದೇ ಸಾರ್ವಜನಿಕ ಕರ್ತವ್ಯದ "ಶ್ರೀಗಣೇಶಾಯನಮಃ" ಎಂತೆನ್ನಬಹುದು. ಈ ತಿಳಿವು ಮನುಷ್ಯನಲ್ಲಿ ಹುಟ್ಟುವುದು ಆಶ್ಚರ್ಯಕರ ಸಂಗತಿಯಲ್ಲ; [illegible], ಇಲ್ಲವೆ ಅಲೌಕಿಕವೂ ಅಲ್ಲ. ಅದು ಸ್ವಾಭಾವಿಕವೇ [illegible] "Theory of evolution" ಎಂದರೆ ಗುಣವಿಕಾಸ [illegible] ಪ್ರಾಣಿಯು [illegible] ಸೃಷ್ಟಿ ಮೇಲ್ತರಗತಿಯ ಪ್ರಾಣಿಯು ತನ್ನ ಕುಟುಂಬ [illegible] ಇನ್ನೂ ಸ್ವಲ್ಪ [illegible] ಸುವುದು. [illegible] ಸ್ವಾರ್ಥ ಸಾಧನೆಯ [illegible] ಕ್ಷೇತ್ರವು [illegible] ನೋಡುತ್ತೇವೆ. ಇದೇ ಕ್ರಮವು ಮನುಷ್ಯ ಸಮಾಜದಲ್ಲಿ ತನ್ನ ವರ್ಗ, ಗ್ರಾಮ, ದೇಶ [illegible] ಅಲೌಕಿಕ ಸಂಗತಿಯಲ್ಲ. ಆದರೆ ಗುಣವಿಕಾಸದ [illegible] ಕ್ಷೇತ್ರದ್ದೇ ವಿಸ್ತಾರವೆಂತ ಹೇಳಬೇಕಾಗುತ್ತದೆ. ತನ್ನ ದೇಶ [illegible] ತನ್ನ [illegible] ಹಿತದಲ್ಲಿ ತನ್ನ ಹಿತವು [illegible] ದೇಶಹಿತಕ್ಕಾಗಿ [illegible] ಪ್ರವೃತ್ತಿಯನ್ನಬಹುದು!

ಗುಣವಿಕಾಸ, [illegible] ಶಾಸ್ತ್ರೀಯ ಮಾರ್ಗವನ್ನು ಬಿಟ್ಟು [illegible] ದೇಶಕ್ಕಾಗಿ ತನ್ನ ಜನ್ಮವಿದೆ [illegible] ಮನುಷ್ಯನಲ್ಲಿ ಅಭಿವ್ಯಕ್ತವಾಗಬಹುದು. [illegible] ದಾಸನ ಒಂದೇ ಮಾತು ಸಾಕು [illegible] ವುದೇ [illegible] ಮೂರ್ಧ್ನಾ ಸಾಪಸ [illegible] ಸಂಶ್ರಿತಾನಾಮ್" [illegible] ಸಂತೋಷಪಡಿಸುತ್ತದಲ್ಲವೇ? [illegible] ಲೋಕಶಾಂತಿಗಾಗಿ ವರ್ಷಿಸುವುದು [illegible] ಬೀಸುವುದಾದರೂ ಲೋಕಹಿತಕ್ಕಾಗಿಯೇ ಇದೆ [illegible] ಹೇಳಬೇಕು? ಇಂತಹ ಅನೇಕ ದೃಷ್ಟಾಂತಗಳಿಂದ ಸೃಷ್ಟಿಯ ಪ್ರವೃತ್ತಿಯು ಪರಾರ್ಥಕ್ಕಾಗಿಯೇ ಇದೆಂದು ಹೇಳಲು ಏನೂ ಸಂಕೋಚ ತೋರುವುದಿಲ್ಲ. ಜಡಸೃಷ್ಟಿಯು ಈ ಬಗೆಯಾಗಿ ಪರಾರ್ಥನಿರತವಾಗಿರುವಾಗ ಜ್ಞಾನವಂತನಾದ ಮನುಷ್ಯನು ಕೇವಲ ಸ್ವಾರ್ಥಪರನಾಗಿರುವದು ಸೃಷ್ಟಿಕ್ರಮದ ಉಪದೇಶಕ್ಕೆ ವಿರುದ್ಧವಲ್ಲವೇ? ತಿಳಿವಿಲ್ಲದ ಜಡಸೃಷ್ಟಿಯು ಯಾವ ಕಟ್ಟಳೆಗಳನ್ನು ಅನುಸ್ಯೂತವಾಗಿ ಅನುಸರಿಸಿಕೊಂಡು ಹೋಗುತ್ತದೆಯೋ ಆ ಕಟ್ಟಳೆಗಳನ್ನು ಜ್ಞಾನವಂತರಾದ ಮಾನವರು ಉಲ್ಲಂಘಿಸುವುದು ನ್ಯಾಯವಲ್ಲ. ತಾತ್ಪರ್ಯವೇನೆಂದರೆ—ಈಶ್ವರ ನಿರ್ಮಿತವಾದ ಈ ಸೃಷ್ಟಿಯ ಯಾವ ಪುಟವನ್ನು ತೆರೆದರೂ ಅದರಲ್ಲಿ ಪರೋಪಕಾರದ ಪಾಠವೇ ಬರೆದಿರುವುದು.

ತಾತ್ವಿಕದೃಷ್ಟಿಯಿಂದ ನೋಡಿರಿ! ಇಲ್ಲವೆ ಕವಿಗಳ ಪ್ರತಿಭೆಯಿಂದ ಸಾಕ್ಷಾತ್ಕರಿಸಿರಿ, ಲೋಕದಲ್ಲಿ ಪರಹಿತವು ಸಾತ್ವಿಕಾಂಶದ ಅಭಿವ್ಯಕ್ತವಾದ ಕಾರ್ಯವಿರುತ್ತದೆಂದು ತೋರದೆ ಇರದು. ಮನುಷ್ಯನ ಮನುಷ್ಯತ್ವವು ಈ ಪರಹಿತ ಸಾಧಿಸುವುದರಲ್ಲಿಯೇ ಇರುವದಲ್ಲದೆ, ಈ ಲೇಖದ ಆರಂಭದಲ್ಲಿ ಹೇಳಿದ್ದಂತೆ—ಆತ್ಮಹಿತ—ಸ್ವಾರ್ಥದಲ್ಲಿ ಇಲ್ಲ. ಈ ಪರಹಿತದ ಸಲುವಾಗಿ ಹೃತ್ಪೂರ್ವಕ ಪ್ರಯತ್ನಿಸುವುದೇ ಈಗಿನ ವಾಙ್ಮಯದಲ್ಲಿ ಸಾರ್ವಜನಿಕ ಕರ್ತವ್ಯವೆನಿಸಲ್ಪಡುವುದು. ಒಂದೇ ತರದ ಸಮಾಜಬಂಧನೆಯಿಂದಲೂ, ಒಂದೇ ತರದ ಧಾರ್ಮಿಕಕಲ್ಪನೆಗಳಿಂದಲೂ, ಒಂದೇ ತರದ ಸೃಷ್ಟಿದೇವಿಯ ಕಟ್ಟಳೆಗಳಿಂದಲೂ ಸಂಬದ್ಧರಾದ ತನ್ನ ದೇಶಬಾಂಧವರು ಯಾವ ಕಷ್ಟಗಳನ್ನು ಅನುಭವಿಸುತ್ತಿದ್ದಾರ, ಅವರಲ್ಲಿ ಯಾವಸಂಗತಿಗಳ ಕೊರತೆಗಳಿರುವವು, ಅವುಗಳನ್ನು [illegible] ಹೋಗಲಾಡಿಸಬಹುದು ಮೊದಲಾದ ಎಲ್ಲ ವಿಷಯಗಳನ್ನು ತಿಳಿದುಕೊಂಡು ಆ ಪ್ರಕಾರ ತನ್ನ ಕೈಲಾದಮಟ್ಟಿಗೆ ಸಹಾಯಮಾಡುವುದೇ ಸಾರ್ವಜನಿಕ ಕರ್ತವ್ಯವು. ಈ ಜಗತ್ತೆಂದರೆ ತಾನು ಮತ್ತು ತನ್ನ ಮಕ್ಕಳು ಎಂಬೀ ಸಂಕುಚಿತ ಮತ್ತು ಪಾಶವ ಮನೋವೃತ್ತಿಗಳನ್ನು ಬಿಟ್ಟು, ಸಮಾಜವೇ ತನ್ನ ಕುಟುಂಬವು, ದೇಶವೇ ತನ್ನ ಮನೆಯು, ದೇಶಹಿತಸಾಧಿಸುವುದೇ ತನ್ನ ನಿತ್ಯಕರ್ಮವು ಇವೇ ಮೊದಲಾದ ಉದಾತ್ತ ಮತ್ತು ವ್ಯಾಪಕ ವಿಚಾರಗಳನ್ನು ಅಂಗೀಕರಿಸುವವನು ಸಾರ್ವಜನಿಕ ಕರ್ತವ್ಯದ ಕೊಲೇಜಿನಲ್ಲಿ ಪ್ರವೇಶಿಸಲು ಅರ್ಹನಾಗುತ್ತಾನೆ. ಇಂತಹ ಕೊಲೇಜಿನಲ್ಲಿ ಪ್ರವೇಶಿಸಿ ಅಲ್ಲಿಯ ವಿದ್ಯೆಯಲ್ಲಿ ಪೂರ್ಣ ಪಾರಂಗತನಾಗಿ ಪರೀಕ್ಷೆಯಲ್ಲಿ ಉತ್ತೀರ್ಣನಾಗಲಿಚ್ಛಿಸುವವನು ಆತ್ಮಯಜ್ಞದ ಗುರುದಕ್ಷಿಣೆಯನ್ನು ಕೊಡಲು ಸರ್ವಥಾ ಉದ್ಯುಕ್ತನಾಗಿರಬೇಕು. ಇದೇ ಸಾರ್ವಜನಿಕ ಕರ್ತವ್ಯಕ್ಷೇತ್ರದಲ್ಲಿ ವ್ಯವಸಾಯಮಾಡುವವರ ಹತ್ತರ ಇರಬೇಕಾದ ಧಾನ್ಯಸಂಚಯವು.

ಅಸ್ತು. ಮೇಲಿನ ಈ ಎಲ್ಲ ಉಪಪಾದನೆಯಿಂದ ಸಾರ್ವಜನಿಕ ಕರ್ತವ್ಯವೆಂದರೇನು ಎಂಬುದು ವಾಚಕರಿಗೆ ಚನ್ನಾಗಿ ಗೊತ್ತಾಗಿರಬಹುದು. ಮತ್ತು ಈ ರೀತಿಯಾಗಿ [illegible] ಗೊತ್ತಾದ ಮೇಲೆ [illegible] ಅವುಗಳನ್ನು ಸಾಧಿಸುವುದು ಹೇಗೆ, ಈ ಸಾರ್ವಜನಿಕ ಕರ್ತವ್ಯ ಕಲ್ಪನೆಯು ಈಗೆ ಪಾಶ್ಚಾತ್ಯ ಸಂಸ್ಕೃತಿಯ ಪ್ರಸಾದ [illegible] ಬಂದಿದೆಯೋ, ಅಥವಾ ಈ ಕಲ್ಪನೆಯು ಮೊದಲೇ ನಮ್ಮ ಪುರಾಣಗಳ ಕಾಲದಲ್ಲಿ ಕಾಣುವುದೋ ಮುಂತಾದ ಹಲವು ಸಂಗತಿಗಳನ್ನು ಹೇಳುವುದು ಕ್ರಮಪ್ರಾಪ್ತವಾಗಿರುವುದು. [illegible] ಸ್ಥಲಸಂಕೋಚದ ದೆಸೆಯಿಂದಲೂ ಮತ್ತು ಅತಿ ಉದ್ದ [illegible] ವಾಚಕರಿಗೆ [illegible] ತಾತ್ಪರ್ಯವೂ ಇಲ್ಲದಿರುವುದರಿಂದ [illegible] ಮುಂದಿನ ಸಂಚಿಕೆಯಲ್ಲಿ ಕ್ರಮದಿಂದ ವಿವರಿಸುವೆವು.

ವಾಙ್ಮಯ ಕಲಾಶಾಸ್ತ್ರಗಳ ಅಭಿವೃದ್ಧಿಯ ಸಮಾಚಾರ.

(Progress of Literature, Science and Art.)

ಹಕ್ಕಿಯಂತೆ ಆಕಾಶ ಮಾರ್ಗವಾಗಿ ಹೋದರೆ ಬಹು ಸಮೀಪವಾಗಿರುವುದಾದರೂ ಪರ್ವತ ಶ್ರೇಣಿಗಳು ಅರಣ್ಯಗಳು ಮತ್ತು ಅಗಮ್ಯವಾದ ರಸ್ತೆಗಳ ದೆಸೆಯಿಂದ [illegible] ದೂರವಾಗಿ ಮುಟ್ಟಬೇಕಾದ ಹಲವು ದಿನಗಳು ತಗಲತಕ್ಕ ಪ್ರಾಂತ್ಯಗಳಲ್ಲಿ ಆಕಾಶಯಾನಗಳ ಮೂಲವಾಗಿ ಟಪ್ಪಾಲು ಒಯ್ಯಬೇಕೆಂದು ಅಮೇರಿಕದ ಕಾಂಗ್ರೆಸ್ಸಿನಲ್ಲಿ (ಎಂದರೆ ಪಾರ್ಲಿಮೆಂಟಿನಲ್ಲಿ) ಪುನಃ ಪುನಃ ಸೂಚನೆಗಳು ತರಲ್ಪಡುತ್ತಿವೆಯಾದರೂ ಇದುವರೆಗೆ ಕಾರ್ಯತಃ ಒಂದೂ ಆದ ಹಾಗೆ ತಿಳಿಯಬರುವುದಿಲ್ಲ. ತಥಾಪಿ ಸಾಧ್ಯಾಸಾಧ್ಯತೆಯನ್ನು ನೋಡಬೇಕೆಂದು ಪರೀಕ್ಷಾರ್ಥವಾಗಿ ಕೆಲಕೆಲವು ಟಪ್ಪಾಲು ಚೀಲಗಳನ್ನು ಆಕಾಶಮಾರ್ಗದಲ್ಲಿ ಕಳಿಸಿ ನೋಡಿರುವರು, ಮತ್ತು ಇದು ಸಾಧ್ಯವೆಂದು ಸ್ಥಾಪಿಸಲ್ಪಟ್ಟಿದೆ. ಕ್ಯಾಲಿಫೋರ್ನಿಯಾ ಸೀಮೆಯಲ್ಲಿ ಸಾಂಟಾ ಮಾರಿಯಾ (Santa maria) ಎಂಬಲ್ಲಿಂದ ಶೇಲ್ (Shale) ಎಂಬಲ್ಲಿಗೆ ನೇರ್ಪಾಗಿ ಒಂದೇ ಗಿಡ ಮೈಲು ಇರುವುದಾದರೂ ನಡುವೆ ಪರ್ವತಶ್ರೇಣಿಗಳಿರುವುದರಿಂದ ಒಂದು ಸ್ಥಳದ ಟಪ್ಪಾಲು ಇನ್ನೊಂದು ಸ್ಥಳಕ್ಕೆ ಮೂರನೆಯ ದಿನ ಮುಟ್ಟುವುದು. ಇದೇ ಆಕಾಶಮಾರ್ಗದಲ್ಲಿ ಹೋದರೆ ಅರ್ಧ ಘಂಟೆಯೊಳಗಾಗಿ ಮುಟ್ಟಬಹುದಾಗಿದೆ. ಹಿಮದ ರಾಶಿಗಳು ಕುಸಿದುಬಿದ್ದಾಗಲೂ, ನೆರೆಬಂದಾಗಲೂ ಉತ್ತರ ಪ್ರಾಂತ್ಯಗಳು ಅಗಮ್ಯವಾಗುವ ಕಾಲಗಳಲ್ಲಿ ಇಂಥ ಟಪ್ಪಾಲಿನಿಂದ ತುಂಬ ಪ್ರಯೋಜನವಾಗುವಂತಿದೆ. ಸಾಮಾನ್ಯವಾಗಿ ಛಳಿಗಾಲವು ಕೂಡಾ ಈ ಟಪ್ಪಾಲು ಬರಹೋಗುವುದಕ್ಕೆ ಆತಂಕಿಸಲಾರದು. ಏಕೆಂದರೆ ಆಕಾಶಗಾಮಿಗಳು ಪರೀಕ್ಷಾರ್ಥವಾಗಿ, ನಿತ್ಯವೂ ಶೂನ್ಯಕ್ಕಿಂತ ೪೦ ಡಿಗ್ರಿ ಕಡಿಮೆ ಕಾಕವಿರುವ ಎರಡು ಮೂರು ಮೈಲಿನಷ್ಟು ಎತ್ತರದಲ್ಲಿ ಯಾವ ಬಾಧೆಗೂ ಒಳಪಡದೆ ಸಂಚರಿಸಿದ ಹಲವು ಉದಾಹರಣೆಗಳಿವೆ.

ಪ್ರೊಫೆಸರ್ ಎಹರ್‌ಲಿಕ್ (Prof Ehrlich) ಎಂಬ ಮಹಾ ಪಂಡಿತನು ಕಳೆದ 20ನೇ ಅಗೋಸ್ಟಿನ ದಿನ ಜರ್ಮನಿಗೆ ಸೇರಿದ ಹ್ಯಾಂಬರ್ಗ್ ಎಂಬಲ್ಲಿಯ ತನ್ನ ರಸಾಯನ ಶಾಲೆಯಲ್ಲಿ ಫಕ್ಕನೆ ತೀರಿಕೊಂಡನು. ಈ ಮಹನೀಯನು ರೋಗ ಚಿಕಿತ್ಸೆಯನ್ನು ಕಂಡುಹಿಡಿಯುವುದರಲ್ಲಿ ಅದ್ವಿತೀಯನಾಗಿದ್ದನು. ವಿಶೇಷತಃ ನಿದ್ರಾರೋಗಕ್ಕೂ (Sleeping Sickness) ಉಪದಂಶವೆಂಬ ಫರಂಗಿ ರೋಗಕ್ಕೂ ಈತನು ಕಂಡು ಹಿಡಿದ ಚಿಕಿತ್ಸೆಯೇ ಈತನ ಕೀರ್ತಿಯನ್ನು ದಿಗಂತ ವಿಶ್ರಾಂತವನ್ನಾಗಿಸಿತು. ಈತನ 606 ಅಥವಾ ಸಾಲ್ವರಸನ್ ಎಂಬ ಉಪದಂಶದ ಮೇಲಣ ಔಷಧವು ಅಮೋಘವಾದುದೆಂದು ಸಮಸ್ತ ಪಾಶ್ಚಿಮಾತ್ಯ ವೈದ್ಯರಿಗೂ ಮನವರಿಕೆಯಾಗಿದೆ. ಈತನು ಯಹೂದೀಯ ಮತದ ಜರ್ಮನ್ ಪ್ರಜೆಯಾಗಿದ್ದನು. ಆದರೂ ಶಾಸ್ತ್ರ ಪ್ರಪಂಚದಲ್ಲಿ ದೇಶಸೀಮೆಗಳೆಂಬ ಭೇದವಿಲ್ಲವೆಂದು ತಾನೇ ಎರಡು ವರ್ಷಕ್ಕೆ ಹಿಂದೆ ಲಂಡನಿನಲ್ಲಿ ಹೇಳಿದ್ದನು. ಕ್ಯಾನ್ಸರ್ (Cancer) ಎಂಬ ವ್ರಣಕ್ಕೂ ಚಿಕಿತ್ಸೆಯನ್ನು ಶೋಧಿಸುವುದರಲ್ಲಿ ನಿಮಗ್ನನಾಗಿದ್ದ ಈತನು ಅದನ್ನು ಕಂಡುಕೊಳ್ಳುವುದಕ್ಕೆ ಮೊದಲೇ ತೀರಿಕೊಂಡುದರಿಂದ ಜಗತ್ತಿಗೆ ದೊಡ್ಡ ನಷ್ಟವಾಯಿತೆನ್ನಬೇಕು.

* * *

ಬಡೋದೆಯ ಶ್ರೀಮನ್ಮಹಾರಾಜಾ [illegible] ಕವಾಡರನ್ನು [illegible] ಹಿಂದೀ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗುವಂತೆ ಪ್ರಾರ್ಥಿಸಬೇಕೆಂದು ಹಿಂದೀ ಪತ್ರಿಕೆಗಳೆಲ್ಲ ಏಕಕಂಠವಾಗಿ ಸೂಚಿಸುತ್ತಲಿವೆ. ಮೊದಲು [illegible] ಬಾರಿ ನಾಗರೀ ಪ್ರಚಾರಿಣೀ ಸಭೆಯವರು ಅವರಿಗೊಂದು ಮಾನಪತ್ರವನ್ನು ಸಮರ್ಪಿಸಿದ್ದರು. ಶ್ರೀ [illegible] ಮಹಾರಾಜರವರು, 'ದೇಶದಲ್ಲೆಲ್ಲ ಒಂದೇ ಭಾಷೆಯೂ ಒಂದೇ [illegible] ಅವಶ್ಯಕತೆಯೆಂದೂ, ಹಾಗಿದ್ದ ಪಕ್ಷದಲ್ಲಿ [illegible] ಅಭಿಪ್ರಾಯಗಳು ಈಗಳಿಗಿಂತ [illegible] ವೆಂದೂ, ಸರಕಾರದವರು [illegible] ಉಪಯೋಗಿಸಿಕೊಳ್ಳಲು ಅನುಕೂಲವಾಗುವದೆಂದೂ, ಪಲವು ಭಾಷೆ [illegible] ವನ್ನು ನಡೆಯಿಸಬೇಕಾದ ನಿರ್ಬಂಧವು ತೋರದ [illegible] ವ್ಯಯವು ಕಡಿಮೆಯಾಗಿ ಪ್ರಯೋಜನವು ಅಧಿಕವಾಗಿ ದೊರೆವ ದೆಂದೂ [illegible] ರೊಳಗೆ ಸ್ನೇಹವೂ ಸಂಘಶಕ್ತಿಯೂ ಬೆಳೆಯುವುದೆಂದೂ, ಹೀಗಾದ ದರಿಂದ ಸರಕಾರದವರು ಏಕಭಾಷಾಪ್ರಚಾರದ ವಿಷಯದಲ್ಲಿ ಮನಸ್ಸುಕೊಡತಕ್ಕದ್ದ [illegible]ವೆಂದೂ' ಅಪ್ಪಣೆಕೊಡಿಸಿದ್ದರು. ಇಂಥ ಮಹನೀಯರು ಹಿಂದೀ ಸಾಹಿತ್ಯ ಪರಿಷತ್ತಿಗೆ ಅಧ್ಯಕ್ಷರಾಗುವುದು ಬಹು ಯುಕ್ತವೆಂಬುದರಲ್ಲಿ ಸಂದೇಹವಿಲ್ಲ. [illegible] ದೇಶದಲ್ಲಿ ಏಕ [illegible]ಪಿಗೆ ಹಲವು ಪ್ರತಿಬಂಧಕಗಳಿವೆಯಾದರೂ ಕ್ರಮ್ಮಾನದಿಂ [illegible] ಇದರಿಂದ ಅತ್ಯುನ್ನತವಾದ ಪ್ರಯೋಜನವುಂಟಾಗುವ ವಿಷಯದಲ್ಲಿ ಏನೇನೂ ಸಂದೇಹವಿಲ್ಲ.

ಡೈಂಚ ಸಸಿಗೊಬ್ಬರವನ್ನು ಬೆಳೆಯಿಸುವ ವಿಧಾನ.

ಡೈಂಚ ಸಸಿಗೊಬ್ಬರದ ಪ್ರಯೋಜನವು ರೈತರಿಗೆ ತಿಳಿ[illegible] ಅನೇಕ [illegible] ರೈತರು ಅದರ ಬೀಜವನ್ನು ತಮಗೆ ಒದಗಿಸಿಕೊಡಬೇಕೆಂದಾಗಿ [illegible] ಅದರ [illegible]ವಿಷಯವಾಗಿ ಈ ಕೆಳಗೆ ವಿವರಿಸಿರುತ್ತದೆ. ಸಸಿಗೊಬ್ಬರದ [illegible] ಬೆಳೆಯಿಸುವದು, ಅದರ ಪ್ರಯೋಜನವೇನೆಂಬದನ್ನು ರೈತರು ತಿಳಿಯುವದವಶ್ಯ. ಸಸಿಗೊಬ್ಬರವೆಂದರೆ, ಸಸಿಗಳನ್ನು ಗೊಬ್ಬರಕ್ಕೋಸ್ಕರ ಗದ್ದೆಗಳಲ್ಲಿ ಬೆಳೆಯಿಸಿ, ಅವುಗಳನ್ನು ತಕ್ಕಕಾಲದಲ್ಲಿ ಗದ್ದೆಗೆ ಉತ್ತುಬಿಡುವದು. ಗೊಬ್ಬರಕ್ಕಾಗಿ ಅನೇಕ ತರದ ಸಸಿಗಳನ್ನು ಬೆಳೆಯಿಸುವದು, ಇದರಲ್ಲಿ ಡೈಂಚವು ಒಂದಾಗಿರುವದು. ಈ ಜಾತಿಯ ಸಸ್ಯಾದಿಗಳಿಗೆ ಒಂದು ವಿಶೇಷ ತರದ ಗುಣ ಉಂಟು. ಇವುಗಳನ್ನು ಕಿತ್ತು ಅವುಗಳ ಬೇರುಗಳನ್ನು ಪರೀಕ್ಷಿಸಿದರೆ, ಆ ಬೇರುಗಳಲ್ಲಿ ತುಂಬಾ ಉರುಟಾದ ಗಂಟುಗಳನ್ನು ನೋಡಬಹುದು. ಈ ಗಂಟುಗಳೊಳಗೆ ಬರೇ ಕಣ್ಣಿಗೆ ಕಾಣಿಸದ ಒಂದು ತರದ ಜಂತುಗಳು ವಾಸಮಾಡಿಕೊಂಡಿರುವವು. ಪೈರುಗಳ ಬೆಳೆಗೆ ಬೇಕಾದ ಆಹಾರಗಳಲ್ಲಿ ಮುಖ್ಯವಾದ ನೈಟ್ರೋಜನ್‌ಯೆಂಬ ಆಹಾರವನ್ನು ಒದಗಿಸಿಕೊಟ್ಟು, ಪೈರುಗಳು ತಮ್ಮ ಆಹಾರಗಳನ್ನು ಬೇರುಗಳ ಮುಖಾಂತರ ಹೀರಿಕೊಳ್ಳಲಿಕ್ಕೆ ಯೋಗ್ಯವಾದ ರೀತಿಗೆ ತರುವ ವಿಶೇಷ ಗುಣವು ಈ ಜಂತುಗಳಿಗೆ ಇರುವದು.

ಸಸಿಗೊಬ್ಬರವನ್ನು ಗದ್ದೆಗಳಲ್ಲಿ ಬೆಳೆಯಿಸುವದರಿಂದ ಅದು ಗದ್ದೆಯ ಸಾರವನ್ನು ಎಳಕೊಳ್ಳುವದಿಲ್ಲವೋ ಎಂದು ಕೆಲವರು ಕೇಳಬಹುದು. ಸಸಿಗೊಬ್ಬರವು ಅದರ ಬೆಳೆವಿಗೆ ಗದ್ದೆಯ ಮಣ್ಣಿನಿಂದ ಸಾರವನ್ನು ಎಳಕೊಂಡರೂ, ಅದನ್ನು ಪುನಹ ಅದೇ ಗದ್ದೆಗೆ ಉತ್ತುಬಿಡುವದರಿಂದ ಮಣ್ಣಿನ ಸಾರವು ನಷ್ಟವಾಗುವದಿಲ್ಲ. ಅದಲ್ಲದೆ ಸಸಿಗೊಬ್ಬರಗಳ ಬೇರುಗಳಲ್ಲಿ ವಾಸಿಸಿಕೊಂಡಿರುವ ಸೂಕ್ಷ್ಮ ಜಂತುಗಳು ಗಾಳಿಯಿಂದ ಮುಖ್ಯವಾದ ಪೈರಿನ ಆಹಾರವಾದ ನೈಟ್ರೋಜನ್‌ಯೆಂಬ ಪದಾರ್ಥವನ್ನು ಸೆಳೆಕೊಂಡು, ಗದ್ದೆಗಳ ಮಣ್ಣಿಗೆ ಅಂಟಿಸಿ ಅದರಿಂದ ಪೈರುಗಳು ಪ್ರಯೋಜನ ಹೊಂದುವಂತೆ ಮಾಡುವವು. ಹೀಗಿರುವದರಿಂದ ಸಸಿಗೊಬ್ಬರದ ಪೈರಿನಿಂದ ಮಣ್ಣಿನ ಸಾರವು ನಷ್ಟವಾಗುವದರ ಬದಲಿಗೆ ವೃದ್ಧಿಯಾಗುವದು. ಸಸಿಗೊಬ್ಬರವು ಮಣ್ಣಿನ ಸಾರವನ್ನು ವೃದ್ಧಿಸುವದಲ್ಲದೆ, ಇನ್ನು ಅನೇಕ ವಿಧಗಳಿಂದ ಮಣ್ಣಿನ ಹರಳುಗಳ ಜೋಡನೆಯನ್ನು ಒಳ್ಳೇ ರೀತಿಗೆ ತಂದು ನೆಲ್ಲಿನ ಪೈರನ್ನು ವೃದ್ಧಿಸುವದು. ಬೇಗ ನೀರು ನಿಲ್ಲದೆ ಹೀರಿಹೋಗುವ ಹೊಯಿಗೆ ಮಣ್ಣಿನ ಗದ್ದೆಗಳಲ್ಲಿ ಸಸಿಗೊಬ್ಬರವನ್ನು ಬೆಳಸಿ ಉತ್ತುಬಿಡುವದರಿಂದ ಗದ್ದೆಯ ಮಣ್ಣು ಊರ್ಜಿತ ಸ್ಥಿತಿಗೆ ಬಂದು, ಅದರಲ್ಲಿ ನೀರು ನಿಂತು ನೆಲ್ಲಿನ ಪೈರಿಗೆ ಬೇಕಾದಂತೆ ಒದಗುವದು. ಅದಲ್ಲದೆ ನೀರು ಸರಿಯಾಗಿ ಹೀರಿಹೋಗದೆ ಬುಗ್ಗೆಗಳು ಏಳುವ ಕಡು[illegible] ಮಣ್ಣಿನ ಗದ್ದೆಗಳಲ್ಲಿ ಡೈಂಚವನ್ನು ಬೆಳೆಯಿಸುವದರಿಂದ, ಹೆಚ್ಚಾದ ನೀರು ಹೀರಿಹೋಗಿ ಭತ್ತದ ಪೈರಿಗೆ ಬೇಕಾದಷ್ಟು ನೀರು ದೊರೆತು, ಪೈರು ಒಳ್ಳೇ ಸ್ಥಿತಿಗೆ ಬರುವದು. [illegible] ಭತ್ತದ ಪೈರಿನ [illegible] ಎಲ್ಲಾ ತರದ ಮಣ್ಣುಗಳು ಊರ್ಜಿತ ಸ್ಥಿತಿಗೆ ಬರುವವು. ಭತ್ತದ ಪೈರಿನ ಬೇರುಗಳು ಮಣ್ಣಿನ ಮೇಲ್ಭಾಗದಲ್ಲಿಯೆ ಆದರ ಆಹಾರವನ್ನು [illegible], ಮಣ್ಣಿನ [illegible] ಆಹಾರವು ಹಾಗೆಯೆ ನಿಂತ ಬಿಡುತ್ತದೆ. ಆದರೆ ಡೈಂಚದ ಬೇರುಗಳು ಆಳಕ್ಕೆ ಹೋಗಿ ಅಡಿಯಿಂದ ಸಸ್ಯ ಆಹಾರವನ್ನು ಹೀರಿಕೊಂಡು ಭತ್ತದ ಪೈರಿಗೆ ಒದಗಿಸಿಕೊಡುತ್ತದೆ. ಅದಲ್ಲದೆ ಅನೇಕ [illegible] ಡೈಂಚವು ಹೀರಿಕೊಂಡು [illegible] ಪೈರು [illegible] ತ್ತದೆ.

ಭೈಲು ಗದ್ದೆಗಳಲ್ಲಿ ಡೈಂಚವನ್ನು ಬೆಳೆಯಿಸುವ ಕ್ರಮವು. ಜನವರಿ ತಿಂಗಳಲ್ಲಿ [illegible] ತಿಂಗಳ ಅಡಿಯಲ್ಲಿ ಧಾನ್ಯದ ಪೈರಿನೊಡನೆ ಡೈಂಚದ [illegible] ಹೀಗೆ [illegible] ಬಿತ್ತುವ [illegible] ಧಾನ್ಯದ [illegible] ಏಪ್ರೀಲ್ ತಿಂಗಳಲ್ಲಿ ಧಾನ್ಯದ ಪೈರನ್ನು [illegible] ಪೈರನ್ನು ಮಾತ್ರ ಗದ್ದೆ[illegible] ಪೈರು [illegible] ತಿಂಗಳಲ್ಲಿ ಬೀಳು[illegible] ಜನಾಗಿ ಬೆಳೆದು ಜೂನ ತಿಂಗಳಲ್ಲಿ ಗದ್ದೆಗೆ ಉತ್ತುಬಿಡಲಿಕ್ಕೆ ಸಿದ್ಧವಾಗಿರುತ್ತದೆ. [illegible] ಭತ್ತದಕ್ಕೆ ಬೆಳೆಯುತ್ತದೆ [illegible] ಡೈಂಚವು [illegible] ಉತ್ತು[illegible] (ನೇಜಿ) [illegible] ನಟ್ಟ ಪೈರು [illegible] ಜನಾಗಿ [illegible] ತ್ತದೆ. [illegible] ಗದ್ದೆಗೆ ಬಿತ್ತಲಿಕ್ಕೆ ನಾಲ್ಕು [illegible] ಸಾಕಾಗುತ್ತದೆ. [illegible] ನಾಲ್ಕು [illegible] ಕ್ರಯ ಒಂದು ರೂಪಾಯಿ [illegible]ಮಾಡಿ ಸಾಧಾರಣ ಹತ್ತು ರೂಪಾಯಿ [illegible] ಸೊಪ್ಪು ಗೊಬ್ಬರವನ್ನು ಪಡೆಯಬಹುದು. ಸೊಪ್ಪು [illegible] ಕಾಲದಲ್ಲಿ ಒಳ್ಳೆ ಕಷ್ಟವಾಗುತ್ತದೆ. ಅದ್ದರಿಂದ ಡೈಂಚವನ್ನು [illegible] ಪ್ರಯೋಜನವನ್ನು ಪಡೆಯುವದ ಉತ್ತಮ. ಧಾನ್ಯದ ಬೀಜದೊಡನೆ ಬಿತ್ತದೆ ಪ್ರತ್ಯೇಕ ಬಿತ್ತಿದರೆ ಕೂಡಾ ಡೈಂಚವು ಒಳ್ಳೇ ರೀತಿಯಲ್ಲಿ ಬೆಳೆಯುತ್ತದೆ. ಡೈಂಚದ ಬೀಜವು ಬೇಕೆಂದಿರುವವರು ಕೂಡಲೆ ಈ ವಿಲಾಸಕ್ಕೆ ಬರೆಯತಕ್ಕದ್ದು.

K. T Alwa,

Assistant Manager, Taliparamba

ಚಿಕ್ಕ ವಿದ್ಯಾರ್ಥಿಗಳಿಗೆ ಅನುರೂಪವಾದ ನಾಟಕಗಳು ಯಾವುವು

ಒಂದು ಕೆಲಸವನ್ನು ಮಾಡುವುದರಲ್ಲಿ ಕಾಲ, ದೇಶ, ಪರಿಸ್ಥಿತಿ ಇವುಗಳ ಔಚಿತ್ಯವನ್ನು ಮೊದಲು ನೋಡತಕ್ಕದ್ದು. ಔಚಿತ್ಯ ನೋಡದೆ ಮಾಡಿದ ಪರಿಶ್ರಮ ಅನುಚಿತವಾಗುವುದು. ಮೂರು ಗೇಣಿನ ಮಗುವಿಗೆ ಮೂರು ಮೊಳದ ಅಂಗಿಯ ಪ್ರಯೋಜನಕ್ಕೆ ಬರದು. ಗೋಡೆ ಮಣ್ಣಿನದು, ಕಂಭ ಬಿದುರಿನದು, ಮಾಡು ಹುಲ್ಲಿನದು, ಶಿಖರದಲ್ಲಿ ಮಾತ್ರ ಚಿನ್ನದ ಕಲಶವು! ಚಿನ್ನದ ಕಲಶವನ್ನು ಮನೆಯ ಶಿಖರದಲ್ಲಿಡುವುದು ಐಶ್ವರ್ಯ, ಶ್ರೇಷ್ಠ ವಸ್ತುವಿನ ಆದರಣೆ, ಬಹುಮಾನಾರ್ಹ ಇತ್ಯಾದಿ ಹಲವು ಗುಣಗಳ ಸಾಕ್ಷಿ ಕೊಡುತ್ತದೆಂಬುವುದರಲ್ಲಿ ಸಂದೇಹವಿಲ್ಲ. ಆ ಕೆಳಗಣ ಭಾಗವು ಆ ಚಿನ್ನದ ಕಲಶಕ್ಕೆ ಅನುರೂಪವಾಗದಿದ್ದರೆ ಮಾತ್ರ ಅದನ್ನಿಟ್ಟದ್ದು ಉಚಿತವಾದೀತು. ಹಾಗೆಯೇ ಚಿಕ್ಕ ಬಾಯಿಗೆ ದೊಡ್ಡ ತುತ್ತು, ಸಣ್ಣ ಮೂಗಿಗೆ ದೊಡ್ಡ ಮೂಗುತಿ, ತೆಂಗಿನ ಕಾಯಿಯಷ್ಟು, ಸಣ್ಣ ತಲೆಗೆ ಹಂ ಮೊಳದ ಮುಂಡಾಸು

ವೆಲ್ಲ ಅನೌಚಿತ್ಯದ ಉದಾಹರಣೆಗಳೇ. ಹೀಗೆ ಅನೌಚಿತ್ಯದ ಉದಾಹರಣೆಗಳು ಎಷ್ಟೋ ಇವೆ. ಅವನ್ನೆಲ್ಲ ಇಲ್ಲಿ ಹೇಳುವದು ನಮ್ಮ ತಾತ್ಪರ್ಯವಲ್ಲ. ಒಂದು ಕಾರ್ಯದಲ್ಲಿ ಔಚಿತ್ಯದ ವಿಚಾರವು ಅಗತ್ಯವಾಗಿ ಮಾಡಬೇಕಾದದ್ದು ಎಂಬ ತತ್ವವು ವಾಚಕರಿಗೆ ಈ ಮೇಲಿನ ಉದಾಹರಣೆಗಳಿಂದ ಗೊತ್ತಾದರೆ ನಮ್ಮ ಉದ್ದೇಶವು ಸಫಲವಾದಂತೆಯೇ ಸರಿ

ಈ ಔಚಿತ್ಯವು ಚಿಕ್ಕ ವಿದ್ಯಾರ್ಥಿಗಳಿಂದ ಆಡಿಸಲ್ಪಡುವ ನಾಟಕದಲ್ಲಿ ಸಾಧಿಸಲ್ಪಟ್ಟಿದೆಯೋ ಇಲ್ಲವೋ, ಸಾಧಿಸಲ್ಪಡದೆ ಇದ್ದರೆ ಚಿಕ್ಕ ವಿದ್ಯಾರ್ಥಿಗಳಿಗೆ ಉಚಿತವಾದ ನಾಟಕಗಳು ಯಾವುವು ಎಂಬುದನ್ನು ನಾಟಕದ ಸೂತ್ರಧಾರರು ನೋಡಬೇಕಾದ ಕೆಲಸವು ನಾಟಕವು ದೃಶ್ಯಕಾವ್ಯವು ಮತ್ತು ದೃಶ್ಯಕಾವ್ಯವು ಅಭಿನಯ ಪ್ರಧಾನವಾದದ್ದು ಆಯಾ ನಾಟಕದಲ್ಲಿ ಪ್ರತಿಪಾದಿಸಲ್ಪಡುವ ರಸವಾಗಲಿ, ವಸ್ತುವಾಗಲಿ, ವಿವಕ್ಷಿತ ಅರ್ಥವಾಗಲಿ ಸರಿಯಾಗಿ ಅಭಿನಯಿಸಲ್ಪಡದೆ ಇದ್ದರೆ ಆ ನಾಟಕವಾಡಿದ ಉದ್ದೇಶವು ಸಫಲವಾಗಲಾರದು ಲಕ್ಷ್ಮಣನು ಇಂದ್ರಜಿತುವಿನಿಂದ ಪರಾಜಿತನಾಗಿ ರಣಭೂಮಿಯಲ್ಲಿ ಮೂರ್ಛೆ ಹೊಂದಿದಾಗ ರಾಮನ ಅವನನ್ನು ಕುರಿತು ಶೋಕ ಮಾಡುತ್ತಿರುವನು ಈ ಪ್ರಸಂಗದಲ್ಲಿ ರಾಮನ ಪಾತ್ರವನ್ನು ಧರಿಸಿದವನು ತನ್ನ ಅಭಿನಯಗಳಿಂದಲೂ, ವಾಗ್ವಿನ ಮಾರ್ದವದಿಂದಲೂ ಸಾಮಾಜಿಕರಲ್ಲಿ ಕರುಣರಸವನ್ನು ಆವಿರ್ಭವಿಸುವಂತೆ ಮಾಡಬೇಕು, ಭ್ರಾತೃವಾತ್ಸಲ್ಯವು ಅವತರಿಸುವಂತೆ ಮಾಡಬೇಕು, ಮತ್ತು ಕಿಂಚಿದ್ವೀರ ರಸಮಿಶ್ರಿತವಾದ ಈ ಕರುಣ ರಸದಿಂದ ಸಾಮಾಜಿಕರು ತಲ್ಲೀನರಾಗಬೇಕು ಸಾಮಾಜಿಕರಲ್ಲಿ ಈ ಸ್ಥಿತಿಯು ರಸಾಸ್ವಾದನೆಯು ಹುಟ್ಟಬೇಕಾದರೆ ನಟನಲ್ಲಿ ರಸಾವಿಷ್ಕೃತಿ ಮಾತ್ರವಲ್ಲ ರಸಲೀನತೆಯು ಇರಬೇಕು ನಟನು ಸ್ವತಹ ರಸಮಯನಾದಲ್ಲಿ ಅವನ ಅಭಿನಯಗಳು ರಸಾನುಕೂಲವಾದಾವು ಇಲ್ಲದಿದ್ದರೆ ಲಕ್ಷ್ಮಣನನ್ನು ಶೋಕಿಸಬೇಕಾದ ಸಂದರ್ಭದಲ್ಲಿ ರಾಮನ ಪಾತ್ರ ಧರಿಸಿದ ನಟನು ಪ್ರಸನ್ನ ಮುಖದಿಂದಲೂ, ಉಚ್ಚಸ್ವರದಿಂದಲೂ, ಉತ್ಸಾಹಲಾಭಿನಯಗಳಿಂದಲೂ ರಂಗಭೂಮಿಯಲ್ಲಿ ಸಾಮಾಜಿಕರ ಮುಂದೆ ಬಂದರೆ ಅದರಿಂದ ರಸವಿಚ್ಛೇದವಾಗಿ ನಾಟಕದಲ್ಲಿ ಜಿಹಾಸೆ ಹುಟ್ಟದೆ ಇರದು ನಟನು ನಾಟಕದಲ್ಲಿ ಹೇಗೆ ಅಭಿನಯಿಸಬೇಕೆಂಬುದರ ವಿಷಯದಲ್ಲಿ ಸಾಹಿತ್ಯಾಚಾರ್ಯರು ಅನೇಕ ನಿಯಮಗಳನ್ನು ಮಾಡಿರುವರು ಆ ನಿಯಮಗಳಿಂದಲೂ ಮೇಲೆ ನಿರ್ದೇಶಿಸಿದ ಸಂಗತಿಯಿಂದಲೂ ಸ್ಪಷ್ಟವಾಗುವದೇನಂದರೆ —ನಾಟಕೀಯ ವಸ್ತುವನ್ನು ಅಭಿನಯಿಸುವ ನಟನು ನಿಪುಣನಾಗಿರಬೇಕು. ನಾಟಕದಲ್ಲಿಯ ಔಚಿತ್ಯನೆಂಬುವದು ಇದೇ ಇದನ್ನು ಆಯಾ ನಾಟಕದ ಸೂತ್ರಧಾರರ (ಸೂತ್ರಧಾರರೆಂದರೆ ನಾಟಕದಲ್ಲಿ ನಟರಾಗಿ ಬರುವ ಸೂತ್ರಧಾರರಲ್ಲ ನಾಟಕವನ್ನೂ, ಅದರೊಳಗಿನ ಪಾತ್ರಗಳನ್ನೂ ಯೋಜಿಸುವವರು) ಲಕ್ಷ್ಯದಲ್ಲಿ ತಂದು ನಾಟಕಯೋಜನೆಯನ್ನು ಮಾಡಬೇಕು ಈ ಪ್ರಕಾರ ಉಚಿತವಾಗಿ ನಾಟಕಗಳನ್ನು ಯೋಜಿಸುವದಾದರೆ ಚಿಕ್ಕ ಚಿಕ್ಕ ವಿದ್ಯಾರ್ಥಿಗಳ ಸ್ವಭಾವಕ್ಕೆ ಅಪರಿಚಿತವಾದ ರಸ ಮತ್ತು ಅರ್ಥ ಪಾತ್ರಗಳನ್ನು ಅವರ ವಯಸ್ಸಿಗಿಂತ ಪರಿಚಿತವಿರುವ ರಸಾದಿಗಳನ್ನೇ ಅಭಿನಯಿಸುವಂತೆ ಯೋಜಿಸುವದು ಶ್ರೇಯಸ್ಕರವು ಇನ್ನೂ ವ್ಯವಹಾರ ಭೂಮಿಯಲ್ಲಿ ಬಿಡದ ವಿದ್ಯಾರ್ಥಿಗಳಿಗೆ ದೇಶಭಕ್ತಿಗಿಂತ ಗುರುಭಕ್ತಿಯು ಅವಶ್ಯಕವು ವಿದ್ಯಾರ್ಥಿಗಳಲ್ಲಿ ದೇಶಭಕ್ತಿಯು ಅವಶ್ಯವಾಗಿರಬೇಕಾದ ಕಾರಣವೆಂಬುದಕ್ಕೆ ತಿಲಮಾತ್ರವೂ ಸಂದೇಹವಿಲ್ಲ ಆದರೆ ಅದರ ಮರ್ಮ ತಿಳಿಯುವಷ್ಟು ಜ್ಞಾನವು ಕಿಂಚಿತ್ತೂ ಪಾತ್ರತೆಯು ಅವರಲ್ಲಿರಬೇಕ ರಾಗ ತಾಳ ಮತ್ತಾದ ಸಂಗೀತ ಪ್ರಕ್ರಿಯೆ ಗೊತ್ತಾಗದ ವಿದ್ಯಾರ್ಥಿಗಳಿಗೆ ಸರಳವಾದ ಗದ್ಯವೇ ಪ್ರಶಸ್ತವಾಗಿರುವದು ಸ್ತ್ರೀಪುರುಷರ ಪ್ರಣಯ ಭಾಷಣವು ಸರ್ವಥಾ ಹೇಯವಾಗಿರುವದು ಶುದ್ಧ ಉದ್ದವಾದ ಸಂವಿಧಾನಕವು ಅಷ್ಟೊಂದು ಶ್ಲಾಘನೀಯವಲ್ಲ ಕ್ರೋಧ, ಲೋಭ, ಮತ್ಸರ ಮುಂತಾದ ಅಸನ್ಮನೋವೃತ್ತಿಗಳು ಜಾಗೃತವಾಗುವಂತಹ ಪ್ರಸಂಗಗಳು ವಿದ್ಯಾರ್ಥಿಗಳ ಶೀಲಕ್ಕೆ ಘಾತಕವಾಗಿರುವವು ಇವೂ ಮತ್ತು ಇದೇ ತರದ ಬೇರೆ ಪ್ರಸಂಗಗಳು ವಿದ್ಯಾರ್ಥಿಗಳಿಂದ ಅಭಿನಯಿಸಲ್ಪಡುವಾಗ ಔಚಿತ್ಯಭಂಗವನ್ನುಂಟುಮಾಡುವವು ಆದುದರಿಂದ ವಿದ್ಯಾರ್ಥಿ ನಾಟಕಮಂಡಳಿಗಳ ಸೂತ್ರಧಾರರು ಈ ಸೂಚನೆಗಳನ್ನು ಲಕ್ಷ್ಯದಲ್ಲಿ ತಂದು ವಿದ್ಯಾರ್ಥಿಗಳಿಂದ ವಿದ್ಯಾ ಶ್ರದ್ಧೆ, ಗುರುಭಕ್ತಿ ಬಂಧುಪ್ರೀತಿ ಮುಂತಾದ ಆ ವಯಸ್ಸಿಗೂ, ಜ್ಞಾನಕ್ಕೂ, ಪಾತ್ರತೆಗೂ, ಅನುರೂಪವಾದ ಪ್ರಸಂಗಗಳನ್ನು ಅಭಿನಯಿಸಲು ಯತ್ನಿಸುವರೆಂತ ನಾವು ನಂಬುತ್ತೇವೆ

ಪತ್ರವ್ಯವಹಾರ.

ಪ್ರಿಯ ಮಾನಾರ್ಹರೇ,

ಮ| ರಾ| ಪಿ ರಾಮಚಂದ್ರರಾಯರು ಗೋಪಾಲನ, ಶಿಶುರಕ್ಷಣ ವಗೈರೆ ಕೆಲಸಗಳನ್ನು ನಡಿಸಲಿಕ್ಕೆ ತನ್ನ ಸರ್ವಸ್ವವನ್ನು ಹತ್ತು ಜನರಿಗೆ ಬಿಟ್ಟುಕೊಟ್ಟಿದ್ದಾರೆಂತಲೂ, ಅಂಥಾ ಕೆಲಸವು ಮಹಾ ಶ್ಲಾಘ್ಯವಾದ್ದಾಗ್ಯೂ ಈ ತರದ ಹತ್ತು ಜನರ ಕೆಲಸಗಳನ್ನು ನಡಿಸುವದು ಲೋಕದಲ್ಲಿ ಸುಲಭವಲ್ಲವೆಂತಲೂ, ಮುಖ್ಯವಾಗಿ ಹಿಂದುಗಳಲ್ಲಿ ಆ ತರದ ಕೆಲಸವು ಅಸಾಧ್ಯವೇ ಎಂಬಂತೆ ಕೂಡಾ ಉಡುಪಿಯ ಒಬ್ಬ ಗೃಹಸ್ಥರು ಬರದದ್ದನ್ನು ನಿಮ್ಮ ಪತ್ರಮೂಲಕವಾಗಿ ಓದಿದೆ ಆದರೆ ರಾಮಚಂದ್ರರಾಯರು ಆರಿಸಿದ ಗೃಹಸ್ಥರು ಯಶೋವಂತರೂ ಕಾರ್ಯನಿಪುಣರೂ ಆಗಿರುವದರಿಂದ ಬಂದ್ರು ವೇಳ್ಯ ಈ ಕಾರ್ಯವು ಸಾಧ್ಯವಾಗಬಹುದೆಂಬದನ್ನು ಸಹಾ ಅದೇ ಗೃಹಸ್ಥರು ಬರಿಯುತ್ತಾರೆ. ಅವರ ಕೋರಿಕೆಯು ನಿಷ್ಫಲವಾಗಲಿಕ್ಕಿಲ್ಲವೆಂಬದಾಗಿ ಕಾಣುತ್ತದೆ. ಹ್ಯಾಗಂದರೆ ಸದರಿ ಮಾನ್ಯಗೃಹಸ್ಥರು ಕೆಲಸವನ್ನು ಕೈಕೊಂಡ ಕೂಡಲೇ ತಮ್ಮೊಳಗೆ ಆ ಕೆಲಸವನ್ನು ವಿಭಾಗಿಸಿಕೊಂಡು ಪೂರ್ಣ ಹೃದಯದಿಂದ ಕೆಲಸದಲ್ಲಿ ಪ್ರವೇಶಿಸಿದ್ದಾರಾಗಿ ಕಾಣುತ್ತದೆ ಮ ರಾ| ಬಾಲಕೃಷ್ಣಶೆಟ್ರು ಕಾರ್ಯದರ್ಶಿಗಳಾಗಿಯೂ ಮ| ರಾ| ವೆಂಕಟ್ರಾಯರು ಕೋಶಾಧ್ಯಕ್ಷರಾಗಿಯೂ, ಮ| ರಾ| ಸುಬ್ಬರಾವ್‌ರವರು ಆಸ್ತಿ ಆಡಳಿತೆದಾರರಾಗಿಯೂ ಮ| ರಾ| ಶ್ರೀನಿವಾಸಪೈಗಳು ಲೀಗಲ್ ಎಡ್ವ್ಯಾಸರರಾಗಿಯೂ, ಈ ರೀತಿ ತಮ್ಮೊಳಗೆ ಕೆಲಸ ನೇಮಿಸಿಕೊಂಡಿದ್ದಾರಾಗಿ ಕಾಣುತ್ತದೆ ಇದಲ್ಲದೆ ಆಸ್ತಿಗಳನ್ನು ನೋಡಿಕೊಳ್ಳಲಿಕ್ಕೂ, ಕೆಲಸದ ಮೇಲ್ವಿಚಾರ ನಡಿಸಲಿಕ್ಕೂ ೩೫ ವರ್ಷ ಮುನ್ಸಿಪಲ್ ಕೆಲಸ ನಡಿಸಿ ಅನುಭವ ಇರುವ ಮಾಜಿ ಮುನಿಸಿಪಲ್ ಇನ್ಸ್‌ಪೆಕ್ಟರ್ ರಾ ಸುಬ್ಬುಪುರುಷರನ್ನು ನೇಮಿಸಿದ್ದಾರಾಗಿ ಕೇಳುತ್ತೇನೆ ಇಷ್ಟು ಮಾತ್ರವಲ್ಲದೆ, ಈ ಟ್ರಸ್ಟಿಯವರೆಲ್ಲಾ ಒಟ್ಟಿಗೆ ಕದ್ರಿಮಠದ ಆಡಳಿತೆದಾರರಾದ ಮ ರಾ ಶಂಕರನಾಥ ಸ್ವಾಮಿಜಿಯವರ ಹತ್ತರ ಹೋಗಿ ಈ ಕೆಲಸಗಳಿಗೆ ಅವರ ಸಹಾಯವನ್ನು ಕೇಳಿಕೊಂಡಲ್ಲಿ ತನ್ನಿಂದಾಗುವ ಸರ್ವ ಸಹಾಯವನ್ನು ಮಾಡುತ್ತೇನೆಂತ ವಾಗ್ದಾನ ಮಾಡಿದ್ದಾರಾಗಿ ಕೇಳುತ್ತೇನೆ

ಇಂಥಾ ಕೆಲಸವನ್ನು ನಡಿಸಲಿಕ್ಕೆ ನಮ್ಮ ಜಿಲ್ಲೆಯಲ್ಲಿ ರಾಮಚಂದ್ರರಾಯರು ಆರಿಸಿದ ಟ್ರಸ್ಟಿಯವರು ಉತ್ತಮವಾದ ಮಾನ್ಯಗೃಹಸ್ಥರಾಗಿಯೂ ಇಂಥಾ ಉಪಕಾರ ಕೆಲಸಗಳನ್ನು ನಡಿಸಲಿಕ್ಕೆ ಹೆಚ್ಚಿನ ಅನುಭವ ಮತ್ತು ಉತ್ತೇಜನ ಉಳ್ಳವರಾಗಿಯೂ ಇದ್ದು ಕಾರ್ಯನಿರ್ವಹಿಸುವವರಲ್ಲಿ ನಿಪುಣರೆಂತ ಸರ್ವರಲ್ಲಿ ನಂಬಿಕೆ ಇರುವದರಿಂದ ಉಡುಪಿ ಗೃಹಸ್ಥರ ಕೋರಿಕೆಯು ನಿಷ್ಫಲವಾಗಲಿಕ್ಕಿಲ್ಲವೆಂಬದಾಗಿ ಸರ್ವರಿಗೂ ದೃಢವಾಗಿ ಗೊತ್ತಿರುತ್ತದೆ

ಕದ್ರಿಯವನೊಬ್ಬ.

ಮಂಗಳೂರು ಮುನ್ಸಿಪಲ್ ಕೌನ್ಸಿಲಿನಲ್ಲಿ ತೆರಿಗೆ ಅಪೀಲುಗಳ ವಿಚಾರಣೆ

ಪತ್ರಾಧಿಪರೇ,

ನನ್ನ ಎರಡು ಮಾತುಗಳಿಗೆ ನಿಮ್ಮ ಪತ್ರದಲ್ಲಿ ಸ್ಥಳ ಕೊಡಿರಿ ಅಪೀಲುಗಳು ಇಷ್ಟನೇ ತಾರೀಕಿನಲ್ಲಿ ಕೌನ್ಸಿಲಿನ ಮುಂದೆ ಇಡೋಣಾಗಿರುವವೆಂದೂ ಇಷ್ಟು ಗಂಟೆಗೆ ಹಾಜರಾಗಬೇಕೆಂದೂ ನೋಟೀಸುಗಳು ಬರುತ್ತವೆ ಆ ಪ್ರಕಾರ ಕೆಲವರು ಮುನ್ಸಿಪಲ್ ಆಫೀಸಿಗೆ ಹೋಗುತ್ತಾರೆ ೫ ಗಂಟೆಗೆ ಹಾಜರಾಗಬೇಕೆಂದು ನೋಟೀಸಿನಲ್ಲಿ ಸಾಧಾರಣವಾಗಿ ಇದೆ ಕೌನ್ಸಿಲಿನ ಇತರ ಎಲ್ಲಾ ಕೆಲಸಗಳು ಮುಗಿದ ನಂತರ ಸಾಧಾರಣ ಸಾಯಂಕಾಲ ೬ ಯಾ ೬½ ಗಂಟೆಗೆ ಅಪೀಲು ತನಖಿಗೆ ಪ್ರಾರಂಭವಾಗುವದು. ಒಂದು ಮೀಟಿಂಗಿನಲ್ಲಿ ಇಪ್ಪತ್ತು ಯಾ ಮೂವತ್ತು ಅಪೀಲುಗಳಿಗೆ ಹ್ಯಾಗೂ ಕಡಿಮೆ ಇರದು ವಾಡಿಕೆ ಪ್ರಕಾರ ೫೦ ಯಾ ೬೦ ಅಪೀಲುಗಳನ್ನು ತನಖಿಗೆ ಇಡುವದುಂಟು ೬ ಗಂಟೆಗೆ ಬಂದ ಕೌನ್ಸಿಲ್ ಮೆಂಬರರಲ್ಲಿ ಕೆಲವರು ಗಂಟೆ ೭ ಹೊಡೆಯುವಷ್ಟರಲ್ಲಿ ಸಹಿ ಬಿಟ್ಟು ತೆರಳುವರು ಮತ್ತೆ ಕೆಲವರು ಕೂತಲ್ಲಿಯೇ ಬೇಸರಪಟ್ಟ ಹಾಗೆ ತೋರಿಬರುವದು ಇಂಥಾ ಸಂಧ್ಯಾಕಾಲದಲ್ಲಿ ಅಪೀಲುಗಳ ತನಖಿಗಳಿಗೆ ಪ್ರಾರಂಭ ಅಪೀಲು ಕಕ್ಷಿಗಾರನ ಹೆಸರು ಕೂಗೋಣಾಗಿ ಕಕ್ಷಿಗಾರನು ಕೌನ್ಸಿಲಿನ ಮುಂದೆ ಬಂದು ಎರಡು ಕೈಗಳನ್ನು ಜೋಡಿಸಿ ನಿಂತು ಕೌನ್ಸಿಲರುಗಳ ಮುಖಾವಲೋಕನವನ್ನು ಮಾಡುವಷ್ಟರಲ್ಲಿ ತೆರಿಗೆ ಕಾಯಂ ಮಾಡೋಣಾಗಿಯದೆ ಅಥವಾ ಕಡಮೆ ಮಾಡೋಣಾಗಿಯದೆ, ಎಂದು ಕೂಡಲೆ ಹೊರಟು ಹೋಗಲು ಅಪ್ಪಣೆ ದೊರಕುವದು ಈ ರೀತಿ ಅರ್ಧ ಗಂಟೆಯ ದೀರ್ಘಕಾಲದಲ್ಲಿ ಸಾಧಾರಣ ೬೦ ಅಪೀಲುಗಳ ತೀರ್ಮಾನ ಅದ್ವಿತೀಯ ನೈಪುಣ್ಯ!

ಸ್ವಾಮಿಾ! ಅಪೀಲು ವಿಚಾರಣೆಗಳ ವಿಧಾನವನ್ನು ನೋಡಿದಂತೆ ಅಥವಾ ಅನುಭವಿಸಿದಂತೆ ಹೇಳಿಬಿಟ್ಟೆ ಆದ್ದರಿಂದ ಅಪೀಲುಗಳ ತನಖಿ ಕಾಲದಲ್ಲಿ ಕಕ್ಷಿಗಾರರು ಹಾಜರಾಗಬೇಕೆಂಬ ನೋಟೀಸಿನ ಉಪಚಾರ ಅಥವಾ ಉಪದ್ರ ಯಾವ ಬಗ್ಯೆ ಎಂತ ಕೌನ್ಸಿಲಿನವರು ಅಥವಾ ನಿಮ್ಮ ವಾಚಕರ ಪೈಕಿ ಯಾರಾದರೂ ವಿವರಿಸಿ ಹೇಳುತ್ತಿದ್ದರೆ ಉಪಕಾರವಾಗುತ್ತಿತ್ತು.

ಅಪೀಲು ಕಕ್ಷಿಗಾರ.

ಯುದ್ಧ ಸಮಾಚಾರ.

ಅಕ್ಟೋಬರ ತಾ. ೨೧, ೨೨.

ಪಶ್ಚಿಮ ರಣರಂಗದಲ್ಲಿ ಬ್ರಿಟಿಷ ಸೇನೆಯ ಮುಂದಿರುವ ಶತ್ರುಗಳ ಸೇನೆಯು ಕಳೆದ ಸಪ್ಟಂಬರ ತಿಂಗಳ ತಾ ೨೭ರಿಂದ ಬೆಂಬಲಗಳಿಂದ ಪುಷ್ಟಿಹೊಂದುತ್ತಿರುವದು. ಈ ಬೆಂಬಲಗಳ ಸಹಾಯದಿಂದ ಶತ್ರುಗಳು ಹಲ್ಲಚ್ ಎಂಬುದರ ಸಮೀಪ ಬ್ರಿಟಿಷ ಸೇನಾವ್ಯೂಹವನ್ನು ಭೇದಿಸಲು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಬ್ರಿಟಿಷರ ತೋಫುಗಳ ಇದಿರು ನಿಲ್ಲಲಾರದೆ ಶತ್ರುಗಳು ಹಿಂದಕ್ಕೆ ಸರಿದರು

ಛಿಮ್ಸದ ಪೂರ್ವದಲ್ಲಿ ಬಹಳ ಸೇನೆಯನ್ನು ಕಟ್ಟಿಕೊಂಡು ಫ್ರೆಂಚರ ಸೇನೆಯನ್ನು ಆರು ಮೈಲುಗಳ ವಿಸ್ತೀರ್ಣದಲ್ಲಿ ಶತ್ರುಗಳು ಎದುರಾಡಿದರು. ಉಸಿರನ್ನು ಕಟ್ಟಿಬಿಡುವ ಮತ್ತು ವಿಷಮಯ ವಾಯುವಿನಿಂದ ತುಂಬಿರುವ ತೋಟೆಗಳನ್ನು ಫ್ರೆಂಚ ಸೇನೆಯ ಮೇಲೆ ಎಸೆದು ಸೇನಾ ಮುಂಭಾಗದಲ್ಲಿ ಕೆಲವು ಕಂದಕಗಳನ್ನು ಸ್ವಾಧೀನ ಮಾಡಿಕೊಂಡರು. ಆದರೆ ಫ್ರೆಂಚರು ಸ್ವಲ್ಪ ಸಮಯದಲ್ಲಿಯೇ ಶತ್ರುಗಳನ್ನು ಈ ಕಂದಕಗಳಿಂದ ಓಡಿಸಿಬಿಟ್ಟಿರತ್ತಾರೆ. ಛಿಮ್ಸ್ ಪ್ರಾಂತ್ಯಗಳಲ್ಲಿ ಇನ್ನೂ ಕಠಿಣ ಕಾಳಗವು ನಡಿಯುತ್ತಿರುವುದು

ರೀಗಾದ ದಕ್ಷಿಣ ಪ್ರಾಂತ್ಯದಲ್ಲಿ ರುಶ್ಯಯನರು ಶತ್ರುಗಳೊಡನೆ ಕಾದಾಡುತ್ತಿರುವರು. ಜರ್ಮನರು ಫ್ರೆಡಿಟ್ಸ್‌ಟೆಡ್‌ದ ಉತ್ತರ ಮತ್ತು ಪಶ್ಚಿಮ ಪ್ರಾಂತ್ಯದಲ್ಲಿರುವ ರೈಲ್ವೆ ಮಾರ್ಗಗಳ ಮೇಲೆ ತೋಫುಗಳನ್ನು ಹಾರಿಸುತ್ತಿರುವರು. ಪೂರ್ವ ರಣರಂಗದ ದಕ್ಷಿಣ ಕಡೆಯಲ್ಲಿ ರುಶ್ಯಯನರು ಚೆಟೋರ್ಲಸ್ಕ ಮೊದಲಾದ ಗ್ರಾಮಗಳನ್ನು ಸ್ವಾಧೀನಮಾಡಿಕೊಂಡಿರುವರು

ಸೆಮೆಂಡ್ರಿಯಾದ ದಕ್ಷಿಣಕ್ಕೆ ಸರ್ವಿಯನರು ಸೇರಿರುವರಾಗಿ ತಿಳಿದುಬರುತ್ತದೆ. ಬಲ್ಗೇರಿಯಾದ ಸರಹದ್ದುಗಳಲ್ಲಿ ನಿಶ್ ಪಟ್ಟಣದಿಂದ ೬೦ ಮೈಲುಗಳ ದಕ್ಷಿಣಕ್ಕಿರುವ ರೈಲ್ವೆ ಮಾರ್ಗವನ್ನು ವ್ರೆನಿಯಾ ಎಂಬಲ್ಲಿ ಕಡಿದುಬಿಟ್ಟಿರುತ್ತಾರೆ

ಅಕ್ಟೋಬರ ತಾ. ೨೩, ೨೪.

ಸೌಚೆಜ್ ಅತ್ತಕಡೆಯಲ್ಲಿ ಜರ್ಮನರನ್ನು ಹಿಂದಕ್ಕೆ ಅಟ್ಟಿಬಿಟ್ಟಿರುವರು. ಜರ್ಮನರು ವಿಶೇಷ ಪ್ರಯತ್ನಗಳನ್ನು ಬಹಳವಾಗಿ ನಡೆಸಿದರೂ ಛಿಮ್ಸ್ ಪ್ರಾಂತ್ಯಗಳಲ್ಲಿ ಫ್ರೆಂಚರ ಸೇನಾ ಮುಂಭಾಗದಲ್ಲಿರುವ ಕಂದಕಗಳನ್ನು ಹಿಡಿಯಲು ಸಾಧ್ಯವಾಗಲಿಲ್ಲ. ಚೆಂಪೆನದಲ್ಲಿ ಫ್ರೆಂಚ ಸೇನಾ ವ್ಯೂಹವನ್ನು ಜರ್ಮನರು ತೋಫುಗಳಿಂದ ವಿಶೇಷವಾಗಿ ಮುತ್ತುತ್ತಿರುವರು

ರುಶ್ಯಯನರು ಪೂರ್ವ ರಣರಂಗದ ದಕ್ಷಿಣ ಪ್ರಾಂತ್ಯಗಳಲ್ಲಿ ೮೫ ಜನ ಆಫೀಸರರನ್ನೂ ೩,೫೦೦ ಜನ ಶತ್ರುಗಳ ಸೈನಿಕರನ್ನೂ ಸೆರೆಹಿಡಿದಿರುತ್ತಾರೆ. ಟಾರ್ನೋಪೋಲಿನ ಉತ್ತರದಲ್ಲಿ ಶತ್ರುಗಳ ಸೇನಾನೆಲೆಗಳನ್ನು ಹಿಡಿದು ೭,೦೦೦ ಸೈನಿಕರನ್ನು ರುಶ್ಯಯನರು ಬಂಧಿಸಿರುತ್ತಾರೆ. ವಾರ್ಡಾರ್ ಎಂಬ ಪ್ರದೇಶದಲ್ಲಿ ವ್ರೆನಿಯಾ ಮೊದಲಾದ ಮೂರು ರಾಜ್ಯಗಳನ್ನು ಬಲ್ಗೇರಿಯದವರು ಕೈವಶಮಾಡಿಕೊಂಡಿರುವರೆಂತ ಒಸ್ಟ್ರಿಯನರ ವೃತ್ತಾಂತದಲ್ಲಿದೆ. ಇಟಲಿಯನರು ಟ್ಯಾರೋಲ್ ಮತ್ತು ಟ್ರೆಂಟಿನೊ ಪ್ರಾಂತ್ಯಗಳಲ್ಲಿ ಜಯಶೀಲರಾಗಿರುವರು.

ಅಕ್ಟೋಬರ ತಾ. ೨೫, ೨೬, ೨೭.

ಪ್ರಿನ್ಸ್ ಅಡಾಲ್‌ಬರ್ಟ್ ಎಂಬ ಜರ್ಮನರ ದೊಡ್ಡ ಯುದ್ಧನಾವೆಯನ್ನು ಲಿಬೊ ಸಮೀಪ ಜಲಾಂತರ್ಗಾಮಿ ನಾವೆಗಳು ನಾಶಪಡಿಸಿದವೆಂತ ಬರ್ಲಿನ್ ಯುದ್ಧ ಸಮಾಚಾರದಲ್ಲಿರುವುದು

ಚೆಂಪೆನದಲ್ಲಿ ಫ್ರೆಂಚರಿಗೆ ಇನ್ನೂ ವಿಶೇಷವಾದ ಜಯವು ಪ್ರಾಪ್ತಿಸಿರುವದು. ಶತ್ರುಗಳಿಂದ ಕಂದಕಗಳ ನಾಲ್ಕು ಸಾಲುಗಳನ್ನು ಫ್ರೆಂಚರು ಪಡೆದಿರುತ್ತಾರೆ.

ಸ್ಕುಟ್ಯಾದ ದಕ್ಷಿಣಕ್ಕೆ ೯ ಮೈಲುಗಳ ದೂರದಲ್ಲಿರುವ ರೆಟ್ಕೊವ್ ಎಂಬ ಗ್ರಾಮಕ್ಕೆ ಫ್ರೆಂಚರು ಬಂದು ಇಳಿದಿರುವರು. ಕುಪ್ರಿಲು ಎಂಬಲ್ಲಿ ನಡೆದ ಕದನದಲ್ಲಿ ಸರ್ವಿಯನರು ಕುಪ್ರಿಲು ಪಟ್ಟಣದ ಅರ್ಧಾಂಶವನ್ನು ಕೈವಶಮಾಡಿಕೊಂಡಿರುವರು. ಮತ್ತೊಂದು ಅರ್ಧಾಂಶವನ್ನು ಸಹ ಸ್ವಾಧೀನಮಾಡಿಕೊಳ್ಳಲು ಸರ್ವಿಯನರು ಪ್ರಯತ್ನಿಸುತ್ತಿರುವರು.

ಜರ್ಮನ ಮತ್ತು ಒಸ್ಟ್ರಿಯನ ಸೈನಿಕರು ಸರ್ವಿಯದ ಸರಹದ್ದುಗಳಲ್ಲಿ ಇನ್ನೂ ಏಳು ಮೈಲುಗಳಿಗೆ ಮುಂದೆ ಬರಲಿಲ್ಲವೆಂತ ತಿಳಿದು ಬರುತ್ತದೆ

ಟರ್ಕಿಯಲ್ಲಿರುವ ಜರ್ಮನರ ರಾಯಭಾರಿ ಬೆರನ್‌ವೆನ್‌ಗೆನ್‌ಹೆಮ್ ಎಂಬವರು ಏನೋ ಅಸ್ವಸ್ಥದಿಂದ ಕೊನ್ಸಟೆಂಟಿನೋಪಲದಲ್ಲಿ ಮೃತಪಟ್ಟರೆಂತ ತಿಳಿದುಬರುತ್ತದೆ

ಬಲ್ಗೇರಿಯದವರು ಉಸ್‌ಕುಬ್ ಪಟ್ಟಣವನ್ನು ಹಿಡಿದಿರುವರು

ಗಿವೆಂಚಿ ಕಾಡುಗಳಲ್ಲಿ ಫ್ರೆಂಚರ ಒಂದು ಕೋಟೆಯನ್ನು ಆಕ್ರಮಿಸಲು ಶತ್ರುಗಳು ಪ್ರಯತ್ನಿಸಿದರು. ಫ್ರೆಂಚರು ತೋಫುಗಳನ್ನು ಹಾರಿಸಿ ಶತ್ರುಗಳನ್ನು ಹಿಂದಕ್ಕೆ ಅಟ್ಟಿರುವರು

ಜೋರ್ಜ ಚಕ್ರವರ್ತಿಗಳು ಸೇನೆಗಳ ಸಂದರ್ಶನೆ ಬಗ್ಗೆ ಫ್ರಾನ್ಸಿಗೆ ಹೋಗಿರುವರು

ಪೂರ್ವ ರಣರಂಗದಲ್ಲಿ ರಶ್ಯಯನರು ಶತ್ರುಗಳನ್ನು ಇಲ್ಲುಕ್‌ಸ್ಟ ಪಟ್ಟಣದಿಂದ ಓಡಿಸಿರುತ್ತಾರೆ

ಸೆಲೊನಿಕಾ ಎಡ್ರಿಯಾನೋಪಲ್ ರೈಲ್ವೆ ಮಾರ್ಗವನ್ನು ಕಡಿದು ಬಿಟ್ಟರು. ಮಿತ್ರರ ಸೇನೆಗಳು ಡೆಮಿಯಾ ಗೆಟ್ ಎಂಬಲ್ಲಿ ಇಳಿಸಿಕೊಂಡಿವೆಯೆಂಬ ವರ್ತಮಾನವು ರೋಮ್ ಪಟ್ಟಣದಲ್ಲಿರುವುದು

ಒಸ್ಟ್ರಿಯಾದಿಂದ ಸೇನೆಗಳು ಸರ್ವಿಯಕ್ಕೆ ಕಳುಹಿಸಿಕೊಡದಂತೆ ಇಟಲಿಯು ಬಾಧಿಸುತ್ತಿರುವದು

~~~~~

ಉತ್ತರ ಹಿಂದೂಸ್ಥಾನ.

~~~~~

ಕಾಂಪೂರಿನಲ್ಲಿ ಕೂಡುವ ಔದ್ಯೋಗಿಕ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳುವರೆ ಸರ್ ದೊರಾಬ್ಜಿ ಟಾಟಾರವರು ಸಮ್ಮತಿಸಿರುವರು

~~~~~

ಮಹಮ್ಮದೀಯರ ವಿದ್ಯಾ ಪರಿಷತ್ತು ಇದೇ ಬರುವ ಡಿಸಂಬರ ತಿಂಗಳಲ್ಲಿ ಪುನೆಯಲ್ಲಿ ಕೂಡುವದು. ಬಹುಮಾನಪಟ್ಟ ಮದ್ರಾಸು ಹ್ಯಾಕೋರ್ಟ ಜಡ್ಜರಾದ ಅಬ್ದುರ್ ರಹಿಮ್ ಸಾಹೇಬರವರು ಈ ಸಭೆಯ ಅಧ್ಯಕ್ಷತನವನ್ನು ವಹಿಸಿಕೊಳ್ಳುವರು

~~~~~

ಕಲ್ಕತ್ತೆಯಲ್ಲಿ ಪೋಲೀಸು ಆಫೀಸರರನ್ನು ಗುಂಡು ಹೊಡೆದು ಕೊಂದ ಮತ್ತೊಂದು ವೃತ್ತಾಂತವು ಪ್ರಕಟಿಸಲ್ಪಟ್ಟಿರುವದು. ಗುಪ್ತ ಪೋಲೀಸು ಆಫೀಸರರೊಬ್ಬರಿಗೆ ವರ್ಗವಾದ್ದರಿಂದ ವರ್ಗವಾಗಿ ಹೋಗುವ ಆಫೀಸರರನ್ನು ಉಪಚರಿಸುವ ಬಗ್ಗೆ ಇತರ ಗುಪ್ತ ಪೋಲೀಸು ಆಫೀಸರರಲ್ಲಿ ಕೆಲವರು ಗಿರೇಂದ್ರನಾಥ ಬೆನರ್ಜಿ ಮತ್ತು ಉಪೇಂದ್ರನಾಥ ಚಟರ್ಜಿ ಎಂಬ ಇಬ್ಬರು ಸಬ್ ಇನ್ಸ್‌ಪೆಕ್ಟರರೂ ಮಸ್‌ಜಾದ್ಬಾ ಶಸ್ತ್ರಿಯಲ್ಲಿರುವ ಒಬ್ಬ ಪೋಲೀಸು ಆಫೀಸರರ ಮನೆಯಲ್ಲಿ ಕೂಡಿದ್ದರು. ಈ ಆಫೀಸರರೆಲ್ಲರು ವಿನೋದದಲ್ಲಿರುವಾಗ ಕೆಲವು ಜನರು ಒಳನುಗ್ಗಿ ಒಂದು ರಿವ್ಹೋಲ್ವರದಿಂದ ಗುಂಡುಹಾರಿಸಿ ಗಿರೇಂದ್ರನಾಥ ಬೆನರ್ಜಿಯವರನ್ನು ಕೂಡಲೆ ಕೊಂದರು. ಮನೆಯ ಇತರ ನಿವಾಸಿಕರು ಈ ಘಾತುಕರಿಗೆ ಅಂಜಿ ಮಾಳಿಗೆಯ ಮೇಲೆ ಓಡಿಹೋಗುವದನ್ನು ನೋಡಿ ಉಪೇಂದ್ರನಾಥ ಬೆನರ್ಜಿಯವರನ್ನು ಘಾತುಕರು ಗುಂಡು ಹೊಡೆದು ಕೊಂದು ತಲೆತಪ್ಪಿಸಿ ಓಡಿಹೋಗಿರುತ್ತಾರೆ.

~~~~~

ಬಲರಾಮಪುರದ ಮಹಾರಾಜರವರು ಒಂದುವರೆ ಲಕ್ಷ ರೂಪಾಯಿ ಚಂದಾಹಣವನ್ನು ಹಿಂದೂ ವಿಶ್ವವಿದ್ಯಾಲಯದ ಸ್ಥಾಪನೆಗಾಗಿ ಕೊಟ್ಟಿರುತ್ತಾರೆ.

~~~~~

ಮುಂಬಯಿಯ ಚೀಫ್ ಪ್ರೆಸಿಡೆನ್ಸಿ ಮೇಜಿಸ್ಟ್ರೇಟರ ಕೋರ್ಟಿನಲ್ಲಿ ದ್ವಾರಕೆದಾಸ ಲಲ್ಲುಭಾಯಿಯೆಂಬವರು ತನ್ನ ಮಗಳು ದಮಯಂತಿ ಎಂಬವಳು ರೂ. ೫೦,೦೦೦ಕ್ಕೆ ಮಿಕ್ಕಿದ ಮೌಲ್ಯದ ಆಭರಣಗಳನ್ನು ತನ್ನ ಮನೆಯಿಂದ ಕಳವು ಮಾಡಿರುತ್ತಾಳೆಂಬದಾಗಿ ಒಂದು ಕ್ರಿಮಿನಲ್ ಮೊಕದ್ದಮೆಯನ್ನು ದಾಖಲು ಮಾಡಿರುವರು.

~~~~~

ಹೋಲ್ಕರ ಮಹಾರಾಜರವರು ಯೂರೋಪದಲ್ಲಿ ಕಾದಾಡುತ್ತಿರುವ ಬ್ರಿಟಿಷ ಸೇನೆಗಳ ಉಪಯೋಗಾರ್ಥವಾಗಿ ಒಂದು ಲಕ್ಷ ರೂಪಾಯಿಗಳನ್ನು ದ್ರವ್ಯ ಸಹಾಯವಾಗಿ ಕೊಟ್ಟಿರುತ್ತಾರೆ

~~~~~

ವಿಶಾನಾಪುರ ಜಿಲ್ಲೆಯಲ್ಲಿ ಪೋಲೀಸು ಸಬ್ ಇನ್ಸ್‌ಪೆಕ್ಟರರೊಬ್ಬರು ಒಂದು ಮೊಕದ್ದಮೆಯ ತನಖಿಯನ್ನು ನಡಿಸುತ್ತಿದ್ದಾಗ ಪೋಲೀಸು ಸಬ್ ಇನ್ಸ್‌ಪೆಕ್ಟರರನ್ನು ಒಬ್ಬ ಸ್ತ್ರೀಯು ಹೊಡದ್ದರಿಂದ ಈ ಸ್ತ್ರೀಗೆ ಒಂದು ತಿಂಗಳ ಕಾರಾಗ್ರಹವಾಸದ ಶಿಕ್ಷೆಯನ್ನು ವಿಧಿಸಿರುತ್ತಾರೆ

~~~~~

ಗೋಧಿಯ ದರವು ಉತ್ತರ ಹಿಂದೂಸ್ಥಾನದಲ್ಲಿ ರೂಪಾಯಿಗೆ ೮ ಅಥವಾ ೮½ ಸೇರುಗಳ ಪ್ರಕಾರವಿದೆ. ಜಬಲಪುರ ಮತ್ತು ಬಾಯಿಲಪುರ ಪ್ರಾಂತ್ಯಗಳಲ್ಲಿ ರೂಪಾಯಿಗೆ ೯ ಅಥವಾ ೯ ಸೇರುಗಳ ಪ್ರಕಾರ ದೊರಕುವದು.

~~~~~

ಮುಂಬಯಿ ಪ್ರೆಸಿಡನ್ಸಿ ಎಸೋಸಿಯೇಶನಿನ ಅಧ್ಯಕ್ಷರಾದ ಸರ್ ಫಿರೋಜಷಹ ಮೇಹತಾರವರು ವ್ಹೈಸರಾಯರ ಪ್ರಾಯ್ವೇಟ್ ಸೆಕ್ರೆಟರಿಯವರಿಗೆ "ಸಿವಿಲ್ ಸರ್ವಿಸ್ ಬಿಲ್" ವಿಷಯ ಸೂಚಿಸಿರುವರೇನಂದರೆ—ಪಾರ್ಲಿಮೆಂಟ್ ಸಭೆಯ ಪ್ರತಿಪ್ರತಿನಿಧಿಗಳ ಸದನದಲ್ಲಿ ಈ ಕಾನೂನು ಮಸೂದೆಯನ್ನು ಇರಿಸುವ ಮೊದಲು ಇದನ್ನು ಹಿಂದೂಸ್ಥಾನದಲ್ಲಿ ಪ್ರಕಟಿಸಿ ಈ ವಿಷಯ ಪ್ರಜಾಭಿಪ್ರಾಯವು ಏನೆಂಬುದಾಗಿ ತಿಳಿಯುವದು ಉಚಿತ್ಯವಾಗಿದೆ. ಮಸೂದೆಯ ತಂತೀ ಮೂಲಕ ಹಿಂದೂಸ್ಥಾನದಲ್ಲಿ ಗೊತ್ತಾದ ಮಟ್ಟಿಗೆ ಈ ಮಸೂದೆಯಿಂದ ಹಿಂದೂಸ್ಥಾನದ ಪ್ರಜಾವರ್ಗದಿಂದ ಸಿವಿಲ್ ಸರ್ವಿಸ್ ಹುದ್ದೆಗೆ ಆರಿಸಲ್ಪಡುವವರ ಸಂಖ್ಯೆಯು ಕಡಿಮೆಯಾಗಬಹುದೆಂತ ತೋರುತ್ತದೆ. ಯುದ್ಧದ ದೆಸೆಯಿಂದ ಈ ತತ್ಕಾಲಿಕ ಶಾಸನವನ್ನು ಜಾರಿಗೆ ತರುವದು ಅಗತ್ಯ ಕಂಡುಬಂದದರಿಂದ ಇಂಥಾ ವೇಳೆಯಲ್ಲಿ ಭಾರತೀಯರನ್ನು ಮೊದಲಿನಕ್ಕಿಂತ ಈಗ ಹೆಚ್ಚಿನದ್ದಾಗಿ ಈ ಹುದ್ದೆಗಳಿಗೆ ನೇಮಿಸುವದು ಅವಶ್ಯಕವಾಗಿರುವುದು. ಈ ಮೊದಲಾದ ಎಸೋಶಿಯೇಶನಿನವರ ಅಭಿಪ್ರಾಯವನ್ನು ವ್ಹೈಸರಾಯಿ ಪ್ರಭುಗಳು ಬ್ರಿಟಿಷ ಸರಕಾರದವರ ಲಕ್ಷ್ಯಕ್ಕೆ ತರಬೇಕೆಂದು ಸೂಚಿಸೋಣಾಗಿರುವದು.

~~~~~

ಕಲ್ಕತ್ತೆಯ ಸಾವುಕಾರರಲ್ಲೊಬ್ಬರೂ ಮತ್ತು ಬಂಗಾಳದ ನ್ಯಾಯವಿಧಾಯಕ ಸಭೆಯ ಮೆಂಬರರೂ ಆದ ಬಹುಮಾನಪಟ್ಟ ರಾಜಾ ಪಿಶೇಶ್ ಲೋರವರಿಗೆ ದಸ್ಕತು ಇಲ್ಲದ ಅನಾಮಿಕ ಒಂದು ಪತ್ರವು ಬಂದಿರುವದು. ೫೦೦೦ ರೂಪಾಯಿಗಳನ್ನು ಕಾಗದದಲ್ಲಿ ತೋರುವ ಸಮಯದಲಿ ತಂದುಕೊಡದಿದ್ದರೆ ಈ ನ್ಯಾಯವಿಧಾಯಕ ಸಭೆಯ ಮೇಲೆ ಹೆಸರುಕಾಣಿಸಿರುವ ಗ್ರಹಸ್ಥರನ್ನೂ ಇವರ ಇಬ್ಬರು ಮಕ್ಕಳನ್ನೂ ಗುಂಡುಹೊಡೆದು ಕೊಲ್ಲುವೆವೆಂತ ಗದರಿಸಿ ಬರೆದ ಕಾಗದವು ಬಂದು ತಲ್ಪಿರುವದು.

~~~~~

ಜೈನಮತಸ್ಥರ ೧೧ನೇ ವರುಷದ ಮಹಾ ಸಭೆಯು ಮುಂಬಯಿಯಲಿ ಕೂಡುವದು.

ಪ್ರಕಟಣೆ.

ಉಟಾಕಮಂಡ್, ತಾರೀಖು 27ನೇ ಅಗಸ್ಟು 1915ನೇ ಇಸವಿ.

ನಂ. 25.—

ಇಂಡಿಯಾ ಗವರ್ನಮೆಂಟಿನವರ ಕ್ಲುಪ್ತ ವಾಯಿದೆಗೆ ಸಂದಾಯವಾಗುವ ಸಾಲವು.

ಪೋಸ್ಟ್ ಆಫೀಸಿನ ಮುಖಾಂತರ ಜನರು ಚಂದಾದಾರರಾಗುವ ವಿಷಯವಾಗಿ ಏರ್ಪಟ್ಟ ಶರ್ತಗಳ ಕುರಿತು ಪ್ರಕಟಣೆ.

ಗವರ್ನಮೆಂಟಿನವರು ಈ ವರುಷದ ಸಾಲವನ್ನು ಒಂದು ಹೊಸ ವಿಧಾನದಲ್ಲಿ ಸೇಕಡಾ 4ರ ಬಡ್ಡಿಯಲ್ಲಿ ಎತ್ತುತಾರೆ ಅದು 1923ನೇ ಇಸವಿಯ ನವಂಬರ್ ತಿಂಗಳೊಳಗಾಗಿ ಸಂಪೂರ್ಣವಾಗಿ ಮರುಪಾವತಿ ಮಾಡಲ್ಪಡುವದು, ಪರಂತು ಗವರ್ನಮೆಂಟಿನವರಿಗೆ ಇಷ್ಟವಿದ್ದರೆ 1920ನೇ ಇಸವಿಯ ಅಕ್ಟೋಬರ್ ತಿಂಗಳ ತರುವಾಯ ಯಾವಕಾಲದಲ್ಲಾದರೂ ಪಾವತಿ ಮಾಡಲ್ಪಡಬಹುದು

2 ಕಲ್ಕತ್ತಾ, ಮದ್ರಾಸ್, ಬೊಂಬಾಯಿ ಮತ್ತು ಇತರ ದೊಡ್ಡ ಮಧ್ಯಸ್ಥಳಗಳಲ್ಲಿ ವಾಡಿಕೆಯಾದ ರೀತಿಯಲ್ಲಿ ದರಖಾಸ್ತುಗಳನ್ನು ಅಂಗೀಕರಿಸಿ 4½ ಕೋಟಿ ರೂಪಾಯಿ ಈ ಮೊದಲೇ ಎತ್ತಲ್ಪಟ್ಟಿರುವುದು, ಮತ್ತು ಇಷ್ಟರ ಮಟ್ಟಿಗೆ ಸದರೀ ಸಾಲವು ಈಗ ಜಾರಿಯಾಗಿದೆ ಆದರೆ ಅದು ವಿನಾ ಸಾಲವನ್ನು ಸಣ್ಣ ಮೊಬಲಗುಗಳಲ್ಲಿ ಕೊಡಲು ಇಷ್ಟವುಳ್ಳ ಜನರಿಗೆ, ಅವರು ಸೇವಿಂಗ್ಸ್ ಬ್ಯಾಂಕು ಡಿಪಾಜಿಟರರಾಗಿದ್ದರೂ ಅಲ್ಲದಿದ್ದರೂ, ಸೇವಿಂಗ್ಸ್ ಬ್ಯಾಂಕು ಕೆಲಸವನ್ನು ನಿರ್ವಹಿಸುವ ಅತ್ಯಂತ ಸಮೀಪದ ಪೋಸ್ಟ್ ಆಫೀಸಿನ ಮುಖಾಂತರ ಚಂದಾಕೊಡಲು ಒಂದು ವಿಶೇಷ ಸಂದರ್ಭವು ಕೊಡಲ್ಪಟ್ಟಿದೆ

ಹೇಗೆ ಚಂದಾದಾರರಾಗುವದೆಂಬುದು.

3 ಅಕ್ಟೋಬರ್ 30ನೇ ತಾರೀಖಿನವರೆಗೆ ಯಾವಕಾಲದಲ್ಲಾದರೂ ಟಪ್ಪಾಲ್ ಆಫೀಸಿನ ಮುಖಾಂತರ ಅರ್ಜಿಗಳನ್ನು ಮಾಡಬಹುದು

4 ಅರ್ಜಿಗಳು ನೂರು ರೂಪಾಯಿ ಯಾ ಅದರ ಅಪವರ್ತ್ಯಗಳಿಗೆ (ಅಂದರೆ ರೂ 100 200 300 ಈ ಮೊದಲಾದ) ಮಾಡಲ್ಪಡಬೇಕು ಮತ್ತು ಯಾವನೊಬ್ಬ ಅರ್ಜಿದಾರನ ಸಂಗತಿಯಲ್ಲಿ 100 ರೂಪಾಯಿಗಳಿಗೆ ಕಡಿಮೆಯಾಗಿ ಮತ್ತು 5,000 ರೂಪಾಯಿಗಳಿಗೆ ಮೀರಿ ಇರಕೂಡದು

ಷರಾ ಒಬ್ಬ ಅರ್ಜಿದಾರನು ಟಪ್ಪಾಲ್ ಆಫೀಸಿನ ಮುಖಾಂತರ ಈ ಮೊದಲೇ ಸೇಕಡಾ 4ರ ದರದ ಬಡ್ಡಿಯ ಪ್ರಾಮಿಸರಿ ನೋಟುಗಳನ್ನು ಪಡೆದಿರುತ್ತಾನಾದರೂ 5,000 ರೂಪಾಯಿಗಳವರೆಗೆ ಹೊಸ ಸಾಲಕ್ಕೆ ಅರ್ಜಿಮಾಡಬಹುದು

5 ಅರ್ಜಿಮಾಡಲು ಅಪೇಕ್ಷಿಸುವ ಒಬ್ಬ ಮನುಷ್ಯನು ಇದರಡಿ ಕೊಟ್ಟಿರುವ ಫಾರ್ಮನ್ನು ಬರಾಯಿಸಬೇಕು, ಸದರೀ ಫಾರ್ಮನ್ನು ಸೇವಿಂಗ್ಸ್ ಬ್ಯಾಂಕು ಕೆಲಸವು ನಿರ್ವಹಿಸಲ್ಪಡುವ ಪ್ರತಿ ಒಂದು ಟಪ್ಪಾಲ್ ಆಫೀಸಿನಿಂದ ಸಹಾ ಪಡೆಯಬಹುದು ಆತನು ಎಷ್ಟು ಮೊಬಲಗಿಗೆ ಅರ್ಜಿಮಾಡುತಾನೋ ಆ ಪೂರಾ ಮೊಬಲಗನ್ನು ಆಗಲೇ ಪಾವತಿ ಮಾಡಬೇಕು ಆತನು ಒಬ್ಬ ಸೇವಿಂಗ್ಸ್ ಬ್ಯಾಂಕು ಡಿಪೋಜಿಟರರಾಗಿದ್ದ ಪಕ್ಷದಲ್ಲಿ ಆತನು ತನ್ನ ಸೇವಿಂಗ್ಸ್ ಬ್ಯಾಂಕು ಲೆಕ್ಕದಲ್ಲಿರುವ ಮೊಬಲಗನ್ನು ಈ ಬಗ್ಗೆ ಉಪಯೋಗಿಸಬಹುದು ಅಥವಾ ಆತನು ಹಣವನ್ನು ರೊಕ್ಕವಾಗಿಯೂ ಕೊಡಬಹುದು ಅರ್ಜಿದಾರನು ಟಪ್ಪಾಲ್ ಆಫೀಸಿಗೆ ಸ್ವತಃ ಹೋಗಬಹುದು ಅಥವಾ ಒಬ್ಬ ನೌಕರನನ್ನು ಕಳುಹಿಸಲೂ ಬಹುದು ಪಾವತಿ ಮಾಡಲ್ಪಟ್ಟ ಯಾವತ್ತೂ ಮೊಬಲಗುಗಳಿಗೆ ರಸೀದಿ ಕೊಡಲ್ಪಡುವದು

6 ಅರ್ಜಿದಾರನ ಪಾವತಿಮಾಡುವ ಪ್ರತಿ 100 ರೂಪಾಯಿಗಳ ಬಗ್ಗೆ ಅಷ್ಟು ಬೆಲೆಯ ಗವರ್ನಮೆಂಟ್ ಪ್ರಾಮಿಸರಿ ನೋಟುಗಳು ಆತನಿಗೆ ಕೊಡಲ್ಪಡುವವು.

ಪ್ರಾಮಿಸರಿ ನೋಟುಗಳ ತಾಬ

7 ನೋಟುಗಳನ್ನು ಅರ್ಜಿದಾರನು ತನ್ನ ಸ್ವಂತ ತಾಬೆಯಲ್ಲಿ ಇಟ್ಟುಕೊಳ್ಳಬಹುದು ಅಥವಾ ಆತನಿಗೆ ಇಷ್ಟವಿದ್ದರೆ ಆತನ ಬಗ್ಗಾಗಿ ಅವು ಪೋಸ್ಟ್ ಆಫೀಸ್ ಅಧಿಕಾರಿಗಳ ತಾಬೆಯಲ್ಲಿ ಇಡಲ್ಪಡಬಹುದು ಯಾವ ರೀತಿಯು ತನಗೆ ಇಷ್ಟವೆಂಬುದನ್ನು ಆತನು ಅರ್ಜಿಯ ಫಾರ್ಮನ್ನು ಬರಾಯಿಸುವಾಗಲೇ ಅದರಲ್ಲಿ ನಮೂದಿಸತಕ್ಕದ್ದು ಆತನು ನೋಟುಗಳನ್ನು ತಾನೇ ಇಟ್ಟುಕೊಳ್ಳಲು ಅಪೇಕ್ಷಿಸುವದಾದರೆ ಅವು ಬಟವಾಡೆಗೆ ಸಿದ್ಧವಾದಾಗ ಆ ಕುರಿತು ಪೋಸ್ಟ್ ಆಫೀಸಿನವರು ಆತನಿಗೆ ತಿಳಿಯಪಡಿಸುವರು, ಮತ್ತು ಆತನು ಸ್ವತಃ ಹಾಜರಾದಲ್ಲಿ ಅವು ಆತನಿಗೆ ಕೊಡಲ್ಪಡುವವು ಅವುಗಳನ್ನು ಟಪ್ಪಾಲ್ ಆಫೀಸಿನಲ್ಲಿಯೇ ಇಡಲು ಆತನು ನಿರ್ಣಯಿಸುವ ಪಕ್ಷದಲ್ಲಿ ಆತನು ಪುನಃ ಸ್ವತಃ ಹಾಜರಾಗಬೇಕೆಂದಿಲ್ಲಾ, ಆದರೆ ಟಪ್ಪಾಲ್ ಆಫೀಸಿನವರೇ ಅವು ತಪ್ಪಿಲ್ಲದೆ ಬಂದವೆಂದು ಅವು ಆತನ ಬಗ್ಗಾಗಿ ತಾಬೆಯಲ್ಲಿಟ್ಟುಕೊಳ್ಳಲ್ಪಟ್ಟಿವೆ ಎಂಬುದನ್ನು ಕುರಿತು ಒಂದು ಸಮಾಚಾರ ಪತ್ರವನ್ನು ಸಕಾಲದಲ್ಲಿ ಆತನಿಗೆ ಕಳುಹಿಸಿಕೊಡುವರು ಸದರೀ ನೋಟುಗಳನ್ನು ತಾನೇ ಇಟ್ಟುಕೊಳ್ಳಲು ಆತನು ಮುಂದೆ ಯಾವಾಗಲಾದರೂ ಅಪೇಕ್ಷಿಸುವುದಾದರೆ ಆಗ ಅವು ಆತನ ವಶಕ್ಕೆ ಕೊಡಲ್ಪಡುವವು

ಬಡ್ಡಿಯನ್ನು ಪಾವತಿಮಾಡೋಣ.

8 ಸಾಲಿಯಾನಾ ಸೇಕಡಾ 4ರ ದರದ ಬಡ್ಡಿಯು ಅರ್ಧ ವರ್ಷಕೊಮ್ಮೆ ಪಾವತಿ ಮಾಡಲ್ಪಡುವದು ಎಂದರೆ ಪ್ರತಿ ವರ್ಷದ ಮೇ 31ನೇ ತಾರೀಖಿಗೆ ಸೇಕಡಾ 2ರಂತೆಯೂ ನವಂಬರ್ 30ನೇ ತಾರೀಖಿಗೆ ಸೇಕಡಾ 2ರಂತೆಯೂ ಸಲಾಯಿಸಲ್ಪಡುವದು ಅರ್ಜಿಯ ತಾರೀಖಿನಿಂದ ಬರುವ ನವಂಬರ್ 30ನೇ ತಾರೀಖಿನವರೆಗಿನ ಭಿನ್ನಾಂಶದ ಬಗ್ಗೆ ಬಡ್ಡಿಯು ಪ್ರಾಮಿಸರಿ ನೋಟುಗಳನ್ನು ಅರ್ಜಿದಾರನು ಸ್ವತಃ ಇಟ್ಟುಕೊಳ್ಳುವದಾದರೆ ಅವುಗಳನ್ನು ಬಟವಾಡೆಮಾಡುವ ಕಾಲದಲ್ಲಿ ನಗದಾಗಿ ಕೊಡಲ್ಪಡುವದು, ಅಥವಾ ಆತನು ನೋಟುಗಳನ್ನು ಪೋಸ್ಟ್ ಆಫೀಸ್ ಅಧಿಕಾರಿಗಳ ತಾಬೆಯಲ್ಲಿಯೇ ಇಡುವದಾದರೆ ಮುಂದಿನ ಕಲಮಿನಲ್ಲಿ ನಮೂದಿಸಿರುವ ಸೇವಿಂಗ್ಸ್ ಲೆಕ್ಕದಲ್ಲಿ ಆತನ ಬಗ್ಗೆ ಜಮಾ ದಾಖಲುಮಾಡಲ್ಪಡುವದು

9. ಅರ್ಜಿದಾರನು ತನ್ನ ಪ್ರಾಮಿಸರಿ ನೋಟುಗಳನ್ನು ಪೋಸ್ಟ್ ಆಫೀಸ್ ಅಧಿಕಾರಿಗಳ ತಾಬೆಯಲ್ಲಿಯೇ ಇಡಲು ನಿರ್ಣಯಿಸಿದ ಪಕ್ಷದಲ್ಲಿ ಪೋಸ್ಟ್ ಆಫೀಸ್ ಅಧಿಕಾರಿಗಳು ಪ್ರತಿ ಅರ್ಧ ವರ್ಷಕ್ಕೊಮ್ಮೆ ಆತನ ಬಗ್ಗಾಗಿ ಬಡ್ಡಿಯನ್ನು ಪಡಕೊಂಡು ಈ ಬಗ್ಗಾಗಿ ಆತನ ಹೆಸರಲ್ಲಿ ಇಡಲ್ಪಡುವ ಒಂದು ಸೇವಿಂಗ್ಸ್ ಬ್ಯಾಂಕು ಲೆಕ್ಕದಲ್ಲಿ ಜಮಾ ದಾಖಲ್ ಮಾಡುವರು. ಇದಲ್ಲದೆ ಈ ಮೇರೆಗೆ ಬಡ್ಡಿಯನ್ನು ಪಡೆದುಕೊಂಡಾಗಲೆಲ್ಲಾ ಪೋಸ್ಟ್ ಆಫೀಸಿನವರು ಆಯಾಕಾಲದಲ್ಲಿ ಆತನಿಗೆ ಆ ಕುರಿತು ತಿಳಿಯಪಡಿಸುವರು. ಈ ಕೆಲಸದ ಬಗ್ಗೆ ಯಾವ ಫೀಸೂ ಹೊರಿಸಲ್ಪಡಲಿಕ್ಕಿಲ್ಲ ಮತ್ತು, ಅರ್ಧ ವರ್ಷದ ಬಡ್ಡಿಯ ಮೊಬಲಗನ್ನು ಪಾವತಿಮಾಡುವಾಗ ಇನ್‌ಕಮ್‌ಟ್ಯಾಕ್ಸು ಯಾವದೂ ಅದರಿಂದ ವಜಾಮಾಡಲ್ಪಡಲಿಕ್ಕಿಲ್ಲ.

ಆತನು ಪ್ರಾಮಿಸರಿ ನೋಟುಗಳನ್ನು ಸ್ವತಃ ಇಟ್ಟುಕೊಳ್ಳುತ್ತಾನಾದರೆ ಅರ್ಧ ವರ್ಷದ ಬಡ್ಡಿಯ ಮೊಬಲಗು ಪಾವತಿಮಾಡುವ ಕಾಲದಲ್ಲಿ ವಾಡಿಕೆಯಂತೆ ಬಡ್ಡಿಯ ಮೊಬಲಿಗಿನಿಂದ ಇನ್‌ಕಮ್‌ಟ್ಯಾಕ್ಸು ವಜಾಮಾಡಲ್ಪಡುವದು.

ಪ್ರಾಮಿಸರಿ ನೋಟುಗಳನ್ನು ವಿಕ್ರಯಿಸೋಣ.

10. ಇದರಲ್ಲಿ ವಿವರಿಸೋಣಾದ ನಡವಳಿಕೆಯ ಮೇರೆಗೆ ಪೋಸ್ಟ್ ಆಫೀಸಿನ ಮುಖಾಂತರ ಕೊಂಡುಕೊಳ್ಳಲ್ಪಟ್ಟ ಈ ಹೊಸ ಸಾಲದ ಬಾಬತು ಪ್ರಾಮಿಸರಿ ನೋಟುಗಳನ್ನು ಹೊಂದಿರುವ ಒಬ್ಬ ಸೇವಿಂಗ್ಸ್ ಬ್ಯಾಂಕು ಡಿಪಾಜಿಟರನು ಯಾವ ಕಾಲದಲ್ಲಾದರೂ ಅವುಗಳನ್ನು ಯಾ ಅವುಗಳ ಯಾವದೊಂದು ಭಾಗವನ್ನು ವಿಕ್ರಯಿಸಲಿಕ್ಕೆ ಅಪೇಕ್ಷಿಸುತ್ತಾನಾದರೆ ಆತನ ಬಗ್ಗೆ ಪೋಸ್ಟ್ ಆಫೀಸಿನವರು ಕಮಿಷನು ಯಾ ಇತರ ಫೀಸುಗಳನ್ನು ಹೊರಿಸದೇನೆ ಅದರ ಕುರಿತು ವಿಲೇವಾರಿ ಮಾಡುವರು. ಇದರ ವಿಷಯ ಪೂರ್ಣ ಮಾಹಿತಿಯನ್ನು ಪೋಸ್ಟ್ ಆಫೀಸಿನಿಂದ ಯಾವ ಕಾಲದಲ್ಲಾದರೂ ಹೊಂದಬಹುದು.

ಅರ್ಜಿಯ ಫಾರ್ಮು.

ನಾನು 191 ನೇ ಇಸವಿ ಜುಲಾಯಿ 29ನೇ ತಾರೀಖಿನ ಇಂಡಿಯಾ ಗಜೇಟಿನ ವಿಶೇಷ (ಎಕ್ಸ್‌ಟ್ರಾರ್ಡಿನರಿ) ಸಂಚಿಕೆಯಾಗಿ ಪ್ರಸಿದ್ಧಮಾಡಲ್ಪಟ್ಟ ಇಸ್ತಿಹಾರಿನಲ್ಲಿ ಪ್ರಕಟಿಸಲ್ಪಟ್ಟ ಕ್ಲುಪ್ತವಾಯಿದೆಗೆ ಸಂದಾಯವಾಗುವ ಸೇಕಡಾ ನಾಲ್ಕರ ಬಡ್ಡಿಯ ಸಾಲದ ಬಗ್ಗೆ ರೂ ______ ನ್ನು ಕಂಪಾ ಕೊಡಲು ಈ ಮೂಲಕ ಅಪೇಕ್ಷಿಸುತ್ತೇನೆ.

ನಾನು ದರಖಾಸ್ತುಮಾಡಿದ ಸಾಲದ ಮೊಬಲಗಿನ ಬಗ್ಗೆ ರೂ ______ ನ್ನು ನೂರಕ್ಕೆ ನೂರರಂತೆ ಪೂರಾ ಇದರೊಡನೆ ರೇವಣಿ ಇಟ್ಟಿರುತ್ತೇನೆ.

ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕಿನಲ್ಲಿ ನನ್ನ ಲೆಕ್ಕದಲ್ಲಿ ಜಮಾ ಇರುವ ಮೊಬಲಗಿನ ಪೈಕಿ ನೂರಕ್ಕೆ ನೂರರಂತೆ ನಾನು ದರಖಾಸ್ತುಮಾಡಿದ ಸಾಲದ ಮೊಬಲಗಿಗೆ ಸರಿಯಾಗಿರುವ ರೂ ______ ನ್ನು ಈ ಬಗ್ಗಾಗಿ ಉಪಯೋಗಿಸಿಕೊಳ್ಳಬಹುದಾಗಿ ನಾನು ಅಪೇಕ್ಷಿಸುತ್ತೇನೆ.

ನೂರಕ್ಕೆ ನೂರರಂತೆ ನಾನು ದರಖಾಸ್ತುಮಾಡಿದ ಸಾಲದ ಮೊಬಲಗಿನ ಪೈಕಿ ರೂ ______ ಈ ಮೂಲವಾಗಿ ರೇವಣಿ ಇಟ್ಟಿರುತ್ತೇನೆ; ಮತ್ತು ಉಳಿದ ಮೊಬಲಗು ಎಂದರೆ ರೂ ______ ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕಿನಲ್ಲಿ ನನ್ನ ಲೆಕ್ಕದಲ್ಲಿ ಜಮೆ ಇರುವ ಮೊಬಲಗಿನಿಂದ ಉಪಯೋಗಿಸಿಕೊಳ್ಳಬೇಕಾಗಿ ಅಪೇಕ್ಷಿಸುತ್ತೇನೆ.

(ಅನಾವಶ್ಯಕವಾದ ವಾಕ್ಯಗಳನ್ನು ಹೊಡೆದುಬಿಡತಕ್ಕದ್ದು.)

ನನ್ನಿಂದ ಅಂಗೀಕರಿಸಲ್ಪಟ್ಟ ಸಾಲದ ಮೊಬಲಗನ್ನು ನನ್ನ ಬಗ್ಗೆ ಪೋಸ್ಟ್ ಮತ್ತು ಟೆಲಿಗ್ರಾಫ್ ಇಲಾಖೆಯ ಅಕೌಂಟಂಟ್ ಜನರಲ್‌ರವರು ಇಟ್ಟುಕೊಳ್ಳಬಹುದಾಗಿ ಮತ್ತು ಆ ಬಾಬತು ಬಡ್ಡಿಯನ್ನು ನನ್ನ ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕು ಲೆಕ್ಕದಲ್ಲಿ ಆಯಾ ವಾಯಿದೆಗೆ ಜಮಾ ದಾಖಲುಮಾಡಬೇಕಾಗಿ ನಾನು ಅಪೇಕ್ಷಿಸುತ್ತೇನೆ.

ನನ್ನಿಂದ ಅಂಗೀಕರಿಸಲ್ಪಟ್ಟ ಮೊಬಲಗಿನ ಬಗ್ಗೆ ಈ ಕೆಳಗಿನ * ಮೌಲ್ಯಗಳ ಪ್ರಾಮಿಸರಿ ನೋಟುಗಳು ನನಗೆ ಕೊಡಲ್ಪಡಬೇಕಾಗಿ ಅಪೇಕ್ಷಿಸುತ್ತೇನೆ.

(ಅನಾವಶ್ಯಕವಾದ ವಾಕ್ಯಗಳನ್ನು ಹೊಡೆದುಬಿಡತಕ್ಕದ್ದು)

ಹೆಸರು ______

ವಿಳಾಸ ______

ತಾರೀಖು ______ 1915

(ಅವಶ್ಯವಿದ್ದರೆ ಇಲ್ಲಿ ಕೊಟ್ಟಿರುವ ಫಾರ್ಮನ್ನೇ ಕತ್ತರಿಸಿ ಉಪಯೋಗಿಸಬಹುದು.)

ಏ. ಭಟ್ಟರ್‌ವರ್ತ್,
ಚೀಫ್ ಸೆಕ್ರೆಟರಿ.

ಇಸ್ಮೈಲ್ ತಯಬ ಎಂಬವನಿಂದ ಆತನ ಚಿನ್ನದ ಸರ ಪಣಿ, ಕಿಶೆಗಡಿಯಾರು ಮತ್ತು ಇತರ ಪದಕಗಳನ್ನು ಬಲತ್ಕಾರದಿಂದ ಸೆಳದು ತೆಗದ ಇಬ್ಬರು ಯುರೋಪಿಯ ಸೇನಿಕರ ಮೇಲೆ ಮುಂಬಯಿಯ ಪ್ರೆಸಿಡೆನ್ಸಿ ಮೇಜಿಸ್ಟ್ರೇಟರಲ್ಲಿ ಒಂದು ಕ್ರಿಮಿನಲ್ ಮೊಕದ್ದಮೆಯು ದಾಖಲು ಮಾಡಲ್ಪಟ್ಟಿತ್ತು. ಮೇಜಿಸ್ಟ್ರೇಟರು ಇಬ್ಬರೂ ಸಹ ತಪ್ಪಿತಸ್ಥರಾಗಿರುವರೆಂತ ಒಬ್ಬನಿಗ ಎರಡು ತಿಂಗಳು ಮತ್ತೊಬ್ಬನಿಗೆ ನಾಲ್ಕು ತಿಂಗಳ ಕಾರಾಗ್ರಹವಾಸ ಶಿಕ್ಷೆಯನ್ನು ವಿಧಿಸಿರುವರು.

ಯುನೈಟೆಡ್ ಪ್ರೊವಿನ್ಸ್‌ಗಳ ಅಲ್ಲಹಾಬಾದ್ ಮೊದಲಾದ ಪ್ರಾಂತ್ಯಗಳಲ್ಲಿ ಮಹಮ್ಮದೀಯರ ಬಕ್ರೀದ್ ಹಬ್ಬದ ಕಾಲದಲ್ಲಿ ಹಿಂದೂ ಮಹಮ್ಮದೀಯರೊಳಗೆ ಆಗಿಂದಾಗ್ಯೆ ಕಲಹಗಳು ಉಂಟಾಗುತ್ತಿದ್ದವು ಈ ವರುಷ ಆ ಪ್ರಾಂತ್ಯಗಳಲ್ಲಿ ಎಲ್ಲಿಯಾದರೂ ಇಂಥ ಕಲಹಗಳು ಉಂಟಾಗಲೇ ಇಲ್ಲ ಇದರ ಬದಲಿಗೆ ಹಬ್ಬಕಾಲದಲ್ಲಿ ಹಿಂದೂ ಮುಸಲ್ಮಾನರ ಸಹಕೂಟ ಉಭಯ ಮತದವರೂ ಸ್ನೇಹಭಾವದಿಂದಿರಬೇಕೆಂಬ ನಿರ್ಣಯಗಳನ್ನು ಮಾಡಿ ಸಭೆಯಲ್ಲಿ ಹಲವರು ಒಬ್ಬರನ್ನೊಬ್ಬರು ಆಲಂಗಿಸಿಕೊಂಡರು. ಹಿಂದೂಗಳ ಗೋರಕ್ಷಣೆ ಫಂಡಿಗೆ ರೂ ೧೦೦ನ್ನು ಖಾನ್ ಬಹದ್ದೂರ್ ಅಬ್ದುಲ್ ಹವಿದ್‌ಖಾನ್ ರವರು ಈ ದಿನವೇ ಕೊಟ್ಟಿರುತ್ತಾರೆ

ಹಿಂದೂ ವಿಶ್ವವಿದ್ಯಾಲಯದ ಕಟ್ಟಡಗಳನ್ನು ಕಟ್ಟಿಸಲು ಬೇಕಾದ ಸ್ಥಳ ಮೊದಲಾದವುಗಳನ್ನು ಪಡೆದು ಕಟ್ಟೋಣಗಳು ಹೇಗೆ ಕಟ್ಟಿಸಲ್ಪಡಬೇಕೆಂಬುದನ್ನು ಆಲೋಚಿಸಲಿಕ್ಕೆ ಇತ್ತಲಾಗ ಒಂದು ಸಭೆಯು ಕೂಡಿತ್ತು

ದಕ್ಷಿಣ ಹಿಂದೂಸ್ಥಾನ.

ಈ ವರ್ತಮಾನಪಟ್ಟ ಸರ್ ಶಂಕರನ್ ನಾಯರರವರು ಇಂಡಿಯಾ ಸರಕಾರದ ಕಾರ್ಯನಿರ್ವಾಹಕ ಕಮಿಟಿಯ ಮೆಂಬರರಾಗಿ ಹೋಗಿ ಇಲ್ಲದ ಕಾರಣ ಮದ್ರಾಸ ಹೈಕೋರ್ಟಿನಲ್ಲಿ ಆಕ್ಟಿಂಗ್ ಜಡ್ಜಾಗಿದ್ದ ಬಹುಮಾನಪಟ್ಟ ಟಿ ವಿ ಶೇಷಗಿರಿ ಅಯ್ಯರರವರು ಇವರ ಸ್ಥಾನದಲ್ಲಿ ಕಾಯಂ ಜಡ್ಜರಾಗಿ ಚಕ್ರವರ್ತಿಗಳಿಂದ ನೇಮಿಸಲ್ಪಟ್ಟಿರುತ್ತಾರೆ

ಮೈಸೂರಿನಲ್ಲಿ ಪ್ರತ್ಯೇಕವಾಗಿ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ವಿಷಯವು ಮಹಾರಾಜರವರ ಮತ್ತು ದಿವಾನರವರ ಪರ್ಯಾಲೋಚನೆಯಲ್ಲಿರುವುದು ದಿವಾನ್‌ರವರು, ಕೆಲವು ಕಾಲದ ಮುಂಚೆ ಸಿಮ್ಲಾಕ್ಕೆ ಹೋದಾಗ ಅಲ್ಲಿ ಇಂಡಿಯಾ ಸರಕಾರದವರೊಡನೆ ಈ ವಿಷಯವನ್ನು ವಾದಿಸಿರುವರು ವಿಶ್ವವಿದ್ಯಾಲಯವನ್ನು ಕೂಡಲೆ ಸ್ಥಾಪಿಸುವುದು ಅನುಕೂಲವಲ್ಲದಿದ್ದರೂ ಇದು ಮೈಸೂರಿನಲ್ಲಿ ಸ್ಥಾಪಿಸಲ್ಪಡುವುದೆಂಬುವದರಲ್ಲಿ ಅನುಮಾನವಿರದೆಂತ ತಿಳಿದು ಬರುತ್ತದೆ

ಉತ್ತರ ಆರ್ಕಾಡು, ಕರ್ನೂಲು ಮತ್ತು ತಂಜಾವೂರು ಜಿಲ್ಲೆಗಳ ಜಿಲ್ಲಾ ಸಭೆಗಳು ವೆಲ್ಲೂರು, ನಂದಿಯಾಲ್ ಮತ್ತು ಮಾಯಾವರಮ್ ಪಟ್ಟಣಗಳಲ್ಲಿ ಈ ತಿಂಗಳ ತಾ ೩೩ರಲ್ಲಿ ಕೂಡಿದವು ದೇಶ ಕಾಲಸ್ಥಿತಿಗಳ ಪರ್ಯಾಲೋಚನೆಯು ಇಂಥಾ ಸಭೆಗಳಲ್ಲಿ ನಡದು ಪ್ರಕೃತದಲ್ಲಿ ಅಭಿವೃದ್ಧಿಯ ಪ್ರಗತಿಯು ಹೇಗಿದೆಂಬುದನ್ನು ನಿಶ್ಚಯಿಸಿಕೊಂಡು ದೇಶಾಭಿವೃದ್ಧಿಯ ಪ್ರಯತ್ನಗಳು ಬೇರೆ ಬೇರೆ ಜಿಲ್ಲೆಗಳಲ್ಲಿ ಹೇಗೆ ಮಾಡೋಣಾಗಬೇಕೆಂಬ ವಿಷಯದಲ್ಲಿ ಪ್ರಜಾಜನರಿಗೆ ಇಂಥಾ ಮಹಾ ಸಭೆಗಳ ಮೂಲಕ ಬೇಕಾದ ಶಿಕ್ಷಣವು ದೊರಿಯಲು ಅನುಕೂಲವಾಗುವದು.

ಮೈಸೂರು ಸಂಸ್ಥಾನದಿಂದ ಪಶ್ಚಿಮ ಕರಾವಳಿಗೆ ರೈಲ್ವೆ ಮಾರ್ಗವನ್ನು ಸ್ಥಾಪಿಸಿ ಪಶ್ಚಿಮ ಕರಾವಳಿಯಲ್ಲಿ ಮೈಸೂರಿನ ಒಗ್ಗೆ ಒಂದು ರೇವನ್ನು ಅನುಗೊಳಿಸುವ ವಿಷಯವನ್ನು ಪರಿಶೋಧಿಸಿ ಆವಶ್ಯ ಬೇಕಾದ ಏರ್ಪಾಡುಗಳನ್ನು ನಿಶ್ಚಯಿಸಲು ಮೆ| ರಿಚರ್ಡ್ಸ್ ಎಂಬ ಇಂಜಿನಿಯರರನ್ನು ನೇಮಿಸುವರಾಗಿ ತಿಳಿಯುತ್ತೇವೆ

ಮೈಸೂರು ಮಹಾರಾಜರವರು ಈ ತಿಂಗಳ ತಾ ೨೦ರಲ್ಲಿ ಜರಗಿಸಿದ ದರ್ಬಾರಿನಲ್ಲಿ ರಾ ಜೆ ಎಸ್ ಚಕ್ರವರ್ತಿಯವರಿಗೆ ರಾಜಮಂತ್ರಪ್ರವೀಣವೆಂಬ ಬಿರುದನ್ನೂ ರಾ ಕರ್ಪೂರ ಶ್ರೀನಿವಾಸರಾವ್‌ರವರಿಗೆ ರಾಜಕ್ರಿಯಾಪ್ರಸಕ್ತವೆಂಬ ಬಿರುದನ್ನೂ, ಡಾಕ್ಟರ್ ಟಿ ವಿ ಅಮುಗಮ್ ಮುದಲಿಯಾರರವರಿಗೆ ರಾಜಸಭಾಭೂಷಣ ಎಂಬ ಬಿರುದನ್ನೂ ರಾ| ಎ ಗೋಪಾಲಾಚಾರ್ಯರವರಿಗೆ ಜನೋಪಕಾರಿ ಎಂಬ ಬಿರುದನ್ನೂ ದಯಪಾಲಿಸಿರುತ್ತಾರೆ

ಮೈಸೂರಿನಲ್ಲಿ ಈ ಸರ್ತಿ ಕೂಡಿದ ಪ್ರಜಾಪ್ರತಿನಿಧಿ ಸಭೆಯಲ್ಲಿ ಮೈಸೂರು ಸಂಸ್ಥಾನದ ನ್ಯಾಯ ನಿರ್ಮಾಣ ಸಭೆಯ ಮೆಂಬರರಾಗಿ ರಾಜಶ್ರೀಗಳಾದ ಎಮ್ ಕ ಕೃಷ್ಣಮೂರ್ತಿರಾವ್, ರಾ| ಬಸವಯ್ಯ ಎಡ್ವೊಕೇಟ್ ಬೆಂಗಳೂರು, ರಾ| ಪಿ ನರಸಿಂಗರಾವ್ ಪ್ಲೀಡರ್ ಶ್ರೀರಂಗಪಟ್ಟಣ, ರಾ| ಸಿ ನರಸಿಂಹಯ್ಯ ಎಡ್ವೊಕೇಟ್ ಮೈಸೂರು—ಇವರು ಆರಿಸಲ್ಪಟ್ಟಿರುವರು. ಕಳೆದ ವರ್ಷ ಈ ಸಭೆಯ ಸಭಾಸದರಾಗಿದ್ದ ರಾ| ಎಮ್ ವೆಂಕಟಕೃಷ್ಣಯ್ಯ ಮತ್ತು ರಾ| ಎಸ್ ಆರ್ ಬಾಲಕೃಷ್ಣರಾವ್ ಇವರಿಬ್ಬರು ಈ ವರುಷದಲ್ಲಿ ಪುನಹ ಆರಿಸಲ್ಪಡಲಿಲ್ಲ

ವಿವಿಧ ವಿಷಯಗಳು

ಈಜಿಪ್ ದೇಶಗಳಲ್ಲಿ ಜರ್ಮನಿ ಮತ್ತು ಆಸ್ಟ್ರಿಯಾ ಹಂಗೇರಿಯ ವರ ವ್ಯಾಪಾರದ ಪೋಟಾಪೋಟಿಯು ನಿಂತು ಹೋದ ದರಿಂದ ಬ್ರಿಟಿಷರ ವ್ಯಾಪಾರಕ್ಕೆ ಎಷ್ಟರಮಟ್ಟಿಗೆ ಅನುಕೂಲವಾಗಿದೆ ಎಂಬ ವಿಷಯದಲ್ಲಿ ಬಂದ ಸ್ವಾರಸ್ಯವಾದ ರಿಪೋರ್ಟು ಪ್ರಚುರವಾಗಿದೆ ಹಿಂದೂ ದೇಶದಿಂದ ಈಜಿಪ್ಟಿಗೆ ಹತ್ತಿಯ ದಾರವು ತಕ್ಕಷ್ಟು ಹೋಗುತ್ತಿದೆ ಈಜಿಪ್ಟಿಗೆ ಆವದಾಗಿ ಬರುವ ಸೋಪಿನ ಪದಾರ್ಥಗಳ ಬೆಲೆಯು ವರ್ಷಕ್ಕೆ ನಾಲ್ಕುವರ ಕೋಟಿ ರೂ ಆಗುತ್ತದೆ ನೂಲಿನ ಸಾಮಾನುಗಳೂ, ಬಣ್ಣದ ಬಟ್ಟೆಗಳೂ ಬಹಳವಾಗಿ ಇಟಲಿ, ಆಸ್ಟ್ರಿಯಾ ಮತ್ತು ಜರ್ಮನಿ ದೇಶಗಳಿಂದ ಅಲ್ಲಿರುವ ದಳ್ಳಾಳಿಯವರ ಮೂಲಕ ಬರುತ್ತಿವೆ ಆ ಸರಕುಗಳು ಗ್ರೇಟ್ ಬ್ರಿಟನಿನಲ್ಲಿ ತಯಾರಾದವುಗಳಿಗಿಂತ ಕಿರಿದಾಗಿರುತ್ತವೆ ಆದರೂ ಬೆಲೆ ಕಡಿಮೆಯಾದದರಿಂದ ಅಲ್ಲಿಯ ಜನರು ಅನ್ಯದೇಶದ ವಸ್ತುಗಳನ್ನೇ ಕೊಂಡುಕೊಳ್ಳುವರು ಈ ವ್ಯಾಪಾರದಲ್ಲಿ ಬ್ರಿಟಿಷ್ ಕಾರ್ಖಾನೆಯವರನ್ನು ಹಿಂದೆ ಹಾಕಿರುವ ಅನ್ಯದೇಶದ ವ್ಯಾಪಾರಸ್ಥರು ಎಷ್ಟೋ ಮಂದಿ ಇರುವರು. ಕೇವಲ ಟವ್ವಾಲು ಮುಂತಾದ ಸಾಮಾನುಗಳ ಭಾಂಗಿಗಳನ್ನು ಕಳುಹಿಸುತ್ತಿದರಿಂದಲೇ ಈಜಿಪ್ಟಿನೊಡನೆ ಎಷ್ಟೋ ವ್ಯಾಪಾರವು ನಡೆಯುತ್ತದೆ.

ಸೀಸದ ಕಡ್ಡಿಯನ್ನು ಮಾಡುವುದು.

ಮೈಸೂರು ಸರಕಾರದವರು ಸೀಸದ ಕಡ್ಡಿಗೆ ತಕ್ಕ ಮರವು ಶಿವಮೊಗ್ಗೆಯಲ್ಲಿ ಎಷ್ಟರಮಟ್ಟಿಗೆ ದೊರೆಯುತ್ತದೆಂಬುದನ್ನು ಗೊತ್ತುಮಾಡುವುದಕ್ಕಾಗಿ ಮಿ|| ಲೂಬರ್ ಎಂಬವರನ್ನು ನಿಯಮಿಸಿದ್ದರು ಇವರು ವರ್ಷಂಪ್ರತಿಯೂ ಶಿವಮೊಗ್ಗೆಯ ಕಾಡುಗಳಿಂದ ಧಾರಾಳವಾಗಿ ೪೦,೦೦೦ ಸಲೆಯಡಿ ಮರವು ದೊರಿಯುವುದೆಂದು ಹೇಳಿದರು. ಇಲ್ಲಿಯ ಮರದಿಂದ ಮಾದರಿ ಸೀಸದ ಕಡ್ಡಿಗಳನ್ನು ಮಾಡಿ ವರ್ಷಕ್ಕೆ ೧,೦೦೦ ಸಲೆಯಡಿ ಮರವನ್ನು ಉಪಯೋಗಿಸಿ ೩೦೦ ಗ್ರೋಸು (ಗ್ರೋಸ್ ಎಂದರೆ ೧೪೪) ಸೀಸದ ಕಡ್ಡಿಗಳನ್ನು ಮಾಡುವುದಕ್ಕೆ ಬೇಕಾದ ಬಂಡವಾಳವನ್ನೂ ಲೆಕ್ಕ ಹಾಕಿರುವರು ದಕ್ಷಿಣ ಹಿಂದೂ ದೇಶದಲ್ಲಿಯೇ ಇದಕ್ಕೆ ತಕ್ಕಷ್ಟು ಗಿರಾಕಿಯೂ ಇರುವುದರಿಂದ, ಲಾಭವೂ ಕೂಡಿದವಟ್ಟಿಗೆ ಚೆನ್ನಾಗಿ ಬರುವುದು. ಈ ಕೈಗಾರಿಕೆಯು ನಮ್ಮ ದೇಶಕ್ಕೆ ಹೊಸದಾದುದರಿಂದ ಇದಕ್ಕೆ ಸರಕಾರದವರೇ ೧,೫೦,೦೦೦ ರೂ ಬಂಡವಾಳ ಹಾಕಿ ಕಾರ್ಖಾನೆಯನ್ನು ನಡೆಸುವುದು ಉತ್ತಮವೆಂದು ಅಭಿಪ್ರಾಯಪಟ್ಟಿದ್ದರ ಮೇಲೆ ಜನಗಳು ತಾವೇ ನಿರ್ವಹಿಸುವುದಕ್ಕೆ ಮುಂದಾಳುಗಳಾಗಿ ಬಾರದೆ ಹೋಗುವ ಪಕ್ಷದಲ್ಲಿ, ಸರಕಾರದವರೇ ಇದನ್ನು ಸ್ಥಾಪಿಸುವ ಆಲೋಚನೆಯನ್ನು ಮಾಡುವರೆಂದು ತಿಳಿಯಪಡಿಸಿರುತ್ತಾರೆ ಸದ್ಯದಲ್ಲಂತೂ ಘೋರವಾದ ಯುದ್ಧದ ನಿಮಿತ್ತ ಏನು ಮಾಡುವುದಕ್ಕೂ ಅವಕಾಶವಿಲ್ಲದಿದೆ.

ದಕ್ಷಿಣ ಕನ್ನಡ.

ಸುರತಕಲ್ಲು:—ಇಲ್ಲಿಯ 'ಸೇ. ಹಾ. ಶಾಲೆ'ಯಲ್ಲಿ ಹೊಸಬೆಟ್ಟು 'ಸೈಂಟ್ ಪೀಟರ್ಸ್ ಶಾಲೆ' ಬಾಳ 'ಸೈಂಟ್ ಜೋಸೆಫ್ ಶಾಲೆ' ಕೃಷ್ಣಾಪುರ ಸೈಂಟ್ ಫ್ರಾನ್ಸಿಸ್ ಕ್ಸೆವಿಯರ್ಸ್ ಶಾಲೆ ಸುರತ್ಕಲ್ 'ಹೋಲಿ ಇನ್‌ಫಂಟ್ ಶಾಲೆ ಮತ್ತು 'ಪಂಚಮರ ಶಾಲೆ'ಗಳ ಬಾಲರುಗಳ ಮತ್ತು ಉಪಾಧ್ಯಾಯರುಗಳ ಕೂಡುವಿಕೆಯಿಂದ—ಸಗರೀ ಎಲ್ಲಾ ಶಾಲೆಗಳ ಮೆನೇಜರರಾದ ಬಹುಮಾನಪಟ್ಟ ರೆವೆರೆಂಡ್ ಫಾದರ್ ಡಿ ಡಿ ಎಫ್. ಕುವೆಲೂ, ಎಸ್ ಜೆ ಯವರ 'ವರ್ಧಂತಿ ಮಹೋತ್ಸವ'ವು ಇದೇ ಕಳದ ತಾ ೨೩ನೇ ಶನಿವಾರ ದಿನ ಬಹಳ ಸಂಭ್ರಮದಿಂದ ನೆರವೇರಿಸಲಾಯಿತು. ಮು| ರಾ| ರಾ| ಫಾದರ್ ಕುವೇಲರವರೇ ಸಭಾಧ್ಯಕ್ಷಸ್ಥಾನವನ್ನಲಂಕರಿಸಿದ್ದರ ಪ್ರತಿಯೊಂದೂ ಶಾಲಾ ಮಕ್ಕಳು ಮೆನೇಜರರವರಿಗೆ ದೀರ್ಘಾಯುಷ್ಯವನ್ನು ಬಯಸಿ 'ಪ್ರಾರ್ಥನಾ ಗೀತ'ಗಳನ್ನು ಹಾಡಿ 'ಶ್ರೇಯಃ ಪ್ರಾರ್ಥನಾ ಲೇಖನ'ಗಳನ್ನು ಕೂಡಾ ಓದಿದರು. ಕೋಲಾಟವೇ ಮೊದಲಾದ ಆಟಗಳನ್ನು ಚಲೋ ರೀತಿಯಲ್ಲಿ ಆಡಿ ತೋರಿಸಿದರು. ಒಳಿಕ ಸುವರ್ಣ ಪುಷ್ಪಾದಿಗಳಿಂದೊಡಗೂಡಿದ ಬೆಳ್ಳಿಯ ಬಟ್ಟಲಲ್ಲಿ ದೇವಕೀರ್ತನೆಗಳಿಂದ ಭರಿತವಾಗಿರುವ ಅತ್ಯುತ್ತಮ ಗ್ರಂಥವನ್ನು ಇಟ್ಟು ಮೆನೇಜರರವರಿಗೆ ಉಪಾಧ್ಯಾಯರುಗಳಿಂದ ಕಾಣಿಕೆಯಾಗಿ 'ಕೃತಜ್ಞತೆಯೊಡನೆ' ಅರ್ಪಿಸಲ್ಪಟ್ಟಿತು. ನಂತರ ಸಭಾಧ್ಯಕ್ಷಸ್ಥಾನವನ್ನಲಂಕರಿಸಿದ ಮೆನೇಜರರು ಶಾಲಾ ಮಕ್ಕಳುಗಳಿಗೂ, ಉಪಾಧ್ಯಾಯರಿಗೂ ಸುರಸವಾದ ಭಾಷಣದಿಂದ ಯೋಗ್ಯವಾದ ಬುದ್ಧಿಯ ಮಾತುಗಳನ್ನು ಹೇಳಿದ್ದರು. ಅನಂತರ ಶಾಲಾ ವಿದ್ಯಾರ್ಥಿಗಳಿಗೆ ಕಬ್ಬಿನ ಕೋಲುಗಳನ್ನು ಹಂಚೋಣಾದವು. ತರುವಾಯ ಉಪಾಧ್ಯಾಯರುಗಳ ಫಲಾಹಾರದಿಂದ [illegible]

ದಿನವಹಿ ಲೆಖ್ಖಾಚಾರ ಇತ್ಯಾದಿಗಳನ್ನು ಬರೆಯಲು ಅಗತ್ಯವುಳ್ಳ

1916ನೇ ವರುಷದ

ಪೊಕೆಟ್ ಡೈರಿಗಳು.

ಸಿವಿಲ್ ಮತ್ತು ರೆವಿನ್ಯು ಕೋರ್ಟುಗಳಿಂದ ಹೊರಡಿಸೋಣಾಗುವ ಪ್ರೊಸೆಸ್ ಫೀಸು, ಭತ್ತೆ ದರಗಳು, ಕ್ರಿಮಿನಲ್ ಕೋರ್ಟುಗಳ ಭತ್ತೆ ದರಗಳು, ಸಾಕ್ಷಿಗಾರರ ಪ್ರಯಾಣದ ಖರ್ಚು ಕೊಡೋಣಾಗುವ ದರಗಳ ಪಟ್ಟಿ, ವಕೀಲರ ರುಸುಂ, ಕೋರ್ಟು ಫೀಸು, ದಸ್ತಾವೇಜುಗಳನ್ನು ರೆಜಿಸ್ತ್ರಿ ಮಾಡಿಸಲು ಬೇಕಾದ ಮಾಹಿತಿ, ಸ್ಟಾಂಪ್ ಡ್ಯೂಟಿ, ನೋಟು, ವಿಲ್ಲು ಮೇಲು ಚಾಡಿಗೆ ಚೀಟು, ರಜಿಸ್ತ್ರಿ ನೋಟೀಸು ಇತ್ಯಾದಿಗಳ ಮಾದರಿ ಫೋರ್ಮು, ಶಕಗಳ ಮೊಬಲಿ ಪಟ್ಟಿ, ಟಪ್ಪಾಲಾಫೀಸಿನ ಕ್ರಮ, ಪರಸ್ಪರ ಸಹಾಯಕ ಸಂಘಗಳ ಮಾಹಿತಿ, ಬಡ್ಡಿ ಎಣಿಕೆಗೆ ಬೇಕಾದ ಪಟ್ಟಿ, ಹಿಂದೂ ಮಹಮ್ಮದಿ ಮತ್ತು ಕ್ರೈಸ್ತರ ಹಬ್ಬಗಳು — ಮೊದಲಾದ ಈ ವಿಷಯಗಳನ್ನು ಒಳಕೊಂಡಿದೆ.

ವ್ಯಾಪಾರಸ್ಥರಿಗೆ, ವಕೀಲರಿಗೆ, ಸಾಹುಕಾರರಿಗೆ, ವರ್ಗದಾರರಿಗೆ, ಇತರ ಎಲ್ಲಾ ವ್ಯಕ್ತಿಗಳವರಿಗೆ ಸಹ ಉಪಯುಕ್ತವಾಗಿರುವ ಪೊಕೇಟು ಬುಕ್ಕು.

ದೊಡ್ಡ ಸೈಜಿನ ಡೈರಿ ಪೆನ್ಸಿಲ್ ಸಹಿತ ಪ್ರತಿಯೊಂದಕ್ಕೆ ಆಣೆ 8
ಸಣ್ಣ ಸೈಜಿನ ಡೈರಿ ಪ್ರತಿಯೊಂದಕ್ಕೆ ಆಣೆ 4.

ವ್ಯಾಪಾರಸ್ಥರಿಗೂ ರಖಂ ತಕ್ಕೊಳ್ಳುವವರಿಗೂ ರಿಯಾಯತಿಯ ಪ್ರತ್ಯೇಕ ದರಗಳಿವೆ.

ನಮ್ಮಲ್ಲಿ ತಯಾರಾಗುವ ಡೈರಿಗಳ ಕಾಗದ, ಅವುಗಳನ್ನು ಹೊಲಿದು ತಯಾರು ಮಾಡಿದ ಕ್ರಮ, ಇತ್ಯಾದಿಗಳನ್ನು ನೋಡಿಕೊಳ್ಳಿರಿ!

ಡೈರಿಗಳು ಸಿಕ್ಕುವ ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಪ್ರಿಯರೇ,

ನಾವು ಮದ್ರಾಸಿಗೆ ಹೋದರೆ ಯಾರಲ್ಲಿ ಉಳಕೊಳ್ಳುವದು? ಎಂಬ ಈ ಚಿಂತೆ ನಮಗೆ ಇನ್ನು ಮೇಲೆ ಬೇಡ. ಯಾಕಂದರೆ, ಅಲ್ಲಿದ್ದ ನಮ್ಮೂರಿನ ಸೋಮೇಶ್ವರ ನರಶಿಂಗರಾಯರು ಮುಂಚೆಗಿಂತ ರೈಲ್ವೆ ಸ್ಟೇಶನಿಗೆ ಇನ್ನೂ ಹತ್ತರದಲ್ಲಿ ಇನ್ನೂ ವಿಶಾಲವಾದ ಉಪ್ಪರಿಗೆ ಮನೆ ತಕ್ಕೊಂಡಿದ್ದಾರೆ. ಮುಂದಾಗಿ ಒಂದು ಕಾರ್ಡು ಬರೆದರೆ ಸ್ಟೇಶನಿಗೇ ಜನಕಳುಹಿಸಿ ನಿಮ್ಮನ್ನು ಆಮಂತ್ರಿಸುತ್ತಾರೆ. ಊಟಕ್ಕೂ ವಸತಿಗೂ ಮನೆಯಷ್ಟೇ ಸೌಕರ್ಯ. ಖರ್ಚೇನೂ ವಿಶೇಷವಿಲ್ಲ. ಹೀಗಿರುವಲ್ಲಿ ನಿಮ್ಮ ಕಾರ್ಯವನ್ನು ಸ್ವತಹಾ ಹೋಗಿ ಜಯಿಸಿಕೊಂಡು ಬರಲಿಕ್ಕೆ ಅನುಮಾನಪಡುವದೇಕೆ?

ವಿಳಾಸ:— ಸೋಮೇಶ್ವರ ನರಶಿಂಗರಾವ್,
ಕೋಮಲ ವಿಲಾಸ,
ರಸಪ್ಪಚೆಟ್ಟಿ ಬೀದಿ, ಮದರಾಸು.

ಕೊಡ್‌ಲಿವರ್ ಎಣ್ಣೆ.



ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಯಿಂದ ಪಕ್ವಗೈದುದು. ಇದರಿಂದ ದೊರಕತಕ್ಕ ಲಾಭವಾದರೋ ಇದರಲ್ಲಿಯ ಎಷ್ಟನೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ತಾನೇ ಅವಲಂಬಿಸಿರುತ್ತದೆ. ಅಚ್ಚ ಕೊಡಲೀವರ್ ಎಣ್ಣೆಯೂ ಅದರಿಂದ ಪಕ್ವಗೈದ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗದಿರುವದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಅನುಸರಿಸುತ್ತದೆ. ಆದರೆ ಅಂತಹ ಅಪಾಯಗಳಾದರು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ಪೋಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತಮ ಫಲವು ಆಶ್ಚರ್ಯಕರವಾಗಿದೆ. ಶ್ವಾಸಕಾಸ, ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಅಗತ್ಯವಿದೆಯೋ ಅಂತಹ ಶ್ವಾಸಕಾಸ ಕ್ಷಯಾದಿ ರೋಗಗಳಲ್ಲಿಯೂ ಇತರ ರೋಗಗಳಲ್ಲಿಯಾದರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಗೆ ಪೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೇ ಕೇಳಿಕೊಳ್ಳಿರಿ. ಈ ಮಿಶ್ರಣವು ಸುರಸವಾಗಿರುತ್ತದೆ. ಇದು ಎಲ್ಲಾ ಕಡೆಗಳಲ್ಲಿ ಮಾರಲ್ಪಡುವದು. ಮತ್ತು ಕನ್ನಡ ಬಲ್ಲವರೆಲ್ಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಬಾಟ್ಲಿ 1ಕ್ಕೆ 3—4—0. ಅರ್ಧ ಬಾಟ್ಲಿಗೆ 1—12—0.

ದಿ ಊಲನ್ ಮಾರ್ಟ್,
ಮಂಗಳೂರು, ದ. ಕ.

NOTICE.

In the Court of the District Munsif of Kundapur.

O. P. No $\frac{57}{1915}$

Karaki Venkataya Shetti and 3 others—***Petitioners.***

Take notice that the petitioners have applied for a Succession Certificate, to the above Court, empowering the 1st petitioner (the brother of the deceased) to collect the debts due to the deceased Karaki Kristappa Shetti, son of 2nd petitioner Ammu Shetti and brothe of the other petitioners, of Karaki in Gulvadi Village, Kundapur Taluk, and that the said petition has been posted for trial on the 11th November 1915 on which date objections if any will also be heard.

Kundapur.
23—10—1915.

B. Subba Rau,
Pleader for Petitioners.

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ.

ಒ. ಪಿ. ನಂಬ್ರ $\frac{1??}{1915}$

ಗೋವಿಂದಮ್ಮ—ಅರ್ಜಿದಾರಳು.

ಉಪ್ಪಿನಂಗಡಿ ತಾಲೂಕು ಪೆರ್ಣೆ ಮಾಗಣೆ ಸಿಸ್ಲೆ ಗ್ರಾಮದಲ್ಲಿರುವ ನರ್ನಯ್ಯ ಹೆಬ್ಬಾರರ ಮ್ಯಾನೆಜರ ಮಗ ಸುಬ್ರಾಯ ಹೆಬ್ಬಾರರ ಆಸ್ತಿಯು ಸ ದೇಹದ ಗಾಡಿಯಿನ ಸಾಗ ತನಗೆ ಯಾ ಇದೇ ಗ್ರಾಮದಲ್ಲಿರುವ ಸಣ್ಣಯ್ಯ ಸುಬ್ರಾಯರ ಮಗ ಪದ್ಮನಾಭಯ್ಯ ಎಂಬವರಿಗೆ ಸೊಕಸೂದಿ ಮಾಡಬೇಕಾಗಿ ಸದರಿ ಮ್ಯಾನೇಜರ ಅಕ್ಕನಾದ ಪ ಪಟೇಲ ವೆಂಕಟರಮಣನ ಹೆಂಡತಿಯಾದ ಈ ಅರ್ಜಿದಾರಳು ಅರ್ಜಿ ದಾಖಲು ಮಾಡಿರುತ್ತಾಳೆ. ಈ ಅರ್ಜಿಯು ತಾ. 16—11—1915ಕ್ಕೆ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ತನಿಕೆಗೆ ಇಟ್ಟಿರುತ್ತದೆ.

G. Krishna Rau,
Vakil for Petitioner.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,
ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ.

೧. ಕುಟುಂಬಜೀವನಿ—ಎಲ್ಲಾ ರೋಗಗಳನ್ನು ತ್ವರೆಯಾಗಿ ಗುಣಪಡಿಸುವದು. 16 ಔಷಧಗಳ ಸಂಗ್ರಹದ ಪೆಟ್ಟಿಗೆ 1ಕ್ಕೆ 8—0—0.

೨. ಶತಮೂಲಿಕಾ ಅಮರಸಂಜೀವನಿ—ಈ ಟೊನಿಕ್ ದ್ರಾವಕವು ವಿಶ್ವಾಂಗಗಳಿಗೆ ಚೈತನ್ಯ ಉಂಟುಮಾಡಿ ಅಮರತ್ವವನ್ನು ಕೊಡುತ್ತದೆ. ಬಾಟ್ಲಿ 1ಕ್ಕೆ 1—0—0.

೩. ಬಾಲಸಂಜೀವನಿ—ಮಧುರ ಟೊನಿಕ್ ಅಶಕ್ತ ಬಾಲಕರಿಗೆ ಸಶಕ್ತರಾಗಿ ಮಾಡಿ ವರ್ಧಮಾನ ಚಂದ್ರನಂತೆ ಬೆಳಗಿಸುತ್ತದೆ. ಬಾಟ್ಲಿ 1ಕ್ಕೆ 0—12—0.

೪. ವಸಂತ ಕುಸುಮಾಕರ.—ಈ ಸುವಾಸಿಕ ತೈಲವು ಕೇಶ ವೃದ್ಧಿಮಾಡಿ ಶಿರೋರೋಗ ನೇತ್ರರೋಗಗಳನ್ನು ಶಮನಮಾಡಿ ಮೆದುಳನ್ನು ತಂಪು ಮಾಡಿ ಜ್ಞಾನಶಕ್ತಿ, ಚೆಟ್ಟಿಸಿ, ಬುದ್ಧಿ ಭ್ರಮಣವನ್ನು ಗುಣಮಾಡುತ್ತದೆ. ಬಾಟ್ಲಿ 1ಕ್ಕೆ 1—0—0

೫. ಸುದರ್ಶನಮಾಲಿನಿ—ಈ ಸಿದ್ಧೌಷಧವು ಮೇಹವ್ರಣ ಇತ್ಯಾದಿ ಎಲ್ಲಾ ದುಸಾಧ್ಯ ವ್ರಣಗಳನ್ನು 7-8 ದಿವಸಗಳಲ್ಲಿ ಪೂರ್ಣ ಗುಣಪಡಿಸುವದು. ಕ್ರಯ 4—0—0.

೬. ಗರುಡಧ್ವಜ—ಇದು ಸರ್ಪ ಹುಚ್ಚು ನಾಯಿ, ಚೇಳು, ಇಲಿ ಇತ್ಯಾದಿ ಸರ್ವ ಕಚ್ಚಿದ ವಿಷಗಳಿಗೆ ಸಂಜೀವನವಾಗಿರುತ್ತದೆ. ಅನುಭವಸಿದ್ಧ 2—0—0.

೭. ಆನಂದವನವಿಲಾಸ—ಇದು ಡ್ಯಾಬೆಟಿಸ ಎಂಬ ಬಹುಮೂತ್ರ ರೋಗವನ್ನು 48 ದಿವಸಗಳಲ್ಲಿ ಪೂರ್ಣ ಗುಣಪಡಿಸುತ್ತದೆ. ಪೂರ್ಣ ಔಷಧಕ್ಕೆ 5—0—0.

ನಮ್ಮ ಡಿಸ್ಪೆನ್ಸರಿಯಲ್ಲಿ ಸಿದ್ಧ ಕಲ್ಪ ಧೈರಾಗಿ ಪ್ರಯೋಗಗಳಿಂದ ತಯಾರಿಸಿದ ಪೌಡರ ಮಾತ್ರೆಗಳು, ಲೇಹ ಚೂರ್ಣಗಳು, ತೈಲ್ಯ ಘೃತಗಳು, ಆಸವಾರಿಷ್ಟಗಳೂ ತುಂಬಾ ಇದ್ದುತ್ತವೆ. ಕ್ರಯವಿಲ್ಲದ ನಮ್ಮ ಕೆಟಲಗನ್ನು ತರಿಸಿಕೊಳ್ಳಿರಿ. ಏಜಂಟರು ಬೇಕು. ಹೆಚ್ಚು ಡಿಸ್‌ಕೌಂಟ್ ಸಿಕ್ಕುವದು.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

ಕನ್ನಡ ಕಥೆ ಪುಸ್ತಕಗಳು.

ಶುಕಸಪ್ತತಿ ೭೦ ಕಥೆಗಳು ಸಚಿತ್ರ	೩	೦	೦
ಸಚಿತ್ರ ವಿದ್ಯಾಮಂಜರಿ ಕಥೆಗಳು	೧	೮	೦
,, ಭಟ್ಟಿವಿಕ್ರಮಾದಿತ್ಯರಾಯನ ಕಥೆ	೧	೮	೦
ಸಚಿತ್ರ ರಾಮಾಯಣ ಕಥಾಸಂಗ್ರಹ ಗ್ಲೇಜ್ ಅವ್ವಲ್	೧	೪	೦
ಡಿ ರಫ್ ದುಯ್ಯಂ	೦	೧೩	೦
ಜೈಮಿನಿ ಭಾರತ ಕಥಾಸಂಗ್ರಹ	೦	೧೩	೦
ಕೃಷ್ಣಬೋಧಾಮೃತ	೦	೧೦	೦
ಭಾರತ ಕಥಾಸಂಗ್ರಹ	೦	೬	೦
ಪ್ರಭಾವತಿ ಶುಕಮಂಜರಿ ಕಥೆ	೦	೫	೦
ಬಕಾವಳಿ ಕಥೆ	೦	೬	೦
ಮದನಮೋಹನರಾಜ ಚರಿತ್ರೆ	೦	೬	೦
ಚಂಚಲಕುಮಾರ ಕಥೆ	೦	೪	೦
ಸಾಧ್ವಿ ಗುಣಮಂಜರಿ ಕಥೆ	೦	೫	೦
ಪತಿವ್ರತಾಮಹಾತ್ಮೆ ಕಥೆ	೦	೬	೦
ಹರಿಶ್ಚಂದ್ರನ ಕಥೆ	೦	೪	೦
ನಳದಮಯಂತಿಯರ ಕಥೆ	೦	೬	೦
ಬತ್ತೀಸಪುತ್ಥಳಿ ಕಥೆ	೦	೫	೦
ಹುಚ್ಚುಮುಂಡೆಗಳ ಕಥೆ	೦	೬	೦
ಹಾಸ್ಯಸುಂದರಿ ಸುಕವಾಸ್ ಕಥೆ	೦	೮	೦
ಮಂಜುಘೋಷಾ ಶೃಂಗಾರಾದ್ಭುತ ಕಥೆ	೦	೧೨	೦
ಹಾತೀಮತಾಯಿ ಕಥೆ	೦	೧೦	೦

ಪುರಾಣಗಳು.

ತೊರವೆರಾಮಾಯಣ ಗ್ಲೇಜಅವ್ವಲ್	೩	೦	೦
,, ದುಯ್ಯಂ	೧	೮	೦
ತೊರವೆ ರಾಮಾಯಣ ಸೀಯಂ	೧	೦	೦
ಜೈಮಿನಿ ಭಾರತ ಗ್ಲೇಜಅವ್ವಲ್	೧	೪	೦
,, ದುಯ್ಯಂ	೦	೧೦	೦
,, ಸೀಯಂ	೦	೬	೦
೧೮ ಪರ್ವ ಭಾರತ	೩	೮	೦
೧೨ ಸ್ಕಂಧ ಭಾಗವತ ಗ್ಲೇಜ ಅ	೫	೦	೦
,, ದುಯ್ಯಂ	೪	೦	೦

ಪದಗಳು.

ಪದ್ಯರತ್ನಾಕರ ೧ನೇ ಭಾಗ	೧	೦	೦
ಪುರಂದರದಾಸರ ಕೀರ್ತನೆ ಅ	೦	೬	೦
,, ಬೆಂಗಳೂರು	೦	೬	೦
ಕನಕದಾಸರ ಕಬೀರದಾಸ ಕೀರ್ತನೆ	೦	೯	೦
ಗೀತರತ್ನಮಂಜರಿ	೦	೪	೦
ಗೀತಕಲ್ಪಲತಿಕಾ	೦	೫	೦
ಗೀತಿಕಾವ ದಾನವಾಲಿಕಾ	೦	೯	೦
ಗೀತಿಕಾ ತರಂಗಿಣಿ	೦	೪	೦
ಬಾಗಲು ತಡಿಯುವ ಪದ	೦	೦	೬
ಹಸ್ತು ಬಿಡಿಸಿದ ಪಾಡು	೦	೦	೬
ಕೃಷ್ಣ ವಿಠ್ಠಲನ ಬೋಧ	೦	೬	೦
ಭೋಜನವರ್ಗ	೦	೫	೦
ಲಕ್ಷ್ಮೀಶೋಭಾನೆ	೦	೧	೬
ಪಾಂಡವಗೀತೆ	೦	೧	೬
ವಿಷ್ಣುಸಹಸ್ರನಾಮ (ಶ್ಲೋಕ)	೦	೩	೦
ಹಾರ್ಮೋನಿಯಂ ಸ್ವಯಂಬೋಧಿನಿ	೦	೪	೦

ಇವುಗಳಲ್ಲದೆ ಇನ್ನೂ ಅನೇಕ ತರದ ಕನ್ನಡ, ಮರಾಠಿ, ಸಂಸ್ಕೃತ ಪುಸ್ತಕಗಳೂ, ಹೇರಾಯಿಲ್, ಸೆಂಟ್ಸ್, ಅತ್ತರ್‌ಗಳೂ, ಉತ್ತಮ ತರದ ಊದುಬತ್ತಿಗಳೂ, ಅರಗಜ, ಫಿತ್ಸ್, ದಶಾಂಗ, ಗಂಡದಪಿಲ್ಲೆ ಮೊದಲಾದ ಸುಗಂಧದ್ರವ್ಯಗಳೂ ಬಹಳ ಕಮ್ಮಿ ಕ್ರಯಕ್ಕೆ ಮಾರಾಟಕ್ಕೆ ಸಿದ್ಧವಾಗಿವೆ. ವ್ಯಾಪಾರಸರಿಗೆ ಒಳ್ಳೇ ಕಮಿಶನ್ ದೊರಿಯುವದು. ಅರ್ಧಾಣೆ ಸ್ಟಾಂಪು ಕಳುಹಿಸಿದರೆ ದೊಡ್ಡ ಕ್ಯಾಟಲಾಗನ್ನು ಕಳುಹಿಸುತ್ತೇವೆ. ಬೇಕಾದವರು ಈ ಕೆಳಗಣ ವಿಳಾಸಕ್ಕೆ ಬರಕೊಳ್ಳಬಹುದು.

ಶ್ರೀ ರಾಧಾಕೃಷ್ಣ ವಿಲಾಸ.
ರಥಬೀದಿ ಮಂಗಳೂರು.

ಔಷಧಗಳು.

ಮಹಾಮದನ ಕಾಮೇಶ್ವರೀ ಲೇಹ್ಯ:—ಬಹಳ ಶ್ರಮಪಟ್ಟು ಕೆಲಸ ಮಾಡುವವರೂ, ಲೇಖಕರೂ, ಮತ್ತು ಇಂದ್ರಿಯ ದೌರ್ಬಲ್ಯ, ಉಷ್ಣ, ಬಡಸೋವು, ಶರೀರಗಳ ಘಾತಿತದಿಂದಾದ ನಿಶ್ಶಕ್ತಿ ಮೊದಲಾದ ಪ್ರಕೃತಿಯುಳ್ಳವರೂ ಇದನ್ನು ಸೇವಿಸಿದ್ದಲ್ಲಿ ಧಾತುಪುಷ್ಟಿಯಾಗಿ ಮುಖವು ಕಾಂತಿಗೊಳ್ಳುವದು. ಸೇವನಾ ಕ್ರಮ—ಅಭ್ಯಾಸವುಳ್ಳವರು 1 ರಾಪಲಿ ತೂಕ ಯಾ ಗೋಲಿ ಮಾತ್ರ ಅಭ್ಯಾಸಿಸುವವರು 2 ಆಣೆ ತೂಕ ರಾತ್ರಿ ಊಟದ ವೇಳೆ ಸೇವಿಸಿ ಹಾಲು ಕುಡಿಯತಕ್ಕದ್ದು.

1 ಸೇರಿನ ಡಬ್ಬಿಗೆ ಕ್ರಯ: 2—0—0

ಚಂದ್ರೋದಯಾವತಿ:—ಕಣ್ಣಿಗೆ ಅಂಜನ ಮಾಡಿದ್ದಲ್ಲಿ ಬೆಳೆದ ದುರ್ಮಾಂಸ, ತಿಮಿರ, 3 ವರ್ಣದ ಹೂವು, ಇರಳುಕಣ್ಣು, ತಾಚಮಿಂದು ಗುಣ.

ಕ್ರಯ: ರೂ 0—12—0

ಮಹಾಜ್ವರಾಂಕುಶ:—ದಿವಸಕ್ಕೊಮ್ಮೆ ದ್ವಿತೀಯ, ತೃತೀಯ, ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ. ಡಜನ್ ಕ್ರಯ. 0—9—0,

ಮೇಹಮುದ್ಗರವಟಿ:—20 ನಮೂನೆಯ ಪ್ರಮೇಹ, ಧಾತು, ಗತಜ್ವರ ಮೂತ್ರಕೃಚ್ಛ್ರ, ಅಶ್ಮರಿ, ಕಾಮಲೆ, ಪಾಂಡು ಗುಣ. ಡಜನ್ 10 ಕ್ರಯ: 1—2—0.

ಕೊಲೆರಾ ಯಾನೆ ವಾಂತಿಭೇದಿ ಗುಟಿಕೆ:—ಒಂದೆರಡು ಗುಟಿಕೆಯಿಂದ ವಾಂತಿಭೇದಿ ಕೂಡಲೇ ಗುಣ. ಡಜನ್ ಗುಟಿಕೆಯ ಕ್ರಯ: 0—12—0

ಚಂದನಾಸವ:—ಮೇಹ, ಶುಕ್ಲಧಾತು ನಷ್ಟತ್ವ ಗುಣ. ಬಾಟಿಗೆ ರೂ. 1.

ನಮ್ಮ ಔಷಧಾಲಯದಲ್ಲಿ ಅನೇಕ ವಿಧದ ಬೇರೆ ಔಷಧಗಳು ದೊರೆಯುತ್ತವೆ. ಅಪೇಕ್ಷೆಯುಳ್ಳವರು ಕೇಟಲಾಗು ತರಿಸಿಕೊಳ್ಳಬಹುದು. ಮೇಲಿನ ಔಷಧಗಳು ಬಹಳವಾಗಿ ಖರ್ಚಾಗುವದರಿಂದ ಕ್ರಯವನ್ನು ಕಡಿಮೆ ಮಾಡಿರುತ್ತದೆ.

ವಿಳಾಸ:— ಮೂಲ್ಕಿ ಗಣಪಯ್ಯ ಎಂಡ್ ಸನ್ಸ್,
ನೇಟಿವ್ ಡಾಕ್ಟರ್ಸ್,
ತೇರಬೀದಿ ಮನೆ ನಂಬ್ರ 268ನೇ, ಮಂಗಳೂರು.

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ಚ್ಯವನಪ್ರಾಶನ:—ಗಂಟಲಿನಲ್ಲಿಯೂ, ಶ್ವಾಸಕೋಶದಲ್ಲಿಯೂ ಉಂಟಾಗುವ ಎಲ್ಲಾ ವ್ಯಾಧಿಗಳಿಗೂ ಇದು ಅತ್ಯುತ್ತಮವಾದ ಗುಣಕಾರಿಯಾಗಿದೆ. ಶ್ಲೇಷ್ಮ ಸಂಬಂಧವಾದ ಎಲ್ಲಾ ವ್ಯಾಧಿಗಳಿಗೂ ಇದರಿಂದ ಸಂಪೂರ್ಣ ಗುಣ ಕಂಡುಬಂದಿದೆ. ನಮ್ಮ ಚ್ಯವನಪ್ರಾಶನ ಎಲ್ಲಾ ವಿಧವಾದ ಕಫಗಳು, ಗೂರಲು, ಉಬ್ಬಸ, ಕ್ಷಯರೋಗ, ಗಾರ್ಗಭಸ್ವರದಂತಹ ಒಡ್ಡಧ್ವನಿ, ಗಂಟಲಿನಲ್ಲಿ ಜನಿಸಿಯಿರತಕ್ಕ ಸಕಲ ವಿಧವಾದ ಹುಣ್ಣು ಮೊದಲಾದುವುಗಳನ್ನು ಕ್ಷಿಪ್ರದಲ್ಲಿಯೇ ವಾಸಿಮಾಡುವುದಲ್ಲದೆ ಶಕ್ತಿವರ್ಧಕವಾದ ಟಾನಿಕ್ ಆಗಿದೆ. ಅನೇಕರು ನಮ್ಮ ಚ್ಯವನಪ್ರಾಶನವನ್ನು ಉಪಯೋಗಿಸಿ ಸರ್ವೋತ್ಕೃಷ್ಟವೆಂದು ತಿಳಿಸಿದ್ದಾರೆ. ಇದರ ಬೆಲೆ ಪೆಟ್ಟಿಗೆ 1ಕ್ಕೆ 2 ರೂಪಾಯಿ; ವಿ. ಪಿ. ಚಾರ್ಜು 5 ಆಣೆ

ಮಕರಧ್ವಜ:—ನಮ್ಮ ಮಕರಧ್ವಜಕ್ಕೆ ಸಮಾನವಾದ ತಯಾರಿಯು ಮತ್ತಾವ ಒಗೆ ವೈದ್ಯಶಾಸ್ತ್ರದಲ್ಲಿಯೂ ಇಲ್ಲವೇ ಇಲ್ಲ. ಈ ನಮ್ಮ ಮಕರಧ್ವಜಕ್ಕೆ ಬಗ್ಗದ ವ್ಯಾಧಿಯು ಜಗತ್ತಿನಲ್ಲಿ ಇಲ್ಲವೇ ಇಲ್ಲ. ಅನೇಕ ರೋಗಗಳು ಇದರ ಸೇವನೆಯಿಂದ ಸಂಪೂರ್ಣವಾಗಿ ವಾಸಿಯಾಗುತ್ತವೆ. ಎಂತಹ ಕಠಿಣ ವ್ಯಾಧಿಯಾದರೂ ಕಡಿಮೆಯಾಗಿಯೇ ತೀರಬೇಕು. ಯಾವಕಾರಣದಿಂದಲಾಗಲಿ ಹುಟ್ಟುವ ಶರೀರದುರ್ಬಲತೆ, ವಿಷಮ ಶೀತಜ್ವರ, ಹೊಟ್ಟೆಯೊಳಗಣ ಗೆಡ್ಡೆ, ಮತ್ತು ಮುಖ್ಯವಾಗಿ ತಮ್ಮ ಮರ್ಮವ್ಯಾಧಿಗೆ ತಕ್ಕ ಶಾಂತಿಯಾದ ಮದ್ದೇ ನಾಸ್ತಿಯೆಂದು ಚಿಂತಿಸುವ ಎಲ್ಲಾ ನಾಸ್ತಿಕರ ಪ್ರಮೇಹಸಂಬಂಧವೂ, ಉರಿಮೂತ್ರ, ಪ್ರಸವಿಸಿದೊಡನೆಯೆ ಹೆಂಗಸರಿಗುಂಟಾಗತಕ್ಕ ಸಕಲ ಬಾಧೆಗಳೂ, ಕೆಮ್ಮು, ಶೀತ, ಉಬ್ಬಸ, ಗೂರಲು, ನಾನಾತರವಾದ ಜ್ವರಗಳು, ಮಹಾಮಾರಿಯುಪದ್ರ (ಪ್ಲೇಗ್) ಚುರುಕಿಲ್ಲದ ಮಿದುಳು, ಮಹೋದರರೋಗ, ಕೊಲರಾ, ಅತಿಸಾರ ಹೊಟ್ಟೆಬಾಧಿಸುವಿಕೆಯು, ಅಗ್ನಿಮಾಂದ್ಯದಿಂದುಂಟಾಗತಕ್ಕ ಅಜೀರ್ಣರೋಗಗಳು, ಮಿತಿಮೀರಿ ಸಂಭೋಗಮಾಡೋಣದರಿಂದ ಉಂಟಾಗತಕ್ಕ ನಪುಂಸಕತ್ವ, ನರಗಳ ದಾರ್ಢ್ಯ ಕಡಮೆಯಾಗಿರೋಣ, ತಲೆತಿರುಗುವಿಕೆ ಇವೇ ಮೊದಲಾದ ಅನೇಕ ವ್ಯಾಧಿಗಳಿಗೆ ಇದು ಖಂಡಿತವಾದ ರಾಮಬಾಣವಾಗಿದೆ. ಇದರ ಉತ್ಕೃಷ್ಟತೆಯನ್ನು ಇಷ್ಟೆಂದು ಹೇಳುವುದಕ್ಕಾಗುವುದಿಲ್ಲ. ಇದರ ಕ್ರಯ ತೊಲಾ 1ಕ್ಕೆ 24 ರೂಪಾಯಿ. ಒಂದು ವಾರದ ಉಪಯೋಗಕ್ಕೆ ಸಾಕಾದಷ್ಟು ಔಷದಕ್ಕೆ 1 ರೂಪಾಯಿ, ವಿ. ಪಿ. ಚಾರ್ಜು 5 ಆಣೆ. ಅವಶ್ಯ ಇದನ್ನು ಸರ್ವರು ತರಿಸಿಕೊಳ್ಳಬೇಕು.

ವಸಂತ ಕುಸುಮಾಕರ:—ನಮ್ಮ ವಸಂತಕುಸುಮಾಕರವು ಉರಿಮೂತ್ರ, ನರಗಳ ದುರ್ಬಲತೆ, ವಿಶೇಷ ನೀರಡಿಕೆ, ನಾಲಿಗೆ ಒಣಗಿ ರಸವಿಲ್ಲದಿರುವುದು, ಕೈಕಾಲುಗಳು ಉರಿಯೋಣ, ಆಯಾಸ, ಮೂರ್ಛೆಬೀಳುವಿಕೆ, ಬಿಳುಪು ಮೊದಲಾದ ಮೇಹಜಾಡ್ಯಗಳು, ಮೂತ್ರವಿಸರ್ಜನೆಯು ಬಹು ಕಷ್ಟದಿಂದಾಗೋಣ, ಇಂದ್ರಿಯಸ್ಖಲನ, ಮೊದಲಾದ ವ್ಯಾಧಿಗಳನ್ನು ಖಂಡಿತವಾಗಿ ನೀಗುವವೆಂದು ನಾವು ಭರವಸೆಕೊಡುವೆವು. ಒಂದು ವಾರದವುಟ್ಟಿಗೆ ಸಾಕಾಗುವಷ್ಟು ಔಷಧ ಕ್ರಯ 5 ರೂ. ವಿ. ಪಿ. ಚಾರ್ಜು 5 ಆಣೆ.

☞ ಈ ಪ್ರಾಂತ್ಯದಲಿ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮುಳುನಲ್ಲಾಗಲೀ ಸ್ಫುಟವಾಗಿ ತಿಳಿಯುವಂತೆ ಬರಿಯಬೇಕು.

MY ADDRESS.

P. SUBBA ROY,
Ayurvedic Pharmacy,
Sri Perumalkoil,
SANNATHY, TANJORE.

ನಮ್ಮ ವಿಳಾಸ:—

ಪಿ. ಸುಬ್ಬರಾಯಿ,
ಆಯುರ್ವೇದ ಔಷಧಶಾಲೆ,
ಶ್ರೀ ವೆಂಕಟೇಶ ಪೆರುಮಾಳ್ ದೇವಸ್ಥಾನ,
ಸನ್ನದಿ, ತಂಜಾವೂರು.

ಪ್ಲೇಗನ್ನು ನಿರ್ಮೂಲಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಹೈಮಾದಿ ಪಾನಕ.

ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದಪ್ರಕಾರ ತಕ್ಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮ ಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ಯಾಜು ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.



ಶತಧೌತ ಘೃತ

ಗಳೆಂಬ ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗಡ್ಡೆಯನ್ನೂ ಹುಚ್ಚು ನಾಯಿ ಕಡತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ

ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12 ಚಿಕ್ಕ ಸ್ಯಾಜು ಆಣೆ 8 ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು ಎ ಎಸ್ ಎ ಎಮ್ ಬಿ
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.
ಆಯುರ್ವೇದಾಶ್ರಮ,
೧೫ ಆಚಾರಪ್ಪನ ಬೀದಿ,
ಜಾರ್ಜ್ ಟೌನ್ ಮದರಾಸ್

ತಂತಿ ವಿಳಾಸ —"ಪಂಡಿಟ್" ಮದರಾಸ್

ಡಾಕ್ಟರ್ ನವರತ್ನರ

ಪಕ್ವಾಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ ಪ್ರಯೋಗಿಸಲು ಸುಲಭವಾಗಿದೆ ಪರಿಮಳ, ಕೆಡದ ಬಣ್ಣ ಬಹಳ ಅಗ್ಗ ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ 1 ಟಪ್ಪಾಲು ಚಾರ್ಜು 0—4—0.

Dr. Navaratna & Sons,
Kalbadevi Road, BOMBAY.

ಏಜೆಂಟರು:—ಡಿ. ಊಲಸ್ ಮಾರ್ಟ್,
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.



B. Narasimha Prabhu,

Bantval, (SOUTH CANARA).

AGENT FOR

Malabar and South Canara.

ಕನ್ನಡ ಪದ್ಯ ವ ಗದ್ಯ ಗ್ರಂಥಗಳು

ಶ್ರೀಮದ್ವಿಷ್ಣು ಭಾಗವತ ದ್ವಾದಶಸ್ಕಂದ ಅವ್ವಲ್	6	0	
ಡಿ. ದುಯ್ಯಂ ಪ್ರತಿ.	3	8	0
ಮಹಾಭಾರತ 18 ಪರ್ವಗಳು	4	8	0
ಡಿ. 10 ಡಿ.	2	0	0
ಡಿ. 8 ಡಿ. ಅವ್ವಲ್ ಪ್ರತಿ	1	8	0
ಡಿ. ದುಯ್ಯಂ	1	0	0
ಜೈಮಿನಿಭಾರತ ಪ್ರತಿಪದ ಟೀಕಾ ತಾತ್ಪರ್ಯ ಅವ್ವಲ್	6	0	0
ಡಿ. ದುಯ್ಯಂ	3	8	0
ಜೈಮಿನಿ ಭಾರತ ಮೂಲ ಅವ್ವಲ್	1	8	0
ಡಿ. ದುಯ್ಯಂ ಡಿ.	0	12	0
ತೊರವೆ ರಾಮಾಯಣ ಅವ್ವಲ್	2	4	0
ಡಿ ದುಯ್ಯಂ	1	0	0
ರಾಜಶೇಖರ ವಿಲಾಸ ಕನ್ನಡ ಚಂಪು ಗ್ರಂಥ	1	8	0
ವೆಂಕಟಗಿರಿ ಮಹಾತ್ಮೆ ಮತ್ತು ಪದ್ಮಾವತಿ ಕಲ್ಯಾಣ	1	8	0
ಅಧ್ಯಾತ್ಮವಿಚಾರ ವೇದಾಂತ ಗ್ರಂಥ	2	4	0
ಮನುವಂಶಾವಳಿ	1	0	0
ಚೆನ್ನಬಸವ ಪುರಾಣ	0	12	0
ಸಟೀಕ ವಿಶ್ವಕರ್ಮ ಪುರಾಣ ಅವ್ವಲ್	1	0	0
ಡಿ. ದುಯ್ಯಂ	0	12	0
ದೊಡ್ಡ ಶುಕಸಪ್ತತಿ ಇದರಲ್ಲಿ 70 ಶಾಸ್ತ್ರೋಕ್ತ ಮತ್ತು ನೀತಿಮಾರ್ಗ ಕಥೆಗಳು ಅಡಗಿದೆ ಅವ್ವಲ್ ಪ್ರತಿ	1	8	0
ಬೃಹತ್ಕಥಾ ಮಂಜರಿ.	0	12	0
ಶಾಂತಿಮತಿ ಸುಬೋಧಾಮೃತ ಕಥೆ	0	14	0
ವಿಷ್ಣುಶರ್ಮ ಪಂಚತಂತ್ರ	0	8	0
ಭಾಗವತ ಕಥಾ ಸಂಗ್ರಹ	1	8	0
ಭಾರತ ಕಥಾಸಂಗ್ರಹ	0	6	0
ಜೈಮಿನಿ ಭಾರತ ಕಥಾಸಂಗ್ರಹ	0	12	0
ರಾಮಾಯಣ ಕಥಾಸಂಗ್ರಹ	0	12	0
ಶೇಷರಾಮಾಯಣ	1	8	0
ಸೀತಾ ಚರಿತ್ರ.	1	2	0
ದೇವೀಮಹಾತ್ಮೆ ಪದ್ಯ	0	8	0
ದೇವೀಮಹಾತ್ಮೆ ಗದ್ಯ	0	6	0
ನಳದಮಯಂತಿ ಚರಿತ್ರೆ.	0	4	0

ವಿ ಪಿ ದ್ವಾರಾ ತರಿಸಿಕೊಳ್ಳುವವರಿಗೆ ಅಂಚೆ ಹಾಸಲು ಪ್ರತ್ಯೇಕ ಇರುವುದು

ಈ ಮೇಲಿನ ಗ್ರಂಥಗಳ ವಿನಹ ನಾನಾ ತರಹದ ಕನ್ನಡ, ಸಂಸ್ಕೃತ ಮರಾಠಿ, ಇಂಗ್ಲೀಷು, ಡಿಕ್ಷನರಿ ಮುಂತಾದ ಪುಸ್ತಕಗಳೂ, ಬರವಣಿಗೆ ಸಾಮಾನುಗಳು ವಗೈರೆ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.

ಕೆ. ಎಮ್. ದಾಸಪ್ರಭು,
ರಥಬೀದಿ, ಮಂಗಳೂರು.

ಸ್ವದೇಶಾಭಿಮಾನಿಯ ನೋಟೀಸು.

ಚಂದಾದಾರರು ನಮಗೆ ಬರೆಯುವ ಎಲ್ಲಾ ಪತ್ರವ್ಯವಹಾರಗಳಲ್ಲಿ ತಮ್ಮ ತಮ್ಮ ವಿಳಾಸದೊಂದಿಗೆ ಇರುವ ರಿಜಿಸ್ಟರ ನಂಬರನ್ನು ತಪ್ಪದೆ ಬರಿಯತಕ್ಕದ್ದು. ರಿಜಿಸ್ಟರು ನಂಬರು ಇಲ್ಲದ ಪತ್ರಗಳಿಗೆ ನಿಗಾ ಕೊಡಲಾರೆವು.

ಪತ್ರಿಕೆಗೆ ಚಂದಾದಾರರಾಗಿ ಸೇರಲಪೇಕ್ಷೆಯುಳ್ಳವರು ವರ್ಷ 1ರ ಚಂದಾ ಹಣ ರೂ. 2—1—0ನ್ನು ಮನಿಯಾರ್ಡರು ಮೂಲಕ ರವಾನಿಸುವದುತ್ತಮ. ವಿ. ಪಿ. ಮೂಲಕ ಕಳುಹಿಸಬೇಕೆಂದು ಬರಿಯುವಂಥವರಿಗೆ ಪತ್ರಿಕೆಯ ಹಿಂದಿನ ಸಂಚಿಕೆಯನ್ನು ವಿ. ಪಿ. ಮಾಡಿ ಕಳುಹಿಸಲಾಗುವದು. ವಿ. ಪಿಯ ಮೊಬಲಗು ನಮಗೆ ತಲ್ಪಿದ ನಂತರವೇ ಪತ್ರಿಕೆಯನ್ನು ಕಳುಹಿಸಲು ಪ್ರಾರಂಭಿಸುವೆವು.

ಮ್ಯಾನೇಜರ್,
ಸ್ವದೇಶಾಭಿಮಾನಿ ಆಫೀಸು,
ಮಂಗಳೂರು, ದ. ಕ.

ಮೋಸಹೋಗಬೇಡಿ! ಮೋಸಹೋಗಬೇಡಿ!!

ಕೆಲವರು ನಮ್ಮ ಕಂಪೆನಿಯ ಹೆಸರನ್ನು ಹೇಳಿ ಜನಗಳಿಗೆ ಮೋಸಮಾಡುತ್ತಿರುವರು. ಆದ್ದರಿಂದ-ನಮ್ಮಿಂದ ಕಳುಹಿಸುವ ಡಬ್ಬಿಯನ್ನು ತೆಗೆದುಕೊಳ್ಳುವಾಗ ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು, 5 ಅವೆನ್ಯು ರೋಡ್, ಬೆಂಗಳೂರು ಸಿಟಿ ಎಂದು ಮುದ್ರಿಸಿರುವ ಲೇಬಲು ಇರುವುದನ್ನು ನೋಡಿ ತೆಗೆದುಕೊಳ್ಳಿರಿ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ

ಈ ಮುರಬ್ಬಾವು "ಸಾಲಾಮಿಸ್ರಿ"ಯಲ್ಲಿ ತಯಾರಿಸಲ್ಪಟ್ಟಿದ್ದು ಅಲ್ಲವೆಂದು ವ್ಯಕ್ತಪಡಿಸುವವರಿಗೆ

೧೦೦೦ ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ' ಸೇವಿಸಿರಿ'!

ಈ ಸಾಲಾಮಿಸ್ರೀ ಎಂಬದು ಒಂದು ಗಿಡದ ಹಣ್ಣಾಗಿರುತ್ತದೆ ಕಾಬೂಲು ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳುಗಡ್ಡೆ, ಶಾವುಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಹೇಳಿ ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಸಾಲಾಮಿಸ್ರಿಯೋ ಅಥವಾ ಬೇರೆ ತರಹಾದ್ದೋ ಎಂಬುವುದು ತಿಳಿದು ಬರುತ್ತೆ.

ಈ ಮುರಬ್ಬಾವನ್ನು ಪ್ರತಿಯೊಬ್ಬರು ಸೇವಿಸುವ ಹಾಗೆ ಕ್ರಯಂದ ಮುಬ್ಬದ ಕಡಿಮೆ ಮಾಡಲ್ಪಟ್ಟಿರುವದು

- ಸಾಲಾಮಿಸ್ರಿ ಮುರಬ್ಬಾವು — ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವದು.
- ಸಾಲಾಮಿಸ್ರಿ ಮುರಬ್ಬಾವು — ಮೂತ್ರದೊಂದಿಗೆ ಧಾತುವು ಹೋಗುವುದನ್ನು ನಿಲ್ಲಿಸುವದು.
- ಸಾಲಾಮಿಸ್ರಿ ಮುರಬ್ಬಾವು — ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವುದು.
- ಸಾಲಾಮಿಸ್ರಿ ಮುರಬ್ಬಾವು — ಕ್ಷಣಕ್ಷಣಕ್ಕೂ ಮೂತ್ರವಾಗುವದನ್ನು ನಿಲ್ಲಿಸುವದು.
- ಸಾಲಾಮಿಸ್ರಿ ಮುರಬ್ಬಾವು — ನಿದ್ರೆಯಲ್ಲಿ ಧಾತುವು ಹೋಗುವದನ್ನು ನಿಲ್ಲಿಸುವದು.
- ಸಾಲಾಮಿಸ್ರಿ ಮುರಬ್ಬಾವು — ಮೆದುಳಿಗೆ ಬಲವನ್ನು ಕೊಡುವದು.
- ಸಾಲಾಮಿಸ್ರಿ ಮುರಬ್ಬಾವು — ರಕ್ತವನ್ನು ವೃದ್ಧಿಪಡಿಸಿ ಧಾತುವನ್ನು ಶೋಧಿಸುವದು.
- ಸಾಲಾಮಿಸ್ರಿ ಮುರಬ್ಬಾವು — ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು.
- ಸಾಲಾಮಿಸ್ರಿ ಮುರಬ್ಬಾವು — ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೋಧಿಸುವದು
- ಸಾಲಾಮಿಸ್ರಿ ಮುರಬ್ಬಾವು — ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವದು.
- ಸಾಲಾಮಿಸ್ರಿ ಮುರಬ್ಬಾವು — ಉತ್ಸಾಹವು, ಬುದ್ಧಿ ಕುಶಲತೆಯು, ಶರೀರಕಾಂತಿಯು ಕೊಡುವದು.
- ಸಾಲಾಮಿಸ್ರಿ ಮುರಬ್ಬಾವು — ತಾಂಬ್ರ ಮತ್ತು ಭಂಗಾರ ಭಸ್ಮಕ್ಕಿಂತಲು ಉತ್ತಮವಾದದ್ದು.
- ಸಾಲಾಮಿಸ್ರಿ ಮುರಬ್ಬಾವು — ಸ್ತ್ರೀಸಂಗಕ್ಕೆ ಮೊದಲು ಸ್ಖಲನವಾಗುವುದನ್ನು ನಿಲ್ಲಿಸುವದು.

ಒಂದು ಡಬ್ಬಿ ಮುರಬ್ಬಾವನ್ನು 15 ದಿನಗಳು ಉಪಯೋಗಿಸುವದರಿಂದ ಪೂರಾ ಗುಣಕೊಡುತ್ತೆ. 2—3 ಡಬ್ಬಿ ಮುರಬ್ಬಾವನ್ನು ಉಪಯೋಗಿಸುವದರಿಂದ ಖಾಯಂ ರಸಾಯನಂ(?) ಶಾಶ್ವತವಾಗಿ ಗುಣಕೊಡುತ್ತೆ.

15 ತೊಲೆ ಮುರಬ್ಬಾವಿನ ಡಬ್ಬಿ 1ಕ್ಕೆ ರೂ. 2. ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿವರೆಗೆ ಆಣೆ 6.

ಡಿ. ಮನ್ನಾಲಾಲ್, ಡಿಲ್ಲೀ ವೈದ್ಯರು,
5 ಹಾಜಿಸಾಹೇಬ್ ಹಮಡಿ ಅವೆನ್ಯುರೋಡ್, ಬೆಂಗಳೂರು ಸಿಟಿ.

FREE! FREE!!

S.T.A. Perpetual Calendar

Beautiful and Artistic

As. 10 each Postage Extra.

How to get it Free?

Apply with Postage.

Eucalyptus Oil.

(Pure & Best

As. 4 per 1 oz bottle

Packing & postage Extra

M. S. RAO & Co.,

Bangalore City.

ಕನ್ನಡ ಹೊಸ ಪುಸ್ತಕಗಳು — ಕಾದಂಬರಿಗಳು

- ಸಂಗೀತಸಮಯಸಾರ, ಹೊಸ ಪುಸ್ತಕ 1—4
- ಪ್ರಬಂಧ ಮಂಜಾವಳಿ, ಕನ್ನಡ ವಾಕ್ಯರಚನೆಯ ವಿಧಾನವನ್ನು ಹೊಸ ಮತ್ತು ಸುಲಭವಾದ ರೀತಿಯಲ್ಲಿ ವಿವರಿಸಿದೆ 0—12
- ಅರೇಬಿಯನ್ ನೈಟ್ಸ್, ಹೊಸ ಮುದ್ರಣ 2—2
- ಮುದ್ರಾಮಂಜೂಷ ,, 1—10
- ಭಕ್ತವಿಜಯ, (ವಿಷ್ಣು ಭಕ್ತರ ಕಥೆಗಳು) ಹೊಸ ಮುದ್ರಣ 3—2
- ಮೈತ್ರೇಯಿ, (ಅನೇಕ ರಹಸ್ಯಗಳು ವಿವರಿಸಲ್ಪಟ್ಟಿವೆ) 0—5
- ವಾಲ್ಮೀಕಿಯ ಜಯ, ಹೊಸ ಮುದ್ರಣ 0—8
- ಸ್ತ್ರೀಧರ್ಮನೀತಿ, (ಸ್ತ್ರೀಯರಿಗೆ ಅತ್ಯಾವಶ್ಯಕವಾದದ್ದು) 0—9
- ದುರ್ಗಾದಾಸ (ಬಂಗಾಳಿ ನಾವಿಲ್) 0—12
- ಪ್ರಫುಲ್ಲ, ,, (ಪತ್ತೇದಾರಿ ಕಥೆ) 0—12
- ವಿಷವಿವಾಹ, ಹೊಸ ಮುದ್ರಣ 0—4
- ಶೋಭನೆ, ,, 0—12
- ಚಂದ್ರಪ್ರಭಾ, ಹೊಸ ಕಾದಂಬರಿ 0—12
- ಚಂಪಕ 0—4
- ಪ್ರಿಂರೋಸ ವಿಜಯಂ, ಗೋಲ್ಡ್‌ಸ್ಮಿತ್ ಕವಿಯ ವಿಕಾರ್ ಆಫ್ ವೇಕ್‌ಫೀಲ್ಡ್‌ನ ಭಾಷಾಂತರ 1—9

ಯಂ. ಯಸ್. ರಾವ್ ಕಂಪೆನಿ.,

ಬುಕ್‌ಸೆಲರ್ಸ್, ಅವಿನ್ಯುರೋಡ್, ಬೆಂಗಳೂರು ಸಿಟಿ.

ಯಂ. ಸುಬ್ಬರಾವ್, ಶಂಕರಪುರಂ, ಬೆಂಗಳೂರು ಸಿಟಿ—ಈ ವಿಳಾಸವನ್ನು ಮೇಲ್ಕಂಡಂತೆ ಬದಲಾಯಿಸಿದೆ.

ನಮ್ಮಲ್ಲಿ ಎಲ್ಲಾ ವಿಧವಾದ ಕನ್ನಡ ಕಥೆಗಳೂ, ಬಿ. ವೆಂಕಟಾಚಾರ್ಯರ ನಾವಿಲ್‌ಗಳೂ, ಗವರ್ನಮೆಂಟ್ ಸ್ಕೂಲು ಪುಸ್ತಕಗಳೂ ದೊರೆಯುತ್ತವೆ. ಪುಸ್ತಕದ ಪಟ್ಟಿ ಪ್ರಿಂಟಾಗುತ್ತಿದೆ.

ಯಂ. ಯಸ್. ರಾವ್ ಅಂಡ್ ಕೋ.,
ಬೆಂಗಳೂರು ಸಿಟಿ.

ಕನ್ನಡ ಕ್ರಿಮಿನಲ್ ಪ್ರೊಸೀಜರ್ ಕೋಡು

೬೯೬ ಪುಟಗಳುಳ್ಳದ್ದು.

ಬೊಂಬಾಯಿ, ಮದ್ರಾಸು, ಕಲ್ಕತ್ತಾ, ಮೈಸೂರು ಮುಂತಾದ ಅನೇಕ ಜಿಲ್ಲೆಗಳಲ್ಲಿ ಜಾರಿಯಲ್ಲಿರುವ ಹೊಸದಾಗಿ ಮುದ್ರಿಸಲ್ಪಟ್ಟ ತೀರ್ಮಾನಗಳು ಇದರಲ್ಲಿ ಅಡಗಿವೆ

ಇದರಿಂದ ಪ್ರಪಂಚದ ಜನಗಳಿಗೆಲ್ಲಾ ಸೌಲಭ್ಯ ಉಂಟಾಗಿದೆ ಈ ಸೌಲಭ್ಯಗಳನ್ನು ಸಾಧ್ಯವಾದ ಮಟ್ಟಿಗೆ ಕನ್ನಡಿಗರಿಗೆ ಕಲ್ಪಿಸಿಕೊಡಲು ಆಂಗ್ಲಭಾಷಾ ಟಿಪ್ಪಣಿಗಳು ಭಾಷಾಂತರ ಮಾಡಲ್ಪಟ್ಟಿವೆ

ಕೋರ್ಟಿಗೆ ಬರತಕ್ಕ ಕಕ್ಷಿಗಾರರಿಗೆ ಬಹಳ ಉಪಯೋಗವಾದ ಪುಸ್ತಕ ಈ ಪುಸ್ತಕವನ್ನು ಒಂದು ಸಲ ಓದುವುದರಿಂದಲೇ ಕಠಿಣವಾದ ಮೊಕದ್ದಮೆಗಳನ್ನೂ ಲಾಯರುಗಳ ಸಹಾಯವಿಲ್ಲದೇನೆ ಗೆಲ್ಲಲು ಸಾಧ್ಯವಾಗುವುದು.

ಕ್ರಯ ರೂಪಾಯಿ ೩—೦—೦ ಅಂಚೆ ಹಾಸಲು ೫ ಆಣೆ

ಸುಭದ್ರೆ.

ಎಂಬ ಹೊಸ ಕಥೆ (ನಾವೆಲ್)

ಈ ನವರಸಭರಿತವಾದ ಕಥೆಯು ವಿಚಾರದಲ್ಲಿ ಅನೇಕ ದೊಡ್ಡ ಮನುಷ್ಯರಿಂದ ಬಹಳ ಒಳ್ಳೆಯ ಅಭಿಪ್ರಾಯಗಳು ಬಂದಿರುತ್ತವೆ ಅವುಗಳಲ್ಲಿ ಒಂದೆರಡನ್ನು ಇದರಡಿ ತಿಳಿಸಿರುತ್ತೇವೆ —

ಮೈಸೂರು ದೇಶದ ವಿದ್ಯಾಭ್ಯಾಸದ ಇಲಾಖೆಯ ಇನ್ಸ್‌ಪೆಕ್ಟರ್ ಜನರಲರವರು—"ನಿಮ್ಮ ಸುಭದ್ರೆ ಎಂಬ ಪುಸ್ತಕದ 50 ಪ್ರತಿಗಳನ್ನು ಈ ಇಲಾಖೆಯ ಉಪಯೋಗಕ್ಕಾಗಿ ಕಳುಹಿಸಿಕೊಡಿ"

ಮ॥ ರಾ॥ ಬಿ ರಾಮರಾವ್ ಎಂ ಎ, ಎಲ್ ಎಲ್ ಬಿ ಗವರ್ನಮೆಂಟ ಟ್ರಾನ್ಸ್‌ಲೇಟರ್ ಮದ್ರಾಸ್, ಇವರು—"ಕಥೆಯು ಬಹಳ ಸಾರಸ್ಯವಾಗಿದೆ * * * * ಇದರಂತೆಯೇ ನಮ್ಮ ಸಮಾಜದಲ್ಲಿರುವ ನ್ಯೂನತೆಗಳನ್ನು ತಿಳಿಯಪಡಿಸಿ ಇನ್ನೂ ಕೆಲವು ಪುಸ್ತಕಗಳನ್ನು ಬರೆಯುತ್ತೀರೆಂತ ನಂಬಿರುತ್ತೇನೆ"

ವಿಳಾಸ:— ಎಚ್. ಎನ್. ರಾವ್ ಅಂಡ್ ಬ್ರದರ್ಸ್,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಬಾಸೆಲ್ ಮಿಶನ್ ಬುಕ್ ಎಂಡ್ ಟ್ರೇಕ್ಟ್ ಡಿಪೋಜಿಟರಿ

ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ

ಲೋಕವ್ಯವಹಾರ ಬೋಧಿನಿ ..	೧	೦	೦
ನಾನಾರ್ಥ ಶಬ್ದಾವಳಿ ...	೦	೧೦	೦
ಗದ್ಯ ಸಂಗ್ರಹ	೦	೬	೦
ಪದ್ಯ ,, ...	೦	೧	೬
ಪದಾರ್ಥ ವಿಜ್ಞಾನ ಶಾಸ್ತ್ರ	೦	೧೨	೬
ಕನ್ನಡ ನುಡಿಹಿಡಿ (ಸಂಕ್ಷಿಪ್ತ ಲಿಪಿ) ...	೧	೦	೦
ಕನ್ನಡ ಮತ್ತು ಇಂಗ್ಲಿಷ್ ಗಾದೆಗಳು	೦	೪	೦
ಇಂಗ್ಲಿಷು ಭಾಷಾಮಂಜರಿ	೧	೦	೦
ಇಂಗ್ಲಿಷು ಕನ್ನಡ ಸಂಭಾಷಣ ವಾಕ್ಯಗಳು ...	೦	೧೦	೦
ಕನ್ನಡ ಇಂಗ್ಲಿಷು ನಿಘಂಟು (ದೊಡ್ಡದು)	೫	೦	೦
ಇಂಗ್ಲಿಷ್ ಕನ್ನಡ ,, (ದೊಡ್ಡದು)	೫	೦	೦
,, ,, (ಸಣ್ಣದು)	೨	೮	೦
ಸಂಸ್ಕೃತ ಬಾಲವ್ಯಾಕರಣ	೧	೦	೦
ತಿದ್ದುವಿಕೆಯೂ ಶಿಕ್ಷಣವೂ, ಫೌಲರ್ ದೊರೆಗಳು ಮಾಡಿದ್ದು	೦	೧೪	೦
ಹಿಂದು ದೇಶದ ಚರಿತ್ರೆ ಸಂಪೂರ್ಣ	೧	೦	೦
ಕೃಷಿ ಶಾಸ್ತ್ರದ ಮೊದಲನೇ ಪುಸ್ತಕ	೦	೬	೦
ಮೊದಲನೇ ಪದ್ಯ ಪುಸ್ತಕ ...	೦	೧	೬
ವಿಕೀರ್ಣ ಸುಭಾಷಿತ ಪ್ರಸಂಗ ಶತಕ	೦	೧	೦
ರಾಜರ ಗೀತ (ಚಿತ್ರ ಸಹಿತ)	೦	೦	೬
ಕನ್ನಡ ಹಿಂದುಸ್ತಾನಿ ಭಾಷಾಮಂಜರಿ	೦	೪	೬
ಇಸೋಪನ ನೀತಿಕಥೆಗಳು (ಚಿತ್ರ ಸಹಿತ)	೦	೮	೦
ಆರೋಗ್ಯ ಭಾಗ್ಯ ...	೦	೪	೦
ವ್ಯಾಯಾಮ ಬೋಧಿನಿ ...	೦	೪	೦
ರೋಗ ಚಿಕಿತ್ಸೆ ...	೧	೮	೦
ಜೀವರಸಾಯನಿ ವೈದ್ಯಸಾರ ...	೧	೦	೦
ಮಸ್ಲೀಕ ವಿಜಯ ...	೦	೪	೦
ಅಲಿಬಾಬನ ಕಥೆ ...	೦	೨	೦

ಇನಾಂ ಸಾಮಾನು 60! ಇನಾಂ ಸಾಮಾನು 60

ಯೋಗ್ಯತಾ ಪತ್ರಿಕೆಗಳನ್ನು ಪಡದಿರುವ

ಸಾವಿತ್ರೀ ಹೇರ್ ಆಯಿಲ್.

ಇದರ ಬೆಲೆ 60 ಇನಾಂ ಸಾಮಾನುಗಳೊಡನೆ ಡಬ್ಬಿ 1ಕ್ಕೆ 12 ಆಣೆ ಯಾವ ಸ್ತ್ರೀಗಳಿಗೆ ತಲೆಕೂದಲು ಸುಂದರವಾಗಿ ಇರಬೇಕೆಂಬ ಉದ್ದೇಶವಾಗಿಯೂ ಕೂದಲು ಉದುರುವದನ್ನು ತಡೆದು ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವವರು ಬಜಾರಿನಲ್ಲಿ ದೊರೆಯುವ ಕೀಳು ತರದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡುವದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ ಈ ಲೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಸುವಾಸನೆ ಸುತ್ತಲೂ ಇರುವ ಮನೆಗಳಿಗೆ ಪರಿಮಳ ವಾಸನೆ ಹೋಗುವದು ಇದರ ಪರಿಮಳ ವಾಸನೆ ಕೇಳುವದಕ್ಕೆ ಬರೆಯುವದಕ್ಕೆ ಆಗುವದಿಲ್ಲ ಇದಲ್ಲದೆ ದೇಹದಲ್ಲಿನ ಉಷ್ಣವನ್ನು ತೆಗೆದು ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿರುವ ಮದುಳನ್ನು ಸರಿಮಾಡುವದು ಮುಖಕ್ಕೆ ಕಾಂತಿಯನ್ನೂ ದೇಹಕ್ಕೆ ಆರೋಗ್ಯವನ್ನೂ ಮನಸ್ಸಿಗೆ ಸಂತೋಷವನ್ನೂ ಕೂದಲಿಗೆ ಆರೋಗ್ಯವನ್ನೂ ಕೊಡುವ ತೈಲ ಇದು ಒಂದೇ ಬೇರೆ ಇಲ್ಲ ಬರೇ ವಾತಗಳಿಂದ ವರ್ಣಿಸುವದರಲ್ಲಿ ಪ್ರಯೋಜನವಿಲ್ಲ ಒಂದನ್ನು ತರಿಸಿ ನೋಡಿದರೆ ತಿಳಿಯುತ್ತೆ ಇನಾಂ ಸಾಮಾನುಗಳ ತಪಸೀಲು — ಸ್ತ್ರೀಯರು ಧರಿಸಿಕೊಳ್ಳುವ ಕೊರಳಿಗೆ ನೆಕ್ಲೇಸ್ 1 ಕಾಲುಂಗುರ ಮುತ್ತು 40 ದಂತದ ಬಾಚಣಿಗೆ 1 ಸೊಗಸಾದ ರಾಜಾ ಇಂಡಿಯನ್ ಪೆಟ್ಟಿಗೆ 1 ರವಿವರ್ಮ ಫೋಟೋ ಕಾರ್ಡು 6 ಸುವಾಸನೆ ಅತ್ತರು ಬಿಲ್ಲೆ 1, ಗಂಧದ ಬಿಲ್ಲೆ 1 ಸ್ತ್ರೀಯರು ಧರಿಸಿಕೊಳ್ಳುವ ಬ್ರೋಚು 1, ಒಟ್ಟು 60 ನಮ್ಮ ಕಂಪೆನಿ ಪ್ರಖ್ಯಾತಿ ಹೊಂದುವದಕ್ಕಾಗಿ ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಕ್ರಯಕ್ಕೆ ದೊರೆಯುತ್ತವೆ ಕೂಡಲೆ ಬರೆದು ತರಿಸಿಕೊಳ್ಳಿ

ನಮ್ಮ ವಿಳಾಸ — ವಿ. ಎ. ಎಸ್ ಸ್ವಾಮಿ ಕಂಪೆನಿ,
3 ಕಾಲೇಪ್ಪನ್ ಬೀದಿ, ಮದರಾಸು

ಜಯವಿಜಯ

ಅಥವಾ

ತೂಗಾಡುವ ಅಸ್ಥಿಪಂಜರ.

ಇದರಲ್ಲಿ "ದಿಲೀಪಸಿಂಹ ಲಂಬಾರ" ಎಂಬವನು ತನ್ನ ಹಗೆ ತೀರಿಸುವುದಕೋಸ್ಕರ ಎಂಥೆಂಥಾ ಅದ್ಭುತ ಕಾರ್ಯಗಳನ್ನೆಸಗಿ ಕಡಗೆ ಹೇಗೆ ಜಯ ಹೊಂದಿ ಸುಖನ್ನನುಭವಿಸಿದನು?

ಒಬ್ಬ ಸ್ತ್ರೀಯು ತನ್ನ ಪತಿವ್ರತಾ ಧರ್ಮಕ್ಕೋಸ್ಕರ ವಿವಿಧ ಕಠಿಣ ಕಾರ್ಯಗಳನ್ನು ಕಣ್ಣಾರೆ ಕಂಡರೂ ಎದೆಗುಂದದೆ ಇರಲು ಕಡಗೆ ತನ್ನ ಮೂರು ವರ್ಷದ ಪುತ್ರನನ್ನು ತನ್ನ ಸಮಕ್ಷವದಲ್ಲೇ ತಲೆ ಕೆಳಗಾಗಿ ತೂಗಾಡಿ ಕಟ್ಟಿ ಕಠಾರಿಯಿಂದ ತಿವಿದು ಅದರ ರಕ್ತದಿಂದ ಅವಳಿಗೆ ಸ್ನಾನಮಾಡಿಸಿ, ಆತೂಗಾಡಿಸಿಟ್ಟ ಮಗುವಿನ ಹೆಣವನ್ನು ನಿರಂತರ ಅಲ್ಲಿಯೇ ಇರಗೊಳಿಸಿ, ಅದರ ರಕ್ತವನ್ನು ಸಹ ಒಂದು ಪಾತ್ರೆಯಲ್ಲಿ ತುಂಬಿ ಒಂದಿಖಾನೆಯಲ್ಲಿ ಅವಳ ಪಕ್ಕದಲ್ಲೇ ಇಟ್ಟು ಅವುಗಳನ್ನು ನೋಡಿಯಾದರೂ ಮಕರಗಿ ವಶಳಾಗುವಂತೆ ಶತಪ್ರಯತ್ನಗೈದರೂ ಪರವಶಳಾಗದೆ ಆ ಸತಿಯು ತನ್ನ ಪತಿವ್ರತಾ ಧರ್ಮದಲ್ಲೇ ದೃಢವಾಗಿದ್ದು ತನ್ನ ಸತಿಧರ್ಮವನ್ನು ಹೇಗೆ ಕಾಪಾಡಿಕೊಂಡಳು

ದಾಸನಾಗಿದ್ದ ನೀಚ ಸೇವಕನೊಬ್ಬನು ತನ್ನ ಅರಸನನ್ನು ಕೊಲ್ಲಿಸಿ ರಾಜ್ಯಭಾರವನ್ನು ತಾನೇ ವಹಿಸಿಕೊಂಡು ನಾನಾಬಗೆಯ ದುಷ್ಕಾರ್ಯಗಳನ್ನು ನಡಿಸಿ, ಕಡೆಗೆ ತಾನು ಗೈದ ದುಷ್ಕರ್ಮಗಳಿಗೆ ಹೇಗೆ ತಕ್ಕ ಫಲವನ್ನನುಭವಿಸಿದನು? ಎಂಬ ಎಲ್ಲ ವಿವರವನ್ನು ವ್ಯಕ್ತಪಡಿಸುತ್ತದೆ ಅದ್ಭುತವಾಗಿಯೂ, ರಸಭರಿತವಾಗಿಯೂ ಇರುವ ಈ ಗ್ರಂಥವನ್ನು ಓದುವದರಿಂದ ಪುರುಷರಲ್ಲಿ ಪೌರುಷವೂ ಸ್ತ್ರೀಯರಲ್ಲಿ ಪತಿವ್ರತಾ ಧರ್ಮವೂ ನೆಲೆಗೊಳ್ಳುವದು!

ಕ್ರಯ 0-12 0 ಪೋಸ್ಟುಖರ್ಚು ಪ್ರತ್ಯೇಕ. ಹನ್ನೆರಡು ಪುಸ್ತಕಗಳ, ಒಂದೇಸಲ ಪಡಕೊಳ್ಳುವವರಿಗೆ ಒಂದು ಪುಸ್ತಕ ಉಚಿತವಾಗಿ ದೊರಕುವುದು.

ತಾಜ ಕಲಂ — ಈ ನನ್ನ ಕಾರ್ಯಕ್ಕೆ ಸ್ವಜಾತಿ ಗೃಹಸ್ಥರು ಜಾತೀಯಾಭಿಮಾನದಿಂದಲೂ ವಿಜಾತಿ ಮಹನೀಯರು ಮಿತ್ರಾಭಿಮಾನದಿಂದಲೂ ಪ್ರೋತ್ಸಾಹಕೊಟ್ಟು ಸರ್ವರೂ ಓದಿ ಪ್ರಯೋಜನ ಹೊಂದುವಂತೆ ಕೋರುತ್ತೇನೆ.

ವಿಳಾಸ:— **V. O. Amin**
C/o E. A. Goll Esq
Sirdar Palace, Apollo Street, BOMBA

ಚುರುಕಾದ ಏಜಂಟರು ಬೇಕಾಗಿರುವರು! ಧಾರಾಳವಾದ ಕಮಿಶನ್!!
ಮುಂದಿನ ಅಭಿವೃದ್ಧಿಗೆ ತುಂಬಾ ಅವಕಾಶವುಳ್ಳ ವೃತ್ತಿ!!!

ಮುಂಬಾಯಿ ಲ್ಯಾಫ್ ಏಸ್ಯುರೆನ್ಸ್ ಕಂಪೆನಿ,

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:—ಬಹುಮಾನಪಟ್ಟ ಮಿ। ಲಲ್ಲುಬಾಯಿ ಸಾಮಲ್ ದಾಸರವರು, ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು:—ಫ್ರಮ್‌ರೋಜ್ ಆರ್ ಜೋಶಿರವರು, ಜೆ. ಪಿ. ಒನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಚುವೆರಿ:—ಮಿ। ಜೋರ್ಜ್ ಕಿಂಗ್ ಎಫ್. ಎಫ್. ಎ. ಎಫ್. ಐ. ಎ.

ಮೆಡಿಕಲ್ ರಿಫರಿಗಳು:—ಡಾಕ್ಟ್ರರ್ ಆರ್. ರಾವ್, ಎಮ್. ಡಿ. ಡಿ. ಎಸ್. ಸಿ. (ಲಂಡನ್)

ಗೌರವಾರ್ಥಕ ಮ್ಯಾನೇಜರ್:—ರಾ। ಕೆ. ಸುಬ್ರಮಣ್ಯಾಯ್ಯರ್, ಬಿ. ಎ. ಜೆ. ಪಿ. ಎಫ್. ಎಸ್. ಎ. ಎ. (ಲಂಡನ್)

ವಿಮೆದಾರರ ವಿಮೆ ಪತ್ರಗಳ ಶರ್ತಗಳ ಪ್ರಕಾರ ಸಿಕ್ಕುವ ಹಣವು ಈ ಕಂಪೆನಿಯಲ್ಲಿ ಬಹಳ ಭದ್ರವಾಗಿರುವದೆಂತ ಲೆಕ್ಕ ವ್ಯವಸ್ಥಾಪಕರು ಅಭಿಪ್ರಾಯಪಟ್ಟಿರುವರು.

ತರುಣಾವಸ್ಥೆಯಲ್ಲಿರುವ ಈ ಕಂಪೆನಿಯು ಮುಂದಕ್ಕೆ ಇನ್ನೂ ಬಹಳ ಅಭಿವೃದ್ಧಿಯನ್ನು ಹೊಂದುವ ವಿಶೇಷ ಸಂಭವಗಳಿಂದ ಕೂಡಿರುವುದೆಂದು "ಕೊಮರ್ಸ್" ಎಂಬ ಪತ್ರಿಕೆಯ ಅಭಿಪ್ರಾಯವಾಗಿರುವುದು.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 1,55,000ವನ್ನು ಠೇವಣಾತಿಯಾಗಿಟ್ಟಿರುವದು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಗೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೊಟ್ಟಿಕಾರ್ ಬ್ರದರ್ಸ್, ಉಡುಪಿ,
ಕನ್ನಡಾ, ಮಲಿಬಾರ, ತಿರುವಾಂಕೋಡು, ಮತು
ಕೊಚ್ಚಿ ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು.

ಸೂಚನೆ:—ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮೆ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಗೆ ರಶೀದಿಯನ್ನು ಕೊಟ್ಟಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಉಡುಪಿ, 3—7—1914.

ಮಹಾಶಯರ!

ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿ ಎಂಬುವ ಜೀವವಿಮೆ ಉತ್ತರಾಯಿಸುವ ಸಂಘದ ಬಗ್ಗೆ ತಾವು ಏನೊಂದೂ ಏಳ-ಬವಿಲ್ಲದೆ, ರೂ. 986—10—0ನ್ನು ನನಗೆ ಪಾವತಿಮಾಡಿದುದಕ್ಕಾಗಿ ಅತಿ ಉಪಕಾರವಾಯಿತು. ಸದರಿ ಪೊಲಿಸಿಯನ್ನು ಕುರಿತಾದ ಅಗತ್ಯವಾದ ಪತ್ರಗಳನ್ನು ಅವರಿಗೆ ಮುಟ್ಟಿಸಿದ ಮೂರೇ ದಿನಗಳೊಳಗಾಗಿ ನನಗೆ ಸಲ್ಲತಕ್ಕ ವಿಮೆಯ ಐವಜನ್ನು ತಮ್ಮ ಕಂಪೆನಿಯ ಡೈರೆಕ್ಟರರುಗಳು ನನಗೆ ಪಾವತಿಮಾಡಿಸಿದುದಕ್ಕೋಸ್ಕರ ನನ್ನ ಧನ್ಯವಾದಗಳನ್ನು ಅವರಿಗೆ ದಯೆಯಿಟ್ಟು ತಿಳಿಸಿ. ಈ ತೆರದಲ್ಲಿ ಪೊಲಿಸಿದಾರರೊಡನೆ ಯಥಾರ್ಥವಾದ ರೀತಿಯಲ್ಲೂ ನಂಬುಗೆಯುಂಟಾಗುವಂತೆಯೂ ವರ್ತಿಸುವ ತಮ್ಮ ವಿಮೆ ಕಂಪೆನಿಯಿಂದ ಪ್ರತಿಯೊಬ್ಬನೂ ಒಂದೊಂದು ಪೊಲಿಸಿಯನ್ನಾದರೂ ಪಡಕೊಳ್ಳುವುದು ಉಚಿತವೆಂದು ನನ್ನ ಅಪೇಕ್ಷೆ.

(ದಸ್ಕತು) ಹಾವಾಡಿ ಆನಂದರಾಯ ಘಡಿಯಾರನ ರುಜು.
(935ನೇ ಪೊಲಿಸಿಯ ವಿಮಾ ಹಣವನ್ನು ಪಡೆಯಲು ಅಧಿಕಾರವುಳ್ಳವನು.)

ಉಡುಪಿ, ತಾ. 20—8—1914.

ನನ್ನ ಎಳೆ ಪ್ರಾಯದಲ್ಲಿ ಮೃತರಾದ ನನ್ನ ಗಂಡ ಕೆ. ಎಲ್. ಪ್ರಭುಗಳ ವಿಮೆ ಪತ್ರಗಳನ್ನು ನಾನು ಕಳುಹಿಸಿಕೊಟ್ಟ ಕೆಲವೇ ದಿನಗಳೊಳಗಾಗಿ ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿಯವರು ನನಗೆ ತಕ್ಕಂಬಂಧವಾದ ಹಣವನ್ನು ಪಾವತಿಮಾಡಿಸಿದುದಕ್ಕೆ ನಾನು ಕೃತಜ್ಞಳಾಗಿರುವೆನು. ನನ್ನ ಒಬ್ಬನೇ ಬಾಲಕನಿಗೆ ಇದೊಂದೇ ಮಾತ್ರ ಪಿತ್ರಾರ್ಜಿತವಾದ ಧನವಾಗಿದೆ. ಅಂತಹ ಬಡ ಹುಡುಗನಿಗೆ ಇದೊಂದು ಅಪೂರ್ವವಾದ ಮಹಾದಾನವನ್ನು ಮಾಡಿಕೊಟ್ಟುದಕ್ಕೆ ಪ್ರತಿಯಾಗಿ ನಿಮ್ಮ ಕಂಪೆನಿಯು ಚಿರಕಾಲವೂ ಸೌಭಾಗ್ಯದಲ್ಲಿರಲಿ!

ಭವಾನೀಬಾಯಿ, Pol. No. 1738.
ಸಾಕ್ಷಿ—ಭವಾನೀಬಾಯಿಯ ಸೋದರ ರಾ। ಕೆ. ರಂಗಪ್ಪ ನಾಗಪ್ಪ.

ಮಂಗಳೂರು, ತಾ. 30—10—1914.

ಸಾಧ್ಯವಾದಷ್ಟು ಕಡಿಮೆ ಸಮಯದೊಳಗಾಗಿ ನನಗೆ ಪಾವತಿಯಾಗತಕ್ಕ ಹಣವನ್ನು ಸಲಾಯಿಸಿದುದಕ್ಕೋಸ್ಕರ ಬೊಂಬೇ ಲ್ಯಾಫ್ ಎಸ್ಯುರೆನ್ಸ್ ಕಂಪೆನಿಯವರಿಗೆ ನನ್ನ ಧನ್ಯವಾದಗಳನ್ನು ಪ್ರೀತಿಪೂರ್ವಕವಾಗಿ ಮುಟ್ಟಿಸಿರಿ! 'ಕ್ಲೈಮು' ಪ್ರಕಾರ ಎಲ್ಲಿ ಹಣವನ್ನು ಪಡಕೊಳ್ಳುವ ಹಾಗೆ ಕಂಪೆನಿಯ ಏಜಂಟರೇ ತಮ್ಮಿಂದಾಗುವಷ್ಟರ ಸಹಾಯವನ್ನು ಮಾಡುತ್ತಿರುವರಾದುದರಿಂದ ನನಗೆ ಯಾವ ತೊಂದರೆಗಳೂ ಉಂಟಾಗಲಿಲ್ಲ. ಹಣವನ್ನು ನಾವಿದ್ದ ಸ್ಥಳಕ್ಕೆ ಬಂದು ತೆತ್ತರು.—ಇದೊಂದು ತಮ್ಮ ಕಂಪೆನಿಯ ವಿಶೇಷ ಗುಣ. ನಿಮ್ಮ ಸಂಘಕ್ಕೆ ಸದಾ ವಿಜಯವು ಆಗಲಿ.

ಆರ್ಕಳ ರಾಮಚಂದ್ರ ಶ್ಯಾನಭಾಗನ ರುಜು.
(Pol. No. 2319ನೆಯ ವಾರಿಸಿ ಹಕ್ಕಿನ ಆಸಾಮಿ.)

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೊ ದಿಲ್-ಬಹಾರ್

(ರಿಜಿಸ್ಟರ್ಡ್.)

ಸುರಭಿಗಳಲ್ಲಿ ಮಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸದಾ ಸುವಾಸನೆಯುಳ್ಳ ಗುಸಂಧವು. ಒಂದೆರಡು ತಟಕು ಕೈವಸ್ತ್ರದಲ್ಲಿ ತಾಗಿಸಿದ್ದೇ ಆದರೆ 8 ದಿವಸಗಳ ವರೆಗೂ ಪರಿಮಳವಿರುವದು.

	ರೂ.	ಆ.	ಪೈ.
ಕ್ರಯ ½ ಡ್ರಾಮ್ ಟ್ಯೂಬ್ .	0	8	0
1 ,, .	0	12	0
½ ಔನ್ಸ್ ಟ್ಯೂಬ್ . .	2	0	0
ಒಟ್ಟೊ ದಿಲ್-ಬಹಾರ್ ಪರಿಮಳದ ಕಾರ್ಡುಗಳು ಡಜನಿಗೆ . .	0	12	0

ವಿ. ಪಿ. ಚಾರ್ಜು 0—4—0 ಬೇರೆ.

ಪ್ರಾಮುಖ್ಯ ಏಜಂಟರು—:
ಎಚ್. ಆರ್. ಮೋಡಿ ಎಂಡ್ ಕೋ,
10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.
H. R. MODY & Co.,
10 Princes Street, BOMBAY.

ವೈಶೇಷ್ಯವು.

ನಾವು ಲೋಕ ಪ್ರಖ್ಯಾತ ಪೇಟೆಂಟ್ ಔಷಧಿಗಳಿಗೂ ಅತ್ತರು ಮೊದಲಾದ ಪರಿಮಳ ದ್ರವ್ಯಗಳಿಗೂ ಪ್ರಾಮುಖ್ಯ ಏಜಂಟರಾಗಿರುತ್ತೇವೆ.

ಎಕ್ಸೆಲ್ಸಿಯರ್ ಸಾರ್ಸಪರಿಲ್ಲಾ.

(ಐಯೋಡೈಸ್ಡ್)

ಎಂಬ

ರಕ್ತಶುದ್ಧಿಯ ದೀಪಕ.

ಕ್ರಯ ಬಾಟ್ಲಿಗೆ ರೂ. 1—4—0 ಮತ್ತು ರೂ. 2—0—0.

ಪಿಯರ್ಸ್ ನರ್ವೈನ್ ಟೋನಿಕ್ ಪಿಲ್ಸ್

(ಆದರ್ಶದೀಪಕ.)

ಆರೋಗ್ಯವನ್ನು ಉಂಟುಮಾಡುವದು, ಅಶಕ್ತಿಯನ್ನು ಹೋಗಗೊಳಿಸುವದು, ಅಶಕ್ತರಾದ ಬಾಲಕರಿಗೂ ಬಾಲಕಿಯರಿಗೂ ಬಹಳ ಪ್ರಯೋಜನಕಾರಿ!

ಕ್ರಯ 30 ಮಾತ್ರೆಗಳ ಶೀಸೆ 1ಕ್ಕೆ ರೂ. 1—8—0.

ರಾಮಬಾಣ ಗಜಕರ್ಣ ಮುಲಾಂ.

ಗಜಕರ್ಣಕ್ಕೆ ಅತ್ಯುತ್ಕೃಷ್ಟವಾದ ಮುಲಾಂ. ಡಬ್ಬಿ 1ಕ್ಕೆ 4 ಆಣೆ.

ಮೋಡಿಯವರ

ತಲೆಶಿಡಿತ ಬಿಲ್ಲೆಗಳು

ಒಂದೇ ನಿಮಿಷದಲ್ಲಿ ಗುಣ.

ಒಂದು ಬಿಲ್ಲೆಯನ್ನು ನೀರಿನಲ್ಲಿ ಹಾಕಿ ಸೇವಿಸಬೇಕು. 25 ಬಿಲ್ಲೆಗಳ ಸೀಸೆ 1ಕ್ಕೆ 0—12—0. ಇತರ ವಿಶೇಷ ಔಷಧಗಳ ಪಟ್ಟಿಗೆ ಬರಕೊಳ್ಳಿರಿ.

H. R. Mody & Co., ಎಚ್. ಆರ್. ಮೋಡಿ ಎಂಡ್ ಕೊ,
Chemist, ಕೆಮಿಸ್ಟ್,
10 PRINCES ST., BOMBAY. 10 ಪ್ರಿನ್ಸೆಸ್ [illegible]

ನಂಬಿ ಮೋಸಹೋಗಬೇಡಿರಿ! ನಂಬಿ ಮೋಸಹೋಗಬೇಡಿರಿ!!

ಅಸಲ್ ಪಂಜಾಬಿ ಮುರಬ್ಬಾ.

ಕೆಲವರು ನಮ್ಮನ್ನು ನೋಡಿ ನಕ್ಕಲ್ ಮುರಬ್ಬಾವನ್ನು ತಯಾರಿಸಿ ನಮ್ಮ ಹೆಸರು ಇಟ್ಟು ಜನಗಳಿಗೆ ಮೋಸಮಾಡುತ್ತಾರೆ ಅದನ್ನು ಕಂಡು ಮೋಸಹೋಗಬೇಡಿರಿ ನಮ್ಮಿಂದ ಕಳುಹಿಸುವ ಬಾಂಗಿಯನ್ನು ತೆಗಿಯುವಾಗ ಧೈರ್ಯಲಕ್ಷ್ಮಿ ಅಂಡು ಕಂಪೆನಿ, 3 ಇರುಳಪ್ಪನ ಬೀದಿ, ಮದರಾಸು ಎಂತ ಮುದ್ರಿಸಿರುವ ಲೇಬಲ್ ನೋಡಿ ತೆಗೆಯಿರಿ

500 ರೂಪಾಯಿಗಳ ಬಹುಮಾನ !

ಲೋಕಪ್ರಸಿದ್ಧವಾದ "ಪಂಜಾಬಿ ಸಕಲರೋಗ ಸಂಜೀವಿ"ಯನ್ನು ಸೇವಿಸಿ ಜೀವವಿಮೆಯನ್ನೂ ಮಾಡಿಕೊಳ್ಳಿರಿ. ದುರಭ್ಯಾಸಗಳಿಂದ ಧಾತುವನ್ನೂ ನಷ್ಟಪಡಿಸಿಕೊಂಡು ದುಃಖಿಸುವದನ್ನೂ ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರಿಸಲ್ಪಟ್ಟ "ಪಂಜಾಬಿ ಸಕಲರೋಗ ಸಂಜೀವಿ"ಯನ್ನು ಸೇವಿಸಿರಿ. ಇದನ್ನು ಪಂಜಾಬು, ಕಾಬೂಲ್ ದೇಶದ ಜನಗಳು ಬಹಳವಾಗಿ ಸೇವಿಸುವರು. ತಾವು ಪಂಜಾಬಿ ದೇಶದ ಜನಗಳನ್ನು ನೋಡಿ ಇರುವಿರಿ ಅವರು ದಿನದಿನವೂ ಪಂಜಾಬಿ ಸಕಲರೋಗ ಸಂಜೀವಿ ಸೇವಿಸಿ ಬಹಳ ಬಲವೂ ದೃಢವಾಗಿಯೂ ಇರುವರು. ತಾವು ಯಾಕೆ ಹಾಗೆ ಇರಬಾರದು ಪಂಜಾಬಿ ಸಕಲರೋಗ ಸಂಜೀವಿಯನ್ನು ಸೇವಿಸಿ ದೇಹವನ್ನು ಕಾಪಾಡಿಕೊಳ್ಳಿರಿ. ಇದು ಸಮಸ್ತ ಜನಗಳಿಗೂ ವರಪ್ರಸಾದವೆಂದು ಸಕಲರು

ಒಪ್ಪಿದ್ದಾರೆ. ಇದು ರಕ್ತವನ್ನೂ ವೃದ್ಧಿಪಡಿಸಿ ಮೈದಾಳಿಗೆ ಬಲವನ್ನೂ ಕೊಡುವದು. ಕೈಕಾಲು ಸೊಂಟದ ನೋವುಗಳನ್ನೂ ಹೋಗಲಾಡಿಸುವುದು. ಇದರಲ್ಲಿ ಅಪರಂಜಿ ಬೆಳ್ಳಿ, ಅಲುವಂಗಭಸ್ಮ, ಸಪೇದ್‌ಮಿಸ್ರಿ, ಶಾಲಮಿಸ್ರಿ, ಮೊದಲಾದವನ್ನೂ ಮೂಳಿಕೆ 15ನ್ನೂ, ಒಜಾರ್ ಸರಕ 100 ಸೇರಿಸಿ ಬಹಳ ಶುದ್ಧವಾಗಿ ಕೈಯಿಂದ ಮುಟ್ಟದೇ ತಯಾರು ಮಾಡಲ್ಪಟ್ಟಿರುವದು. ಇದು ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟದಲ್ಲವೆಂದು ವ್ಯಕ್ತಪಡಿಸುವವರಿಗೆ 500 ರೂಪಾಯಿಯ ಬಹುಮಾನ.

20 ತೊಲೆ ಡಬ್ಬಿ 1ಕ್ಕೆ ರೂ 3—0—0 ಒಂದೇ ಸಾರಿ 3 ಡಬ್ಬಿ ತರಿಸಿಕೊಳ್ಳುವವರಿಗೆ ರೂ. 8. ಅನುಪಾನಪತ್ರಿಕೆ ಔಷದ ಸಂಗಡ ಇರುತ್ತೆ

ಮದರಾಸ್ ಏಜನ್ಸಿ— ಧೈರ್ಯಲಕ್ಷ್ಮಿ ಅಂಡು ಕಂಪೆನಿ,
3 ಇರುಳಪ್ಪನ ಬೀದಿ, ಮದರಾಸ್

ಮೂರಾಟಕ್ಕೆ ಸಿದ್ಧವಿದೆ! ಪುರಾತನ ಸಂಗ್ರಹ! ನೂತನಗ್ರಂಥ!

ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ

ಮತ್ತು

ಭೂತಾಳಪಾಂಡ್ಯರಾಯನ ಅಳಿಯ ಕಟ್ಟು

ಈ ನವೀನ ಗ್ರಂಥದಲ್ಲಿ ಪರಶುರಾಮದೇವರ ಸೃಷ್ಟಿ ಲಾಗಾಯಿತು ಬ್ರಿಟಿಷ್ ಮಹಾರಾಜರ ಆಳಿಕೆ ವರೇಗಿನ ಕನ್ನಡಜಿಲ್ಲೆಯ ಪೂರ್ವದ ಎಲ್ಲಾ ರಾಜರ ಚರಿತ್ರೆಗಳೂ, ಹೆಸರುಗಳೂ ಧರ್ಮರಾಯನ ನಂತರ ಕಲಿಯುಗದಲ್ಲಿ ರಾಜ್ಯವಾಳಿದ ಕ್ಷತ್ರಿರಾಜರ ಹೆಸರುಗಳೂ, ಕಾಲಗಳೂ ಸಂಯೋಗಿರುವದಲ್ಲದೆ, ಮಯ್ಯೂರವರ್ಮನೇ ಮೊದಲಾದ ಮಹಾ ಪುರುಷರ ಚರಿತ್ರೆಗಳೂ, ಅಹಿಕ್ಷೇತ್ರದಿಂದ ಬ್ರಾಹ್ಮಣರನ್ನು ಕರಿಸಿ ಅವರಿಗೆ ನೇಮಿಸಿದ 326 ಬಹುಮಾನದ ಹೆಸರುಗಳೂ, ಅವರ ಸ್ಥಾನಮಾನಗಳೂ, ಅಳಿಯಸಂತಾನದ ಸಂಪೂರ್ಣ ಅಭಿಪ್ರಾಯಗಳಿರುವ ಭೂತಾಳಪಾಂಡ್ಯನ ಪೂರ್ಣ ಚರಿತ್ರೆಯೂ, ಕಟ್ಟು, ಕಟ್ಟಳೆ, ಮಾನ, ಮರ್ಯಾದೆ, ಜಾತಿ ನೀತಿ ವಿಚಾರಗಳೂ ಅನೇಕ ಕಡೆಗಳಲ್ಲಿದ್ದ ಪೂರ್ವ ಶಿಲಾಶಾಸನಗಳ ಯಥಾ ನಕಲುಗಳೂ ತಾಮ್ರಶಾಸನಗಳ ಪದ್ಧತಿಗಳೂ ಕೂಡಾ ಭಂಡವಾಗಿ ಸಹ್ಯಾದ್ರಿ ಗ್ರಾಮಪದ್ಧತಿ, ರಾಜವಂಶಾವಳಿ ಮೊದಲಾದ ಅಪೂರ್ವ ಗ್ರಂಥಗಳ ಸಹಾಯದಿಂದ ಕೆಲವು ವರ್ಷಗಳಿಂದ ಸಂಗ್ರಹಿಸಿದ ನೂತನ ಸಂಗ್ರಹವು ಹೋಬಳಿ, ಮಾಗಣೆ, ಮನೆತನ, ಅರಸು, ಬಳ್ಳಾಲರು, ಗ್ರಾಮಗುರಿಕಾರರು, ಪಂಚಾಯಿತಿದಾರರು, ನ್ಯಾಯವಾದಿಗಳು, ಉಪಾಧ್ಯಾಯರೂ ವಿದ್ಯಾರ್ಥಿಗಳೂ ಗ್ರಾಮಾಧಿಕಾರಿಗಳೂ ವಗೈರೆ ಓದ ಬರಹ ಬಲ್ಲ ಮಹನೀಯರಿಗೆ ತಿಳಿಯಲನುಕೂಲವಾದ 296 ಪುಟಗಳು ಭರಿತವಾಗಿ ಸದಾ ಕೈಯಲ್ಲಿರುವದಕ್ಕೆ ಯೋಗ್ಯವಾದ ಈ ಪುಸ್ತಕವು ಈಗಲೇ ತಯಾರಾಗಿ ಸಿದ್ಧವಿದೆ ಅನೇಕ ಮಹನೀಯರ ಉತ್ತಮ ಅಭಿಪ್ರಾಯಗಳೂ ಬಂದಿರುತ್ತವೆ

ಪುಸ್ತಕದ ಬೆಲೆಯು ಈಗ ತರಿಸುವವರಿಗೆ 1—4—0 ಟಪ್ಪಾಲ್ ಖರ್ಚು ಬೇರೆ

ಸಮಯಾನುಸಾರ ಕ್ರಯವು 0—4—0 ಏರಿಸಲಾದೀತು

ಹೆಚ್ಚಿಗೆ ಪ್ರತಿಗಳನ್ನು ಕೊಂಡುಕೊಳ್ಳುವವರಿಗೂ ವ್ಯಾಪಾರಸ್ಥರಿಗೂ ಒಳ್ಳೇ ಕಮಿಷನ್ ಕೊಡಲಾಗುವದು

ಪ್ರಾಮುಖ್ಯ ಏಜಂಟರು — ಎನ್. ಎ ಶೀನಪ್ಪ ಹೆಗ್ಗಡೆ,
ಎಸ್. ಪಿ. ರಾಜ ಎಂಡ್ ಕೊ. ಅಮ್ಮುಂಜೆಗುತ್ತು,
ಪೋಸ್ಟು ಪೊಳಲಿ, ದ. ಕ. ಗುರುಪುರ ಪೋಸ್ಟು, ದ. ಕ.

ಈ ಗ್ರಂಥವು ಈ ಕೆಳಗಿನ ವಿಳಾಸದವರಲ್ಲಿಯೂ ದೊರಕುವದು.

1 ಶಾರದಾ ಪ್ರೆಸ್, ಮಂಗಳೂರು
2 ಶ್ರೀ ರಾಧಾಕೃಷ್ಣ ವಿಲಾಸ, ಮಂಗಳೂರು
3 ಒಂಟೆರ ವಿದ್ಯಾರ್ಥಿಭವನ, ಮಂಗಳೂರು.
4 ಯೂನಿಯನ್ ಮಾರ್ಟ್, ಮಂಗಳೂರು.
5 ಕಾದಂಬರಿ ಸಂಗ್ರಹ ಆಫೀಸು, ಚಾಮರಾಜನಗರ ಮೈಸೂರು
6 ಪ್ರಭಾಕರ ಮುದ್ರಾಯಂತ್ರ, ಉಡುಪಿ.
7 ಹಿರಿಯಡ್ಕ ಕೃಷ್ಣ ರಘುನಾಥ ಕಾಮತ್, ಮರ್ಚಂಟ್ ಕಾರ್ಕಳ.

ಉಚಿತ! ಉಚಿತ! ಟಪ್ಪಾಲು ಹಾಸಲು ಇಲ್ಲ!

ಮಾನವ ಜೀವನ ಮಿತ್ರ

ಎಂಬೀ ಪುಸ್ತಕವು ಧನ್ವಂತರಿಯಿಂದ ರಚಿಸಲ್ಪಟ್ಟ ಆರೋಗ್ಯಭಾಗ್ಯದ ಸೂತ್ರಗಳಿಂದ ಕೂಡಿರುವುದು. ಆರೋಗ್ಯವನ್ನು ಕಾಪಾಡಿಕೊಂಡು ಸರ್ವ ಕೆಲಸಗಳಿಗೂ ಉಪಯುಕ್ತವಾದ ಶರೀರಪುಷ್ಟಿಯನ್ನು ಕಾಪಾಡಿಕೊಳ್ಳಲು ಯತ್ನಿಸುವವರು ಈ ಸೂತ್ರಗಳನ್ನು ಚೆನ್ನಾಗಿ ತಿಳಕೊಳ್ಳಬೇಕಾಗಿರುವುದು. ಸೂತ್ರಗಳನ್ನು ಸರ್ವರೂ ತಿಳಕೊಳ್ಳುವಂತೆ ಬಹಳ ಸುಲಭವಾದ ಭಾಷೆಯಲ್ಲಿ ಇವುಗಳು ಭಾಷಾಂತರಿಸಲ್ಪಟ್ಟಿವೆ. ಸಾಮಾನ್ಯವಾದರೂ ಭಯಂಕರವಾದ ಪರಿಣಾಮವುಳ್ಳ ಬೇನೆಗಳಿಗೆ ತಕ್ಕ ಔಷಧಿಯು ಯಾವದೆಂಬದು ಈ ಗ್ರಂಥದಲ್ಲಿದೆ. ನಿಮ್ಮ ವಿಳಾಸವನ್ನು ನಮಗೆ ತಿಳಿಸಿದಲ್ಲಿ ಈ ಪುಸ್ತಕದ ಪ್ರತಿಯೊಂದನ್ನು ಉಚಿತವಾಗಿ ಕಳುಹಿಸಿಕೊಡುವೆವು ಖರ್ಚು ಒಂದಿಷ್ಟಾದರೂ ಕೊಡಬೇಕೆಂತಿಲ್ಲ.

ರಾಜವೈದ್ಯ ನಾರಾಯಣಜಿ ಕೇಶವಜಿ
ಮಾಲಕ
ಆಯುರ್ವೇದೋದಯ ಔಷಧಾಲಯ,
ಜಾಮನಗರ್ (ಕಾಥ್ಯಾವರ್)
ಶಾಖೆ — ಮದನಮಂಜರಿ ಪಿಲ್ಸ್ ಆಫೀಸು,
20 ಚೈನಾಬಜಾರ್ ರಸ್ತೆ, ಮದರಾಸು.

ಸಫಲ ಅಥವಾ ನಿಷ್ಫಲ ಜೀವನವು ಎಂದೂ ಹಾಳಾಗದಿರುವ
ಆರೋಗ್ಯ ದೃಢಕಾಯವನ್ನು ಆದರಿಸಿರುವದು.

ಮದನಮಂಜರಿ ಪಿಲ್ಸ್.

ಈ ಮಾತ್ರೆಗಳನ್ನು ಉಪಯೋಗಿಸುವುದರಿಂದ ಇಂಥಾ ಆರೋಗ್ಯವನ್ನು ಸಂದೇಹವಿಲ್ಲದೆ ಫಲಿಸಿಕೊಳ್ಳಬಹುದು. ಮಲಬದ್ಧತೆ, ಅಜೀರ್ಣ, ಇಂದ್ರಿಯಗಳ ನಿಶ್ಶಕ್ತಿಗಳು ಈ ರೋಗಗಳ ಬಾಧೆಯು ಬಹಳ ಸಮಯದಿಂದಿದ್ದರೂ ಈ ಮಾತ್ರೆಗಳ ಸೇವನೆಯಿಂದ ಇದು ಗುಣಹೊಂದುವದು, ಶರೀರದಲ್ಲಿ ಚೈತನ್ಯವು ಉಂಟಾಗುವದು, ರಕ್ತವು ಶುದ್ಧಿಗೊಳ್ಳುವದು, ಪ್ರಾಯವು ಸಂದುಹೋದಂಥವರಲ್ಲಿ ಸಹ ಯೌವನದ ಶಕ್ತಿಯನ್ನುಂಟುಮಾಡುತ್ತದೆ.

40 ಮಾತ್ರೆಗಳಿರುವ ಒಂದು ಡಬ್ಬಿಗೆ ರೂ. 1—0—0 ಮಾತ್ರ ಔಷಧಗಳ ಪಟ್ಟಿ ಮತ್ತು ಚಿಕಿತ್ಸೆಯ ಮಾಹಿತಿಯನ್ನು ಉಚಿತವಾಗಿ ಕಳುಹಿಸಿಕೊಡುವೆವು

ರಾಜವೈದ್ಯ ನಾರಾಯಣಜಿ ಕೇಶವಜಿ.
ಆಯುರ್ವೇದೋದಯ ಔಷಧಾಲಯ,
ಜಾಮನಗರ (ಕಾಥ್ಯಾವರ).
ಶಾಖೆ — ಮದನಮಂಜರಿ ಪಿಲ್ಸ್ ಆಫೀಸು,
20 ಚೈನಾ ಬಜಾರ್ ರಸ್ತೆ ಮದರಾಸು.

ನೀವು ಹೊಗೆಸೊಪ್ಪನ್ನು ಅಗಿಯುತ್ತೀರೋ?

ಹೊಗೆಸೊಪ್ಪನ್ನು ಅಗಿಯುವ ಅಭ್ಯಾಸವು ಬಹಳ ಹಾನಿಕರವಾಗಿದೆ.

ಮಲಬಾರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಹೊಗೆಸೊಪ್ಪನ್ನು ಸೇವಿಸುತ್ತಿರುವವರು ಬಹಳ ಜನರಿರುವರು. ಹೊಗೆಸೊಪ್ಪಿನಲ್ಲಿ "ನಿಕೊಟಿನ್" ಎಂತ ಕರೆಯಲ್ಪಡುವ ವಿಷಪದಾರ್ಥವಿದೆ. ಇತರ ಮಾದಕ ಪದಾರ್ಥಗಳು ನಮ್ಮ ನರಗಳನ್ನು ಪ್ರಚೋದನ ಪಡಿಸುವಂತೆ "ನಿಕೊಟಿನ್" ಸಹ ನರಗಳಲ್ಲಿ ತತ್ಕಾಲದ ಮಟ್ಟಿಗೆ ಉದ್ದೀಪನೆಯನ್ನುಂಟುಮಾಡುವುದು. ನರಗಳು ಹೀಗೆ ನಿರರ್ಥಕವಾಗಿ ಆಯಾಸಗೊಳ್ಳುವುದರಿಂದ ನರ ಸಂಸ್ಥೆಯುವು ಹಾಳಾಗಿ ದೇಹಪ್ರಕೃತಿಯು ಕೆಡುವುದು. ಇಷ್ಟೇ ಅಲ್ಲ. ಭಯಂಕರವಾದ "ಕೆನ್ಸರ್" ಎಂಬ ವ್ರಣಗಳು ನಾಲಿಗೆಯಲ್ಲಿಯೂ ತುಟಿಗಳಲ್ಲಿಯೂ ಹೊಗೆಸೊಪ್ಪಿನ ಸೇವನೆಯಿಂದ ಉಂಟಾಗುವವು. ಇದರ ಚರ್ವಣದಿಂದ ಬಾಯಿಯು ಹೊಲಸಾಗುವುದಲ್ಲದೆ ಈ ಅಭ್ಯಾಸ ಹಿಡಿದವರಿಂದ ಹಲ್ಲುಗಳನ್ನು ಸ್ವಚ್ಛವಾಗಿಡುವುದು ತುಂಬಾ ಅಸಾಧ್ಯವಾಗಿದೆ. ಅಲ್ಲಾಡುತ್ತಿರುವ ಹಲ್ಲುಗಳು ಗಟ್ಟಿಯಾಗುತ್ತವೆ. ರಕ್ತವನ್ನು ಸುರಿಸುತ್ತಿರುವ ದಂತ ಮೂಲಗಳು ಸರಿಯಾಗುತ್ತವೆ. ಹಲ್ಲುನೋವು ವಾಸಿಯಾಗುತ್ತದೆ ಎಂಬೀ ಭ್ರಾಂತಿಯಿಂದ ಹಲವರು ಹೊಗೆಸೊಪ್ಪನ್ನು ಉಪಯೋಗಿಸುವರು. ಆದರೆ ಇದರ ಉಪಯೋಗದಿಂದ ಈ ಪ್ರಯೋಜನಗಳಲ್ಲಿ ಒಂದಾದರೂ ಎಂದೂ ಲಭಿಸುವದಿಲ್ಲ.

ಪ್ರತಿನಿತ್ಯವಲ್ಲಿಯೂ ನೀವು ನಾವು ತಯ್ಯಾರಿಸುವ
ಪೂರೆನಾಶಕರ ಮತ್ತು ಚೊಗರು ಚೆನ್ನಾಗುಳ್ಳ

"ದಂತಮಂಜನ"

ವನ್ನು ಉಪಯೋಗಿಸಿದರೆ ಹೊಗೆಸೊಪ್ಪನ್ನು ಜಗಿಯುವ ಅಭ್ಯಾಸವನ್ನು ಮಾಡಿಕೊಳ್ಳಬೇಕೆಂಬುದೇ ಇಲ್ಲ. ಅಂಥಾ ಅಭ್ಯಾಸವಿದ್ದರೂ ಅವನ್ನು ಇದರ ಉಪಯೋಗದಿಂದ ಬಿಡಲು ಸಾಧ್ಯವಾಗುವುದು.

ಈ ದಂತಮಂಜನವು ಡಾಂಬಿಕ ವೈದ್ಯರ ಅಂತರಂಗದ ಕುಂಬು ಔಷಧವಲ್ಲ. ಕಳೆದ ೧೫ ವರುಷಗಳಿಂದ ಸರ್ವಸಾಮಾನ್ಯವಾಗಿ ಇದು ಎಲ್ಲರಿಂದಲೂ ಉಪಯೋಗಿಸಲ್ಪಟ್ಟಿರುತ್ತದೆ. ದಂತಮೂಲಗಳಲ್ಲಿಯೂ ಹಲ್ಲುಗಳಲ್ಲಿಯೂ ಉಂಟಾಗುವ ಅನಾರೋಗ್ಯಕರ ಕ್ರಿಮಿಗಳನ್ನು ನಾಶಪಡಿಸುವ ವನಸ್ಪತಿಗಳಿಂದ ಇದು ಕೂಡಿರುವುದು. ಇದರ ಉಪಯೋಗದಿಂದ, ದಂತಮೂಲಗಳು ಗಟ್ಟಿಯಾಗುವವು, ದಂತಮೂಲಗಳಲ್ಲಿ ಆಗಿಂದಾಗ್ಗೆ ತಲೆದೋರುವ ಹುಣ್ಣುಗಳು, ಹಲ್ಲುನೋವು ಗುಣಹೊಂದುವವು, ಬಾಯಿಯಿಂದ ಹೊರಡುವ ದುರ್ವಾಸನೆಯು ಹೋಗಿ ಸುವಾಸನೆಯು ಉಂಟಾಗುವದು. ಹೊಲಸಾದ ಹಲ್ಲುಗಳಲ್ಲಿ ಉಂಟಾಗುವ ಕ್ರಿಮಿಗಳು ಅನ್ನಕೋಶದೊಳಗೆ ಸೇರಿಕೊಂಡು ಡಿಸ್ಪೆಪ್ಸಿಯಾ ಎಂಬ ಅಮಾಲಜೀರ್ಣ ರೋಗವನ್ನುಂಟುಮಾಡುವವು ಎಂತ ವೈದ್ಯರ ಅನುಭವಕ್ಕೆ ಬಂದಿರುವುದು. ಆದ್ದರಿಂದ ಹಲ್ಲುಗಳನ್ನು ಸ್ವಚ್ಛವಾಗಿಡುವುದು ಅಗತ್ಯವಾಗಿರುವುದು. ಸಭ್ಯತೆಗೆ ಶುಚಿಭೂತರಾಗಿರುವುದು ಅಗತ್ಯ. ಹೊಲಸಾದ ಹಲ್ಲುಗಳುಳ್ಳವರು ಶುಚಿಭೂತರಾಗಿರುವದು ಸಾಧ್ಯವಲ್ಲ. ಸುಸ್ವರದಿಂದ ಮಾತುಗಳನ್ನಾಡಲಿಕ್ಕೂ, ಅಂದಚಂದಕ್ಕೂ, ಆರೋಗ್ಯಕ್ಕೂ, ಸ್ವಚ್ಛವಾದ ಹಲ್ಲುಗಳು ಬೇಕಾಗಿವೆ. ನಮ್ಮ ಆಹಾರವನ್ನು ಚನ್ನಾಗಿ ಜಗಿಯಲು ಗಟ್ಟಿಯಾದ ಹಲ್ಲುಗಳು ಇರಬೇಕು. ಆಹಾರವನ್ನು ಹಲ್ಲುಗಳಿಂದ ಚನ್ನಾಗಿ ಜಗಿಯದಿದ್ದರೆ ಅವುಗಳು ಸರಿಯಾಗಿ ಜೀರ್ಣವಾಗದೆ ಶರೀರಕ್ಕೆ ಬೇಕಾದ ಪುಷ್ಟಿಯು ದೊರಕದು. ಆದ್ದರಿಂದ ನಮ್ಮ ದಂತಮಂಜನವನ್ನು ಉಪಯೋಗಿಸಿಕೊಂಡು ಹೊಗೆಸೊಪ್ಪನ್ನು ಸೇವಿಸುವುದನ್ನು ಬಿಟ್ಟುಬಿಡಿ. ಈ ದಂತಮಂಜನವನ್ನು ಉಪಯೋಗಿಸಿಕೊಳ್ಳುವ ಸಾವಿರಾರು ಜನರು ಇದರ ಪ್ರಯೋಜನವನ್ನು ನೋಡಿಕೊಂಡು ಒಂದು ದಿನವಾದರೂ ಇದರ ಉಪಯೋಗವನ್ನು ಬಿಡದೆ ಮಾಡುತ್ತಿದ್ದಾರೆ.

ಕ್ರಯ ಡಬ್ಬಿ ೧ಕ್ಕೆ ಆಣೆ ೬. ೧ ಡಜನು ಡಬ್ಬಿಗಳಿಗೆ ರೂ. ೪.

ಒಮ್ಮೆ ಹಲ್ಲುಗಳನ್ನುಜ್ಜಲು ಈ ಹುಡಿಯು ಸ್ವಲ್ಪಮಾತ್ರವೇ ಇದ್ದರೆ ಸಾಕಾಗುವದರಿಂದ ಒಂದು ತಿಂಗಳಿಗೆ ಒಬ್ಬನಿಗೆ ಒಂದು ಡಬ್ಬಿಯಕ್ಕಿಂತ ಹೆಚ್ಚಿಗೆ ಬೇಡ. ಈ ಕಾರಣದಿಂದ ಇದು ಅಗ್ಗವಾಗಿದೆ. ಬ್ರಶ್ಶಿನಿಂದ ಇದನ್ನು ಉಪಯೋಗಿಸಿದರೆ ಮತ್ತಷ್ಟು ದೀರ್ಘಕಾಲಕ್ಕೆ ಒಂದು ಡಬ್ಬಿ ದಂತಮಂಜನವು ಸಾಕಾಗುತ್ತದೆ.

ಅತ್ಯುತ್ಕೃಷ್ಟವಾದ ಬ್ರುಶ್ ಒಂದಕ್ಕೆ ಆಣೆ ೨.

ಮೇಲಿನ ಕ್ರಯದಲ್ಲಿ ಟಪ್ಪಾಲು ಮೂಲಕ ಕಳುಹಿಸಿಕೊಡುವ ಖರ್ಚು ಕೂಡಿರದು. ಆದ್ದರಿಂದ ಟಪ್ಪಾಲು ಹಾಸಲು ಪ್ರತ್ಯೇಕವಿರುವುದು.

ವಿಳಾಸ:— **ಶ್ರೀ ಕೃಷ್ಣನ್ ಬ್ರದರ್ಸ್,** ಔಷಧಿವ್ಯಾಪಾರಸ್ಥರು, ಪೋಸ್ಟ್ ಬೋಕ್ಸ್ ನಂಬ್ರ 166, ಮದ್ರಾಸು.

Sri Krishnan Brothers,

CHEMISTS & OPTICIANS, POST BOX NO. 166, MADRAS.

ನಮ್ಮಲ್ಲಿಯ ಸಾಮಾನುಗಳು ಈ ಕೆಳಗಿನ ವಿಳಾಸದವರಲ್ಲಿಯೂ ದೊರಿಯುತ್ತವೆ.

ಕುಬೇರ ಸುಬ್ಬರಾವ್,
ಜನರಲ್ ಮರ್ಚೆಂಟ್,
ರಥಬೀದಿ, ಮಂಗಳೂರು.

ಅನುಭವಸಿದ್ಧವಾದ ವನೌಷಧಗಳು.

೧. **ಕುಂತಳಕಾಂತ ತೈಲವು.** ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳ ೦ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ ಬಾಟ್ಲಿಗೆ ೧ರೂ ೩ ಬಾಟ್ಲಿಗೆ ೨ ರೂ ೧೦ ಆಣೆ

೨ ಪ್ರಮೇಹರಿಪು ದಿಂದು ಉರಿ ಮ ನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವದು ಬಾಟ್ಲಿಗೆ ೨ ೮-೦

೩. **ಪಂಚಜೀರಕ ಪಾಕ.** ಎಲ್ಲ ಸ್ತ್ರೀರೋಗಗಳನ್ನೂ ಮುಟ್ಟು ಕಟ್ಟಿಳಿಯ ದೋಷ ಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು ರಾತಲಿಗೆ ೨ ರೂ.

೪ **ಸೂರಣಾವಲೇಹ.** ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಶೀಲಿ ಅತ್ಯುತ್ತಮವು. ಪೌಷ್ಟಿಕವಾಗಿದೆ ರಾತಲಿಗೆ ೨ ರೂ

೫ **ಪ್ಲೀಹೋದರಾರಿ ಚೂರ್ಣ.** ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ಚಳಿಯುಳ್ಳವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣ ಪಡಿಸುವದು ತಿಂಗಳ ಔಷಧಕ್ಕೆ ಬೆಲೆ ೩ ರೂ ೮ ಆಣೆ.

೬. **ಅಗಸ್ತ್ಯೋಕ್ತ ದಂತಮಂಜನ.** ದಂತ ಸಂಬಂಧವಾದ ಸರ್ವ ಬಾಧೆ ಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ ಅನೇಕ ವನೌಷಧಗಳಿಂದ ತಯಾರಿಸಿಯದೆ ೧೦ ತೊಲೆಗೆ ೧೦ ಆಣೆ

೭. **ಸರಳಭೇದಿ ಮಾತ್ರೆ.** ಆಯಾಸವನ್ನು ಟುಮಾಡದ ಸುಖ ವಿರೇಚಕವು ತೊಲೆಗೆ ೨ ರೂ

ತಮ್ಮ ವಿಳಾಸ.—ಬಿ ಎಮ್. ನಾಥ್ ಮತ್ತು ಕಂಪೆನಿ,

ವೆಪರಿ ಪೋಸ್ಟು ಮದರಾಸು.

೮. **ಮಹಾಜ್ವರಾಂಕುಶ ಮಾತ್ರೆ.** ಚಳಿಜ್ವರ, ಪರಿಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. **ವಾಸಾವಲೇಹ.** ಕೆಮ್ಮು, ಗುಲ್ಮರ್ಬುಸ, ಕಫ, ಕ್ಷಯಗಳ ಮೇಲೆ ರಾಮಬಾಣವು ' ರಾತಲಿಗೆ ೨ ರೂ.

೧೦ **ಶಾಲ್ಮಲೀ ಪಾಕ** ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ಹಸ್ತ ಮೈಥುನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗ ಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು ರಾತಲಿಗೆ ೨ ರೂ

೧೧ **ವಾತಮುರಾರಿ ಬಾಮ್** ತಲೆನೋವು, ಎದೆನೋವು ಸೊಂಟ ನೋವು ಉಳುಕು, ಬಾಗು ವಾತಬಾಧೆಗಳನ್ನೂ ಕೂಡಲೆ ಗೆಲ್ಲುವದು ಬಾಟ್ಲಿಗೆ ೮ ಆಣೆ ೩ ಬಾಟ್ಲಿಗೆ ೧ ರೂ ೬ ಆಣೆ

೧೨ **ಗಜಕರ್ಣ ಕೇಸರಿ ಮುಲಾಮು.** ಹುಳುಕಡ್ಡಿ, ತುರಿಗಜ್ಜಿ ಮುಂ ತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು ಉರಿಯಿ ಲ್ಲ ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩ **ಸವ್ವೀರಾಂಜನ (ಸುರುಮಾ).** ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪ **ಬ್ರಹ್ಮಾ ಸಾರಸ್ವತ ಚೂರ್ಣ** ಉನ್ಮಾದ ಅಪಸ್ಮಾರ, ಉಗ್ಗು ಮಾ ತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು ಸ್ಮರಣಶಕ್ತಿಯನ್ನು ಬೆಳೆಯಿಸುವದು, ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು ವಿದ್ಯಾರ್ಥಿಗಳಿಗೆ ಅತ್ಯುತ್ತಮವು ೧೦ ತೊಲೆಗೆ ೨ ರೂ ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯ ವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು ನಮ್ಮೊಡನೆ ಕನ್ನಡದಿಂದ ಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು

B M Nath & Co, *Ayurvedic Chemists,*

Vepery Post MADRAS.

ಗಮನ ಕೊಡಿರಿ' ತ್ವರೆ ಮಾಡಿರಿ'

ಶ್ರೀ ಮಾಂಗಿರೀಶ ಬಾಮ್

ತಲೆನೋವು, ಒಕ್ಕೆಲೆನೋವು, ಹಲ್ಲುನೋವು, ಸೊಂಟನೋವು ಎಲ್ಲಾ ಪ್ರಕ್ಷುಪ ರೋಗಗಳು, ಉಳುಕು, ವಾಯುವಿನಿಂದ ಹೊಟ್ಟೆ ಉಬ್ಬರಿಸುವದು, ಇವುಗಳ ನ್ನು ಶೀಘ್ರವಾಗಿ ಗುಣಪಡಿಸುವದು ನಮ್ಮ ಬಾಮಿಯ ಲೋಕದ ಪರಿಚಯ ನಳಿಗೆ ಗಳಲ್ಲಿರುವದರಿಂದ ಬಾಟ್ಲಿಗಳಲ್ಲಿರುವ ಬಾಮುಗಳೋಪಾದಿ ಸೋರ್ವ ಭೀತಿಗೂ ಗಳಿ ಗೂ, ಹಾಗೆಯೆ ಎಷ್ಟು ಕಾಲಕ್ಕೂ ಹಾಳಾಗುವದಿಲ್ಲ ನಳಿಗೆಯ ಅಡಿಯ ಮಾತ್ರ ಒತ್ತಿ ದಲ್ಲಿ ಬೇಕಾದಷ್ಟು ಮಾತ್ರ ಬಾಮ್ ಹೊರಗೆ ಬರುವದು ಇಲ್ಲದೆ ಪ್ರತಿ ನಳಿಗೆಯಲ್ಲಿ ಬಾಟ್ಲಿಗಳಲ್ಲಿರುವದರ 1½ ಪಾಲು ಬಾಮು ಇರುವದು ನಳಿಗೆ ಕ್ರಯ ರೂ 1 8 0

ವಿಸ್ಫೋಟಿಕ ಮಾತ್ರೆ, ಸಿಡುಬು ಕೋರ, ಕೊಪ್ಪು ಮಕ್ಕಳ ಸೆಲೆ, ಮುಂತಾದ ಜಾಡ್ಯಗಳಿಗೆ ಅತ್ಯುತ್ತಮವಾದ್ದು ಸಿಡುಬು ಮುಂತಾದ ಅಂಟು ರೋಗ ಗಳಲ್ಲಿ ಜ್ವರ ಕಾಣಿಸಿಕೊಳ್ಳುವಾಗ ಒಂದು ಅಥವಾ ಎರಡು ಮಾತ್ರೆಯನ್ನು ಬಿಸಿ ನೀರಿ ನಲ್ಲಿ ತೇದು ಕೊಟ್ಟರೆ ಕೂಡಲೇ ಜ್ವರ ಗುಣವಾಗುವದು ಮಕ್ಕಳ ಜೋಪ್ಡಿಗೆ ಒಂದು ಮಾತ್ರೆಯಂತೆ ಪ್ರತಿದಿನವೂ ಮೊಲೆಹಾಲಿನಲ್ಲಿ ತೇದು ದಿನಕ್ಕೆ 2 ಸಾರಿ ಕೊಟ್ಟರೆ ಪೀಡೆ ಯು ಪರಿಹಾರವಾಗಿ ಧೃಡಕಾಯರಾಗಿ ಬೆಳೆಯುವರು ಎಲ್ಲಾ ತರದ ಜ್ವರಗಳಿಗೂ ಉತ್ತಮವಾದ್ದು. 12 ಮಾತ್ರೆಗಳ ಪೊಟ್ಟ 1ಕ್ಕೆ 0—6—0

ಸ್ವರಸುಧಾ. ಕೆಮ್ಮು, ಗಂಟಲುನೋವು, ಧ್ವನಿ ಒಡಲಾಗುವದು, ಅಗ್ರ ಮುಂತಾದವುಗಳಿಗೆ ಅತ್ಯುತ್ತಮ ಎಲೆ ಅಡಿಕೆಯ ಸಂಗಡ ತಿನ್ನುವುದರಿಂದ ಹಲ್ಲುಗಳಿ ಗೂ, ಜೀರ್ಣಕ್ಕೂ ಸಹಕಾರಿ ದೊಡ್ಡಪೊಟ್ಟ 1ಕ್ಕೆ 0-1 6 ಸ್ಯಾಂಪಲ್ ಪೊಟ್ಟ ಪೈ 6

ಕಾರ್ಬೋಲಿಕ್ ಟೂತ್ ಪೌಡರ್ ಈ ದಂತಮಂಜನದ ಹುಡಿ ಯಿಂದ ಹಲ್ಲುಗಳನ್ನು ಪ್ರತಿದಿನವೂ ತಿಕ್ಕುವುದರಿಂದ, ಹಲ್ಲುಹುಳುತ, ಹಲ್ಲುನೋವು, ವಸಡುಹುಣ್ಣು, ಮುಂತಾದವುಗಳು ಗುಣವಾಗಿ ಹಲ್ಲುಗಳು ಬಲವಾಗುವವು ದೊಡ್ಡ ಡಬ್ಬಿ 1ರ ಕ್ರಯ 0—2—0. ಸ್ವಶ್ಲಾಘನೆಯು ಯೋಗ್ಯವಲ್ಲ ಒಮ್ಮೆ ತರಿಸಿ ಪರೀಕ್ಷಿಸಿದರೆ ತಿಳಿದೀತು.

ಇವುಗಳ ವಿನಹಾ ಆಯುರ್ವೇದವನ್ನು ಅನುಸರಿಸಿ ತಯ್ಯಾರಿಸಿದ ಅನೇಕ ಔಷಧಗಳು ನಮ್ಮಲ್ಲಿ ತಯ್ಯಾರಿರುತ್ತವೆ. ರೋಗ ಪ್ರಕೃತಿಯನ್ನು ಈ ಕೆಳಗಿನ ವಿಳಾ ಸಕ್ಕೆ ಅರ್ಧ ಆಣೆ ಟಪ್ಪಾಲ್‌ಚೀಟು ಸಮೇತ ಬರಕೊಂಡಲ್ಲಿ ತಕ್ಕ ಔಷಧದ ದರವನ್ನು ತಿಳಿಸಲಾದೀತು. 1 ಡಜನ್ 'ಬಾಮ್' ತರಿಸಿಕೊಳ್ಳುವವರಿಗೆ ಒಂದು ಟ್ಯೂಬ್ ಬಕ್ಷೀಸು ಕೊಡಲ್ಪಡುವದು. ಟಪ್ಪಾಲ್ ಹಾಸಲು ಮಾಫಿ. ಏಜಂಟರಾಗುವವರಿಗೆ ದರಪೂರ ಕಮ್ಮಿಶನ್ ಕೊಡಲಾದೀತು.

M. D, R. & SONS

Srimangireesh Aushadhalaya, UDIPI. S. C.

ಡೋಂಗರೆ ಇವರ ಬಾಲಾಮೃತ.

ಮಕ್ಕಳಿಗೆ ಅತ್ಯುತ್ತಮವಾದ ಟಾನಿಕ್ !!

ಈ ಬಾಲಾಮೃತವನ್ನು ಉಪಯೋಗಿಸುವದರಿಂದ ಮಕ್ಕಳು ಶಕ್ತಿವಂತ ರಾಗಿ ಆರೋಗ್ಯವಂತರಾಗುವವು. ಇದು ಮಧುರ ಇರುವುದರಿಂದ ಮಕ್ಕಳು ಬಹಳ ಆವಲಿಕೆಯಿಂದ ತಕ್ಕೊಳ್ಳುತ್ತಾರೆ

ಡೋಂಗರೆ ಇವರ ಬಾಲಾ ಮೃತವನ್ನು ಕೊಂಡುಕೊಳ್ಳುವಾಗ "ಡೋಂಗರೆ" ಇವರ ಹೆಸರಿದ್ದದ್ದನ್ನೇ ನೋಡಿ ಪಡಕೊಳ್ಳಿರಿ.

ಬಾಟ್ಲಿ ಒಂದಕ್ಕೆ ಕ್ರಯ ೧೨ ಆಣೆ.

ಟಪ್ಪಾಲು ಖರ್ಚು ೪ ಆಣೆ.

K. T. Dongre & Co., ಕೆ. ಟಿ. ಡೋಂಗರೆ ಎಂಡ್ ಕೊ.,

Girgaum, Bombay. ಗಿರಗಾಂ ಬೊಂಬೈ.

ಆತಂಕನಿಗ್ರಹ ಗುಳಿಗೆಗಳು.

ದೇಹದಲ್ಲಿ ಎಂಥಾ ಕಾಯಿಲೆ ಇರುವಲ್ಲಿ ಅದನ್ನು ಶೀಘ್ರದಲ್ಲಿ ಹೋಗಲಾಡಿಸುವ ಪ್ರಯತ್ನ ಮಾಡಿ ತಕ್ಕಂಥಾ ಔಷಧವು ಸೇವಿಸಿ ಅದನ್ನು ಗುಣಹೊಂದಿಸದಿದ್ದರೆ ರಕ್ತವಾದ ದೇಹವು ಕ್ಷೀಣಿಸುವದು. ಆದಕಾರಣ ಹಾಗೂ ತಮಗೆ ಏನಾದರೂ ದೇಹಸೌಖ್ಯ ಕಂಡುಬರುವಲ್ಲಿ ತಕ್ಷಣವೇ ಆತಂಕನಿಗ್ರಹ ಗುಳಿಗೆಗಳನ್ನು ಸೇವಿಸಿ ಅಂತರ ದೇಹಬಲವನ್ನು ಸ್ಥಾಪಿಸಿ. ಅತಿ ಉತ್ತಮಕರವಾದ ರತ್ನವೆಂಬ ಔಷಧವು

ಕ್ರಯ 32 ಗುಳಿಗೆಗಳಿಗೆ 1 ರೂಪಾಯಿ.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

157, 158 ಆತಂಕನಿಗ್ರಹ ಔಷಧಾಲಯ, ಜಾಮ್ನಗರ, ಮದ್ರಾಸ

ಶಾಖಾ ಏಜಂಟರು:— 1. ಮೆಸ್ಸರ್ಸ್. ರಫಯೆಲ್ ಎಂಡ್ ಕೊ, ಬ್ರಿಟೋಬಿಲ್ಡಿಂಗ್

2 ಜುಬಿಲಿ ಕೇಶ್ ಬಜಾರ್, ಬೆಂಗಳೂರು. ಮಂಗಳೂರು

S. U. N. & CO.,
BENARES CITY, U. P.

ಇಪ್ಪತ್ತೈದು ಸಾವಿರ ರೂಪಾಯಿನ ಮಾಲುಗಳನ್ನು

ಅಸಲ್ ಕ್ರಯಕ್ಕೆ ಕೊಡುತ್ತೇವೆ.

ಈ ತಿಂಗಳು ಮಾತ್ರ.

ಈ ವರುಷ ಲಗ್ನಕಾರ್ಯಗಳಿಗೆ ತಯಾರಿಸಿದ ಬನಾರಸ್ ಜರಿ ಸಾದಾ ಶೀರೆ, ಬೂಟಾ ಶೀರೆ, ಪೇಟ ವ ಗುಟ, ತ ವಾಲ, ಶಾಲ, ಕೋಟ ಸಿಲ್ಕುಥಾನುಗಳು ಪಟ್ಟೆ ಚದರ್, ಕಾಶ್ಮೀರ್ ಸಾದಾ ಜರಿ ಶಾಲುಗಳು, ಕೊಬ್ಬರ್ದ ಶೀರೆ, ರದ್ಧಿಕ್ಕಿ ಮೊದಲಾದ ಎಲ್ಲಾ ತರದ ಸುಮಾರು 25,000 ರೂಪಾಯಿ ನ ಮಾಲುಗಳು ಉಳಿದಿರುವದರಿಂದ ನಾವು ಅದನ್ನು ಅಸಲ್ ಕ್ರಯಕ್ಕೆ ಕೊಡುತ್ತೇವೆ ಬೇಕಾದವರು ಬೇಗನೆ ಬರೆದು ತರಿಸಿಕೊಳ್ಳಬಹುದು

ಈ ತಿಂಗಳ ಕಳೆದ ಮೇಲೆ ಇಂಥಾ ಸಮಯ ಸಿಕ್ಕುವದಿಲ್ಲ. ಬೇಗ ಬರೆದು ತರಿಸಿಕೊಳ್ಳಿ.

ವಿಳಾಸ:— ಯುಸ್ ಯು. ಯನ್. ಮತ್ತು ಕಂಪೆನಿ, ಕಾಶಿ

THE GREATEST TREASURE OF TRUE VEDIC PRINCIPLE

ಸತ್ಯಾರ್ಥ ಪ್ರಕಾಶ.

ಮೊದಲನೇ ೧೦ ಅಧ್ಯಾಯಗಳ ಕನ್ನಡ ಭಾಷಾಂತರ.

ಇದರಲ್ಲಿ ಪ್ರಾಣಿಗಳಿಗೆ ಪರಸ್ಪರ ಸಂಬಂಧವು ಹ್ಯಾಗೆ ಉಂಟಾಯಿತೆಂಬುವದೂ ಜೀವದ ಮತ್ತು ಪರಮೇಶ್ವರನ ಸಂಬಂಧವೂ, ಪರಮೇಶ್ವರನ ಓಂಕಾರಾದಿ ಹೆಸರುಗಳ ವ್ಯಾಖ್ಯೆಯೂ, ಮಕ್ಕಳ ಶಿಕ್ಷಣ ಪದ್ಧತಿಯೂ, ಬ್ರಹ್ಮಚರ್ಯಾದಿ ವ್ಯವಸ್ಥೆಗಳ ವರ್ಣನವೂ, ಬ್ರಾಹ್ಮಣ, ಕ್ಷತ್ರಿಯ ವೈಶ್ಯ ಶೂದ್ರರಿಗೆ ಮತ್ತು ಅಂತ್ಯಜರಿಗೆ ಹಾಗೂ ಸ್ತ್ರೀಯರಿಗೆ ವೇದಾಧ್ಯಯನದ ಅಧಿಕಾರವು ಇದ್ದ ಬಗ್ಗೆ ಸಪ್ರಮಾಣ ವಿವೇಚನವೂ, ಜಗತ್ತಿನ ಉತ್ಪತ್ತಿ ಸ್ಥಿತಿ ಮತ್ತು ಪ್ರಳಯಗಳ ವಿಚಾರವೂ, ಬಂಧ ಮೋಕ್ಷಗಳ ವಿಷಯವೂ, ಭಕ್ಷ್ಯಾಭಕ್ಷ್ಯಗಳ ವಿವೇಚನವೂ, ವೇದಾದಿ ಸಚ್ಛಾಸ್ತ್ರಗಳ ಆಧಾರದಿಂದ ಶ್ರೀ ಸ್ವಾಮಿ ದಯಾನಂದ ಸರಸ್ವತಿಗಳವರು ಚನ್ನಾಗಿ ಮಾಡಿದ್ದಾರೆ. ಶ್ರೀ ಸ್ವಾಮಿ ದಯಾನಂದ ಸರಸ್ವತಿಯವರ ಚರಿತ್ರವೂ, ಅವರು ಮಿಶನರಿ ಮತ್ತು ಮೌಲ್ವಿಗಳೊಡನೆ ಮಾಡಿದ ತರ್ಕಗಳೂ ವ ಸನಾತನ ವೈದಿಕಧರ್ಮದ ಸತ್ಯಾರ್ಥವನ್ನು ಬೋಧಿಸುವ ಗಹನ ವಿಷಯಗಳೂ ಇದರಲ್ಲಿ ಕೊಟ್ಟಿವೆ. ಕಿಮ್ಮತ್ತು ರೂ. ೧—೮—೦. ವಿದ್ಯಾರ್ಥಿಯರಿಗೆ ರೂ ೧—೪—೦ ಟಪ್ಪಾಲು ಖರ್ಚು ಬೇರೆ. ಪುಟ 560.

ಸತ್ಯಾರ್ಥ ಪ್ರಕಾಶ.

(೧೧ನೇ ಅಧ್ಯಾಯದ ಕನ್ನಡ ಭಾಷಾಂತರ)

ಇದರಲ್ಲಿ ಆರ್ಯಾವರ್ತ ದೇಶದಿಂದಲೇ ಇತರ ದೇಶಗಳು ವಿದ್ಯೆಯನ್ನು ಪ್ರಾಚೀನ ಕಾಲದಲ್ಲಿ ಕಲಿಯುತ್ತಿದ್ದರೆಂತಲೂ ಆರ್ಯಾವರ್ತ ದೇಶದ ಅವನತಿಯ ಕಾರಣಗಳೂ ಅದ್ವೈತಮತ, ಮೂರ್ತಿಪೂಜೆ, ತಪ್ತಮುದ್ರಾಧಾರಣೆ, ಗಯಾಶ್ರಾದ್ಧ, ಪುರಾಣ ಫಲ, ಜ್ಯೋತಿಷ, ಬ್ರಹ್ಮಸಮಾಜ ಪ್ರಾರ್ಥನಾಸಮಾಜ ಮುಂತಾದ ಬಹಳೇ ಪಂಥಗಳ ಪರೀಕ್ಷಣವು ಮಾಡಿಯದೆ. ಕಿಮ್ಮತ್ತು ಆಣೆ 8 ವಿದ್ಯಾರ್ಥಿಯರಿಗೆ ಆಣೆ ೬. ಮಾನು ಡೆಮಿ ಅಷ್ಟಪತ್ರದ ಪುಟ ೧೧೦, ಟಪ್ಪಾಲು ಖರ್ಚು ಬೇರೆ.

ಈ ಗ್ರಂಥವನ್ನು ಹಿಂದೀ ಭಾಷೆಯೊಳಗಿನಿಂದ ಕನ್ನಡದಲ್ಲಿ ಸುಬ್ರಾವ್ ಶೇಷಗಿರಿ ಹಾಳಕರ, ಬಿ. ಎ., ಎಲ್. ಎಲ್. ಬಿ, ಹೈಕೋರ್ಟ ವಕೀಲ್, ರಂಗೂನ್, ಇವರು ಮಾಡಿರುತ್ತಾರೆ. ಹಿಂದು (ಆರ್ಯ) ಧರ್ಮಾಭಿಮಾನಿಯಾದ ಪ್ರತಿಯೊಬ್ಬನು ಸಂಗ್ರಹಿಸಲಿಕ್ಕೆ ದುರ್ಲಭವಾದ ಅತ್ಯಾವಶ್ಯಕ ಗ್ರಂಥವು. ಇದರ ಬೆಲೆಯಾದರೂ ಸರ್ವರೂ ಕೊಂಡುಕೊಳ್ಳುವಂತೆ ತೀರ ಕಮ್ಮಿ ಬೆಲೆಯನ್ನು ಇಟ್ಟಿರುತ್ತದೆ.

ಸಿಗುವ ವಿಳಾಸ — ಎಸ್. ಎಲ್. ಕಾಮತ್ ಧಾಕಪ್ಪನವರ

ಪೋಸ್ಟು ಶಿರ್ಶಿ, ಜಿಲ್ಲಾ ಉತ್ತರ ಕನ್ನಡ.

Estd 1888. ಸ್ಥಾಪನೆ 1888.

K. B. RELE & Cos.,—BOMBAY

ಕೆ. ಬಿ. ರೇಳೆ ಕಂಪನಿಕೃತ

ಗಜಕರ್ಣ.

ಶಿಬ್ಬು, ಇಸಬು, ಇವುಗಳ ಮೇಲೆ ಮುಲಮು.

ಎಷ್ಟೋ ಹಳೆ, ಕಡಿ ವ ತ್ತ ಕಟುವಾದ ಗಜಕರ್ಣವು ಈ ಮುಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತದೆ. ೨೦—೨೫ ವರ್ಷಗಳ ಹಳೆ, ಮೈಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ಪಾಕ್ಕೀ ಆಣೆ

ವಿಶೇಷ ಸೂಚನೆ—ದೇಶಿ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲಾಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲಾಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳೂ ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಟ್ಟೆಗಳೂ, ಜಖಮುಗಳೂ ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಬಿಗಿಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ಕಲೆ ಕೈಕಾಲುಗಳುರಿಯೋಣ, ಕೈ ಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲಾಯು. ಕ್ರಯ ಬಾಟ್ಲಿ ೧ಕ್ಕೆ ರೂ. ೧—೪—೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ, ಗಿರಗಾಂವ ನಂ. ೪ ಮುಂಬಯಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷದಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ

ಪ್ರತಿ ವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ, ಬರ್ಮಾ, ಸಿಲೋನ್, ಮಲಿಯ ಸ್ಟೇಟ್, ಗೋವಾ, ಫೀಜಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮುತುವಾತಿಗೂ ವೈದ್ಯರ ಸಹಾಯವನ್ನು ಕಾದು ಕೂರೆಯಿಡುವುದು ನಿಜವಾಗಿಯೂ ತಪ್ಪುವುದ

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಬೀನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವೆ, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ ಮಾತ್ರ

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0.
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—0—0

ಯೋಗ್ಯತಾ ಪತ್ರಗಳು.

ಮ। ರಾ। ಡಾಕ್ಟರ್ ಪ್ರಭಾಕರ್ ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎನ್. ವೈ. ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಐ ಎಸ್. ಆಫ್ ದಿ ಸ್ಯಾನಿಟರಿ ಇನ್ಸ್ಟಿಟ್ಯೂಟ್, ಲಂಡನ್ ಕನ್ಸಲ್ಟಿಂಗ್ ಕೆಮಿಸ್ಟ್, ಎಗಿಯರಿವೇನ್ ನಂ. 2, ಬೊಂಬೈ ಇವರು ಬರೆದಿರುವುದು. ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವುದರಲ್ಲಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯ ನೋವು, ಹೊಟ್ಟೇನೋವು, ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ, ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ

ಮ। ರಾ। ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನ್‌ಮೆಂಟ್ ಇವರು ಬರೆದಿರುವುದು ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ಬಹಳ ಆನಂದಭರಿತನಾಗಿದ್ದೇನೆ. ವೈದ್ಯಶಾಲೆಯಲ್ಲಿ ಅನೇಕ ತರದ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರು ಮಾಡುತ್ತಿರುತ್ತಾರೆ

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಹೊಸ ಪತ್ರಿಕೆ!　　**ಭಾರತಿ.**　　ಹೊಸ ಸಮಾಚಾರ!!

ಬಳ್ಳಾರಿಯಲ್ಲಿ ಹೊರಡುವ ಶ್ರೇಷ್ಟವಾದ ವಾರಪತ್ರಿಕೆ

ಒಕ್ಕಲಿಗರಿಗೂ, ವರ್ತಕರಿಗೂ, ಉಪಾಧ್ಯಾಯರಿಗೂ, ಸಂಘಗಳಿಗೂ, ವಿದ್ಯಾನಿಲಯಗಳಿಗೂ, ಅವಶ್ಯಕವಾದ ನೈತಿಕ, ಧಾರ್ಮಿಕ, ರಾಜಕೀಯ ವಿಷಯಗಳು, ಸದ್ಯದ ಯುದ್ಧ ಸಮಾಚಾರಗಳು, ವಿದೇಶ ವೃತ್ತಾಂತಗಳು, ಪಂಡಿತರಿಂದ ಬರೆಯಲ್ಪಡುವ ಮನೋರಂಜಕ ಲೇಖಗಳು, ಕನ್ನಡಿಗರಿಗೆ ಸುಲಭವಾಗಿ ತಿಳಿಯುವಂತೆ ಪ್ರಕಟಿಸಲ್ಪಡುವವು. ಸುಂದರವಾದ ಟೈಪು, ಉತ್ತಮವಾದ ಗ್ಲೇಜು ಕಾಗದ, ಡೆಮ್ಮಿ ಎಂಟು ಪುಟಗಳ ಪತ್ರಿಕೆ. ವಾರ್ಷಿಕ ವರ್ಗಣಿ, ಅಂಚೆ ವೆಚ್ಚ ಸೇರಿ ರೂ. 2—4

1916ನೇ ಅಕ್ಟೋಬರು 30ನೇ ತಾರೀಕಿನೊಳಗೆ

100 ಚಂದಾದಾರರನ್ನು	ಕೂಡಿಸಿ	ಕೊಟ್ಟ	ಏಜಂಟರಿಗೆ	ರೂ. ..	25
50 ,,	,,	,,	,,	...	10.
25 ,,	,,	,,	,,	...	5.

[illegible] ಕೊಳ್ಳಬಹುದು.

ನಮ್ಮ ಎಡ್ರೆಸ್:— ಮ್ಯಾನೇಜರ್, ಭಾರತಿ,
ಬಳ್ಳಾರಿ.

ಮೈಸೂರು ಊದಬತ್ತಿಗಳು

ಇಂಡಿಯಾ ದೇಶದಲ್ಲಿ ನಡದಿರುವ ಯಗ್ಜಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರಸಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ.

ಊದಬತ್ತಿಗಳು 24 ರೂ. ತೂಕದ ಶೇರು 1ಕ್ಕೆ ರೂ. 12-0-0, 5-0-0, 3-0-0 2—8—0, 1—4—0, 1—0—0.

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0—0, 1—0—0 0—12—0, 0—6—0

ಸುಗಂಧಿ ಕಾಡುರ್ 1ಕ್ಕೆ 0—1—0. **ಬಾಲಗ್ರಹ** ಧೂಪ ಟಿನ್ 1ಕ್ಕೆ 0—8—0. **ಸುವಾಸನೇ ಸುಣ್ಣ** ಶೀಸೆ 1ಕ್ಕೆ 0—2—0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರಿ, ಮೈಸೂರು.

ಬಹು ಮನೋಹರ!　　　　ಅದ್ಭುತ!

ವಸಂತ ಕೋಕಿಲ್

ಎಂಬ

ನೂತನವಾದ ಹೊಸ ಕಾದಂಬರೀ ಕಥೆ.

ರಸಿಕ ಶಿರೋಮಣಿಗಳೇ,

"ವಸಂತ ಕೋಕಿಲ್" ಎಂಬ ಇಂದ್ರಜಾಲ ಮಹೇಂದ್ರಜಾಲಗಳನ್ನು ಸ್ಪಷ್ಟವಾಗಿ ತೋರಿಸುವ ಅತ್ಯದ್ಭುತ ಚಮತ್ಕಾರವಾದ ಹೊಸ ಕಾದಂಬರೀ ಕಥೆಯು ಅಚ್ಚಾಗಿ ಈಗ ತಾನೇ ಓದುಗರಿಗೆ ಸಿದ್ಧವಾಗಿದೆ. ಈ ಗ್ರಂಥದಲ್ಲಿ ಶೃಂಗಾರಾದಿ ನವರಸಗಳು ತುಂಬಿ ತುಳುಕುತ್ತಿವೆ ಈವರೆಗೆ ಪ್ರಚುರವಾಗಿರುವ ಎಲ್ಲಾ ಕಥೆಗಳಿಗಿಂತಲೂ ಮಿಗಿಲದಷ್ಟು ರಸ್ಯವುಳ್ಳದ್ದಾಗಿದೆ. ವರ್ಣನಾಭಾಗಗಳು ಎಲ್ಲರಿಗೂ ತಿಳಿಯುವ ಹಾಗೆಯೂ ಸ್ವಾಭಾವವಾಗಿಯೂ ಇವೆ. ಭಾಷಾಶೈಲಿಯು ಅತ್ಯುತ್ತಮವಾಗಿದೆ. ಓದುವದಕ್ಕಾರಂಭಿಸಿದ ವಾಚಕರ ಮನಸ್ಸನ್ನು ಸಂಪೂರ್ಣವಾಗಿ ಆಕರ್ಷಿಸಿ ಮುಗಿಯುವವರೆಗೂ ಆವೇಶವನ್ನುಂಟುಮಾಡಿ ಉಲ್ಲಾಸಗೊಳಿಸುವ ಹಾಗಿದೆ ತಮ್ಮ ಜ್ಞಾನ, ಭಕ್ತಿ, ವೈರಾಗ್ಯ ಮೊದಲಾದ ವೇದಾಂತ ವಿಷಯಗಳನ್ನೂ ಚೆನ್ನಾಗಿ ತಿಳಿಸುತ್ತದೆ. ಕಥಾ ಸಂವಿಧಾನವು ಹೊಸ ಮಾದರಿಯಾಗಿ ಆಶ್ಚರ್ಯಕರವಾಗಿದೆ. ಪ್ರಕಟವಾಗಿ ಶೃಂಗಾರ ರಸವನ್ನು ವರ್ಣಿಸದೆ ಇರುವುದರಿಂದ ಎಲ್ಲಾ ಸ್ತ್ರೀಜನರಿಗೆ ಓದುವುದಕ್ಕೆ ಅರ್ಹವಾಗಿದೆ. ಇದರಲ್ಲಿ ೯ ಪ್ರಕರಣಗಳೂ ೩೨ ಪುಟಗಳೂ ಇವೆ. ಉತ್ತಮವಾದ ಕಾಗದ, ಸುಂದರವಾದ ಅಕ್ಷರ, ತಪ್ಪಿಲ್ಲದೆ ಸುಂದರವಾಗಿ ಮುದ್ರಿಸಿದೆ. ಬೇಕಾದವರೆಲ್ಲರೂ ಕೆಳಗಣ ವಿಳಾಸಕ್ಕೆ ಬರದು ತರಿಸಿಕೊಳ್ಳಬಹುದು. ಕ್ರಯ ರೂ. ೧—೦—೦ ಮಾತ್ರ.

ವಿಳಾಸ:— ಟಿ. ಎ. ಮಾಣಿಕ್ಯಂ ಶೆಟ್ಟಿ,
ಮಾಣಿಕ್ಯಮಂದಿರ ಬುಕ್ ಡಿಪೋ,
ಬಳ್ಳಾರಿ.

ಪ್ರೊಫೆಸರ್ ಜೇಮ್ಸ್‌ರವರ ಎಲೆಕ್ಟ್ರೊ ಟೋನಿಕ್ ಪರ್ಲ್ಸ್ ಎಂಬುವ

ವಿದ್ಯುತ್‌ಶಕ್ತಿಯ ವಾಜೀಕರಣ ಮಾತ್ರೆಗಳು.

ಇದು ಮುಖ್ಯವಾಗಿ, ಹೆಚ್ಚಾಗಿ ವ್ಯಾಯಾಮವನ್ನು ತೆಗೆದುಕೊಳ್ಳಲಾರದ ಮನುಷ್ಯರಿಗೂ, ಮೆದುಳಿನಲ್ಲಿಯೇ ಕೆಲಸ ಮಾಡುವಂತಹ ವಿದ್ವಾಂತರಿಗೂ, ಬೋಧಕರಿಗೂ, ಗುಮಾಸ್ತೆಯರಿಗೂ, ವಿದ್ಯಾರ್ಥಿಗಳಿಗೂ ಮತ್ತು ವ್ಯಾಪಾರಿಗಳಿಗೂ ಅತ್ಯುತ್ತಮವಾದ ಮುತ್ತಿನೋಪಾದಿಯ ಔಷಧ.

ಈ ಮಾತ್ರೆಗಳು ಕೆಳಗಿನ ವ್ಯಾಧಿಗಳನ್ನು ನಿರ್ಮೂಲ ಮಾಡುತ್ತದೆಂಬುದು ಎಲ್ಲರ ಅನುಭವಸಿದ್ಧಾಂತವು. ಕ್ಷಯರೋಗ, ಎಳವು (ಹಿಸ್ಟೀರಿಯಾ) ವೀರ್ಯದೌರ್ಬಲ್ಯವು, ಮಂದಾಗ್ನಿ, ಕೆಟ್ಟರಕ್ತ, ತಲೆತಿರುಗುವಿಕೆ, ಶಕ್ತಿಹೀನತೆ, ಧಾತುಕ್ಷೀಣತೆ, ಧಾತು ಸಂಬಂಧವಾದ ವಿಕಾರಗಳು, ಸ್ತ್ರೀಗರ್ಭ ವಿಕಾರಗಳು, ಅಕಾಲದ ಮುಟ್ಟು, ಸೊಂಟದಲ್ಲಿಯ ನೋವು, ಮುಖದಲ್ಲಿಯ ಬಿಳುಪು, ಮಂದವಾದ ದೃಷ್ಟಿ, ಕೀಲುಗಳ ನೋವು. ಈ ಮೇಲೆ ಹೇಳಿರುವ ಎಲ್ಲಾ ವ್ಯಾಧಿಗಳಲ್ಲಿ ನಿಮಗೆ ಯಾವುದಾದರೂ ಉಂಟಾದರೆ, ಆ ವ್ಯಾಧಿಯು ಆರಂಭಿಸುತ್ತಲೇ, ಬೇರೆ ಚಿಕಿತ್ಸೆಗಳನ್ನು ಮಾಡಿ, ಉಪಯೋಗವಿಲ್ಲದ ಕಷ್ಟಗಳನ್ನು ತಂದುಕೊಳ್ಳದೆ, ತಕ್ಷಣವೇ ಮೇಲೆ ಹೇಳಿರುವ ಪ್ರೊಫೆಸರ್ ಜೇಮ್ಸ್‌ರವರ ವಿದ್ಯುತ್‌ಶಕ್ತಿಯ ವಾಜೀಕರಣ ಮಾತ್ರೆಗಳನ್ನು ತರಿಸಿ ಉಪಯೋಗಿಸಿಕೊಳ್ಳಿರಿ. ಈ ಮಾತ್ರೆಗಳನ್ನು ಉಪಯೋಗಿಸುವುದರಿಂದ ಮೇಲೆ ಹೇಳಿರುವ ವ್ಯಾಧಿಗಳೆಲ್ಲವೂ ನಿರ್ಮೂಲವಾಗಿ ವಾಸಿಯಾಗುವುದು. ಅಲ್ಲದೆ, ನಿಮ್ಮ ಶರೀರಗಳನ್ನು ದೃಢವಾಗಿಯೂ, ಅಂದವಾಗಿಯೂ, ಕಷ್ಟಪಟ್ಟು ಕೆಲಸಗಳನ್ನು ಮಾಡುವ ಸರಿಗೈದೂ ಈ ಮಾತ್ರೆಗಳು ನಿಮಗೆ ಮನೋಲ್ಲಾಸವನ್ನೂ ಕೊಡುತ್ತವೆ. ನೀವು ಈ ಮಾತ್ರೆಗಳನ್ನು ಇದುವರೆಗೂ ಉಪಯೋಗಿಸದಿದ್ದರೆ, ಈಗಲಾದರೂ ಒಮ್ಮೆ ಬುಡ್ಡಿ ತರಿಸಿಕೊಂಡು ಉಪಯೋಗಿಸಿ ನೋಡಿದರೆ, ನಿಮಗೆನೇ ನಂಬಿಕೆಯುಂಟಾಗುವುದು.

25 ಮಾತ್ರೆಗಳುಳ್ಳ ಸೀಸೆ 1ಕ್ಕೆ ರೂ. 1—4—0. 40 ಮಾತ್ರೆಗಳುಳ್ಳ ಸೀಸೆ 1ಕ್ಕೆ ರೂ. 2—0—0. ಟಪ್ಪಾಲು ಖರ್ಚು ಅಲಾಯಿದ.

ಅಂದವಾಗಿ ಥಳಥಳಿಸುವ ಕೂದಲನ್ನು ಕೊಡುವ

ಕಾಮಿನಿಯಾ ಆಯಿಲ್ (ರಿಜಿಸ್ಟರ್ಡ್).



ಈ ಎಣ್ಣೆಯು ಸುಪ್ರಸಿದ್ಧವಾದ ವನಸ್ಪತಿಗಳ ಮತ್ತು ಸುಗಂಧ ದ್ರವ್ಯಗಳ ಮಿಶ್ರಣದಿಂದ ತಯಾರು ಮಾಡಲ್ಪಟ್ಟಿರುವುದು. ಈ ಎಣ್ಣೆಯನ್ನು ಪ್ರತಿದಿನವೂ ಉಪಯೋಗಿಸುವುದರಿಂದ ಇದು ಮೆದುಳನ್ನು ತಣ್ಣಗೆ ಗೈದು ಜ್ಞಾಪಕಶಕ್ತಿಯನ್ನು ಅಭಿವೃದ್ಧಿ ಮಾಡುತ್ತದೆ. ಇದರ ಘನತೆಯಿಂದ ಅನೇಕ ದೊಡ್ಡ ಮನುಷ್ಯರೂ, ಹೆಂಗಸರೂ, ಯೌವನಸ್ಥರೂ ಯಾವಾಗಲೂ ಉಪಯೋಗಿಸುತ್ತಲಿರುತ್ತಾರೆ. ಕಾಮಿನಿಯಾ ಎಣ್ಣೆಯನ್ನು ಉಪಯೋಗಿಸುವುದರಿಂದ ತಲೆಕೂದಲು ನುಣುಪಾಗಿಯೂ ಬಲವುಳ್ಳದ್ದಾಗಿಯೂ, ನೋಡಲು ರೇಶ್ಮೆಯಂತೆ ಹೊಳಪುಳ್ಳದ್ದಾಗಿಯೂ ಆಗುವುದರಿಂದ ಈಗ ಅಂಗಡಿಗಳಲ್ಲಿ ದೊರಕುವ ಅನೇಕ ಕೀಳು ತರದ ಎಣ್ಣೆಗಳನ್ನು ಕಮ್ಮಿ ಬೆಲೆಗೆ ತೆಗೆದುಕೊಂಡು ಅನ್ಯಾಯವಾಗಿ ತಲೆಯ ಕೂದಲನ್ನು ಹಾಳುಮಾಡಿಕೊಳ್ಳಬೇಡಿರಿ.

ಕ್ರಯ ಸೀಸೆ 1ಕ್ಕೆ ರೂ. 1—0—0.

" " 3ಕ್ಕೆ " 2—10—0.

ವಿ. ಪಿ. ಚಾರ್ಜು ಅಲಾಯಿದ.

N. B.—ಕಾಮಿನಿಯಾ ಎಣ್ಣೆಯನ್ನು ತೆಗೆದುಕೊಳ್ಳುವಾಗ ಕಾಮಿನಿಯಾ (ರಿಜಿಸ್ಟರ್ಡ್) ಎನ್ನುವದನ್ನೇ ತೆಗೆದುಕೊಳ್ಳಿರಿ.

ವಸಂತ, ಗ್ರೀಷ್ಮ, ವರ್ಷ, ಶರತ್ ಈ ನಾಲ್ಕು ಋತುಗಳಲ್ಲಿ ಯಾವಾಗಲೂ ನಿಮ್ಮ ಅಂತಃಕರಣಕ್ಕೆ ಆನಂದವನ್ನು ಕೊಟ್ಟು ಸುಪ್ರಸಿದ್ಧವಾದ ಸುವಾಸನೆಯಿಂದೊಡಗೂಡಿದ ಅನೇಕ ಪುಷ್ಪಗಳಿರುವ ತೋಟದಿಂದ ಈಗಲೇ ಹೊಸದಾಗಿ ತಂದ ಪುಷ್ಪಗಳ ಆನಂದವನ್ನು ಕೊಡುವ

ಆಟೋ ದಿಲ್ಬಹಾರ್.

ಇದು ಲೋಕದಲ್ಲಿ ಅದ್ವಿತೀಯವಾದ ಸುಗಂಧಗಳಲ್ಲಿ ಮೇಲಾದ ಸ್ಥಾನವನ್ನು ಹೊಂದಿರುತ್ತದೆ ಎಂದು ಎಲ್ಲರೂ ಉಪಯೋಗಿಸಿ ನೋಡಿ ಶ್ಲಾಘನೆ ಮಾಡಿರುತ್ತಾರೆ. ಇದನ್ನು ಉಡುಪುಗಳ ಮೇಲೆ ಚಿಮುಕಿಸಿಕೊಂಡರೆ ಯಾವ ವಿಧವಾದ ಚುಕ್ಕೆಯು ಕಾಣದೆ, ಸದಾ ಇರತಕ್ಕ ಪರಿಮಳ ಸುಗಂಧವನ್ನು ಕೊಡುತ್ತದೆ. ಒಂದು ಸಾರಿ ಉಪಯೋಗಿಸುವುದರಿಂದ ಇದರಲ್ಲಿ ನಂಬಿಕೆ ಹುಟ್ಟುತ್ತದೆ. ಇದನ್ನು ಕೊಂಡುಕೊಳ್ಳುವಾಗ ರಿಜಿಸ್ಟರಾಗಿರುವ ಆಟೋ ದಿಲ್ಬಹಾರ್ ತಪ್ಪಿಯನ್ನು ಪೇಕಿಂಗ್ ಒಡೆಯದಿರುವುದನ್ನೇ ನೋಡಿ ತೆಗೆದುಕೊಳ್ಳಿರಿ.

ಕ್ರಯ ಸಣ್ಣ ಸೀಸೆ 1ಕ್ಕೆ 0—8—0.

" ಮಿಡಿಯಂ " " 0—12—0.

" ½ ಔನ್ಸಿನ " " 2—0—0.

ಆಟೋ ದಿಲ್ಬಹಾರ್ ಕಾರ್ಡು 1ರ ಬೆಲೆ 0—1—0.

ಪೋಸ್ಟೇಜು ಅಲಾಯಿದ.

ಯಾವಾಗಲೂ ಕುಟುಂಬದಲ್ಲಿ ಅವಶ್ಯವಾಗಿರತಕ್ಕ ಔಷಧವು.

ಆಡ್‌ಮನ್ಸ್ ಸ್ಪೈಪಸ್ ಸಾಲ್ಟ್.

ವಾಯುವಿನಿಂದ ಶರೀರದ ಯಾವ ಭಾಗಕ್ಕೆ ಉಂಟಾಗುವ ನೋವು, ನಾವು ಶ್ವಾಸ ಬಿಡುವಾಗಲೂ ಮತ್ತು ತೆಗೆದುಕೊಳ್ಳುವಾಗಲೂ ಉಂಟಾಗುವ ಎದೆನೋವು, ವಾಯುವಿನಿಂದ ಕೀಲುಗಳಲ್ಲಿ ಉಂಟಾಗುವ ನಡುವಿನ ನೋವು, ತಲೆಶೂಲೆ ಮತ್ತು ಕೈಕಾಲು ನೋವು, ಇವುಗಳೆಲ್ಲವೂ ಈ ಮುಲಾಮನ್ನು ಹಚ್ಚುವುದರಿಂದ ಶುದ್ಧಾಂಗವಾಗಿ ನಿವೃತ್ತಿಯಾಗುತ್ತದೆ. ಒಂದು ಸಲ ಉಪಯೋಗಿಸಿ ನೋಡಿರಿ. ಇತರ ಮುಲಾಮುಗಳನ್ನು ಉಪಯೋಗಿಸದೆ ಇದನ್ನೇ ಉಪಯೋಗಿಸುವುದರಿಂದ ನಿಮಗೆ ಹೆಚ್ಚಾದ ಲಾಭ ಉಂಟು. ಕ್ರಯ ಬಾಟ್ಲಿ ಒಂದರ ರೂ. 1—0—0. ಟಪ್ಪಾಲು ಖರ್ಚು 4 ಆಣೆ.

ಆಡ್‌ಮನ್ಸ್ ಮಲೇರಿಯಸ್ ಪಿಲ್ಸ್.

ಶೀತಜ್ವರ, ಚಳಿಜ್ವರ, ಮೈಕೈಜ್ವರ ಮತ್ತು ಸಾಧಾರಣ ಜ್ವರ [illegible] ಮನ್ಸ್ ಮಲೇರಿಯಸ್ ಮಾತ್ರೆಗಳು ಬಹು ಆಶ್ಚರ್ಯಕರವಾದ ಗುಣ [illegible] ತ್ತವೆ. 30 ಮಾತ್ರೆಗಳ ಡಬ್ಬಿ 1ರ ಬೆಲೆ ರೂ. 1—0—0. [illegible]

THE ANGLO INDIAN DRUG & CHEMICAL COMPANY, 16 MARKET BOMBAY 2

ಪ್ರಧಾನ ಏಜಂಟರು: **ದಿ ಊಲನ್ ಮಾರ್ಟ್, ಮಂಗಳೂರು ದ. ಕನಡಾ.**

Printed & Published by V. S. Kamath at the Mangalore Trading Association's Sharada Press, Mangalore.